ಕಥೆ ಮಾತ್ರ (ಸಿಂಪ್ಲಿ ದ ಸ್ಟೋರಿ) ಕೈಪಿಡಿ

Kannada STS Handbook

ಡೋರೋತಿ ಎ ಮಿಲ್ಲರ್
ದಿ ಗಾಡ್ಸ್ ಸ್ಟೋರಿ ಪ್ರಾಜೆಕ್ಟ್

ಕಥೆ ಮಾತ್ರ (ಸಿಂಪ್ಲಿ ದ ಸ್ಟೋರಿ) ಕುರಿತಾಗಿ ಜನರು ಏನು ಹೇಳುತ್ತಿರುವರು?

"*ಕಥೆ* ಮಾತ್ರದ ಪ್ರಸ್ತಾಪವು ಪರಿಣಾಮಕಾರಿಯಾಗಿದೆ ಏಕೆಂದರೆ ಇದು ನಾವು ಕಥೆಯನ್ನು ಅನುಭವಿಸುವಂತೆ ಮಾಡುತ್ತದೆ. ವಾಕ್ಯಭಾಗವು ಜೀವಂತವಾಗಿ ಬರುವಂತಹುದಾಗಿದೆ ಮತ್ತು ನೀವು ಕಂಡುಹಿಡಿಯುವ ಪ್ರತಿ ಆತ್ಮೀಕ ನಿಧಿಯು ಹೊಸದಾಗಿರುತ್ತದೆ ಮತ್ತು ಬಲಯುತವಾಗಿರುತ್ತದೆ. ಇದನ್ನು ನಾನು ಅನೇಕ ಸ್ಥಳಗಳಲ್ಲಿ ಉಪಯೋಗಿಸುತ್ತಿರುವುದು ನನಗೆ ಸಂತೋಷವಾಗುತ್ತಿದೆ ಮತ್ತು ಪ್ರತಿಕ್ರಿಯೆಯು ಯಾವಾಗಲೂ ಬಹಳ ಸಕಾರಾತ್ಮಕವಾಗಿರುತ್ತದೆ."

ಬಾಬು ಗಂಟ – ಕಮ್ಯುನಿಕೇಶನ್ ಆಫಿಸರ್ ಬೈಬಲ್ ಸೊಸೈಟಿ ಇನ್ ದಿ ಗಲ್ಫ್

"ಯಾವಾಗಲೂ ಸೇವೆಯು ವೃದ್ಧಿಯಾಗುವುದರ ಗುರಿಯೊಂದಿರುವ ನನಗೆ ೩೦ ವರ್ಷಗಳವರೆಗೆ ಈ ಲೋಕವೇ ನನ್ನ ವಿಳಾಸವಾಗಿದೆ. ಕೆನಡಾಗೆ ವಲಸೆ ಬಂದಂತಹ ಚೈನಾದ ೭೯ ವರ್ಷದ ವೃದ್ಧನಿಂದ ಆಕಸ್ಮಿಕವಾಗಿ ವೃದ್ಧಿಯಾಗುವುದರ ಕುರಿತಾಗಿ ತೃಪ್ತಿ ಬಂದಿತು. ಆತನು ಹೀಗೆ ಹೇಳಿದನು:

ಕಥೆ ಮಾತ್ರವನ್ನು ನಾನು ೪೦ ವರ್ಷಗಳ ಹಿಂದೆಯೇ ಪಡೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತೆಂದು ಅನಿಸುತ್ತದೆ. ಚರ್ಚೆಯಿಂದ ನಡೆಸಲ್ಪಡುವ ಸತ್ಯವೇದದ ಒಳ್ಳೆಯ ಆಲೋಚನೆಗಳ ಪ್ರಶ್ನೆಗಳನ್ನು ಕೇಳುವಂತಹ ಕ್ರೈಸ್ತರಾಗಿ ನಾವು ಇನ್ನೂ ಬೆಳೆದಿಲ್ಲ. ಈಗ, ಸತ್ಯವೇದವು ನನಗೆ ಒಂದು ಹೊಸ ಪುಸ್ತಕದಂತಿದೆ.

ಪ್ರತಿಯೊಬ್ಬ ವಿಶ್ವಾಸಿಗಾಗಿ ದೇವರ ವಾಕ್ಯವನ್ನು ನಿಖರವಾಗಿ ಒಪ್ಪಿಸುವುದಕ್ಕೆ ಕೊರತೆಯುಳ್ಳ ಸೇವೆಯು, ನಕಲಿಗಿಂತ ಕಡಿಮೆ ಮಟ್ಟದ್ದಾಗಿದೆ. ಮಹಾ ಆಜ್ಞೆಯನ್ನು ನೆರವೇರಿಸುವುದಕ್ಕೆ *ಕಥೆ* ಮಾತ್ರವು ಪ್ರಾಮುಖ್ಯವಾದುದ್ದಾಗಿದೆ."

ಜಿಮ್ ಟರ್ಬರ್ – ಸೆಮಿನರಿ ಉಪನ್ಯಾಸಕರು / ಸೇವೆಯ ತರಬೇತುಗಾರರು, ಗ್ಲೋಬಲ್

"*ಕಥೆ* ಮಾತ್ರವು ಕೆಲವು ವರ್ಷಗಳ ಹಿಂದೆ ನನ್ನ ಜೀವಿತದೊಳಗೆ ಪ್ರವೇಶಿಸಿತು ಮತ್ತು ಅದು ವಾಸ್ತವವಾಗಿ ನನ್ನ ಪ್ರಾರ್ಥನೆಗಳಿಗೆ ಉತ್ತರವಾಗಿತ್ತು. ನಾನು ೩೫ ವರ್ಷಗಳಿಂದ ಅನೇಕ ಖಂಡಗಳಲ್ಲಿ ಕ್ರೈಸ್ತರಲ್ಲದ ೩ ಮುಖ್ಯ ಧಾರ್ಮಿಕ ಗುಂಪುಗಳೊಂದಿಗೆ ಯೇಸುವಿನ ಮಿಶನರಿಯಾಗಿ ಸೇವೆ ಸಲ್ಲಿಸಿರುವೆನು, ಆದರೆ ದೇವರು ನಾನು ಯಾವ ರೀತಿ ಹೇಳಬೇಕೆಂದು ಬಯಸಿರುವನೋ ಹಾಗೆ ಸ್ವಾಭಾವಿಕವಾದ ರೀತಿಯಲ್ಲಿ ನನ್ನ ಸಾಕ್ಷಿಯನ್ನು ಹಂಚಿಕೊಳ್ಳಲು ನಾನು ಯಾವಾಗಲೂ ಕಷ್ಟಪಡುತ್ತಿದ್ದೆ.

"ಈ ತರಬೇತಿಯು ನನ್ನ ಜೀವಿತವನ್ನು ಅಕ್ಷರಶಃ ಬದಲಾಯಿಸಿತು ಮತ್ತು ಸುವಾರ್ತೆ ಸಾರುವುದನ್ನು ಹಾಗೂ ಶಿಷ್ಯತ್ವವನ್ನು ನನಗೆ ಸ್ವಾಭಾವಿಕವಾಗಿರುವಂತೆ ಮಾಡಿದ್ದಲ್ಲದೆ, ಒಂದು ಸಂತೋಷಕರವಾಗಿಯೂ ಮಾಡಿತು! ದೇವರ ಪವಿತ್ರಾತ್ಮನೊಂದಿಗೆ ಈಗ ಕೆಲಸ ಮಾಡುವುದಕ್ಕೆ ಮತ್ತು ಜನರ ಜೀವಿತಗಳಲ್ಲಿ ದೇವರ ವಾಕ್ಯವು ಆಳಕ್ಕೆ ಹೋಗುವುದನ್ನು ಕ್ರಮಬದ್ಧವಾಗಿ ನೋಡುವುದಕ್ಕೆ ಈಗ ಇದು ಸ್ವತಂತ್ರವಾಗಿದೆ ಮತ್ತು ಆನಂದಭರಿತವಾಗಿದೆ ಮತ್ತು ಹಿಂದೆಂದೂ ನೋಡಿರದ ಹಾಗೆ ಆ ಸೇವೆಯಿಂದ ಫಲವನ್ನು ನೋಡುತ್ತಿರುವೆನು!"

ಬ್ರಯಾನ್ ಥಾಮ್ಸನ್ – ಸಭೆಯ ಸ್ಥಾಪಕರು/ಮಿಶಿನರಿ/ಕಥೆ ಹೇಳುವವರು/

"ಈ ಮೌಖಿಕ ಅನುಗಮನದ ಸತ್ಯವೇದ ಅಧ್ಯಯನವು ಪ್ರತಿಯೊಂದು ಸತ್ಯವೇದದ ಶಾಲೆಯಲ್ಲಿ ಮತ್ತು ಕ್ರೈಸ್ತ ಸಂಸ್ಥೆಯಲ್ಲಿ ಅತ್ಯಗತ್ಯವಾಗಿ ಬೇಕಾಗಿರುವಂತಹ ಒಂದು ವಿಷಯವಾಗಿದೆ! ಯಾವುದೇ ಒಬ್ಬ ಕ್ರೈಸ್ತನು ಸುವಾರ್ತೆಯನ್ನು ಹೇಳುವುದರಲ್ಲಿ ಬಹಳ ಪರಿಣಾಮಕಾರಿಯಾಗಿರುವಂತೆ ಮಾಡುವುದಕ್ಕೆ *ಕಥೆ* ಮಾತ್ರವು ಒಂದು ಬಲವಾದ ಸಾಧನವಾಗಿದೆ."

ರೆಜಿನಾ ಮ್ಯಾನ್ಲಿ–ಮೌಖಿಕ ಸಂಭಾಷಣೆಯ ತಜ್ಞರು, ಮಿಶನ್ ಏವಿಯೇಷನ್ ಫೆಲ್ಲೋಶಿಪ್, ಗ್ಲೋಬಲ

"ನಾವು ನಮ್ಮ ಮೊದಲ ತರಬೇತಿಯನ್ನು ಪಡೆದಂದಿನಿಂದ *ಕಥೆ* ಮಾತ್ರವು ತಲುಪಲಾಗದಿರುವ ಜನರನ್ನು ತಲುಪುವುದಕ್ಕೆ ನಮಗೆ ಒಂದು ಮಾರ್ಗವಾಗಿದೆ. ಈ ಕೈಪಿಡಿಯು ನಮಗೆ ಶಿಷ್ಯರನ್ನು ಅತ್ಯಧಿಕ ಸಂಖ್ಯೆಯಲ್ಲಿ ಮಾಡುವ ಬಲವಾದ ಮಾರ್ಗವಾಗಿದೆ ಮತ್ತು ದೇವರ ವಾಕ್ಯದ ಆತ್ಮೀಕ ನಿಧಿಗೆ ಹೊಸ ಆಸೆಯನ್ನು ಪುನಃ ಹೊತ್ತಿಸಿದೆ. ನಾವು ಸತ್ಯವೇದದ ಕಥೆಗಳನ್ನು ಕಲಿಯುತ್ತೇವೆ ಮತ್ತು ಇವುಗಳನ್ನು ನಮ್ಮ ಹೃದಯದೊಳಗೆ ಶೇಖರಿಸುತ್ತೇವೆ. *ಕಥೆ* ಮಾತ್ರವನ್ನು ಕಂಡುಹಿಡಿಯುವುದಕ್ಕೆ ಮತ್ತು ಒಬ್ಬ ತೊಡಗಿಸಿಕೊಂಡವರಾಗುವುದಕ್ಕೆ ಸಜ್ಜುಗೊಳ್ಳುವುದಕ್ಕೆ ಈ ಕೈಪಿಡಿಯನ್ನು ಓದಿ. ಕರ್ತನೊಂದಿಗಿನ ನಿಮ್ಮ ಆತ್ಮೀಕ ಪಯಣವು ಮೊದಲಿದ್ದ ಹಾಗೆಯೇ ಇರುವುದಿಲ್ಲ."

ರೆ. ಅಪೊಲೊ ಡಿಜಿಬೊ–ಡೈರೆಕ್ಟರ್ ಫುಫುಲ್ಡೆ ಮಿನಿಸ್ಟ್ರೀಸ್ ಟ್ರೈನಿಂಗ್ ಸೆಂಟರ್, ನೈಜರ್

"*ಕಥೆ* ಮಾತ್ರದ ಒಂದು ಮುಖ್ಯವಾದ ಬಲವು ಕಥೆ ಹೇಳುವವರ ಸ್ವಂತ ಮಾತುಗಳಲ್ಲಿ ಕಥೆಗಳನ್ನು ಹೇಳುವುದರ ಮೇಲೆ ಆಧಾರಗೊಂಡಿರುವುದಾಗಿದೆ, ಆದರೆ ಇದನ್ನು ವಾಕ್ಯಭಾಗಕ್ಕೆ ಹೆಚ್ಚಾಗಿ ಸೇರಿಸದೆ ಅಥವಾ ಅದರಿಂದ ತೆಗೆದುಹಾಕದೆ ಬಹಳ ಜಾಗ್ರತೆಯಿಂದ ಮಾಡುವುದಾಗಿದೆ. ಕಥೆಯಲ್ಲಿರುವ ನಿಧಿಗಳನ್ನು ಮತ್ತು ಅವುಗಳ ಆತ್ಮೀಕ ಅನ್ವಯಿಸುವಿಕೆಗಳನ್ನು ವಿದ್ಯಾರ್ಥಿಗಳಿಗೆ ಪವಿತ್ರಾತ್ಮನು ಪ್ರಕಟಪಡಿಸುವಂತೆ ಅನುಮತಿಸುವುದಕ್ಕೆ ಪ್ರಶ್ನೆಗಳೊಂದಿಗೆ ಸರಾಗಮಾಡುವಂತಹುದು ಮತ್ತೊಂದು ಮುಖ್ಯ ಅಂಶವಾಗಿದೆ. ಈ ವಿಧಾನವು ವಿದ್ಯಾರ್ಥಿಗಳಿಗೆ ಬಹಳ ಪ್ರೋತ್ಸಾಹದಾಯಕವಾಗಿದೆ ಮತ್ತು ಅವರೂ ಸಹ ದೇವರ ವಾಕ್ಯವನ್ನು ಇತರರೊಂದಿಗೆ ನಿಖರವಾಗಿ ಹಂಚಿಕೊಳ್ಳಬಲ್ಲರು ಮತ್ತು ದೇವರಿಗೆ ಮಹಿಮೆ ತರುವ ರೀತಿಯಲ್ಲಿ ಹೇಳಬಲ್ಲರು ಎಂಬುದನ್ನು ಅವರಿಗೆ ಗ್ರಹಿಕೆಯಾಗುವಂತೆ ಮಾಡುತ್ತದೆ.

"ಈಗ ಅವರ ಮೌಖಿಕ ಸತ್ಯವೇದ ಶಾಲೆಗಳ ಮಹತ್ತರವಾದ ಪ್ರತಿಪಾದಕ ಯೋಜನೆಯು ಲೋಕದೆಲ್ಲೆಡೆ ಅತ್ಯಗತ್ಯವಾಗಿ ಬೇಕಾಗಿರುವ ಸಭೆಯ ನಾಯಕರುಗಳ ಸಂಖ್ಯೆಯನ್ನು ವಿಸ್ತರಿಸುತ್ತಿದೆ."

ಮೈಕ್ ಹಾಲ್‌ಮ್ಯಾನ್ – MAF ಲರ್ನಿಂಗ್ ಟೆಕ್ನಾಲಜೀಸ್, ಗ್ಲೋಬಲ್

"ನಾನು ಸಾರ್ವಜನಿಕ ಪತ್ರಕರ್ತನಾಗಿ ಕೆಲಸ ಮಾಡುತ್ತಿರುವೆನು. ಕರ್ನಾಟಕದಲ್ಲಿರುವ ನೂರಾರು ನಾಯಕರುಗಳಿಗೆ ತರಬೇತಿ ಕೊಡುವುದಕ್ಕೆ *ಕಥೆ* ಮಾತ್ರದ ತಂಡದ ಭಾಗವಾಗಿರುವ ಸೌಭಾಗ್ಯಕ್ಕಾಗಿ ನಾನು ದೇವರಿಗೆ ವಂದನೆಯನ್ನು ಸಲ್ಲಿಸುತ್ತೇನೆ, ದೇವರ ವಾಕ್ಯವನ್ನು ಕಥೆ ಮಾತ್ರದ ಮೂಲಕ ಕಲಿತುಕೊಳ್ಳುವ ವಿಧಾನವು ನನಗೆ ಮತ್ತು ನನ್ನ ಕುಟುಂಬಕ್ಕೆ ದೇವರ ವಾಕ್ಯವನ್ನು ಅದರಲ್ಲಿರುವ ಹಾಗೆಯೇ ಅರ್ಥಮಾಡಿಕೊಳ್ಳುವುದಕ್ಕೆ ಹಾಗೂ ನಾನು ಒಬ್ಬ ಸಾರ್ವಜನಿಕ ವ್ಯಕ್ತಿಯಾಗಿ ಎಲ್ಲೆಲ್ಲಿಗೆ ಹೋಗುವೆನೋ ಅಲ್ಲೆಲ್ಲಾ ದೇವರ ವಾಕ್ಯವನ್ನು (ಕಥೆಯನ್ನು) ಹಂಚಿಕೊಳ್ಳುವುದಕ್ಕೆ ಸಹಾಯ ಮಾಡಿದೆ."

ಎಂ. ಕೃಷ್ಣ, ಎಂ.ಎ. – ಸೀನಿಯರ್ ಜರ್ನಲಿಸ್ಟ್, ಪಾಲ್ ವಾಯ್ಸ್ ಪಬ್ಲಿಶರ್, ವಿ.ಜೆ.ಪುರ್, ಕರ್ನಾಟಕ, ಭಾರತ

"ನಾನು ಥೈ ಜನರ ನಡುವೆ ಕಳೆದು 30 ವರ್ಷಗಳಿಂದ ಕೆಲಸ ಮಾಡುತ್ತಿರುವೆನು. ನಾನು *ಕಥೆ* ಮಾತ್ರವನ್ನು ಕಂಡುಕೊಂಡಾಗ, ಪ್ರಧಾನವಾಗಿ ಬೌದ್ಧಮತದ ಈ ದೇಶದ ಮೌಖಿಕ ಸ್ವಭಾವದೊಂದಿಗೆ ನಿಜವಾಗಿಯೂ ಪ್ರತಿಧ್ವನಿಸುವ ಒಂದು ವಿಧಾನವಾಗಿದೆ ಎಂದು ನಾನು ಗ್ರಹಿಸಿದೆನು.

"ಈ ದೇಶದಲ್ಲಿರುವ ಬಹುದೊಡ್ಡ ಅಗತ್ಯವೆಂದರೆ ಸಭೆಯನ್ನು ಸ್ಥಾಪಿಸುವ ಒಂದು ಪ್ರಗತಿಯಾಗಿದೆ, ಇದರರ್ಥ ಸಂಸ್ಕೃತಿಗೆ ಸರಿಹೊಂದುವಂತಹ ಶೈಲಿಯಲ್ಲಿ ಸತ್ಯವೇದಕ್ಕನುಗುಣವಾದ ಸತ್ಯವನ್ನು ತಿಳಿಸುವುದಕ್ಕೆ ಒಂದು ತಕ್ಷಣದ ಮಾರ್ಪಾಡುವಿಕೆ ಮಾರ್ಗ ಎಂಬುದಾಗಿದೆ. ಏಶ್ಯಾದ ಅನೇಕ ದೇಶಗಳಲ್ಲಿ ಮತ್ತು ಥೈಲ್ಯಾಂಡ್‌ನ ಪ್ರತಿಯೊಂದು ಭಾಗದಲ್ಲಿಯೂ *ಕಥೆ* ಮಾತ್ರವನ್ನು ಬೋಧಿಸಿದ ನಂತರ, ಗ್ರಾಮಾಂತರ ಸಮುದಾಯದಲ್ಲಿರುವ ಮೌಖಿಕ ಕಲಿಕೆಗಾರರಿಗೆ ಹಾಗೂ, ಪಟ್ಟಣ ಪ್ರದೇಶದ ಹೆಚ್ಚಿನ ವಿದ್ಯಾವಂತರಲ್ಲಿಯೂ ಸಹ ಇದು ಎಷ್ಟು ಸೂಕ್ತವಾದುದಾಗಿದೆ ಎಂಬುದನ್ನು ನಾನು ಕಂಡಿರುವೆನು."

ಲ್ಯಾರಿ ಡಿನ್‌ಕಿನ್ಸ್, ThM., PhD. – ಬೈಬಲ್ ಟೀಚರ್, OMF ಥೈಲ್ಯಾಂಡ್

"ನಮ್ಮಲ್ಲಿ 60 ಅನಾಥ ಮಕ್ಕಳಿರುವರು. ಪ್ರತಿದಿನ ಈ ಮಕ್ಕಳನ್ನು ನಿಭಾಯಿಸುವುದರಲ್ಲಿ ನಾವು ಕಷ್ಟಪಡುತ್ತಿದ್ದೆವು ಏಕೆಂದರೆ ಪ್ರತಿಯೊಬ್ಬರೂ ಬೇರೆಬೇರೆ ಸಂಸ್ಕೃತಿಯಿಂದ ಮತ್ತು ವಿವಿಧ ಸ್ಥಳಗಳಿಂದ ಬಂದವರಾಗಿರುತ್ತಾರೆ. ಅವರಿಗೆ ದೇವರ ಕಾರ್ಯವನ್ನು ಬೋಧಿಸುವುದಕ್ಕೆ *ಕಥೆ* ಮಾತ್ರದ ವಿಧಾನವು ನಮಗೆ ಸಹಾಯ ಮಾಡುತ್ತದೆ ಮತ್ತು ಈಗ ನಮ್ಮ ಮಕ್ಕಳು ಓದಿನಲ್ಲಿ ಬಹಳ ಮುಂದುವರೆದಿರುವರು ಮತ್ತು ಆತನ ಕಥೆಗಳನ್ನು ತಮ್ಮ ಶಾಲೆಗಳಲ್ಲಿ ತಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಿರುವರು."

ರೆ. ವಿಜಯ್ ರಾಜ್ – ಎಕ್ಸಿಕ್ಯುಟಿವ್ ಡೈರೆಕ್ಟರ್ ಹ್ಯಾಪಿ ಹೋಮ್, ಕರ್ನಾಟಕ, ಭಾರತ

"ಆಫ್ರಿಕಾದ ಒಬ್ಬ ಮಿಶನರಿಯಾಗಿ, ಸಭೆಯ ಸ್ಥಾಪಕನಾಗಿ ಮತ್ತು ನನ್ನ ದೇಶದಲ್ಲಿ ಸತ್ಯವೇದ ಶಾಲೆಯ ಬೋಧಕನಾಗಿರುವ ನಾನು, ಕ್ರೈಸ್ತ ಸೇವೆಯಲ್ಲಿ ಶ್ರಮಿಸುತ್ತಿರುವವರೆಲ್ಲರಿಗೂ ಈ ಕೈಪಿಡಿಯನ್ನು ಓದಬೇಕೆಂದು ಶಿಫಾರಸು ಮಾಡುತ್ತೇನೆ. ಲೋಕದಲ್ಲಿ ಎಲ್ಲೇ ಆಗಲಿ, ಯಾವುದೇ ವ್ಯಕ್ತಿಗೆ ಸತ್ಯವೇದವನ್ನು ಮೌಖಿಕವಾಗಿ (ಬಾಯಿ ಮಾತುಗಳಲ್ಲಿ) ಕಲಿಸುವುದಕ್ಕೆ ಮತ್ತು ಕಲಿತುಕೊಳ್ಳುವುದಕ್ಕೆ ಹುಡುಕುತ್ತಿರುವ ವ್ಯಕ್ತಿಗಳಿಗಾಗಿ ಇದು ಸವಿಸ್ತಾರವಾದ ಸಾಧನವಾಗಿದೆ. ನನಗೆ *ಕಥೆ* ಮಾತ್ರವು ಮನೆಯಿಂದ ಪ್ರಾರಂಭವಾಗುತ್ತದೆ. ಪ್ರತಿ ರಾತ್ರಿ ನಾವು ಮಲಗುವುದಕ್ಕೂ ಮುನ್ನ, ಈ ಕೈಪಿಡಿಯಲ್ಲಿರುವ ವಿಧಾನಗಳನ್ನು ಅಳವಡಿಸಿಕೊಳ್ಳುವುದರಿಂದ ನಾವು ಒಟ್ಟಾಗಿ ಒಂದು ಸತ್ಯವೇದದ ಕಥೆಯನ್ನು ಕಲಿಯುತ್ತೇವೆ ಮತ್ತು ಚರ್ಚಿಸುತ್ತೇವೆ. ನಮ್ಮ ಕುಟುಂಬವು ಬಹಳವಾಗಿ ಬದಲಾವಣೆಗೊಂಡಿದೆ."

ರೆ. ಜೇಕಬ್ ಓಚಿಂಗ್ ಓಕೊಥ್ – ಶವರ್ಸ್ ಆಫ್ ಬ್ಲೆಸ್ಸಿಂಗ್ಸ್ ಚರ್ಚ್/ಮಿನಿಸ್ಟ್ರೀಸ್, ಫೌಂಡರ್, ಕೀನ್ಯಾ

"ಡೊರೊಥಿ ಮಿಲ್ಲರ್ ಮತ್ತು *ಕಥೆ* ಮಾತ್ರದ ತಂಡವು ಸತ್ಯವೇದದ ಕಥೆ ಹೇಳುವ ಆಂದೋಲನದಲ್ಲಿ ಮುಂದಕ್ಕೆ ನಡೆಸುತ್ತಿರುವ ಮಾರ್ಗದರ್ಶಕರಾಗಿರುವರು. *ಕಥೆ* ಮಾತ್ರದ ತೊಡಗಿಸಿಕೊಂಡವರಾಗಿರುವುದಕ್ಕೆ ನಾನು ತರಬೇತಿಯನ್ನು ಹೊಂದಿದೆ ಮತ್ತು ಅಕ್ಷರಸ್ಥರು ಹಾಗೂ ಅನಕ್ಷರಸ್ಥರಿಗೆ *ಕಥೆ* ಮಾತ್ರವನ್ನು ನಿರೂಪಿಸುವಾಗ ಸತ್ಯವೇದದ ಕಥೆಗಳು ನೈಜವಾಗಿ ಮೂಡಿಬರುವುದನ್ನು ನಾನು ವೈಯಕ್ತಿಕವಾಗಿ ಕಂಡಿರುವೆನು."

ಚಾರ್ಲ್ಸ್ ಸಿಬೆನ್ –CEO, ಮೆಗಾವಾಯ್ಸ್, ಗ್ಲೋಬಲ್

"ಇಥಿಯೋಪಿಯ ಮತ್ತು ಅದರ ನಂತರದಲ್ಲಿರುವ ಸೇವೆಗೆ, ಕಳೆದುಹೋಗಿದ್ದ ತುಂಡನ್ನು ನಾನು *ಕಥೆ* ಮಾತ್ರದಲ್ಲಿ ಕಂಡುಕೊಂಡೆನು. ವಾಕ್ಯಗಳ ನಿಖರತೆಗಿರುವ ಅವರ ಸಮರ್ಪಣೆಯು ಈ ಪರಸ್ಪರ ಕ್ರಿಯೆಯ ವಿಧಾನವು ಸತ್ಯವೇದವನ್ನು ಇಥಿಯೋಪಿಯಾದಲ್ಲಿ ಪರಿಚಯಿಸುವಂತೆ ನಮ್ಮನ್ನು ಪ್ರೇರೇಪಿಸಿತು. ಕಥೆ ಹೇಳುವವರು ಜನರನ್ನು ಕ್ರಿಸ್ತನ ಬಳಿಗೆ ಕರೆತರುತ್ತಿರುವರು, ಮತ್ತು ಬಹಳ ಮುಖ್ಯವಾಗಿ, *ಕಥೆ* ಮಾತ್ರದ ವಿಧಾನಗಳು ಕಥೆ ಹೇಳುವವರನ್ನು ಪವಿತ್ರಾತ್ಮನು ಎಲ್ಲಾ ಸತ್ಯಕ್ಕೆ ನಡೆಸುವಾಗ ಅವರು ತಾವೇ ಖುದ್ದಾಗಿ ದೇವರ ವಾಕ್ಯದೊಳಗೆ ಪರಿಶೋಧನೆಯನ್ನು ಮಾಡುವುದರಿಂದ ಕಥೆ ಹೇಳುವವರ ಜೀವಿತಗಳು ಮಾರ್ಪಾಡಾಗುತ್ತಿವೆ."

ಜೂಲಿ ಕಯ್ ಫೀಲ್ಡ್ – ಪ್ಯಾರಾಕ್ಲೆಟ್ ಮಿಶನ್ ಗ್ರೂಪ್ ಅಸೋಸಿಯೇಟ್, ಗ್ಲೋಬಲ್

"ನಾನು ಹಿಮಾಲಯದ ಬುಡಕಟ್ಟು ಜನರ ಮಧ್ಯ ಸೇವೆ ಮಾಡುತ್ತಿರುವೆನು ಮತ್ತು ನಮ್ಮ ಬುಡಕಟ್ಟಿನ ಜನರ ಸಾಂಪ್ರದಾಯಿಕ ಅಭ್ಯಾಸಗಳು ಮೌಖಿಕ ಸಂಪ್ರದಾಯಗಳ ಮೇಲೆ ಆಧಾರಗೊಂಡಿರುವುದರಿಂದ, ಇಲ್ಲ ಯಾವುದೇ ಬರವಣಿಗೆಯ ದಾಖಲೆಗಳಿಲ್ಲ. ಆದುದರಿಂದ ಈ ಬುಡಕಟ್ಟು ಜನರಿಗೆ ಸುವಾರ್ತೆಯನ್ನು ಸಾರುವುದಕ್ಕಿರುವ ಉತ್ತಮವಾದ ಮಾರ್ಗವೆಂದರೆ ಅದು ಕಥೆಯನ್ನು ಹೇಳುವುದರ ಮೂಲಕವಾಗಿ. ಕಥೆ ಹೇಳುವುದು (*ಕಥೆ* ಮಾತ್ರ) ನಮ್ಮ ಪರ್ವತ ರಾಜ್ಯದಲ್ಲಿ ಸುವಾರ್ತೆಯನ್ನು ಸಾರುವುದಕ್ಕಿರುವ ನಮ್ಮ ಉತ್ತಮವಾದ ಒಂದು ಮಾದರಿಯಾಗಿದೆ."

ರೆ. ಟಿನುಯಂಗ್ಬ ಇಂಚೆನ್ – ಸೀನಿಯರ್ ಪಾಸ್ಟರ್ / ಬೈಬಲ್ ಟೀಚರ್, ಅರುಣಾಚಲ ಪ್ರದೇಶ, ಭಾರತ

"ದೇವರ ವಾಕ್ಯವನ್ನು ಅದರಲ್ಲಿರುವ ಹಾಗೆಯೇ ಅರ್ಥ ಮಾಡಿಕೊಳ್ಳುವುದಕ್ಕೆ ಸುಲಭವಾಗಿರುವಂತೆ ಮತ್ತು ಸಂಪೂರ್ಣ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಮತ್ತು ಇದನ್ನು ನಮ್ಮ ಹೃದಯದಲ್ಲಿ ಕಾಪಾಡಿಕೊಳ್ಳುವಂತೆ ನಮಗೆ ಸಹಾಯ ಮಾಡಿದೆ. ನಮ್ಮ ಸ್ಥಳೀಯ ಸಭೆಯ ಅನಕ್ಷರಸ್ಥ ಹಿರಿಯರು ದೇವರ ವಾಕ್ಯವನ್ನು ಕಲಿತುಕೊಳ್ಳುವಂತೆ ಅವರಿಗೆ ತರಬೇತಿ ಕೊಡುವುದಕ್ಕೆ ಮತ್ತು ಅವರು ತಮ್ಮ ನೆರೆಯ

ಕುಟುಂಬಗಳಿಗೆ ಹಾಗೂ ಹಳ್ಳಿಗಳಿಗೆ ಇದನ್ನು ತಲುಪಿಸುವಂತೆ ಮಾಡುವುದಕ್ಕೆ ಇದು ನಮಗೆ ಸಹಾಯ ಮಾಡಿದೆ. ಆನಂತರ ಹೆಚ್ಚಿನ ಸಭೆಗಳನ್ನು ಸ್ಥಾಪಿಸುವುದಕ್ಕೆ *ಕಥೆ* ಮಾತ್ರವು ನಮಗೆ ಸಹಾಯ ಮಾಡಿತು."

ರೆ. ದೇವ ಸಹಾಯಮ್ – ಸೀನಿಯರ್ ಪಾಸ್ಟರ್/ಚರ್ಚ್ ಪ್ಲಾ್ಯಂಟರ್, ಎಫ್.ಎಲ್. ಚರ್ಚ್, ಆಂಧ್ರ ಪ್ರದೇಶ, ಭಾರತ

"ಸರಳವಾಗಿ ಕಥೆ ಹೇಳುವುದರಲ್ಲಿ, ಪುನಃ ಹೇಳುವುದರಲ್ಲಿ ಮತ್ತು ಅವುಗಳಲ್ಲಿ ಕಂಡುಬರುವ ಅವಲೋಕನಗಳಿಗಾಗಿ ಹಾಗೂ ಅನ್ವಯಿಸುವಿಕೆಗಳಿಗಾಗಿ ಕಥೆಗಳನ್ನು ಪರೀಕ್ಷಿಸುವುದರಲ್ಲಿ ಸತ್ಯವೇದಕ್ಕನುಗುಣವಾದ ನಿಖರತೆಯನ್ನು ನಿಭಾಯಿಸಿರುವುದು ನನಗೆ ಆಶ್ಚರ್ಯಚಕಿತಗೊಳಿಸಿತು. ಯಾವುದೇ ಸಮಯದಲ್ಲಿ ಒಬ್ಬ ವ್ಯಕ್ತಿಯು ಈ ರೀತಿಯ ಪರಸ್ಪರ ಮಾತುಕತೆಯ ಪ್ರಕ್ರಿಯೆಯಲ್ಲಿ, 'ಇದನ್ನು ನಾವು ಕಥೆಯಲ್ಲಿ ಕಂಡುಹಿಡಿಯಬಹುದೇ?' ಎಂದು ಕಥೆ ಹೇಳುವವರು ಬಹಳ ಚಿಕ್ಕದಾದ ಬಿಟ್ಟುಬಿಟ್ಟಿರುವ ಸಂಗತಿಯ ಕುರಿತಾಗಿ ಕೇಳಿದಾಗ, ಆ ಚಿಕ್ಕ ಭಾಗವನ್ನು ಕಂಡುಹಿಡಿಯುವರು. ತಕ್ಷಣವೇ ಗುಂಪನ್ನು ದೇವರ ವಾಕ್ಯಕ್ಕೆ ಪುನಃ ಕರೆದುಕೊಂಡು ಬರಲಾಗುತ್ತದೆ ಮತ್ತು ಇದನ್ನು ಸುಲಭವಾಗಿ ಪರಿಹರಿಸಲಾಗಿತ್ತು."

ಪಾಸ್ಟರ್ ಮೈಲ್ಸ್ ಡೆಬೆನೆಡಿಕ್ಟಿಸ್ – ಕ್ರಾಸ್ ಕನೆಕ್ಷನ್, ಯುಎಸ್ಎ

"ಸತ್ಯವೇದದ ಪಂಡಿತ ಮತ್ತು ದೈವಶಾಸ್ತ್ರಜ್ಞನಾಗಿ, ಸತ್ಯವೇದಕ್ಕನುಗುಣವಾದ ವ್ಯಾಖ್ಯಾನವನ್ನು ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ಮಾಡುವಂತಹುದೇ *ಕಥೆ* ಮಾತ್ರ ಎಂಬುದಾಗಿ ನಾನು ಕಾಣುತ್ತೇನೆ. ನನ್ನ ದೇಶದಲ್ಲಿ ಶಿಷ್ಯತ್ವ ಸೇವೆಯ ನನ್ನ 24 ವರ್ಷಗಳಲ್ಲಿ, ಓದು ಬರಹ ತಿಳಿಯದಿರುವ ಒಬ್ಬ ವ್ಯಕ್ತಿಗಾಗಲಿ ನಾನು ಎಂದೂ ಶಿಷ್ಯತ್ವದ ತರಬೇತಿಯನ್ನು ಕೊಟ್ಟಿಲ್ಲ ಎಂಬುದನ್ನು ಈಗ ನಾನು ಅರಿತುಕೊಂಡೆನು. *ಕಥೆ* ಮಾತ್ರದ ಈ ಕೈಪಿಡಿಯಲ್ಲಿರುವ ಕೌಶಲಗಳು ಆ ಅವಿಸ್ಮರಣೀಯ ಗುರಿಯೊಂದಿಗೆ ಪ್ರಾರಂಭಿಸುವಂತೆ ನನಗೆ ಸಹಾಯ ಮಾಡಿದೆ. ಪ್ರತಿಯೊಂದು ಹಾಳೆಯನ್ನು ಎಲ್ಲಾ ಜನರಿಗೆ, ಅದರಲ್ಲಿ ವಿಶೇಷವಾಗಿ ನನ್ನ ಹಾಗಿರುವ ದೈವಶಾಸ್ತ್ರಜ್ಞರು ಓದಬೇಕೆಂದು ನಾನು ಶಿಫಾರಸು ಮಾಡುತ್ತೇನೆ."

ರೆ. ಲುವೋವೊ – ಜೆರೂಸಲೇಮ್ ನ್ಯೂ ಲೈಫ್ ಪೆಂಟೆಕೋಸ್ಟಲ್ ಚರ್ಚ ಇಂಟರ್ನ್ಯಾಷನಲ್, ಡಿ.ಆರ್.ಕಾಂಗೋ

"ನಾನು 'ದೇವರ ವಾಕ್ಯದ ಯೋಜನೆ ಭಾರತ'ವನ್ನು ಪ್ರಾರಂಭದಲ್ಲಿಯೇ ಇದರ ಬೆಳವಣಿಗೆ ಆಗುವುದನ್ನು ನೋಡಿರುವೆನು. ಸತ್ಯವೇದ ಕಥೆಗಳ ಸರಳತೆಯ ಮತ್ತು ಮರುಉತ್ಪತ್ತಿಯ ಬಲದ ಮೂಲಕ ಜನರ ಜೀವಿತ ಬದಲಾಗುವುದನ್ನು ನಾವು ನೋಡಿರುವೆವು. ನಮ್ಮ ಸಂತತಿಯಲ್ಲಿ ಈ ದೇಶವನ್ನು ಕರ್ತನಿಗಾಗಿ ತಲುಪಬೇಕೆಂದು ನಾವು ಬಯಸುವುದಾದರೆ, ನಮಗೆ ಬೋಧಿಸುವ, ತರಬೇತಿ ಕೊಡುವ ಮತ್ತು ಜನರು ತಾವು ಅರ್ಥಮಾಡಿಕೊಂಡಿರುವ ರೀತಿಯಲ್ಲಿ ಅವರಿಗೆ ಶಿಷ್ಯತ್ವವನ್ನು ನೀಡುವ ಅಗತ್ಯವಿದೆ ಎಂದು ನನಗೆ ಮನವರಿಕೆಯಾಗಿದೆ. ಈ ತರಬೇತಿಯನ್ನು ಹೊಂದಿಕೊಳ್ಳಿ ಮತ್ತು ನಮ್ಮ ದೇಶವನ್ನು ಕ್ರಿಸ್ತನಿಗಾಗಿ ಶಿಷ್ಯತ್ವವನ್ನು ಹೊಂದುವುದಕ್ಕೆ ಸತ್ಯವೇದದ ಕಥೆಗಳನ್ನು ಉಪಯೋಗಿಸಿ ಎಂದು ನಾನು ಬಲವಾಗಿ ಶಿಫಾರಸು ಮಾಡುತ್ತೇನೆ."

ರೆ. ಡಾ. ಸ್ಯಾಮ್ ಅಬ್ರಹಾಮ್ – ಡೈರೆಕ್ಟರ್ ಹಿಮಾಚಲ್ ಬೈಬಲ್ ಕಾಲೆಜ್, ಬೆರಕಾ ಮಿನಿಸ್ಟ್ರೀಸ್, ಭಾರತ

ದೇವರ ಕಥೆ

ಸೃಷ್ಟಿಯಿಂದ ನಿತ್ಯತ್ವದವರಿಗೆ

ಕಥೆ ಮಾತ್ರ (ಸಿಂಪ್ಲಿ ದ ಸ್ಟೋರಿ) ಕೈಪಿಡಿ

ಚರ್ಚೆಯ ಮುಖಾಂತರ ದೇವರ ವಾಕ್ಯಗಳನ್ನು ಪರಿಶೋಧಿಸುವುದು "ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವುದು"

India- Kannada STS Handbook

೨೪-೧೧-೨೦೧೪

ಡೋರೋತಿ ಎ ಮಿಲ್ಲರ್
ದಿ ಗಾಡ್ಸ್ ಸ್ಟೋರಿ ಪ್ರಾಜೆಕ್ಟ್

ಕಥೆ ಮಾತ್ರ, ಕೈಪಿಡಿ, ೬ ಎ ನೇ ಮುದ್ರಣ
Copyright ©2006, 2012, 2014, by The God's Story Project

ಪ್ರಕಾಶಕರು, ದ ಗಾಡ್ಸ್ ಸ್ಟೋರಿ ಪ್ರಾಜೆಕ್ಟ್
ಅಂಚೆ ಪೆಟ್ಟಿಗೆ ೧೪೭, ಹೇವೆಟ್, ಕ್ಯಾಲಿಫೋರ್ನಿಯ ೯೨೫೪೬,
(೯೫೧)೬೫೪–೧೬೧೯,
info@SimplyTheStory.org | info@Gods-Story.org
www.SimplyTheStory.org | www.Gods-Story.org

ಇಂಡಿಯ ವಿಳಾಸ: ಟಿ ಜಿ ಎಸ್ ಪಿ–ಇಂಡಿಯ, ಅಂಚೆ ಪೆಟ್ಟಿಗೆ. ೩, ಸಿದ್ಧಾರ್ಥನಗರ (ಅಂಚೆ),
ಮೈಸೂರು– ೫೭೦ ೦೧೧, ಕರ್ನಾಟಕ.

ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ, ಅಪ್ಪಣೆ ಇಲ್ಲದೆ ಈ ಪುಸ್ತಕದಿಂದ ಯಾವುದೇ ಭಾಗವನ್ನು ಉಪಯೋಗಿಸಬಾರದು ಹಾಗು ಬೇರೆ ಭಾಷೆಗೆ ಭಾಷಾಂತರ ಮಾಡಬಾರದು. ಪ್ರಕಾಶಕರ ಅಪ್ಪಣೆ ಪಡೆದು ಉಪಯೋಗಿಸಬೇಕು.

ಈ ಪುಸ್ತಕವನ್ನು ಭಾಷಾಂತರ ಮಾಡುವುದಕ್ಕೆ ನೀವು ಬಯಸುವುದಾದರೆ ನಮಗೆ ತಿಳಿಯಪಡಿಸಿ.
ಭಾಷಾಂತರಕ್ಕಾಗಿ ಅನುಮತಿ ಕೊಡುತೇವೆ ಹಾಗು ನಿಮ್ಮೊಂದಿಗೆ ಕೆಲಸ ಮಾಡಲು ನಾವು ಸಂತೋಷ ಪಡುತ್ತೇವೆ. ಈ ಪುಸ್ತಕದ ಎಲ್ಲವೂ ಟಿ ಜಿ ಎಸ್ ಪಿ ಮಾರ್ಗದರ್ಶನವನ್ನು ಉಪಯೋಗಿಸಿಕೊಂಡು ಮಾಡಲಾಗಿದೆ ಎಂಬುದನ್ನು ಖಚಿತಪಡಿಸಲು ನಾವು ಬಹಳ ಸಂತೋಷವುಳ್ಳವರಾಗಿದ್ದೇವೆ.

ಡೊರೋಥಿ ಎ. ಮಿಲ್ಲರ್
ಎಕ್ಸಿಕ್ಯುಟಿವ್ ಡೈರೆಕ್ಟರ್, ದ ಗಾಡ್ಸ್ ಸ್ಟೋರಿ ಪ್ರಾಜೆಕ್ಟ್

ಈ ಕೈಪಿಡಿಯಲ್ಲಿ ಒಳಗೊಂಡಿರುವ ಸತ್ಯವೇದ ವಾಕ್ಯಭಾಗದ ಉಲ್ಲೇಖಗಳನ್ನು ಕಿಂಗ್ ಜೇಮ್ಸ್ ಇಂಗ್ಲೀಷ್ ಸತ್ಯವೇದದಿಂದ ಹಾರಿಸಲಗಿದೆ.

ಈ ಕೈಪಿಡಿಯಲ್ಲಿ ಒಳಗೊಂಡಿರುವ ಸತ್ಯವೇದ ವಾಕ್ಯಭಾಗದ ಉಲ್ಲೇಖಗಳನ್ನು ಎಚ್ಚರಿಕೆಯಿಂದ ಗಮನಿಸಲು ನೀವು ಸ್ವತಂತ್ರರಾಗಿರಿ. ಕಥೆಯ ಅರ್ಥವನ್ನು ಬದಲಾಯಿಸಬಹುದಾದಂತಹ ಸಂಗತಿಯ ಅಂಶಗಳಲ್ಲಿ ವ್ಯತ್ಯಾಸವನ್ನು ವಿವಿಧ ಸತ್ಯವೇದದ ಅನುವಾದಗಳು ತೋರಿಸಿದಲ್ಲಿ, ಆಗ ನೀವು ಕಥೆಯನ್ನೇ ಖಿದ್ದಾಗಿ ಓದಿ, ಅದನ್ನು ಚನ್ನಾಗಿ ಅರಿತುಕೋಂಡು, ನೀವು ಕಥೆಯನ್ನು ಹೇಗೆ ಹೇಳಬೇಕೆಂದು ಎಂಬುದಕ್ಕಾಗಿ ದೇವರನ್ನು ಪ್ರಾರ್ಥಿಸಿರಿ ಹಾಗ ದೇವರೆ ನಿಮಗೆ ಎಲ್ಲಾ ವಿಚಾರದಲ್ಲಿ ಸಹಾಯ ಮಾಡುತ್ತಾನೆ.

ISBN 978-0-9855206-0-1

ಅನುಕ್ರಮಣಿಕೆ

ಕಥೆ ಮಾತ್ರ (ಸಿಂಪ್ಲಿ ದ ಸ್ಟೋರಿ) **ಕುರಿತಾಗಿ ಜನರು ಏನು ಹೇಳುತ್ತಿರುವರು:**.....೦೨

ಮುಂದಿನ ಪ್ರಗತಿಯಲ್ಲಿ– ಆಫ್ರಿಕ:.....೦೯

ಮುಂದಿನ ಪ್ರಗತಿಯಲ್ಲಿ– ಅಮೇರಿಕ:.....೧೦

ಅಧ್ಯಾಯ 1: ಮೌಖಿಕವಾಗಿ ತರಬೇತಿ ಹೋಂದುವ ಅವಶ್ಯಕತೆ (ಅಗತ್ಯಗಳು).....೧೨

ಅಧ್ಯಾಯ 2: ಪ್ರಶ್ನೆಗಳು ಮತ್ತು ಕಥೆಗಳು ಸತ್ಯವೇದದ ಪೂರ್ವ ನಿದರ್ಶನ:.....೧೯

ಅಧ್ಯಾಯ 3 *ಕಥೆ ಮಾತ್ರ (ಸಿಂಪ್ಲಿ ದ ಸ್ಟೊರಿ)* – ಚಿಕ್ಕ ಪುನರ್‌ಪರೀಶೀಲನೆ:.....೨೭

ಅಧ್ಯಾಯ 4: ಕಥೆಯನ್ನು ಹೇಗೆ ಸಿದ್ಧಪಡಿಸುವುದು. *ಕಥೆ ಮಾತ್ರದ* ವಿಧಾನ:.....೨೮

ಕೌಶಲ I: ನಿಮ್ಮ ಕಥೆಯನ್ನು ಹೇಗೆ ಸಿದ್ಧಪಡಿಸುವುದು ಮತ್ತು ಇದನ್ನು ಚೆನ್ನಾಗಿ ಹೇಳುವ ರೀತಿ:.....೨೮

ಕೌಶಲ II: ಕಥೆಯಲ್ಲಿರುವ ನಿಧಿಗಳನ್ನು ಕಂಡುಹಿಡಿಯುವುದು ಹೇಗೆ ? ೪೩

"ಆತ್ಮೀಕ ಅವಲೋಕನಗಳು" ಎಂದು ಕರೆಯಲ್ಪಡುವ ನಿಧಿಗಳನ್ನು ಹೇಗೆ ಕಂಡುಹಿಡಿಯುವುದು:.....೪೩

"ಆತ್ಮೀಕ ಅನ್ವಯಿಸುವಿಕೆಗಳು" ಎಂದು ಕರೆಯಲ್ಪಡುವ ನಿಧಿಗಳನ್ನು ಹೇಗೆ ಕಂಡುಹಿಡಿಯುವುದು:.....೫೦

ಕೌಶಲ III: ನಿಮ್ಮ ಪ್ರಶ್ನೆಗಳನ್ನು ರೂಪಿಸುವುದು ಹೇಗೆ :.....೫೭

ಕಥೆಗಾಗಿ ಒಂದು ಪರಿಚಯವನ್ನು (ಪೀಠಿಕೆ) ರಚಿಸುವುದು ಹೇಗೆ:.....೬೧

ಅಧ್ಯಾಯ 5: ಸಿದ್ಧತೆ ಹಾಗೂ ನಿರೂಪಣೆಯ ನಮ್ಮ ಕೌಶಲಗಳನ್ನು ಪ್ರಯತ್ನಿಸೋಣ:.....೬೪

ಸಿದ್ಧತೆ: ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದು:.....೬೪

ರೂಪಣೆ ಹಂತ ಒಂದು: ಕಥೆಯನ್ನು ಮೂರು ಬಾರಿ ಹೇಳುವುದು:.....೬೭

ನಿರೂಪಣೆ ಹಂತ ಎರಡು: ಆತ್ಮೀಕ ಅವಲೋಕನಗಳ ಚರ್ಚೆ: ೭೫

ನಿರೂಪಣೆ ಹಂತ ಎರಡು: ಆತ್ಮೀಕ ಅನ್ವಯಿಸುವಿಕೆಗಳ ಚರ್ಚೆ:.....೮೫

ಅಧ್ಯಾಯ 6: ಚರ್ಚೆಯನ್ನು ನಡೆಸುವುದಕ್ಕಾಗಿ ಸಾಮಾನ್ಯವಾದ ಸೂಚನೆಗಳು:.....೯೨

ಅಧ್ಯಾಯ 7: ನಿಖರತೆಯಿಂದ ಅನ್ವಹಿಸಿಕೋಳ್ಳುವುದು – ಆನೆಯನ್ನು ಕಂಡುಹಿಡಿಯುವುದು:.....೧೧೩

ಅಧ್ಯಾಯ 8: ಅವಿದ್ಯಾವಂತರು ಮತ್ತು ಮೌಖಿಕ ಸತ್ಯವೇದ ಶಾಲೆಗಳು:.....೧೨೧

ಅಧ್ಯಾಯ 9: ಮುಳ್ಳುಗಳನ್ನು (ಕಠಿಣವಾದವಗಳನ್ನು) ಹೊರಗೆ ಎಳೆಯುವುದು:.....೧೨೯

ಅಧ್ಯಾಯ 10: *ಕಥೆ ಮಾತ್ರದ* ಕಥೆಗಾರರ ವಿಂಗಡನೆಗಳು:.....೧೫೦

ಅಧ್ಯಾಯ 11: ಎಸ್ ಟಿ ಎಸ್ ನ್ನು ಉಪಯೋಗಿಸುವ ಸ್ಥಳ, ಕಲಿಯುವ ವಿಧಾನ ಮತ್ತು ವಿಸ್ತರಿಸುವುದು:.....೧೫೬

ಕಥೆ ಮಾತ್ರದ ತೊಡಗಿಸಿಕೊಂಡವರ ತರಬೇತಿಯ ಮರುಪರಿಶೀಲನೆ:.....೧೬೪

ಬಿ: ಒಂದು ದೃಷ್ಟಾಂತ ಕಥೆಯ ಮೂಲಕ ಪ್ರಯಾಣ: ಪ್ರಶ್ನೆಗಳನ್ನು ಹೇಗೆ ಸಿದ್ಧಪಡಿಸುವುದು:.....೧೬೭

ಸಿ : ಬಳಕೆದಾರರ ಪರಿಣಾಮದ ವರದಿ: ತರಬೇತಿ ಕೊಡುವುದು ಮತ್ತು ವೃದ್ಧಿಗೊಳಿಸುವುದು:.....೧೯೮

ಡಿ : ಒಬ್ಬ ನಾಯಕನ ಸಂಶೋಧನೆ:.....೨೦೨

ದೇವರ ಕಥೆ : ಸೃಷ್ಟಿಯಿಂದ ನಿತ್ಯತ್ವವರೆಗೆ:.....೨೦೬

ಎಲ್ಲ ದೇಶಗಳ ನಾಯಕರ ಈಮೇಲ್ ವಿಳಾಸ:.....೨೦೭

ಕಥೆ ಮಾತ್ರದ (ಸಿಂಪ್ಲಿ ದ ಸ್ಟೋರಿ) ತರಬೇತಿ ಪಡೆದ ಲೋಕದ ಅನೇಕ ನಾಯಕರ ಪ್ರತಿಕ್ರಿಯೆಗಳು:.....೨೦೮

ಮುಂದಿನ ಪ್ರಗತಿಯಲ್ಲಿ– ಆಫ್ರಿಕ.

ಕೆಲವು ವರ್ಷಗಳಯಿಂದೆ ಡೋರತಿಯವರನ್ನು ಗಲ್ಫ್ ದೇಶನಲ್ಲಿ ನಡೆದ ಕಾರ್ಯಕ್ರಮ ಒಂದರಲ್ಲಿ ಬೇಟಿಯಾದೆ, ಅವರು ದೇವರ ಕಥೆಯನ್ನು ಕಷ್ಟಕರವಾದ ಸ್ಥಳದಲ್ಲಿ ಹಾಗು ಅನ್ಯರಿಗೆ ಹೇಗೆ ಅದ್ಬುತವಾಗಿ ಹೇಳುವುದು ಎಂಬುದಾಗಿ ನನಗೂ ಹಾಗು ನನ್ನ ಮಡದಿಗೆ ತಿಳಿಸಿಕೋಟ್ಟರು. ಅದಾದ ಮೇಲೆ ನಾವು ಮಾರ್ಥ ಮತ್ತು ಮರಿಯಳ ಕಥೆಯನ್ನು "ಕಥೆ ಮಾತ್ರ" ತರಭೇತಿಯ ರೂಪದಲ್ಲಿ ಕೇಳಿಸಿಕೋಂಡಾಗ ಅದರಲ್ಲಡಗಿರುವ ಆತ್ಮೀಕ ನಿದಿಗಳನ್ನು ನೋಡಿ ನಮಗೆ ಬಹಳ ಆಚ್ಚಾರ್ಯವಾಯಿತು.

ನಾವು ಈ ತರಬೇತಿಯನ್ನು ಕಲ್ವರಿ ಮಿನಿಷ್ಟ್ರೀಸ್ (ಸಿ ಎ ಪಿ ಆರ್ ಒ) ನೈಜೀರಿಯದ ಸೇವಾಪ್ರಾಂತಗಳಲ್ಲಿ ಪರಿಚಯಿಸಿದೆವು, ಈ ತರಭೇತಿಯಿಂದ ಒಳ್ಳೆಯ ಪಲಿತಾಂಶ ಬಂತು. ಕಲ್ವರಿ ಮಿನಿಷ್ಟ್ರೀಸ್ (ಸಿ ಎ ಪಿ ಆರ್ ಒ) ಸಂಸ್ಥೆಯು ಸುಮಾರು ೩೦ ರಾಷ್ಟ್ರಗಳಲ್ಲಿ ಸಭೆಸ್ಥಾಪನ ಸೇವೆಯನ್ನು ಮಾಡುತ್ತಿದೆ ನಮ್ಮ ಸಂಸ್ಥೆಯು ಸುಮಾರು ೬೫ ಸುವಾರ್ತೆಯನ್ನು ಕೇಳದೇಇರುವ (ಯು ಪಿ ಜಿಸ್ ಹಾಗು ಎಂಯುಪಿಜಿಸ್) ಜನರ ಮದ್ಯದಲ್ಲಿ ಸೇವೆಮಾಡುತ್ತಿದೆ.

"ಕಥೆ ಮಾತ್ರ" (ಎಸ್ ಟಿ ಎಸ್) ತರಭೇತಿಯಿಂದ ವಿದ್ಯಾವಂತರೂ ಹಾಗು ಅವಿದ್ಯವಂತರೂ ದೇವರ ವಾಕ್ಯದಲ್ಲಿ ಕ್ರಮಬದ್ದವಾಗಿ ಕಲಿತುಕೋಳ್ಳಲು ಹಾಗು ಆಳವಾಗಿ ಮತ್ತು ವಿವರಣಾತ್ಮಕವಾಗಿ ಕಲಿಯಲು ಸಹಾಯ ಮಾಡುತ್ತದೆ. ಪ್ರತಿ ದೇವರ ಕಥೆಯಲ್ಲಿ ಸತ್ಯಾಂಶವನ್ನು ಅರಿತುಕೋಳ್ಳಲು ಸಹಾಯವಾಗುವ ಮುಖ್ಯಾಂಶಗಳು ನಮಗೆ ದೋರಕುತ್ತದೆ, ದೇವರು ಕ್ರಿಸ್ತನ ಹಾಗು ಪವಿತ್ರಾತ್ಮ ಮೂಖಾಂತರ ಮಾನವನ ಮೇಲೆ ತೋರಿಸುವ ಪ್ರೀತಿಯನ್ನು ಕಥೆಯಲ್ಲಿ ದೋರಕುವ ಆತ್ಮೀಕ ನಿದಿಗಳ ಮೂಲಕ ಮಾನವನಿಗೆ ಆತ್ಮೀಕವಾಗಿ ಬೆಳೆಯಲು ಸಹಾಯವಾಗುತ್ತದೆ.

ಸತ್ಯವೇದದ ಆತ್ಮೀಕ ವಿಷಯಗಳನ್ನು ಕ್ರಮಬದ್ದವಾಗಿ ಕಲಿತುಕೋಳ್ಳುವುದೇ ಸಿಂಪ್ಲಿ ದ ಸ್ಟೋರಿ (ಕಥೆ ಮಾತ್ರ) ದ ಉದ್ದೇಶ ಹಾಗು ವಿದ್ಯಾವಂತರು ಮತ್ತು ಅವಿದ್ಯಾವಂತರು ಸರಳ ರೀತಿಯಲ್ಲಿ ಕಥೆಯಲ್ಲಿ ಆಳವಾಗಿ ಹೋಗಿ, ಸವಿಸ್ತಾರವಾಗಿ ದೇವರ ಪ್ರೀತಿಯನ್ನು ಅರಿತುಕೋಳ್ಳುವುದೇ ಇದರ ಮುಖ್ಯ ಉದ್ದೇಶ.

ಆಫ್ರೀಕ ದೇಶದ ನಮ್ಮ ಪೂರ್ವೀಕರು ನಮ್ಮ ಸಂಸ್ಕೃತಿಯನ್ನು ಕಥಾರೂಪವಾಗಿ ಮುಂದುವರಿಸಿಕೋಂಡು ಬಂದಿರುವುದನ್ನು ನಾವು ನೋಡುತ್ತೇವೆ. ಇದರಿಂದ ನಮ್ಮ ನಾಡಿನ ಹಾಗು ನಮ್ಮ ಜೀವನದ ಮುಖ್ಯಾಂಶ ಇಳಿದುಬರುತ್ತದೆ. ದೇವರ ವಾಕ್ಯವನ್ನು ಕಥಾರೂಪದಲ್ಲಿ ಕಲಿಯುವುದರಿಂದ ನಮ್ಮ ಹಳ್ಳಿಗಳಲ್ಲಿ ವಾಸವಾಗಿರುವ ಜನರಿಗೆ ಚನ್ನಾಗಿ ಅರ್ಥಮಾಡಿಕೋಳ್ಳಲು ಸಹಾಯವಾಗುತ್ತದೆ.

ಕಥೆ ಮಾತ್ರದ (ಎಸ್ ಟಿ ಎಸ್) ತರಬೇತಿಯಿಂದ ವಿದ್ಯಾವಂತರ ಹಾಗು ಅವಿದ್ಯಾವಂತರ ಮದ್ಯೆ ಸಮಾನಂತರ ಬೆಳೆಯುತ್ತದೆ ಮತ್ತು ದೇವರ ವಾಕ್ಯವನ್ನು ಚನ್ನಾಗಿ ಅರ್ಥಮಾಡಿಕೋಂಡು ತಮ್ಮ ಹೃದಯದಲ್ಲಿ ಬದ್ರಪಡಿಸಿಕೋಳ್ಳುತ್ತಾರೆ. ಮೌಖಿಕವಾಗಿ ಕಥೆಯನ್ನು ಒಬ್ಬರಿಂದ ಒಬ್ಬರಿಗೆ ತಿಳಿಸಲು ಸಹಾಯವಾಗುತ್ತದೆ. ಕಥೆ ಹೇಳುವವರು ಕೇಳುವ ಪ್ರಶ್ನೆಗಳಿಗೆ ಕೇಳುವವರು ತಾವಾಗಿಯೆ ಉತ್ತರ ಕಂಡುಕೋಳ್ಳುತ್ತಾರೆ ಹಾಗು ಸತ್ಯವೇದದ ಸತ್ಯಾಂಶಗಳನ್ನು ಅರ್ಥಮಾಡಿಕೋಳ್ಳುತ್ತಾರೆ.

ಕಥೆ ಮಾತ್ರದಿಂದ ಆತ್ಮೀಕ ನಿಧಿಗಳನ್ನು ಕಂಡುಕೋಂಡು ತಮ್ಮ ವಯಕ್ತಿಕ ಜೀವಿತಕ್ಕೆ ಅನ್ವಯಿಸಿಕೋಳ್ಳುವುದರಿಂದ ತಮ್ಮನ್ನು ತಾವು ದೇವರಿಗೆ ಸಮರ್ಪಿಸಿಕೋಳ್ಳುತ್ತಾರೆ. ಕಥೆ ಮಾತ್ರ (ಎಸ್ ಟಿ ಎಸ್) ತರಭೇತಿಯಿಂದ ವಾಕ್ಯಕೇಳುವವರು ದೇವರ ವಾಕ್ಯವನ್ನು ಚನ್ನಾಗಿ ಅರ್ಥಮಾಡಿಕೋಂಡು ಸತ್ಯವೇದದ ಸತ್ಯಾಂಶಗಳನ್ನು ತಮ್ಮ ಹೃದಯದಲ್ಲಿ ಸದಾಕಾಲ ಜ್ಞಾಪನದಲ್ಲಿಟ್ಟುಕೋಳ್ಳುತ್ತಾರೆ.

ಎಸ್ ಟಿ ಎಸ್ ಮೂಲಕ ಇತರರಿಗೆ ಕಥೆ ಹೇಳುವಾಗ ದೇವರ ವಾಕ್ಯವು ಕಥಾರೂಪವಾಗಿ ಜ್ಞಾಪನದಲ್ಲಿಟ್ಟುಕೋಳ್ಳಲು ಸಹಾಯವಾಗುತ್ತದೆ ಮತ್ತು ಕಥೆಯಲ್ಲಿ (ದೇವರ ವಾಕ್ಯದಲ್ಲಿ) ತುಂಬಾ ಆಳವಾಗಿ ಕಲಿತಿಕೊಳ್ಳಲು ಸಹಾಯವಾಗುತ್ತದೆ. ಎಸ್ ಟಿ ಎಸ್‌ನ್ನು ಕೇವಲ ಆಫ್ರೀಕ ದೇಶದಲ್ಲಿ ಅಲ್ಲದೆ ಇತರ ದೇಶಗಳಿಗೂ ತೆಗೆದುಕೋಡು ಹೋಗಲು ಈ ಪುಸ್ತಕದಲ್ಲಿ ಸಹಾಯವಾಗುವ ಅನೇಕ ಸಲಹೆಗಳನ್ನು ಮುದ್ರಿಸಲಾಗಿದೆ, ಉದಾಹರಣೆಗೆ ಯಾವ ರೀತಿ ಪ್ರಶ್ನೆಗಳನ್ನು ಕೇಳಬೇಕು ಅದರಿಂದ ಯಾವ ರೀತಿ ವಾಕ್ಯದಲ್ಲಿ ಆಳವಾಗಿ ಹೋಗಬಹುದು ಎಂಬುದಾಗಿ ತಿಳಿಸಿದೆ.

ದೇವರ ವಾಕ್ಯವನ್ನು ಅನೇಕ ದೇಶಗಳಲ್ಲಿ ಸಾರಿ ಅನೇಕರನ್ನು ಶಿಷ್ಯರನ್ನಾಗಿ ಮಾಡಲು ಹಾಗು ದೇವರಲ್ಲಿ ಆತ್ಮೀಕವಾಗಿ ಬೆಳೆಯಲು ಎಸ್ ಟಿ ಎಸ್ ಬಹಳ ಸಹಾಯವಾಗಿತ್ತದೆ. ಯಾರು ಬೇಕಾದರು ಎಸ್ ಟಿ ಎಸ್‌ನ್ನು ಕಲಿಯಬಹುದು, ಈ ಅಮೂಲ್ಯವಾದ ತರಭೇತಿಯನ್ನು ಅನೇಕರು ಕಲಿಯುವಂತೆ ನಾನು ಶಿಪಾರಸ್ಸು ಮಾಡುತ್ತೇನೆ.

ಆವೋಸ್ ಎಡಿರೊ೦, ಅಂತರಾಷ್ಟ್ರೀಯ ನಿರ್ದೇಶಕರು ಕಲ್ವರಿ ಮಿನಿಷ್ಟ್ರೀಸ್, (ಸಿ ಎ ಪಿ ಆರ್ ಒ)

ಮುಂದಿನ ಪ್ರಗತಿಯಲ್ಲಿ– ಅಮೇರಿಕ.

40 ವರ್ಷಗಳಿಗಿಂತಲೂ ಅಧಿಕವಾಗಿ ನಾವು ಡೊರೊತಿ ಮತ್ತು ಟಾಮ್ ಮಿಲ್ಲರ್‌ರವರನ್ನು ಅರಿತವರೂ ಮತ್ತು ಅವರೊಂದಿಗೆ ಉತ್ತಮ ಸ್ನೇಹಿತರೂ ಆಗಿರುವೆವು. ಮೊದಲ ಚಲನಚಿತ್ರವಾದ ದೇವರ ಕಥೆಯ ಆರಂಭ ಮತ್ತು ಇದರ ಅತಿವೇಗವಾದ ಬೆಳವಣಿಗೆ ಹಾಗೂ ನಂತರ ತರಬೇತಿ, *ಕಥೆ* ಮಾತ್ರ ಇವುಗಳ ಸಾಕ್ಷಿಯಾಗಿರುವುದು ಗಮನಾರ್ಹವಾಗಿದೆ.

ಈ ಸೇವೆಯು ನಶಿಸಿ ಹೋಗುತ್ತಿರುವವರಿಗೆ ಕ್ರಿಸ್ತನನ್ನು ಪ್ರಕಟಿಸುವುದಕ್ಕೆ, ಶಿಷ್ಯರನಾಗಿ ಮಾಡುವುದಕ್ಕೆ ಮತ್ತು ದೇವರಿಂದ ಶಿಷ್ಯರಾಗಿ ಮಾರ್ಪಡುವಂತೆ ಕ್ರೈಸ್ತರನ್ನು ಬದಲಾಯಿಸುತ್ತಿರುವ ಮಾರ್ಗಗಳನ್ನು ಕಂಡು ನಾವು ಹರ್ಷಿಸುತ್ತೇವೆ.

ಈ ಯೋಜನೆಗಳು (ವಿಧಾನಗಳು) ಲೋಕದೆಲ್ಲೆಡೆ ಇರುವ ಹಳ್ಳಿಗಳಿಗೂ ಮತ್ತು ದೇಶಗಳ ಮೂಲಕ ಹರಡಿ ಹೋಗುತ್ತಾ, ದೇವರ ವಾಕ್ಯದ ಕುರಿತಾಗಿ ಹೊಸ ಪ್ರೇರಣೆಯನ್ನು ಮತ್ತು ಉತ್ತೇಜನವನ್ನು ತರುತ್ತಿರುವುದನ್ನು ಕಂಡು ನಾವು ಪ್ರೋತ್ಸಾಹಗೊಂಡಿದ್ದೇವೆ. ಕಥೆ ಹೇಳುವ ವಿಧಾನವು ಎಲ್ಲರಿಗೂ, ಎಲ್ಲಾ ಸ್ಥಳಗಳಲ್ಲಿಯೂ ಒಪ್ಪುವಂತಹುದಾಗಿದೆ.

ಕಥೆ ಮಾತ್ರದ ಆಧಾರವುಳ್ಳ ಸತ್ಯವೇದ ಅಧ್ಯಯನದ ವಿಧಾನಗಳು ಭಾಗವಹಿಸುವವರಿಂದ ಖುದ್ದಾಗಿ ಒಳದೃಷ್ಟಿಯನ್ನು ಮತ್ತು ಮಾಹಿತಿಯನ್ನು ಸೆಳೆಯುತ್ತಾ, ಇದರ ಫಲಿತಾಂಶವಾಗಿ ವಾಕ್ಯಗಳನ್ನು ರೂಢಿಯಲ್ಲಿರುವುದಕ್ಕಿಂತಲೂ ಹೆಚ್ಚು ಯಥೇಚ್ಛವಾದ ಮತ್ತು ಆಳವಾದ ಫಲಿತಾಂಶವನ್ನು ನೀಡಿದೆ. *ಕಥೆ* ಮಾತ್ರದ ವಿಶಿಷ್ಟ ವಿಧಾನಗಳು ಜನರನ್ನು ತಲುಪುತ್ತವೆ.

ವಾಸ್ತವವಾಗಿ, ಅನೇಕಾನೇಕ ಜನರು ಅವರ ವಯಸ್ಸು, ರಾಷ್ಟ್ರೀಯತೆ, ಧಾರ್ಮಿಕ ಹಿನ್ನೆಲೆ, ವಿದ್ಯಾಭ್ಯಾಸ, ವಿದ್ಯಾಭ್ಯಾಸದ ಮಟ್ಟ ಅಥವಾ ಬೇರೆ ಇನ್ಯಾವುದೇ ವಿಷಯವಾಗಲಿ, ಇವೆಲ್ಲವನ್ನೂ ಮೀರಿ ಸುವಾರ್ತೆಯ ನಿಜವಾದ ಸಂದೇಶವು ಇವರಿಗೆ ತಲುಪುತ್ತಿರುವುದು, *ಕಥೆ* ಮಾತ್ರವು ಸಂಪೂರ್ಣವಾಗಿ ಪ್ರತ್ಯೇಕವಾಗಿರುವಂತಹುದು ಮತ್ತು ಅಸಾಧಾರಣವಾಗಿ ಪರಿಣಾಮಕಾರಿಯಾಗಿರುವಂತಹುದು ಎಂಬುದನ್ನು ತೋರಿಸುತ್ತದೆ.

ಈ ಸೇವೆಯು ವಿಶೇಷವಾಗಿ ನಮ್ಮ ಹೃದಯಗಳನ್ನು ಮುಟ್ಟುತ್ತದೆ ಏಕೆಂದರೆ ಯಾವುದೇ ಮಾರ್ಗಗಳಿಲ್ಲದೆ, ಯಾವುದೇ ಕೌಶಲಗಳಿಲ್ಲದೆ, ಯಾವುದೇ ಪ್ರಭಾವವಿಲ್ಲದೆಯೇ ಇರುವ ಪರಿಧಿಯಲ್ಲಿ ಪದೇಪದೇ ಬಿಡಲ್ಪಡುವವರನ್ನು ಇದು ತಲುಪುತ್ತದೆ. ಯಾರನ್ನೇ ಆಗಲಿ ಮುಟ್ಟುವುದರಲ್ಲಿ ಮತ್ತು ಅವರ ಆತ್ಮವನ್ನು ಮುಟ್ಟುವುದಕ್ಕೆ ಇದರ ಬಲವಾದ ಸಾಮರ್ಥ್ಯದೊಂದಿಗೆ, ಅಕ್ಷರಸ್ಥರಾಗಿರಲಿ ಅಥವಾ ಅನಕ್ಷರಸ್ಥರಾಗಿರಲಿ, ಬಡವ ಅಥವ ಶ್ರೀಮಂತರಾಗಿರಲಿ, ಸೌಭಾಗ್ಯವುಳ್ಳವರಾಗಿರಲಿ ಅಥವಾ ಅದನ್ನು ಹೊಂದದವರಾಗಿರಲಿ, ಲೋಕದೆಲ್ಲೆಡೆ ಇರುವ ನಮ್ಮ ಸೇವೆಯ ವರ್ಷಗಳಲ್ಲಿ ನಾವು ನೋಡಿರುವಂತ ಪರಲೋಕ ರಾಜ್ಯದ ಪ್ರಗತಿಗಾಗಿ ಇದು ಅತ್ಯುತ್ತಮವಾದ ಮತ್ತು ಬಹಳ ಪರಿಣಾಮಕಾರಿಯಾದ ಸಾಧನವಾಗಿದೆ.

ಡಾನ್ ಮತ್ತು ಸಾಂಡ್ರ ಟಿಪ್ಟನ್ – ಫೌಂಡರ್ಸ್ ಅಂಡ್ ಡೈರೆಕ್ಟರ್ಸ್, ಫ್ರೆಂಡ್ ಶಿಪ್ಸ್ ಅನ್‌ಲಿಮಿಟೆಡ್

ದೇವರ ಅತಿಮುಖ್ಯವಾದ ಸತ್ಯಗಳು ಸತ್ಯವೇದದ ಸರಳವಾದ ಕಥೆಗಳಲ್ಲಿ ಅಡಗಿಸಲ್ಪಟ್ಟಿವೆ.”

“ಕ್ರಿಸ್ತನಲ್ಲಿರುವ ಸರಳತೆಯಿಂದ” ನಮ್ಮ ಮನಸ್ಸುಗಳು ಬಿಟ್ಟುಹೋಗಬಹುದೆಂದು ದೇವರ ವಾಕ್ಯವು ಎಚ್ಚರಿಸುತ್ತದೆ”. (2ಕೊರಿಂಥ 11:3).

ಕೃತಜ್ಞತೆಗಳು

ಸತ್ಯವೇದದಲ್ಲಿ ನಮ್ಮ ಸೃಷ್ಟಿಕರ್ತನಾದ ದೇವರು ತನ್ನನ್ನು ತಾನೆ ನಮಗೆ ನಿರೂಪಿಸಿಕೋಂಡಿದ್ದಾನೆ. ಆತನು ನಮಗೆ ದಯಪಾಲಿದ ಆತನ ವಾಕ್ಯಕ್ಕೋಸ್ಕರ ಆತನಿಗೆ ಒಂದನೆಗಳು. ಕರ್ತನು ನಮ್ಮೆಲ್ಲನ್ನೂ ಆತನ ಸೇವೆ ಮಾಡಲು ಆರಿಸಿಕೋಂಡಿದ್ದಾಕ್ಕಾಗಿ ಆತನ ನಾಮಕ್ಕೆ ಮಹಿಮೆಯಾಗಲಿ, ನಾವೆಲ್ಲರೂ ಆತನ ವಾಕ್ಯವನ್ನು ಅನೇಕರಿಗೆ ತಿಳಿಸುವ ಜವಬ್ದಾರಿ ನಮ್ಮ ಮೇಲಿದೆ ಆದುದರಿಂದ ನಾವೆಲ್ಲರೂ ಉತ್ಸಾಹರಾಗಿ ಅನೇಕರಿಗೆ ಸಾರೋಣ.

ಸೃಷ್ಟಿಕರ್ತನಾದ ದೇವರು ದಿ ಗಾಡ್ಸ್ ಸ್ಟೋರಿ ಪ್ರೋಜೆಕ್ಟ್‌ಗೆ ಸಾವಿರಾರು ಸ್ವಸಹಾಯಕ ಸೇವಕರನ್ನು ಒದಗಿಸಿಕೋಟ್ಟಿದ್ದಾನೆ. ಅವರೆಲ್ಲರೂ ಸ್ವಸಹಾಯಕರಾಗಿ ನಮ್ಮ ಜೋತೆಯಲ್ಲಿ ಕರ್ತನ ಸೇವೆ ಮಾಡುತಿದ್ದಾರೆ. ಅಷ್ಟೆ ಅಲ್ಲದೆ ಅನೇಕರು ದೇವರ ಕಥೆಎಂಬ ೮೦ ನಿಮಿಷದ ಸಿನಿಮಾವನ್ನು ನೂರಾರು ಭಾಷೆಗಳಲ್ಲಿ ತರ್ಜುಮೆ ಮಾಡಲು ಸಹಾಯ ಮಾಡಿದ್ದಾರೆ. ಈ ಸಿನಿಮಾವನ್ನು ನೂರಾರು ಭಾಷೆಗಳಲ್ಲಿ ಭಾಷಾಂತರ ಮಾಡಲು ಸಹಾಯ ಮಾಡಿದ ಎಲ್ಲಾ ತರ್ಜುಮೆದಾರರಿಗೂ, ಭಾಷಾಂತರವಾದದ್ದನ್ನು ಕಥಾರೂಪವಾಗಿ ಓದಿದ ಎಲ್ಲಾ ನರೇಟರ್ಸ್ ಎಲ್ಲರಿಗೂ, ಮುದ್ರಿಸಿದ ಎಲ್ಲಾ ರೆಕಾರ್ಡಿಸ್ಟ್‌ರಿಗೂ, ಆರ್ಥಿಕ ಸಹಾಯ ಮಾಡಿದವರೆಲ್ಲರಿಗೂ, ನಮ್ಮ ದೇವರ ಕಥೆಯ ಸುರ್ವಾತೆ ಉಪಕರಣಗಳ್ಳನ್ನು ತಮ್ಮ ಸೇವೆಯಲ್ಲಿ ಉಪಯೋಗಿಸಿದ ಎಲ್ಲಾ ಸೇವಕರಿಗೂ, ಕ್ರಿಸ್ತಯೇಸುವನ್ನು ಪ್ರೀತಿಸುವ ಎಲ್ಲಾ ದೇವಜನರಿಗೂ ಕ್ರಿಸ್ತಯೇಸುವಿನ ಹೆಸರಿನಲ್ಲಿ ಪ್ರೀತಿಯಿಂದ ವಂದಿಸುತೇನೆ.

ಅನೇಕ ರಾಷ್ಟ್ರಗಳ ಪ್ರಾಂತೀಯ ಕಛೇರಿಗಳ್ಳಲ್ಲಿ ಸಹಾಯ ಮಾಡುತ್ತಿರುವ ಎಲ್ಲಾ ಸಹಸೇವಕರಿಗೂ, ಎಸ್ ಟಿ ಎಸ್‌ನ್ನು ಸಂಯೋಜನೆ ಮಾಡಿ ನಡೆಸಿಕೋಡುತ್ತಿರುವವರಿಗೂ ಹಾಗು ಎಸ್ ಟಿ ಎಸ್‌ನ್ನು ತಮ್ಮ ಸೇವೆಯಲ್ಲಿ ಉಪಯೋಗಿಸುವವರೆಲ್ಲರಿಗೂ ವಂದಿಸುತೇನೆ ಮತ್ತು ದೇವರ ನಾಮಕ್ಕೆ ಸ್ತೋತ್ರಮಾಡುತ್ತೇನೆ. ಈ ಪುಸ್ತಕದಲ್ಲಿ ತಮ್ಮ ಸಾಕ್ಷೀಗಳ್ಳನ್ನು ಮುದ್ರೀಸಲು ಕಳುಹಿಸಿದ ಎಲ್ಲರಿಗೂ, ಎಸ್ ಟಿ ಎಸ್‌ನ ಎಲ್ಲಾ ಅದ್ಯಾಪಕರಿಗೂ ಮತ್ತು ಪ್ರಪಂಚದ ಎಲ್ಲಾ ಆತ್ಮೀಕ ವೀರರಿಗೂ, ದೇವರ ಕಥೆಯನ್ನು ದೇವಜನರಿಗೂ ಹಾಗು ಅನ್ಯಜನರಿಗೂ ತಿಳಿಸುತ್ತಿರುವ ಎಲ್ಲಾ ದೇವರ ಸೇವಕರಿಗೂ ನನ್ನ ಅನಂಥ ವಂದನೆಗಳು.

೧೯೯೪ ರಲ್ಲಿ ನಾಂ ಮೆಗ್ರಿ ಎಂಬ ಕಲಾಕಾರರು ಸತ್ಯವೇದದ ಆದಿಕಾಂಡದಿದ ಪ್ರಕಟಣೆಯವರಿಗೆ ೧೦ ಚಿತ್ರಪಟಗಳನ್ನು ಬರೆದ್ದಿದ್ದರು. ಈ ಚಿತ್ರಪಟಗಳ ಮೂಲಕ ತನ್ನ ತಾಯಿ ಕ್ರಿಸ್ತನ ಮೇಲೆ ನಂಬಿಕೆ ಬರಲೆಂದು ಆಸೆಪಟ್ಟು ಈಚಿತ್ರಪಟಗಳನ್ನು ಸುಂದರವಾಗಿ ಚಿತ್ರಿಸಿ ತನ್ನಗೆ ಕ್ರಿಸ್ತನ ಮೇಲೆ ಮತ್ತು ಕಲೆಯ ಮೇಲ್ಲಿದ್ದ ಪ್ರೀತಿಯನ್ನು ತೋರ್ಪಡಿಸಿಕೋಂಡನು. ೨೦೧೨ ರಲ್ಲಿ ನಾಂ ಮೆಗ್ರಯವರು ಕರ್ತನಲ್ಲಿ ನಿರ್ಧಿಸಿದರು. ತಾಯಿಯಿದ್ದ ಶಾಶ್ವತ ಮನೆಗೆ ತಾನು ಸೇರಿಕೋಂಡನು. ಆತನು ಬರೆದ ಈಚಿತ್ರ ಪಟಗಳು ಕೋನೆಗೆ ದೇವರ ಕಥೆ ಸಿನಿಮವಾಯಿತು. ಈ ಸಿನಿಮಾದ ಪ್ರೇರೇಪಣೆಯಿಂದ ಮುಂದೆ ಕಥೆ ಮಾತ್ರವೆ (ಎಸ್ ಟಿ ಎಸ್) ಎಂಬ ತರಬೇತಿಯನ್ನು ಪ್ರಾರಂಭಮಾಡಲು ಸಹಾಯವಾಯಿತು. ನಾಂ ರವರಿಗೆ ದೇವರ ಮೇಲೆ ಇದ್ದ ಪ್ರೀತಿ ಮತ್ತು ನಂಬಿಕೆಯ ಮೂಲಕ ಅವರ ತಾಯಿಯು ಕೊನೆಗೆ ದೇವರನ್ನು ಕಂಡುಕೋಂಡರು.
ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆಲ್ಲರಿಗೂ ವಂದಿಸುತ್ತೇವೆ ಆಗು ಸದಾ ಜೀವಿಸುವವನಾಗಿರುವ ಯೇಸುಕ್ರಿಸ್ತನಿಗೆ ಸ್ತೋತ್ರ ಹೇಳುತ್ತೇವೆ.

ಟೋಂ ಮತ್ತು ಢೋರತಿ ಎ ಮಿಲ್ಲರ್
ದಿ ಗಾಡ್ಸ್ ಸ್ಟೋರಿ ಪ್ರೋಜೆಕ್ಟ್.

ಅಧ್ಯಾಯ 1 : ಮೌಖಿಕವಾಗಿ ತರಬೇತಿ ಹೊಂದುವ ಅವಶ್ಯಕತೆ (ಅಗತ್ಯಗಳು) :

ಪಶ್ಚೀಮರಾಷ್ಟ್ರಗಳಲ್ಲಿನ ಜಾತ್ಯಾತೀತ ಹಾಗು ಕ್ರೈಸ್ತ ಪರಿಸರದಲ್ಲಿ ದೇವರ ವಾಕ್ಯವನ್ನು ಯಾವರೀತಿಯಲ್ಲಿ ಎಲ್ಲರೂ ಸುಲುಭವಾಗಿ ಅರ್ಥಮಾಡಿಕೋಂಡು ಮತ್ತು ಜನರನ್ನು ಆತ್ಮೀಕವಾಗಿ ಬಲಗೋಳ್ಳುವಂತ್ತ ತರಬೇತಿಯನ್ನು ಪರಿಚಯಿಸಲು ಸತ್ಯವೇದದ ಒಬ್ಬ ಉಪಧ್ಯಾಯಳಾದ ನಾನು ತುಂಬಾ ಸಂತೋಷಪಡುತ್ತೇನೆ.

ಸತ್ಯವೇದದ ಕಥೆಗಳನ್ನು ಕಲಾನುಸಾರವಾಗಿ (ಕ್ರಮಬದ್ಧವಾಗಿ) ಚರ್ಚಿಸುವುದರಿಂದ ಕಥೆಗಳಲ್ಲಿನ ಸತ್ಯಾಂಶಗಳನ್ನು ಅರ್ಥಮಾಡಿಕೋಳ್ಳಲು ಸಹಾಯವಾಗುತ್ತದೆ. ಪ್ರಶ್ನೆಗಳನ್ನು ಕೇಳುತ್ತಾ ಆತ್ಮೀಕ ನಿಧಿಗಳನ್ನು ಕಂಡುಕೊಂಡು ಸತ್ಯವೇದದ ಸತ್ಯಾಂಶಗಳನ್ನು ತಮ್ಮ ವಯಕ್ತಿಕ ಜೀವಿತಕ್ಕೆ ಅನ್ವಹಿಸಿಕೋಳ್ಳುವುದು.

ಆದಿಯಿಂದ ನಿತ್ಯತ್ವದವರಿಗೆಯ ದೇವರ ಕಥೆ ಸಿನಿಮಾದ ಮುಖಾಂತರ ನನಗೆ ಪುಸ್ತಕಗಳನ್ನು ಬರೆದು ಕವಿಯಾಗಿ ದೇವರ ಸೇವೆ ಮಾಡುವಂತ ಬಾಗಿಲು ತೆರೆದರು. ಈ ೮೦ ನಿಮಿಷದ ಸಿನಿಮಾದಲ್ಲಿ ಸತ್ಯವೇದದಲ್ಲಿ ಆದಿಯಿಂದ ಕೋನೆಯವರಿಗೆ (ಆಧಿಕಾಂಡದಿಂದ ಪ್ರಕಟಣೆಯವರಿಗೆ) ಕ್ರಮಬದ್ಧವಾಗಿ (ಕಲಾನುಸಾರವಾಗಿ) ವೀಕ್ಷಕರು ನೋಡುವಂತೆ ಮಾಡುತ್ತದೆ. ದೇವರ ಕಥೆ ಸಿನಿಮಾದಿಂದ ಅನೇಕರು ಕಥೆ ಹೇಳುವ ವಿಧಾನ ಮತ್ತು ದೇವರ ಸಂಪೂರ್ಣ ಚಿತ್ರಣವನ್ನು ತಿಳಿದುಕೊಂಡಿದ್ದಾರೆ. ಈಗ ಈಸಿನಿಮಾ ಅಂಥರಾಷ್ಟ್ರೀಯ ನೂರಾರು ಭಾಷೆಗಳಲ್ಲಿ ನಿರ್ಮಾಣವಾಗಿ ಸುವಾರ್ತೆ ಸಾರುವುದಕ್ಕೂ ಮತ್ತು ಶಿಷ್ಯತ್ವದಲ್ಲಿ ಬೆಳೆಯುವುದಕ್ಕೂ ಬಹಳ ಸಹಕಾರಿಯಾಗಿದೆ.

ಕಾಲಕ್ರಮೇಣ ಯಾರ್ಯಾರು ಕಥಾರೂಮಕ್ಕೆ ತಮ್ಮ ಸೇವೆಯಲ್ಲಿ ಪ್ರಮುಖ್ಯ ಕೊಡುತ್ತಾರೋ ಅವರ ಜೋತೆಗೆ ನಾವು ಕೂಡ ಕೈ ಜೋಡಿಸಿದೆವು. ಅನೇಕ ರಾಷ್ಟ್ರಗಳಲ್ಲಿ ಓದಲು ಬರೆಯಲು ತಿಳಿದವರು ದೇವರ ವಾಕ್ಯವನ್ನು ಕಲಿಯಲು ಬಹಳ ಕಷ್ಟ ಪಡುತ್ತಿದ್ದರು, ಇದನ್ನು ಅರಿತ ಕೆಲವು ಸಂಸ್ಥೆಗಳು ನಮ್ಮ ಜೋತೆಗೆ ಕೈಜೋಡಿಸಿ ದೇವರ ವಾಕ್ಯವನ್ನು ಸುಲುಭವಾಗಿ ಕಲಿತು ಅರ್ಥಮಾಡಿಕೋಳ್ಳುವ ಸರಳವಾದ ವಿಧಾನವನ್ನು ಕಲಿಸಿಕೊಳುತ್ತಾ ಬಂದಿರುತ್ತೇವೆ. ಎಲ್ಲಾ ನಾಯಕರಿಂದ ನಾವುಗಳು ಸಹ ಅವ ಜೋತೆಗೂಡಿ ಕಲಿತುಕೋಂಡೆವು. ಎಸ್ ಟಿ ಎಸ್ ಮೂಲಕ ಆತ್ಮೀಕ ನಿಧಿಗಳನ್ನು ಗುಂಪಾಗಿ ಕಲಿತು ಚರ್ಚಿಸುವ ಮೂಲಕ ಕಲಿತು ಇತರರಿಗೂ ಬೋಧಿಸಲು ಪ್ರಾರಂಭಮಾಡಿದೆವು. ಅದು ಕಡೆಗೆ ಎಸ್ ಟಿ ಎಸ್ (ಕಥೆ ಮಾತ್ರ) ಆಗಿ ಪರಿವರ್ತನೆಯಾಯಿತು.

ಎಸ್ ಟಿ ಎಸ್ ಮೂಲಕ ಕಥೆಯಲ್ಲಿನ ಎಲ್ಲಾ ಆತ್ಮೀಕ ನಿಧಿಗಳನ್ನು ಕಲಿತು ದೇವರ ವಾಕ್ಯದಲ್ಲಿ ಆಳವಾಗಿ ಅದ್ಯಾಯನ ಮಾಡಲು ಸಹಾಯವಾಗುತ್ತದೆ. ಚರ್ಚಿಸಿ ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮಷ್ಟಕ್ಕೇ ತಾವೆ ಆತ್ಮೀಕವಾಗಿ ಬೆಳೆದು ಆ ಕಥೆಯನ್ನು ತಮ್ಮ ಜೀವಿತದಲ್ಲಿ ಎಂದಿಗೂ ಮರೆಯುವುದಿಲ್ಲ.

“ಪಟ್ಟಣಕ್ಕೆ ತನ್ನ ಎತ್ತಿನ ಗಾಡಿಯನ್ನು ನಡೆಸುಕೋಡು ಹೋದವನಿಗೆ
ಮತ್ತೆ ತನ್ನ ಮನೆಗೆ ಹಿಂತಿರುಗಿ ಬರಲು ಗೋತ್ತಿರುತ್ತದೆ”.

ಸೇವೆ ಮಾಡುವವರು ತಮ್ಮ ಜೀವಿತದಲ್ಲಿ ಪಲಿತಾಂಶಗಳನ್ನು ನೋಡುವುದಲ್ಲದೆ ತಾವು ಶಕ್ತಿಹೋಂದಿಕೋಂಡು ಇತರರಿಗೂ ಬೋಧಿಸಲು ಶಕ್ತಿಯುಳ್ಳವರಾಗಿರುತ್ತಾರೆ.

ದೇವರ ವಾಕ್ಯಗಳನ್ನು ಬೋಧಿಸುವವರಿಗೆ ದೇವರು ತಾನೆ ಏನು ತಿಳಿಸಬೇಕೆಂದು ಎಸ್ ಟಿ ಎಸ್ ಮೂಲಕ ಸಂಪೂರ್ಣವಾಗಿ ತಿಳಿಸುತ್ತಾನೆ. ಕಥೆಯೆಂದರೆ ಸತ್ಯವೇದದ ಅನೇಕ ಅಧ್ಯಾಯಗಳ ಅದ್ಯಾಯನವಾಗಿರುತ್ತದೆ. ಕಥೆಗಳು ನಮ್ಮ ಹೃದಯಕ್ಕೆ ಸ್ಪಂದಿಸುವುದಲ್ಲದೆ, ಕಥೆಯಲ್ಲಿ ಏನು ಬಿಡದೆ ಹಾಗು ಸೇರಿಸದೆ ತಪ್ಪಿಲ್ಲದೇ ಕಥೆಯ ಸಂಪೂರ್ಣವಾಗಿ ಚರ್ಚೆಯ ಮೂಲಕ ಇತರರಿಗೆ ಯಾವ ರೀತಿ ಕಲಿಸಬಹುದೆಂಬುದ್ದಾಗಿ ಈ ಪುಸ್ತಕದಲ್ಲಿ ತಿಳಿಸಲಾಗಿದೆ. ಆದರೂ ಎಸ್ ಟಿ ಎಸ್ ತರಭೇತಿಯಲ್ಲಿ ಅನೇಕ ಉಪಯುಕ್ತವಾದ ಸಲಹೆಗಳು, ಭೋದನೆಗಳು ಹಾಗು ಕಲಿಸುವ ವಿಧಾನವನ್ನು ಕಲಿಸಿಕೋಡಲಾಗುತ್ತದೆ.

ದೇವರ ವಾಕ್ಯವನ್ನು ಮೌಖಿಕವಾಗಿ ಕಲಿಯಲು ಯಾರು ಇಷ್ಟಪಡುತಾರೆ.

ಒಬ್ಬ ದೇವರ ಸೇವಕನು ಅಮೇರಿಕ ದೇಶದಲ್ಲಿ ನಡೆದ ಎಸ್ ಟಿ ಎಸ್ ತರಬೇತಿಗೆ ಬಂದು ಹೇಳಿದ್ದು ಹೀಗೆ_____

ನಾನು ಚಾರ್ಲ್ಸ್‌ಸ್ಟೋನ್ ದಕ್ಷಿಣ ವಿಶ್ವವಿಧ್ಯಾನಿಲಯದಲ್ಲಿ ೪ ವರ್ಷ ಸತ್ಯವೇದ ಅದ್ಯಾಯನ ಮಾಡಿದೆ ಹಾಗು ಗಾರ್ಡನ್ ಕಾನ್ವೆಲ್ ಸತ್ಯವೇದ ಸೆಮಿನರಿಯಲ್ಲಿ ನನ್ನ ಮಾಸ್ಟರ್ ಡಿಗ್ರಿಯನ್ನು ಉನ್ನತ ಮಟ್ಟದಲ್ಲಿ ಮುಗಿಸಿ ಸೇವೆಗೆ ಬಂದೆ. ಒಂದು ವರ್ಷದ ಸಭಾ ಸೇವೆಯ ಅನುಭವದಲ್ಲಿ ಹೇಳಬೇಕೆಂದರೆ ಒಂದು ದೊಡ್ಡ ಸವಸ್ಯೆಯೇ ಇದೆ ಎಂದು ಅಂದುಕೋಂಡೆ ಅದಕ್ಕೆ ಕಾರಣವು ಇತ್ತು, ನಾನು ಪುಲ್ಪೀಟಲ್ಲಿ ಭೋಧಿಸುವ ವಿಚಾರಗಳಿಗೆಲ್ಲಾ ಎಲ್ಲರೂ ತಲೆದೂಗುತ್ತಿದ್ದರು ಹಾಗು ಕೂಟ ಮುಗಿದ ಮೇಲೆ ನನ್ನನು ಕುರಿತು ಒಳ್ಳೇ ಭೋದನೆ ಮಾಡಿದಿರಿ ಎಂದು ನನ್ನನು ಸಂತೋಷಪಡಿಸಲು ಪ್ರಯತ್ನಪಡುತಿದ್ದರು.

ಕೆಲವು ತಿಂಗಳುಗಳು ಕಳೆದ ಮೇಲೆ ಭಾನುವಾರ ಸತ್ಯವೇದ ಶಾಲೆಗೆ ಅನೇಕ ದೇವ ಜನರು ಬರಲು ಪ್ರಾರಂಬಿಸಿದರು. ಅವರು ದೇವರನ್ನು ಕಂಡುಕೊಂಡಿದ್ದರು ಆದರೆ ದೇವರ ವಾಖ್ಯವನ್ನು ಚನ್ನಾಗಿ ಕಲಿಯಬೇಕಿತ್ತು. ನಮ್ಮ ಸಭೆಯಿಂದಲೇ ಪ್ರಕಟಕೊಂಡ ಪಠ್ಯಪುಸ್ತಕಗಳನ್ನು ಅವರಿಗೆ ಒದಗಿಸಿದೆವು. ಪ್ರತಿದಿನ ಅವರಿಗೆ ಪುಸ್ತಕದಲ್ಲಿ ಕೆಲವು ಅಧ್ಯಾಯಗಳನ್ನು ಓದುವಂತೆ ಮನೆಗೆಲಸ ಕೋಟ್ಟು ನೀವು ಓದಿಕೊಂಡು ಬಂದರೆ ನಾವೆಲ್ಲಾರು ಮುಂದಿನ ತರಗತಿಯಲ್ಲಿ ಚರ್ಚಿಸಬಹುದ್ದೆಂದು ತಿಳಿಸುತ್ತಿದ್ದೆ.

ವಾರಕಳೆದಂತೆಲ್ಲಾ ನೀವು ಓದ್ದುತ್ತೀರುವ ಅಧ್ಯಾಯಗಳಲ್ಲಿ ಏನು ಕಲಿಯುತ್ತೀದ್ದೀರಿ ಎಂದು ಕೇಳುತ್ತಿದೆ ಹಾಗು ಅವುಗಳಲ್ಲಿ ನಿಮಗೇನಾದರು ಪ್ರಶ್ನೆಗಳಿವೆಯೋ ಅಥವ ಹೋಸದಾಗಿ ಏನಾದರು ಕಲಿತುಕೋಂಡಿರೋ ಎಂದು ಕೇಳುತ್ತಿದೆ ಆದರೆ ಅವರು ಮಾತನಾಡದೆ ಮೌನವಾಗಿರುತ್ತಿದ್ದರು.

ಅವರ್ಯಾರು ಪುಸ್ತಕಗಳನ್ನು ಓದುತ್ತಿರಲಿಲ್ಲಿವೆಂದು ಕೋನೆಗೆ ನನಗೆ ಅರ್ಥವಾಯಿತು. ಒಂದು ದಿನ ತರಗತಿಯಲ್ಲಿ ಯಾರಾದರು ಈ ಅಧ್ಯಾಯನ ಭಾಗವನ್ನು ಓದುವಂತೆ ತಿಳಿಸಿದೆ ಆದರೆ ಯಾರು ಓದಲು ಮುಂದೆಬರಲಿಲ್ಲ. ಸುಮಾರು ಸಮಯ ಅವರಿಗೆ ಪ್ರೋತ್ಸಾಹ ಮಾಡಿದ ಮೇಲೆ ಒಬ್ಬರು ಓದಲು ಪ್ರಾರಂಭ ಮಾಡಿದರು ಆದರೆ ಅವರಿಗೆ ಓದಲು ಸರಿಯಾಗಿ ಬರುತ್ತಿರಲಿಲ್ಲ ಆದುದರಿಂದ ಅವರು ಅನೇಕ ಪಧಗಳನ್ನು ತಪ್ಪಾಗಿ ಓದುತ್ತಿದ್ದರು. ಆಗ ನನಗೆ ಅರ್ಥವಾಯಿತು ಇವರ್ಯಾರು ಈ ಅಧ್ಯಾಯಗಳನ್ನು ಓದುತ್ತಿರಲಿಲ್ಲವೆಂದು, ಇವರಿಗೆ ಓದಲು ಬರೆಯಲು ಸರಿಯಾಗಿ ಬರುತ್ತಿರಲಲ್ಲ ಆದುದರಿಂದ ಅವರು ಓದುತ್ತಿರಲಿಲ್ಲ.

ನಾನು ಸ್ವಲ್ಪ ತನಿಖೆ ಮಾಡಿದಾಗ ನನಗೆ ತೋತ್ತಾಗಿದ್ದೇನೆಂದರೆ ನಮ್ಮ ಸಭೆಯ ಸುತ್ತ ಮುತ್ತ ವಾಸವಾಗಿರುವ ಅನೇಕರು ಪ್ರೌಡಶಾಲೆಯ ಮೆಟ್ಟಲೇರಿರಲಿಲ್ಲ. ಯವನಸ್ತ ಸೇವಕನಾದ ನನಗೆ ಒಂದು ಪ್ರಶ್ನೆ ಕಾಡತೋಡಗಿತು ಆದೇನಂದರೆ ಓದಿಕಲಿಯಲು ಇಷ್ಟಪಡದ ಈ ಜನರಿಗೆ ಯಾವರೀತಿ ನಾನು ಸುರ್ವಾತೆ ಸಾರಿ ಕ್ರಿಸ್ತನ ಶಿಷ್ಯತ್ವದಲ್ಲಿ ನಡೆಸಬೇಕು ಎಂದು.

ಸುಮಾರು ೭ ವರ್ಷಗ ಸುದೀರ್ಘವಾಗಿ ಸತ್ಯವೇದ ಅಭ್ಯಾಸ ಮಾಡಿದ ನನಗೆ ಇವರನ್ನು ಶಿಷ್ಯತ್ವದಲ್ಲಿ ನಡೆಸಲು ನನಗೆ ತಿಳಿದಿರಲಿಲ್ಲವೆಂಬುದರೆ ದುಃಖಿಕರವಾದ ವಿಚಾರ ಕಾರಣ ಯಾವ ಶಾಲೆಯು ನನಗೆ ಅದನ್ನು ಕಲಿಸಿರಲಿಲ್ಲ ಹಾಗು ಮೌಖಿಕವಾಗಿ ಕಲಿಸುವ ವಿಧಾನವನ್ನು ನಾನು ಎಂದೂ ಕೇಳಿರಲಿಲ್ಲ ಮತ್ತು ಇದಕ್ಕೆ ಸಂಭಂದ ಪಟ್ಟ ಸಲಕರಣೆಗಳು ನನಗೆ ಗೋತ್ತಿರಲಿಲ್ಲ ಆದಕಾರಣ ಇವುಗಳನ್ನು ಕಲಿಯಲು ಎಸ್ ಟಿ ಎಸ್ ತರಬೇತಿಗೆ ಬಂದೆ.

ಅಂದು ಎಸ್ ಟಿ ಎಸ್ ತರಭೇತಿಗೆ ಬಂದ ಆ ಸಭಾಪಾಲಕರಿಗೂ ಹಾಗು ಇತರರು ಹೇಳ್ಕೀದ್ದೇನೆಂದರೆ:– ದೇವರ ವಾಕ್ಯದಲ್ಲಿರುವ ಆತ್ಮೀಕ ನಿಧಿಗಳನ್ನು ಅರ್ಥಮಾಡಿಕೋಂಡು ಅವುಗಳನ್ನು ತಾವಾಗಿಯೆ ಕಂಡುಕೋಂಡು ನಮ್ಮ ವಯಕ್ತಿಕ ಜೀವಿತಕ್ಕೆ ಅನ್ವಯಿಸಿಕೋಂಡು ಇತರರಿಗೆ ತಿಳಿಸುವುದಿ ಮಹಾಭಾಗ್ಯವೇ ಸರಿ ಅವುಗಳನ್ನು ನಾವು ಎಸ್ ಟಿ ಎಸ್ ತರಭೇತಿಯಲ್ಲಿ ಕಲಿತುಕೋಂಡೆವು.

ದೇವರ ವಾಕ್ಯವನ್ನು ಮೌಖಿಕವಾಗಿ ಉಪದೇಶಿಸುವ ಪದ್ಧತಿಯು ಈಗ ಎಷ್ಟು ಅವಶ್ಯಕತೆ ಇದೆ.

ದೇವರ ವಾಕ್ಯವನ್ನು ಕಥೆಗಳ ಮೂಲಕ ಸರಿವಿಸ್ತಾವಾಗಿ ಕಲಿಸುವುದರಿಂದ ಅದರ ಮಾನ್ಯತೆ ಬೆಳೆಯುತ್ತದೆ ಹಾಗು ಮೌಖಿಕವಾಗಿ ಕಲಿಯುವವರಿಗೆ ಬಹಳ ಸುಲಭವಾಗುತ್ತದೆ.

ಅನೇಕ ರಾಷ್ರಗಳಲ್ಲಿ ಜನರು ಓದಲು ಬರೆಯಲು ತಿಳಿಯದಿದ್ದರು ತಮ್ಮ ರಾಷ್ರದ ಘನತೆ ಕಾಪಾಡಿಕೋಳ್ಳುವುದಗೋಸ್ಕರ ಹಾಗು ಅಭಿವೃಧ್ಧ ಹೋಂದಿದ ರಾಷ್ರಗಳ್ಕಿಂದ ಸಹಾಯ ಪಡೆಯಲು ಸಹಿಮಾಡುವವರೆಲ್ಲನ್ನೂ ವಿಧ್ಯಾವಂತರೆಂಬುದಾಗಿ ನಮೂಧಿಸುತ್ತಾರೆ. ದೇವರ ವಾಕ್ಯವನ್ನು ಇತರರಿಗೆ ತಿಳಿಸಲು ಇಚ್ಚೆ ಪಡುವ ಅನೇಕರು, ದೇವರ ವಾಕ್ಯವನ್ನು ತಿಳಿದುಕೋಳ್ಳಲು ಅವರು ಓದಲು ಬರೆಯಲು ತಿಳಿದಿದ್ದಾರೆಯೇ ಎಂದು ಮೊದಲು ತಿಳಿದುಕೋಳ್ಳಲು ಎಚ್ಚಿಸುತ್ತಾರೆ

ರಾಷ್ಟ್ರೀಯ ಶಿಕ್ಷಣ ಧಾಖಲಾತಿ ಹಾಗು ಇತರೆ ತನಿಕಾ ವಿಧಾನಗಳಿಂದ ತಿಳಿದು ಬಂದ ಸತ್ಯಾಂಶವೇನೆಂದರೆ ಅಮೇರಿಕದಲ್ಲಿ ಸುಮಾರು ೪೮% ಜನರು ಓದಲು ಹಾಗು ಬರೆಯಲು ಬರುವುದಿಲ್ಲ. ಅಥವ ಓದಿ ತಿಳಿದುಕೊಳ್ಳುವ ಶಕ್ತಿಹೊಂದಿರುವುದಿಲ್ಲ ಅಂದರೆ ಒಂದು ಪುಟವನ್ನು ಓದಿ ಅದರಲ್ಲಿರುವ ಸಂಪೂರ್ಣ ಸಾರಾಂಶ ಅರ್ಥಮಾಡಿಕೋಳ್ಳಲು ಕಷ್ಟ ಪಡುತ್ತಾರೆ. ಮತ್ತು ೪೪% ಜನರು ಕೇಳುವುದರ ಮೂಲಕ ಹಾಗು ಚರ್ಚಿಸುವುದರ ಮೂಲಕ ಕಲಿಯಲು ಇಷ್ಟಪಡುತ್ತಾರೆ. ಈ ಸತ್ಯಾಂಶವು ಇತರ ಅಭಿವೃಧ್ಧಿ ಹೋಂದಿದ ರಾಷ್ಟಗಳಲ್ಲಿ ನಾವು ನೋಡುತ್ತೇವೆ. ಅಂದರೆ ಅಭಿವೃಧ್ಧಿ ಹೋಂದಿದ ರಾಷ್ಟ್ರಗಳಲ್ಲಿ ಸುಮಾರು ೮೭% ಓದುವ ಅಥವ ಬರೆಯುವ ಮೂಲಕ ಕಲಿಯುವಿದಕ್ಕಿಂತ ಮೌಖಿಕವಾಗಿ ಕಲಿಯಲು ಇಷ್ಟಪಡುತ್ತಾರೆ.

ಅಭಿವೃದ್ಧಿ ಹೋಂದಿದ ರಾಷ್ಟಗಳಲ್ಲಿ ಶಾಲೆಗೆ ಹೋಗಿ ಕಲಿಯುವವರ ಸಂಖ್ಯೆ ಬಹಳ ಕಡಿಮೆ. ಅಂದರೆ ಬಹಳಷ್ಟು ಮಂದಿ ಮೌಖಿಕವಾಗಿ ಕಲಿಯುವವರಾಗಿದ್ದಾರೆ. ಅಭಿವೃದ್ಧಿ ಹೋಂದಿದ ರಾಷ್ಟಗಳ ಗತಿ ಈಗದರೆ ಈಗತಾನೆ ಅಭಿವೃದ್ಧಿ ಹೋಂದುತ್ತಿರುವ ರಾಷ್ಟಗಳ ಗತಿಯೇನು.

ಮೌಖಿಕವಾಗಿ ಕಲಿಯುವವರು ಟಿಪ್ಪಣಿ ಬರೆಯಲು ಸಾಧ್ಯವಾಗುವುದಿಲ್ಲ. ಆದುದರಿಂದ ಅವರು ಕಥರಾಪವಾಗಿ ಜ್ಞಾಪನದಲ್ಲಿಟ್ಟುಕೋಳ್ಳಲು ಇಷ್ಟಪಡುತ್ತಾರೆ. ಈಗಿನ ಶಿಕ್ಷಣ ಅಥವ ಕ್ರಸ್ತ ಭೋದನೆಯು ಟಿಪ್ಪಣಿಯ ಅಥವ ಟಾಫಿಕಲ್ ಮಾದರಿಯಲ್ಲಿರುತ್ತದೆ. ಮೌಖಿಕವಾಗಿ ಕಲಿಯುವವರಿಗೆ ಈ ಪದ್ದತಿ ಯಾವ ರೀತಿ ಸಹಾಯವಾಗುತ್ತದೆಂದು ನಾವು ಯೋಚಿಸಬೇಕು.

ದೇವರು ತನ್ನ ಸತ್ಯವೇದವನ್ನು ಎಲ್ಲಾ ಜನರು ಅರ್ಥಮಾಡುಕೋಳ್ಳುವ ಕಥಾರೂಪದಲ್ಲಿ ಬರೆಸಲ್ಪಟ್ಟಿದ್ದಾರೆ. ದೇವರು ಸತ್ಯವೇದವನ್ನು ಈ ವಿಧವಾಗಿ ಬರೆದಿರುವನು:

10% ವಿವರಣೆ
15% ಕವನ ಮತ್ತು
75% ಕಥಾನಿರೂಪಣೆ (ಕಥಾರೂಪದಲಿ)

ನೀವು ಎಂದಾದರು ಇತರರಿಗೆ ನಡೆದಿರುವ ವಿಚಾರವನ್ನು ತಿಳುಸುವಾಗ ಕೇಳುವವರು ಮಾತಿನ ಮದ್ಯದಲ್ಲಿ ಅಡಚಣೆಮಾಡುವುದುಂಟೋ?, ನೀವು ಅವರಿಗೆ ನಡೆದಿರುವ ಕಥೆ ತಿಳಿಸುತ್ತಿರುತ್ತೀರಿ ಆದರು ಅವರು ಪದೆ ಪದೆ ಅಡಚಣೆ ಮಾಡುತ್ತಿರುವುದರಿಂದ ಅವರಿಗೆ ನೀವು ತಿಳಿಸಬೇಕಾದ ಕಥೆ ಅವರು ಸಂಪೂರ್ಣವಾಗಿ ತಿಳಿದುಕೋಳ್ಳಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಸತ್ಯವೇದಲ್ಲಿರುವ ಪ್ರತಿ ಕಥೆಯನ್ನು ಸಂಪೂರ್ಣವಾಗಿ ತಿಳಿದು ಅದರಲ್ಲಿರುವ ಶಕ್ತಿ ಕೇಳುವವರಿಗೆ ತಿಳಿಯುತ್ತದೆ. ಅದಕೋಸ್ಕರ ದೇವರು ಸತ್ಯವೇದವನ್ನು ೭೫% ಕಥರೂಪದಲ್ಲಿ ಬರೆಸಿದ್ದಾನೆ ಇದರರ್ಥ ಜನರು ಸಂಪೂರ್ಣ ಕಥೆಯನ್ನು ಕಲಿತು ಅದರಲ್ಲಿರುವ ಸತ್ಯಾಂಶಗಳನ್ನು ತಿಳಿದುಕೋಳ್ಳುವ ಉದ್ದೇಶದಿಂದಲ್ಲವೇ?.

ಪ್ರಸ್ತುತವಾಗಿ ಕಲಿಯುತ್ತಿರುವ ಪದ್ದತಿಗಳಲ್ಲಿರುವ ಕೆಲವು ಅಡಚಣೆಗಳ ಪಕ್ಷಿನೋಟ:

ಒಂದು ಸುಂದರವಾದ ಬಹುಮಾನವನ್ನು ಚನ್ನಾಗಿ ಒಂದು ಪೊಟ್ಟಣದಲ್ಲಿ ಸುತ್ತಿ ನಿಮ್ಮ ಸ್ನೇಹಿತನಿಗೆ ಕಳಿಹಿಸಿದರೆಂದು ನೆನಸಿಕೋಳ್ಳಿ ಆದರೆ ಕೆಲವು ದಿನಗಳಾದ ಮೇಲೆ ಆ ಪೊಟ್ಟಣವು ಹೇಗೆ ಕಳಿಯಿಸಿಕೋಟ್ಟರೋ ಅದೇ ರೀತಿಯಲ್ಲಿ ನಿಮಗೆ ಹಿಂತಿರುಗಿ ಬರುತ್ತದೆ. ಆಗ ನೀನು ಏನಿದು ನಾನು ಕಳುಹಿಸಿದ ಬಹುಮಾನವು ನನ್ನ ಸ್ನೇಹಿತನಿಗೆ ಇಷ್ಟವಾಗಲ್ಲಿಲ್ಲಿವೇ ಅಥವ ನಾನು ಚನ್ನಾಗಿ ಸುತ್ತಿಕಳುಹಿಸಿದ ಪೊಟ್ಟಣವನ್ನು ತೆಗೆಯಲು ಸಾಧ್ಯವಾಗಲಿಲ್ಲವೋ ಎಂದು ನೆನೆಸುತ್ತೀರಿ. ನಾವು ದೇವರ ಸತ್ಯಾಂಶಗಳ್ಳನ್ನು ಟಿಪ್ಪಣಿ ಅಥವ ಟಾಪಿಕ್ ರೀತಿಯಲ್ಲಿ ಬೋಧಿಸಿದಾಗ ಮೌಖಿಕವಾಗಿ ಕಲಿಯಲು ಇಷ್ಟಪಡುವ ಜನರು ಅರ್ಥಮಾಡಿಕೋಳ್ಳಲು ಕಷ್ಟ ಪಡುತ್ತಾರೆ ಹಾಗು ಅದರಲ್ಲಿರುವ ಸತ್ಯಾಂಶಗಳನ್ನು ತಿಳಿದುಕೋಳ್ಳಲು ಸಾಧ್ಯವಾಗುವುದಿಲ್ಲ.

ಅನೇಕ ಜನರು ಮೌಖಿಕವಾಗಿ ಕಲಿಯಲು ಇಷ್ಟಪಡುವಂತ ಈಸ್ಥಿತಿಯಲ್ಲಿ ಸತ್ಯವೇದವನ್ನು ಭೋಧಿಸುವವರಾದ ನಾವು ಬಹಳ ಜಾಗುರೂಕರಾಗಿರಬೇಕು. ದೇವರ ವಾಕ್ಯವನ್ನು ಸಂಪೂರ್ಣವಾಗಿ ತಿಲಿಸಬೇಕಾದರೆ ಅದು ಜನರು ಅರ್ಥ ಮಾಡಿಕೋಂಡು ಅವುಗಳನ್ನು ತಮ್ಮ ಜೀವಿತಕ್ಕೆ ಅನ್ವಹಿಸಿಕೋಳ್ಳುವ ಪದ್ದತಿಯಲ್ಲಿ ಕಲಿಸಿಕೋಡಬೇಕು ಆಗ ಅವರನ್ನು ಶಿಷ್ಯತ್ವದಲ್ಲಿ ನಡೆಸಲು ಸಾಧ್ಯವಾಗುತ್ತದೆ. ನಾವು ಟಿಪ್ಪಣಿ ಅಥವ ಟಾಪಿಕ್ ರೀತಿಯಲ್ಲಿ ಬೋಧಿಸಿದಾಗ ಮೌಖಿಕವಾಗಿ

ಕಲಿಯಲು ಇಷ್ಟಪಡುವ ಜನರು ಜ್ಞಾಪನದಲ್ಲಿಟ್ಟುಕೋಳ್ಳಲು ಕಷ್ಟಪಡುತ್ತಾರೆ ಆದರೆ ಅವರಿಗೆ ಕಥಾರೂಪದಲ್ಲಿ ಕಲಿಸಿದಾಗ ಅವರಿಗೆ ಜ್ಞಾಪನದಲ್ಲಿಟ್ಟುಕೋಳ್ಳಲು ಸಹಾಯವಾಗುತ್ತದೆ.

ಕಥೆ ಮಾತ್ರ (ಎಸ್ ಟಿ ಎಸ್) ಪದ್ದತಿಯನ್ನು ಏಕೆ ಉಪಯೋಗಿಸಬೇಕು

ದೇವರು ತಮಗೆ ಕೊಟ್ಟಿರುವ ರೀತಿಯಲ್ಲಿ ಕಥೆಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ, ಸತ್ಯವೇದದ ಮಾಹಿತಿಯ ನಿರೂಪಕರಿಗೆ ಕಥೆ ಮಾತ್ರವು ಪ್ರೋತ್ಸಾಹಿಸುತ್ತದೆ. *ಕಥೆ ಮಾತ್ರ*ಕ್ಕಾಗಿ ಸತ್ಯವೇದದ ಕಥೆಗಳನ್ನು ಬರೆಯುವ ಅಗತ್ಯವಿಲ್ಲ. ಕಥೆಗಳು ಸತ್ಯವೇದದಲ್ಲಿನ ಯಾವುದೇ ಕಥೆಗಳಾಗಿರಬಹುದು. ಕಥೆಗಳನ್ನು ಆಸಕ್ತಿಕರವಾಗಿ ಮತ್ತು ನಿಖರವಾಗಿ ಹೇಗೆ ಹೇಳುವುದು ಮತ್ತು *ಕಥೆ ಮಾತ್ರ*ವನ್ನು ಉಪಯೋಗಿಸಿಕೊಂಡು ಹೇಗೆ ಬೋಧಿಸುವುದು ಎಂಬುದನ್ನೇ ಈ ಕೈಪಿಡಿಯು ಒಳಗೊಂಡಿದೆ. *ಕಥೆ* ಮಾತ್ರದ ಕಾರ್ಯಾಗಾರವು ಈ ಕೌಶಲವನ್ನು ಜನರು ಬೆಳೆಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ.

ಎಸ್ ಟಿ ಎಸ್ ಗೂ, ಟಿಪ್ಪಣಿ ಹಾಗು ಪ್ರಾಶಂಗಿಕ ರೀತಿಯಲ್ಲಿ ಕಲಿಯುವ ಮುಖ್ಯ ವ್ಯೆತ್ಯಾಸವೇನೆಂದರೆ ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕೇವಲ ಒಬ್ಬರು ಮಾತ್ರ ಭೋಧಿಸುತ್ತಿರುತ್ತಾರೆ, ಕೇಳುವವರು ಪ್ರಶ್ನೆ ಕೇಳುವುದು ಕಡಿಮೆ, ಆದರೆ ಕಥಾರೂಪದಲ್ಲಿ ದೇವರ ವಾಕ್ಯವನ್ನು ಕಲಿಯುವುದರಿಂದ ಸತ್ಯವೇದದ ಪ್ರತೀ ಕಥೆಯಲ್ಲಿ ಬೋಧಿಸುವವರಿಗೂ ಹಾಗು ಕಲಿಯುವ ವಿಧ್ಯಾರ್ಥಿಗೂ ಪವಿತ್ರಾತ್ಮನೇ ಕುದ್ದಾಗಿ ಕಲಿಸಿಕೋಡುತ್ತಾನೆ.

ಪ್ರಾಶಂಗಿಕವಾಗಿ ಬೋದಿಸುವವರು ಮೋದಲೇ ಏನು ಕಲಿಸಬೇಕೆಂದು ತೀರ್ಮಾನಿಸುತ್ತಿರುತ್ತಾನೆ. ದೇವರ ವಾಕ್ಯದ ಭಾಗವನ್ನು ಬೋಧಿಸುವವರು ಆಯ್ಕೆಮಾಡಿರುತ್ತಾರೆ. ಬೋದಿಸುವವರೆ ಎಲ್ಲ ಉತ್ತರಗಳನ್ನು ಹೇಳುತ್ತಾರೆ. ಇದೋಂದು ತಪ್ಪು ಬೋದನೆ ಎಂದು ಹೇಳುವುದಿಲ್ಲ ಆದರೆ ಬೋದಿಸಲು ಇದೋಂದೇ ಮಾರ್ಗವಲ್ಲ ಆದರೆ ಈ ರೀತಿ ಬೋದಿಸುವುದರಿಂದ ಕೇಳುವವರ ತಲೆಗೆ ಮಾತ್ರ ಹೋಗುತ್ತದೆ ಆದರೆ ಅವರ ಆತ್ಮ ಬದಲಾವಣೆ ಆಗುವುದಿಲ್ಲ.

ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕಲಿಯುವಾಗ ಕಥೆಯನ್ನು ಭಾಗ ಭಾಗವಾಗಿ ವಿಂಗಡಿಸಿ ಕಲಿಸುವುದರಿಂದ್ದ ಕಲಿಯುವವರು ಸಂಪೂರ್ಣವಾಗಿ ಜ್ಞಾಪನದಲ್ಲಿ ಇಟ್ಟುಕೋಳ್ಳಲು ಸಾದ್ಯವಾಗುವುದಿಲ್ಲ, ಆದರೆ ದೇವರ ಕಥೆಗಳು ಮಾನವನ ಆತ್ಮ, ಪ್ರಾಣ ಮತ್ತು ಶರೀರಕ್ಕೆ ಪವಿತ್ರಾತ್ಮನ ಬಲದಿಂದ ಮಾತನಾಡುತ್ತದೆ. ಉಪಧ್ಯಾಯರು ದೇವರ ವಾಕ್ಯವನ್ನು ವಿಭ್ಭಾಗವಾಗಿ ವಿಂಗಡಿಸಿದಾಗ ಕಥೆಯಲ್ಲಿನ ಸಂಪೂರ್ಣ ಸತ್ಯಾಂಶವನ್ನು ಕಲಿಯಲು ಕಷ್ಟವಾಗುತ್ತದೆ ಅಷ್ಟೇಅಲ್ಲದೆ ಅದು ಕೇವಲ ಶರೀರಕ್ಕೆ ಮಾತ್ರ ತಲುಪುತ್ತದೆ, ಅದು ಮಾನವನ ಆತ್ಮ, ಪ್ರಾಣಕ್ಕೆ ತಲುಪುವುದಿಲ್ಲ.

ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕಲಿಸುವವರು ಸತ್ಯವೇದದ ಅನೇಕ ಬಾಗಗಳಿಂದ ವಾಕ್ಯಗಳನ್ನು ಆರಿಸಿಕೋಳ್ಳುತ್ತಾರೆ ಅದರಿಂದ ಹೇಚ್ಚಾಗಿ ಕಲಿಯದೆ ಕೇವಲ ಸ್ವಲ್ಪ ಬಾಗವನ್ನು ಮಾತ್ರ ಕಲಿಯಲು ಸಾದ್ಯವಾಗುತ್ತದೆ. ಕೇಳುವವರು ಕೇವಲ ಟಿಪ್ಪಣಿ ಬರೆದುಕೋಳ್ಳುತ್ತಾರೆ ಆದರೆ ಅವರಿಗೆ ಎಲ್ಲವೂ ಜ್ಞಾಪನದಲ್ಲಿ ಇಟ್ಟುಕೋಳ್ಳಲು ಸಾದ್ಯಯವಾಗುವುದಿಲ್ಲ ಕಾರಣ ಅದು ಪೂರ್ಣ ಕಥೆಯಾಗಿರುವುದಿಲ್ಲ. ಇದು ಮಾನವನ ಮೂಳೆ ಇಲ್ಲದ ಶರೀರವಿದ್ದಂತೆ. ಮೌಖಿಕವಾಗಿ ಸಬೆಯಲ್ಲಿ ಕಲಿಯುವವರಿಗೆ ಇದ್ದೆಲ್ಲಾ ಜ್ಞಾಪನದಟ್ಟುಕೋಳ್ಳಲು ಸಾದ್ಯವಾಗುವುದ್ದಿಲ್ಲ ಇತರರಿಗೆ ತಿಳಿಸಲು ಸಾದ್ಯವಾಗುವುದಿಲ್ಲ.

ವಿಧ್ಯಾವಂತರು ಅವರು ಬರೆದುಕೋಂಡ ಟಿಪ್ಪಣಿ ನೋಡದಿದ್ದರೆ ಅವರಿಗೂ ಏನು ಜ್ಞಾಪನದಲ್ಲಿರುವುದಿಲ್ಲ ಹಾಗು ಅವರು ಟಿಪ್ಪಣಿ ಇಲ್ಲದೆ ಯಾರಿಗೂ ದೇವರ ವಾಕ್ಯವನ್ನು ತಿಳಿಸಲು ಸಾದ್ಯವಾಗುವುದಿಲ್ಲ. ಸಭೆಯಲ್ಲಿ ಭೋದಿಸುವಾಗ ಭೋದಕರು ಹೇಳುವ ಸಣ್ಣ ಉಪಮಾನ ಅಥವ ಕಥೆಗಳನ್ನು ಹಾಗು ಸಾಕ್ಷಿಗಳನ್ನು ವಿಧ್ಯಾವಂತರು ಹಾಗು ಅವಿಧ್ಯಾವಂರು ಕೂಡ ಜ್ಞಾಪನದಲ್ಲಿಟ್ಟಕೋಳ್ಳುತ್ತಾರೆ.

ಕೇಳುವವರು ಎಲ್ಲವನ್ನೂ ತಮ್ಮ ಜ್ಞಾಪನದಲ್ಲಿ ಇಟ್ಟುಕೋಳ್ಳಲು ಸಾದ್ಯವಾಗುವುದಿಲ್ಲ ಹಾಗು ಸ್ವಹಿಚ್ಛೆಯಿಂದ ಕಲಿಯಲು ಸದ್ಯವಾಗುವುದಿಲ್ಲ ಆದಕಾರಣ ಅವರು ಅವರ ಅಧ್ಯಾಪಕರನ್ನೇ ಯಾವಾಗಲು ಅವಲಂಬಿಸಿರಬೇಕು. ಅವರು ಯವಾಗಲು ಹೇಗೆ ತನ್ನ ತಾಯಿ ಪಕ್ಷಿಯು ಆಹಾರವನ್ನು ಕೂಡಿಟ್ಟುಕೊಂಡು ತಂದು ತನ್ನ ಮರಿಪಕ್ಷಿಯ ಬಾಯಿಗೆ ಪ್ರತಿ ಸಲ ಉಣ್ಣಲು ಕೋಡುತ್ತದೆ, ಅದೇರೀತಿ ಮರಿಪಕ್ಷಿಯೂ ಕೂಡ ಬಾಯತೆರೆದು ತನ್ನ ತಾಯಿ ತರುವ ಆಹಾರಕ್ಕಾಗಿ ಕಾತಿರುತ್ತದೋ ಅದೇ ರೀತಿ ಸಭೆಯ ಸದಸ್ಯರು ದೇವರ ಸೇವಕರು ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕೊಡುವ ಭೋಧನೆಗಾಗಿ ೫೦ ವರ್ಷದ ಪಕ್ಷಿ ಆಹಾರಕ್ಕಾಗಿ ಹೇಗೆ ತನ್ನ ಪಂಜರದಲ್ಲಿ ಕಾಯುತ್ತಿರುತ್ತದೋ ಅದೆ ರೀತಿ ಕಾಯುತ್ತಿರುತ್ತಾರೆ.

ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕೊಡುವ ಭೋಧನೆಯಲ್ಲಿ ಮತೋಂದು ಸಮಸ್ಯವೆಂದರೆ ಭೋಧನೆ ಮಾಡುವ ಬೋದಕರು ಮೋದಲೆ ಯಾವ ವಿಷಯದ ಬಗ್ಗೆ ಭೋದಿಸಬೇಕೆಂದು ತೀರ್ಮಾನಿಸಿರುತ್ತಾರೆ. ಇವರು ಸಿದ್ದಪಡಿಸಿಕೋಳ್ಳಲು ತಮಗೆ ಗೋತ್ತಿರುವ ಸತ್ಯವೇದದ ಅನೇಕ ವಚನಗಳನ್ನು ಉಪಯೋಗಿಸುತ್ತಾರೆ. ಇದರಿಂದ ಆಳವಾಗಿ ಕಲಿಯಲು ಸಾದ್ಯವಾಗುವುದಿಲ್ಲ.

ದೇವ ಜನರು ಅನೇಕ ಪ್ರಾಶಂಗಿಕ ಪ್ರಸಂಗಗಳನ್ನು ಬೋಧಿಸುವ ಕೂಟಗಳಿಗೆ ಹೋಗುತ್ತಾರೆ, ಅಲ್ಲಿ ಅವರಿಗೆ ಕೆಲವು ವಷಯಗಳ ಬಗ್ಗೆ ಭೋದನೆಗಳ ಬಗ್ಗೆ ಭೋದಿಸುತ್ತಾರೆ ಅವುಗಳೀಂದರೆ ಸುರ್ವಾತೆ, ಅನ್ಯಜನರನ್ನು ಸಂದಿಸುವುದು ಹೇಗೆ? ಕುಟುಂಬ, ಹಣಕಾಸು, ಪ್ರಾರ್ಥನೆ, ಸ್ವಸ್ಥತೆ, ದೇವರ ಕ್ರಿಯೆ, ಪ್ರವಾದನೆ ಇತ್ಯಾದಿ. ಇವುಗಳೀಲ್ಲವನ್ನೂ ನಾವು ದೇವರ ವಾಕ್ಯದ ಕಥೆಗಳಲ್ಲಿ ಕಾಣಬಹುದು.

ದೇವರ ವಾಕ್ಯವನ್ನು ಮೌಖಿಕವಾಗಿ ಕಲಿಯುವವರು ಕಥೆಯ ಎಲ್ಲಾ ಭಾಗವನ್ನು ಕಲಿಯುತ್ತಾರೆ ಆದುದರಿಂದ ಕಥೆಯೇ ಅವರಿಗೆ ಪರಿಶುದ್ದಾತ್ಮನ ಸಹಾಯದಿಂದ ಕಥೆಯಲ್ಲಿರುವ ಸತ್ಯಾಂಶವನ್ನು ಕಲಿಯುತ್ತಾರೆ.

ಉಪಧ್ಯಾಯರು ಮೋದಲೇ ಏನು ಭೋದಿಸಬೇಕೆಂದು ತೀರ್ಮಾನಿಸಿ ಸತ್ಯವೇದದ ಅನೇಕ ಭಾಗದ ಅಧ್ಯಾಯಗಳನ್ನು ಆರಿಸಿಕೋಂಡಾಗ ಕೇಳುವವರು ಹೆಚ್ಚಾಗಿ ಕಲಿತುಕೋಳ್ಳಲು ಸಾದ್ಯವಾಗುವುದಿಲ್ಲ ಕಾರಣ ಅವರು ಚರ್ಚಿಸುವ ಅವಕಾಶ ಅವರಿಗಿರುವುದಿಲ್ಲ. ಆದರೆ ಕಥಾರೂಪದಲ್ಲಿ ಕಲಿಯುವುದರಿಂದ ಕಲಿರುವವರು ಕಲಿಸಿಕೋಡುವವರು ಪ್ರಶ್ನೆಗಳ ಮೂಲಕ ಚರ್ಚಿಸುವ ಮೂಲಕ ಆಳವಾಗಿ ಕಲಿತುಕೋಳ್ಳುತ್ತಾರೆ. ಪರಿಶುದ್ದಾತ್ಮನು ಅವರವರಿಗೆ ಬೇಕಾಗುವ ಆತ್ಮೀಕ ಆಹಾರವನ್ನು ಒದಗಿಸುತ್ತಾನೆ.

ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕೊಡುವ ಭೋಧನೆಯಲ್ಲಿ ಕೇವಲ ಟಿಪ್ಪಣಿಗೆ ಆಧಾರವಾದ ಅಂಶಗಳನ್ನು ಮಾತ್ರ ಕಲಿಯಲು ಸಾದ್ಯವಾಗುತ್ತದೆ. ಇದರಿಂದ ಕಲಿಯುವವರು ಸ್ವಸಂತ್ರ್ಯವಾಗಿ ಕಲಿಯಲು ಆಗುವುದಿಲ್ಲ ಆದರೆ ಕಥೆಯನ್ನು ಸಂಪೂರ್ತಿಯಾಗಿ ಸರಿಸ್ಥಾರವಾಗಿ ಕಲಿಯುವುದರಿಂದ ಆತ್ಮಕ್ಕೆ ಶಾಂತಿನೀಡುವ ದೇವರಾತ್ಮನು

ಕಲಿಯುವವರಿಗೆ ಸಂಪೂರ್ಣ ಸತ್ಯಾಂಶವನ್ನು ತಿಳಿಸಿಕೋಡುತ್ತಾನೆ ಇದರಿಂದ ಕೇಳುವವರ ಹೃದಯದಲ್ಲಿ ದೇವರು ತಾನೆ ಮಾತನಾಡುತ್ತಾನೆ.
ಅನೇಕ ಸಲ ಕಥೆ ಹೇಳಿ ಅವರು ಎಸ್ ಟಿ ಎಸ್ ಮಾದರಿಯಲ್ಲಿ ಕಲಿಸುತ್ತಿದೇವೆ ಎಂದು ನೆನೆಸುತ್ತಾರೆ ಆದರೆ ಅವರು ಆತ್ಮೀಕ ನಿಧಿಗಳನ್ನು ಕಂಡುಕೋಳ್ಳಲು ಬಹಳ ಕಷ್ಟಪಡುತ್ತಿರುತ್ತಾರೆ ಅದಕ್ಕೆ ಕಾರಣ ಅವರು ಕಥೆಯನ್ನು ಭಾಗ ಭಾಗವಾಗಿ ವಿಂಗಡಿಸಿ ಪ್ರಾಶಂಗ ಮಾಡುವ ರೀತಿಯಲ್ಲಿ ಕಲಿಸಿಕೋಡುತ್ತಿರುತ್ತಾರೆ.

ಭೋದಕನು ಕಥೆಯು ಭೋದಕನಿಗೆ ಸಂಪೂರ್ಣವಾಗಿ ಕಲಿಸಬೇಕು, ಭೋದಕನು ಸ್ವಬುದ್ದಿಯಿಂದ ಕಲಿಸಬಾರದು. ನಾವು ಕಲಿಸುವ ಪ್ರತಿ ಭೋದನೆಯೂ ಕಥೆಯಲ್ಲಿ ಅಡಕವಾಗಿರಬೇಕು. ಆದುದರಿಂದ ಕಥೆಯೇ ನಮಗೆ ಕಲಿಸಬೇಕು.

ಪ್ರಾಶಂಗಿಕ ಅಥವ ಟಿಪ್ಪಣಿಯ ರೀತಿಯಲ್ಲಿ ಕೊಡುವ ಭೋಧನೆಯಲ್ಲಿ ಅನೇಕ ಸಲ ಪವಿತ್ರಾತ್ಮನಿಗೆ ಕಡಿಮೆ ಅವಕಾಶಕೋಡುತ್ತೇವೆ ಇದರಿಂದ ಕಲಿಯುವುದು ಬಹಳ ಕಡಿಮೆ. ಕಥಾರೂಪವಾಗಿ ಕಲಿಯುವಾಗಿ ಅನೇಕ ಹೋಸ ಆತ್ಮೀಕ ನಿಧಿಗಳನ್ನು ಕಂಡುಕೋಳ್ಳುತೇವೆ ಅದರಿಂದ ಎಲ್ಲರಿಗೂ ಆಶೀರ್ವಾದ ಉಂಟಾಗುತ್ತದೆ. ಪ್ರಶ್ನೆಗಳನ್ನು ಕೇಳುತ್ತಾ ಆಳವಾಗಿ ಚರ್ಚಿಸುವುದರಿಂದ ಹೋಸ ಹೋಸ ಆತ್ಮೀಕ ನಿಧಿಗಳನ್ನು ಕಂಡುಕೋಳ್ಳುವುದರಿಂದ ಸಿಗುವ ಆನಂದ ಅಷ್ಟಿಷ್ಟಲ್ಲ.

ನಮ್ಮ ಉದ್ದೇಶ : ದೇವರ ವಾಕ್ಯವನ್ನು ಆ ವಾಕ್ಯವು ಭೋದಿಸುವ ಹಾಗೆ ಅಭಿವೃದ್ದಿಹೋಂದಿದ ದೇಶಗಳಿಗೂ ಹಾಗು ದೇವರ ವಾಕ್ಯ ಕೇಳದೇ ಇರುವ ಅದಂರೆ ೧೦/೪೦ ಕಿಂಡಿಯಲ್ಲಿ ಬರುವ ಎಲ್ಲಾ ದೇಶಗಳ ಜನರಿಗೂ ಸತ್ಯವೇದದ ಎಲ್ಲಾ ಸತ್ಯಾಂಶವನ್ನು ಭೋಧಿಸುವುದೇ ನಮ್ಮ ಉದ್ದೇಶ. ಮೌಖಿಕವಾಗಿ ದೇವರ ವಾಕ್ಯವನ್ನು ಸುದೀರ್ಘವಾಗಿ ಕಲಿಯುವುದರಿಂದ ಆತ್ಮೀಕವಾಗಿ ಬೆಳೆದು ಅವರ ಜೀವಿತದಲ್ಲಿ ಅನೇಕ ಬದಲಾವಣೆಗಳನ್ನು ನೋಡುತ್ತೇವೆ. (ಹೆಚ್ಚಿನ ವಿವರಗಳಿಗಾಗಿ "ಮೌಖಿಕವಾಗಿ ಕಲಿಯುವವರನ್ನು ಶಿಷ್ಯರನ್ನಾಗಿ ಮಾಡಿ"ಯೆಂಬ ಪುಸ್ತಕವನ್ನು ಓದಿ (Making Disciples of Oral Learners, www.oralbible.com)ವೆಬ್ ಸೈಟ್‌ನಿಂದ ಪ್ರಿಂಟ್ ಮಾಡಿಕೋಳ್ಳಿ ಅಥವ ದ್ವನಿ ಮುದ್ರಣ ಮಾಡಿಕೋಳ್ಳಿ.

ಅಧ್ಯಾಯ ೨: ಪ್ರಶ್ನೆಗಳು ಮತ್ತು ಕಥೆಗಳು ಸತ್ಯವೇದದ ಪೂರ್ವ ನಿಧರ್ಶನದ ಹಿಂದಿನ ಉದಾಹರಣೆ.

ಯೇಸುವಿನ ಮಾದರಿ: ಕಥೆಯನ್ನು ಹೇಳಿ, ಪ್ರಶ್ನೆಗಳನ್ನು ಕೇಳುವುದು

ಯೇಸು ಹೇಗೆ ಬೋಧಿಸಿದನು? 200 ಸಮಯಗಳಲ್ಲಿ ಯೇಸುವಿಗೆ ಪ್ರಶ್ನೆಗಳನ್ನು ಕೇಳಲಾಯಿತು, ಆತನು ಮೂರು ಬಾರಿ ನೇರವಾದ ಉತ್ತರದೊಂದಿಗೆ ಮಾತ್ರ ಪ್ರತಿಕ್ರಿಯಿಸಿದನು! ಇನ್ನುಳಿದ ಬೇರೆ ಸಮಯಗಳಲ್ಲಿ ಯೇಸು ಪ್ರಶ್ನೆಯನ್ನು ಕೇಳುವುದರಿಂದ ಅಥವಾ ಒಂದು ಕಥೆಯನ್ನು ಅಥವಾ ಸಾಮ್ಯವನ್ನು ಹೇಳುವುದರಿಂದ ಪ್ರತಿಕ್ರಿಯಿಸಿದನು. ಹಾಗೂ, ಯೇಸು ಒಂದು ಕಥೆಯನ್ನು ಹೇಳಿ, ಹಾಗೆಯೇ ಸುಮ್ಮನೇ ಹೊರಟು ಹೋದನೇ? ಇಲ್ಲ. ಸಾಮಾನ್ಯವಾಗಿ, ಕಥೆಯ ನಂತರ, ಆತನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದನು ಮತ್ತು ಅವರನ್ನು ಚರ್ಚೆಗೆ ಆಹ್ವಾನಿಸುತ್ತಿದ್ದನು.

ಯೇಸುಕ್ರೀಸ್ತನು ಧರ್ಮಗ್ರಂಥ ಶಾಲೆಗೆ ಹೋಗಿರಲಿಲ್ಲ ಅದಕೋಸ್ಕರವಾಗಿ ಅಲ್ಲವೋ?___ ಅಥವ ಆತನೋಬ್ಬ ಕೇವಲ ಮರಗೆಲಸದ ಮನೆಯಲ್ಲಿ ಹುಟ್ಟಿದ್ದರಿಂದ ಆತನು ಕಥೆಗಳನ್ನು ಹೇಳುತ್ತಿದ್ದನಲ್ಲವೋ.....ಅದು ಕಂಡಿತವಾಗಿ ಇಲ್ಲ. ಆಗ ಹೆಚ್ಚಾಗಿ ಓದಿರುವವರಿರಲಿಲ್ಲವೇ ಅಥವ ಕಥೆಗಳನ್ನು ತನ್ನ ಇಷ್ಟಾನುಸಾರವಾಗಿ ಹೇಳುತ್ತಿದನೋ. ಕಂಡಿತವಾಗಿ ಇಲ್ಲ ಆತನು ಅನೇಕ ಜ್ಞಾನಿಗಳ ಜೋತೆಯಲ್ಲಿ ಮಾತಾಡುವುದನ್ನು ನಾವು ಸತ್ಯವೇದದಲ್ಲಿ ನೋಡುತ್ತೇವೆ. ಅವರು ಕಥೆಗಳನ್ನು ಅರ್ಥಮಾಡಿಕೋಳ್ಳಲಿಲ್ಲವೋ? ಅವರು ಅವುಗಳಲ್ಲಿರುವುದೆಲ್ಲವನ್ನೂ ಚನ್ನಾಗಿ ಅರ್ಥಮಾಡಿಕೋಂಡರು ಹಾಗು ಕೆಲವರು ಆತನ ಮೇಲೆ ನಂಬಿಕೆ ಇಟ್ಟರು.

ಯೇಸುಕ್ರೀಸ್ತನು ಒಳ್ಳೆಯ ಟಿಪ್ಪಣಿ ಅಥವ ಪ್ರಶಂಗಿಕವಾಗಿ ಬೋದನೆ ಮಾಡಲು ಶಕ್ತಿಯುಳ್ಳವನ್ನಾಗಿದನಲ್ಲವೇ? ಆತನು ಕಂಡಿತವಾಗಿ ಆರೀತಿ ಬೋದಿಸಲು ಶಕ್ತಿ ಹೋಂದಿದ್ದನು ಆದರೆ ಆಗ ಜೀವಿಸುತ್ತಿದ್ದ ಜನರು ಅರ್ಥಮಾಡಿಕೋಳ್ಳುವ ವಾಡಿಕೆಯ ಭಾಷೆಯನ್ನು ಬಳಸಿದನು. ಆತನ ಭೋದನೆಯನ್ನು ವಿಧ್ಯಾವಂತರು ಹಾಗು ಅವಿಧ್ಯಾವಂತರು ಅರ್ಥಮಾಡಿಕೊಳ್ಳುತ್ತಿದ್ದರು.

ಯೇಸು ಕ್ರೀಸ್ತನು ನಮಗೆ ಚರಿತ್ರೆಯನ್ನು ಕಲಿಸಲು ಬರಲಿಲ್ಲ ಆದರೆ ಆತ್ಮೀಕ ಸಂದೇಶವನ್ನು ಹೊತ್ತು ತಂದರು. *ಕಥೆ* ಮಾತ್ರವನ್ನು ಕಲಿಯುವವರು ಕಥೆಯು ಒಳಗೊಂಡಿರುವ ಆತ್ಮೀಕ ಮಾಹಿತಿಯನ್ನು (ನಿಧಿಗಳು) ಹೇಗೆ ಕಂಡುಕೊಳ್ಳುವುದು ಎಂಬುದನ್ನು ಸಹ ಕಲಿತುಕೊಳ್ಳುತ್ತಾರೆ, ಮತ್ತು ಪ್ರಶ್ನೆಗಳನ್ನು ರಚಿಸಿ, ಅವುಗಳನ್ನು ಚರ್ಚೆಯ ರೂಪದಲ್ಲಿ ಕೇಳುವುದರ ಮೂಲಕ ಇದನ್ನು ಕೇಳಿಸಿಕೊಳ್ಳುವವರು ಇದರಲ್ಲಿನ ಆತ್ಮೀಕ ನಿಧಿಯನ್ನು ಕಂಡುಕೊಳ್ಳುವಂತೆ ನಡೆಸುವುದನ್ನು ಕಲಿತುಕೊಳ್ಳುತ್ತಾರೆ.

ಕಥೆ ಮಾತ್ರದ ಕಾರ್ಯಾಗಾರದಲ್ಲಿ ಈ ಮಾಹಿತಿಗಳನ್ನು ಅನುಸರಿಸುವಂತವರು, ಅಥವಾ ಈ ಕೌಶಲವನ್ನು ಕಲಿತುಕೊಳ್ಳುವಂತವರು, ಒಬ್ಬ ಪರಿಣಾಮಕಾರಿಯಾದ ಕಲಿಕೆಗಾರರಾಗಬಹುದು. ಈ ಕಲಿಯುವಂತವರೊಳಗೆ ದೇವರ ವಾಕ್ಯವು ಹೋಗುವ ಸ್ಥಳದಲ್ಲೆಲ್ಲಾ ದೇವರು ತನ್ನ ವಾಕ್ಯದ ಮೂಲಕ ಆಶೀರ್ವದಿಸಲಿ.

ಅಭ್ಯಾಸ ಮಾಡಿದವರು *ಕಥೆ* ಮಾತ್ರದ ಗುರುತಿನಡಿಯಲ್ಲಿ ಬೇರೆಯವರಿಗೆ ತರಬೇತಿ ಕೊಡಲು ಪ್ರಮಾಣೀಕೃತರಾಗಿರುವುದಿಲ್ಲ. ಏಕೆಂದರೆ *ಕಥೆ* ಮಾತ್ರದಿಂದ ನಾವು ಕಾಣುವ ಅದ್ಭುತವಾದ ಫಲಿತಾಂಶಗಳ ನಿಮಿತ್ತ, ಲೋಕದೆಲ್ಲೆಡೆ ಅನೇಕಾನೇಕ ಶಿಕ್ಷಕರಿಗೆ ಪ್ರಮಾಣೀಕರಿಸಬೇಕೆಂಬುದು ನಮ್ಮ ಆಸೆಯಾಗಿದೆ. ಪ್ರಾಮಾಣೀಕೃತರಾದ (ದೃಢೀಕರಿಸಲ್ಪಟ್ಟ) ಶಿಕ್ಷಕರು ಕೌಶಲ್ಯದಲ್ಲಿ ಅನುಭವವುಳ್ಳ ಅಭ್ಯಾಸಗಾರರು ಮಾತ್ರವಾಗಿಲ್ಲದೆ, ಹೊಸಬರಿಗೆ ಸರಿಯಾಗಿ ಮತ್ತು ಚೆನ್ನಾಗಿ ಹೇಗೆ ತರಬೇತಿ ಕೊಡಬೇಕೆಂಬುದನ್ನೂ ಸಹ ಅರಿತವರಾಗಿರುತ್ತಾರೆ. ಈಪುಸ್ತಕದಲ್ಲಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಬರೆದಿದ್ದೇವೆ, ಅನೇಕರು ಈ ಒಳ್ಳೆಯ ತರಬೇತಿಯನ್ನು ಪಡೆದು ಇದು ಅಭಿವೃದ್ಧಿ ಹೋಂದಬೇಕನ್ನುವುದೇ ನನ್ನ ಆಸೆಯಾಗಿದೆ.

ಸತ್ಯವೇದದ ಆತ್ಮೀಕ ನಿಧಿಗಳು ಯಾವುವು? ಮಾರ್ಗ (ದಾರಿಯ ಕಥೆ)

ಒಮ್ಮೆ ಒಬ್ಬ ವ್ಯಕ್ತಿ ತನ್ನ ಹಳ್ಳಿಯನ್ನು ಬಿಟ್ಟು, ಪಟ್ಟಣದಲ್ಲಿ ಕೆಲಸ ಮಾಡಲು ಹೋದನು. ಅನೇಕ ವರ್ಷಗಳು ಆ ವ್ಯಕ್ತಿ ಪಟ್ಟಣದಲ್ಲಿದ್ದು ಬಹಳ ಹಣವನ್ನು ಸಂಪಾದಿಸಿದನು. ಕೊನೆಗೆ, ಅವನು ತನ್ನ ಮನೆಗೆ ಹಿಂತಿರುಗಿದಾಗ ಅಲ್ಲಿರುವ ಪ್ರತಿಯೊಬ್ಬರೂ ಅವನನ್ನು ಒಳ್ಳೆಯ ಸ್ನೇಹಿತನಂತೆ ಉಪಚರಿಸಿದರು.

ಹೊಸದಾಗಿ ಐಶ್ವರ್ಯವಂತನಾಗಿದ್ದ ಈ ವ್ಯಕ್ತಿಯು ತನ್ನ ನಿಜವಾದ ಸ್ನೇಹಿತರಿಗೆ ತನ್ನ ಹಣದಲ್ಲಿ ಉಡುಗೊರೆಯನ್ನು ಕೊಡಲು ಬಯಸಿದನು. ಹಾಗಾಗಿ ಅವನು ಒಂದು ಯೋಜನೆಯನ್ನು ಮಾಡಿದನು. ಅವನು ಒಂದು ದಿನದ ಮಟ್ಟಿಗೆ ತನ್ನ ಹಳ್ಳಿಯನ್ನು ಬಿಟ್ಟುಹೋಗಿ ನಂತರ ಹಿಂತಿರುಗಿ ಬಂದನು. ನಂತರ ನಾನು ನಿನ್ನ ಸ್ನೇಹಿತನು ಎಂದು ಹೇಳಿಕೊಳ್ಳುವಂತವರೆಲ್ಲರನ್ನೂ ಒಟ್ಟಾಗಿ ಕರೆದನು ಮತ್ತು ಅವರೆಲ್ಲರು ತನ್ನನ್ನು ಭೇಟಿಯಾಗಲು ಬೆಟ್ಟದ ಇನ್ನೊಂದು ಕಡೆಗೆ ಬರಲು ಹೇಳಿದನು.

ಐಶ್ವರ್ಯವಂತನು ಸೇರಿಬಂದ ಜನರನ್ನೆಲ್ಲಾ ಒಟ್ಟಾಗಿ ಕೂಡಿಸಿ ಒಂದು ಪ್ರಕಟಣೆಯನ್ನು ಮಾಡಿದನು. ಆತನು, "ನಾನು ನದಿಯ ಕಡೆಗೆ ಹೋಗುವ ಮಾರ್ಗದಲ್ಲಿ ಮಾಡಿ ನಿಮಗೆ ಕೆಲವು ಉಡುಗರೆಗಳನ್ನು ಇಟ್ಟಿದ್ದೇನೆ ಆದಕಾರಣ ನೀವು ಈ ಮಾರ್ಗವನ್ನು ಅನುಸರಿಸುವುದಾದರೆ, ಕೆಲವು ನಿಧಿಗಳನ್ನು ಕಾಣುವಿರಿ. ಈಗ ಹೋಗಿ. ನಿಮಗಾಗಿ ನಾನಿಟ್ಟಿರುವ ಉಡುಗೊರೆಗಳನ್ನು ಕಂಡುಕೊಳ್ಳಿರಿ" ಎಂದು ಹೇಳಿದನು.

ಹಾಗಾಗಿ ಜನರು ಅಲ್ಲಿಂದ ಆ ಮಾರ್ಗದ ಕಡೆಗೆ ನಡೆದುಕೊಂಡು ಹೋಗಲು ಪ್ರಾರಂಭಿಸಿದರು. ಕೆಲವರು ಆ ರಸ್ಥೆಯಲ್ಲಿ ಸ್ವಲ್ಪ ದೂರ ಹೋಗಿ, "ಹೋ, ಇದು ಬಹಳ ಆಸಕ್ತಿಕರವಾದ ಮಾರ್ಗ. ಇದರಲ್ಲಿ ನೋಡೋಣ" ಎಂದು ಹೇಳಿ, ಅಲ್ಲಿ ನಿಂತು, ಆ ಮಾರ್ಗದಲ್ಲಿದ್ದ ಸ್ವಲ್ಪ ಮಣ್ಣನ್ನು ಎತ್ತಿಕೊಂಡು ಪರೀಕ್ಷಿಸುವುದಕ್ಕಾಗಿ ಮನೆಗೆ ತೆಗೆದುಕೊಂಡು ಹೋದರು.

ಬೇರೆ ಕೆಲವರು ನದಿಯ ಕಡೆಗಿನ ಮಾರ್ಗದಲ್ಲಿ ಓಡಿದರು. ಅವರು ಮಾರ್ಗದ ಕೊನೆಯನ್ನು ತಲುಪಿದಾಗ, ಅವರು "ನಮಗೆ ಈ ಮಾರ್ಗ ಚೆನ್ನಾಗಿ ಗೊತ್ತು. ಇದರಲ್ಲಿ ಹೊಸದೇನೂ ಇಲ್ಲ. ನಾವು ಇಲ್ಲಿ ಯಾವುದೇ ನಿಧಿಯನ್ನು ಕಂಡಿಲ್ಲ" ಎಂದು ದೂರು ಹೇಳಿದರು.

ಇನ್ನುಳಿದ ಜನರು ತಮಗೆ ಪರಿಚಿತವಾಗಿದ್ದ ಆ ದಾರಿಯಲ್ಲಿ ನಡೆಯುವುದನ್ನು ಮುಂದುವರೆಸಿದರು. ಅವರು ಹಾಗೆಯೇ ನಿಧಾನವಾಗಿ ಹೋಗುತ್ತಿರುವಾಗ, ಅವರು ಒಬ್ಬರೊಂದಿಗೆ ಒಬ್ಬರು ಈ ರೀತಿ ಮಾತನಾಡಲು ಪ್ರಾರಂಭಿಸಿದರು, "ಬಿದ್ದು ಹೋಗಿರುವ ಈ ಹಳೆಯ ಮರವನ್ನು ನೋಡಿ. ನಮಗೆ ನಡೆಯುವುದಕ್ಕೆ ಮಾರ್ಗವು ಸರಾಗವಾಗಿರುವಂತೆ ನಮ್ಮ ಸ್ನೇಹಿತನು ಇದನ್ನು ಪಕ್ಕಕ್ಕೆ ಸರಿಸಿರುವನು." ಇನ್ನೂ ಕೆಲವರು ಮಾರ್ಗವು ಸುರಕ್ಷಿತವಾಗಿರುವುದಕ್ಕೆ ಮುಳ್ಳಿನ ಪೊದೆಗಳನ್ನು ಕಡಿದು ಹಾಕಿರುವುದನ್ನು ಗಮನಿಸಿದರು.

ಮಾರ್ಗದಲ್ಲಿ ಉಡುಗೊರೆಗಾಗಿ ಎದುರು ನೋಡುವ ಬದಲಾಗಿ, ಈ ಜನರು ಇನ್ನೂ ನಿಧಾನವಾಗಿ ನಡೆಯಲು ಪ್ರಾರಂಭಿಸಿದರು. ತಮ್ಮ ಐಶ್ವರ್ಯವಂತ ಸ್ನೇಹಿತನು ತಮಗಾಗಿ ಕಷ್ಟಪಟ್ಟು ಮಾಡಿದ ಕೆಲಸದ ಫಲಿತಾಂಶಗಳನ್ನು ಅವರು ಸವಿಯಲು ಬಯಸುತ್ತಿದ್ದರು. ತಮ್ಮ ಸ್ನೇಹಿತನಿಂದ ಈ ಮಾರ್ಗವೇ ತಮಗೆ ಉಡುಗೊರೆಯಾಗಿ ಕೊಡಲ್ಪಟ್ಟಿದೆ ಎಂಬುದನ್ನು ಇವರು ಗ್ರಹಿಸಿದರು.

ತಕ್ಷಣವೇ, ನಡೆಯುತ್ತಿದ್ದವರಲ್ಲಿ ಒಬ್ಬನು ನಿಂತು, ಎಲ್ಲರೂ ಬಂದು ನೋಡುವಂತೆ ಕರೆದನು. "ಈ ಮಾರ್ಗದ ಪಕ್ಕದಿಂದ ಪೊದೆಯ ಕೆಳಗೆ ನೋಡಿ. ಅಲ್ಲಿ ಅಕ್ಕಿಯ ಚೀಲಗಳಿವೆ" ಎಂದು ಹೇಳಿದನು. ನಂತರ ಮತ್ತೊಬ್ಬನು ಕರೆದು, "ಅಲ್ಲಿ ನೋಡಿ, ಮಾರ್ಗದ ಪಕ್ಕದಲ್ಲಿನ ಪೊದೆಯ ಕೆಳಗೆ! ಇಲ್ಲಿ ಹೊಚ್ಚ ಹೊಸ ಅಡಿಗೆಯ ಮಡಿಕೆಗಳನ್ನು ನಾನು ನೋಡಿದೆನು" ಅಂದನು.

ನಿಧಾನವಾಗಿ ನಡೆಯುತ್ತಿದ್ದ ಈ ವ್ಯಕ್ತಿಗಳು ಮಾರ್ಗದ ಪಕ್ಕದಲ್ಲಿಯೇ ಅಡಗಿಸಿಟ್ಟಿದ್ದ ನಿಧಿಗಳನ್ನು ಪುನಃ ಪುನಃ ಕಂಡುಹಿಡಿಯಲಾರಂಭಿಸಿದರು. ಈ ಉಡುಗೊರೆಗಳನ್ನು ತಮ್ಮ ಐಶ್ವರ್ಯವಂತ ಸ್ನೇಹಿತನು ತಮಗಾಗಿ ಇಟ್ಟಿರುವನು ಎಂಬುದನ್ನು ಅವರು ಗ್ರಹಿಸಿಕೊಂಡರು. ತನ್ನ ನಿಜವಾದ ಸ್ನೇಹಿತರು ತನ್ನನ್ನು ನಂಬುತ್ತಾರೆ ಮತ್ತು ತನ್ನ ಮಾರ್ಗವನ್ನು ಹೊಗಳುತ್ತಾರೆ ಹಾಗೂ ಅವರಿಗಾಗಿ ತಾನಿಟ್ಟಿರುವ ಉಡುಗೊರೆಗಳನ್ನು ಕಂಡುಹಿಡಿಯುವವರು ಇವರೇ ಎಂದು ಐಶ್ವರ್ಯವಂತನಿಗೆ ತಿಳಿದಿತ್ತು.

ಐಶ್ವರ್ಯವಂತನು ಸುಂದರವಾಗಿ ಮಾಡಿದ್ದ ಮಾರ್ಗದಿಂದ ತ್ವರೆಪಟ್ಟು ಹೊರಟುಹೋದ ಜನರು, ಎಲ್ಲಾ ನಿಧಿಗಳನ್ನು ಕಳೆದುಕೊಂಡರು. ಮಾರ್ಗವನ್ನಾಗಲಿ ಅಥವಾ ಮಾರ್ಗವನ್ನು ಸಿದ್ಧಪಡಿಸಿದಂತಹ ವ್ಯಕ್ತಿಯನ್ನಾಗಲಿ ಹೊಗಳಲು ಶಕ್ತರಾಗುವಂತೆ ಅವರು ನಿಧಾನವಾಗಿ ಹೋಗಲಿಲ್ಲ. (ಮಾರ್ಗದಲ್ಲಿದ್ದ ಮಣ್ಣನ್ನು ಪರೀಕ್ಷಿಸಲು ಹೋದಂತ ವ್ಯಕ್ತಿಗಳು... ಅವರು ಇನ್ನೂ ಪರೀಕ್ಷಿಸುತ್ತಲೇ ಇರುವರು. ಅವರು ಇನ್ನೂ ಸಂಪೂರ್ಣ ಮಾರ್ಗವನ್ನು ಹಾದುಬಂದಿಲ್ಲ!)

ಸತ್ಯವೇದದಲ್ಲಿನ ಪ್ರತಿಯೊಂದು ಕಥೆಯು ದೇವರು ನಮಗಾಗಿ ಸಿದ್ಧಪಡಿಸಿರುವಂತಹ ಒಂದು ಮಾರ್ಗವಾಗಿದೆ. ಸತ್ಯವೇದದ ಕಥೆಯ ಮಾರ್ಗದ ಮೂಲಕ ಯಾರು ನಿಧಾನವಾಗಿ ನಡೆದುಕೊಂಡು ಹೋಗುತ್ತಾರೋ ಅಂತವರು ದೇವರಿಂದ ಅಡಗಿಸಲ್ಪಟ್ಟಿರುವ ಆತ್ಮೀಕ ನಿಧಿಗಳನ್ನು, ಉಡುಗೊರೆಗಳನ್ನು ಕಂಡುಹಿಡಿಯುತ್ತಾರೆ. ಇದನ್ನು ನಾವು *ಕಥೆ* ಮಾತ್ರದಲ್ಲಿ ಕಲಿಸಿಕೊಡುತ್ತೇವೆ.

ಕಥೆಯ ಬಲ – ನಾತಾನನ ಉದಾಹರಣೆಯನ್ನು ಅನುಸರಿಸುವುದು

2 ಸಮುವೇಲ 12:1-14ರಲ್ಲಿ ಆತ್ಮೀಕ ಸತ್ಯಕ್ಕೆ ಸಂಪರ್ಕ ಹೊಂದುವುದರ ಒಂದು ತತ್ವವನ್ನು ದೇವರು ಕೊಡುತ್ತಾನೆ. ಅರಸನಾದ ದಾವೀದನು ವ್ಯಭಿಚಾರ ಮಾಡಿ ಮತ್ತು ಆ ಸ್ತ್ರೀಯ ಗಂಡನನ್ನು ಕೊಲೆ ಮಾಡುವಂತೆ ಸೈನ್ಯದ ನಾಯಕನಿಗೆ ಅಪ್ಪಣೆ ಮಾಡಿದುದರಿಂದ ಅವನು ನಿಜವಾಗಿಯೂ ಪಾಪವನ್ನು ಮಾಡಿದ್ದನು. ಅದರ ನಂತರ, ದಾವೀದನು ತನ್ನ ತಪ್ಪನ್ನು ಮುಚ್ಚಿಡಲು ಪ್ರಯತ್ನಿಸಿದನು.

ಪ್ರವಾದಿಯಾದ ನಾತಾನನು ದಾವೀದನ ಬಳಿಗೆ ಬಂದು, ಅವನಿಗೆ ಒಂದು ಕಥೆಯನ್ನು ಹೇಳಿದನು. ಕಥೆಯು ಇಬ್ಬರು ಪುರುಷರ ಕುರಿತಾಗಿತ್ತು, ಅದರಲ್ಲಿ ಒಬ್ಬನು ಐಶ್ವರ್ಯವಂತನು, ಮತ್ತೊಬ್ಬನು ಬಡವ. ಬಹಳ ಐಶ್ವರ್ಯವಂತನಾಗಿದ್ದವನು ಅನೇಕ ಕುರಿಗಳನ್ನು ಮತ್ತು ದನಗಳನ್ನು ಹೊಂದಿದ್ದನು ಆದರೆ ಆ ಬಡವನ ಮನೆಯಲ್ಲಿ ಒಂದೇ ಒಂದು ಕುರುಮರಿ ಇತ್ತು. ಒಂದು ದಿನ ಈ ಐಶ್ವರ್ಯವಂತನ ಮನೆಗೆ ಒಬ್ಬ ಪ್ರಯಾಣಿಕನು ಬಂದಾಗ, ಐಶ್ವರ್ಯವಂತನು ಬಡವನಿಗೆ ಬಹಳ ಪ್ರಿಯವಾಗಿದ್ದ ಒಂದು ಕುರಿಯನ್ನು ಕದ್ದು, ಅದನ್ನು ಕೊಂದು, ಅದನ್ನು ತನ್ನ ಅತಿಥಿಗೆ ಉಣಬಡಿಸಿದನು!

ದಾವೀದನು ನಾತಾನನು ಹೇಳಿದ ಕಥೆಯನ್ನು ಕೇಳಿದಾಗ, ಅವನು ಬಹಳವಾಗಿ ಸಿಟ್ಟುಗೊಂಡನು. ಸತ್ಯವೇದದ ಕಥೆಯಲ್ಲಿ ದಾವೀದನು ನಾತಾನನಿಗೆ ಈ ರೀತಿ ಹೇಳುತ್ತಾನೆ, "ಯೆಹೋವನಾಣೆ, ಆ ಮನುಷ್ಯನು ಸಾಯಲೇಬೇಕು. ಅವನು ಕರುಣೆಯಿಲ್ಲದೆ ಹೀಗೆ ಮಾಡಿದ್ದರಿಂದ ಆ ಕುರಿಮರಿಗಾಗಿ ನಾಲ್ಕರಷ್ಟು ಹಿಂದಕ್ಕೆ ಕೊಡಿಸಬೇಕು. ಆಗ ನಾತಾನನು ದಾವೀದನನ್ನು ನೋಡಿ, ನೀನೇ ಆ ಮನುಷ್ಯನು ಅಂದನು."

ನಾತಾನನ ಕಥೆಯನ್ನು ಕೇಳುವುದಕ್ಕೂ ಮುನ್ನ ದಾವೀದನು ತಾನು ಪಾಪ ಮಾಡಿದವನು ಎಂದು ತಿಳಿದುಕೊಂಡಿದ್ದನೇ? ದಾವೀದನು ತನ್ನ ಪಾಪವನ್ನು ಒಪ್ಪಿಕೊಂಡಿದ್ದನೇ? ಹೌದು, ಅವನು ತನ್ನ ಪಾಪವನ್ನು ಎದುರಿಸಿರಲಿಲ್ಲ. ಸಾಮಾನ್ಯವಾಗಿ, ಒಬ್ಬ ದೇವರ ಪ್ರವಾದಿಯು ವ್ಯಭಿಚಾರ ಮತ್ತು ಕೊಲೆಯ ವಿರುದ್ಧವಾಗಿ ಹೇಗೆ ಬೋಧಿಸಬೇಕೆಂದು ನೀವು ಅಪೇಕ್ಷಿಸುವಿರಿ? ನಾತಾನನು ಯಾವ ರೀತಿಯ ಪ್ರಸಂಗವನ್ನು ಉಪಯೋಗಿಸಿದನು? ಹೌದು, ದಾವೀದನನ್ನು ನೇರವಾಗಿ ಗದರಿಸುವುದರ ಬದಲು ನಾತಾನನು ಒಂದು ಕಥೆಯನ್ನು ಹೇಳಿದನು.

ಏನು ಸಂಭವಿಸಿತು ಎಂಬುದನ್ನು ಗಮನಿಸಿ. ದಾವೀದನು ಹೇಗೆ ಪ್ರತಿಕ್ರಿಯಿಸಿದನು? ಹೌದು. ಐಶ್ವರ್ಯವಂತನು ತಪ್ಪಿತಸ್ಥನಾಗಿದ್ದುದರಿಂದ ದಾವೀದನು ಅವನ ಕುರಿತಾಗಿ ಸರಿಯಾಗಿಯೇ ತೀರ್ಪನ್ನು ಕೊಟ್ಟನು ಮತ್ತು ಆ ಐಶ್ವರ್ಯವಂತನು ಯಾವ ರೀತಿಯ ಪರಿಹಾರ ಕೊಡಬೇಕೆಂಬುದನ್ನು ಸಹ ತಿಳಿಸಿದನು ಮತ್ತು ಅವನು ಹಾಗೆ ಮಾಡಲೇಬೇಕಾಗಿತ್ತು. ಸರಿ. ಒಂದರ ಬದಲಾಗಿ ನಾಲ್ಕು ಕುರಿಮರಿಗಳು ಮತ್ತು ಆ ಐಶ್ವರ್ಯವಂತನು ಸಾಯಬೇಕು! ದಾವೀದನು ಕಥೆಯನ್ನು ಭಾವನೆಯಲ್ಲಿ ನೋಡುತ್ತಿದ್ದನು, ಅಲ್ಲಿ ಐಶ್ವರ್ಯವಂತನ ಪಾಪವನ್ನು ಕಂಡನು, ಆಗ ಅವನು ಒಂದು ನೀತಿಯ ಆತ್ಮೀಕ ಅವಲೋಕನವನ್ನು ಮಾಡಿದನು.

ನಂತರ ದಾವೀದನು ಯಾವುದು ಸರಿಯಾಗಿತ್ತು ಎಂಬುದನ್ನು ಬಾಯಿಮಾತಿನಲ್ಲಿ ಹೇಳಿದ ನಂತರ, ನಾತಾನನು ದಾವೀದನನ್ನು ಕಥೆಯೊಳಗೆ ತೆಗೆದುಕೊಂಡು ಹೋದನು ಮತ್ತು ದಾವೀದನಿಗೆ, ನೀನೇ ಆ ಮನುಷ್ಯನಾಗಿರುವೆ ಎಂದು ಒಂದು ಆತ್ಮೀಕವಾದ ಅಳವಡಿಸುವಿಕೆಯನ್ನು ಮಾಡಿದನು. ದಾವೀದನು ದೇವರ ವಿರುದ್ಧವಾಗಿ ಹೇಗೆ ಪಾಪ ಮಾಡಿದನು ಎಂಬುದಕ್ಕೆ ನಾತಾನನು ಕೆಲವು ಉದಾಹರಣೆಗಳನ್ನು ಸೇರಿಸುತ್ತಾನೆ, ನಂತರ ದಾವೀದನು ನಾನು

ಯೆಹೋವನಿಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆ ಅಂದನು. ಈ ಕಥೆಯ ಮುಂದಿನ ಭಾಗದಲ್ಲಿ ಸಾವಿನ ಶಿಕ್ಷೆಯು (ಐಶ್ವರ್ಯವಂತನಿಗೆ ಬರಬೇಕಾದ ಶಿಕ್ಷೆಯನ್ನು ದಾವೀದನು ನಾತಾನನ ಬಳಿ ಹೇಳಿದ್ದು) ದಾವೀದನ ಸಂತಾನದ ಮೇಲೆ ಬಂದದ್ದನ್ನು ನಾವು ನೋಡುತ್ತೇವೆ.

ಸತ್ಯವೇದದ ಈ ಕಥೆಯು *ಕಥೆ* ಮಾತ್ರದ ಅತಿಮುಖ್ಯ ಭಾಗದ ದೊಡ್ಡ ಭಿನ್ನತೆಯನ್ನು ಉದಾಹರಣೆಯಾಗಿ ತೋರಿಸುತ್ತದೆ. ಜನರು ಸತ್ಯವೇದದ ಒಂದು ಕಥೆಯನ್ನು ಕೇಳಿ, ನಿಜವಾಗಿಯೂ ಅದನ್ನು ಅನುಭವಿಸಿದರೆ, ಅವರು ಒಳದೃಷ್ಟಿಯಿಂದ ಇದರ ಕುರಿತಾಗಿ ಚರ್ಚಿಸಲು ಸಮರ್ಥರಾಗಿರುತ್ತಾರೆ. ಕಥೆಯ ಒಳಭಾಗವನ್ನು ನೋಡುವುದರಿಂದ, ಕಥೆಯಲ್ಲಿರುವವರ ಕುರಿತಾಗಿ ಕಂಡುಹಿಡಿಯುತ್ತಾರೆ ಮತ್ತು ಮೌಖಿಕವಾಗಿ ಆತ್ಮೀಕ ಮಾಹಿತಿಯನ್ನು ಕೊಡುತ್ತಾರೆ. ಇಂತಹ ಕಂಡುಹಿಡಿಯುವಿಕೆಗಳನ್ನು ನಾವು "ಆತ್ಮೀಕ ಅವಲೋಕನಗಳು" ಎಂದು ಕರೆಯುತ್ತೇವೆ.

ಕೇಳಿಸಿಕೊಳ್ಳುವವರು ಪಾತ್ರಗಳ ಕುರಿತಾಗಿ ತಾವು ಏನನ್ನು ಕಾಣಲು ಸಾಧ್ಯವಾಯಿತು ಎಂಬುದನ್ನು ಹಂಚಿಕೊಂಡ ನಂತರ, ಕಥೆ ಹೇಳುವವರು ಇವರನ್ನು ವೈಯಕ್ತಿಕವಾಗಿ ಆ ಕಥೆಯೊಳಗೆ ತಮ್ಮನ್ನು ತಾವು ಪ್ರವೇಶ ಮಾಡಿಕೊಳ್ಳುವಂತೆ ಆಹ್ವಾನಿಸುತ್ತಾರೆ. ಆಸಕ್ತಿಕರವೆಂದರೆ, ಕೇಳಿಸಿಕೊಳ್ಳುವವರು ಆತ್ಮೀಕ ಅವಲೋಕನಗಳ ಕುರಿತಾಗಿ ಚರ್ಚೆ ಮಾಡುತ್ತಿರುವಾಗ, ಅನೇಕ ಬಾರಿ ಪವಿತ್ರಾತ್ಮನು ಅವರೊಂದಿಗೆ ಮಾತನಾಡುತ್ತಿರುತ್ತಾನೆ. ಆತನು ಈಗಾಗಲೇ ಜನರು ತಮ್ಮನ್ನು ತಾವು ನೋಡಿಕೊಳ್ಳುವಂತೆ ಪ್ರೇರಿಸುತ್ತಿರುತ್ತಾನೆ. *ಕಥೆ* ಮಾತ್ರದಲ್ಲಿ ಈ ವೈಯಕ್ತಿಕವಾದ ಸತ್ಯಗಳನ್ನು ನಾವು "ಆತ್ಮೀಕ ಅನ್ವಯಿಸುವಿಕೆಗಳು" ಎಂದು ಕರೆಯುತ್ತೇವೆ.

ಏನು ಅಥವ ಯಾರು ಈ ಕಾರ್ಯವನ್ನು ಮಾಡುವರು?

ದೇವರನ್ನು ನಾವು ಎಷ್ಟು ವರ್ಷಗಳಿಂದ ತಿಳಿದುಕೋಂಡಿದ್ದೇವೆ ಎಂಬುದಾಗಿ ಮುಖ್ಯವಲ್ಲ ಆದರೆ ಸತ್ಯವೇದದ ಜ್ಞಾನ ಹೋಂದಿಕೋಂಡಿರಬೇಕು. ಆತ್ಮೀಕವಾಗಿ ದೇವರ ಜೋತೆಗೆ ಒಳ್ಳೆಯ ಸಂಭದ ಇಟ್ಟುಕೋಂಡಿರಬೇಕು. ಸತ್ಯವೇದದಲ್ಲಿ ಮಾನವನಿಗಾಗಿ ಆತ್ಮೀಕ ನಿಧಿಗಳಿಂದ ಅಡಕವಾಗಿದೆ. ಅವುಗಳು ಪವಿತ್ರಾತ್ಮನು ಮಾನವನಿಗೆ ಸವಿಸ್ತಾರವಾಗಿ ಭೋದಿಸುತಾನೆ.

ನಾವು ಅನೇಕ ರೀತಿಯಲ್ಲಿ ಸತ್ಯವೇದದ ಸತ್ಯಾಂಶವನ್ನು ಕಲಿತುಕೋಳ್ಳುತ್ತೇವೆ, ಸಭೆಗಳಲ್ಲಿ ಸಭಿಕರು ಅವರವರ ಪಾಸ್ಟರ್ ಬೋದಿಸುವ ವಾಕ್ಯಗಳಿಂದ ಸತ್ಯವೇದದ ಸತ್ಯಾಂಶವನ್ನು ಕಲಿತುಕೋಳ್ಳುತ್ತಾರೆ. ಅನೇಕ ದೇವ ಜನರು ದೇವರ ವಾಕ್ಯಗಳನ್ನು ಕಲಿಯಲು ಬೇರೆಯವರ ಮೇಲೆ ಆಧಾರಪಡುತ್ತಿರುತ್ತಾರೆ. ಸಭೆಗೆ ಹೋಗುವವರಂತೂ ಆತ್ಮೀಕ ಸತ್ಯಗಳನ್ನು ಕಲಿಯಲು ಸಭಾಪಾಲಕರ ಮೇಲೆಯೇ ಆಧಾರಪಟ್ಟಿತ್ತಿರುತ್ತಾರೆ. ಸಭಾಪಾಲಕರು ಅನೇಕ ಕೂಟಗಳಿಗೆ ಹೋಗಿ ಅದರಲ್ಲಿ ಕಲಿತುಕೋಂಡು ಬಂದು ಆಸಭೆಯ ಭಕ್ತರಿಗೆ ಬೋಧಿಸುತ್ತಾರೆ. ಸತ್ಯವೇದ ಶಾಲೆಯಲ್ಲಿ ಕಲಿತಿರುವವರಂತೂ ಅನೇಕರು ಬರೆದ ಪುಸ್ತಕಗಳನ್ನು ಓದಿ ಅರ್ಥಮಾಡಿಕೋಳ್ಳುತ್ತಾರೆ.

ಈ ಎಲ್ಲವುಗಳೂ ಒಳ್ಳಯದೇ ಆದರೆ ದೇವರ ವಾಕ್ಯವನ್ನು ಕಲಿಯಲು ಬೇಕಾಗಿರುವುದು ದೇವರ ಜ್ಞಾನ. ಇದು ದೇವರೇ ನಮಗೆ ದಯಪಾಲಿಸಿದ್ದಾನೆ ಅದು ಸತ್ಯವೇದದಲ್ಲಿ ಕಥಾರೂಪವಾಗಿ ಕಲಿಯುವುದೇ ಅತಿಶಯವಾದ ದೇವರ ಕೃಪೆ. ಯೇಸುವಿನ ಶಿಷ್ಯರು ಆತನಿಂದ ಸುಮಾರು ೩ ವರ್ಷಗಳ ಕಾಲ ಸರಳವಾಗಿ ಕಲಿತುಕೋಂಡರು. ಯೇಸು

ಅವರನ್ನು ಬಿಟ್ಟು ಹೋಗುವಂತ ಸಮಯ ಬಂದಾಗ ಆತನು ಅವರಿಗೆ ನಿಮ್ಮ ಹೃದಯವು ಕಲವಳ ಪಡದಿರಲಿ ಹಾಗು ಭಯಪಡಬೇಡಿ ಎಂದು ಯೋಹಾನು ೧೪ ರಲ್ಲಿ ತಿಳಿಸಿದ.

ಯೇಸು ಆತನ ಶಿಷ್ಯರಿಗೆ ಹೇಳಿದ ಮಾತುಗಳನ್ನು ಕೇಳಿದ ಅವರಿಗೆ ಏಗಾಗಿರಬೇಕು ಯೋಚಿಸಿರಿ?..... ನಿಜ ಅವರಿಗೆ ಭಯವಾಗಿರುತ್ತದೆ. ಅವರ ಒಳ್ಳೆಯ ಅಧ್ಯಾಪಕರು ಇನ್ನು ಮುಂದೆ ಅವರ ಮಧ್ಯದಲ್ಲಿ ಇರುವುದಿಲ್ಲ ಎಂದು ತಿಳಿದಾಗ ಅವರಿಗೆ ಭಯವಾಗಿರುತ್ತದೆ, ಇನ್ನುಮುಂದೆ ಅವರನ್ನು ಸಂತೈಸುವವರ್ಯಾರು? ಅವರಿಗೆ ಇನ್ನುಮುಂದೆ ಯಾರು ಉಪದೇಶಿಸುತ್ತಾರೆ. ಆದರೆ ಯೇಸು ಅವರಿಗೆ ತಮ್ಮ ಕೋನೆ ಮಾತುಗಳ್ಳಲ್ಲಿ ಅವರಿಗೆ ನೀವು ಒಬ್ಬಂಟಿಗರಾಗಿ ಇರುವುದಿಲ್ಲ. ನಿಮಗೆ ಭೋದಿಸುವ ಒಬ್ಬ ಸಹಾಯಕನನ್ನು ಕಳಿಸುತ್ತೇನೆಂದು ಆತನು ಬಂದು ನಿಮಗೆ ರಾತ್ರಿ ಮತ್ತು ಅಗಲು ಅಂದರೆ ವಾರದ ಏಳು ದಿನಗಳು ನಿಮಗೆ ಭೋದಿಸುತ್ತಾನೆಂದು ಅವರಿಗೆ ಅಶ್ವಾಸನೆ ನೀಡುತ್ತಾನೆ.

ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೋಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನೂ ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆತರುವನು. (ಯೋಹಾನು ೧೪:೨೬).

ಸತ್ಯದ ಆತ್ಮನು ಬಂದಾಗ ಆತನು ನಿಮನ್ನು ನಡಿಸಿಕೋಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. (ಯೋಹಾನ ೧೬: ೧೩).

ದೇವರ ವಾಕ್ಯವನ್ನು ಚನ್ನಾಗಿ ಅರ್ಥಮಾಡಿಕೋಳ್ಳಲು ಪವಿತ್ರಾತ್ಮನೇ ನಮಗೆ ಒಳ್ಳೆಯ ಸಹಾಯಕನು. ಇದು ಕ್ರಿಸ್ತನಿಂದ ನಮಗೆ ಕೋಟ್ಟ ಅಮೂಲ್ಯವಾದ ಒಂದು ವರವಾಗಿರುತ್ತದೆ.

ಆತ್ಮೀಕ ಸತ್ಯತೆಯನ್ನು ಹೇಗೆ ಪವಿತ್ರಾತ್ಮನು ನಮಗೆ ತಿಳಿಸಿಕೋಡುತ್ತಾನೆಂದು ದೇವರೇ ನಮಗೆ ವಿವರಿಸುತ್ತಾನೆ.

ಆದರೆ ಬರೆದಿರುವ ಪ್ರಕಾರ – ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ,ಅದರ ಬಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ಆಲೋಚನೆಗಳನ್ನು ಅವನಲ್ಲಿರುವ ಜೀವಾತ್ಮಕ್ಕೆ ಹೋರತು ಮತಾರಿಗೆ ತಿಳಿಯದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೋರತು ಬೇರೆ ಯಾರು ಗ್ರಹಿಸುವುದಿಲ್ಲ.

ನಾವು ಪ್ರಾಪಂಚಿಕ ಆತ್ಮವನ್ನು ಹೋಂದದೆ ದೇವರು ನಮಗೆ ದಯಪಾಲಿಸಿರುವ ಕ್ರಪಾವರಗಳನ್ನು ತಿಳಿದುಕೋಳ್ಳುವುದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೋಂದಿದೆವು. ಇವುಗಳನ್ನು ಮನುಷ್ಯಜ್ಞಾನವು ಕಲಿಸಿದ ಮಾತಿಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೋಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂದವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸಿತ್ತೇವೆ. ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ದೇವರಾತ್ಮನಿಂದ ನಡಿನಿಕೋಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳಿಕೋಳ್ಳುತ್ತಾನೆ.

ಆದರೆ ಇನನನ್ನು ಯಾವನಾದರೂ ವಿಚಾರಿಸಿ ತಿಳಿಕೋಳ್ಳುವುದಿಲ್ಲ. ಕರ್ತನ ಮನಸ್ಸನ್ನು ತಿಳಿಕೋಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆತಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು. (೧ ಕೊರಿಂಥದವರಿಗೆ ಬರೆದ ಪತ್ರ ೨: ೯–೧೬).

ಪವಿತ್ರಾತ್ಮನು ಕಲಿಸುವ ತರಗತಿಯಲ್ಲಿ ಹೆಚ್ಚು ಕಾಲ ಕಲಿತುಕೋಳ್ಳೋಣ. ಸತ್ಯವೇದದ ಕಥೆಗಳನ್ನು ಕಲಿತಿಕೊಳ್ಳುವಾಗ ಪವಿತ್ರಾತ್ಮನೇ ನಮಗೆ ವಿಷೇಶ ಜ್ಞಾನವನ್ನು ಕೊಟ್ಟು ನಮ್ಮನ್ನು ಆತ್ಮೀಕವಾಗಿ ಬೆಳೆಸಿ ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುತ್ತಾನೆ.

ಈ ಪುಸ್ತಕದ ಮೋದಲ ಭಾಗದಲ್ಲಿ ದೇವರ ವಾಕ್ಯವನ್ನು ವಿದ್ಯಾಬ್ಯಾಸ ತಿಳಿಯದೇ ಇರುವವರಿಗೆ ಯಾವ ರಿತಿಯಲ್ಲಿ ತಿಳಿಸಬೇಂದು ತಿಳಿಸಿದ್ದೇವೆ, ನಾವು ಯಾವಾಗಲು ಸತ್ಯವೇದದ ಸತ್ಯಾಂಶಗಳ ಆದಾರದ ಮೇಲೆ ಸತ್ಯವೇದದ ಕಥೆಯನ್ನು ಹೇಳುವುದು ಹಾಗು ಪ್ರಶ್ನೆಗಳನ್ನು ಕೇಳುವುದರ ಮುಖಾಂತರ ಬೋದಿಸಲು ಎಚ್ಚೆಪಡುತ್ತೇವೆ.

ಈ ಪುಸ್ತಕದ ಮುಂದಿನ ಭಾಗದಲ್ಲಿ ಕೆಲವು ಕಥೆಗಳು ಹಾಗು ಯಾವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬೇಕೆಂದು ತಿಳಿಸಿ ಅವುಗಳನ್ನು ನೀವು ಕಲಿಯಲು ಅನುವುಮಾಡಿಕೊಡುತ್ತೇವೆ. ನಿಮ್ಮಲ್ಲಿ ಕೆಲವರು ಈಗಾಗಲೆ ಮೌಖಿಕವಾಗಿ ಕಥೆಗಳನ್ನು ಹೇಳುತ್ತಿರಬಹುದು. ನೀವು ಇನ್ನು ಅನೇಕ ಗೂಡಾರ್ಥಗಳನ್ನು ಕಲಿತುಕೊಳ್ಳಬಹುದು. ಮೌಖಿಕವಾಗಿ ಕಥೆಗಳನ್ನು ಹೇಳುತ್ತರುವ ಅನೇಕ ಅಧ್ಯಾಪಕರಿಂದ ನಾವು ಕೂಡ ಅನೇಕ ಗೂಡಾರ್ಥಗಳನ್ನು ಕಲಿತುಕೊಂಡಿದ್ದೇವೆ.

ಮೌಖಿಕವಾಗಿ ಕಥೆಗಳನ್ನು ನಾವು ಕಲಿಸುವ ವಿಧಾನವೇ ಬೇರೆ ಹಾಗು ಅನೇಕರ ಹೋಸ ಅನುಭವ ಹಾಗು ಅವರ ಸಾಕ್ಷಿ ಹಾಗು ಅವರು ಕಲಿಸುವ ವಿಧಾನದಿಂದ ನೀವು ಅನೇಕ ಹೋಸ ಹೋಸ ವಿಚಾರಗಳನ್ನು ಕಲಿತುಕೋಳ್ಳಬಹುದು. ಎಸ್ ಟಿ ಎಸ್ ಮೌಖಿಕವಾಗಿ ಕಥೆಗಳನ್ನು ವಿದ್ಯಾಬ್ಯಾಸ ತಿಳಿಯದೇ ಇರುವವರಿಗೆ ಯಾವ ರೀತಿಯಲ್ಲಿ ಕಲಿಸಿಕೋಡಬೇಕೆಂದು ತಿಳಿಸುತ್ತದೆ ಅವುಗಳ ಮುಖಾಂತರ ನೀವುಗಳು ಅನೇಕ ಹೋಸ ವಿಚಾರಗಳನ್ನು ಕಲಿತುಕೋಳ್ಳಬಹುದು.

ಒಂದು ಮಗುವಾಗಿ : ಮತ್ತಾಯ ೧೮ ರಲ್ಲಿ ಯೇಸು ಕ್ರೀಸ್ತನು ವಿಶೇಶವಾಗಿ ತಿಳಿಸಿ ಹೇಳುವುದೇನೆಂದರೆ, " ನೀವು ಪರಲೋಕದಲ್ಲಿ ದೊಡ್ಡವರಾಬೇಕಾದರೆ ನೀವು ಮಕ್ಕಳ ರೀತಿಯಾಲ್ಲಿ ತಗ್ಗಿಸಿಕೋಳ್ಳಬೇಕು". ಅಂದರೆ ಮತ್ತೆ ನಾವು ಚಿಕ್ಕ ವಯಸ್ಸಿಗೆ ಹೋಗಲು ಸಾದ್ಯವಿಲ್ಲ ಆದರೆ ಯೇಸು ಕ್ರೀಸ್ತನು ಮಕ್ಕಳ ರೀತಿ ತಗ್ಗಿಸಿಕೋಳ್ಳಬೇಕೆಂದು ಹೇಳುವುದ ಹೀಂದೆ ಒಂದು ಆಳವಾದ ಅರ್ಥವಿದೆ. ಅಂದರೆ ಮಕ್ಕಳು ಎಲ್ಲಾ ವಿಚಾರಗಳನ್ನು ಬಹಳ ಸಲಿಸಾಗಿ ಕಲಿಯಲು ಪ್ರಯತ್ನಿಸಿತ್ತಾರೆ ಹಾಗು ಆಗೆ ಮಾಡುತ್ತಾರೆ. ಹೋಸ ವಿಚಾರಗಳನ್ನು ಕಲಿಯಲು ಪ್ರಯತ್ನಿಸುತ್ತಾರೆ.

ನೀವು ಗಮನಿಸಿರಬಹುದು ಹಿರಿಯರ ಪ್ರೋತ್ಸಾಹದಿಂದ ಬೆಳೆಯುವ ಮಕ್ಕಳು ಶ್ರದ್ದೆಯಿಂದ ಕೇಳಿ ಅದನ್ನು ಹಾಗೆ ಮಾಡಲು ಪ್ರಯತ್ತಿಸುತ್ತಾರೆ. ದೇವರು ನಮ್ಮೆಲ್ಲರನ್ನು ಅದೇ ರೀತಿ ನಮ್ಮ ಚಿಕ್ಕ ವಯಸ್ಸನ್ನು ಆದು ಹೋಗುವ ಹಾಗೆ ಮಾಡಿದ್ದಾನೆ. ನಾವು ಚಿಕ್ಕ ವಯಸ್ಸಿನಲ್ಲಿ ಕಲಿತಿರುವುದು ಇನ್ನೂ ಜ್ಞಾಪನದಲ್ಲಿರುವ ಹಾಗೆ ಮಾಡಿದ್ದಾನೆ. ನಾವು ಅನೇಕ ಸಲ ನೋಡಿರುವುದನ್ನು ಹಾಗು ಚಿಕ್ಕ ವಯಸ್ಸಿನಲ್ಲಿ ಕಲಿತಿರುವುದರ ಮೂಲಕ ನಮ್ಮ ಜೀವನವನ್ನು ನಡೆಸಲು ಪ್ರಯತ್ನಿಸುತ್ತೇವೆ.

ಎಸ್ ಟಿ ಎಸ್ ಕಲಕರಣೆಗಳ ಮೂಲಕ ಕಲಿಯಲು ನೀವು ೧೦ ವರ್ಷದ ಮಗುವಾಗಿ ಯೋಚಿಸಿ, ಇದನ್ನು ಅಭ್ಯಾಸ ಮಾಡಲು ಪ್ರಯತ್ನಿಸಬೇಕು. ನೀವು ೧೦ ವರ್ಷದ ಮಗುವಾಗಿರುವಾಗ ಯಾವರೀತಿಯಲ್ಲಿ ಹೊಸ ವಿಷಯಗಳನ್ನು ಕಲಿಯುತಿದ್ದೀರೆಂದು ಜ್ಞಾಪನಮಾಡಿಕೋಳ್ಳಿ. ಅನೇರೀತಿ ನಿಮ್ಮ ಸತ್ಯವೇದ ಜ್ಞಾನವನ್ನು ವೃದ್ದಿಮಾಡಿಕೊಳ್ಳಬಹುದು.

ಅಧ್ಯಾಯ 3

ಕಥೆ ಮಾತ್ರ (ಸಿಂಪ್ಲಿ ದ ಸ್ಟೊರಿ) – ಚಿಕ್ಕ ಪುನರ್‌ಪರಿಶೀಲನೆ

ಸಿದ್ಧತೆ

ಸತ್ಯವೇದದ ಒಂದು ಕಥೆಯನ್ನು ಸುಲಭವಾಗಿ ಕಲಿತುಕೊಳ್ಳುವುದು ಮತ್ತು ಇದರಲ್ಲಿ ಒಳಗೊಂಡಿರುವ ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದು, ಇವುಗಳನ್ನು *ಕಥೆ ಮಾತ್ರವು* ಒಳಗೊಂಡಿದೆ. ನಂತರ *ಕಥೆ ಮಾತ್ರದ* ನಿರ್ದೇಶನದನುಸಾರವಾಗಿ ಪ್ರಶ್ನೆಗಳನ್ನು ರಚಿಸುವುದು.

ನಿರೂಪಣೆ

ಬೋಧನೆಯ ಎರಡು ಭಾಗಗಳು ಸಂಭವಿಸುತ್ತವೆ: ಮೊದಲು ಕಥೆಯನ್ನು ಹೇಳುವುದು. ಎರಡನೆಯದು, ನಿಧಿಗಳನ್ನು ಕಂಡುಹಿಡಿಯುವುದು.

ಮೊದಲ ಹಂತ: ಕೇಳುವಂತವರು ಕಥೆಯ ಅಂಶಗಳೊಂದಿಗೆ ಸಂಪೂರ್ಣವಾಗಿ ಪರಿಚಿತರಾಗುವಂತೆ ಕಥೆಯನ್ನು ಮೂರು ಬಾರಿ ನಿರೂಪಿಸುವುದು. ಕಥೆಯ ನಿರೂಪಣೆಯಲ್ಲಿ ಅಗತ್ಯವಿರುವ ಕೌಶಲ: ಕಥೆಯನ್ನು ಚೆನ್ನಾಗಿ ಹೇಳುವ ಸಾಮರ್ಥ್ಯ, ಸ್ವಯಂ ಸೇವಕರನ್ನು ಪ್ರೋತ್ಸಾಹಿಸುವುದು ಮತ್ತು ಕಥೆಯ ಅಂಶಗಳನ್ನು ಆಸಕ್ತಿಕರವಾದ ರೀತಿಯಲ್ಲಿ ಪುನರ್‌ಪರಿಶೀಲನೆ ಮಾಡುವುದು.

1. ಕಥೆ ಹೇಳು: ಕಥೆ ಹೇಳುವವರು ಕಥೆಯನ್ನು ಹೇಳುತ್ತಾರೆ. (ಮೊದಲ ಬಾರಿ ಹೇಳುವಂತಹುದು ಕೇಳುವವರಿಗೆ ಕಥೆಯನ್ನು ಚಿತ್ರಣ ಮಾಡಿಕೊಳ್ಳಲು ಮತ್ತು ಅದರ ಪರಿಣಾಮದ ಅನಿಸಿಕೆಯನ್ನು ಅನುಭವಿಸುವಂತೆ ಮಾಡುತ್ತದೆ).

2. ಸ್ವಯಂ ಸೇವಕರಿಂದ ಕಥೆ ಹೇಳಿಸು: ಕಥೆ ಹೇಳುವವರು ಈ ಕಥೆಯನ್ನು ಪುನಃ ಹೇಳುವಂತೆ ಒಬ್ಬ ಸ್ವಯಂಸೇವಕನಿಗೆ ಹೇಳುವರು ಅಥವಾ ಕೇಳಿಸಿಕೊಳ್ಳುವವರು ಒಬ್ಬರೊಂದಿಗೆ ಒಬ್ಬರು ಇದನ್ನು ಪುನಃ ಹೇಳುವಂತೆ ಕೇಳುವರು. (ಕೇಳಿಸಿಕೊಳ್ಳುವವರು ತನ್ನ ಜೊತೆಯವರು ಕಥೆಯನ್ನು ಸರಿಯಾಗಿ ಹೇಳುತ್ತಿರುವರೇ ಎಂದು ಗಮನವಿಟ್ಟು ಕೇಳುತ್ತಾರೆ, ಇದು ಕಥೆಯನ್ನು ಕೇಳಿಸಿಕೊಳ್ಳುವವರ ನೆನಪಿನೊಳಗೆ ಆಳವಾಗಿ ನೆಡಲ್ಪಡುವಂತೆ ಸಹಾಯ ಮಾಡುತ್ತದೆ ಅಷ್ಟೇ ಅಲ್ಲದೆ ಕಥೆ ಹೇಳುವಾಗ ನೀನು ಕೂಡ ಅವರ ಕಡೆ ಸಂಪೂರ್ತಿಯಾಗಿ ಗಮನವಿಡು.)

3. ಕಥೆಯಲ್ಲಿ ನಡೆಸು: ಕಥೆ ಹೇಳುವವರು ಮೂರನೆಯ ಬಾರಿ ಕಥೆಯ ಮೂಲಕ ಎಲ್ಲಾ ಕೇಳುಗರನ್ನು ನಡೆಸುವರು. ಈ ಕೊನೆಯ ಬಾರಿ ಪುನಃ ಹೇಳುವುದರಲ್ಲಿ, ಕಥೆ ಹೇಳುವವರು ವಿವಿಧ ವಿಧಾನಗಳನ್ನು ಉಪಯೋಗಿಸಿಕೊಂಡು ಒಂದು ಸಂಪೂರ್ಣವಾದ ಮತ್ತು ನಿಖರವಾದ ಕಥೆಯನ್ನು ಕೇಳುಗರ ಸಹಾಯದಿಂದ ಪುನಃ ಹೇಳಲ್ಪಡುವಂತೆ ಅವರಲ್ಲಿ ಪ್ರತಿಯೊಬ್ಬರೂ ಇದರಲ್ಲಿ ಭಾಗಿಗಳಾಗುವಂತೆ ಮಾಡುವರು.

<u>ಎರಡನೆಯ ಹಂತ</u>: ಕಥೆ ಹೇಳುವವರು ಕಥೆಯಲ್ಲಿನ "ಆತ್ಮೀಕ ನಿಧಿಗಳ" ಕಡೆಗೆ ಕೇಳುಗರನ್ನು ನಡೆಸುವರು. ಆದರೆ ಈಗ ಕಥೆ ಹೇಳುವವರು ಕೇಳುಗರನ್ನು ಪುನಃ ಕಥೆ ಹೇಳುವಂತೆ ಕೇಳುವುದಿಲ್ಲ. ಅದರ ಬದಲು, ಪ್ರತಿ ಹೊಸ ವಿಭಾಗವು ಪರೀಕ್ಷಿಸಲ್ಪಡುವುದಕ್ಕೂ ಮುನ್ನ, ಪರಿಶೋಧನೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಂಬಂಧವಿರುವ ಕಥೆಯ ಒಂದು ಚಿಕ್ಕ ಭಾಗವನ್ನು ಪುನಃ ಹೇಳುತ್ತಾರೆ.

1. **ಆತ್ಮೀಕ ಅವಲೋಕನಗಳು:** ಮೊದಲು **ಸರಳವಾದ ಪ್ರಶ್ನೆಗಳನ್ನು ಕೇಳುವುದರ ಮೂಖಾಂತರ ಅವರನ್ನು ಪ್ರೋತ್ಸಾಹಿಸಬೇಕು**
ಹಾಗು ಪ್ರಶ್ನೆಗಳ ಮುಖಾಂತರ, ಆತ್ಮೀಕ ಮಾಹಿತಿಯನ್ನು ಕಂಡುಹಿಡಿಯುವುದಕ್ಕೆ ಕಥೆ ಹೇಳುವವರು ಕೇಳುಗರನ್ನು ಪ್ರೋತ್ಸಾಹಿಸುವರು. (ಕೇಳುಗರು ಕಥೆಯಲ್ಲಿನ ಪಾತ್ರಗಳ ಚಟುವಟಿಕೆಗಳ ಕಡೆಗೆ ದೃಷ್ಟಿಯನ್ನು ಹರಿಸುವುದಕ್ಕೆ ಆಹ್ವಾನಿಸಲಾಗುತ್ತದೆ. ನಂತರ, ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ, ಜನರ ಕುರಿತಾಗಿ ತಾವು ಏನು ಕಲಿಯುತ್ತಿರುವೆವು ಮತ್ತು ದೇವರು ಜನರೊಂದಿಗೆ ಹೇಗೆ ಕಾರ್ಯಮಾಡುತ್ತಿರುವನು ಹಾಗೂ ಕಥೆಯಲ್ಲಿನ ಘಟನೆಗಳ ಕುರಿತಾಗಿ ಕೇಳುಗರು ಹಂಚಿಕೊಳ್ಳುತ್ತಾರೆ. ಇವುಗಳನ್ನು ನಾವು "ಆತ್ಮೀಕ ಅವಲೋಕನಗಳು" ಎಂದು ಕರೆಯುತ್ತೇವೆ.)

2. **ಆತ್ಮೀಕ ವಯಕ್ತಿಕ ಅನ್ವಯಿಸಿಕೋಳ್ಳುವುದು:** ಎರಡನೆಯದು, ಕಂಡುಹಿಡಿಯಲ್ಪಟ್ಟಿರುವ ಆತ್ಮೀಕ ಅವಲೋಕನಗಳ ಆಧಾರದ ಮೇಲೆ, ಜನರ ಇಂದಿನ ಜೀವಿತಗಳಿಗಾಗಿ ಅನ್ವಯಿಸುವಿಕೆಗಳನ್ನು ಹುಡುಕಲಾಗುತ್ತದೆ. (ಕೇಳುಗರು ಕಂಡುಹಿಡಿಯುವಂತೆ ಮತ್ತು ಹಂಚಿಕೊಳ್ಳುವಂತೆ ನಡೆಸಲ್ಪಡುವುದಕ್ಕೆ ಕಥೆ ಹೇಳುವವರು ಪ್ರಶ್ನೆಗಳನ್ನು ಉಪಯೋಗಿಸುವರು. ನಾವು ಆ ಕಂಡುಹಿಡಿಯುವಿಕೆಗಳನ್ನು "ಆತ್ಮೀಕ ಅನ್ವಯಿಸುವಿಕೆಗಳು" ಎಂದು ಕರೆಯುತ್ತೇವೆ.).

ಅಧ್ಯಾಯ 4: ಕಥೆಯನ್ನು ಹೇಗೆ ಸಿದ್ಧಪಡಿಸುವುದು

ಕಥೆ ಮಾತ್ರದ ವಿಧಾನ

***ಕಥೆ ಮಾತ್ರದ* ಶೈಲಿಯನ್ನು ಉಪಯೋಗಿಸಿಕೊಂಡು ಬೋಧಿಸಲು ಮೂರು ಕೌಶಲ್ಯಗಳ ಅಗತ್ಯವಿದೆ:**

1. ಒಂದು ಕಥೆಯನ್ನು ಹೇಗೆ ಸಿದ್ಧಪಡಿಸುವುದು ಮತ್ತು ಇದನ್ನು ಚೆನ್ನಾಗಿ ಹೇಳುವುದು ಹೇಗೆ?

2. ಕಥೆಯಲ್ಲಿನ ನಿಧಿಗಳನ್ನು ಕಂಡುಹಿಡಿಯುವುದು ಹೇಗೆ?

3. ಒಳದೃಷ್ಟಿಯುಳ್ಳ ಪ್ರಶ್ನೆಗಳನ್ನು ರಚಿಸುವುದು ಮತ್ತು ಕೇಳುವುದು ಹೇಗೆ?

ಕೌಶಲ್ಯ 1: ನಿಮ್ಮ ಕಥೆಯನ್ನು ಹೇಗೆ ಸಿದ್ಧಪಡಿಸುವುದು ಮತ್ತು ಇದನ್ನು ಚೆನ್ನಾಗಿ ಹೇಳುವ ರೀತಿ

ಕಥೆ ಮಾತ್ರದ ಪ್ರಕ್ರಿಯೆಯ ಮೂಲಕ ನೀವು ಹಾದು ಹೋಗುತ್ತಿರುವಾಗ, ಮೇಲಿನ ಎಲ್ಲವುಗಳನ್ನು ಹಿಂಬಾಲಿಸುವುದಕ್ಕಿರುವ ಒಂದು ಮಾರ್ಗದರ್ಶನವೆಂದರೆ ಅದು ದೇವರ ವಾಕ್ಯದಲ್ಲಿ ಭರವಸೆ ಇಡುವುದು. ಸತ್ಯವೇದದಲ್ಲಿನ ಕಥೆಗಳು, ದೇವರು ಅವುಗಳನ್ನು ಬರೆದಿರುವ ಹಾಗೆಯೇ ಅವುಗಳ ಸಂಪೂರ್ಣತೆಯಿಂದ ಹೇಳಲ್ಪಟ್ಟಿದೆ ಎಂದು ಭರವಸೆ ಇಡಿ. ಸತ್ಯವೇದದ ಒಂದು ಕಥೆಯನ್ನು ಹೇಳುವಾಗ, ಯಾವುದೇ ಮಾಹಿತಿಯನ್ನು ಸೇರಿಸಬೇಡಿ, ಅಲ್ಲಿರುವ ಯಾವುದನ್ನೂ ಬಿಡಬೇಡಿ, ಮತ್ತು ನೀವು ಇದನ್ನು ಹೇಳುವಾಗ ಕಥೆಯಲ್ಲಿನ ಅಂಶಗಳನ್ನು ಬೋಧಿಸಬೇಡಿ ಅಥವಾ ವಿವರಿಸಬೇಡಿ.

ಸತ್ಯವೇದದ ಕಥೆಗಳ ಆಯ್ಕೆ

ಕೆಲವು ಸಂದರ್ಭಗಳಲ್ಲಿ, ನೀವು ಒಂದು ನಿರ್ದಿಷ್ಟವಾದ ಕಥೆಯನ್ನು ಅಥವಾ ಸತ್ಯವೇದದ ವಾಕ್ಯಭಾಗವನ್ನು ಹೇಳಬೇಕೆಂದು ನಿಮ್ಮ ನಾಯಕರಿಂದ ಆಜ್ಞಾಪಿಸಲ್ಪಟ್ಟಿರುತ್ತದೆ. ಆದಾಗ್ಯೂ ಸಹ, ನೀವು ನಿಮ್ಮದೇ ಆದ ಸ್ವಂತ ಕಥೆಗಳನ್ನು ಆರಿಸುತ್ತಿರುವಾಗ, ಅದಕ್ಕಾಗಿ ಇಲ್ಲಿ ಕೆಲವು ಮಾರ್ಗದರ್ಶನಗಳನ್ನು ಕೊಡಲಾಗಿದೆ.

1. ನೀವು ಒಂದು ನಿರ್ದಿಷ್ಟವಾದ ಗುಂಪಿಗೆ ಸತ್ಯವೇದದ ಕಥೆಗಳನ್ನು ಹೇಳುವುದಕ್ಕೆ ನಿಮಗೆ ಕೇವಲ ಒಂದು (ಅಥವಾ ಕೆಲವು ಮಾತ್ರ) ಅವಕಾಶವಿರುವಾಗ, ಆ ಗುಂಪಿನ ವಯಸ್ಸಿನವರಿಗನಗುಣವಾಗಿ ಸೂಕ್ತವಾಗಿರುವ ಮತ್ತು ಲಭ್ಯವಿರುವ ಸಮಯಕ್ಕನುಗುಣವಾಗಿರುವ ಅಂಶಗಳುಳ್ಳ ಕಥೆಗಳನ್ನು ಆರಿಸಿಕೊಳ್ಳಿ. ಅಲ್ಲಿ ಸೇರಿ ಬರುವವರು ಕೇಳಿಸಿಕೊಳ್ಳುವ ಅಗತ್ಯವಿರುವ ಸತ್ಯಗಳನ್ನು ಹೊಂದಿರುವ ಕಥೆಗಳ ಕಡೆಗೆ ನಡೆಸುವಂತೆ ಪವಿತ್ರಾತ್ಮನಿಗಾಗಿ ಪ್ರಾರ್ಥಿಸಿಕೊಳ್ಳಿ.

2. ದೇವರು ನಮಗೆ ಸತ್ಯವೇದವನ್ನು ಕೊಟ್ಟಾಗ, ಆತನಿಗೆ ಅಸಂಖ್ಯವಾದ ಪ್ರಮಾಣಗಳಿಂದ ಕೂಡಿದ ಚಾರಿತ್ರಿಕ ಘಟನೆಗಳಿದ್ದು ಅವುಗಳಲ್ಲಿ ಆತನು ಆರಿಸಿಕೊಳ್ಳಬೇಕಾಗಿತ್ತು. ಹೌದು, ದೇವರು ಮನುಕುಲಕ್ಕಾಗಿ ಅಗತ್ಯವಾಗಿರುವ ಪರಿಪೂರ್ಣವಾಗಿರುವುಗಳನ್ನು ತನ್ನ ಜ್ಞಾನದಿಂದ ಆಯ್ಕೆ ಮಾಡಿದನು. ನಮ್ಮ ದೇವರೇ ಎಲ್ಲಾ ಜನರನ್ನು ಉಂಟುಮಾಡಿದ್ದರಿಂದ, ಆತನು ಅವರ ಅಗತ್ಯತೆಗಳನ್ನು ತಿಳಿದಿದ್ದನು. ಹಾಗೂ, ಜನರು ಬೆಳೆಸಿಕೊಳ್ಳಬಹುದಾದ ಪ್ರತಿಯೊಂದು ಸಂಸ್ಕೃತಿ ಮತ್ತು ನಂಬಿಕೆಯ ವಿಧಾನವನ್ನು ದೇವರು ತನ್ನ ಸರ್ವಜ್ಞಾನದಲ್ಲಿ ತಿಳಿದವನಾಗಿದ್ದನು.

ಸತ್ಯವೇದವು ಶ್ರೇಷ್ಠವಾದ) ಸಾಂಸ್ಕೃತಿಯನ್ನು ಹೊಂದಿದೆ. ಅಂದರೆ, ಇದರ ಅಂಶಗಳು ಎಲ್ಲಾ ಸಂಸ್ಕೃತಿಗಳಿಗಿಂತಲೂ ಉನ್ನತವಾಗಿರುವಂತಹುದಾಗಿದೆ. ಎಲ್ಲಾ ಜನರಿಗಾಗಿ ಪ್ರತಿಯೊಂದು ಕಥೆಯಲ್ಲಿಯೂ ದೇವರಿಗೆ ಕೆಲವು ಆತ್ಮೀಕವಾದ ಮೌಲ್ಯಗಳಿವೆ ಎಂಬುದಾಗಿ ಕಥೆಯನ್ನು ಹೇಳುವವರಿಗೆ ಸಲಹೆ ಕೊಡುವುದಕ್ಕಾಗಿ ನಾವು ಇದನ್ನು ಹೇಳುತ್ತೇವೆ.

ಒಂದು ಗುಂಪಿಗೆ "ತಪ್ಪಾದ" ಕಥೆಯನ್ನು ಆಯ್ಕೆ ಮಾಡಿರುವಿರಿ ಅಂದುಕೊಂಡು ಅತಿಯಾದ ಕಾಳಜಿಯನ್ನು ಮಾಡಬೇಡಿ. ನೀವು ಆಯ್ಕೆ ಮಾಡಿದ ಕಥೆಯನ್ನು ನೀವು ಹೇಳುವಾಗ, ಅಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೆ ಪವಿತ್ರಾತ್ಮನು ತನ್ನ ಸಂದೇಶವನ್ನು ಕೊಡುತ್ತಾನೆಂಬುದನ್ನು ಅರ್ಥ ಮಾಡಿಕೊಳ್ಳಿರಿ.

3. *ಕಥೆ* ಮಾತ್ರದಲ್ಲಿ ಸುವಾರ್ತೆ ಸಾರುವುದಕ್ಕಾಗಿ ಮತ್ತು ಬೋಧನೆ ಮಾಡುವುದಕ್ಕಾಗಿ ನಾವು ಕೆಲವು ಕಥೆಗಳನ್ನು ಮೊದಲೇ ಆಯ್ಕೆ ಮಾಡಿರುವುದಿಲ್ಲ. ಇದಕ್ಕನುಗುಣವಾಗಿ, *ಕಥೆ* ಮಾತ್ರದಲ್ಲಿನ ಅನ್ವಯಿಸುವಿಕೆಯಲ್ಲಿ ಪವಿತ್ರಾತ್ಮನು ಎಲ್ಲಾ ಕಥೆಗಳ ಮೂಲಕ ಶಿಷ್ಯತ್ವಕ್ಕೆ ನಡೆಸುತ್ತಾನೆ ಮತ್ತು ಜನರು ದೇವರಲ್ಲಿ ನಂಬಿಕೆ ಇಡುವಂತೆ ಮಾಡುತ್ತಾನೆ ಎಂಬ ಸಾಕ್ಷಿಗಳನ್ನು ನೋಡುತ್ತೇವೆ.

4. ನೀವು ಒಂದೇ ಗುಂಪಿಗೆ ಕಥೆಗಳನ್ನು ಹೇಳುವುದಕ್ಕೆ ಅನೇಕ ಅವಕಾಶಗಳನ್ನು ಪಡೆಯುವುದಾದರೆ, ಆಗ ಸತ್ಯವೇದದ ಪ್ರಾರಂಭದಿಂದ ಶುರು ಮಾಡುವುದು ಉತ್ತಮವಾಗಿರುತ್ತದೆ. ಸತ್ಯವೇದದ ಅನೇಕ ಕಥೆಗಳು ಅವುಗಳಿಗಿಂತ ಮೊದಲಿರುವ ಕಥೆಗಳ ಮಾಹಿತಿಯ ಮೇಲೆ ಕಟ್ಟಲ್ಪಟ್ಟಿರುವುದರಿಂದ, ಸಾಧ್ಯವಾದಾಗಲೆಲ್ಲಾ ಕಥೆಗಳನ್ನು ಅವುಗಳ ಕ್ರಮಗಳಿಗನುಸಾರವಾಗಿ ಆಯ್ಕೆ ಮಾಡಿ ಹೇಳುವುದು ಜ್ಞಾನವಾಗಿದೆ.

ಕಥೆ ಹೇಳುವುದರಲ್ಲಿ, ಮತ್ತು ಕಥೆಗಳನ್ನು ರೆಕಾರ್ಡ್ ಮಾಡುವುದರಲ್ಲಿ, ನೀವು ನಡೆಸಲ್ಪಡುವುದಾದರೆ ಕೆಲವು ಕಥೆಗಳನ್ನು ಬಿಟ್ಟುಬಿಡಬಹುದು, ಆದರೆ ನೀವು ಇದನ್ನು ಮಾಡಿದರೆ, ನೀವು ಮುಂದಿನ ಕಥೆಗಿರುವ ಸಂಪರ್ಕವನ್ನು ಸುಲಭವಾಗಿ ಮಾಡುವುದಕ್ಕೆ ಬಹುಶಃ ಒಂದು ಪರಿಚಯವನ್ನು ಮಾಡಲು ಬಯಸುತ್ತಿರಬಹುದು. ನೀವು ಯಾವುದೇ ಕಥೆಗಳನ್ನು ಬಿಟ್ಟುಬಿಡದೆ ಹೇಳುವಾಗ, ಆ ಸಮಯಗಳಲ್ಲಿ ಕೇಳಿಸಿಕೊಳ್ಳುತ್ತಿರುವವರಿಗೆ ನೀವು ಮುಂದೆ ಹೇಳಲಿರುವ ಕಥೆಗಾಗಿ ಮೊದಲೇ ಹೇಳಿದ ಕಥೆಗಳ ಜ್ಞಾಪಕವನ್ನು ಮಾಡುತ್ತಾ ಅವರನ್ನು ಸಿದ್ಧಪಡಿಸುವುದು ಜ್ಞಾನವಾಗಿರುತ್ತದೆ.

5. ಕಥೆಯು ದೊಡ್ಡದಾಗಿರುವಾಗ, ಒಂದುವೇಳೆ ೨೫ ವಚನಗಳಿಗಿಂತಲೂ ಹೆಚ್ಚಾಗಿರುವಾಗ, ನೀವು ಇದನ್ನು ಎರಡು ಭಾಗಗಳಾಗಿ ವಿಂಗಡಿಸಲು ಬಯಸಬಹುದು. ಇದು ಕೇಳಿಸಿಕೊಳ್ಳುವವರು ಹೆಚ್ಚು ಕಲಿತುಕೊಳ್ಳುವುದಕ್ಕೆ ಮತ್ತು ಇದರ ಕುರಿತಾಗಿ ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತದೆ. ಇದನ್ನು ಇದರ ಸ್ವಾಭಾವಿಕವಾದ ಸ್ಥಳಗಳಲ್ಲಿ ವಿಭಾಗ ಮಾಡಿ, ಇದು ವಾಕ್ಯಭಾಗದ ಮಧ್ಯಭಾಗದಲ್ಲಿಯೇ ಆಗಬೇಕೆಂಬ ಅಗತ್ಯವಿಲ್ಲ, ಎಲ್ಲರೂ ಸೇರಿ ಹಿಂದಿನ ಕಥೆಯಲ್ಲಿರುವ ಬಾಗವನ್ನು ಜ್ಞಾಪನಪಡಿಸಿಕೋಳ್ಳಿ

6. ಉದಾಹರಣೆಗೆ, ನಿಮಗೆ ಚರ್ಚೆಯನ್ನು ಮುಗಿಸುವುದಕ್ಕೆ 3 ತಾಸುಗಳ ಸಮಯವಿದ್ದರೆ, 2 ಅರಸುಗಳು 4:1-27ರಲ್ಲಿರುವ ನಾಮಾನನ ಕಥೆಯನ್ನು *ಕಥೆ* ಮಾತ್ರದ ಶೈಲಿಯಲ್ಲಿ ಹೇಳುವುದಕ್ಕೆ ಒಂದು ಅದ್ಭುತವಾದ ಕಥೆಯಾಗಿದೆ! ವಾಸ್ತವವಾಗಿ, ನಾಮಾನನ ಕಥೆಯೊಳಗೆ ನಾಲ್ಕು ವಿವಿಧ ಕಥೆಗಳಿವೆ. ಈ ದೊಡ್ಡ ಕಥೆಯು ಮುಂದೆ ಹೇಳಲ್ಪಟ್ಟಿರುವ ವಚನಗಳಲ್ಲಿ ಸ್ವಾಭಾವಿಕವಾದ ವಿರಾಮವನ್ನು ಹೊಂದಿವೆ: 1-5, 6-14, 15-19, ಮತ್ತು 20-27.

7. ಕೆಲವು ಕಥೆಗಳು ಬಹಳ ಉದ್ದವಾದ ಪಟ್ಟಿಯನ್ನು ಒಳಗೊಂಡಿರುತ್ತವೆ, ಅಂದರೆ ಅದು ಪಟ್ಟಣಗಳಾಗಿರಬಹುದು ಅಥವಾ ಹೆಸರುಗಳಾಗಿರಬಹುದು. ಕಥೆಯು ಉದ್ದವಾಗಿದ್ದರೆ, ಪಟ್ಟಿಯು ಪ್ರಾರಂಭವಾಗುವುದಕ್ಕೂ ಮುನ್ನವೇ ಎರಡು ಕಥೆಗಳಾಗಿ ವಿಂಗಡಿಸಿ. ನಂತರ, ನಿಮ್ಮ ಎರಡನೇ ಕಥೆಯ ಪರಿಚಯದಲ್ಲಿ, ಪಟ್ಟಿಯ ಕುರಿತಾಗಿ ತಿಳಿಸಿ. ಬಹುಶಃ ಹೀಗೆ ಹೇಳಿ, "ಒಟ್ಟಾಗಿ ಸೇರುವುದಕ್ಕೆ 14 ವಿವಿದ ದೇಶಗಳಿಂದ ಪ್ರಜೆಗಳು ಬಂದರು." ನಂತರ ಈ ಪಟ್ಟಿಯ ಮುಕ್ತಾಯದ ನಂತರ ಎರಡನೇ ಕಥೆಯನ್ನು ಹೇಳುವುದಕ್ಕೆ ಪ್ರಾರಂಭಿಸಿ.

> ಮಾಹಿತಿಯನ್ನು ಈ ರೀತಿ ನಿರೂಪಿಸುವುದರಿಂದ, ವಾಕ್ಯಕ್ಕೆ ನಿಖರವಾಗಿರುವಂತಹ ಸತ್ಯವೇದದ ಎರಡು ಕಥೆಗಳನ್ನು ನೀವು ಹೇಳಿರುವಿರಿ. ಹೊಸದಾಗಿ ಕಥೆ ಹೇಳುವವರಿಗಾಗಿ ಮತ್ತು ಕಲಿಯುವವರಿಗಾಗಿ, ಈ ರೀತಿ ಕಥೆಗಳನ್ನು ವಿಂಗಡಿಸುವುದರಿಂದ ಆ ಕಥೆಯನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಲು ಅವರಿಗೆ ಸಹಾಯವನ್ನು ಮಾಡುತ್ತದೆ. ಕಥೆ ಹೇಳುವವರು ತಮ್ಮ ತಲಾಂತನ್ನು ಬೆಳೆಸಿಕೊಂಡಂತೆಲ್ಲಾ, ಅವರು ಪುನಃ ಪ್ರಾರಂಭಕ್ಕೆ ಬರಬಹುದು ಮತ್ತು ಎರಡು ಕಥೆಗಳನ್ನು ಸೇರಿಸಬಹುದು ಅಥವಾ ಎಲ್ಲಾ ಹೆಸರುಗಳನ್ನು ಸೇರಿಸಿಕೊಳ್ಳುವುದಕ್ಕೆ ನಿರ್ಧರಿಸಬಹುದಾಗಿದೆ.

ಈಗ ನೀವು ಒಂದು ಕಥೆಯನ್ನು ಆಯ್ಕೆ ಮಾಡಿಕೊಂಡಿರುವಿರಿ, ಇದನ್ನು ಹೇಳುವುದಕ್ಕೆ ಕೆಲವು ಮಾರ್ಗಗಳ ಕುರಿತಾಗಿ ನಾವು ಪರೀಕ್ಷೆ ಮಾಡಿಕೊಳ್ಳೋಣ.

1. ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಹಾಗೂ ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ನಿಖರವಾಗಿ ಹೇಳುವುದಕ್ಕೆ ಮತ್ತು ಉತ್ಸಾಹದಿಂದ ಹೇಳುವುದಕ್ಕೆ ದೇವರಲ್ಲಿ **ಪ್ರಾರ್ಥಿಸಿ.**

2. **ಇಡೀ ಕಥೆಯನ್ನು ಒಮ್ಮೆ ಮಹಾಶಬ್ದದಿಂದ ಓದಿ** (ಅಥವಾ ಇದನ್ನು ಹೇಳುವಾಗ ಅಥವಾ ಓದುವಾಗ ಕೇಳಿಸಿಕೊಳ್ಳಿ) ಅದನ್ನು ಓದುತ್ತಿರುವಾಗ, ಕೆಲವು ಪದಗಳನ್ನು ನೀವು ಬದಲಾಯಿಸಲು ಬಯಸಬಹುದು. ನಿಮ್ಮ ಗುಂಪಿನ ನಿರ್ದಿಷ್ಟ ಜನರು ತಮ್ಮನ್ನು ವ್ಯಕ್ತಪಡಿಸಿಕೊಳ್ಳುವುದಕ್ಕೆ ಉಪಯೋಗಿಸುವಂತಹ ಪದಗಳನ್ನು ನಿಮ್ಮ ಕಥೆಗಾಗಿ ಆಯ್ಕೆ ಮಾಡಿಕೊಳ್ಳಿ. ಉದಾಹರಣೆಗೆ, ಭಯಭೀತರಾದರು ಎಂದು ಹೇಳುವುದರ ಬದಲಾಗಿ, "ಹೆದರಿಕೊಂಡರು" ಅಥವಾ "ಭಯಪಟ್ಟರು" ಎಂದು ಹೇಳಲು ನೀವು ನಿರ್ಧರಿಸಬಹುದು. ಹೆಚ್ಚಿನ ಸಂಭಾಷಣೆಗನುಸಾರವಾದ ಭಾಷೆಯನ್ನು ಉಪಯೋಗಿಸುವುದಕ್ಕೆ ನೀವು ಪಡುವ ಶ್ರಮದಲ್ಲಿ, ಕಥೆಯ ಅಂಶವನ್ನು ಅದೇ ರೀತಿಯಾಗಿ ಕಾಪಾಡಿಕೊಳ್ಳುವುದಕ್ಕೆ ಅತಿಹೆಚ್ಚಿನ ಕಾಳಜಿಯನ್ನು ಉಪಯೋಗಿಸಿ!

ನೀವು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಮಾತನಾಡುವ ಮತ್ತು ಓದುವ ಜನರಾಗಿದ್ದರೆ, ಕಥೆಯನ್ನು ಜೋರಾಗಿ ಓದಿ, ಕಲಿತುಕೊಳ್ಳುವಂತಹ ವಿಶೇಷವಾದ ಅವಕಾಶವಿರುತ್ತದೆ. ನೀವು ಯಾವ ಭಾಷೆಯಲ್ಲಿ ಕಥೆಯನ್ನು ಹೇಳಲಿರುವಿರೋ ಆ ಭಾಷೆಯಲ್ಲಿ ಬರೆಯಲ್ಪಟ್ಟಿರದಂತಹ ಸತ್ಯವೇದದ ಕಥೆಯನ್ನು ಜೋರಾಗಿ ಓದಿ.

ಉದಾಹರಣೆಗೆ, ನೀವು ಹಿಂದಿ ಭಾಷೆಯನ್ನು ಓದಬಲ್ಲವರಾದರೆ, ಮತ್ತು ಕಥೆಯನ್ನು ಇಂಗ್ಲೀಷ್ ಭಾಷೆಯಲ್ಲಿ ಹೇಳಬೇಕೆಂದಿದ್ದರೆ, ಹಿಂದಿಯ ಕಥೆಯನ್ನು ನೋಡಿ ಮತ್ತು ಅದನ್ನು ಇಂಗ್ಲೀಷ್‌ನಲ್ಲಿ ಜೋರಾಗಿ ಹೇಳಿ. ಈ ರೀತಿ ಹೇಳುವಾಗ, ನೀವು ಅಲ್ಲಿರುವ ಪದಗಳನ್ನೇ ನಿರ್ದಿಷ್ಟವಾಗಿ ಹೇಳಲು ಪ್ರಯತ್ನಿಸುತ್ತಿಲ್ಲ, ಆದರೆ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಮತ್ತು ಕಥೆಯನ್ನು ಕಥೆಯಾಗಿಯೇ ಹೇಳುವುದಕ್ಕೆ ಹೆಚ್ಚು ಸಂಭವವಿರುತ್ತದೆ. ಹಾಗೂ, ಸಂಭಾಷಣೆಗೆ ಅನುಗುಣವಾಗಿರುವಂತಹ ಪದಗಳನ್ನೇ ನೀವು ಸ್ವಾಭಾವಿಕವಾಗಿ ಆಯ್ಕೆ ಮಾಡಿಕೊಳ್ಳುವಿರಿ.

3. **ಸತ್ಯವೇದವನ್ನು ಮುಚ್ಚಿಡಿ ಮತ್ತು ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿ! ನೆನಪಿನಲ್ಲಿಟ್ಟುಕೊಂಡ ಕಥೆಯನ್ನು ಜೋರಾಗಿ ಹೇಳಿ.** ನಿಮಗೆ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಕಥೆಯನ್ನು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿ. ನೀವು ಹೀಗೆ ಮಾಡುವಾಗ, ನೀವು ತಪ್ಪು ಮಾಡಿದರೆ ಅಥವಾ ಮರೆತುಹೋದರೆ, ಚಿಂತಿಸಬೇಡಿ; ನಿಲ್ಲಿಸಬೇಡಿ. ಹಾಗೆಯೇ ಮುಂದುವರೆಸುತ್ತಿರಿ. ನೀವು ಬಿಟ್ಟಿರುವ ಮಾಹಿತಿಯು ನಿಮ್ಮ ನೆನಪಿಗೆ ಬಂದರೆ ಅದನ್ನು ಮುಂದಿನ ವಾಕ್ಯದಲ್ಲಿ ಸೇರಿಸಿಕೊಳ್ಳಬಹುದು. **ಇದು ಕಥೆಯನ್ನು ಹೇಳುವುದು, ಆದರೆ ಬಾಯಿಪಾಠ ಮಾಡುವುದಲ್ಲ.**

ಉದಾಹರಣೆಗೆ, ಯೇಸುವು ಪೇತ್ರ, ಯಾಕೋಬ ಮತ್ತು ಯೋಹಾನರನ್ನು ಕರೆದುಕೊಂಡು ಹೋದನು..., ಆದರೆ ತಕ್ಷಣವೇ ನೀವು ಆ ಮೂರು ಹೆಸರುಗಳನ್ನೂ ಮರೆತಿರಬಹುದು, ಆಗಲೂ ನೀವು ಯೇಸುವು ಮೂವರು ಶಿಷ್ಯರನ್ನು ಕರೆದುಕೊಂಡು ಹೋದನು ಎಂದು ಹೇಳಿ ನಂತರ, ನೀವು ಕಥೆಯನ್ನು ಹೇಳಲು ಮುಂದುವರೆಸುತ್ತಿರುವಾಗ, ನಿಮಗೆ ಅವರ ಹೆಸರುಗಳು ನೆನಪಿಗೆ ಬಂದರೆ, ಅವರನ್ನು ಎಂದು ಹೇಳುವುದರ ಬದಲು, ಅಲ್ಲಿ ಪೇತ್ರ, ಯಾಕೋಬ ಮತ್ತು ಯೋಹಾನ... ಎಂದು ಹೇಳಿ. ಕಥೆಯು ಸತ್ಯವಾಗಿಯೇ ಇರುತ್ತದೆ. (ಮುಂದಿನ ಬಾರಿ ನೀವು ಕಥೆಯನ್ನು ಹೇಳುವಾಗ, ಇದಕ್ಕೂ ಮೊದಲು ಕಥೆಯಲ್ಲಿ ಬಂದಂತಹ ಹೆಸರುಗಳನ್ನು ನೀವು ಬಹುಶಃ ನೆನಪಿನಲ್ಲಿಟ್ಟುಕೊಂಡಿರಬಹುದು!)

4. **ಇನ್ನೊಂದು ಬಾರಿ ಕಥೆಯನ್ನು ಜೋರಾಗಿ ಓದಿ.** ನೀವು ಓದುವಾಗ, ನೀವು ಸೇರಿಸಿಕೊಂಡಿರುವ ಅಥವಾ ಬಿಟ್ಟುಬಿಟ್ಟಿರುವ ಯಾವುದೇ ಮಾಹಿತಿಯನ್ನು ಗಮನಿಸಿ. ನೀವು ಎಷ್ಟು ಚೆನ್ನಾಗಿ ಕಥೆಯನ್ನು ನೆನಪಿನಲ್ಲಿಟ್ಟುಕೊಂಡಿರುವಿರಿ ಎಂದು ನಿಮಗೆ ಬಹುಶಃ ಆಶ್ಚರ್ಯವಾಗಬಹುದು.

ನಿಮ್ಮ ಕಥೆಯು ಉದ್ದವಾಗಿದ್ದರೆ (12 ಅಥವಾ 15 ವಚನಗಳಿಗಿಂತಲೂ ಹೆಚ್ಚಾಗಿದ್ದರೆ), ನೀವು ಇದನ್ನು ಎರಡು ಭಾಗಗಳಲ್ಲಿ ನೆನಪಿನಲ್ಲಿಟ್ಟುಕೊಳ್ಳಲು ಬಯಸಬಹುದು. ಅನೇಕ ಕಥೆಗಳಿಗೆ ಅನೇಕ ಸ್ವಾಭಾವಿಕವಾದ ವಿಭಾಗಗಳಿರುತ್ತವೆ. ನಿಮ್ಮ ಕಥೆಯನ್ನು ಎರಡು ದೃಶ್ಯಗಳಾಗಿ ಅಥವಾ ಚಿತ್ರಣವಾಗಿ ನೀವು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ನೆನಪಿಸಿಕೊಳ್ಳಲು ಬಯಸಬಹುದು. ನೀವು ಪದಗಳನ್ನು ಬಾಯಿಪಾಠ ಮಾಡುತ್ತಿಲ್ಲ, ಆದರೆ **ಅದೇ ಕಥೆಯನ್ನು ನಿಮ್ಮ ಮನಸ್ಸಿನಲ್ಲಿರುವ ಚಿತ್ರಣಗಳಿಂದ ನೆನಪಿಸಿಕೊಳ್ಳುತ್ತಿರುವಿರಿ.**

5. **ಪುನಃ, ಸತ್ಯವೇದವನ್ನು ಮುಚ್ಚಿಡಿ ಮತ್ತು ಕಥೆಯನ್ನು ಜೋರಾಗಿ ಹೇಳಿ.** ಹೀಗೆ ಮಾಡುತ್ತಿರುವಾಗ, ನೀವು ಇದನ್ನು ಮೊದಲ ಬಾರಿ ಹೇಳಿದ್ದಕ್ಕಿಂತಲೂ ಹೆಚ್ಚಾಗಿ ಕಥೆಯನ್ನು ನೆನಪಿಸಿಕೊಳ್ಳಲು ಸಾಧ್ಯವಾಗುತ್ತಿದೆ ಎಂಬುದನ್ನು ಕಂಡುಕೊಳ್ಳುವಿರಿ. ಮತ್ತೊಮ್ಮೆ, ಕಥೆಯನ್ನು ತೆರೆದು, ನೀವು ಯಾವುದೆ ಮಾಹಿತಿಯನ್ನು ಬಿಟ್ಟಿರುವಿರೇ ಅಥವಾ ಸೇರಿಸಿರುವಿರೇ ಎಂಬುದನ್ನು ತಿಳಿದುಕೊಳ್ಳಲು ಅದನ್ನು **ಜೋರಾಗಿ ಓದಿ.** ಸಣ್ಣ ಭಾಗಗಳನ್ನೂ ಸಹ ಸರಿಪಡಿಸುವ ಅಗತ್ಯವಿದೆ. ಕಥೆಯ ಪ್ರತಿಯೊಂದು ಭಾಗವು, ದೇವರು ನಮಗೆ ಕೊಟ್ಟಿರುವ ವಿಧಾನವಾಗಿದ್ದು, ಇದು ಮುಖ್ಯವಾದುದಾಗಿದೆ. ಮತ್ತೆ ಸತ್ಯವೇದವನ್ನು ಮುಚ್ಚಿರಿ ಮತ್ತೆ ನೀವು ಓದಿದ ಕಥೆಯನ್ನು ಜೋರಾಗಿ ಹೇಳಿರಿ.

6. **ನಿಮ್ಮ ಆರಂಭದ ಮತ್ತು ಕೊನೆಯ ಹೇಳಿಕೆಗಳನ್ನು ಆಯ್ಕೆ ಮಾಡಿರಿ.** ನಿಮ್ಮ ಕಥೆಯ ವಿಧಾನವನ್ನು ವಿಸ್ತರಿಸಿ, ಅಂದರೆ ನಿಮ್ಮ ಕಥೆಯನ್ನು ನೀವು ಎಲ್ಲಿ ಪ್ರಾರಂಭಿಸುವಿರಿ ಮತ್ತು ನಿಮ್ಮ ಕಥೆಯು ಹೇಗೆ ಮುಕ್ತಾಯಗೊಳ್ಳಬೇಕು ಎಂಬುದು. ನೀವು ಆಯ್ಕೆ ಮಾಡಿದಂತಹ ಕಥೆಯು ಹೇಳುವುದಕ್ಕೆ ಸುಲಭವಾಗಿರಬಹುದು, ಅದರರ್ಥ ಆರಂಭದಿಂದ ಮುಕ್ತಾಯದವರೆಗೂ ಒಂದೇ ರೀತಿಯಾಗಿ ಹೋಗುವಂತಹ ಕಥೆ. ನಿಮ್ಮ ಕಥೆಯ ಹಾದಿಯ ಮೇಲೆ ನೀವು

ಮನಸ್ಸಿನಲ್ಲಿ ಗುರುತಿಸಿಕೊಳ್ಳದೇ ಹೋದರೆ, ಅನೇಕ ಬಾರಿ ನಿಮ್ಮ ಕಥೆಗೆ ಕೆಲವು ಕಠಿಣವಾದ ತಾಣಗಳು, ಸ್ಥಳಗಳು ಬರುತ್ತವೆ. (ಮನಸ್ಸಿನಲ್ಲಿ ಗುರುತಿಸಿಕೊಳ್ಳುವುದರ ಕುರಿತು ಕೆಳಗೆ ನೋಡಿ.)

7. **ಮನಸ್ಸಿನ ಗುರುತುಗಳು:** ನೀವು ಪುನಃ ಹೇಳುವುದನ್ನು ಮತ್ತೊಮ್ಮೆ ಹೇಳಿದ ನಂತರ ಮತ್ತು ನಿಮ್ಮನ್ನು ಕೆಲವು ಬಾರಿ ಪರೀಕ್ಷಿಸಿಕೊಂಡ ನಂತರ, ನೆನಪಿನಲ್ಲಿಟ್ಟುಕೊಳ್ಳಲು ಕಷ್ಟವಾಗಿರುವಂತಹ ಕೆಲವು ಭಾಗಗಳನ್ನು ನೀವು ಕಂಡುಹಿಡಿಯುವಿರಿ. ಕಥೆಯಲ್ಲಿನ ಹೆಸರುಗಳು ಅಥವಾ ಇನ್ನಿತರ ಯಾವುದೇ ನಿರ್ಧಿಷ್ಟ ಭಾಗಗಳನ್ನು ನೀವು ಅನೇಕ ಬಾರಿ ಮರೆತಿದ್ದರೆ, ನಿಮ್ಮ ಕಥೆಯನ್ನು ಹೇಳುವ ರೀತಿಯಲ್ಲಿ ಕೆಲವು ಮನಸ್ಸಿನ ಗುರುತುಗಳನ್ನು ಉಪಯೋಗಿಸಿಕೊಳ್ಳುವ ಸಮಯ ಇದಾಗಿದೆ.

ಅ). ಕಥೆಯಲ್ಲಿರುವ ಪದಗಳನ್ನು, ಹೆಸರುಗಳನ್ನು, ಅಥವಾ ವಿವರಗಳನ್ನು ನೆನಪಿಸಿಕೊಳ್ಳುವುದು ನಿಮಗೆ ಕಷ್ಟವಾಗಿರುವಾಗ, ನಿಮ್ಮ ಮನಸ್ಸಿನಲ್ಲಿ ಒಂದು ಸಾಧರಣವಾದ ಚಿತ್ರಣವನ್ನು ಬರೆದುಕೊಳ್ಳಿ. (ಜೆರ್ರಿ ಲೂಕಸ್ ಎಂಬುವರು ಈ ವಿಧಾನಕ್ಕಾಗಿ ಪ್ರಸಿದ್ಧರಾದ ನೆನಪಿನ ವೈದ್ಯರಾಗಿರುವರು.)

ಉದಾಹರಣೆಗೆ, ಯೋನನ ಕಥೆಯನ್ನು ಹೇಳುತ್ತಿರುವಾಗ ಅವನ ತಂದೆಯಾದ ಅಮಿತ್ತೈಯ (Amittai) ಹೆಸರನ್ನು ನೆನಪಿಸಿಕೊಳ್ಳಲು ನಿಮಗೆ ಕಷ್ಟವಾಗಿರಬಹುದೆಂದು ಊಹಿಸಿಕೊಳ್ಳಿ. ಆಗ ನೀವು ನೆನಪು ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಪದ ಅಥವಾ ಹೆಸರಿನ ಹಾಗೆಯೇ ಉಚ್ಚರಿಸಲ್ಪಡುವ ನಿಮ್ಮ ಭಾಷೆಯಲ್ಲಿ ಯಾವುದೇ ಪದ ಅಥವಾ ಪದಗಳ ಕುರಿತಾಗಿ ಆಲೋಚಿಸಿಕೊಳ್ಳಿ.

ಆಗ ನಿಮ್ಮ ಮನಸ್ಸಿನಲ್ಲಿ ಈ ರೀತಿಯಾಗಿ ನೀವು ಗುರುತಿಸಿಕೊಳ್ಳುವುದಾದರೆ, ನಿಮಗೆ ಕಷ್ಟವಾಗಿದ್ದಂತಹ ಪದಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸುಲಭವಾಗಿರುತ್ತದೆ ಎಂಬುದನ್ನು ಕಂಡುಕೊಳ್ಳುವಿರಿ. ನೀವು ಯಾವುದೇ ಭಾಷೆಯಲ್ಲಿ ಮಾತನಾಡಿದರೂ ಸಹ, ನಿಮ್ಮ ಕಥೆಯಲ್ಲಿರುವ ಕಷ್ಟದ ಹೆಸರು ಅಥವಾ ಪರಿಸ್ಥಿತಿಯನ್ನು ನಿಮ್ಮ ಆಲೋಚನೆಗೆ ತರುವಂತಹ ಅದಕ್ಕನುಗುಣವಾಗಿರುವ ಪದ ಅಥವಾ ಸಾಧಾರಣವಾದ ಊಹೆಯನ್ನು ಕಂಡುಹಿಡಿದುಕೊಳ್ಳಿರಿ.

ಆ). ಕೆಲವರು ಕಥೆಯನ್ನು ಹೇಳುವಾಗ, ನಿರ್ಧಿಷ್ಟವಾದ ಹೆಸರುಗಳನ್ನು ಹೇಳಲು ಪ್ರಯತ್ನಿಸುವುದಿಲ್ಲ. ಆದರೆ ಸಾಮಾನ್ಯವಾಗಿ ಕಥೆಯ ಕಠಿಣವಾದ ಭಾಗಗಳು ನೆನಪಿನಲ್ಲಿಟ್ಟುಕೊಳ್ಳಲು ಕಷ್ಟವಿದ್ದಾಗ್ಯೂ ಸಹ, ನಿಮ್ಮ ಕಥೆಯಲ್ಲಿನ ಹೆಸರುಗಳನ್ನು ಹೇಳುವಂತೆ ನಾವು ಪ್ರೋತ್ಸಾಹಿಸುತ್ತೇವೆ. ಹೆಸರುಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ನಾವು ಕಷ್ಟಪಡುತ್ತೇವೆ ಎಂಬುದು ಕರ್ತನಿಗೆ ತಿಳಿದಿದೆ. ಆದರೆ, ದೇವರು ಕಥೆಯಲ್ಲಿನ ಪಾತ್ರಗಳ ಹೆಸರುಗಳನ್ನು ಮತ್ತು ಸ್ಥಳಗಳನ್ನು ನಮಗೆ ತಿಳಿಸುವುದಕ್ಕಾಗಿ ಆಯ್ಕೆ ಮಾಡಿಕೊಂಡಿರುವುದರಿಂದ, ನಾವು ಕಥೆಯನ್ನು ಹೇಳುವಾಗ ಈ ಮಾಹಿತಿಯನ್ನು ಸೇರಿಸಲು ಇಷ್ಟಪಡುತ್ತೇವೆ.

8. **ನೀವು ನಿಖರವಾಗಿ ಹೇಳುವ ತನಕ ಹೇಳುತ್ತಿರಿ ಮತ್ತು ಪರೀಕ್ಷಿಸುತ್ತಿರಿ.** ನೀವು ಕಥೆಯನ್ನು ಚೆನ್ನಾಗಿ ತಿಳಿದುಕೊಳ್ಳುವ ತನಕ ಈ ಹಂತಗಳನ್ನು ಪುನರಾವರ್ತಿಸಿ. ಇಡೀ ಕಥೆಯನ್ನು ಜೋರಾಗಿ ಹೇಳುತ್ತಲೇ ಇರಿ, ಮತ್ತು ನೀವು ಎಲ್ಲಾ ಮಾಹಿತಿಯನ್ನು ಹೇಳಿರುವಿರೇ ಎಂಬುದನ್ನು ಪರೀಕ್ಷಿಸಲು ಬರೆದುಕೊಂಡಿರುವುದರ ಕಡೆಗೆ ಕಣ್ಣು ಹಾಯಿಸಿ.

ಕಥೆಗೆ ಇನ್ನಿತರ ಸಂಗತಿಗಳನ್ನು ಸೇರಿಸದಂತೆ ಎಚ್ಚರವಾಗಿರಿ, **ಒಂದು ವೇಳೆ ಈ ಸತ್ಯವೇದದ ಕಥೆಯ ಇನ್ನಿತರ ಹೋಲಿಕೆಯ ವಾಕ್ಯಭಾಗಗಳಲ್ಲಿ ಸಂಗತಿಗಳು ಕಂಡುಬಂದರೂ ಸಹ ಎಚ್ಚರವಾಗಿರಿ**! ಸತ್ಯವೇದದಲ್ಲಿನ ಕೆಲವು ಕಥೆಗಳನ್ನು ಒಂದು ಬಾರಿಗಿಂತಲೂ ಹೆಚ್ಚಾಗಿ ಹೇಳಲು ಕರ್ತನೇ ನಿರ್ಧಾರ ಮಾಡಿರುವನು. ಪ್ರತಿಯೊಂದು ಬಾರಿ ಹೇಳುವುದು ಕೊಂಚ ವ್ಯತ್ಯಾಸವಾಗಿರುತ್ತದೆ. ದೇವರೇ ಕಥೆಗಳನ್ನು ಪ್ರತ್ಯೇಕವಾಗಿ ಇಡಲು ಆಯ್ಕೆ ಮಾಡಿಕೊಂಡಿರುವುದಾದರೆ, ನಾವೂ ಸಹ ಹಾಗೆಯೇ ಮಾಡುವವರಾಗಿದ್ದೇವೆ. ಕೆಲವೊಮ್ಮೆ, ಹೆಚ್ಚು ಕಥೆಗಳನ್ನು ಹೇಳಿದಂತೆಲ್ಲಾ, ಪ್ರತಿ ಕಥೆಯಲ್ಲಿ ಕಂಡುಬರುವ ಸತ್ಯಗಳು ಮತ್ತು ಅವು ಯಾವ ರೀತಿ ಯೋಗ್ಯವಾಗಿ ಒಂದಕ್ಕೊಂದು ಹೊಂದಿಕೊಂಡಿವೆ ಎಂಬುದನ್ನು ಕಂಡುಹಿಡಿಯುವಿರಿ.

ಅಪರಿಚಿತದೊಳಗೆ ಪ್ರವೇಶಿಸುವುದು

ನಾವು ಹೊಸ ವಿಧಾನಗಳನ್ನು ಕಲಿತುಕೊಳ್ಳಲು ಪ್ರಯತ್ನಿಸುತ್ತಿರುವಾಗ, ಈಗಾಗಲೇ ಯಾವುದು ಸಮಂಜಸವಾಗಿರುವುದೋ ಆ ವಿಧಾನದೊಳಗೆ ನಾವು ಕಲಿತಿರುವುದರಲ್ಲಿ ಕೇವಲ ಕೆಲವು ಭಾಗಗಳನ್ನು ಮಾತ್ರ ಅಳವಡಿಸಿಕೊಳ್ಳುವ ಮನಸ್ಸುಳವರಾಗಿರುತ್ತೇವೆ.

ನಾನು ನಿಮಗೆ ಒಂದು ಉದಾಹರಣೆಯನ್ನು ನೀಡುತ್ತೇನೆ: ನಾನು *ಕಥೆ ಮಾತ್ರಕ್ಕೆ* ಬರೆಯುತ್ತಿದ್ದ ಒಂದು ಹೊಸ ಬೋಧನೆಯ ಅಂಶವನ್ನು ಕೇಳಿಸಿಕೊಳ್ಳಲು ನಮ್ಮ ಸಮರ್ಪಿತ ಸ್ವಯಂ ಸೇವಕ ಸಿಬ್ಬಂದಿಯ ಅನೇಕರು ಒಪ್ಪಿಕೊಂಡರು. ಒಂದು ನಿರ್ದಿಷ್ಟವಾದ ಅಂಶಕ್ಕೆ ಸ್ಪಷ್ಟತೆ ಇರುವುದೇನೋ ಎಂಬುದನ್ನು ನೋಡುವುದು ನನ್ನ ಉದ್ದೇಶವಾಗಿದ್ದರೂ ಸಹ, ನನಗೆ ಒಂದು ಮೌಲ್ಯಾಧಾರಿತ ಪಾಠವನ್ನು ಕಲಿಸುವುದಕ್ಕೆ ದೇವರು ಈ ಘಟನೆಯನ್ನು ಉಪಯೋಗಿಸಿದನು.

ಅಂಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು, ಅವರಿಗೆ ಕಥೆಯು ಚೆನ್ನಾಗಿ ತಿಳಿದಿರಬೇಕಿತ್ತು, ಹಾಗಾಗಿ ಸಾಮಾನ್ಯವಾಗಿ ನಾಚಿಕೆ ಸ್ವಭಾವವುಳ್ಳವರಾಗಿದ್ದ ಇಬ್ಬರು ವ್ಯಕ್ತಿಗಳಿಗೆ ಕಥೆಯನ್ನು ಕಲಿತುಕೊಳ್ಳಲು ಹೇಳಿದೆ. ಇವರಲ್ಲಿ ಒಬ್ಬರು *ಕಥೆ* ಮಾತ್ರದ ನಾಲ್ಕು ಕಾರ್ಯಾಗಾರಗಳಲ್ಲಿ ಭಾಗವಹಿಸಿ ಮತ್ತು ಕಾರ್ಯನಿರ್ವಹಣೆಗೆ ಸಹಾಯ ಮಾಡಿದ್ದ ಒಬ್ಬ ಆಶ್ಯ ಪ್ರಾಂತ್ಯದ ಸ್ತ್ರೀಯಾಗಿದ್ದರು. ಮತ್ತೊಬ್ಬರು, ಈ ಸಂದರ್ಭದ ತನಕ ಕಥೆಯನ್ನು ಹೇಳುವುದಕ್ಕೆ ಯಶಸ್ವಿಯಾಗಿ ತಪ್ಪಿಸಿಕೊಳ್ಳುತ್ತಿದ್ದಂತಹ ಎಂಬತ್ತರ (ಇವರು 20ರ ಹರೆಯದವರಂತೆ ಕೆಲಸ ಮಾಡುತ್ತಾರೆ!) ಆಸುಪಾಸಿನ ವ್ಯಕ್ತಿ.

"ನೀವು ನನ್ನ ಸೂಚನೆಗಳನ್ನು ಹಿಂಬಾಲಿಸುವುದಾದರೆ, ಹತ್ತು ವಚನಗಳಿರುವ ಈ ಕಥೆಯನ್ನು ಹತ್ತು ನಿಮಿಷದಲ್ಲಿ ಕಲಿತುಕೊಳ್ಳಬಲ್ಲಿರಿ" ಎಂದು ವಿವರಿಸಿದೆ. ನಾವು ಅವರಿಗೆ *ಕಥೆ ಮಾತ್ರದಲ್ಲಿ* ಕಥೆಯನ್ನು ಕಲಿಯುವ ವಿಧಾನವನ್ನು ನೆನಪಿಗೆ ತಂದೆ. ಕಥೆಯನ್ನು ಒಂದು ಬಾರಿ ಜೋರಾಗಿ ಓದಿ. ನೀವು ಓದುತ್ತಿರುವಾಗ, ಕಥೆಯನ್ನು ನಿಮ್ಮ ಆಡುಭಾಷೆಯಲ್ಲಿ ಹೇಳಿ. ಉದಾಹರಣೆಗೆ, ಈ ಕಥೆಯಲ್ಲಿ, 'ಇಗೋ' ಎಂದು ಹೇಳುವುದರ ಬದಲು, 'ನೋಡು' ಎಂದು ಹೇಳಬಹುದು. ಕಥೆಯಲ್ಲಿ ಏನಾಗುತ್ತಿದೆ ಎಂಬುದನ್ನು ನಿಮ್ಮ ಮನಸ್ಸಿನ ಕಣ್ಣುಗಳಿಂದ ದೃಷ್ಟಿಸಿ. ಇದನ್ನು ಒಂದು ಬಾರಿ ಓದಿದ ತಕ್ಷಣವೇ, ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ನಿಮಗೆ ಕಥೆಯು ಎಷ್ಟು ನೆನಪಿದೆಯೋ ಅಷ್ಟನ್ನೂ ಜೋರಾಗಿ ಹೇಳಿ.

ಇಲ್ಲಿ ನಿಮ್ಮ ಗುರಿ, ಅಲ್ಲಿರುವ ಅದೇ ರೀತಿಯ ಪದಗಳನ್ನು ಹೇಳುವುದಲ್ಲ, ಆದರೆ ಅಲ್ಲಿರುವ ಹಾಗೆಯೇ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದಾಗಿದೆ. ನಂತರ ಪುನಃ ಕಥೆಯನ್ನು ನೋಡಿ ಮತ್ತೊಮ್ಮೆ ಜೋರಾಗಿ ಓದಿ. ನೀವು ಬಿಟ್ಟುಬಿಟ್ಟಿರುವ ಭಾಗಗಳನ್ನು ಕಾಣುವಿರಿ. ಪುನಃ ಕಣ್ಣುಗಳನ್ನು ಮುಚ್ಚಿಕೊಂಡು, ಕಥೆಯನ್ನು ಮತ್ತೊಮ್ಮೆ ಜೋರಾಗಿ ಹೇಳಿ. ಇದನ್ನು ನಾಲ್ಕು ಬಾರಿ ಮಾಡಿ.

ಸಹಕರಿಸುವಂತಹ, ಸೇವಕನ ಹೃದಯವಿರುವ ಈ ವ್ಯಕ್ತಿಗಳಿಬ್ಬರೂ ಈ ಸೂಚನೆಗಳನ್ನು ನನಗೆ ಹೇಳಿದರು. "ಸ್ವಾಭಾವಿಕವಾಗಿ ಮಾತನಾಡುವ ಭಾಷೆಯಲ್ಲಿ ಕಥೆಯನ್ನು ಜೋರಾಗಿ ಓದಿ, ನನ್ನ ಸತ್ಯವೇದವನ್ನು ಮುಚ್ಚುವುದು ಮತ್ತು ಕಥೆಯನ್ನು ಹೇಳುವುದು." ಇದನ್ನು ಅವರು ಹೇಳಲೇಬೇಕಾಗಿರುವುದರಿಂದ ಹೇಳಿದರು.

ನಂತರ ಅವರು ಪ್ರಾರಂಭಿಸಿದರು. ಅವರು ಓದಿದರು... ನಿಶ್ಯಬ್ಧವಾಗಿ! ಸ್ವಲ್ಪ ಶಬ್ದವನ್ನಾದರೂ ಸಹ ಮಾಡಲಿಲ್ಲ. ನಾನು ಅವರ ಓದಿನ ಮಧ್ಯೆ ತಡೆದೆ. "ಇದನ್ನು ನೀವು ಯಾವ ರೀತಿ ಓದಬೇಕಾಗಿದೆ?" ಅವರಿಬ್ಬರೂ "ಜೋರಾಗಿ" ಎಂದು ಉತ್ತರಿಸಿದರು. "ಆದರೆ ನನಗೆ ಏನೂ ಕೇಳಿಸುತ್ತಿಲ್ಲ" ಎಂದು ಹೇಳಿದೆ. ಆಗ ಆ ವ್ಯಕ್ತಿ "ಇದನ್ನು ನನ್ನಷ್ಟಕ್ಕೆ ನಾನೇ ಮನಸ್ಸಿನಲ್ಲಿ ಓದಿಕೊಳ್ಳುತ್ತಿದ್ದೇನೆ" ಎಂದು ಹೇಳಿದನು.

"ಆದರೆ ನಿಮಗೆ ಜೋರಾಗಿ ಓದಲು ಬರುತ್ತದೆ ಎಂದು ನೀವು ಈಗಾಗಲೇ ಹೇಳಿರುವಿರಿ. ನೀವು ಬಹಳವಾಗಿ ಸಹಕರಿಸುವಂತಹ ವ್ಯಕ್ತಿಯಾಗಿರುವಿರಿ. ಆದರೂ ನನ್ನ ಸೂಚನೆಗಳನ್ನು ನೀವು ಏಕೆ ಅನುಸರಿಸುತ್ತಿಲ್ಲ" ಎಂದು ಕೇಳಿದೆ.

ಆ ವ್ಯಕ್ತಿ ತಬ್ಬಿಬ್ಬಾಗಿ, "ನನಗೆ ಗೊತ್ತಿಲ್ಲ, ಈ ರೀತಿ ನಾನು ಮಾಡಲೇಬಾರದು ಎಂದು ಊಹಿಸುತ್ತೇನೆ" ಎಂದು ಹೇಳಿದನು.

ನಂತರ ನಾನು ಆ ಸ್ತ್ರೀಯ ಕಡೆಗೆ ತಿರುಗಿ, "ನೀವು ಜೋರಾಗಿ ಓದಬೇಕಾಗಿದೆ ಎಂಬುದು ನಿಮಗೆ ತಿಳಿದಿದೆಯೇ" ಎಂದು ಕೇಳಿದನು. ಆಕೆ "ಹೌದು" ಎಂದರು.

"ಹಾಗಾದರೆ ನನಗಿದು ಅರ್ಥವಾಗುತ್ತಿಲ್ಲ. ನೀವು ಏಕೆ ಜೋರಾಗಿ ಓದುತ್ತಿಲ್ಲ?" ಆಕೆ ಮುಜುಗರದಿಂದ, "ಈ ರೀತಿ ಮಾಡುವುದು ಮೂರ್ಖತನವೆಂದು ನನಗನ್ನಿಸಿತು" ಎಂದು ಹೇಳಿದಳು.

ನಾವೆಲ್ಲರೂ ನಗುತ್ತಿದ್ದೆವು, ಅದರಲ್ಲೂ ಆ ಕಥೆಯು ಜಕ್ಕಾಯನದಾಗಿದ್ದು ಅವನು ಯೇಸುವನ್ನು ನೋಡಲೇಬೇಕೆಂದು ನಡೆದುಕೊಂಡ ರೀತಿಯನ್ನು ಮೂರ್ಖತನವೆಂದು ಪರಿಗಣಿಸಲಾಗಿದ್ದುದರಿಂದ ನಮಗೆ ನಗು ಬಂತು. ಹಾಗೂ, ಜಕ್ಕಾಯನು ಹೇಗೆ ಸೂಚನೆಗಳನ್ನು ಸಂಪೂರ್ಣವಾಗಿ ಹಿಂಬಾಲಿಸಿದನು ಎಂಬುದು ಅವರ ಕಥೆಯಲ್ಲಿನ ಸತ್ಯಗಳಲ್ಲಿ ಒಂದು ಸತ್ಯವಾಗಿತ್ತು!

ಕೊನೆಗೆ, ಇದರಲ್ಲಿ ಸ್ವಲ್ಪ ಕಾರ್ಯವನ್ನು ಸಾಧಿಸಿದ ನಂತರ ಅವರು "ಈ ರೀತಿಯಾಗಿ ನಾನು ಎಂದೂ ಮಾಡಿಲ್ಲ" ಮತ್ತು "ಮೂರ್ಖತನವಾಗಿ ಕಾಣಬಹುದೆಂಬ" ಬಂಧನಗಳಿಂದ ಹೊರಬಂದರು. ಅವರು ತಮ್ಮ ಕಥೆಯನ್ನು ಜೋರಾಗಿ ಓದಿದರು, ನಂತರ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ಆ ಕಥೆಯನ್ನು ತಮಗೆ ಸಾಧ್ಯವಾದಷ್ಟು ಉತ್ತಮವಾಗಿ ಪುನಃ ಹೇಳಿದರು.

ಈ ರೀತಿ ನಾಲ್ಕು ಬಾರಿ ಮಾಡಿದ ನಂತರ, ನಾನು ಅವರಿಗೆ, "ಈಗ ನೀವು ನಿಮ್ಮ ಕಥೆಯನ್ನು ನನಗೆ ಹೇಳುವಿರೇ?" ಎಂದು ಕೇಳಿದೆನು. ಕೇವಲ ಹತ್ತು ನಿಮಿಷದ ಅಧ್ಯಯನದ ನಂತರ ಅವರಿಬ್ಬರೂ ಅದ್ಭುತವಾಗಿ ಬಹುತೇಕ ಕಥೆಯನ್ನು ಪರಿಪೂರ್ಣವಾಗಿ ಹೇಳಿದರು!

ಆಗ ನಾನು ಎಂಬತ್ತರ ವಯಸ್ಸಿನ ವ್ಯಕ್ತಿಗೆ "ಹಾಗಾದರೆ, ನೀವು ಯಾವಾಗಲೂ ಹತ್ತು ನಿಮಿಷದಲ್ಲಿ ಹತ್ತು ವಚನಗಳನ್ನು ಬಾಯಿಪಾಠ ಮಾಡುವಿರೇ?" ಎಂದು ತಮಾಷೆಯಾಗಿ ಕೇಳಿದೆನು. ಆತ ಮುಗುಳ್ನಕ್ಕರು.

ಆಕೆ, "ಈ ಸತ್ಯವೇದದ ಕಥೆಗಳನ್ನು ನಾನು ಕಲಿಯಲು ಬಯಸಿದರೂ ಇದನ್ನು ಮಾಡಲಾಗುತ್ತಿರಲಿಲ್ಲ! ನಾನು ಪ್ರಯತ್ನಿಸಿದೆ, ಆದರೂ ಮಾಡಲು ಸಾಧ್ಯವಾಗಿರಲಿಲ್ಲ" ಎಂದು ಹೇಳಿದರು.

"ನೀವು ಎಂದಾದರೂ ಹೇಳಿದಂತೆ ಮಾಡಿರುವಿರೇ?" ಎಂದು ಕೇಳಿದೆನು. ಆಕೆ, "ಇಲ್ಲಿಯವರೆಗೂ ಹಾಗೆ ಮಾಡಿರಲಿಲ್ಲ" ಎಂದು ನಗೆ ಬೀರಿದರು.

ಕಥೆ ಮಾತ್ರದ ಎಲ್ಲಾ ವಿಧಾನಗಳನ್ನು ನೀವು ಸಂಪೂರ್ಣವಾಗಿ ಪ್ರಯತ್ನಿಸಬೇಕೆಂಬುದಾಗಿ ಪ್ರೋತ್ಸಾಹಿಸಲು ನಾವು ಈ ಘಟನೆಯನ್ನು ಸೇರಿಸಿದ್ದೇವೆ. ಇಲ್ಲಿಯವರೆಗೂ ನೀವು ಈ ಮಾತುಗಳನ್ನು ಓದುತ್ತಿರುವಿರಿ, ಹಾಗಾಗಿ ನೀವು ವಿದ್ಯಾಭ್ಯಾಸ ಬಲ್ಲವರು ಎಂಬುದು ಸ್ಪಷ್ಟವಾಗಿದೆ. ನೆನಪಿಡಿ, *ಕಥೆ* ಮಾತ್ರದ ಕಲಿಯುವಿಕೆ ಮತ್ತು ತಿಳಿಯಪಡಿಸುವಿಕೆಯು ಮೌಖಿಕವಾಗಿದೆ (ಬಾಯಿ ಮಾತು), ಹಾಗಾಗಿ ನೀವು ಮತ್ತೊಂದು ಲೋಕಕ್ಕೆ ಹೆಜ್ಜೆ ಇಡಬೇಕೆಂದು ಹೇಳಲಾಗುತ್ತಿದೆ. ನಂಬಿಕೆಯಿಂದ, *ಕಥೆ ಮಾತ್ರದ* ಎಲ್ಲಾ ಅಂಶಗಳನ್ನು ಅಲ್ಲಿರುವ ಹಾಗೆಯೇ ಕೈಗೊಳ್ಳಲು ಪ್ರಯತ್ನಿಸಿ. ಕಥೇರಿಯಲ್ಲಿನ ಘಟನೆಯು ಬಹಳ ಸಾಮಾನ್ಯವಾಗಿರುವಂತಹುದು, ಮತ್ತು *ಕಥೆ* ಮಾತ್ರದ ಒಂದು ಭಾಗವನ್ನು ಮಾತ್ರ ಉಪಯೋಗಿಸುವುದು ನೀವು ಬಯಸುವಂತಹ ಅಂತಿಮ ಫಲಿತಾಂಶವನ್ನು ಕೊಡಲಾರದು ಎಂಬುದನ್ನು ಇದು ತೋರಿಸುತ್ತದೆ. *ಕಥೆ* ಮಾತ್ರವನ್ನು ಹೇಳಿರುವ ರೀತಿಯೇ ನೀವು ಪ್ರಯತ್ನಿಸಿದ ನಂತರ, ನಿಮ್ಮ ಅಧ್ಯಯನವನ್ನು ಮತ್ತು *ಕಥೆ* ಮಾತ್ರದ ನಿರೂಪಣೆಯನ್ನು ಅಧಿಕಗೊಳಿಸುವಂತಹ ಅನೇಕ ಉಪಯೋಗವುಳ್ಳ ನವೀನತೆಯನ್ನು ಬಹುಶಃ ಕರ್ತನು ನಿಮಗೆ ತೋರಿಸಬಹುದು.

ಕಥೆಗೆ ಆಳವಾದ ಭಾವವನ್ನು ಮತ್ತು ಕೇಳಿಸಿಕೊಳ್ಳುವಂತಹ ಆಸಕ್ತಿಯನ್ನು ಸೇರಿಸುವುದು

1. **ಕಥೆಯ ಸಂದರ್ಭದ ಕುರಿತಾಗಿ ಆಲೋಚಿಸಿ.** ನಿಮ್ಮ ಕಥೆಗೆ ನಡೆಸುವಂತಹ ಕೆಲವು ವಾಕ್ಯಭಾಗವನ್ನು ಓದಿ ಅಥವಾ ಕೇಳಿಸಿಕೊಳ್ಳಿ. ನಿಮ್ಮ ಕಥೆಗಿಂತಲೂ ಮೊದಲು ಸತ್ಯವೇದದಲ್ಲಿ ಏನು ಸಂಭವಿಸಿತೆಂಬುದನ್ನು ಅಗಾಗ್ಗೆ ತಿಳಿದುಕೊಳ್ಳುವಂತಹುದು ಕಥೆಗೆ ಅತ್ಯಧಿಕವಾದ ಅರ್ಥವನ್ನು ಕೊಡುವಂತಹುದಾಗಿದೆ. ಈ ಸಿದ್ಧತೆಯ ನಂತರ, ನೀವು ಹೇಳಲಿರುವ ಕಥೆಯನ್ನು ಅವರಿಗೆ ನೀವು ಹೇಳುವುದಕ್ಕೂ ಮುನ್ನ ಅದರ ಒಂದು ಪರಿಚಯವನ್ನು ಮಾಡಿಸಬೇಕೇ ಅಥವಾ "ಅದರ ನಿಲುವನ್ನು" ಹೇಳಬೇಕೇ ಎಂಬುದನ್ನು ನಿರ್ಧರಿಸಬಹುದು. ನಂತರ, ಪರಿಚಯವನ್ನು ಸಿದ್ಧಪಡಿಸುವುದು ಹೇಗೆ ಎಂಬುದರ ಕಡೆಗೆ ನೋಡಿಕೊಳ್ಳೋಣ.

2. **ಸರ್ವನಾಮಗಳನ್ನು ಉಪಯೋಗಿಸುವುದನ್ನು ತಡೆಗಟ್ಟಿರಿ!!!!! ನೀವು ಕಥೆಯಲ್ಲಿನ ಜನರ ಮತ್ತು ನಿರ್ದಿಷ್ಟವಾದ ಸ್ಥಳಗಳ ಅಥವಾ ವಸ್ತುಗಳ** ಕುರಿತಾಗಿ "ಇದು", "ಇವನು", "ಇವಳು" ಅಥವಾ "ಅವು"

ಎಂದು ಹೇಳುವುದರ ಬದಲು ಅವುಗಳ **ಹೆಸರುಗಳನ್ನು ಉಪಯೋಗಿಸುವುದಾದರೆ,** ನೀವು ಹೇಳುವಾಗ ಇದನ್ನು ಕೇಳುವವರು ಕಥೆಯನ್ನು ಹಿಂಬಾಲಿಸುವಂತೆ ಅವರಿಗೆ ಸಹಾಯ ಮಾಡುತ್ತದೆ. ನಿಮಗೆ ಸಾಧ್ಯವಾದಗಲೆಲ್ಲಾ ಹೀಗೆ ಮಾಡಿರಿ (ಮತ್ತು ನೀವು ಹೇಳುವ ಭಾಷೆಯಲ್ಲಿರುವ ಹಾಗೆಯೇ ಉಪಯೋಗಿಸಿ).

3. **ಕಥೆಯ ಸಮಯದ ಕುರಿತಾಗಿ ಆಲೋಚಿಸಿ. (ಗಮನಿಸಿ:** "ಕಥೆಯ ಸಮಯ" ಮತ್ತು ಅದರ ನಂತರದ ಅಂಶವಾದ "ನೈಜವಾಗಿ ಹೇಳುವ ಕಥೆ" ಇವೆರಡನ್ನೂ ಗಮನಿಸುವುದು, ಕಥೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಹಾಗೂ ಅದನ್ನು ಚೆನ್ನಾಗಿ ಹೇಳುವುದಕ್ಕೆ ಅರ್ಥಮಾಡಿಕೊಳ್ಳುವುದರ ಮುಖ್ಯ ಸಂಗತಿಗಳಾಗಿವೆ.)

ಅ). ಕಥೆಯ ರೂಪದಲ್ಲಿ ಬರುವುದಕ್ಕೆ ಅದು ತೆಗೆದುಕೊಂಡಿರುವ ಸಮಯಕ್ಕಿಂತಲೂ ನಾವೆಲ್ಲರೂ ಸತ್ಯವೇದದ ಆ ಕಥೆಯನ್ನು ಬಹು ವೇಗವಾಗಿ ಓದಿ ತಿಳಿದುಕೊಳ್ಳಬಹುದಾಗಿದೆ. ಹಾಗಾಗಿ, ಕಥೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದರ ಸಲುವಾಗಿ ಅದನ್ನು ನಿಧಾನವಾಗಿ ಓದುವವರಾಗಿರ್ರಿ.

ಆ). ಕಥೆಯ ಪ್ರತಿಯೊಂದು ದೃಶ್ಯವನ್ನೂ ನಿಮ್ಮ ಮನಸ್ಸಿನಲ್ಲಿ ಚಿತ್ರಣವಾಗಿಸಿಕೊಳ್ಳಿ. ಕಥೆಯಲ್ಲಿ ಕೊಡಲ್ಪಟ್ಟಿರುವ ಮಾಹಿತಿಯಿಂದ, ಕಥೆಯಲ್ಲಿನ ಪ್ರತಿಯೊಂದು ಪಾತ್ರವೂ ಯಾವ ರೀತಿ ಭಾವನೆಯನ್ನು ಹೊಂದಿದೆ ಮತ್ತು ಯಾವ ರೀತಿ ಆಲೋಚನೆ ಮಾಡುತ್ತಿದೆ ಎಂಬುದನ್ನು ಊಹಿಸಿಕೊಳ್ಳಿ.

ಇ). ಸತ್ಯವೇದದಲ್ಲಿನ ಕಥೆಗಳು ಸಾವಿರಾರು ವರ್ಷಗಳ ಹಿಂದೆ ನಡೆದಿದ್ದರೂ ಸಹ, ಅದರಲ್ಲಿನ ಜನರು ಆಗಿನ ಘಟನೆಯಲ್ಲಿ ಮೊದಲ ಬಾರಿಗೆ ಪಾಲ್ಗೊಂಡವರಾಗಿದ್ದರು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ನಾವು ಓದುತ್ತಿರುವ ಕಥೆ ನಮಗೆ ಚಿರಪರಿಚಿತವಾಗಿದ್ದರೂ ಕೂಡ, ಇದರ ಕುರಿತಾಗಿ ಗಮನವಿಡಿ... ಆ ಕಥೆಯಲ್ಲಿನ ಒಬ್ಬೊಬ್ಬರೂ ಇದು ಸಂಭವಿಸುವುದಕ್ಕಿಂತಲೂ ಮೊದಲು ಇದ್ದವರಲ್ಲ. ಹಾಗಾಗಿ ಕಥೆಯಲ್ಲಿನ ಪಾತ್ರಗಳು ಅನುಭವಿಸಿದಂತಹ ರೀತಿಯಲ್ಲಿ ಪಾತ್ರಗಳನ್ನು, ಘಟನೆಗಳನ್ನು ನಿಮ್ಮ ಮನಸ್ಸಿನಲ್ಲಿರುವ ಹಾಗೆ ಭಾವಿಸಿರಿ.

4. **ಕಥೆಯು ನೈಜವಾಗಿರಿ.** ಕಥೆಯಲ್ಲಿ ಪ್ರತಿಯೊಂದು ಪಾತ್ರವೂ ಏನು ಮಾಡುತ್ತದೆ ಹಾಗೂ ಏನು ಹೇಳುತ್ತದೆ ಮತ್ತು ಪ್ರತಿಯೊಂದು ಪಾತ್ರವೂ ಬೇರೊಂದು ಪಾತ್ರಕ್ಕೆ ಹೇಗೆ ಪ್ರತಿಕ್ರಿಯೆಯನ್ನು ಸಲ್ಲಿಸುತ್ತದೆ ಎಂಬುದನ್ನು ಗಮನಿಸಿ.

ನಾವು ಚೆನ್ನಾಗಿ "ಕೇಳಿಸಿಕೊಳ್ಳುವುದಾದರೆ", ಹೇಳುವವರ ಮಾತುಗಳು ಮತ್ತು ಅಭಿನಯವು ನಮಗೆ ಹೆಚ್ಚಾಗಿ ತಿಳಿಸುವಂತಹುದಾಗಿದೆ. ಎಚ್ಚರಿಕೆಯಿಂದ ಗಮನಿಸುವುದರ ಮೂಲಕ, ಒಂದು ಕಥೆಯನ್ನು ಬಹಳ ನಿಖರವಾಗಿ ಸರಿಯಾದ ಭಾವನೆಗಳೊಂದಿಗೆ ಹೇಳಲು ಶಕ್ತರಾಗುವಂತೆ ಕಥೆ ಹೇಳುವವರು ಒಂದು ಕಥೆಯನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

ನಾವು ಸತ್ಯವೇದದಲ್ಲಿ ಓದಲ್ಪಡುವ ಎಲ್ಲಾ ಜನರು, ಅಂದರೆ ಅದರಲ್ಲಿ ಬರುವ ನಾಯಕರುಗಳು ಮತ್ತು ದೇವರ ಪ್ರವಾದಿಗಳು ಸಹ ಕೇವಲ ಮನುಷ್ಯರೇ ಎಂಬುದನ್ನು ನಿಮಗೆ ನೀವು ನೆನಪುಮಾಡಿಕೊಳ್ಳಿ. ಕಠಿಣ ಪರಿಸ್ಥಿತಿಗಳಲ್ಲಿ ಅನೇಕರು ದೇವರಿಗೆ ವಿಧೇಯರಾಗಿದ್ದು, ನಂಬಿಕೆಯನ್ನು ತೋರ್ಪಡಿಸಿದ್ದರೂ ಸಹ, ಇವರು **ಪ್ರತಿಯೊಂದು ಸಂದರ್ಭದಲ್ಲೂ** ನಂಬಲು ಮತ್ತು ಭರವಸೆ ಇಡಲು ಆಯ್ಕೆ ಮಾಡಬೇಕಾಗಿತ್ತು.

5. **ನಿಮ್ಮ ಕಥೆಯಲ್ಲಿ ಉಲ್ಲೇಖಿಸಿರುವ ಎಲ್ಲಾ ಪದಗಳನ್ನು ಹೇಳಿ.** ಜನರು (ಅಥವಾ ಪಾತ್ರ) ಹೇಳಿರುವ ರೀತಿಯಲ್ಲಿಯೇ ಅವುಗಳನ್ನು ಹೇಳಿರಿ. ಪಾತ್ರವು ಏನನ್ನು ಹೇಳಿದೆಯೋ ಅದನ್ನು ಭಾವನೆಯ ಮೂಲಕ ವ್ಯಕ್ತಪಡಿಸುತ್ತಾ ಉಲ್ಲೇಖಿಸುವುದು ಕಥೆಗೆ ಆಸಕ್ತಿಕರವಾದ ಜೀವವನ್ನು ಕೊಡುವುದಕ್ಕೆ ಒಂದು ಅವಕಾಶವಾಗಿರುತ್ತದೆ. ಸೂಚನೆ: ಕಥೆಯಲ್ಲಿ ಮಾತನಾಡುವವರ ಭಾವನೆಯ ಕುರಿತಾಗಿ ಹೇಳಲ್ಪಟ್ಟಿದ್ದರೆ, ಅಥವಾ ಅದು ಬಹಳ ಸ್ಪಷ್ಟವಾಗಿದ್ದರೆ, ಆಗ ಅದೇ ಭಾವನೆಯನ್ನು ಉಪಯೋಗಿಸಿ. ಅಂದರೆ ಕೋಪ, ದುಃಖ, ಭಯ, ನಿರಾಶೆ, ಇತರೆ. ಆ ಪಾತ್ರವು ಏನನ್ನು ಹೇಳುತ್ತಿರುವುದುದೋ ಅದನ್ನು ತೋರ್ಪಡಿಸಲು ನಿಮಗೆ ಸಾಧ್ಯವಾಗುವ ಮಟ್ಟಿಗೆ ನಟನೆಯ ಮೂಲಕ ತೋರ್ಪಡಿಸಿ.

   ಎಚ್ಚರಿಕೆ: ಕಥೆಯ ಪಾತ್ರವು ಯಾವ ಭಾವನೆಯನ್ನು ವ್ಯಕ್ತಪಡಿಸುತ್ತಿದೆ ಎಂಬುದು ನಿಮಗೆ ಖಚಿತವಾಗಿ ತಿಳಿದಿಲ್ಲವಾದರೆ, ನಿಮ್ಮ ಆಲೋಚನೆಯಲ್ಲಿ ಆ ಪಾತ್ರದ ಭಾವನೆಯನ್ನು ಕಲ್ಪಿಸಿಕೊಂಡು ಅಲ್ಲಿನ ಮಾತುಗಳನ್ನು ಹೇಳಬೇಡಿ. ಇದು ಕಥೆಗೆ ಹೆಚ್ಚಾಗಿ ಸೇರಿಸುವಂತಹುದಾಗಿದೆ, ಇದನ್ನೇ ಸತ್ಯವೇದದಲ್ಲಿ ದೇವರು ಎಂದಿಗೂ ಮಾಡಬಾರದೆಂದು ನಮಗೆ ಎಚ್ಚರಿಕೆ ಕೊಟ್ಟಿರುವನು!

"ನಾನು ನಿಮಗೆ ಆಜ್ಞಾಪಿಸುವದನ್ನೆಲ್ಲಾ ನೀವು ಅನುಸರಿಸಲೇಬೇಕು; ಅದಕ್ಕೆ ಏನೂ ಕೂಡಿಸಬಾರದು; ಅದರಿಂದ ಏನೂ ತೆಗೆದುಬಿಡಬಾರದು." **ಧರ್ಮೋಪದೇಶಕಾಂಡ 12:32.**

"ದೇವರ ಪ್ರತಿಯೊಂದು ಮಾತು ಶುದ್ಧವಾದದ್ದು; ಆತನು ಶರಣಾಗತರಿಗೆ ಗುರಾಣಿಯಾಗಿದ್ದಾನೆ. ಆತನ ಮಾತುಗಳಿಗೆ ಯಾವುದನ್ನೂ ಸೇರಿಸಬೇಡ; ಆತನು ನಿನ್ನನ್ನು ಖಂಡಿಸುವಾಗ ನೀನು ಸುಳ್ಳುಗಾರನೆಂದು ತೋರಿಬಂದೀಯೇ"

ಜ್ಞಾನೋಕ್ತಿ 30:5-6.

"ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೇ". **ಮತ್ತಾಯ 15:9.**

6. **ಕಥೆಯನ್ನು ವ್ಯಕ್ತಪಡಿಸಿರಿ.** ನೀವು ಕಥೆ ಹೇಳುವದನ್ನು ಅಭ್ಯಾಸ ಮಾಡಿದಂತೆಲ್ಲಾ, ಕಥೆಯಲ್ಲಿ ಒಳಗೊಂಡಿರುವ ಭಾವನೆ ಮತ್ತು ಅನಿಸಿಕೆಯನ್ನು ನಿಮ್ಮ ಧ್ವನಿಯು ಪ್ರತಿಬಿಂಬಿಸಬೇಕು.

   ಅ). ಜನರು ಮೊದಲು ಕಥೆಯನ್ನು ಹೇಳಲು ಪ್ರಾರಂಬಿಸುವಾಗ, ನಾಟಕೀಯವಾಗಿ ಹೇಳಬೇಕೆಂದು ಶ್ರಮಪಡುವ ನಿಟ್ಟಿನಲ್ಲಿ, ಕಥೆ ಹೇಳುವವರು ಕಥೆಯನ್ನು ಉತ್ತೇಜನಭರಿತ ಧ್ವನಿಯಿಂದ ಪ್ರಾರಂಭಿಸಿ ಹೇಳತೊಡಗುತ್ತಾರೆ, ಆದರೆ ನಂತರ ಅವರು ಅದೇ ಧಾಟಿಯಲ್ಲಿಯೇ ಅಂದರೆ ಅದೇ ಉತ್ತೇಜನಗೊಂಡ ಧ್ವನಿಯಲ್ಲಿಯೇ ಇಡೀ ಕಥೆಯನ್ನು ಮುಂದುವರೆಸುತ್ತಾರೆ! ಅತ್ಯುತ್ಸಾಹದಿಂದ ದೊಡ್ಡ ಧ್ವನಿಯಲ್ಲಿ ಬಹಳ ದೀರ್ಘಕಾಲ ಮಾತನಾಡುವುದು ಪ್ರೇಕ್ಷಕನಿಗೆ ಉತ್ಸಾಹ ಕುಂದಿಸಿ, ಅವರು ಆಸಕ್ತಿಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ನಿಜ ಜೀವಿತದಲ್ಲಿ, ಯಾವ ಕಥೆಯನ್ನೂ ಸಂಪೂರ್ಣವಾಗಿ ಉತ್ತೇಜನದಿಂದ ನಿರೂಪಿಸಲು ಸಾಧ್ಯವಾಗುವುದಿಲ್ಲ.

ಆ). ನಿಜವಾಗಿಯೂ, ಕಥೆಯ ಕೆಲವು ಭಾಗಗಳು ದುಃಖದಿಂದ, ಭಯದಿಂದ, ಕನಿಕರದಿಂದ, ನಿರಾಶೆಯಿಂದ ಅಥವಾ ಇನ್ನಿತರ ಭಾವನೆಗಳಿಂದ ಕೂಡಿದ್ದು, ಇವುಗಳನ್ನು ಅತ್ಯುತ್ಸಾಹದ ಧ್ವನಿಯಿಂದ ಸರಿಯಾಗಿ ನಿರೂಪಿಸಲು ಸಾಧ್ಯವಾಗುವುದಿಲ್ಲ. ನಿಮ್ಮ ಧ್ವನಿಯನ್ನೂ ಏರಿಸುತ್ತಾ ಮತ್ತು ಇಳಿಸುತ್ತಾ ಕಥೆಯನ್ನು ವ್ಯಕ್ತಪಡಿಸಿರಿ ಹಾಗೂ ಕಥೆಗೆ ಹೊಂದಿಕೊಳ್ಳುವ ಹಾಗೆ ನಿಮ್ಮ ಉತ್ಸಾಹದ ಧ್ವನಿಯನ್ನು ಹತೋಟಿಯಲ್ಲಿಡಿ. ಹಾಗೂ, ಕಥೆಯ ವಿವಿಧ ಭಾವನೆಗಳನ್ನು ಸ್ವರದಲ್ಲಿ ಮತ್ತು ನಿಮ್ಮ ಧ್ವನಿಯ ವ್ಯಕ್ತಪಡಿಸುವಿಕೆಯಲ್ಲಿ ಪ್ರತಿಬಿಂಬಿಸಲು ಸಾಧ್ಯ.

ಇ). ಪ್ರತಿಯೊಂದು ಭಾಷೆಯಲ್ಲಿಯೂ, ಜನರು ಸಂಭಾಷಣೆ ಮಾಡುವಾಗ, ಮಾತುಗಳಲ್ಲದಂತಹ ಶಬ್ದಗಳು ಬರುತ್ತವೆ, ಇವು ಅವರು ಮಾತನಾಡುವಾಗ ಸ್ವಾಭಾವಿಕವಾಗಿಯೇ ಇದ್ದಕ್ಕಿದ್ದಂತೆ ಬರುವಂತಹುದಾಗಿದೆ. ಈ ಶಬ್ದಗಳು ಪ್ರತಿಯೊಂದು ಭಾಷೆ ಮತ್ತು ಸಂಸ್ಕೃತಿಗನುಗುಣವಾಗಿ ಪ್ರತ್ಯೇಕವಾಗಿರುತ್ತವೆ. ಇದು ಆಯಾಸವನ್ನು ತೋರಿಸುವಂತಹ ನಿಟ್ಟುಸಿರಾಗಿರಬಹುದು ಅಥವಾ ಜಿಗುಪ್ಸೆಯನ್ನು ತೋರ್ಪಡಿಸುವಂತೆ ಉಸಿರನ್ನು ಜೋರಾಗಿ ಹೊರಗೆ ಬಿಡುವುದಾಗಿರಬಹುದು. ಅನೇಕ ಸಂಸ್ಕೃತಿಗಳಲ್ಲಿ, ನಾಲಿಗೆಯಲ್ಲಿ ಶಬ್ದ ಬರಿಸುವುದು ಒಂದು ಭಾವನೆಯನ್ನು ವ್ಯಕ್ತಪಡಿಸುವಂತಹುದಾಗಿರುತ್ತದೆ.

ವೇಗವಾಗಿ ಮೇಲುಸಿರೆಳೆಯುವುದು ಅಥವಾ ಉಸಿರನ್ನು ಒಳಗೆಳೆದುಕೊಳ್ಳುವುದು ಆಶ್ಚರ್ಯವನ್ನು ಅಥವಾ ಗಾಭರಿಯನ್ನು ವ್ಯಕ್ತಪಡಿಸಬಹುದು. ನಗುವುದು ಅಥವಾ ಧ್ವನಿಯಲ್ಲಿನ ಶಬ್ದದಿಂದ ಒಬ್ಬರ ಭಾವನೆಯನ್ನು ವ್ಯಕ್ತಪಡಿಸಬಹುದಾಗಿದೆ. ಈ ಎಲ್ಲಾ ಶಬ್ದಗಳು ಮತ್ತು ಅನೇಕ ಬರೆಯಲ್ಪಡದ ಅದೇನೇ ಇದ್ದರೂ ಶಬ್ದಗಳಲ್ಲಿ ಹೇಳಲ್ಪಡುವಂತಹುದು ಇರುವುದು ಸತ್ಯ. ನಾವು ಬೆಳೆಯುತ್ತಿರುವಂತೆಲ್ಲ ನಮ್ಮ ಸುತ್ತಮುತ್ತಲಿರುವವರಿಂದ ನಾವು ಈ ಶಬ್ದಗಳನ್ನು ಕಲಿತುಕೊಳ್ಳುತ್ತೇವೆ.

ಸತ್ಯವೇದದ ಕಥೆಗಳನ್ನು ಒಂದು ಸ್ವಾಭಾವಿಕವಾದ ಮತ್ತು ಆಸಕ್ತಿಕರವಾದ ರೀತಿಯಲ್ಲಿ ಹೇಳುವುದನ್ನು ಕಲಿತುಕೊಳ್ಳುವುದಕ್ಕೆ ಮಾರ್ಗವೆಂದರೆ, ನೀವು ಬೇರೆಯವರೊಂದಿಗೆ ಮಾತನಾಡುವಾಗ ಇಂತಹ ಶಬ್ದಗಳನ್ನು ಕೇಳಿಸಿಕೊಳ್ಳುವುದಕ್ಕೆ ಆರಂಭಿಸಿ. ಆಗ, ನೀವು ಹೊಸ ಶಬ್ದಗಳನ್ನು ಕೇಳಿಸಿಕೊಳ್ಳುವಿರಿ, ಅವುಗಳನ್ನು ನಿಮ್ಮ ಮನಸ್ಸಿನಲ್ಲಿ ಶೇಖರಿಸಿ, ಇದರಿಂದ ನೀವು ಸತ್ಯವೇದದ ಕಥೆಗಳನ್ನು ಹೇಳುವಾಗ ಇವುಗಳನ್ನು ಉದ್ದೇಶಪೂರಕವಾಗಿಯೇ ಉಪಯೋಗಿಸಬಹುದಾಗಿದೆ.

ಈ). ಪದಗಳ ಮಧ್ಯೆ ತಡೆಯುವುದು ಅಥವಾ ತಡವರಿಸುವುದು, ಕಥೆಯನ್ನು ಹೇಳುವುದರಲ್ಲಿ ಒಂದು ದೊಡ್ಡ ನಟನೆಯನ್ನು ಮತ್ತು ಕೇಳಿಸಿಕೊಳ್ಳುವಂತಹ ಆಸಕ್ತಿಯನ್ನು ಸೇರಿಸುವಂತಹುದಾಗಿದೆ. ಉದಾಹರಣೆಗೆ, ಒಬ್ಬ ಕುಷ್ಠರೋಗಿಯ ಕಥೆಯಲ್ಲಿ ಕಥೆಯನ್ನು ಹೇಳುವವನು, "ಯೇಸು ತನ್ನ ಕರಗಳಿಂದ ಕುಷ್ಠರೋಗಿಯನ್ನು ಮುಟ್ಟಿದನು" ಎಂದು ಹೇಳುತ್ತಾನೆ. ಈ ಮಾತುಗಳನ್ನು ಕಥೆ ಹೇಳುವವರು ಯಾವ ತಡವರಿಕೆ ಇಲ್ಲದೆ ಹೇಳುವುದಾದರೆ, ಅಲ್ಲಿ ಒಂದು ದೊಡ್ಡ ಅವಕಾಶವು ಬಿಟ್ಟುಹೋಗುತ್ತದೆ.
ಯೇಸು ಒಬ್ಬ ಕುಷ್ಠರೋಗಿಯನ್ನು ನಿಜವಾಗಿಯೂ ಮುಟ್ಟುವುದೇ ನಿಬ್ಬೆರಗಾಗಿಸುವ ಸಂಗತಿಯಾಗಿದೆ: ಇದು ಅಂತಹ ದೊಡ್ಡ ಕನಿಕರವನ್ನು ತೋರ್ಪಡಿಸುತ್ತದೆ. ಕಥೆ ಹೇಳುವವರು ಈ ಪದಗಳನ್ನು ಹೇಳುವಾಗ ಒಂದೊಂದು ಪದವನ್ನು ತಡವರಿಸುತ್ತ, ಮುಟ್ಟಿದನು ಎಂದು ಹೇಳಬೇಕಾಗಿರುತ್ತದೆ. ಯೇಸು ಮತ್ತು ಕುಷ್ಠರೋಗಿಯ ನಡುವಿನ ಆ ಸುಂದರವಾದ ಕ್ಷಣವನ್ನು ಕಥೆ ಹೇಳುವವರು ಹೆಚ್ಚಾದ ಮೆಲುಧ್ವನಿ ಹಾಗೂ

ಬಹಳ ಆಶ್ಚರ್ಯಚಕಿತರಾದ ಸ್ವರದಿಂದ, "ಯೇಸು.... ತನ್ನ ಕರಗಳಿಂದ.... ಕುಷ್ಠರೋಗಿಯನ್ನು.... ಮುಟ್ಟಿದನು" ಎಂದು ಹೇಳುವಾಗ ಅದನ್ನು ನೋಡಿದ, ಕೇಳಿಸಿಕೊಂಡ ಮತ್ತು ಅನುಭವಿಸಿದ ಭಾವನೆ ಉಂಟಾಗುತ್ತದೆ.

ಊ). ಕಥೆಯ ಆಸುಪಾಸಿನಲ್ಲಿಯೇ ನಾಟಕದ ಕ್ಷಣಗಳಿಗಾಗಿ ಎದುರುನೋಡಿರಿ. ಒಂದು ಸ್ವಸ್ಥತೆ ಸಂಭವಿಸಿದಾಗ, ಅಥವಾ ಅಲ್ಲಿ ಯಾವುದಾದರೂ ಅಸಾಧಾರಣವಾದ ಸಂಗತಿ ಇದ್ದಾಗ ಅಥವಾ ಕಥೆಯಲ್ಲಿಯೇ ಒಂದು ಪಾತ್ರದಿಂದ ಬಲವಾದ ಮಾತುಗಳು ಹೇಳಲ್ಪಡುವಾಗ, ಅಲ್ಲಿ ತಡವರಿಕೆಯನ್ನೋ ಅಥವಾ ಮಾತನ್ನು ಸ್ವಲ್ಪ ನಿಲ್ಲಿಸುವುದನ್ನೋ ಉಪಯೋಗಿಸುವುದನ್ನು ಪರಿಗಣಿಸಿ. ಇದನ್ನು ಮಾಡುವುದರಿಂದ, ಕೇಳಿಸಿಕೊಳ್ಳುವವರಿಗೆ ಬಿಡಿಸಿ ಹೇಳುವಂತಹ ಮತ್ತು ಅವರು ಅನುಭವಿಸುವಂತಹ ನಾಟಕೀಯ ಘಟನೆಗಳನ್ನು ಮಾಡಲು ಅವಕಾಶ ಒದಗಿಸುವಿರಿ.

ಋ). ಅನೇಕ ಕಥೆಗಳಲ್ಲಿ ಮಾತನಾಡುವವರ ಪದಗಳಿಗೆ ಸಂಬಂಧವೇರ್ಪಡಿಸುವಂತಹ ಸಾಮಾನ್ಯವಾದ ಕಥಾನಿರೂಪಣೆ ಇರುತ್ತದೆ. ಈ ಭಾಗಗಳನ್ನು ಸಾಮಾನ್ಯವಾದ ಧ್ವನಿಯಿಂದ ಹೇಳುವುದು ಉತ್ತಮವಾಗಿರುತ್ತದೆ.

ಌ) ಆದಾಗ್ಯೂ ಕೆಲವೊಮ್ಮೆ, ಕಥಾನಿರೂಪಣೆಗಾರರ ಪದಗಳು ಆ ಕಥೆಗೆ ಆಸಕ್ತಿಯನ್ನು ತೋರಿಸಬಲ್ಲದು. ಕಥಾ ನಿರೂಪಣೆಗಾರರ ಮಾತುಗಳು ಸ್ಥಳದ ಬದಲಾವಣೆ ಅಥವಾ ಕಥೆಯ ಒಂದು ಆಶ್ಚರ್ಯಕರವಾದ ಭಾಗಕ್ಕೆ ಗಮನವನ್ನು ಸೆಳೆಯುವುದಕ್ಕೆ ಸಾಧ್ಯ. ಈ ಮಾತುಗಳನ್ನು ಆಳವಾದ ಆಸಕ್ತಿಯ ಭಾವನೆಯೊಂದಿಗೆ ಹೇಳಲ್ಪಡುತ್ತವೆ. ಇದು ಕಥಾನಿರೂಪಣೆಗಾರನು ಯಾವುದೋ ರಹಸ್ಯವಾದ ಉತ್ತೇಜನಭರಿತ ಮಾಹಿತಿಯನ್ನು ಕೇಳಿಸಿಕೊಳ್ಳುವವರೊಂದಿಗೆ ಹಂಚಿಕೊಳ್ಳುತ್ತಿರುವನೇನೋ ಎಂಬಂತೆ ತೋರ್ಪಡುತ್ತದೆ, ಹಾಗಾಗಿ, ಇದನ್ನು ದೊಡ್ಡದಾದ ಮೆಲುಧ್ವನಿಯಲ್ಲಿ ಹೇಳಬೇಕು.

ಈ ರೀತಿ ಮಾತನಾಡುವುದು ಜನರನ್ನು ಆ ಮಾತುಗಳ ಕಡೆಗೆ ಆಸಕ್ತಿಯನ್ನು ವಹಿಸುವಂತೆ ಮಾಡುತ್ತದೆ. ನೀವು "ಅಷ್ಟರಲ್ಲಿ", ಅಥವಾ "ಅದೇ ಸಮಯದಲ್ಲಿ", ಅಥವಾ "ಅವರು ಬಂದ ನಂತರ" ಎಂಬ ಸಾಮಾನ್ಯ ಪದಗಳನ್ನೂ ಸಹ ಹೇಳಬಹುದು, ಆದರೆ ಇವುಗಳನ್ನು ಕುತೂಹಲ ಕೆರಳಿಸುವ ರೀತಿಯಲ್ಲಿ ಹೇಳಬೇಕು.

7. **ನಟನೆಯನ್ನು (ಆಕ್ಶನ್) ಉಪಯೋಗಿಸಿ, ಕಥೆಯನ್ನು ತೋರಿಸಿ.** ಕಥೆಗೆ ಸರಿಯಾಗಿ ಹೊಂದಿಕೊಳ್ಳುವಂತಹ ನಟನೆ ಅಂದರೆ, ಕೋಪ, ದುರಾಸೆ, ಆಕ್ರಮಣ, ಪಲಾಯನ, ಆಶ್ಚರ್ಯ, ಧೈರ್ಯ, ಜ್ಞಾನ, ಖಿನ್ನತೆ ಮತ್ತು ಇನ್ನಿತರ ಭಾವನೆಗಳನ್ನು ತೋರಿಸಬಹುದು. ಭಾವನೆಗಳನ್ನು ಚಿಕ್ಕ ಅಭಿನಯದ ಮೂಲಕವೂ ಸಹ ತೋರ್ಪಡಿಸಬಹುದು. ನೀವು ಎಲ್ಲಿ ನಿಂತಿರುವಿರೋ ಅಲ್ಲಿಂದ, ನಿಮ್ಮ ಕಥೆಯಲ್ಲಿ ಹೇಳಲ್ಪಟ್ಟಿರುವ ಜನರ ಸ್ಥಳಗಳು, ಗುಂಪುಗಳು ಅಥವಾ ಸ್ಥಳಗಳನ್ನು ನೋಡುವುದರಿಂದ ಅಥವಾ ಅಭಿನಯದಿಂದ ತೋರ್ಪಡಿಸಬಹುದು.

ಒಬ್ಬ ವ್ಯಕ್ತಿಯು ಹೇಳಿರುವಂತಹುದನ್ನೇ ನೀವು ಹೇಳುವಾಗ, ನಿಮ್ಮ ದೇಹವನ್ನು ಸ್ವಲ್ಪಬೇರೆ ಕಡೆಗೆ ತಿರುಗಿಸಿ ಮತ್ತು ಸರಿಯಾದ ಕಡೆಗೆ ನೋಡುತ್ತಾ ಅಂದರೆ, ಕಥೆಯಲ್ಲಿನ ವ್ಯಕ್ತಿಯು, ಯಾವ ಸ್ಥಳದಲ್ಲಿದ್ದ, ಎಲ್ಲಿ ನೋಡುತ್ತಿರಬಹುದು ಅಥವಾ ಆ ವ್ಯಕ್ತಿಯು ಏನು ಮಾಡುತ್ತಿದ್ದನು ಎಂಬುದನ್ನು ಇದು ನಟನೆಯ ರೂಪದಲ್ಲಿ

ತೋರಿಸುತ್ತದೆ. ಉದಾಹರಣೆಗೆ, ಸ್ವಸ್ಥಗೊಂಡ ಜನರು ಬಹಳ ಆಶ್ಚರ್ಯಚಕಿತರಾಗಿ ಕಾಣುವರು ಮತ್ತು ಅವರು ಹೊಸದಾಗಿ ಸ್ವಸ್ಥಗೊಂಡ ತಮ್ಮ ದೇಹವನ್ನು ನಿಧಾನವಾಗಿ ಚಲಿಸುತ್ತಾರೆ ಅಥವಾ ಅವರು ಬಹಳ ಉತ್ಸಾಹಗೊಂಡು ಸಂತೋಷದಿಂದ ಕುಣಿಯಬಹುದು. ಮಾತಿನಲ್ಲಿ ಮತ್ತು ಚಲನೆಯಲ್ಲಿ ತಡೆದು ತಡೆದು ತೋರಿಸುವಂತಹುದು ಕಥೆ ಹೇಳುವುದಕ್ಕೆ ಒಂದು ನೈಜತೆಯನ್ನು ಮತ್ತು ನಾಟಕವನ್ನು ಸೇರಿಸುವಂತಹುದಾಗಿದೆ.

ಒಂದು ಎಚ್ಚರಿಕೆಯ ಮಾತು: ನೀವು ಯಾರಿಗೆ ಕಥೆ ಹೇಳಿರುವಿರೋ ಅವರು ನಂತರ ನಿಮ್ಮ ಬಳಿಗೆ ಬಂದು ನೀವು ಬಹಳ ಚೆನ್ನಾಗಿ ಕಥೆಯನ್ನು ಹೇಳುವವರು ಅಥವಾ ಬಹಳ ಚೆನ್ನಾಗಿ ನಟನೆ ಮಾಡುವಿರಿ ಎಂದು ಹೇಳುವುದನ್ನು ನೀವು ಕಂಡರೆ, ನಿಮ್ಮ ಕಥಾನಿರೂಪಣೆಯ ಕುರಿತಾಗಿ ಮತ್ತೊಮ್ಮೆ ಆಲೋಚಿಸಿ. ಕಥೆ ಹೇಳುವವರು ವೈಶಿಷ್ಟ್ಯವುಳ್ಳವರಲ್ಲ; ದೇವರ ವಾಕ್ಯವೇ ವೈಶಿಷ್ಟ್ಯವುಳ್ಳದ್ದಾಗಿದೆ. ಕಥೆ ಹೇಳುವವರು ಅತಿಯಾಗಿ ನಟನೆಯನ್ನು ಮಾಡುವಂತಹುದು, ಮಾತುಗಳ ಮೇಲಿನ ಗಮನವನ್ನು ತೆಗೆದುಹಾಕುತ್ತದೆ; ಜನರು ಕೇಳಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ನೋಡುವುದಕ್ಕೆ ಪ್ರಾರಂಭಿಸುತ್ತಾರೆ. ನೀವು ಹೇಳುವ ಮಾತುಗಳಿಗೆ ಉದಾಹರಣೆಯನ್ನು ಕೊಡುವಂತಹ ಚಿಕ್ಕ ಅಭಿನಯವು ಉತ್ತಮವಾಗಿರುವಂತಹುದಾಗಿದೆ. "ಆ ಕಥೆ ನನ್ನೊಂದಿಗೆ ಮಾತನಾಡಿತು", ಅಥವಾ "ಆ ಕಥೆಯಲ್ಲಿನ ವ್ಯಕ್ತಿ ನಾನೇ" ಎಂದು ಜನರು ಹೇಳುವುದನ್ನೇ ನೀವು ಬಯಸುವವರಾಗಿರಬೇಕು.

8. **ಕಥೆಯನ್ನು ಹೇಳುವುದಕ್ಕೆ ನಿಲ್ಲಬೇಕೇ ಅಥವಾ ಕುಳಿತುಕೊಳ್ಳಬೇಕೇ?** ಅನೇಕ ಸಂಸ್ಕೃತಿಗಳಲ್ಲಿ ಮತ್ತು ಸಂದರ್ಭಗಳಲ್ಲಿ ನಿಂತು ಹೇಳುವುದಕ್ಕಿಂತಲೂ ಜನರೊಂದಿಗೆ ಕುಳಿತುಕೊಂಡು ಕಥೆಯನ್ನು ಹೇಳುವುದು ಬಹಳ ಸೂಕ್ತವಾಗಿದೆ. ನೀವು ನಿಂತುಕೊಂಡು ನಿಮ್ಮ ಕಥೆಯನ್ನು ಅಭ್ಯಾಸ ಮಾಡಿ ಎಂದು ನಾವು ನಿಮಗೆ ಸಲಹೆ ಕೊಡುತ್ತೇವೆ. ಆಗ ನೀವು ಕಥೆಯನ್ನು ಹೇಳುವುದಕ್ಕೆ ದೇಹವನ್ನು ಸಂಪೂರ್ಣವಾಗಿ ನಟನೆಯಲ್ಲಿ ತೊಡಗಿಸುವುದರೊಂದಿಗೆ ಮತ್ತು ಸರಿಯಾದ ಭಂಗಿಯಲ್ಲಿ ನಿರೂಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡಿದಾಗ ಕಥೆಯನ್ನು ಒಂದು ದೊಡ್ಡ ಗುಂಪಿಗೆ ಹೇಳುವ ಅವಕಾಶ ಸಿಗುತ್ತದೆ ಅಥವಾ ಬೇರೆ ಸಂದರ್ಭಗಳಲ್ಲಿ ನಿಂತುಕೊಂಡು ಕಥೆಯನ್ನು ಹೇಳುವುದೇ ಉತ್ತಮವಾದ ವಿಧಾನವಾಗಿರುತ್ತದೆ, ಅಲ್ಲಿ ನೀವು ಎಲ್ಲಾ ನಟನೆಗಳನ್ನು ಅಭ್ಯಾಸ ಮಾಡಿದವರಾಗಿರುತ್ತೀರಿ.

   ನಾವು ಹೇಳುವ ಕಥೆಯನ್ನು ಕೇಳಿಸಿಕೊಳ್ಳುವವರು ಅರ್ಥಮಾಡಿಕೊಳ್ಳಬೇಕು ಮತ್ತು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ನಾವು ಬಯಸುತ್ತೇವೆ. ಜನರಿಗೆ ಕಥೆಯಲ್ಲಿ ಆಸಕ್ತಿಯನ್ನು ಮೂಡಿಸುವುದಕ್ಕಾಗಿ ಕೇವಲ ನಟನೆಗಳನ್ನು ಮತ್ತು ವ್ಯಕ್ತಪಡಿಸುವಿಕೆಗಳನ್ನು ಮಾತ್ರ ಮಾಡುವುದಲ್ಲದೆ, ಇವರು ಇದರ ಮೂಲಕ ಕಥೆಯಲ್ಲಿನ ಅಂಶಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಜನರ ಸಾಮರ್ಥ್ಯವನ್ನು ಹೆಚ್ಚಿಸುತ್ತಿರುವರು. ನಿಜವಾಗಿಯೂ, ಕಥೆಯನ್ನು ಹೇಳುವಾಗ ಕುಳಿತುಕೊಳ್ಳುವುದೇ ಉತ್ತಮವೆನಿಸಿದರೆ, ಖಂಡಿತವಾಗಿಯೂ ಕುಳಿತುಕೊಳ್ಳಿ. ಆದರೆ ಕಥೆ ಹೇಳುವ ನಿಮ್ಮ ಸೇವೆಯನ್ನು ಹೆಚ್ಚಾಗಿ ಕುಳಿತುಕೊಂಡೇ ಮಾಡುವುದಾದರೆ, ಅಲ್ಲಿ ನೀವು ಅಭ್ಯಾಸ ಮಾಡಿರುವುದರಲ್ಲಿ ಕೇವಲ ಕೆಲವೇ ಕೆಲವು ನಟನೆಗಳನ್ನು ಮಾತ್ರ ತೋರಿಸಲು ಸಾಧ್ಯವಾಗುತ್ತದೆ.

9. **ಕಥೆಯನ್ನು ಆರಂಭಿಸುವುದು.** ಮೊದಲೇ ಹೇಳಿರುವ ಹಾಗೆ, ನೀವು ಕಥೆಯನ್ನು ಹೇಳಲು ಪ್ರಾರಂಭಿಸಿದಾಗ, "ಈಗ ಇದು ಕಥೆಯಾಗಿದೆ" ಅಥವಾ "ಇದು ಸತ್ಯವೇದದ ಕಥೆ" ಎಂದು ಹೇಳಿರಿ. ನೀವು ಕಥೆಯನ್ನು

ಹೇಳಲು ಪ್ರಾರಂಭಿಸಿದಾಗ, ತೆರೆದಿಟ್ಟ ಸತ್ಯವೇದವನ್ನು ಹಿಡಿದುಕೊಳ್ಳಿ. ಇದು ನೀವು ಏನನ್ನು ಹೇಳುತ್ತಿರುವಿರೋ ಅದು ಸತ್ಯವೇದದಿಂದ ಹೇಳಲಾಗುತ್ತಿದೆ ಎಂಬುದು ಕೇಳಿಸಿಕೊಳ್ಳುವವರಿಗೆ ತಿಳಿಯುತ್ತದೆ. ನಿಮ್ಮ ಕಥೆಗೆ ಒಂದು ಪರಿಚಯ ಇರುವುದಾದರೆ, ನೀವು ಪರಿಚಯವನ್ನು ಹೇಳುವಾಗ ನಿಮ್ಮ ಸತ್ಯವೇದವನ್ನು ಮುಚ್ಚಿಡಿ. ಒಂದು ಪರಿಚಯವೆನ್ನುವುದು ನಿಮ್ಮ ಮಾತುಗಳಾಗಿವೆಯೇ ಹೊರತು, ಅದು ಕಥೆಯಲ್ಲ.

ಕೆಲವು ಕಥೆಗಳನ್ನು ಹೇಳುವಾಗ ಅದನ್ನು ಅಭಿನಯಿಸಿ ತೋರಿಸಲು ನಿಮ್ಮ ಎರಡು ಕೈಗಳನ್ನು ನೀವು ಉಪಯೋಗಿಸಲು ಬಯಸಬಹುದು. ನೀವು ಮಾತನಾಡುತ್ತಿರುವಾಗಲೇ, ತೆರೆದಿರುವ ನಿಮ್ಮ ಸತ್ಯವೇದವನ್ನು ಹತ್ತಿರದ ಮೇಜಿನ ಮೇಲೆ ಅಥವಾ ವೇದಿಕೆಯ ಮೇಲೆ ಇಡಿ. ನೀವು ಅದನ್ನು ಕೆಳಗಿಡುತ್ತಿರುವಾಗಲೂ ಮಾತನಾಡುತ್ತಲೇ ಇರಿ, ಆಗ ಕೇಳಿಸಿಕೊಳ್ಳುವವರು ಈಗಲೂ ಸಹ ನೀವು ಸತ್ಯವೇದದಲ್ಲಿನ ಕಥೆಯ ಕುರಿತಾಗಿಯೇ ಹೇಳುತ್ತಿರುವಿರಿ ಎಂದು ತಿಳಿದುಕೊಳ್ಳುತ್ತಾರೆ. ನೀವು ನಿಮ್ಮ ಕಥೆಯ ಅಂತ್ಯಭಾಗದಲ್ಲಿರುವಾಗ, ನಿಮ್ಮ ತೆರೆದ ಸತ್ಯವೇದವನ್ನು ಎತ್ತಿಕೊಳ್ಳುವಾಗಲೂ ಸಹ ಕಥೆಯನ್ನು ಹೇಳುವುದನ್ನು ಮುಂದುವರೆಸಿ.

(ಕ್ರಿಸ್ತ ವಿರೋಧಿಗಳಿರುವಂತಹ ಸ್ಥಳದಲ್ಲಿ ನೀವು ಕಥೆ ಹೇಳುತ್ತಿರುವುದಾದರೆ, ನೀವು ಸತ್ಯವೇದವನ್ನು ಕೈಯಲ್ಲಿ ಹಿಡಿದುಕೊಳ್ಳಬೇಕಾಗಿಲ್ಲ ಅಥವಾ ಕೇಳಿಸಿಕೊಳ್ಳುವವರಿಗೆ ಇದು ಸತ್ಯವೇದದಲ್ಲಿನ ಕಥೆ ಎಂದೂ ಹೇಳಬಹುದು. ಇಂತಹ ಸಂದರ್ಭದಲ್ಲಿ, ನೀವು ಕಥೆಯನ್ನು ಮಾತ್ರ ಹೇಳಿ ಮತ್ತು ಅದರಲ್ಲಿನ ಅಂಶಗಳಿಂದ ಕೇಳಿಸಿಕೊಳ್ಳುವವರು ಆತ್ಮೀಕವಾಗಿ ಮುಟ್ಟಲ್ಪಡಲಿ, ನಂತರ ಚರ್ಚೆಯನ್ನು ಮುಂದುವರೆಸಿ.)

10. **ಕೆಲವೊಮ್ಮೆ, ಎಲ್ಲರ ಕಡೆಗೆ ನೋಡಿ!** *ಕಥೆ* ಮಾತ್ರದಲ್ಲಿ ತರಬೇತಿಯ ಸಮಯದಲ್ಲಿ ಕಥೆ ಹೇಳುವವರು ತಾವು ಕಥೆಯನ್ನು ಹೇಳುವಾಗ ಪ್ರತಿಯೊಬ್ಬರ ಕಡೆಗೂ ನೋಡಬೇಕೆಂದು ನಾವು ಕಲಿಸುತ್ತೇವೆ. ಆಸಕ್ತಿಕರವಾಗಿ, ಇಂತಹ ಒಂದು ಕಾರ್ಯಾಗಾರದಲ್ಲಿ ಒಂದು ಗುಂಪಿನಲ್ಲಿದ್ದ ಹೊಸಬನಾಗಿದ್ದ ಕಥೆ ಹೇಳುವವನು ಕಥೆ ಪೂರ್ತಿ ನನ್ನನ್ನು ಮಾತ್ರ ದೃಷ್ಟಿಸುತ್ತಾ ಇದ್ದುದರಿಂದ ಒಂದು ಸಂಶೋಧನೆ ಮಾಡಲಾಯಿತು. ನಾನು ಅವನನ್ನು ತಿದ್ದುವುದಕ್ಕೂ ಮೊದಲು, ಅವನ ಸಂಸ್ಕೃತಿಯಲ್ಲಿ ತನ್ನ ಮಾಹಿತಿಯನ್ನು ಕೇವಲ ವೃದ್ಧರಿಗೆ ಅಥವಾ ಗುಂಪಿನ ಮುಖ್ಯವಾದ ವ್ಯಕ್ತಿಗೆ ಮಾತ್ರ ತಿಳಿಸುವುದನ್ನು ಅಪೇಕ್ಷಿಸಲಾಗುತ್ತದೆಯೇ ಎಂದು ಕೇಳಿದೆನು. ಅದಕ್ಕೆ ಆತನು, "ಹೌದು, ನಿಜ" ಎಂದು ಹೇಳಿದನು.

ಓಹ್ ಇಲ್ಲಾ! ಸಂಸ್ಕೃತಿಯ ಘರ್ಷಣೆ. ಪ್ರತಿಯೊಬ್ಬರನ್ನೂ ಧೈರ್ಯದಿಂದ ತುಂಬುವುದು ಮತ್ತು ಭಾಗವಹಿಸುವವರೆಲ್ಲರೂ ಪ್ರಶ್ನೆಗಳಿಗೆ ಪ್ರತಿಕ್ರಿಯೆಯನ್ನು ಕೊಡುವುದರಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದೇ ಈ *ಕಥೆ* ಮಾತ್ರದಲ್ಲಿನ ನಮ್ಮ ಬಯಕೆಯಾಗಿದೆ. ಆ ದಿನ ಸಾಯಂಕಾಲ *ಕಥೆ* ಮಾತ್ರದ ರಾಷ್ಟ್ರೀಯ ಮಾರ್ಗದರ್ಶಕರೊಂದಿಗೆ ಈ ಘರ್ಷಣೆಯನ್ನು ದೀರ್ಘವಾಗಿ ಚರ್ಚಿಸಿದೆವು. ಹಿರಿಯರಿಗೆ ಮತ್ತು ನಾಯಕರಿಗೆ ಗೌರವ ಕೊಡುವುದು ಒಳ್ಳೆಯದೇ ಆದರೂ ಸಹ, ಯಾರನ್ನೂ ಅಲಕ್ಷಿಸಬಾರದು ಎಂಬ ಒಪ್ಪಿಗೆಗೆ ಬಂದೆವು. ಖಂಡಿತವಾಗಿಯೂ, ಹಿರಿಯರನ್ನು ಒಪ್ಪಿಕೊಳ್ಳುವುದರಿಂದ ಪ್ರಾರಂಭಿಸಿ, ಸಮಾಜದಲ್ಲಿರುವ ಜನರ ಶ್ರೇಣಿ ಅಥವಾ ಸ್ಥಾನಮಾನಗಳನ್ನು ಪರಿಗಣಿಸದೆ ಕಥೆ ಹೇಳುವವರು ಎಲ್ಲರನ್ನೂ ನೋಡುತ್ತಾ ಕಥೆಯನ್ನು ಹೇಳಬೇಕು. ಇಡೀ ಭಾಗದಲ್ಲಿ ಕಥೆ ಹೇಳುವವರು ಮೇಲ್ದರ್ಜೆಯ ಜನರನ್ನು ಸೇರಿಸಿಕೊಳ್ಳುತ್ತಾರೆ ಮತ್ತು ಅವರೊಂದಿಗೆ ಹೇಳುತ್ತಿರುತ್ತಾರೆ. ಆದರೆ, ಗುಂಪಿನಲ್ಲಿರುವ ಇನ್ನಿತರರ ಕಡೆ ನೋಡುವುದರಿಂದಲೂ ಸಹ, ಅಂದರೆ ತೋರ್ಪಡಿಸುವಿಕೆಯಿಂದಲೂ, ಕಥೆ ಹೇಳುವವರು ಈ ದಿನ ನಮ್ಮ ನೆರೆಯವರು (ಒಳ್ಳೆಯ ಸಮಾರ್ಯದವನ ಕಥೆಯಲ್ಲಿರುವಂತೆಯೇ) ಯಾರೆಂದು ತೋರಿಸುತ್ತಾನೆ.

ಈ ಲೋಕದ ದೇವರು ಬಲಿಷ್ಠರನ್ನು ಮೇಲಕ್ಕೆತ್ತಲು ಮತ್ತು ಬಲಹೀನರನ್ನು ಕೆಳಗೆ ಹಾಕುವುದಕ್ಕೆ ಎಲ್ಲಾ ಮನುಕುಲದ ಸಂಸ್ಕೃತಿ ಮನಃಸ್ಥಿತಿಯೊಳಗೆ ತಪ್ಪಾಗಿ ಅರ್ಥೈಸಿರುವನು. *ಕಥೆ* ಮಾತ್ರದ ಕಾರ್ಯಾಗಾರದಲ್ಲಿ, ವಿಶ್ವಾಸಿಗಳಾಗಿ ನಾವು ವಿಶೇಷವಾಗಿ ಜೀವನದ ಅಂಚಿನಲ್ಲಿರುವವರನ್ನು, ಸ್ತ್ರೀಯರನ್ನು, ಮಕ್ಕಳನ್ನು, ಸಾಮಾನ್ಯರನ್ನು, ಸಮಾಜದ ಹೊರಹಾಕಿದವರನ್ನು, ಮುಂತಾದವನ್ನು ಸೇರಿಸಿಕೊಳ್ಳಬೇಕೆಂದು ಬೋಧಿಸುತ್ತೇವೆ, ಆದರೆ ಯೇಸು ತಮ್ಮ ಸೇವೆಯಲ್ಲಿ ಎಲ್ಲರನ್ನೂ ಸೇರಿಸಿಕೊಂಡಿರುವುದನ್ನು ನೋಡುತ್ತೇವೆ.

ಎಸ್ ಟಿ ಎಸ್ ತರಬೇತಿನಲ್ಲಿ ಎಲ್ಲರೂ ಕ್ರಿಯಾಶೀಲರಾಗಿರುವ ಹಾಗೆ ನೋಡಿಕೋಳ್ಳುತ್ತೇವೆ, ಎಲ್ಲರನ್ನೂ ಸಮಾನವಾಗಿ ನೋಡುತ್ತೇವೆ. ಮಕ್ಕಳಿನ್ನೂ, ಹಿರಿಯರಿನ್ನೂ, ಮಹಿಳೆಯರಿನ್ನೂ, ಸಮಾಜದಲ್ಲಿ ಬೆಲೆಇಲ್ಲದವರನ್ನೂ ಸಮಾನವಾಗಿ ನೋಡುತ್ತೇವೆ.

ಪ್ರತಿಯೊಬ್ಬರನ್ನು ಸೇರಿಸಿಕೊಳ್ಳುವ ಸತ್ಯವೇದಕ್ಕನುಗುಣವಾದ ತತ್ವವು ವಾಕ್ಯದಲ್ಲಿ ಸರಳವಾಗಿದೆ. ಯೇಸು ಇದನ್ನು ಮಾಡಿದನು. ಆತನ ಕಾಲದಲ್ಲಿ ಆತನ ಸಂಸ್ಕೃತಿಯು ಕೀಳುಮಟ್ಟದ ಜನರೆಂದು ಪರಿಗಣಿಸಿದ್ದವರ ಕುರಿತಾಗಿ ಯೇಸು ಗಮನಿಸುವುದನ್ನು ಮತ್ತು ಅವರೊಂದಿಗೆ ಹೆಚ್ಚಿನ ಸಮಯವನ್ನು ಕಳೆಯುವುದರ ನಿಮಿತ್ತ ಟೀಕೆಗೊಳಗಾಗಿದ್ದನು.

ಸಂಸ್ಕೃತಿಯ ಯಾವುದಾದರೂ ಸಂಗತಿಯು ವಾಕ್ಯದೊಂದಿಗೆ ಘರ್ಷಣೆಗೊಳಗಾದಾಗ, ವಿಶ್ವಾಸಿಗಳು ಒಂದು ಆಯ್ಕೆಯನ್ನು ಮಾಡಲೇಬೇಕಾಗಿರುತ್ತದೆ.

ಆಗ ಒಬ್ಬರ ಸಂಸ್ಕೃತಿಯು ಒಬ್ಬರ ಕ್ರಿಯೆಗಳನ್ನು ಮತ್ತು ನಂಬಿಕೆಗಳನ್ನು ಮಾರ್ಗದರ್ಶಿಸಲಿ ಅಥವಾ ದೇವರ ವಾಕ್ಯವು ವ್ಯಕ್ತಿಯ ಕ್ರಿಯೆಗಳನ್ನು ಮತ್ತು ನಂಬಿಕೆಗಳನ್ನು ಒಂದು ಉನ್ನತ ಮಟ್ಟಕ್ಕೆ ನಡೆಸಲಿ ಎಂಬುದನ್ನು ಪ್ರತಿಯೊಬ್ಬ ವಿಶ್ವಾಸಿಯು ನಿರ್ಧರಿಸಲೇಬೇಕು.

11. **ಕಥೆಯನ್ನು ಮುಕ್ತಾಯಗೊಳಿಸಿ.** ನೀವು ಕಥೆಯನ್ನು ಸಂಪೂರ್ಣವಾಗಿ ಹೇಳಿದಾಗ, ಕೇಳಿಸಿಕೊಳ್ಳುತ್ತಿರುವವರಿಗೆ, "ಇದು ಕಥೆಯ ಮುಕ್ತಾಯ," ಎಂದು ಹೇಳಿ, ಸತ್ಯವೇದವನ್ನು ಮುಚ್ಚಿಡಿ.

12. **ನೀವು ಆಯ್ಕೆ ಮಾಡಿದ ಕಥೆಯನ್ನು ಕೇಳಿಸಿಕೊಳ್ಳುವವರು ಸುಲಭವಾಗಿ ಹೇಳುವ ತನಕ ಆಗಾಗ್ಗೆ ಹೇಳುತ್ತಿರಿ.** ಯಾರೂ ಸಿಗದೆ ಇದ್ದರೆ, ಹತ್ತಿರದಲ್ಲಿರುವ ಪ್ರಾಣಿ ಅಥವಾ ಒಂದು ಮರಕ್ಕೆ ಹೇಳಿ. ನೀವು ಅಲ್ಲಿರುವ ಅದೇ ಪದಗಳನ್ನೇ ಬಾಯಿಪಾಠ ಮಾಡುತ್ತಿಲ್ಲ, ಆದರೆ ನೀವು ಒಂದು ನಿಖರವಾದ ಕಥೆಯನ್ನು ಹೇಳುತ್ತಿರುವಿರಿ ಎಂಬುದನ್ನು ನೆನಪಿನಲ್ಲಿಡಿ.

ಧೈರ್ಯವಾಗಿರಿ. ಭರವಸೆಯಿಂದಿರಿ. ಬರವಣಿಗೆ ಇಲ್ಲ!

ಯೇಸು ಪರ್ವತದ ಮೇಲೆ ಮಾಡಿದ ಪ್ರಸಂಗ ಮಾಡುವುದಕ್ಕೆ ನಿಂತನು ಮತ್ತು ಪ್ರಸಂಗಿಸುವುದಕ್ಕೆ ತಾನು ಬರೆದುಕೊಂಡಿರುವ ಸಂಗತಿಗಳನ್ನು ಇಟ್ಟುಕೊಂಡಿರುವುದನ್ನು ನೀವು ಊಹೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆಯೆ? ಬಹುಶಃ ಇಲ್ಲ. ಯಾರಾದರೂ ನಿಮ್ಮನ್ನು ನಿಮ್ಮ ಸಾಕ್ಷಿ ಹೇಳುವಂತೆ ಕೇಳಿದಾಗ, ಅಥವಾ ನಿಮ್ಮ ಬಾಳಸಂಗಾತಿಯನ್ನು

ನೀವು ಹೇಗೆ ಭೇಟಿಯಾದಿರಿ ಅಥವಾ ನಿಮ್ಮ ಜೀವನದ ಅತಿ ಸಂತೋಷದ ಕ್ಷಣದ ಕುರಿತಾಗಿ ಕೇಳಿದಾಗ, ಉತ್ತರ ಕೊಡುವುದಕ್ಕೆ ನೀವು ಬರೆದಿಟ್ಟುಕೊಂಡಿರುವುದನ್ನು ನೋಡಿ ಹೇಳುವಿರೇ? ನಾವು ಮಾತನಾಡುವಂತಹ ಕೆಲವು ಮಾಹಿತಿಗಳನ್ನು ನಾವು ನೆನಪಿನಲ್ಲಿಟ್ಟುಕೊಂಡಿರುತ್ತೇವೆ. ಅವು ನಮ್ಮ ಸ್ವಂತವಾಗಿವೆ. ನಮ್ಮ ದಿನಚರಿಯ ಕುರಿತಾಗಿ ಒಬ್ಬ ಸ್ನೇಹಿತನೊಂದಿಗೆ ಮಾತನಾಡುವಾಗಲೂ ಸಹ, ಅವುಗಳನ್ನು ಕುರಿತು ನಾವು ನೆನಪಿನಲ್ಲಿಟ್ಟುಕೊಂಡಿರುವುದರಿಂದ ಹೇಳುತ್ತೇವೆ. ಮಾಹಿತಿಯು ನಮ್ಮ ಸ್ವಂತವಾಗಿದೆ, ಏಕೆಂದರೆ ಇದು ಒಂದು ಕಥೆಯಾಗಿದೆ, ಹಾಗಾಗಿ ಇದನ್ನು ನಾವು ಸುಲಭವಾಗಿ ಪುನಃ ಹೇಳಬಹುದಾಗಿದೆ.

ನೀವು ಹೊಸ ಕೌಶಲವನ್ನು ಹೊಂದಿಕೊಳ್ಳುವುದಕ್ಕೆ *ಕಥೆ* ಮಾತ್ರ ಬಯಸುವಂತಹುದಾಗಿದೆ ಎಂದು ನಮಗೆ ತಿಳಿದಿದೆ. ಹಿಂದೆ, ನೀವು ಎಂದಾದರೂ ಒಬ್ಬ ಪ್ರಸಂಗಿ ಅಥವಾ ಬೋಧಕರಾಗಿದ್ದರೆ, ನಿಮ್ಮ ನಿರೂಪಣೆಯನ್ನು ನೆನಪಿಸಿಕೊಳ್ಳಲು ನೀವು ಬರೆದಿರುವುದರ ಸಹಾಯವನ್ನು ಉಪಯೋಗಿಸಿರುವಿರೆಂಬುದರಲ್ಲಿ ಸಂದೇಹವಿಲ್ಲ. ನೀವು ಒಂದು ಭಾಷಣ ಅಥವಾ ಒಂದು ವಿಷಯದ ಅಧ್ಯಯನವನ್ನು ಪ್ರಾಸಂಗಿಕವಾದ ಅಂಶದಲ್ಲಿ ಸೇರಿಸಿಡುವಾಗ, ಬರವಣಿಗೆಯಲ್ಲಿರುವ ಅಗತ್ಯವಾಗಿದೆ. ಆದರೆ ಕಥೆಗೆ, ಯಾವುದೇ ಬರವಣಿಗೆಯ ಅಗತ್ಯವಿಲ್ಲ.

ಮನೆಯಲ್ಲಿ ಸಿದ್ಧಪಡಿಸಿದಂತಹ ಚಾಕೊಲೇಟ್ ಕೇಕ್‌ನ ರುಚಿಯನ್ನು ನೀವು ಸವಿದು, ಇದು ಉತ್ಕೃಷ್ಟವಾದದ್ದು ಎಂದು ನಿಮಗೆ ಅನಿಸಿದ್ದರೆ, ಇದನ್ನು ಹೇಗೆ ಮಾಡುವುದು ಎಂಬುದರ ವಿಧಾನವನ್ನು ಸಾಮಾನುಗಳ ಪಟ್ಟಿಯನ್ನು ನೀವು ಕೇಳಿರಬಹುದು. ನೀವು ಮನೆಗೆ ಹೋಗಿ ನಿಮಗಾಗಿ ಈ ರೀತಿ ಒಂದನ್ನು ತಯಾರಿಸಲು ಹೋದರೆ, ಅಲ್ಲಿ ಬಳಸುವ ಚಾಕೊಲೇಟ್ ಬದಲಾಗಿ ವೆನಿಲಾ ಉಪಯೋಗಿಸಲು ಅಥವಾ ಹಿಟ್ಟಿನ ಬದಲು ಅಕ್ಕಿಯನ್ನು ಉಪಯೋಗಿಸಲು ಸಾಧ್ಯವಾಗುವುದೇ? ಇಲ್ಲಾ, ಖಂಡಿತವಾಗಿಯೂ ಇಲ್ಲ. ಕೇಕ್‌ನ ಪ್ರತ್ಯೇಕತೆಯು ಅದನ್ನು ಮಾಡಲು ಬಳಸುವ ಸಾಮಗ್ರಿಗಳ ಮೇಲೆ ಆಧಾರಗೊಂಡಿದೆ.

ಕಥೆ ಮಾತ್ರ ವಿಧಾನದ ರೀತಿಯನ್ನು ಅನುಸರಿಸುವುದರ ಸಲಹೆ ಮತ್ತು ಕಥೆ ಮಾತ್ರದ ಪ್ರತಿ ಹೆಜ್ಜೆಯನ್ನು ಭರವಸೆ ಇಡುವುದು ಒಂದು ಉದ್ದೇಶವನ್ನು ಹೊಂದಿದೆ.

ಕಥೆ ಮಾತ್ರಕ್ಕಾಗಿ ಒಂದು ಕಥೆಯನ್ನು ಸಿದ್ಧಪಡಿಸುವಾಗ, ಇದನ್ನು ಬರವಣಿಗೆಯಲ್ಲಿ ಅಲ್ಲ ಆದರೆ ಇವೆಲ್ಲವನ್ನೂ ನಿಮ್ಮ ಮನಸ್ಸಿನಲ್ಲಿ ಮಾಡಿಕೊಳ್ಳಬೇಕಾಗಿರುತ್ತದೆ! ಬಹಳವಾಗಿ ಓದಿರುವಂತವರಿಗೆ ಇದು ಸಾಧ್ಯವೆಂದು ಅನಿಸುವುದಿಲ್ಲ, ಏಕೆಂದರೆ ನಾವು ಈಗಾಗಲೇ ಹೇಳಿರುವ ಹಾಗೆ ಯಾರ್ಯಾರು ಓದುತ್ತಾರೋ ಅವರೆಲ್ಲರೂ ಮಾಹಿತಿಯನ್ನು ನೆನಪಿಸಿಕೊಳ್ಳಲು ಬರೆದಿಟ್ಟುಕೊಂಡಿರುವ ವಿಷಯಗಳ ಮೇಲೆ ಆಧಾರಗೊಂಡಿರುತ್ತಾರೆ. *ಕಥೆ* ಮಾತ್ರದ ಪ್ರಕ್ರಿಯೆಯಲ್ಲಿ, ಸಾಮಾನ್ಯವಾಗಿರದಂತ ಸಂಗತಿಯನ್ನು ಮಾಡುವಂತೆ ನಾವು ನಿಮಗೆ ಹೇಳುತ್ತೇವೆ. ಒಂದು ಪಾಠವನ್ನು ಓದಿ ಮತ್ತು ಸಿದ್ಧಪಡಿಸಿ, ಹಾಗೂ ಏನೂ ಬರೆದಿಡಬೇಡಿ! ಹೌದು ನಾವು ಗಂಭೀರವಾಗಿದ್ದೇವೆ... ಬರೆದಂತ ಯಾವ ವಿಷಯವೂ ಇರಬಾರದು.

ಕಥೆ ಮಾತ್ರದ ಒಂದು ಕಾರ್ಯಗಾರದಲ್ಲಿ ನೀವು ಭಾಗವಹಿಸಿ ಎಂಬುದಾಗಿ ನಾವು ನಿಮಗೆ ಪ್ರೋತ್ಸಾಹಿಸುತ್ತೇವೆ. ಅಲ್ಲಿ ನೀವು ಹತ್ತು ವಚನಗಳಿರುವ ಸತ್ಯವೇದದ ಒಂದು ಕಥೆಯನ್ನು ಹತ್ತೇ ನಿಮಿಷದಲ್ಲಿ ಕಲಿತುಕೊಳ್ಳುವಿರಿ. ಹಾಗೂ, *ಕಥೆ* ಮಾತ್ರದ ಮಾರ್ಗದರ್ಶಕರು ಅದರಲ್ಲಿ ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದಕ್ಕೆ ಮತ್ತು ಪ್ರಶ್ನೆಗಳನ್ನು ಸಿದ್ಧಪಡಿಸುವುದಕ್ಕೆ ವೈಯಕ್ತಿಕವಾಗಿ ಸಹಾಯವನ್ನು ಒದಗಿಸುವರು.

ಕೌಶಲ್ಯ ೨: ಕಥೆಯಲ್ಲಿರುವ ನಿಧಿಗಳನ್ನು ಕಂಡುಹಿಡಿಯುವುದು ಹೇಗೆ

ನೀವು ಪಡೆದುಕೊಳ್ಳಬೇಕಾಗಿರುವ ಎರಡನೆಯ ಕೌಶಲವೆಂದರೆ, ನೀವು ಹೇಳಬೇಕೆಂದು ಯೋಚಿಸಿರುವ ಕಥೆಯೊಳಗಿರುವ ನಿಧಿಗಳನ್ನು ಕಂಡುಹಿಡಿಯುವುದು ಹೇಗೆ ಎಂಬುದಾಗಿದೆ.

ಸತ್ಯವೇದದ ಕಥೆಯಲ್ಲಿರುವ ನಿಧಿಗಳು ಎಂದರೇನು? ಸತ್ಯವೇದದ ಪ್ರತಿ ಕಥೆಯೊಳಗೆ ದೇವರು ರಚಿಸಿರುವ ಆತ್ಮೀಕ ಸತ್ಯಗಳನ್ನು ನಾವು "ನಿಧಿಗಳು" ಎಂಬುದಾಗಿ ಕರೆಯುತ್ತೇವೆ. ಈ ನಿಧಿಗಳು ಆತ್ಮೀಕ ಅವಲೋಕನಗಳು ಮತ್ತು ಆತ್ಮೀಕ ಅನ್ವಯಿಸುವಿಕೆಗಳ ಸಂಯೋಗವಾಗಿವೆ.

ಕಥೆಯಲ್ಲಿನ ಜನರ ಜೀವಿತದಲ್ಲಿ ದೇವರು ಹೇಗೆ ಕಾರ್ಯಮಾಡುತ್ತಿರುವನು ಎಂಬುದೇ **ಆತ್ಮೀಕ ಅವಲೋಕನಗಳಾಗಿವೆ.**

ಈದಿನ ನಮ್ಮ ಜೀವಿತಗಳಿಗೆ ಅನ್ವಯಿಸುವ ಆತ್ಮೀಕ ಸತ್ಯಗಳೇ **ಆತ್ಮೀಕ ಅನ್ವಯಿಸುವಿಕೆಗಳಾಗಿವೆ.**

ಹುಡುಕವವರಿಗೆ ಕಂಡುಕೊಳ್ಳುವುದಕ್ಕೆ ಸಹಾಯ ಮಾಡುವುದು: ಫಿಲಿಪ್ಪ ಮತ್ತು ಕಂಚುಕಿಯ ಕಥೆಯನ್ನು ನೆನಪಿಸಿಕೊಳ್ಳಿ? ಅಪೊಸ್ತಲರ ಕೃತ್ಯಗಳು ೮ರಲ್ಲಿ ಬಹಳ ಮುಖ್ಯವಾದ ಒಬ್ಬ ವ್ಯಕ್ತಿಯಾದ ಇಥಿಯೋಪಿಯಾದ ಕಂಚುಕಿಯ ಬಗ್ಗೆ ಓದುತ್ತೇವೆ, ಈತನು ತನ್ನ ರಥದಲ್ಲಿ ಕುಳಿತುಕೊಂಡು ಯೆಶಾಯನ ಪುಸ್ತಕವನ್ನು ಓದುತ್ತಿರುತ್ತಾನೆ. ವಾಕ್ಯಭಾಗಗಳನ್ನು ವಿವರಿಸುವುದಕ್ಕೆ ಕರ್ತನು ಫಿಲಿಪ್ಪನನ್ನು ಆ ಕಂಚುಕಿಯ ಬಳಿಗೆ ಕಳುಹಿಸುತ್ತಾನೆ. ಕಥೆಯನ್ನು ಕೇಳಿಸಿಕೊಳ್ಳುವುದು ಒಳ್ಳೆಯದು, ಆದರೆ ಅವರು ಈಗತಾನೇ ಕೇಳಿರುವಂತಹ ಕಥೆಗೆ ಅಂಶಗಳನ್ನು ಜನರಿಗೆ ಅರ್ಥಮಾಡಿಸುವುದು ಸತ್ಯವೇದಕ್ಕನುಗುಣವಾದ ಪೂರ್ವನಿದರ್ಶನವಾಗಿದೆ.

"ಆತ್ಮೀಕ ಅವಲೋಕನಗಳು (ನಿಧಿಗಳು)" ಎಂದು ಕರೆಯಲ್ಪಡುವ ನಿಧಿಗಳನ್ನು ಹೇಗೆ ಕಂಡುಹಿಡಿಯುವುದು

ನೀವು ಕಥೆಯನ್ನು ಒಂದು ಚರಿತ್ರೆಯ ತುಣುಕಾಗಿ ಕಂಡುಹಿಡಿಯುತ್ತಿರುವುದು ಮಾತ್ರವಲ್ಲದೆ, ಆತ್ಮೀಕವಾಗಿ ಏನು ಸಂಭವಿಸುತ್ತಿದೆ ಎಂಬುದನ್ನೂ ಸಹ ನೀವು ಹುಡುಕುತ್ತಿರುವಿರಿ. ಸತ್ಯವೇದದ ಪ್ರತಿ ಕಥೆಯಲ್ಲಿಯೂ ಪ್ರತಿಯೊಬ್ಬೊಬ್ಬರಿಗಾಗಿಯೂ ದೇವರು ಒಂದು ಯೋಜನೆಯನ್ನು ಇಟ್ಟಿರುವನು. ಕಥೆಯಲ್ಲಿನ ಪಾತ್ರಗಳು ಏನನ್ನು ಕಲಿಯುತ್ತಾರೋ (ಅಥವಾ ಕಲಿಯುವುದಿಲ್ಲವೋ) ಅವುಗಳಿಂದ ದೇವರು ನಾವು ಏನನ್ನು ಕಲಿಯಬೇಕೆಂದು ಬಯಸುತ್ತಾನೆ ಎಂಬುದನ್ನು ಕಂಡುಹಿಡಿಯಬಹುದು. ಮೊದಲೇ ವಿವರಿಸಿದ ಹಾಗೆ, ಒಂದು ಸತ್ಯವೇದದ ಕಥೆಯನ್ನು ನೀವು ನೆನಪಿನಲ್ಲಿಟ್ಟುಕೊಳ್ಳುವ ಮತ್ತು ಅರ್ಥ ಮಾಡಿಕೊಳ್ಳುವ ಭಾಗವು ಆ ಕಥೆಯಂತೆ ಜೀವಿಸುವಂತಾಗಬೇಕು ಅಥವಾ ನೈಜವಾಗಿರಬೇಕು ಎಂಬುದಾಗಿದೆ.

ಕಥೆಯಲ್ಲಿನ ಪ್ರತಿಯೊಂದು ಪಾತ್ರವು ಏನನ್ನು ಹೇಳುತ್ತದೆ ಮತ್ತು ಮಾಡುತ್ತದೋ ಅದರ ಮೂಲಕ ನೀವು ಕಥೆಯನ್ನು ನೈಜವಾಗಿ ಅರ್ಥಮಾಡಿಕೊಂಡರೆ, ದೇವರು ಕಥೆಯಲ್ಲಿ ಹೇಗೆ ಕಾರ್ಯ ಮಾಡಿದನು ಎಂಬುದನ್ನು ಸಹ ಗಮನಿಸುವಿರಿ. "ಕಥೆಯಲ್ಲಿ ಜೀವಿಸುವುದು" ಎಂಬುದು ಕಥೆಯ ಕೆಲವು ನಿಧಿಗಳನ್ನು ಕಂಡುಹಿಡಿಯುವುದಕ್ಕೆ ನಿಮಗೆ ಸಹಾಯ ಮಾಡುತ್ತದೆ.

ಈ ಆತ್ಮೀಕ ನಿಧಿಗಳನ್ನು ಹುಡುಕುವುದಕ್ಕಾಗಿ, ಕಥೆಯನ್ನು ಪೂರ್ಣ ಓದಿ ಮತ್ತು ಕಥೆಯಲ್ಲಿನ ಪ್ರತಿ ವ್ಯಕ್ತಿಯ ಕುರಿತಾಗಿ ಅಥವಾ ಜನರ ಗುಂಪಿನ ಕುರಿತಾಗಿ ಏನು ಹೇಳಲಾಗಿದೆ ಎಂಬುದನ್ನು ದೃಷ್ಟಿಸುವುದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳಿರಿ. ದೇವರು ಕಥೆಯಲ್ಲಿರುವವರಿಗೆ ಏನೋ ಒಂದನ್ನು ಕಲಿಸುವುದಕ್ಕೆ ಅವರೆಲ್ಲರೊಂದಿಗೆ ಆತನು ಕಾರ್ಯ ನಿರತನಾಗಿರುತ್ತಾನೆ.

ನಿಮ್ಮ ಬಳಿ ನಿಮ್ಮ ಕಥೆಗೆ ಪೂರ್ವನಿದರ್ಶನವನ್ನು ಕೊಡುವ ಅಂಶಗಳಿಗಾಗಿ ಮುದ್ರಿತವಾಗಿರುವ ಅಥವಾ ಆಡಿಯೋ ವಾಕ್ಯಗಳು ಲಭ್ಯವಾಗಿದ್ದಲ್ಲಿ, ಪುನಃ ಅದನ್ನು ಕೇಳಿಸಿಕೊಳ್ಳಿ. ನಿಮ್ಮ ಕಥೆಗೂ ಮುನ್ನ ಬರುವ ಮಾಹಿತಿಯನ್ನು ಗಣನೆಗೆ ತೆಗೆದುಕೊಳ್ಳಿ. ಪಾತ್ರಧಾರಿಗಳು ಯಾರಾಗಿದ್ದಾರೆ, ಅವರಿಗೆ ಏನು ತಿಳಿದಿದೆ ಮತ್ತು ಅವರು ಏನನ್ನು ಅನುಭವಿಸಿದರು ಎಂಬುದನ್ನು ಅರ್ಥಮಾಡಿಕೊಳ್ಳಲು ನಿಮಗೆ ಸಹಾಯ ಮಾಡುವ ಇನ್ನಿತರ ಸಂಗತಿಗಳೇನಾದರೂ ಇವೆಯೇ?

ಆತ್ಮೀಕ ಅವಲೋಕನಗಳನ್ನು (ನಿಧಿಗಳನ್ನು) ಕಂಡುಹಿಡಿಯುವ ಚಿಕ್ಕ ಸಮೀಕ್ಷೆ: ಬುದ್ಧಿವಂತ ಸಮಾಲೋಚಕ (ಬುದ್ಧಿವಂತ ಸಲಹಾಗಾರನ ಕಥೆ)

ಕೆಲವು ಹಳ್ಳಿಯ ಜನರು ಒಂದು ಬಾವಿಯ ಮತ್ತು ಅದರ ನೀರಿನ ಮೇಲೆ ತಮಗೆ ದೀರ್ಘಕಾಲದವರೆಗೆ ಹಕ್ಕು ಬೇಕೆಂದು ಜಗಳವಾಡುತ್ತಿದ್ದರು, ಹಾಗಾಗಿ ಸಮಾಲೋಚನೆಯನ್ನು ಪಡೆಯಲು ಅವರು ಒಬ್ಬ ಬುದ್ಧಿವಂತ ಸಮಾಲೋಚಕನ ಬಳಿಗೆ ಬಂದರು. ಜನರ ಕಥೆಯನ್ನು ಕೇಳಿದ ನಂತರ, ಸಮಾಲೋಚಕನು ಅನೇಕ ಪ್ರಶ್ನೆಗಳನ್ನು ಕೇಳಿದನು, ಏಕೆಂದರೆ ಈ ಜಗಳದ ಕುರಿತಾಗಿ ಆತನು ನಿಖರವಾಗಿ ತಿಳಿದುಕೊಂಡು, ಇದರ ಮೂಲಕ ಒಳ್ಳೆಯ ಸಮಾಲೋಚನೆಯನ್ನು ಕೊಡಬಯಸಿದ್ದನು.

ಆತನು ಮೊದಲು, "ನೀವು ಪರಿಸ್ಥಿತಿಯನ್ನು ವಿವರಿಸಲು ಸಾಧ್ಯವೇ? ನಿಮಗೆ ಸಮಸ್ಯೆಯಾಗಿರುವುದು ಏನು ಎಂಬುದನ್ನು ಕೆಲವೇ ಮಾತುಗಳಲ್ಲಿ ತಿಳಿಸಿ ?" ಅಂದನು.

ಹಳ್ಳಿಯ ಜನರು ಈ ಜಗಳದ ಚಿಕ್ಕ ರೂಪವನ್ನು ಸಮಾಲೋಚಕನಿಗೆ ತಿಳಿಸಿದ ನಂತ, ಆತನು ಜಾಣತನದಿಂದ, "ನಾನು ಚೆನ್ನಾಗಿ ಅರ್ಥ ಮಾಡಿಕೊಳ್ಳುವಂತೆ ಈ ಜಗಳ ಪ್ರಾರಂಭವಾಗುವುದಕ್ಕೂ ಮುನ್ನ ಏನಾದರೂ ಸಂಭವಿಸಿದೆಯೇ?" ಎಂದು ಕೇಳಿದನು. ಈ ಜಗಳಕ್ಕೆ ಕಾರಣವು ಏನೆಂಬುದನ್ನು ಹಳ್ಳಿಯವರು ತಿಳಿಸಿದ ನಂತರ, ಸಮಲೋಚಕನು ಅವರಿಗೆ ಮತ್ತೊಮ್ಮೆ ಇಡೀ ಕಥೆಯನ್ನು ಪುನಃ ಹೇಳುವಂತೆ ಕೇಳಿದನು, ಆದರೆ ಈ ಬಾರಿ ನಿಧಾನವಾಗಿ ಹೇಳಬೇಕೆಂದನು. ಹಾಗಾಗಿ ಜನರು ತಮ್ಮ ಕಥೆಯನ್ನು ಪುನಃ ಹೇಳಲಾರಂಭಿಸಿದರು.

ಹಳ್ಳಿಯವರು ತಮ್ಮ ಕಥೆಯ ಮೊದಲ ಭಾಗವನ್ನು ಹೇಳಿದ ತಕ್ಷಣವೆ, ಸಮಾಲೋಚಕನು ಅವರನ್ನು ಅಲ್ಲಿಯೇ ತಡೆದು, "ಈಗ ಹೇಳಿ, ನಿಮ್ಮ ಜಗಳದ ಈ ಭಾಗದಲ್ಲಿ, ನಿಮ್ಮಲ್ಲಿ ಯಾರಾದರೂ ಏನಾದರೂ

ಹೇಳಿರುವಿರೇ ಅಥವಾ ನೀವು ಏನಾದರೂ ಮಾಡಿರುವಿರೇ, ಏಕೆಂದರೆ ಇದರಿಂದ ನಾನೂ ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳುವಂತಾಗುತ್ತದೆ" ಎಂದು ಕೇಳಿದನು.

ಹಳ್ಳಿಯವರು ಉತ್ತರಿಸಿದ ನಂತರ, ಸಮಾಲೋಚಕನು, "ಆ ಸಮಯದಲ್ಲಿ, ನಿಮ್ಮಲ್ಲಿ ಯಾರಾದರೂ ಯಾವುದಾದರು ಆಯ್ಕೆಯನ್ನು ಮಾಡಿರುವಿರೇ? ನೀವು ಹಾಗೆ ಆಯ್ಕೆ ಮಾಡಿದರೆ, ನೀವು ಮಾಡಬೇಕಾಗಿದ್ದ ಇನ್ನಿತರ ಆಯ್ಕೆಗಳೇನಾದರೂ ಇರುವವೇ?" ಎಂದೂ ಸಹ ಕೇಳಿದನು. ಹಾಗೂ ಸಮಾಲೋಚಕನು ಆಯ್ಕೆ ಎಂದು ಹೇಳುವಾಗ, "ಆ ಆಯ್ಕೆಯ ಫಲಿತಾಂಶವೇನಾಗಿತ್ತು? ಮತ್ತು ಇದರಿಂದ ಯಾರೆಲ್ಲರಿಗೆ ಪರಿಣಾಮ ಬೀರಿತು?" ಎಂದೂ ಕೇಳುತ್ತಿದ್ದನು.

ಸಮಾಲೋಚಕನು ಹೀಗೇ ಮುಂದುವರೆಸುತ್ತಿದ್ದನು. ಹಳ್ಳಿಯವರು ಮುಂದಿನ ಭಾಗದ ಕಥೆಯನ್ನು ಹೇಳುವಂತೆ ಕೇಳುತ್ತಿದ್ದನು, ನಂತರ ಅವರನ್ನು ತಡೆದು, ಹಳ್ಳಿಗರು ಏನು ಹೇಳಿದ್ದರು ಮತ್ತು ಮಾಡಿದ್ದರು, ಅವರು ಮಾಡಿದ ಆಯ್ಕೆ ಮತ್ತು ಅವರು ಮಾಡಬಹುದಾಗಿದ್ದ ಆಯ್ಕೆಗಳು ಹಾಗೂ ಅವರ ಆಯ್ಕೆಗಳ ನಿಮಿತ್ತ ಉಂಟಾದ ಫಲಿತಾಂಶ ಮತ್ತು ದೀರ್ಘಾವಧಿಯ ಪರಿಣಾಮಗಳ ಕುರಿತಾಗಿ ಅದೇ ಪ್ರಶ್ನೆಗಳನ್ನು ಕೇಳುತ್ತಿದ್ದನು.

ಕೊನೆಗೆ, ಅವರು ಹೇಳಿ ಮುಗಿಸಿದ ನಂತರ, ಹಳ್ಳಿಯವರ ಉತ್ತರಗಳಿಗೆ ಸಮಾಲೋಚಕನು ಜಾಗ್ರತೆಯಿಂದ ಕೇಳಿಸಿಕೊಂಡಿದುದರ ನಿಮಿತ್ತ, ಆತನು ಜಗಳದ ಕಾರಣಗಳನ್ನು ನಿಜವಾಗಿಯೂ ಅರ್ಥಮಾಡಿಕೊಂಡಿದ್ದನು, ಮತ್ತು ಒಳ್ಳೆಯ ಸಮಾಲೋಚನೆಯನ್ನು ಹೇಗೆ ಕೊಡಬೇಕೆಂಬುದನ್ನು ಬಲ್ಲವನಾಗಿದ್ದನು.

ಕಥೆ ಮಾತ್ರದಲ್ಲಿ, ಸತ್ಯವೇದದ ಪ್ರತಿಯೊಂದು ಕಥೆಯು ಒಳಗೊಂಡಿರುವ ಬೆಲೆಯುಳ್ಳ ಮಾಹಿತಿಯನ್ನು ನಾವು ಕಂಡುಹಿಡಿಯಲು ಬಯಸುತ್ತೇವೆ. ಈ ನಿಧಿಯನ್ನು ಕಂಡುಹಿಡಿಯಲು, ನಾವು ಪ್ರಶ್ನೆಗಳನ್ನು ಕೇಳುತ್ತೇವೆ, ಇವು ಸಮಾಲೋಚಕನು ಕೇಳಿದ ಪ್ರಶ್ನೆಗಳ ಹಾಗೆಯೇ ಇರುವಂತಹ ಪ್ರಶ್ನೆಗಳಾಗಿರುತ್ತವೆ. ಆದರೆ ಕೇವಲ ಚರಿತ್ರೆಯಾಗಿರುವ ಕಥೆಯಲ್ಲಿ ಸಂಭವಿಸಿರುವುದಕ್ಕಿಂತಲೂ ಆಳವಾಗಿ ನಾವು ಹೋಗುತ್ತೇವೆ. ನಾವು ಆತ್ಮೀಕವಾಗಿ ಏನನ್ನು ಕಲಿಯಲು ಸಾಧ್ಯ ಎಂಬುದನ್ನು ನೋಡುತ್ತೇವೆ.

ಬುದ್ಧಿವಂತ ಸಮಾಲೋಚಕನು ಹಳ್ಳಿಯವರನ್ನು ಮೊದಲು ಸಂಕ್ಷಿಪ್ತವಾಗಿ, "ಪರಿಸ್ಥಿತಿಯನ್ನು ವಿವರಿಸಿ" ಎಂದು ಕೇಳಿದನು. ಸತ್ಯವೇದದ ಕಥೆಗಳು ಮತ್ತು ವಾಕ್ಯ ಭಾಗಗಳು ಕೆಲವು ರೀತಿಯ ಸಮಸ್ಯೆಯನ್ನು ಅಥವಾ ಪರಿಸ್ಥಿತಿಯನ್ನು ಹೊಂದಿದ್ದು, ಇದು ಕಥೆಯ ರೂಪವನ್ನು ತಾಳುತ್ತದೆ ಎಂದು ನಮಗೆ ತಿಳಿದಿದೆ. ನಾವು ಕಥೆಯನ್ನು ಜಾಗ್ರತೆಯಿಂದ ಕೇಳಿದಾಗ, ನಾವು ಮೊದಲ ಇದರ ಪರಿಸ್ಥಿತಿಯ ಕಡೆಗೆ ನೋಡುತ್ತೇವೆ, ಏಕೆಂದರೆ ನಾವು ಕಥೆಯನ್ನು ಕೇಳುವುದಕ್ಕಿಂತಲೂ ಮೊದಲು ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಾದರೆ, ಇದು ಕಥೆಯಲ್ಲಿನ ಜನರು ವಾಸ್ತವವಾಗಿರುವಂತೆ ಮಾಡುತ್ತದೆ. ಕಥೆಯಲ್ಲಿ ಜನರು ಕೋಪದಲ್ಲಿದ್ದಾರೋ, ಅಥವ ಅವರು ಅಪಾಯದಲ್ಲಿದ್ದಾರೋ, ಅವರು ಭಯಪಟ್ಟಿದ್ದಾರೋ, ಗಲಿಬಿಲಿ ಹೋಂದಿದ್ದಾರೋ ತಿಳಿದುಕೋಳ್ಳಬೇಕು.

ಇದು ಕಥೆಯು ಹೊರಗೆಡವಲ್ಪಡುವಾಗ, ನಮಗೆ ನಾವೇ "ಆ ಪರಿಸ್ಥಿತಿಯಲ್ಲಿದ್ದ ಜನರಿಗೆ ಇದು ಯಾವ ರೀತಿ ಇದ್ದೀತು?" ಎಂಬಂತ ಪ್ರಶ್ನೆಗಳನ್ನು ಕೇಳುವಂತೆ ಮಾಡುತ್ತದೆ.

ಹಳ್ಳಿಯವರ ಕಥೆಗಿಂತಲೂ ಮೊದಲು ಏನು ಸಂಭವಿಸಿತೆಂಬುದನ್ನು ಸಮಾಲೋಚಕನು ತಿಳಿದುಕೊಳ್ಳಲು ಬಯಸಿದ್ದನು. ಅದೇ ರೀತಿ, ಸತ್ಯವೇದದ ಒಂದು ಕಥೆಯೊಳಗಿನ ನಿಧಿಗಳಿಗಾಗಿ ಹುಡುಕುವಾಗ, ನಾವು ಮೊದಲು ಸನ್ನಿವೇಶಕ್ಕಾಗಿ ನೋಡುತ್ತೇವೆ, ಇದನ್ನು ಸಂದರ್ಭವೆಂತಲೂ ಕರೆಯಲಾಗುತ್ತದೆ. ಸಂದರ್ಭ ಎನ್ನುವುದು ಸತ್ಯವೇದದ ಈ ಕಥೆಯು ಸಂಭವಿಸುವುದಕ್ಕಿಂತಲೂ ಮೊದಲು ಏನು ನಡೆಯಿತು ಎಂಬುದಾಗಿದೆ. ಈ ಮಾಹಿತಿಯು ಸಾಮಾನ್ಯವಾಗಿ ನಾವು ಹೇಳಲಿರುವ ಕಥೆಯನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

ಇದ್ದನ್ನು ನಾವು ಗಮನಿಸಬೇಕು: ನಾವು "ಸತ್ಯವೇದದ ಕಥೆಯ ಈ ಭಾಗದಲ್ಲಿರುವ ಪ್ರತಿ ವ್ಯಕ್ತಿಯ ಕ್ರಿಯೆಗಳಿಂದ ಮತ್ತು ಮಾತುಗಳಿಂದ ಏನನ್ನು ಕಲಿತುಕೊಳ್ಳಬಹುದೆಂದು?" ಕೇಳುತ್ತೇವೆ. ಕ್ರಿಯೆಗಳು ಮತ್ತು ಮಾತನಾಡಿದ ಮಾತುಗಳು ಅನೇಕ ಬಾರಿ ಆ ಪಾತ್ರಗಳ ಕುರಿತಾಗಿ ಆತ್ಮೀಕ ಮಾಹಿತಿಯನ್ನು ಪ್ರಕಟಿಸುತ್ತದೆ. ಬುದ್ಧಿವಂತ ಸಮಾಲೋಚಕನು ಹಳ್ಳಿಯವರು ನಿಧಾನವಾಗಿ ಹೇಳುವಂತೆ ಕೇಳಿದನು ಮತ್ತು ಪ್ರತಿಯೊಂದು ಭಾಗದಲ್ಲೂ ಹಳ್ಳಿಯವರು ಏನು ಹೇಳಿದರು ಮತ್ತು ಏನು ಮಾಡಿದರು ಎಂಬುದನ್ನು ಕೇಳಿದ್ದನ್ನು ನೆನಪಿಸಿಕೊಳ್ಳಿರಿ. *ಕಥೆ* ಮಾತ್ರದಲ್ಲಿ, ನಾವು ಕಥೆಯ ಪ್ರಾರಂಭದಲ್ಲಿ ಶುರುಮಾಡುತ್ತೇವೆ ಮತ್ತು ನಾವು ಇದನ್ನು ಕಲಿತಾಗ ನಮ್ಮ ಮನಸ್ಸಿನಲ್ಲಿ ಮೂಡಿಸಿಕೊಂಡು ನೋಡಿದ ಹಾಗೆ ಪ್ರತಿಯೊಂದು ಭಾಗವನ್ನು ನಿಧಾನವಾಗಿ ಮತ್ತು ಎಚ್ಚರಿಕೆಯಿಂದ ಕೇಳಿಸಿಕೊಳ್ಳುತ್ತೇವೆ.

ಆ ಭಾಗದಲ್ಲಿ ಹೇಳಲ್ಪಟ್ಟಿರುವ ಪ್ರತಿಯೊಬ್ಬರ ಕುರಿತಾಗಿ, ಇದರಲ್ಲಿ ಯೇಸು ಮತ್ತು ತಂದೆಯಾದ ದೇವರನ್ನು ಸಹ ಒಳಗೊಂಡು ಇವರೆಲ್ಲರ ಕುರಿತಾಗಿ ನಮಗೆ ನಾವೇ ಪ್ರಶ್ನೆಗಳನ್ನು ಕೇಳುತ್ತೇವೆ. ನಾವು, "ಏನನ್ನು ಹೇಳಲಾಗಿತ್ತು ಮತ್ತು ಮಾಡಲಾಗಿತ್ತು, ಯಾವ ಆಯ್ಕೆಗಳನ್ನು ಮಾಡಲಾಗಿತ್ತು, ಅಥವಾ ಮಾಡಬಹುದಾಗಿತ್ತು, ಮತ್ತು ನೇರ ಫಲಿತಾಂಶಗಳು ಯಾವುವು ಮತ್ತು ಯಾರಿಗೆಲ್ಲಾ ಇದು ಪರಿಣಾಮವನ್ನು ಬೀರಿತ್ತು?" ಎಂದು ಕೇಳುತ್ತೇವೆ. ಉತ್ತರಗಳು "ಆತ್ಮೀಕ ಅವಲೋಕನಗಳು" ಎಂದು ನಾವು ಕರೆಯಲ್ಪಡವುಗಳಿಂದ ಪ್ರಕಟಗೊಳ್ಳುತ್ತವೆ.

ನಿಧಿಗಾಗಿ ಮಾಡುವ ಈ ನಿಧಾನವಾದ ಮತ್ತು ಎಚ್ಚರಿಕೆಯ ಬೇಟೆಯು ನಮ್ಮಂತಿರುವ ಜನರು ಏನು ಹೇಳಿದರು ಮತ್ತು ನಿಜ ಜೀವಿತದ ಭೇಟಿಗಳಲ್ಲಿ ಏನು ಮಾಡಿದರು ಹಾಗೂ ಫಲಿತಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ಮತ್ತು ಅವರು ಮಾಡಿದ ಆಯ್ಕೆಗಳ ಪರಿಣಾಮಗಳು, ಅಥವಾ ಮಾಡಬಹುದಾಗಿದ್ದ ಆಯ್ಕೆಗಳ ಕಡೆಗೆ ನಾವು ನೋಡುವಂತೆ ಅನುಮತಿಸುತ್ತದೆ.

ಬುದ್ಧಿವಂತ ಸಮಾಲೋಚಕನು ಏನು ಕೇಳಿದನೋ ಅದಕ್ಕಿಂತಲೂ ಮಿಗಿಲಾಗಿ, ಸತ್ಯವೇದದ ಕಥೆಗಳ ಕಡೆಗೆ ನೋಡುವಾಗ, ನಾವು ದೇವರಿಗಾಗಿ ನೋಡುವವರಾಗಿರುತ್ತೇವೆ. ಸತ್ಯವೇದದಲ್ಲಿ ದೇವರ ಹೆಸರನ್ನು ಸಂಬೋಧಿಸದಿದ್ದರೂ ಸಹ, ದೇವರು ಪರಿಸ್ಥಿತಿಗಳಲ್ಲಿ ಮತ್ತು ಜನರ ಜೀವಿತಗಳಲ್ಲಿ ಮತ್ತು ಆತನ ಕುರಿತಾಗಿ ನಾವು ಏನನ್ನು ಕಲಿಯಬಹುದು ಎಂಬುದನ್ನು ಕುರಿತು ನಾವು ಯಾವಾಗಲೂ ನೋಡುವವರಾಗಿರುತ್ತೇವೆ.

ಸತ್ಯವೇದದ ಕಥೆಗಳಲ್ಲಿರುವ ಜನರು ನಿಜವಾಗಿ ಒಮ್ಮೆ ಜೀವಿಸಿದ್ದರು

ಈ ಪರಿಸ್ಥಿತಿಯನ್ನು ಅನುಭವಿಸಿದಂತಹ ಉಸಿರಾಡುತ್ತಿದ್ದಂತಹ ಜನರ ಜೀವಿತದ ಕುರಿತಾಗಿ ಆಲೋಚಿಸಿ ನೋಡಿ. ನಿಮಗಿರುವ ಹಾಗೆಯೇ ಅವರಿಗೂ ಸಹ ಅನಿಸಿಕೆಗಳು ಮತ್ತು ಭಾವನೆಗಳು ಇದ್ದವು ಎಂಬುದನ್ನು ತಿಳಿದುಕೊಳ್ಳಿರಿ. ಅವರು ನಿಜವಾಗಿಯೂ ಅಂದುಕೊಳ್ಳುವ ಅನಿಸಿಕೆಗಳ ಅಗತ್ಯವು ಇಲ್ಲದಿರುವಾಗಲೂ ಸಹ, ಆ ಸಂದರ್ಭದಲ್ಲಿ ಆ ಜನರು ಹೇಗೆ ಹಾದುಹೋಗಿರಬಹುದೆಂಬುದನ್ನು ಊಹಿಸಿಕೊಳ್ಳಿ. ನಂತರ, ಕಥೆಯ ಕುರಿತಾಗಿ ಹೆಚ್ಚಾಗಿ ಕಲಿತುಕೊಳ್ಳುವುದಕ್ಕೆ, ಇದರಲ್ಲಿರುವ ವಿವಿಧ ಪಾತ್ರಗಳ ಕಡೆಗೆ ಅವು ಸಂಭವಿಸಿದ ಭಾಗದಲ್ಲಿ ಸಮಯವನ್ನು ತೆಗೆದುಕೊಂಡು ನೋಡಿ.

ಕಥೆಯ ಮೊದಲ ಭಾಗದ ಕಡೆಗೆ ನೋಡಿ, ಮತ್ತು ಜಾಗ್ರತೆಯಿಂದ ಗಮನಿಸಿ ಮತ್ತು ಕೇಳಿಸಿಕೊಳ್ಳಿ. ನಿಮ್ಮನ್ನೇ ನೀವು ಕೇಳಿ... ಇಲ್ಲಿ ನಾನು ನೋಡುತ್ತಿರುವಂತಹ ಮತ್ತು ಅವರು ಹೇಳುವುದನ್ನು ಕೇಳಿಸಿಕೊಳ್ಳುತ್ತಿರುವ ಜನರ ಕುರಿತಾಗಿ ನಾನು ಏನನ್ನು ಕಲಿತುಕೊಳ್ಳಬಹುದು? ಅವರು ಧೈರ್ಯಶಾಲಿಗಳಾಗಿ ಅಥವಾ ಭಯಗೊಂಡವರಾಗಿ ಕಾಣುವರೇ, ಅಥವಾ ದುಃಖದಲ್ಲಿದ್ದರಾ? ಅಥವಾ ಸಂತೋಷದಲ್ಲಿರುವರೇ, ಅಥವಾ ನಾನು ಇನ್ನಿತರ ಭಾವನೆಗಳನ್ನು ನೋಡುತ್ತಿರುವೆನೇ? ಈ ರೀತಿಯಾಗಿ ಅವರು ಭಾವಿಸಲು ಮತ್ತು ಕಾರ್ಯ ಮಾಡುವಂತೆ ಕಾರಣವಾಗಿರುವುದು ಏನು ಎಂಬುದನ್ನು ನಾನು ನೋಡಲು ಸಾಧ್ಯವೇ?

ಪ್ರತಿಯೊಂದು ಭಾಗದಲ್ಲೂ ಆಯ್ಕೆಗಳಿಗಾಗಿ ನೋಡಿ. ಒಂದು ವೇಳೆ ಆ ವ್ಯಕ್ತಿಯು ಒಂದು ವ್ಯತ್ಯಾಸವುಳ್ಳ ಆಯ್ಕೆಯನ್ನು ಮಾಡಿರಬಹುದು. ಸತ್ಯವೇದದ ಪ್ರತಿಯೊಂದು ಕಥೆಯಲ್ಲಿ, ಪ್ರತಿಯೊಬ್ಬರೂ, ಇದರಲ್ಲಿ ತಂದೆಯಾದ ದೇವರು ಮತ್ತು ಯೇಸುವನ್ನೂ ಒಳಗೊಂಡು, ತಾವು ಮಾಡಬಹುದಾಗಿದ್ದ ಆಯ್ಕೆಗಳಿಗಾಗಿ ಅವರಿಗೆ ಅನೇಕ ಅವಕಾಶಗಳಿದ್ದವು ಎಂಬುದನ್ನು ಅರ್ಥಮಾಡಿಕೊಳ್ಳಿರಿ.

ಕಥೆಯ ಪ್ರತಿಯೊಂದು ಭಾಗದಲ್ಲೂ ಅವರು ಮಾಡಬಹುದಾಗಿದ್ದ ವಿವಿಧ ಆಯ್ಕೆಗಳನ್ನು ನೀವು ನೋಡಲು ಪ್ರಾರಂಭಿಸಿದಾಗ, ನೀವು ಸತ್ಯವನ್ನು ಕಂಡುಹಿಡಿಯುವಿರಿ. ಈ ಆಯ್ಕೆಗಳನ್ನು ಅವರು ಮೊದಲು ತಮ್ಮ ಮನಸ್ಸಿನಲ್ಲಿ ಮಾಡಿದರು ಎಂಬುದನ್ನು ಗುರುತಿಸಿ; ನಂತರ ಅವರು ಆ ಆಯ್ಕೆಗಳಿನುಸಾರವಾಗಿ ಕ್ರಿಯೆ ಮಾಡಿದರು. ನೀವು ಹುಡುಕುತ್ತಿರುವ ಕಥೆಯಲ್ಲಿ, ಮಾಡಲಾಗಿದ್ದ ಆಯ್ಕೆಯನ್ನು ಮಾತ್ರ ನೀವು ನೋಡುವಿರಿ.

ಯೋಚಿಸಲು ಪ್ರಾರಂಭಿಸಿ: *ಇನ್ನೂ ಉತ್ತಮವಾಗಿರುತ್ತಿದ್ದ ಅಥವಾ ಬಹುಶಃ ವಿವೇಕಹೀನವಾಗಿರುತ್ತಿದ್ದ ಇನ್ನಿತರ ಯಾವ ಆಯ್ಕೆಗಳನ್ನು ಮಾಡಬಹುದಾಗಿತ್ತು?*

ಒಂದು ವೇಳೆ ಆಯ್ಕೆಯು ಸಾಮಾನ್ಯವಾದ ಆಯ್ಕೆಯಾಗಿದ್ದಿರಬಹುದು, ಮತ್ತು ಈ ಆಯ್ಕೆಯ ನಿಮಿತ್ತ ಫಲಿತಾಂಶಗಳು ನಕಾರವಾಗಿವೆ ಮತ್ತು ಕೆಟ್ಟದಾಗಿವೆ ಎಂಬುದಾಗಿ ನೋಡುತ್ತಿರುವಿರಿ. ಒಂದು ವೇಳೆ ಇದು ಒಳ್ಳೆಯ ಆಯ್ಕೆಯಾಗಿದ್ದು ಮತ್ತು ಏನೋ ಒಳ್ಳೆಯದು ಸಂಭವಿಸಿತು, ಅಥವಾ ಆಶ್ಚರ್ಯಗೊಳಿಸುವ ಏನೋ ಸಂಭವಿಸಿತು, ಇದನ್ನು ಮೊದಲ ಬಾರಿ ನೋಡಿದಾಗ ಒಂದು ಕೆಟ್ಟ ಫಲಿತಾಂಶವಾಗಿ ಕಾಣಿಸಿರಬಹುದು. ನೀವು ಆಶ್ಚರ್ಯಪಡುವವರಾಗಬೇಕು. ಮಾಡಲಾಗಿರುವ ಆಯ್ಕೆಯ ನಿಮಿತ್ತ ಮತ್ತು ಅವರಿಗೆ ಯಾವ ರೀತಿ ಪರಿಣಾಮ ಬೀರಿತ್ತೋ ಅದರ ನಿಮಿತ್ತ ಕಥೆಯ ಆ ಭಾಗದ ಇನ್ನಾವುದು ಪರಿಣಾಮಕ್ಕೆ ಒಳಗಾಗಿತು?

ನಿಮ್ಮನ್ನೇ ಕೇಳಿ. ಈ ಕಥೆಯಲ್ಲಿ ನಾವು ದೇವರನ್ನು ಹೇಗೆ ನೋಡುವೆನು? ಆತನು ಏನನ್ನು ಹೇಳಿರುವನೋ ಮತ್ತು ಮಾಡುವನೋ ಅದರಿಂದ ನಾನು ದೇವರ ಕುರಿತಾಗಿ ಏನನ್ನು ಕಲಿಯುತ್ತೇನೆ?

ಹಾಗಾಗಿ, ಆತ್ಮೀಕ ಅವಲೋಕನಗಳನ್ನು ಕಂಡುಹಿಡಿಯಲು ಇದನ್ನೇ ನಾವು ಮಾಡುವವರಾಗಿದ್ದೇವೆ. ನಾವು ಕಥೆಯಲ್ಲಿನ ಪ್ರತಿಯೊಂದು ಭಾಗಕ್ಕೂ ಹೋಗಿ, ಅದೇ ರೀತಿಯ ಪ್ರಶ್ನೆಗಳನ್ನೇ ಕೇಳುತ್ತೇವೆ. ನಾವು ಮಾತುಗಳನ್ನು, ಕ್ರಿಯೆಗಳನ್ನು, ಮಾಡಿದ ಆಯ್ಕೆಗಳನ್ನು (ಅಥವಾ ಒಬ್ಬರು ಮಾಡಬಹುದಾಗಿದ್ದ ಆಯ್ಕೆಗಳನ್ನು) ದೃಷ್ಟಿಸುತ್ತೇವೆ, ಮತ್ತು ಫಲಿತಾಂಶಗಳನ್ನು ಮತ್ತು ಆ ಆಯ್ಕೆಗಳ ನಿಮಿತ್ತ ಬೇರೆಯವರ ಮೇಲೆ ಆದ ಪರಿಣಾಮಗಳನ್ನು ಗಮನಿಸುತ್ತೇವೆ. ನಂತರ ನಾವು ಯಾವಾಗಲೂ ನಮ್ಮನ್ನೇ ಕೇಳುತ್ತೇವೆ. ಆ ಜನರ ಜೀವಿತಗಳಲ್ಲಿ ದೇವರು ಏನನ್ನು ಮಾಡಿದನು ಅಥವಾ ಅನುಮತಿಸಿದನು ಎಂಬುದರ ಕುರಿತಾಗಿ ನಾನು ಏನನ್ನು ನೋಡುತ್ತಿರುವೆನು?

ನೀವು ಪ್ರತಿ ಕಥೆಯನ್ನು ಪರಿಶೋಧಿಸುತ್ತಾ ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದಕ್ಕಾಗಿ, ಈ ರೀತಿಯ ಸಂಗತಿಗಳನ್ನು ಹೀಗೆ ಕೇಳಿ:
ಕಥೆಯಲ್ಲಿನ ಪ್ರತಿ ಪಾತ್ರವೂ ಏನನ್ನು ಮಾಡುತ್ತಿದೆ ಮತ್ತು ಏನನ್ನು ಹೇಳುತ್ತಿದೆ? ಆ ವ್ಯಕ್ತಿಯ ಕುರಿತಾಗಿ ಇದು ನನಗೆ ಏನನ್ನು ತೋರಿಸುತ್ತದೆ? ಕಥೆಯಿಂದ ನನಗೆ ಈ ವ್ಯಕ್ತಿಯು ಒಬ್ಬ ವಿಶ್ವಾಸಿಯೇ, ಹುಡುಕುವವನೇ, ಸಂದೇಹಪಡುವವನೇ ಅಥವಾ ತಿರಸ್ಕರಿಸುವವನೇ ಎಂದು ತಿಳಿದುಕೊಳ್ಳಲು ಸಾಧ್ಯವೇ? ನಂಬಿಕೆ ಅಥವಾ ಸಂದೇಹ ಇವು ತೋರಿಸಲ್ಪಡುತ್ತಿವೆಯೇ? ಈ ಕಥೆಯ ಸಂದರ್ಭಗಳನ್ನು ಎಚ್ಚರಿಕೆ ಕೊಡುವುದಕ್ಕೆ, ಬೋಧಿಸುವುದಕ್ಕೆ ಅಥವಾ ಪ್ರೋತ್ಸಾಹಿಸುವುದಕ್ಕೆ ದೇವರು ಹೇಗೆ ಉಪಯೋಗಿಸಿರುವನು?

ನಂತರ, ಯಾರು ಸವಿವರವಾದ ಮಾಹಿತಿಯನ್ನು ಇಷ್ಟಪಡುವರೋ, ಅಂತವರ ಬಳಿ ಪ್ರಶ್ನೆಗಳ ಉದ್ದನೆಯ ಪಟ್ಟಿಯಿದ್ದು, ಇದು ನೀವು ಆತ್ಮೀಕ ನಿಧಿಗಳನ್ನು ಕಂಡುಕೊಳ್ಳಲು ಸಹಾಯ ಮಾಡಬಹುದು. ಒಂದು ಕಥೆಯಲ್ಲಿ ಕಂಡುಬರಬಹುದಾದ ನಿಧಿಗಳ ಸಾಮರ್ಥ್ಯದ ಐಶ್ವರ್ಯಕ್ಕಾಗಿ ನೀವು ಕಂಡುಹಿಡಿಯಲು ಎಷ್ಟು ವಿವಿಧ ಮಾರ್ಗಗಳಿವೆ ಎಂಬ ಒಂದು ವಿಧಾನಕ್ಕೆ ಇವೆಲ್ಲವೂ ಕೇವಲ ಸಲಹೆಗಳಾಗಿವೆ.

ನಿಮ್ಮನ್ನೇ ಕೇಳಿ:

- ನನಗೆ ಆಶ್ಚರ್ಯವನ್ನುಂಟು ಮಾಡಿದ ಯಾವುದಾದರೂ ಇನ್ನಿತರ ಸಂಗತಿ ಇದೆಯೇ: ದೇವರ ಕ್ರಿಯೆಗಳು, ಅಥವಾ ಜನರು ಅಥವಾ ಜನರ ನಡತೆಯ ಫಲಿತಾಂಶಗಳು? ಸತ್ಯವೇದದಲ್ಲಿ ದೇವರು ನಮಗೆ ನಿರೂಪಿಸುತ್ತಿರುವ ರೀತಿಯಲ್ಲಿಯೇ ನೀವು ಕಥೆಯನ್ನು "ಕೇಳಿಸಿಕೊಳ್ಳುವುದಾದರೆ", ಆಶ್ಚರ್ಯಚಕಿತಗೊಳಿಸಿದ ಭಾಗಕ್ಕಾಗಿ ಕಾರಣವನ್ನು ನೀವು ಕಂಡುಹಿಡಿಯಲು ಸಾಧ್ಯವೇ ಎಂಬುದನ್ನು ನೋಡಿ.
- ಈ ಘಟನೆಗೂ ಮುನ್ನ ಏನು ಸಂಭವಿಸಿರುವುದೋ ಆ ಕೆಲವು ಪಾತ್ರಗಳು ಯಾರಾಗಿದ್ದಾರೆ ಮತ್ತು ಅವರು ಮಾಡಿದ ಹಾಗೆ ಏಕೆ ನಡೆದುಕೊಂಡರು ಎಂಬುದಕ್ಕೆ ನನಗೆ ಕೆಲವು ಒಳದೃಷ್ಟಿಯನ್ನು ಕೊಡಬಲ್ಲುದೇ?

- ಬಲಹೀನರಿಗಾಗಿ ದೇವರ ಗುಣಲಕ್ಷಣಗಳಾದ ತಾಳ್ಮೆ, ದೀರ್ಘಕಾಲದ ದುಃಖ, ಕೋಪ, ಜ್ಞಾನ, ಕನಿಕರ, ಕೃಪೆ, ಕರುಣೆ, ಕಾಳಜಿ, ಎಲ್ಲಾ ಜನರಿಗೆ ಸಮಾನವಾದ ಗೌರವ ಅಥವಾ ಪ್ರೀತಿಯ ತೋರ್ಪಡಿಕೆಯನ್ನು ನಾನು ನೋಡುತ್ತಿರುವೆನೇ?
- ಇಂತಹ ಗುಣಲಕ್ಷಣಗಳನ್ನು ದೇವರು ಯಾರಿಗೆ ತೋರ್ಪಡಿಸಿದನು ಮತ್ತು ಇದು ನನಗೆ ಏನನ್ನಾದರೂ ಕಲಿಸುತ್ತದೆಯೇ?
- ಈ ಕಥೆಯಲ್ಲಿರುವ ವ್ಯಕ್ತಿಗಳು ವಿಶ್ವಾಸಿಗಳೋ ಅಥವಾ ಅವಿಶ್ವಾಸಿಗಳೋ ಎಂಬುದನ್ನು ನಾನು ಕಥೆಯಿಂದ ತಿಳಿದುಕೊಳ್ಳಲು ಸಾಧ್ಯವೇ?
- ಕಥೆಯಲ್ಲಿನ ವ್ಯಕ್ತಿಗಳು ಪ್ರಾಮಾಣಿಕವಾಗಿ ಹುಡುಕುವಂತವರೇ, ಸಂದೇಹ ಪ್ರವೃತ್ತಿಯುಳ್ಳವರೇ ಅಥವಾ ಕಠಿಣವಾದ ದೇವರನ್ನು ತಿರಸ್ಕರಿಸುವವರೇ?
- ಕಥೆಯಲ್ಲಿನ ಯಾರಿಗಾದರೂ ಒಂದು ಸಮಸ್ಯೆಯಿದೆಯೇ? ಹಾಗಿದ್ದರೆ, ಆ ಸಮಸ್ಯೆಯು ಎಷ್ಟು ದೊಡ್ಡದಾಗಿದೆ?
- ಸಮಸ್ಯೆಯೊಂದಿಗಿದ್ದ ಜನರು ಕಷ್ಟವನ್ನು ನಿಭಾಯಿಸುವುದಕ್ಕೆ ಹೇಗೆ ಪ್ರಯತ್ನಿಸಿದರು?
- ಸಮಸ್ಯೆಯಿದ್ದ ವ್ಯಕ್ತಿಯು ಸಹಾಯಕ್ಕಾಗಿ ದೇವರ ಬಳಿಗೆ ಹೋದರೆ, ಆ ವ್ಯಕ್ತಿಯು ಸಹಾಯಕ್ಕಾಗಿ ಹೇಗೆ ಕೇಳಿಕೊಳ್ಳುತ್ತಿದ್ದನು?
- ಆ ವ್ಯಕ್ತಿಯು ದೇವರ ಬಳಿಗೆ ಗೌರವದಿಂದ ಅಥವಾ ಸೊಕ್ಕಿನಿಂದ ಹೋಗುತ್ತಿದ್ದನೇ?
- ಈ ರೀತಿ ಹತ್ತಿರಕ್ಕೆ ಬರುವಾಗ ದೇವರು ಇದಕ್ಕೆ ಹೇಗೆ ಪ್ರತಿಕ್ರಿಯಿಸಿದನು ಮತ್ತು ಇದು ನಮಗೆ ಏನನ್ನು ತೋರಿಸಬಹುದಾಗಿದೆ?
- ಸಮಸ್ಯೆಯಿದ್ದ ವ್ಯಕ್ತಿಯು ಸಹಾಯಕ್ಕಾಗಿ ಬೇರೆ ವ್ಯಕ್ತಿಯ ಬಳಿಗೆ ಹೋದನೇ?
- ಈ ಪರಿಸ್ಥಿತಿಯಲ್ಲಿ ಹೇಗೆ ಸಹಾಯಕ್ಕಾಗಿ ಕೇಳಿಕೊಳ್ಳಬಹುದು?
- ಸಮಸ್ಯೆಯಿದ್ದ ವ್ಯಕ್ತಿಯು ಹಿರಿಯರಿಗಾಗಿ ಗೌರವವನ್ನು ತೋರಿಸಿದನೇ?
- ಕಥೆಯಲ್ಲಿ ದೇವರನ್ನು ಹಿಂಬಾಲಿಸಿದಂತಹ ವ್ಯಕ್ತಿ ಇರುವನೇ, ಹಾಗಿದ್ದಲ್ಲಿ, ಈ ವಿಧೇಯತೆಯ ಫಲಿತಾಂಶಗಳು ಯಾವುವು?
- ಕಥೆಯಲ್ಲಿ ದೇವರನ್ನು ಹಿಂಬಾಲಿಸದಂತಹ ವ್ಯಕ್ತಿ ಇರುವನೇ, ಹಾಗಿದ್ದಲ್ಲಿ, ಈ ಅವಿಧೇಯತೆಯ ಫಲಿತಾಂಶಗಳು ಯಾವುವು?
- ಕಥೆಯಲ್ಲಿನ ಯಾರಾದರೂ ನಂಬಿಕೆಗಳನ್ನು ಅಥವಾ ಮನೋಭಾವಾನೆಗಳನ್ನು ಬದಲಾಯಿಸಿದರೇ?
- ಕಥೆಯಲ್ಲಿರುವ ಪಾತ್ರಗಳು ಅವರು ಏನನ್ನು ಯೋಚಿಸುತ್ತಿದ್ದಾರೆ ಅಥವಾ ಭಾವಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತಿದೆಯೇ ಅಥವಾ ಹೇಳುತ್ತಿದೆಯೇ?
- ಯಾವ ಪಾತ್ರಗಳಾದರೂ ನಂಬಿಕೆ, ಪ್ರೀತಿ, ಕರುಣೆ, ಕೋಪ, ಭಯ, ನಿರೀಕ್ಷೆ, ಹಾನಿ, ಸಂದೇಹ, ದುರಾಸೆ, ಗಲಿಬಿಲಿ, ಅಜ್ಞಾನ, ಜ್ಞಾನ, ಗೌರವ, ಅಗೌರವ, ಮೂಢನಂಬಿಕೆಯ ಅಥವಾ ಇನ್ನಿತರ ಮನೋಭಾವನೆಗಳ ಸಾಕ್ಷಿಯನ್ನು ತೋರಿಸುತ್ತಿವೆಯೇ?
- ದೇವರು ಅಂತಹ ಜನರ ನಂಬಿಕೆಗಳಿಗೆ, ಭಾವನೆಗಳಿಗೆ, ಮಾತುಗಳಿಗೆ ಅಥವಾ ಕ್ರಿಯೆಗಳಿಗೆ ಹೇಗೆ ಪ್ರತಿಕ್ರಿಯಿಸಿದನು ಮತ್ತು ದೇವರ ಪ್ರತಿಕ್ರಿಯೆಯು ನಮಗೆ ಏನನ್ನು ತೋರಿಸುತ್ತದೆ?
- ಕಥೆಯಲ್ಲಿರುವ ಕೆಲವು ಪಾತ್ರಗಳು ತಮ್ಮ ನಡತೆಯನ್ನು ಬದಲಾಯಿಸಿಕೊಂಡರೆ?
- ಅವರು ಬದಲಾಗುವುದಕ್ಕೆ ನಿಜವಾಗಿಯೂ ಕಾರಣವಾಗಿದ್ದು ಏನು?
- ಅವರು ಬದಲಾದಾಗ ಏನು ಸಂಭವಿಸಿತು ಮತ್ತು ಇದು ನಮಗೆ ಏನನ್ನು ತಿಳಿಯಪಡಿಸುತ್ತದೆ?

- ಕಥೆಯಲ್ಲಿ ಯಾವುದಾದರೂ ಅದ್ಭುತಗಳು ಅಥವಾ ಅಸಾಧಾರಣವಾದ ಘಟನೆಗಳಿವೆಯೇ, ಹಾಗಿದ್ದಲ್ಲಿ ಅವು ಕಥೆಯಲ್ಲಿರುವ ಜನರಿಗೆ ಹೇಗೆ ಪರಿಣಾಮವನ್ನು ಬೀರಿತು?

"ಆತ್ಮೀಕ ಅನ್ವಯಿಸುವಿಕೆಗಳು" ಎಂದು ಕರೆಯಲ್ಪಡುವ ನಿಧಿಗಳನ್ನು ಕಂಡಿಹಿಡಿಯುವುದು ಹೇಗೆ?

ಆತ್ಮೀಕ ಅನ್ವಯಿಸುವಿಕೆಗಳನ್ನು ಕಂಡುಹಿಡಿಯುವುದು: ನಾವು ಒಂದು ಕಥೆಯ ಕಡೆಗೆ ಎಚ್ಚರಿಕೆಯಿಂದ ನೋಡಿದ ಮೇಲೆ, ಈ ಕಥೆ ಇಂದು ನಮಗೆ ಯಾವ ಅರ್ಥವನ್ನು ಕೊಡಬಲ್ಲದು ಎಂಬುದನ್ನು ತಿಳಿಯಬಯಸುತ್ತೇವೆ. ಈ ಸಮಯದಲ್ಲೇ ನಾವು "ಆತ್ಮೀಕ ಅನ್ವಯಿಸುವಿಕೆಗಳನ್ನು" ನೋಡುವಂತಹುದಾಗಿದೆ. ಇದನ್ನು ಕಥೆಯನ್ನು ನೈಜವಾಗಿ ದೃಷ್ಟಿಸುವುದರ ಮೂಲಕ ಜಾಗ್ರತೆಯಿಂದ ನೋಡಿದ್ದ ಕಥೆಯೊಳಗೆ ಪ್ರವೇಶಿಸುವುದರ ಮೂಲಕ ಮಾಡಿ. ಕಥೆಯ ಒಳಗಡೆಯಿಂದ, ಒಂದು ಬಾರಿ ಪ್ರತಿ ಭಾಗವನ್ನು ನೀವು ಭೇಟಿ ಮಾಡಿ, ನೀವು ಕಂಡುಹಿಡಿದಿರುವ ಆತ್ಮೀಕ ಅವಲೋಕನಗಳನ್ನು ನೆನಪಿಸಿಕೊಳ್ಳಿ.

ಕಥೆ ಮಾತ್ರದ ಯಶಸ್ಸಿಗೆ ಕೀಲಿಗೈ: ನೀವು ಕಥೆಯಲ್ಲಿ ಕಂಡಿಹಿಡಿಯುವ "ಆತ್ಮೀಕ ಅವಲೋಕನಗಳ" ಮೇಲೆ **"ಆತ್ಮೀಕ ಅನ್ವಯಿಸುವಿಕೆಗಳು"** ಆಧಾರಗೊಂಡಿವೆ. ಆತ್ಮೀಕ ನಿಧಿಗಳನ್ನು ವಯಕ್ತಿಕವಾಗಿ ಆಲೋಚಿಸಿ ಅವುಗಳನ್ನು ತಮ್ಮ ಜೀವಿತಗಳಿಗೆ ಅನ್ವಹಿಸಿಕೋಳ್ಳುವುದೇ ಆತ್ಮೀಕ ಅನ್ವಹಿಸಿಕೋಳ್ಳುವುದು.

ನಿಮ್ಮನ್ನೇ ನೀವು ಈ ಪ್ರಶ್ನೆಗಳನ್ನು ಕೇಳಿ:

1. ಆಹಾ, ಆ ಕಥೆಯಲ್ಲಿ ನಾನು ಗಮನಿಸಿದ ಆ ಪರಿಸ್ಥಿತಿ... ಈ ದಿನ, ಆ ರೀತಿ ಏನಾದರೂ ಸಂಭವಿಸುತ್ತದೆಯೇ? ಹಾಗಿದ್ದರೆ, ಅದೇ ರೀತಿಯಾಗಿ ಯಾವ ವಿಧದಲ್ಲಿ ಸಂಭವಿಸುತ್ತದೆ?
2. ಹಾಗಿದ್ದರೆ, ಇದಕ್ಕೆ ಹೋಲಿಕೆಯಾದಂತೆ ಯಾವ ರೀತಿಯಾಗಿ ಹೀಗೆ ಸಂಭವಿಸುತ್ತದೆ?
3. ಹೀಗೆ ಎಂದಾದರೂ ನನಗೆ ಸಂಭವಿಸಿದೆಯೇ, ಅಥವಾ ನನಗೆ ತಿಳಿದಿರುವ ಯಾರಿಗಾದರೂ ಸಂಭವಿಸಿದೆಯೇ?
4. ಇದು ಈಗ ಸಂಭವಿಸುತ್ತಿದೆಯೇ, ಹಾಗಿದ್ದರೆ ಇದು ಹೇಗೆ ಸಂಭವಿಸುತ್ತಿದೆ ಮತ್ತು ಈ ಕಥೆಯಲ್ಲಿ ಇರುವಂತಹುದು ಇದಕ್ಕೆ ಹೇಗೆ ಸಹಾಯವನ್ನು ಮಾಡಲು ಸಾಧ್ಯ?

ಹಾಗೂ, ನಿರ್ಧಿಷ್ಟವಾದ ವೈಯಕ್ತಿಕ ಅನ್ವಯಿಸುವಿಕೆಗಳಿಗೆ ನಿಮಗೆ ಸಹಾಯ ಮಾಡಿದ ಆತ್ಮೀಕ ಅನ್ವಯಿಸುವಿಕೆಗಳ ಕೆಲವು ಪ್ರಶ್ನೆಗಳನ್ನು ಉಪಯೋಗಿಸಿಕೊಳ್ಳಿ, ಈ ಪ್ರಶ್ನೆಗಳು ಕೇಳುವುದರಿಂದ ನಿಮಗೆ ಆತ್ಮೀಕ ನಿಧಿಗಳನ್ನು ಕಂಡುಹಿಡಿಯಲು ಸಹಾಯವಾಗುತ್ತವೆ.

- ನಾನು ಹೌದು ಎಂದು ಹೇಳಬಹುದು. ಇದು ನನಗೆ ಮೊದಲೇ ಸಂಭವಿಸಿದೆ. ನಾನು ಏನು ಹೇಳಿದೆ? ನಾನು ಏನು ಮಾಡಿದೆ?
- ನನಗೆ ಯಾವುದಾದರೂ ಆಯ್ಕೆಗಳಿವೆಯೇ, ಮತ್ತು ಯಾವ ಆಯ್ಕೆಯನ್ನು ನಾನು ಮಾಡಬೇಕು?
- ನಾವು ಏನು ಮಾಡಬಹುದಾಗಿತ್ತು? ನನ್ನ ಆಯ್ಕೆಯ ಫಲಿತಾಂಶವು ಏನಾಗಿರುತ್ತಿತ್ತು?

- ನನ್ನ ಆಯ್ಕೆಯಿಂದ ಯಾರ್ಯಾರಿಗೆ ಪರಿಣಾಮ ಉಂಟಾಯಿತು ಮತ್ತು ಅವರು ಯಾವ ರೀತಿಯಲ್ಲಿ ಪರಿಣಾಮಕ್ಕೊಳಗಾದರು?
- ನಾನು ಈಗ ಈ ರೀತಿಯ ಯಾವುದಾದರೂ ವಿಷಯದಲ್ಲಿ ಹಾದುಹೋಗುತ್ತಿದ್ದರೆ, ನಾನು ಹೇಗೆ ಪ್ರತಿಕ್ರಿಯಿಸುತ್ತಿರುವೆನು? ನನ್ನ ಪರಿಸ್ಥಿತಿಯಲ್ಲಿ ನಾನು ಏನು ಮಾಡಬೇಕೆಂಬುದಕ್ಕೆ ಸಹಾಯ ಮಾಡುವುದಕ್ಕೆ ಕಥೆಯಲ್ಲಿ ಏನು ಸಂಭವಿಸಿದೆಯೋ ಅದರಿಂದ ನಾನು ಏನನ್ನು ಕಲಿತುಕೊಂಡಿರುವೆ?

ಕೊನೆಯದಾಗಿ, ಕಥೆಯಲ್ಲಿ, ನಿಮನ್ನೇ ಕೇಳಿ:

- ನನ್ನ ಪರಿಸ್ಥಿತಿಯಲ್ಲಿ ದೇವರು ಕಾರ್ಯ ಮಾಡುತ್ತಿರುವುದನ್ನು ನಾನು ನೋಡುವುದು ಹೇಗೆ, ಅಥವಾ ನನಗೆ ತಿಳಿದಿರುವಂತವರ ಜೀವಿತದಲ್ಲಿ, ಯಾರು ಇಂತಹ ಸ್ಥಿತಿಯಲ್ಲಿರುವರು?

- ನಾನು ಏನನ್ನು ಕಲಿತಿರುವೆ, ಅಥವಾ ನಾವು ದೇವರ ಕುರಿತಾಗಿ ಮತ್ತು ಆತನ ಗುಣಲಕ್ಷಣದ ಕುರಿತಾಗಿ ಏನನ್ನು ಕಲಿತುಕೊಂಡಿರುವೆನು?

ನೀವು ಮೊದಲ ಬಾರಿ ಕಥೆಯನ್ನು ಓದುತ್ತಿರುವಾಗ, ಕಥೆಯಲ್ಲಿ ಒಬ್ಬ ವ್ಯಕ್ತಿಯೊಂದಿಗೆ ದೇವರು ಪ್ರತಿಕ್ರಿಯಿಸಿದ ರೀತಿಯನ್ನು ಕುರಿತು ಆತನು ಏಕೆ ಹಾಗೆ ಮಾಡಿದನು ಎಂಬುದನ್ನು ಲೆಕ್ಕಾಚಾರ ಮಾಡಲು ಪ್ರಯತ್ನಿಸಿದಾಗ, ಇದರ ಅಂಶಗಳು ಕೆಲವೊಮ್ಮೆ ಗಲಿಬಿಲಿಯಾಗಿರಲು ಸಾಧ್ಯ. ಹಾಗೂ, ಕೆಲವೊಮ್ಮೆ ನೀವು ಒಂದು ಕಥೆಯನ್ನು ಓದುವಾಗ ಈ ರೀತಿಯಾಗಿ ನೀವು ಮನಸ್ಸಿನಲ್ಲಿ ಆಲೋಚಿಸಬಹುದು. ಇದು ಒಳ್ಳೆಯ ಕಥೆ, ಆದರೆ ಇದರಲ್ಲಿ ನಾನು ಯಾವುದೇ ಆತ್ಮೀಕವಾದುದನ್ನು ಗಮನಿಸುತ್ತಿಲ್ಲ. ಮತ್ತು ಇದು ನನ್ನ ಜೀವಿತಕ್ಕೆ ಹೇಗೆ ಸಂಬಂಧಪಟ್ಟಿದೆ ಎಂಬುದನ್ನು ನಾನು ಖಂಡಿತಾವಾಗಿಯೂ ನೋಡಲಾಗುತ್ತಿಲ್ಲ!

ಇದನ್ನು ತಿಳಿದುಕೊಳ್ಳಿ: ಸತ್ಯವೇದದಲ್ಲಿನ ಪ್ರತಿಯೊಂದು ಕಥೆಯು ಈ ದಿನ ನಮಗಾಗಿ ಏನೋ ಸಂಗತಿಯನ್ನು ಒಳಗೊಂಡಿರುವಂತಹುದಾಗಿದೆ. ದೇವರು ಸತ್ಯವೇದದಲ್ಲಿ ಇಟ್ಟಿರುವ ಎಲ್ಲಾ ಮಾಹಿತಿಗಳ ಉಪಯೋಗದ ಕುರಿತಾಗಿ ಈ ಕೆಳಗೆ ಕೊಡಲ್ಪಟ್ಟಿರುವ ಎರಡು ವಾಕ್ಯಗಳು ಏನು ಹೇಳುತ್ತವೆ ಎಂಬುದನ್ನು ನಿಮಗೆ ಕಂಡುಹಿಡಿಯಲು ಸಾಧ್ಯವೇ ಎಂಬುದನ್ನು ಪ್ರಯತ್ನಿಸಿ. ಈ ಒಳದೃಷ್ಟಿಯು ದೇವರು ಕಥೆಯಲ್ಲಿ ಏಕೆ ಆ ರೀತಿ ಕ್ರಿಯೆ ಮಾಡಿದನು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುವುದಕ್ಕೆ ಮತ್ತು ಸತ್ಯವೇದದ ಪ್ರತಿ ಕಥೆಯಲ್ಲಿ ಕಾಣಲ್ಪಡುವಂತೆ ಆತ್ಮೀಕ ಅವಲೋಕನಗಳು ಮತ್ತು ಅನ್ವಯಿಸುವಿಕೆಗಳು ಇವೆ ಎಂಬುದನ್ನು ತಿಳಿದುಕೊಳ್ಳುವಂತೆ ಮಾಡಲು ಪ್ರೋತ್ಸಾಹಿಸುತ್ತದೆ.

> "ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು."
> 2 ತಿಮೋಥಿ 3:16-17.

"ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರದವೆ. 12 ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ. 13 ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ

ಸಂಭವಿಸಲಿಲ್ಲ. ದೇವರು ನಂಬಿಗಸ್ಥನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು." 1 ಕೊರಿಂಥ 10:11-13.

ಸತ್ಯವೇದದಲ್ಲಿರುವ ಎಲ್ಲಾ ಮಾತುಗಳು, ಕಥೆಯಲ್ಲಿರುವ ಮಾತುಗಳನ್ನೂ ಸಹ ಒಳಗೊಂಡು ಅವುಗಳನ್ನು ನಮಗೆ ಬರೆಯಲಾಗಿದೆ... ಮತ್ತು ನಮಗಾಗಿ ಬರೆಯಲಾಗಿದೆ ಎಂದು ಈ ವಚನಗಳು ಹೇಳುತ್ತವೆ. ಪುಟಗಳು ಸಮಾನಾಂತರವಾಗಿ ಇರಬೇಕೆಂದು ದೇವರು ಕಥೆಯಲ್ಲಿ ಮಾತುಗಳನ್ನು ಇಟ್ಟಿಲ್ಲವೆಂಬುದನ್ನು ನಾವು ತಿಳಿದುಕೊಂಡಿರುವುದರಿಂದ, **ಒಂದು ಕಥೆಯಲ್ಲಿರುವ ಎಲ್ಲಾ ಮಾಹಿತಿಗಳು ನಮಗೆ ಯಾವ ಅರ್ಥವನ್ನು ಕೊಡುತ್ತವೆ ಎಂಬುದನ್ನು ಕಂಡುಹಿಡಿಯುವುದಕ್ಕೆ ನಾವು ಸತ್ಯವೇದದ ಕಥೆಗಳನ್ನು ಎಚ್ಚರಿಕೆಯಿಂದ ದೃಷ್ಟಿಸುವುದಕ್ಕೆ ಪ್ರಾರಂಭಿಸಬೇಕಾಗಿದೆ.**

ಕಥೆ ಹೇಳುವವರಾಗಿ ಮತ್ತು ಪ್ರಶ್ನೆಗಳನ್ನು ರೂಪಿಸುವವರಾಗಿ, ಆ ಸತ್ಯಗಳನ್ನು ಕೇಳಿಸಿಕೊಳ್ಳುವವರು ತಾವೇ ಕಂಡುಹಿಡಿಯುವುದಕ್ಕೆ ಸಹಾಯವಾಗುವಂತೆ ಮಾಡಲು ನೀವು ತೆಗೆದುಕೊಳ್ಳಬೇಕಾದ ಕೆಲವು ಹೆಜ್ಜೆಗಳಿವೆ.

ನೀವೇ ಮೊದಲು ಆ ನಿಧಿಗಳನ್ನು ಕಂಡುಹಿಡಿಯದೇ ಹೋದರೆ, ನಿಮ್ಮ ಕಥೆಯನ್ನು ಕೇಳಿಸಿಕೊಳ್ಳುವವರು ಅವುಗಳನ್ನು ಕಂಡುಹಿಡಿಯುವಂತೆ ನಡೆಸುವುದಕ್ಕೆ ಸಾಧ್ಯವಿಲ್ಲ!

ನೀವು ಕಥೆಯನ್ನು ಸಿದ್ಧಪಡಿಸುತ್ತಿರುವಾಗ, ಕಥೆ ಹೇಳುವವರಾಗಿ ನಿಮಗೇ ಆ ಕಥೆಯು ಯಾವ ಪ್ರಭಾವವನ್ನು ಬೀರದಿದ್ದರೆ, ನೀವು ಹಿಂತಿರುಗಿ ಹೋಗಿ, ಕಥೆಯ ಸತ್ಯಗಳಿಗಾಗಿ ದೇವರಲ್ಲಿ ಮೊರೆಯಿಡುವುದಕ್ಕೆ ಇದು ಒಳ್ಳೆಯ ಸಮಯವಾಗಿದೆ. ನಿಧಿಗಳನ್ನು ಕಂಡುಹಿಡಿಯುವುದಕ್ಕಾಗಿ ಎಲ್ಲಾ ಮಾರ್ಗದರ್ಶನಗಳನ್ನು ನೀವು ಅನುಸರಿಸಿರುವುದಾದರೆ, ಮತ್ತು ಆ ಕಥೆಯಲ್ಲಿ ನೀವು ಇನ್ನೂ ಯಾವುದೇ ಆತ್ಮೀಕ ಸತ್ಯವನ್ನು ಕಂಡಿಹಿಡಿಯದಿದ್ದರೆ, ಆಗ ನೀವು ಇದನ್ನು ಬೇರೆಯವರಿಗೆ ಹೇಳುವುದಕ್ಕೆ ಸಿದ್ಧರಾಗಿಲ್ಲ.

ಒಮ್ಮೆ ನೀವು ಕಥೆಯನ್ನು ಓದಿದ ನಂತರ, ಇದರ ಅನೇಕ ಪಾಠಗಳನ್ನು (ನಿಧಿಗಳನ್ನು) ಕಂಡಿಹಿಡಿದಿರುವುದಾದರೆ, ಕೇಳಿಸಿಕೊಳ್ಳುವವರು ತಾವೇ ಸ್ವತಃ ಕಂಡುಹಿಡಿಯಲು ಸಾಧ್ಯಾವಗುವಂತೆ ಅವರನ್ನು ಮೃದುವಾಗಿ ನಡೆಸಲ್ಪಡುವಂತಹ ಪ್ರಶ್ನೆಗಳನ್ನು ಸಿದ್ಧಪಡಿಸಲು ಈಗ ನೀವು ಸಿದ್ಧರಾಗಿರುವಿರಿ.

ಪ್ರಶ್ನೆಗಳನ್ನು ಕೇಳುವುದರ ಪ್ರಾಮುಖ್ಯತೆ :

ನೀವು ಬಹಳ ಮುಂದೆ ಹೋಗಿ ಒಂದು ನಿಧಿಯನ್ನು ಕಂಡುಹಿಡಿದಿರುವುದಾದರೆ, ನೀವು ರೋಮಾಂಚನಗೊಳ್ಳುವಿರಿ! ನೀವು ಆ ನಿಧಿಯನ್ನು ತೆಗೆದುಕೊಂಡು, ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಂಡರೆ, ಇದನ್ನು ಸ್ವೀಕರಿಸಲು ಅವರು ಬಹಳ ಸಂತೋಷವುಳ್ಳವರಾಗಿರುತ್ತಾರೆ. ಆದರೆ ಇದನ್ನು ಸ್ವೀಕರಿಸಿದುದರ ನಿಮಿತ್ತ ಅವರಿಗಾಗುವ ಸಂತೋಷವು,

ನೀವು ಇದನ್ನು ಕಂಡುಹಿಡಿದಾಗ ನಿಮಗುಂಟಾದ ಸಂತೋಷಕ್ಕಿಂತಲೂ ದೊಡ್ಡದಾಗಿರುವುದಿಲ್ಲ. ಸಂಶೋಧನೆ ಎಂಬುದೇ ಒಂದು ರೋಮಾಂಚನವಾಗಿದೆ.

ಬೋಧನಾ ಶೈಲಿಯ ಚರ್ಚೆಯ ಪ್ರಾರಂಭದಲ್ಲಿ ಸುಲಭವಾಗಿ ಉತ್ತರಿಸುವಂತಹ ಪ್ರಶ್ನೆಗಳನ್ನು ಉಪಯೋಗಿಸಿ. **ಇದು *ಕಥೆ* ಮಾತ್ರದ ಅಧ್ಯಯನ ಅಂಶದ ಯಶಸ್ಸಿಗೆ ಪ್ರಾಮುಖ್ಯವಾದುದಾಗಿದೆ.**

ಸತ್ಯವೇದದಲ್ಲಿ ಆತ್ಮೀಕ ಸತ್ಯಗಳ ಐಶ್ವರ್ಯವಿದೆಯೆಂದು ಅನೇಕರಿಗೆ ತಿಳಿದಿಲ್ಲ. ಇನ್ನಿತರರಿಗೆ ಸತ್ಯವೇದದಲ್ಲಿ ಅನೇಕ ಆತ್ಮೀಕ ನಿಧಿಗಳಿವೆ ಎಂಬುದು ತಿಳಿದಿದೆ, ಆದರೆ ಆ ನಿಧಿಗಳನ್ನು ಕಂಡುಹಿಡಿಯುವುದಕ್ಕೆ ಅವರು ಸಮರ್ಥರು ಎಂಬುದನ್ನು ಅವರು ಗ್ರಹಿಸಿಲ್ಲ. ಸುಲಭವಾದ ಪ್ರಶ್ನೆಗಳಿಗೆ ಜನರು ಉತ್ತರಿಸುವಾಗ, ಇನ್ನೂ ಹೆಚ್ಚು ಉತ್ತರಗಳನ್ನು ಕೊಡುವುದಕ್ಕಾಗಿ ಅವರಿಗೆ ಪ್ರೋತ್ಸಾಹವುಂಟಾಗುವುದು.

ಸತ್ಯವೇದದ ಒಂದು ಕಥೆಯಲ್ಲಿರುವ ಪದಗಳು ಮತ್ತು ಅರ್ಥಗಳ ಕಡೆಗೆ ಗಮನವಿಟ್ಟು ನೋಡುವುದಕ್ಕೆ ಅನೇಕ ವಿಶ್ವಾಸಿಗಳು ಅಭ್ಯಾಸವಿಟ್ಟುಕೊಂಡಿಲ್ಲ. ಉದ್ದೇಶಪೂರಿತ ಪ್ರಶ್ನೆಗಳನ್ನು (ಅವು ಹೌದು/ಇಲ್ಲ ಎಂಬ ಪ್ರಶ್ನೆಗಳಾಗಿದ್ದರೂ ಸಹ) ಜನರು ತಮ್ಮಷ್ಟಕ್ಕೆ ತಾವೇ ಆತ್ಮೀಕ ಅವಲೋಕನಗಳನ್ನು ಕಂಡುಹಿಡಿಯುವುದಕ್ಕೆ ನಡೆಸುವುದಕ್ಕೆ ಉಪಯೋಗಿಸಲಾಗುತ್ತದೆ.

ಎಸ್ ಟಿ ಎಸ್ ನಲ್ಲಿ ನಾವು ಮೋದಲು ಹೋಸದಾಗಿ ಕಲಿಯುವವರಿಗೆ ಪ್ರಾಮುಖ್ಯತೆ ಕೋಡುತ್ತೇವೆ. ಅವರನ್ನು ನಿಧಿಗಳನ್ನು ಕಂಡುಹಿಡಿಯುವ ತನಕ ಪ್ರೋಸ್ತಾಹಿಸಿ ಅವರೇ ಕಂಡುಕೋಳ್ಳುವಂತೆ ಮಾಡುತ್ತೇವೆ. ಎಲ್ಲರೂ ಒಟ್ಟಾಗಿ ಚರ್ಚಿಸುವ ಹಾಗೆ ಪ್ರೋಸ್ತಾಹ ಮಾಡಿ ಅವರೇ ಕೂಟವನ್ನು ನಡೆಸುವಂತೆ ಮಾಡುತ್ತೇವೆ ಇದರಿಂದ ಪ್ರತಿಯೋಬ್ಬರಿಗೂ ಕಲಿಯುವ ಅವಕಾಶ ಸಿಗುತ್ತದೆ.

ಬೈಬಲ್ ಸ್ಕೂಲ್‌ಗಳಿಗೆ ಅಥವಾ ಅಧ್ಯಯನ ಕೂಟಗಳಿಗೆ ಹೋಗಿ ಬಂದವರು ಕಥೆಯನ್ನು ವಿವರವಾಗಿ ಪರೀಕ್ಷಿಸಲು ಅಥವಾ ವಿಶ್ಲೇಷಿಸಲು ತಿಳಿದಿರುತ್ತಾರೆ, ಆದರೆ ಒಂದು ಕಥೆಯನ್ನು ಸಂಪೂರ್ಣವಾಗಿ ಕೇಳಿಸಿಕೊಳ್ಳುವಂತಹ ಕೌಶಲವನ್ನು ಬೆಳೆಸಿಕೊಂಡಿಲ್ಲದಿರಬಹುದು. *ಕಥೆ* ಮಾತ್ರವು ಕಥೆಯನ್ನು ಒಟ್ಟಾಗಿ ಇಡುತ್ತದೆ ಮತ್ತು ಇದನ್ನು ಕೇಳಿಸಲ್ಪಡುತ್ತದೆ ಹಾಗೂ ಇದು ಸತ್ಯವನ್ನು ಒಳಗೊಂಡಿರುವ ಅಂಶದ ಹಾಗೆ ಕೇಳಿಸಲ್ಪಡುತ್ತದೆ.

"ಗುಂಡಿಗೆ ನಡೆಯುವುದು: ನೀನು ಆಗೊಮ್ಮೆ ಈಗೊಮ್ಮೆ ಜನರನ್ನು ದರ್ಶಿಸ ಬಹುದು. (ಅವರಿಗೆ ಧಾರ್ಮಿಕ ಜ್ಞಾನ ಇರಬಹುದು ಅಥವ ಇಲ್ಲದಿರಬಹುದು) ಆದರೆ ಅವರು ಸತ್ಯವೇದದ ಕುರಿತಾಗಿ ಏನೆಲ್ಲಾ ತಿಳಿದುಕೊಳ್ಳಬಹುದಾಗಿದೆಯೋ ಅದೆಲ್ಲವನ್ನೂ ಬಹಳವಾಗಿ ತಿಳಿದುಕೊಂಡಿದ್ದೇವೆ ಎಂಬ ಭಾವನೆಯಲ್ಲಿ ಬರುತ್ತಾರೆ! ನೀವು ಉಪಯೋಗಿಸುವ ಪ್ರಶ್ನೆಗಳ ವಿಧಾನವು ಈ ಜಂಬದ ಜನರು ಖುದ್ದಾಗಿ ಒಂದು ಗುಂಡಿಯೊಳಗೆ ಬೀಳಲು ಅನುಮತಿಸುವಂತಹ ಮಾರ್ಗವನ್ನು ಒಳಗೊಂಡಿರಬಹುದು. ಇಲ್ಲಿ ಒಂದು "ಗುಂಡಿ" ಎಂಬುದು ಒಂದು ಪ್ರಶ್ನೆಗೆ ಸಂಬಂಧಪಟ್ಟದ್ದಾಗಿದ್ದು, ಕೇಳಿಸಿಕೊಳ್ಳುವವರು ಸ್ವಯಂಪ್ರೇರಿತರಾಗಿ ತಮ್ಮಲ್ಲಿರುವ ತಪ್ಪುಗ್ರಹಿಕೆಯನ್ನು ಅಥವಾ ಸುಳ್ಳಾದ ಪ್ರತಿಷ್ಠೆಯನ್ನು ಅರಿತುಕೊಳ್ಳುವಂತಹ ರೀತಿಯಲ್ಲಿ ಈ ಪ್ರಶ್ನೆಯನ್ನು ಕೇಳುವುದಾಗಿದೆ. ನೀವು ಹಾಂ// ಅಥವ ಆಚ್ಚಾರ್ಯವಾಗಿದೆ ಎನ್ನುತ್ತಾ ಮುಂದೆ ಸಾಗಿ.

ಚರ್ಚೆಯು ಮುಂದುವರೆದಂತೆಲ್ಲಾ, ಹಾಗೂ ಚರ್ಚೆಯ ಸಮಯದಲ್ಲಿ ಸರಿಯಾದ ಉತ್ತರಗಳನ್ನು ಕಂಡುಹಿಡಿಯುತ್ತಿರುವಾಗ, ಉತ್ತರ ಕೊಡುವವರು ತಾವು ಒಂದು ತಪ್ಪನ್ನು ಮಾಡಿರುವುದಾಗಿ ಮನವರಿಕೆಯನ್ನು ಹೊಂದುತ್ತಾರೆ. ಅವರ ತಪ್ಪಿನ ಗ್ರಹಿಕೆಯು ಮೊದಲು ತಾವಂದುಕೊಂಡಿದ್ದ ಹಾಗೆ ತಮಗೆ ಸಾಕಷ್ಟು ತಿಳಿದಿಲ್ಲ ಎಂಬ ಸತ್ಯಾಂಶವನ್ನು ಮೃದುವಾಗಿ ಪ್ರಕಟಿಸುತ್ತದೆ. ಈ ಸೂಕ್ಷ್ಮವಾದ ಬಲೆಯೊಳಗೆ ಬೀಳುವಂತಹ ಆಶ್ಚರ್ಯಕರವಾದ ಅನುಭವವು ಅಲ್ಲಿ ಬಂದಿರುವ ಆತ್ಮತೃಪ್ತಿಯುಳ್ಳ ಜನರು ನಿಜವಾಗಿಯೂ ಕೇಳಿಸಿಕೊಳ್ಳುವುದರಲ್ಲಿ ಮತ್ತು ಕಲಿತುಕೊಳ್ಳುವುದರಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಾಗುತ್ತಾರೆ.

ಕೆಲವೊಮ್ಮೆ ಜನರು ತಾವು ಇದಕ್ಕೂ ಮೊದಲೇ ಕೇಳಿಸಿಕೊಂಡ ಈ ಕಥೆಯನ್ನು ಅಷ್ಟು ನಿಖರವಾಗಿ (ಮತ್ತು ತಾವು ನಿಖರವೆಂದು ಊಹಿಸಿಕೊಂಡಿದ್ದು) ತಿಳಿದುಕೊಂಡಿಲ್ಲ ಹಾಗೂ ತಾವು ಕಥೆಯಲ್ಲಿನ ಬಹಳಷ್ಟು ಸಂಗತಿಗಳನ್ನು ಅರ್ಥ ಮಾಡಿಕೊಂಡಿಲ್ಲ ಎಂಬುದನ್ನು ಕಂಡುಕೊಳ್ಳುವರು. ಕಥೆಯಲ್ಲಿ ನಿಜವಾಗಿಯೂ ಏನಿದೆ ಎಂಬುದನ್ನು ನೋಡುವುದಕ್ಕೆ ಅವರು ಕಥೆಯನ್ನು "ಕೇಳಿಸಿಕೊಳ್ಳಲೇಬೇಕೆಂದು" ಗುರುತಿಸಿಕೊಳ್ಳುತ್ತಾರೆ.

ಇನ್ನೂ ಕೆಲವರು ಕಥೆಯ ಹಾದಿಯು ತಾವು ಕಂಡುಹಿಡಿಯಬಹುದಾಗಿರುವ ನಿಧಿಗಳನ್ನು ಹೊಂದಿತ್ತು ಎಂಬ ಆಲೋಚನೆಯೂ ಸಹ ಇಲ್ಲದವರಾಗಿರುತ್ತಾರೆ. *ಕಥೆ* ಮಾತ್ರದಲ್ಲಿ, ನಾವು ಕೇಳಿಸಿಕೊಳ್ಳುವವರ ಹೊಸ ಗುಂಪುಗಳೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿದಾಗ, ಅನೇಕ ಬಾರಿ ನಾವು ಅವರನ್ನು ನಿಧಿಯ ಬಳಿಗೇ ನಡೆಸುತ್ತೇವೆ ಹಾಗೂ ಬಹುತೇಕ ಇದನ್ನು ಅವರಿಗೆ ಒಪ್ಪಿಸಿಬಿಡುತ್ತೇವೆ. ಉತ್ತರ ಹೇಳುವವರನ್ನು ನುರಿತ ಶಿಕ್ಷಕರು ಕಾಣಿಸಲಾರದಷ್ಟು ಸೂಕ್ಷ್ಮವಾಗಿ ನಡೆಸಲು ಸಾಧ್ಯ ಇದರಿಂದ ಅವರು ಕಂಡುಹಿಡಿಯುವ ಹೆಚ್ಚಿನ ಕಾರ್ಯವನ್ನು ತಾವೇ ಮಾಡಿರುವುದಾಗಿ ಆಲೋಚಿಸುತ್ತಾರೆ! ಇದರಲ್ಲಿ ಬರುವ ಸದಸ್ಯರು ತಾವೇ ಖುದ್ದಾಗಿ ಒಂದು ಚಿಕ್ಕ ನಿಧಿಯ ಭಾಗವನ್ನೂ ಸಹ ಕಂಡುಹಿಡಿಯಲು ಶಕ್ತರಾದಾಗ, ಅವರು ಇನ್ನೂ ಹೆಚ್ಚಿನ ನಿಧಿಗಳನ್ನು ಹುಡುಕುವುದಕ್ಕೆ ಪ್ರಾರಂಭಿಸುವಂತೆ ಪ್ರೋತ್ಸಾಹ ಹೊಂದುವರು.

ಪವಿತ್ರಾತ್ಮ – ಶ್ರೇಷ್ಠ ಬೋಧಕನು:

ರಕ್ಷಣೆ ಹೋಂದಿರುವ ನಾವು ರಕ್ಷಣೆ ಹೊಂದಿಲ್ಲದಿರುವ ಜನರೊಂದಿಗೆ ಮಾತನಾಡುವ ಸಂದರ್ಭದಲ್ಲಿ, ನಾವು ಕೇವಲ ಯೋಹಾನ 3:16ನ್ನು ಮಾತ್ರ ಹೇಳಿ ಅದರ ನಂತರ ಬರುವ ವಚನವನ್ನು ಹೇಳುವುದಿಲ್ಲವೇ? ಇದು ಕೇವಲ ಪವಿತ್ರಾತ್ಮನ ಬೋಧಿಸುವ ಕೆಲಸವಾಗಿದೆ ಎಂದು ನಾವು ಆಲೋಚಿಸುವುದರ ನಿಮಿತ್ತ ಆ ವಾಕ್ಯವನ್ನು ಚರ್ಚಿಸುವುದಕ್ಕೆ ತಡೆಯುತ್ತೇವೆಯೇ? ಇಲ್ಲಾ! ನಾವು ಆಗಾಗ್ಗೆ ಆ ವಾಕ್ಯವನ್ನು ಚರ್ಚಿಸುತ್ತಿರಲೇಬೇಕು.

ಪವಿತ್ರಾತ್ಮನು ನಮ್ಮನ್ನು ಎಲ್ಲಾ ಸತ್ಯಕ್ಕೆ ನಡೆಸುತ್ತಾನೆ ಎಂದು ಸತ್ಯವೇದವು ಹೇಳುತ್ತದೆ ಎಂಬುದು ನಮಗೆ ತಿಳಿದಿದೆ. ಆದರೆ ದುಃಖಕರವಾಗಿ, *ಕಥೆ* ಮಾತ್ರದ ಕುರಿತಾಗಿ ತಿಳಿಸುತ್ತಾ ನಾವು ಲೋಕದೆಲ್ಲೆಡೇ ಸಂಚರಿಸುವಾಗ, ಸತ್ಯವೇದದ ಕಥೆಗಳಲ್ಲಿ ನಿಧಿಗಳಿವೆ, ಹಾಗೂ ಅವುಗಳನ್ನು ಕಲಿಯುವುದಕ್ಕೆ ದೇವರು ತಾನೇ ಅವರಿಗೆ ಸಹಾಯ ಮಾಡುತ್ತಾನೆ ಎಂದು ಅನೇಕ ವಿಶ್ವಾಸಿಗಳಿವೆ ತಿಳಿದಿಲ್ಲ ಎಂಬುದನ್ನು ನಾವು ಸತತವಾಗಿ ನೋಡುತ್ತಿದ್ದೇವೆ.

ಹಾಗಾಗಿ, ಪವಿತ್ರಾತ್ಮನು ಖಾಲಿಯಾಗಿರುವ ತರಗತಿಯ ಮುಂದೆ ನಿಂತು ಬೋಧಿಸುವುದಕ್ಕಾಗಿ ಕಾಯುವನು.

ಕಥೆ ಮಾತ್ರದಲ್ಲಿ, ನಾವು ಒಂದು ಕಥೆಯನ್ನು ಸಿದ್ಧಪಡಿಸಿದಾಗ, ಕಥೆಯಲ್ಲಿರುವ ನಿಧಿಗಳನ್ನು ನಮಗೆ ತೋರಿಸುವಂತೆ ನಾವು ಕರ್ತನನ್ನು ಬೇಡಿಕೊಳ್ಳುತ್ತೇವೆ, ಮತ್ತು ನಾವು ಈಗ ತಾನೇ ಕಂಡುಕೊಂಡಿರುವ ನಿಧಿಗಳನ್ನು ಬೇರೆಯವರು ಕಂಡುಕೊಳ್ಳುವಂತೆ ಪ್ರಶ್ನೆಗಳನ್ನು ರೂಪಿಸುವುದಕ್ಕೆ ಆತನ ಸಹಾಯಕ್ಕಾಗಿ ನಾವು ಹುಡುಕುತ್ತೇವೆ. ನಾವು ಕೇಳುಗರಿಗೆ ಪ್ರಶ್ನೆಗಳನ್ನು ಕೇಳಿದಂತೆಲ್ಲಾ, ಈ ಚರ್ಚೆಯನ್ನು ಪವಿತ್ರಾತ್ಮನು ಮಾರ್ಗದರ್ಶಿಸಬೇಕೆಂದು ಪ್ರಾರ್ಥಿಸುತ್ತೇವೆ. ನಂತರ, ಕೇಳುಗರಿಂದ ಸಂಶೋಧನೆ ನಡೆದಂತೆಲ್ಲಾ, ಕೋಣೆಯಲ್ಲಿರುವ ಪ್ರತಿಯೊಬ್ಬರೊಂದಿಗೆ, ನಮ್ಮನ್ನೂ ಒಳಗೊಂಡು ಪವಿತ್ರಾತ್ಮನು ಮಾತನಾಡುತ್ತಿರುವನು ಎಂದು ನಾವು ಗುರುತಿಸುತ್ತೇವೆ.

ಯಾವಾಗಲಾದರೊಮ್ಮೆ, ನಿಮ್ಮ ಕೇಳುಗರ ಕಡೆಯಿಂದ ಪ್ರಶ್ನೆಗಳು ಬರುತ್ತವೆ, ಇವುಗಳಿವೆ ಇನ್ನಿತರ ಕಥೆಗಳು ಮತ್ತು ಸತ್ಯವೇದದಲ್ಲಿನ ಮಾಹಿತಿಯಿಂದ ಅವರಿಗೆ ಉತ್ತರಿಸಬೇಕು. ನಿಮಗೆ ಉತ್ತರ ತಿಳಿದಿದ್ದು, ಮತ್ತು ಸತ್ಯವೇದಕ್ಕನುಗುಣವಾದ ಉತ್ತರವನ್ನು ನೀವು ಕೊಡಬಲ್ಲವರಾದರೆ, ಆಗ ಸಂಪೂರ್ಣವಾದ ಉತ್ತರವನ್ನು ಕೊಡಬೇಕೇ ಅಥವಾ ಪ್ರತಿಕ್ರಿಯೆಯಾಗಿ ಕೇವಲ ಒಂದು ಸಣ್ಣ ಸಾಮಾನ್ಯ ಅವಲೋಕನವನ್ನು ಕೊಡಬೇಕೇ ಎಂಬ ಜ್ಞಾನಕ್ಕಾಗಿ ನೀವು ದೇವರನ್ನು ಹುಡುಕುವ ಅಗತ್ಯವಿದೆ. ನೀವು, "ಒಳ್ಳೆಯ ಪ್ರಶ್ನೆ. ಇದು ಒಂದು ಸಂಪೂರ್ಣವಾದ ಹೊಸ ಮಾರ್ಗವಾಗಿರುವುದರಿಂದ ಕಾಯೋಣ. ಆದರೆ ನಿಮ್ಮ ಪ್ರಶ್ನೆಗೆ ಸಮಾಧಾನವನ್ನು ಕೊಡುವಂತಹ ಒಂದು ಸಂಪೂರ್ಣವಾದ ಸತ್ಯವೇದದ ಕಥೆಯನ್ನು ಮುಂದಿನ ಬಾರಿ ಹೇಳುವುದಕ್ಕೆ ಯೋಜನೆ ಮಾಡುತ್ತೇನೆ" ಎಂದು ಹೇಳುವಂತೆ ನೀವು ನಡೆಸಲ್ಪಡಬಹುದು.

ಆದಾಗ್ಯೂ ಸಹ ಕೇಳುಗರಿಗೆ ಸೂಕ್ಷ್ಮತೆಯುಳ್ಳವರಾಗಿ ನೀವು ಇರಬೇಕಾಗಿದೆ. ಪವಿತ್ರಾತ್ಮ ಅಥವಾ ಒಬ್ಬ ವ್ಯಕ್ತಿಯ ಆಸಕ್ತಿಯು ಈ ರೀತಿಯಾದ ಅನಿರೀಕ್ಷಿತ ಪ್ರಶ್ನೆಗಳನ್ನು ಕೇಳುವಂತೆ ಪ್ರೇರಿಸುತ್ತಿರಬಹುದು. ಕಥೆಯಿಂದ ದೂರವಿರುವಂತಹ ಇಂತಹ ಪ್ರಶ್ನೆಗಳು ಸತ್ಯಕ್ಕಾಗಿ ಸಂಶೋಧನೆಯನ್ನು ಮಾಡುವುದಕ್ಕೆ ಅದ್ಭುತವಾದ ಅವಕಾಶಗಳೆಂದು ಪರಿಗಣಿಸಿ. ಆ ಅವಕಾಶಗಳನ್ನು ಕಳೆದುಕೊಳ್ಳಬೇಡಿ. ಆ ಪ್ರಶ್ನೆಗಳಿಗೆ ಉತ್ತರಿಸಿ.

ಈ ರೀತಿಯಾದ ಚರ್ಚೆಯ ಶೈಲಿಯನ್ನು ಬೋಧಿಸುವಂತಹ ಕಥೆಗಾರರು ಯಾವ ಪ್ರಶ್ನೆಯನ್ನು ಕೇಳಬೇಕು ಎಂಬುದಕ್ಕೆ ಸೂಕ್ಷ್ಮತೆಯುಳ್ಳವರಾಗಿರುತ್ತಾರೆ. ತರಗತಿಯ ಸದಸ್ಯರು ತಾವೇ ಖುದ್ದಾಗಿ ನಿಧಿಗಳನ್ನು ಕಂಡುಹಿಡಿಯಲು ಪ್ರಾರಂಭಿಸಿದಾಗ, ಕಥೆ ಹೇಳುವವರು / ಬೋಧಿಸುವವರು ಅದಕ್ಕೆ ಸಂಬಂಧಪಟ್ಟ ಸ್ಪಷ್ಟವಾದ ಕುರುಹುಗಳನ್ನು ಕೊಡುವುದನ್ನು ನಿಲ್ಲಿಸುತ್ತಾರೆ ಮತ್ತು ಉತ್ತರಿಸುವವರು ಹೆಚ್ಚೆಚ್ಚಾಗಿ ಸಂಶೋಧನೆಗಳನ್ನು ಮಾಡುವಂತೆ ಅವರಿಗೆ ನಿಧಾನವಾಗಿ ಅನುಮತಿಸುವುದನ್ನು ಬುದ್ಧಿವಂತ ನಾಯಕರುಗಳು ಕಲಿತುಕೊಳ್ಳುವರು.

ಸೇವೆಯಲ್ಲಿ, ಪ್ರಶ್ನೆಗಳ ಮೂಲಕ ನೀವು ಜನರನ್ನು ನಿಧಿಗಳ ಕಡೆಗೆ ನಡೆಸುವಾಗ, ತರಗತಿಯ ಸದಸ್ಯರು ತಮ್ಮ ಸಂಶೋಧನೆಯ ಕ್ಷಣಗಳಿಗೆ ಸಹಾಯವನ್ನು ಹೊಂದುವುದಕ್ಕಾಗಿ ನೀವು ಸಿದ್ಧಪಡಿಸಿರುವವುಗಳಲ್ಲಿ ಕೆಲವೇ ಪ್ರಶ್ನೆಗಳನ್ನು ಉಪಯೋಗಿಸಿ.

ಪ್ರೀತಿಯನ್ನು ತೋರ್ಪಡಿಸಿ

ಈ ರೀತಿಯ ಚರ್ಚೆಯ ಶೈಲಿಯ ಬೋಧನೆಯನ್ನು ನಾವು ಉಪಯೋಗಿಸಿದಾಗ, ಯಶಸ್ಸಿಗಾಗಿ ನಾವೆಲ್ಲರೂ ಒಂದು ಮುಖ್ಯವಾದ ಕೀಲಿಗೈಯನ್ನು ಉಪಯೋಗಿಸಲೇಬೇಕು, ಅದು 1 ಕೊರಿಂಥ ೧೩ರಲ್ಲಿ – ನಾವು ಪ್ರೀತಿಯನ್ನು

ತೋರಿಸಲೇಬೇಕು. "ನಾನು ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ."

ಇದನ್ನು ಅರಿತುಕೊಳ್ಳಿ: ಅನೇಕರು ತಾವು ಒಂದು ಗುಂಪಿನ ಮುಂದೆ ಬಂದು ನಿಂತು ಮಾತನಾಡಬೇಕಾಗಿರುವಾಗ ಬಹಳ ಭಯಪಡುತ್ತಾರೆ, ಹಾಗಾಗಿ ಅಂತವರಿಗೆ ನಿಮ್ಮ ನಿರೂಪಣೆಯು ಬಹಳ ಉತ್ಸಾಹವನ್ನು ಉಂಟುಮಾಡುವಂತಹುದಾಗಿರಬೇಕು.

ಕೆಲವೊಮ್ಮೆ ನೀವು ನಾಯಕರುಗಳಿಗೆ ಅಥವಾ ಸಭಾಪಾಲಕರುಗಳಿಗೆ ಬೋಧಿಸುತ್ತಿರಬಹುದು. ಅವರು ಜನರ ಮುಂದೆ ನಿಲ್ಲಲು ಅವರಿಗೆ ಯಾವುದೇ ಹಿಂಜರಿಯುವಿಕೆ ಇರುವುದಿಲ್ಲವೆಂಬುದರಲ್ಲಿ ಸಂದೇಹವಿಲ್ಲದಿದ್ದರೂ ಸಹ, ಅವರಲ್ಲಿ ಅನೇಕರು ಬಹಿರಂಗವಾಗಿ "ತಿದ್ದಲ್ಪಟ್ಟಿರುವುದಿಲ್ಲ" (ಅಥವಾ ಬಹಳ ಬಹಳ ಸಮಯದವರೆಗೂ ಇಲ್ಲ). ಹಾಗಾಗಿ, ನೀವು ಚರ್ಚೆಯನ್ನು ಉಪಯೋಗಿಸಿಕೊಂಡು ಬೋಧಿಸುವಾಗ, ಹೆದರಿಕೆಯಲ್ಲಿರುವವರಿಗೂ ಹಾಗೂ ಬಹಿರಂಗವಾಗಿ ತಿದ್ದುಪಾಟಿಗೆ ಅಭ್ಯಾಸವಿಲ್ಲದ ನಾಯಕರುಗಳಿಗೂ ಸಹ ನಿಮ್ಮ ಪ್ರತಿಕ್ರಿಯೆಗಳಲ್ಲಿ ನಿರ್ದಿಷ್ಟವಾಗಿ ಸೂಕ್ಷ್ಮತೆಯುಳ್ಳವರಾಗಿರ್ರಿ. ಕೇಳುಗರು ಕಥೆಯನ್ನು ಪುನಃ ಹೇಳುವಾಗ, ಅಥವಾ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವಾಗ ಅಥವಾ ತಮ್ಮ ಸ್ವಂತ ಅವಲೋಕನಗಳನ್ನು ಹೇಳುವಾಗ, ಇದನ್ನು ನೆನಪಿನಲ್ಲಿಟ್ಟುಕೊಳ್ಳಿ. ಜನರು ಎಷ್ಟೇ ಕೊರತೆಯುಳ್ಳ ಪ್ರತಿಕ್ರಿಯೆಯನ್ನು ಕೊಟ್ಟರೂ ಸಹ, ಅವರನ್ನು ತಿದ್ದುವಾಗ ಕಥೆಹೇಳುವವರು/ಬೋಧಿಸುವವರು ಬಹಳ ಮೃದುವಾಗಿಯೂ ಮತ್ತು ದೃಢವಾಗಿಯೂ ಇರುವುದು ಮುಖ್ಯವಾಗಿದೆ.

ಒಂದು ಮುಗುಳ್ನಗೆಯಿಂದ ಮಾಡಿದಂತಹ ಮೃದುವಾದ ತಿದ್ದುವಿಕೆಯು, ಗಂಭೀರವಾಗಿ ಮಾಡಿದ ತಿದ್ದುವಿಕೆಗಿಂತಲೂ ಬಹಳ ಸುಲಭವಾಗಿ ಸ್ವೀಕರಿಸಲ್ಪಡುತ್ತದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಿ. ಕಥೆ ಹೇಳುವವರಾಗಿ ನೀವೇ ನಿಮ್ಮ ಗುಂಪಿನ ವಾತಾವರಣವನ್ನು ಉಂಟುಮಾಡಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ನಿಮಗೆ ಒಂದು ಆಯ್ಕೆ ಇದೆ. ಕೇಳಿಸಿಕೊಳ್ಳುವವರು ತಮ್ಮ ಅಭಿಪ್ರಾಯಗಳನ್ನು ಮತ್ತು ಆಲೋಚನೆಗಳನ್ನು ಹೇಳುವುದಕ್ಕೆ ಅವರನ್ನು ಪ್ರೋತ್ಸಾಹಿಸುವುದರಿಂದ ನೀವು ಅವರಿಗೆ ವಿಚಾರಣೆ ಮಾಡುವುದಕ್ಕೆ ಮತ್ತು ಸಂಶೋಧನೆಗೆ ಒಂದು ಭಾವನೆಯನ್ನು ಮೂಡಿಸಬಹುದು ಅಥವಾ... ಭಾಗವಹಿಸುವವರು ಇಡೀ ಚರ್ಚೆಯ ಸಮಯವು ಒಂದು ಪರೀಕ್ಷೆಯಿದ್ದಂತೆ ಮತ್ತು ಅವರು ಯಾವಾಗಲೂ "ಸರಿಯಾದ" ಉತ್ತರವನ್ನೇ ಕೊಡಬೇಕು ಎಂಬ ಭಾವನೆಯನ್ನುಂಟು ಮಾಡುವಂತೆ ನೀವು ದುಗುಡದ ಮತ್ತು ನಿರುತ್ಸಾಹದ ಅನಿಸಿಕೆಯನ್ನೂ ತರಬಹುದಾಗಿದೆ.

ಪುನಃ, ನಿಮ್ಮ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳಲು ಮತ್ತು ನಿಮ್ಮ ಪ್ರಶ್ನೆಗಳನ್ನು ಕೇಳಲು ನೀವು ಬಹಳ ಶ್ರಮಪಡುವಾಗ, ನೀವು ನಡೆಸುತ್ತಿರುವ ಜನರ ಕುರಿತಾಗಿ ಆಲೋಚಿಸಿ. ಅವರಿಗೆ ಪ್ರತಿಕ್ರಿಯಿಸಿ, ಇಲ್ಲಿ ಬಹಳ ಮುಖ್ಯವಾಗಿರುವಂತಹುದು ನಿಮ್ಮ ಕೌಶಲವಲ್ಲ... ಆದರೆ ನೀವು ನಿಮ್ಮ ಕೌಶಲವನ್ನು ಉಪಯೋಗಿಸುವಾಗ ನೀವು ಜನರಿಗೆ ತೋರಿಸುವ ಪ್ರೀತಿಯೇ ಮುಖ್ಯವಾಗಿದೆ ಎಂಬುದನ್ನು ನಿಮ್ಮ ಮನಸ್ಸಿನಲ್ಲಿ ಅತ್ಯುನ್ನತವಾಗಿ ಇಟ್ಟುಕೊಳ್ಳಿ.

ಕೌಶಲ್ಯ ೩: ನಿಮ್ಮ ಪ್ರಶ್ನೆಗಳನ್ನು ರೂಪಿಸುವುದು ಹೇಗೆ

ಸತ್ಯವೇದದ ಕಥೆಗಳನ್ನು ಹೇಳುವುದರ ಮತ್ತು ಅವುಗಳನ್ನು ನಂತರ ಚರ್ಚಿಸುವುದರ ಬಹಳ ಮುಖ್ಯವಾದ ಗುರಿಗಳು ಮತ್ತು ಫಲಗಳು ಹೀಗಿವೆ:

- ದೇವರ ಗುಣಲಕ್ಷಣಗಳನ್ನು ಕಲಿತುಕೊಳ್ಳುವುದು
- ಮನುಕುಲಕ್ಕಾಗಿ ಮತ್ತು ಮನುಕುಲದಿಂದ ದೇವರು ಏನನ್ನು ಬಯಸುತ್ತಾನೆ ಎಂಬುದನ್ನು ಕಲಿತುಕೊಳ್ಳುವುದು
- ನಮ್ಮ ಕುರಿತಾಗಿ ಸತ್ಯವನ್ನು ನೋಡುವುದು ಮತ್ತು ಅಂಗೀಕರಿಸುವುದು.

ಕೀನ್ಯದಲ್ಲಿ *ಕಥೆ* ಮಾತ್ರದ ಕಾರ್ಯಾಗಾರವನ್ನು ಮಾಡಿದ ನಂತರ, ಭಾಗವಹಿಸಿದ್ದಂತಹ ಒಬ್ಬ ಸಭೆ ಸ್ಥಾಪಕರು ಒಂದು ಜ್ಞಾನವುಳ್ಳ ಅವಲೋಕನವನ್ನು ಹಂಚಿಕೊಂಡರು. ಈ ವ್ಯಕ್ತಿಯು, ದೈವಶಾಸ್ತ್ರದಲ್ಲಿ ಬಲವಾಗಿರುವಂತವರು, ಸೇವೆ ಮಾಡುವುದಕ್ಕಾಗಿ ತಮ್ಮ ಪಟ್ಟಣದ ವ್ಯಾಪಾರವನ್ನು ಬದಿಗಿಟ್ಟವರು, ಆದರೆ ನಾಲ್ಕು ವರ್ಷಗಳಲ್ಲಿ ತನ್ನ ಹಳ್ಳಿಯ ಸೇವೆಯಲ್ಲಿ ಬಹಳ ಅಲ್ಪ ಫಲವನ್ನು ಕಂಡವರಾಗಿದ್ದರು.

ಈ ಕಾರ್ಯಾಗಾರಕ್ಕೆ ಬರುವುದಕ್ಕಾಗಿ ಅವರು ಎರಡು ದಿನ ಒಂಟೆಯ ಮೇಲೆ ಪ್ರಯಾಣಿಸಿ, ಒಂದು ದಿನ ಟ್ರಕ್‌ನಲ್ಲಿ, ಮತ್ತು ಇನ್ನೊಂದು ದಿನ ಬಸ್‌ನಲ್ಲಿ ಪ್ರಯಾಣಿಸಿ ಬಂದವರಾಗಿದ್ದರು! ಆತನು ಕಾರ್ಯಾಗಾರದಲ್ಲಿ ಕಲಿತದ್ದನ್ನು ಬಹಳ ಇಷ್ಟಪಟ್ಟನು, ಬಹಳ ಬಲಗೊಂಡಂತೆ ಭಾವಿಸಿದನು! ಆತನು, "ನನಗೆ ಬೇರೆಯವರು ಏನನ್ನು ಕಲಿಸಿದರೋ ಅದನ್ನೇ ನಾನು ಬೋಧಿಸುತ್ತಾ ಬಂದಿರುವೆನು, ಆದರೆ ಈ ತರಬೇತಿಯನ್ನು ಮಾಡುವ ತನಕ ಸತ್ಯವೇದದಿಂದ ಹೇಗೆ ಕಲಿಯಬೇಕು ಎಂಬುದು ನನಗೆ ತಿಳಿದಿರಲಿಲ್ಲ.

ನಾನು ತಲುಪಿರದಂತಹ ಸ್ಥಳಗಳಿಗೆ ಜನರನ್ನು ಕರೆದುಕೊಂಡು ಹೋಗಲು ಸಾಧ್ಯವಿಲ್ಲ ಎಂಬುದನ್ನು ಈಗ ನಾನು ಕಾಣುತ್ತಿರುವೆನು" ಎಂದು ಹೇಳಿದನು.

ಈ ಕಾರಣಕ್ಕಾಗಿಯೇ ನಾವು ಪ್ರಶ್ನೆಗಳನ್ನು ಉಪಯೋಗಿಸುತ್ತೇವೆ. ಮೊದಲನೆಯದಾಗಿ ಕಥೆ ಹೇಳುವವರು ದೇವರ ವಾಕ್ಯದಿಂದ ತಾವೇ ಹೊಸ ಮಾಹಿತಿಯನ್ನು ಕಲಿತುಕೊಳ್ಳುತ್ತಾರೆ ಮತ್ತು ನಂತರ ಕಥೆ ಹೇಳುವವರು ತಾವು ಕಲಿತುಕೊಂಡ ಬೆಲೆಬಾಳುವ ಸತ್ಯಗಳ ಕಡೆಗೆ ಬೇರೆಯವರನ್ನು ಪ್ರಶ್ನೆಗಳ ಮೂಲಕ ನಡೆಸುತ್ತಾರೆ.

ರೊಟ್ಟಿಯ ತುಂಡುಗಳನ್ನು ಹಾಕುತ್ತಾ ನಡೆಸುವುದನ್ನು *ಕಥೆ ಮಾತ್ರ* ತರಬೇತಿಯಲ್ಲಿ ನಾವು ಕಲಿಸಿಕೋಡುತೇವೆ" *ಕಥೆ ಮಾತ್ರವನ್ನು* ಕಲಿತುಕೊಳ್ಳುವುದರ ಪ್ರಾರಂಭದಲ್ಲಿ ಒಂದು ನಿಧಿಯನ್ನು ಕಂಡುಕೊಳ್ಳುವುದಕ್ಕೆ ನಡೆಸುವುದಕ್ಕಾಗಿ ಜನರು ಸಾಮಾನ್ಯವಾಗಿ ಒಂದು ಪರಿಪೂರ್ಣವಾದ ಪ್ರಶ್ನೆಯನ್ನು ಮಾತ್ರ ಕೇಳುತ್ತಾರೆ. ಇದು ಅಪರೂಪವಾಗಿ ಕಾರ್ಯಮಾಡುತ್ತದೆ. ನೀವು ಒಂದು ರೊಟ್ಟಿಯ ತುಂಡನ್ನು ಮಾತ್ರ ಪಂಜರದ ಮುಂದೆ ಹಾಕಿ, ಅದನ್ನು ತಿನ್ನುವುದಕ್ಕೆ ಪಕ್ಷಿಯು ಬರುತ್ತದೆಂದು ಕಾಯುವುದು ಸಾಧ್ಯವಿಲ್ಲ. ಒಂದು ಪಕ್ಷಿಯನ್ನು ಉಪಾಯವಾಗಿ ಪಂಜರದೊಳಗೆ ಹಾಕುವುದಕ್ಕೆ, ರೊಟ್ಟಿಯ ಚೂರುಗಳ ಜಾಡನ್ನು ಹಾಕಬೇಕು. ಅದೇ ರೀತಿಯಲ್ಲಿ, ಜನರು ಒಂದು ಆತ್ಮೀಕ ನಿಧಿಯನ್ನು ಕಂಡುಕೊಳ್ಳುವುದಕ್ಕಾಗಿ ಅವರನ್ನು ಪ್ರಶ್ನೆಗಳ ಮುಖಾಂತರ ನೀವು ನಡೆಸಬೇಕೆಂದಿರುವಾಗ, ಆ ಸತ್ಯಕ್ಕೆ ಅವರನ್ನು ಸುಲಭವಾಗಿ ನಡೆಸುವಂತಹ ಪ್ರಶ್ನೆಗಳ ಚಿಕ್ಕ ಸರಣಿಯನ್ನು ನೀವು ಕೇಳಬೇಕಾದ ಅಗತ್ಯವಿರುತ್ತದೆ.

ದಯವಿಟ್ಟು ಗಮನಿಸಿ: ಈ ಕೈಪಿಡಿಯ ಮುಂದಿನ ಭಾಗಗಳಲ್ಲಿ ಕಾಣಿಸಿಕೊಳ್ಳುವ ಅಬ್ರಾಮ/ಸಾರಾ ಕಥೆಗಳಲ್ಲಿ, ಅನೇಕ ಆತ್ಮೀಕ ನಿಧಿಗಳನ್ನು ಮತ್ತು ಅನ್ವಯಿಸುವಿಕೆಗಳನ್ನು ನಿಮಗಾಗಿ ಬರೆಯಲ್ಪಟ್ಟಿವೆ. *ಕಥೆ* ಮಾತ್ರದ ಕಾರ್ಯಾಗಾರದಲ್ಲಿ ಕಲಿಯುತ್ತಿರುವಂತವರಿಗೆ ತಮ್ಮ ಪ್ರಶ್ನೆಗಳನ್ನು ಬರೆದುಕೊಳ್ಳದಂತೆ ಕಲಿಸುತ್ತೇವೆ. ಈ ಕೈಪಿಡಿಯಲ್ಲಿ ಬರವಣಿಗೆಯ ರೂಪದಲ್ಲಿ ಪ್ರಶ್ನೆಗಳ ಪಟ್ಟಿಯನ್ನು ಮಾಡಲಾಗಿದೆ ಏಕೆಂದರೆ ಅಕ್ಷರಸ್ಥರು ಮತ್ತು ಕಥೆ ಮಾತ್ರವನ್ನು ಕಲಿಯುವುದಕ್ಕೆ ಕಾರ್ಯಾಗಾರಕ್ಕೆ ಬರುವುದಕ್ಕೆ ಆಗದಂತಹವರು ಮಾನಸಿಕವಾಗಿ *ಕಥೆಮಾತ್ರದ* ಪ್ರಕ್ರಿಯೆಯಲ್ಲಿ ಸಿದ್ಧವಾಗುವುದಕ್ಕೆ ಶಕ್ತರಾಗಲು ಕೊಡಲ್ಪಟ್ಟಿದೆ.

ಕಥೆ ಹೇಳುವವರಾಗಿ ನೀವು ಮಾರ್ಥ/ಮರಿಯಳ ಕಥೆಯ ಮೂಲಕ ಹಾದುಹೋಗುವಾಗ, ತರಗತಿಯ ಸದಸ್ಯರು ಕಂಡುಕೊಳ್ಳಬಹುದಾದಂತಹ ನಿಧಿಗಳ ಕಡೆಗೆ ನಡೆಸುವಂತಹ ಪ್ರಶ್ನೆಗಳನ್ನು ನೀವು ಅವರಿಗೆ ಕೇಳುವುದಕ್ಕೂ ಮುನ್ನವೇ, ನಾವು ಮಾಡಿರುವ ಕೆಲವು ಬಹಳ ಅವಲೋಕಗಳ ಮತ್ತು ಅನ್ವಯಿಸುವಿಕೆಗಳ ಪಟ್ಟಿಯಲ್ಲಿರುವವುಗಳನ್ನು, ಸದಸ್ಯರೇ ಕಂಡುಹಿಡಿದು ಹೇಳುವವರಾಗಿರುತ್ತಾರೆ. ತರಗತಿಯ ಸದಸ್ಯರಿಂದ ಈ ರೀತಿಯ ಮೊದಲೇ ಕಂಡುಹಿಡಿಯಲ್ಪಟ್ಟ ನಿಧಿಗಳು ಸಂಗತಿ ಅದ್ಭುತವಾಗಿದೆ, ಇದು ಜನರು ಸಂಶೋಧನೆಯನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ತೋರ್ಪಡಿಸುತ್ತದೆ. ಅವರೇ ಆತ್ಮೀಕ ನಿಧಿಗಳನ್ನು ಕಂಡುಕೋಳ್ಳುವಂತೆ ಮಾಡಬೇಕು.

ಬೇರೆಯವರನ್ನು ನಿಧಿಗಳ ಕಡೆಗೆ ನಡೆಸುವುದಕ್ಕೆ ಬಳಸುವ ಪ್ರಶ್ನೆಗಳು

ಈಗ ನೀವು ನಿಮ್ಮ ಕಥೆಯ ಪ್ರಾರಂಭಕ್ಕೆ ಹಿಂತಿರುಗಿ. ನೀವು ಮಾಡಿರುವಂತಹ ಆತ್ಮೀಕ ಅವಲೋಕನಗಳ ಕುರಿತಾಗಿ ಆಲೋಚಿಸುತ್ತಾ, ನಿಮ್ಮ ಮನಸ್ಸಿನಲ್ಲಿ ಅದನ್ನು ಮನನ ಮಾಡಿಕೊಳ್ಳಿ. ಬುದ್ಧಿವಂತ ಸಮಾಲೋಚಕನು ಕಥೆಯ ಪ್ರತಿ ಭಾಗದಲ್ಲೂ ಅನೇಕ ಪ್ರಶ್ನೆಗಳನ್ನು ಕೇಳುವುದರ ಪ್ರಾಮುಖ್ಯತೆಯನ್ನು ಹೇಗೆ ತೋರಿಸಿಕೊಟ್ಟನು ಎಂಬುದನ್ನು ನೆನಪಿಸಿಕೊಳ್ಳಿ. ಇದೇ ರೀತಿಯಲ್ಲೇ ನೀವು ನಿಮ್ಮ ಆತ್ಮೀಕ ಅವಲೋಕನಗಳನ್ನು ಕಂಡುಕೊಳ್ಳುವಿರಿ.

ಇದೇ ರೀತಿಯಲ್ಲಿ, ನಿಮ್ಮ ಕೇಳುಗರು ನೀವು ಮಾಡಿದಂತೆಯೇ ಕಂಡುಹಿಡಿಯುವುದಕ್ಕೆ ಅನುಮತಿಸುವುದಕ್ಕಾಗಿ ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿರುತ್ತದೆ. ವಾಸ್ತವವಾಗಿ, ನಿಮ್ಮ ಅವಲೋಕನಗಳನ್ನು ಕಂಡುಹಿಡಿಯುವುದಕ್ಕೆ ನೀವು ಕೇಳಿದ ಪ್ರಶ್ನೆಗಳನ್ನು ನೆನಪಿಸಿಕೊಳ್ಳುವುದಕ್ಕೆ ನೀವು ಸಮಯವನ್ನು ತೆಗೆದುಕೊಂಡರೆ, ನೀವು ಆಗ ಅದೇ ಪ್ರಶ್ನೆಗಳನ್ನು ಪುನಃ ಉಪಯೋಗಿಸಬಹುದು. ಬೇರೆಯವರಿಗೆ ಅದೇ ಪ್ರಶ್ನೆಗಳನ್ನು ಕೇಳಿರಿ.

ಉದಾಹರಣೆಗೆ, ನೀವು ಆದಿಕಾಂಡ 12:10-13ರಲ್ಲಿರುವ ಕಥೆಯನ್ನು ಹೇಳುತ್ತಿದ್ದರೆ, ನೀವು ಸಿದ್ಧಪಡಿಸುವಾಗಲೇ ಪ್ರಾರಂಭದ ಕೆಲವು ವಚನಗಳಲ್ಲಿ ಕಂಡುಬರುವಂತೆಯೇ, ಅನೇಕ ಸಂಗತಿಗಳನ್ನು ಕಂಡುಹಿಡಿದಿರಬಹುದು.

“ಆ ದೇಶದಲ್ಲಿ ಘೋರಕ್ಷಾಮವಿದ್ದದರಿಂದ ಅಲ್ಲಿರದೆ, ಐಗುಪ್ತದೇಶದಲ್ಲಿ ಕೆಲವು ಕಾಲ ಇರಬೇಕೆಂದು ಆ ಬೆಟ್ಟದ ಸೀಮೆಯಿಂದ ಇಳಿದು ಹೋದನು. 11 ಅವನು ಐಗುಪ್ತದೇಶದ ಹತ್ತಿರಕ್ಕೆ ಬಂದಾಗ, ತನ್ನ ಹೆಂಡತಿಯಾದ ಸಾರಯಳಿಗೆ – ಕೇಳು, ನೀನು ಸುಂದರಿ ಎಂದು ನಾನು ಬಲ್ಲೆ; 12 ಐಗುಪ್ತದೇಶದವರು ನಿನ್ನನ್ನು ಕಂಡು–ಈಕೆಯು ಇವನ ಹೆಂಡತಿ ಎಂದು ನನ್ನನ್ನು ಕೊಂದು ನಿನ್ನನ್ನು ಉಳಿಸಾರು. 13 ಆದಕಾರಣ ನೀನು ನನಗೆ

ತಂಗಿಯಾಗಬೇಕೆಂದು ಅವರಿಗೆ ಹೇಳು; ಹೀಗೆ ಹೇಳಿದರೆ ನಿನ್ನ ನಿಮಿತ್ತ ನನಗೆ ಹಿತವಾಗುವದು, ನಾನು ನಿನ್ನ ದೆಸೆಯಿಂದ ಸಾಯದೆ ಬದುಕುವೆನು ಎಂದು ಹೇಳಿದನು." (ಆದಿಕಾಂಡ 12:10-13).

ಇಲ್ಲಿ ಅಬ್ರಾಮನು ದೇವರಲ್ಲಿ ಭರವಸೆ ಇಡುವುದರ ಬದಲು, ಭಯವನ್ನು ತೋರ್ಪಡಿಸಿದನು ಎಂಬುದನ್ನು ನೀವು ಕಥೆಯನ್ನು ಕಲಿತುಕೊಳ್ಳುವ ಪ್ರಾರಂಭದಲ್ಲೇ ಬಹುಶಃ ಗಮನಿಸಿರಬಹುದು. ಕ್ಷಾಮದ ನಿಮಿತ್ತ ಅವನು ವಾಗ್ದಾನ ಭೂಮಿಯಿಂದ ಓಡಿಹೋಗಿ ಐಗುಪ್ತ ದೇಶಕ್ಕೆ ಬಂದನು, ಮತ್ತು ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಸಾರಯಳು ಸುಳ್ಳುಹೇಳಬೇಕೆಂದು ಕೇಳಿಕೊಂಡನು. (ಇದರ ನಂತರದಲ್ಲಿ ಯಾಕೋಬನು ಮತ್ತು ಅವನ ಕುಟುಂಬದವರು ಐಗುಪ್ತ ದೇಶಕ್ಕೆ ಹೋಗುವುದಕ್ಕೆ ದೇವರಿಂದ ನಡೆಸಲ್ಪಡುವುದರೊಂದಿಗೆ ಇರುವ ಅವಲೋಕನದಲ್ಲಿ ಗಲಿಬಿಲಿ ಇರುವುದನ್ನು ಕೆಲವರು ಕಾಣಬಹುದು. ಆದರೆ ಖಂಡಿತವಾಗಿಯೂ, "ದೇವರಿಂದ ನಡೆಸಲ್ಪಡುವುದು" ಎಂಬುದು ಈ ಎರಡು ಸನ್ನಿವೇಶಗಳಲ್ಲಿ ವ್ಯತ್ಯಾಸವನ್ನು ತೋರಿಸುತ್ತದೆ.)

ನಂತರ ನೀವು ಮಾಡಿದಂತಹ ಅನೇಕ ಅವಲೋಕನಗಳ ಆಧಾರದ ಮೇರೆಗೆ ಕೆಲವು ಆತ್ಮೀಕ ಅನ್ವಯಿಸುವಿಕೆಗಳನ್ನು ಮಾಡಿರಬಹುದು. ದೇವರು ಎಲ್ಲಾ ಜನರಿಗೆ ವಾಗ್ದಾನಗಳನ್ನು ಕೊಟ್ಟಿರುವನು, ಇವು ವಾಕ್ಯಗಳಲ್ಲಿನ ವಿಧೇಯತೆಯ ಸ್ಥಳಕ್ಕೆ ಅವರು ಹೋಗುವುದು ಮತ್ತು ತಂಗುವುದರ ಮೇಲೆ ಆಧಾರಗೊಂಡಿದೆ ಎಂಬುದನ್ನು ನೀವು ನೋಡಿರಬಹುದು. ಆಮೇಲೆ, ಒತ್ತಡಗಳ ಸಮಯದಲ್ಲಿ ನಾವು ಹೇಗೆ ಕೆಟ್ಟ ನಿರ್ಣಯಗಳನ್ನು ಮಾಡಬಹುದು ಮತ್ತು ದೇವರನ್ನು ಬಿಟ್ಟು, ಲೋಕದಲ್ಲಿ ಸಹಾಯವನ್ನು ಬೇಡಿ ಹೋಗುವುದರ ಅನ್ವಯಿಸುವಿಕೆಗಳನ್ನು ನೀವು ನೋಡಿರಬಹುದು. ಹಾಗೂ, ಕೆಲವೊಮ್ಮೆ ನಾವು ಕಳೆಯುತ್ತಿರುವ ಸಮಯದಲ್ಲಿ, ನಾವು ಹೆಚ್ಚು ಪಾಪಗಳನ್ನು ಮಾಡುತ್ತೇವೆ, ಅಂದರೆ ಸಂಚು ಮಾಡುವುದು, ಸುಳ್ಳು ಹೇಳುವುದು ಹಾಗೂ ನಮ್ಮ ಪಾಪದಲ್ಲಿ ಭರವಸೆಯಿಡುವವರೊಂದಿಗೆ ಭಾಗಿಗಳಾಗುವುದು.

ಈಗ ನಿಮ್ಮ ಅವಲೋಕನಗಳನ್ನು ಪ್ರಶ್ನೆಗಳಾಗಿ ಮಾರ್ಪಡಿಸಿ

ಕಥೆಯಲ್ಲಿನ ಭದ್ರವಾದ ಪ್ರಶ್ನೆಗಳು: ನೀವು ಕಂಡುಹಿಡಿದಿರುವ ನಿಧಿಗಳನ್ನು ನಿಮ್ಮ ಕೇಳುಗರು ಕಂಡುಹಿಡಿಯುವುದಕ್ಕೆ ನಡೆಸುವ ಪ್ರಶ್ನೆಗಳನ್ನು ನೀವು ಬಳಸುವಾಗ, ಕಥೆಯಲ್ಲಿನ ನಿಮ್ಮ ಪ್ರಶ್ನೆಗಳನ್ನು ಭದ್ರಪಡಿಸಿ.

ಆ ಆತ್ಮೀಕ ಅವಲೋಕನಗಳ ಆಧಾರದ ಮೇಲೆ ಅನೇಕಾನೇಕ ಆವಿಷ್ಕಾರಗಳನ್ನು ತೆರೆಯಮಾಡಬಹುದಾದಂತಹ ಕೆಲವು ಪ್ರಶ್ನೆಗಳು ಇಲ್ಲಿವೆ.

1. ಕಳೆದ ಬಾರಿ ನಾವು ಕಲಿತಂತಹ ಮತ್ತು ಚರ್ಚೆ ಮಾಡಿದಂತಹ ಕಥೆಯಲ್ಲಿ, ಅಬ್ರಾಮನು ಎಲ್ಲಿಗೆ ಹೋಗಬೇಕೆಂದು ದೇವರು ಹೇಳಿದನು ಮತ್ತು ಅಲ್ಲಿ ತಾನು ಅಬ್ರಾಮನಿಗಾಗಿ ಏನು ಮಾಡಬೇಕೆಂದಿರುವೆನು ಎಂದು ದೇವರು ಹೇಳಿದನು?

2. ಕ್ಷಾಮವು ಅಬ್ರಾಮನನ್ನು ವಾಗ್ದಾನ ಭೂಮಿಯನ್ನು ಬಿಟ್ಟು ಐಗುಪ್ತದೇಶಕ್ಕೆ ಕೂಡಲೇ ಹೋಗುವಂತೆ ಮಾಡಿತು ಎಂಬುದನ್ನು ನಾವು ನೋಡಿದೆವು. ಆಹಾರದ ಕೊರತೆಯಿರುವಾಗ ಅಬ್ರಾಮನು ಆ ಸ್ಥಳವನ್ನು ಬಿಟ್ಟುಹೋಗುವುದರ ಬದಲು ಇನ್ಯಾವ ಸಂಗತಿಯನ್ನು ಮಾಡಬಹುದಾಗಿತ್ತು?

3. ಈ ಕಥೆಯಲ್ಲಿ ಅಬ್ರಾಮನಿಗೆ ಯಾವ ರೀತಿಯ ದುಗುಡತನ ಅಥವಾ ಭಾವನೆಗಳು ಹತೋಟಿಗೆ ತೆಗೆದುಕೊಂಡವು? ಐಗುಪ್ತ ದೇಶದವರಿಗೆ ಈ ರೀತಿ ಹೇಳು ಎಂದು ಅಬ್ರಾಮನು ಸಾರಯಳಿಗೆ ಹೇಳುವ ದುಗುಡತನವನ್ನು ನೀವು ಹೇಗೆ ನೋಡುವಿರಿ?

4. ಇದಕ್ಕೂ ಮುನ್ನ ನಾವು ಒಟ್ಟಾಗಿ ಮಾತನಾಡಿದಂತಹ ಕಥೆಯಲ್ಲಿ, ಅಬ್ರಾಮನು ಹೆದರದೆ, ಧೈರ್ಯದಿಂದ ಇರುವುದಕ್ಕೆ ಸಹಾಯ ಮಾಡುವಂತಹ ಯಾವುದಾದರೂ ವಾಗ್ದಾನವು ದೇವರಿಂದ ಅವನಿಗೆ ಕೊಡಲ್ಪಟ್ಟಿತ್ತೇ? ಅವು ಯಾವುದಾಗಿದ್ದವು? ಅಬ್ರಾಮನು ತನ್ನ ಭರವಸೆಯನ್ನು ಎಲ್ಲಿಟ್ಟನು?

5. ಅಬ್ರಾಮನ ನಿಕಟವಾಗಿದ್ದವರಲ್ಲಿ ಯಾರಾದರೂ ಇವನ ಪಾಪದಿಂದ ನೋವಿಗೊಳಗಾದರೇ? ಅಲ್ಲಿ ನೀವು ಏನು ನೋಡುವಿರಿ?

ಚರ್ಚೆಯ ಮುಖಾಂತರ ಜನರು ಈಗ ತಾನೇ ಕಂಡುಹಿಡಿದಂತಹ ಆತ್ಮೀಕ ಅವಲೋಕನಗಳ ಆಧಾರದ ಮೇರೆಗೆ, ಆತ್ಮೀಕ ಅನ್ವಯಿಸುವಿಕೆಗಳ ಶೋಧನೆಯನ್ನು ತೆರೆಯುವಂತಹ ಕೆಲವು ಉದಾಹರಣೆಗಳ ಪ್ರಶ್ನೆಗಳನ್ನು ಕೆಳಗೆ ನೋಡಿರಿ.

1. ದೇವರು ಅಬ್ರಾಮನಿಗೆ ಆಶೀರ್ವದಿಸುವುದಕ್ಕಾಗಿ ಒಂದು ಸ್ಥಳದಲ್ಲಿ ಸಲಹೆಗಳನ್ನು ಕೊಟ್ಟನು. ನಾವು ಒಟ್ಟಾಗಿ ಇನ್ಯಾವುದೇ ಕಥೆಗಳ ಕಡೆಗೆ ನೋಡುವುದಾದರೆ, ನಾವು ಆಶೀರ್ವದಿಸಲ್ಪಡುವುದಕ್ಕಾಗಿ ನಾವು ಎಲ್ಲಿ ವಾಸಿಸಬೇಕೆಂಬುದರ ಕುರಿತಾಗಿ ದೇವರಿಂದ ಯಾವುದೇ ಮಾಹಿತಿಗಳನ್ನು ಹೊಂದಿರುವುದೇ? ಇಲ್ಲದಿರಬಹುದು. ಆದರೆ ನಾವು ಆಶೀರ್ವದಿಸಲ್ಪಟ್ಟವರಾಗಿ ಹೇಗೆ ಜೀವಿಸಬೇಕೆಂದು ದೇವರು ಬಯಸುವ ಒಂದು ತತ್ವವನ್ನು ನಾವು ಕಂಡುಹಿಡಿಯಲು ಸಾಧ್ಯವೇ? ಅಂದರೆ?

2. ಈದಿನ, ನೀವಾಗಲಿ ಅಥವಾ ನಿಮಗೆ ತಿಳಿದಿರುವಂತರ ಇನ್ನಿತರರು ಜೀವದ ಬೆದರಿಕೆಯಂತಹ ಪರಿಸ್ಥಿತಿಯನ್ನು ಎದುರಿಸಿರುವರೇ? ಇಂತಹ ಪರಿಸ್ಥಿತಿಗಳಲ್ಲಿ ಅಬ್ರಾಮನ ಆಯ್ಕೆಗಳು ಹೇಗೆ ಸಹಾಯವನ್ನು ಕೊಡುಬಹುದಾಗಿತ್ತು?

3. ನಾವು ನಂಬಿಕೆಯಲ್ಲಿ ಕುಂದಿದಾಗ, ದೇವರ ಹೊರತು ಇನ್ನಾರ ಬಳಿಗೆ ನಾವು ಸಹಾಯಕ್ಕಾಗಿ ಅಪೇಕ್ಷಿಸುತ್ತೇವೆ?

4. ನಮ್ಮ ಜೀವಿತದಲ್ಲಿ ನಂಬಿಗಸ್ತರಾಗಿದ್ದ ದೇವರ ಸ್ಥಳವನ್ನು ಬಿಟ್ಟು ಹೋಗುವಂತಹ ಶೋಧನೆಯನ್ನು ತರುವಂಥ ಎಂತಹ ಸಂದರ್ಭಗಳು ಸಂಭವಿಸಬಹುದಾಗಿದೆ?

5. ನಮ್ಮ ಜೀವಿತಗಳಲ್ಲಿ ಕಠಿಣ ಸಂದರ್ಭಗಳು ಬಂದಾಗ, ನಾವು ಏನು ಮಾಡಬೇಕು?

6. ನಮ್ಮ ಜೀವಿತಗಳಿಗೆ ಕಷ್ಟಗಳು ಬಂದಾಗ ಎಂತಹ ಭಾವನೆಗಳು ನಮ್ಮನ್ನು ಆಳ್ವಿಕೆ ಮಾಡುವಂತೆ ನಾವು ಅನುಮತಿಸುತ್ತೇವೆ? ಒಂದು ಉದಾಹರಣೆಯನ್ನು ಕೊಡಿ. ಯಾವ ಭಾವನೆಗಳು ನಮ್ಮನ್ನು ಆಳ್ವಿಕೆ ಮಾಡಬೇಕು?

7. ನಾವು ಒಟ್ಟಾಗಿ ಕೇಳಿಸಿಕೊಂಡಂತಹ ಸತ್ಯವೇದದ ಯಾವುದೇ ಕಥೆಗಳಲ್ಲಿ, ಇಂದು ಜನರು ಭರವಸೆ ಇಡಬಹುದಾದಂತಹ ಯಾವುದಾದರೂ ವಾಗ್ದಾನಗಳನ್ನು ಮಾಡಿರುವನೇ?

ಅಬ್ರಾಮನ ನಂಬಿಕೆಯು ಕೊರತೆಯು ಅನೇಕ ಜನರಿಗೆ ಹೇಗೆ ತೊಂದರೆಯನ್ನುಂಟು ಮಾಡಿತು ಎಂಬುದನ್ನು ನೆನಪಿಸಿಕೊಳ್ಳಿ? ಇಂದು, ನಾವು ಪಾಪ ಮಾಡಿದಾಗ ಅಥವಾ ದೇವರಲ್ಲಿನ ನಂಬಿಕೆಯ ಕೊರತೆಯಲ್ಲಿರುವಾಗ, ಇದು ಬೇರೆಯವರಿಗೆ ತೊಂದರೆಯನ್ನುಂಟು ಮಾಡಬಹುದೇ? ಇದು ಯಾವ ರೀತಿ ಕಾಣಬಹುದು? ಈ ರೀತಿಯಾಗಿ ನಿಮಗಾಗಲೀ ಅಥವಾ ನಿಮಗೆ ತಿಳಿದಿರುವ ಇನ್ನಿತರರಿಗಾಗಲಿ ಸಂಭವಿಸಿದೆಯೇ?

ಈಗ, ಇವುಗಳು ಆದಿಕಾಂಡದಲ್ಲಿನ ಕಥೆಯ ಮೊದಲ ಭಾಗದಿಂದ ನೀವು ಕೇಳಬಹುದಾದಂತ ಕೆಲವು ಅವಲೋಕನಗಳ ಮತ್ತು ಅನ್ವಯಿಸುವಿಕೆಗಳ ಪ್ರಶ್ನೆಗಳಾಗಿವೆ.

ಇದನ್ನು ಗಮನಿಸಿ: ನೀವು ಕಂಡುಹಿಡಿದಿರುವ ಆತ್ಮೀಕ ನಿಧಿಗಳ ಕಡೆಗೆ ಕೇಳುಗರನ್ನು ನಡೆಸುವಂತಹ ಪ್ರಶ್ನೆಗಳನ್ನು ನೀವು ಸಿದ್ಧಮಾಡಿದ್ದರೂ ಸಹ, ನಿಮ್ಮ ಕೇಳುಗರ ಪ್ರಶ್ನೆಗಳಿಗೆ, ಅವಲೋಕನಗಳಿಗೆ ಮತ್ತು ಅನ್ವಯಿಸುವಿಕೆಗಳಿಗೆ ನೀವು ಯಾವಾಗಲೂ ಪ್ರತಿಕ್ರಿಯಿಸುವವರಾಗಿರಬೇಕು. ನೀವು ಹೇಳುತ್ತಿರುವ ಕಥೆಯ ಭಾಗದ ಕುರಿತಾಗಿ ಅವರು ಇನ್ನಿತರ ನಿಧಿಗಳನ್ನು ಕಂಡಿರಬಹುದು ಅಥವಾ ಅದರ ಕುರಿತಾಗಿ ಪ್ರಶ್ನೆಗಳಿರಬಹುದು. ನಿಮ್ಮ ಪ್ರಶ್ನೆಗಳನ್ನು ಕೇಳಿರಿ, ಆದರೆ ಕೇಳುಗರಿಗೆ ನೇರವಾಗಿ ಮಾತನಾಡುವಂತೆ ಪವಿತ್ರಾತ್ಮನು ತನ್ನ ಚಿತ್ತದಂತೆ ನಡೆಸುವುದಕ್ಕೆ ಅನುಮತಿಯನ್ನು ಕೇಳಿಕೊಳ್ಳಿರಿ (ಪ್ರಾರ್ಥಿಸಿರಿ).

ಕಥೆಗಾಗಿ ಒಂದು ಪರಿಚಯವನ್ನು (ಇಂಟ್ರೋಡಕ್ಷನ್) (ಪೀಠಿಕೆ) ರಚಿಸುವುದು ಹೇಗೆ?

ಕಥೆಯಲ್ಲಿನ ಆತ್ಮೀಕ ನಿಧಿಗಳಿಗಾಗಿ ನಿಮ್ಮ ಬೇಟೆಯನ್ನು ಮುಗಿಸಿದ ನಂತರ, ನಿಮ್ಮ ಕಥೆಗೆ ಒಂದು ಪರಿಚಯದ ಅಗತ್ಯವಿದೆಯೇ ಎಂಬುದನ್ನು ನಿರ್ಧರಿಸುವುದಕ್ಕೆ ನೀವು ಸಿದ್ಧರಾಗಿರುವಿರಿ. ಪರಿಚಯವನ್ನು ಸಿದ್ಧಪಡಿಸುವುದಕ್ಕೂ ಮುನ್ನ ನಾವು ಈ ಸಮಯ ತನಕ ಕಾಯುತ್ತೇವೆ. ನಾವು ಕಾಯುವುದು ಏಕೆಂದರೆ, ನಾವು ಕಥೆಯನ್ನು ಓದಿ ಮುಗಿಸುವ ತನಕ ಪರಿಚಯಕ್ಕೆ ಏನೆಲ್ಲಾ ಸೇರಿಸುವ ಅಗತ್ಯವಿದೆಯೋ ಅದೆಲ್ಲವನ್ನು ಇನ್ನೂ ತಿಳಿದುಕೊಂಡಿರುವುದಿಲ್ಲ.

ಕೇಳುಗರು ಕೇಳಲಿರುವಂತಹ ಕಥೆಗಾಗಿ ಸನ್ನಿವೇಶವನ್ನು ಮತ್ತು ಹಿನ್ನೆಲೆಯನ್ನು ಪರಿಚಯವು ಒದಗಿಸುತ್ತದೆ. ಇದು ಕೇಳುಗರು ಕಥೆಯನ್ನು ಸ್ವೀಕರಿಸುವಂತೆ ಮತ್ತು ವಾಕ್ಯಗಳಲ್ಲಿ ಮೊದಲೇ ಏನು ಬಂದಿದೆಯೋ ಅದನ್ನು ಅದರ ಸಂದರ್ಭದೊಳಗೆ ಅರ್ಥಮಾಡಿಕೊಳ್ಳುವಂತೆ ಅವರನ್ನು ಸಿದ್ಧಪಡಿಸುತ್ತದೆ.

ಪರಿಚಯದೊಳಗೆ (ಪೀಠಿಕೆ) ಏನು ಇರುತ್ತದೆ?

1. ಒಂದು ವೇಳೆ ನೀವು ಪರಿಚಯವನ್ನು ಮಾಡುವಂತಹುದನ್ನು ಉಪಯೋಗಿಸುವುದಾದರೆ, ಇದು ಕೇವಲ ಕೆಲವು ಮಾತುಗಳಲ್ಲಿ ಅಥವಾ ಪದಗಳಲ್ಲಿ ಮಾತ್ರ ಇರಬೇಕು. ಸ್ವಾಭಾವಿಕವಾಗಿ ಪರಿಚಯವೆನ್ನುವುದು ಕಥೆಗಿಂತಲೂ ಹೆಚ್ಚಾಗಿ ವಾಸ್ತವಿಕ ಘಟನೆಯ ಶೈಲಿಯಾಗಿರುತ್ತದೆ, ಹಾಗಾಗಿ ಕೇಳಿಸಿಕೊಳ್ಳುವವರ ಆಸಕ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಪರಿಚಯವನ್ನು ಚುಟುಕಾಗಿ ಹೇಳಿರಿ. ನೀವು ಪರಿಚಯವನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ಇಲ್ಲಿ ಮೂರು ಅಂಶಗಳಿವೆ.
   ಅ) ಕಥೆಯನ್ನು ಒಂದು ಸಮಯದಲ್ಲಿ ಅಥವಾ ಪರಿಸ್ಥಿತಿಯ ಸಂದರ್ಭಕ್ಕನುಗುಣವಾಗಿ ಹೇಳಬೇಕಾಗಿರುವುದಾದರೆ ಕಥೆಯ ನಿಲುವನ್ನು ತೋರ್ಪಡಿಸಲು ಒಂದು ಪರಿಚಯವನ್ನು ಉಪಯೋಗಿಸಿ. ನೀವು ಆರಿಸಿಕೊಂಡಿರುವ ಕಥೆಯನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ನಿಮ್ಮ ಪರಿಚಯವು ಮುಖ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

   ಆ) ಕೆಲವೊಮ್ಮೆ ಒಂದು ಕಥೆಯು ಕೇಳಿಸಿಕೊಳ್ಳುವವರಿಗೆ ಹೊಸದಾಗಿರುವ ಅಥವಾ ಗಲಿಬಿಲಿಯನ್ನು ತರುವಂತಹ ಅಂಶಗಳನ್ನು ಒಳಗೊಂಡಿರುತ್ತದೆ. ಅಂತಹ ಅಂಶಗಳನ್ನು ನೀವು ಕಥೆಯ ಪ್ರಾರಂಭಕ್ಕೂ ಮುನ್ನ ಪರಿಚಯದ ಸಮಯದಲ್ಲಿ ಹೇಳಬಹುದಾಗಿದೆ. ವಿವರಣೆಯ ಅಗತ್ಯವಿರುವಂಥ ಪದಗಳು ಅಥವಾ

ಮಾತುಗಳು ಈ ರೀತಿಯಾಗಿರಬಹುದು, "ಸಭಾಮಂದಿರ", "ಮನುಷ್ಯ ಪುತ್ರನೇ", ಅಥವಾ "ಪ್ರವಾದಿಯ ಪುತ್ರರು".

ಇ) ಪ್ರಶ್ನಾವಳಿಯ ಹಂತದಲ್ಲಿ ಕೇಳಿಸಿಕೊಳ್ಳುವವರು ಹಳೇ ಒಡಂಬಡಿಕೆಯ ಮಾಹಿತಿಯ ತುಣುಕನ್ನು ತಿಳಿದುಕೊಳ್ಳುವುದರ ಮೇಲಿನ ಆಧಾರದಿಂದ ಕಥೆಯಲ್ಲಿನ ನಿಧಿಯನ್ನು ಕಂಡುಹಿಡಿಯಬೇಕೆಂದು ನೀವು ಬಯಸಬಹುದು. ಉದಾಹರಣೆಗೆ, ಒಂದು ವೇಳೆ ನೀವು ಯೋಹಾನ ಒಂದನೇ ಅಧ್ಯಾಯದಲ್ಲಿ, ಯೋಹಾನನು, "ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವನು" ಎಂದು ಹೇಳುವ ಕಥೆಯನ್ನು ಹೇಳುತ್ತಿರಬಹುದು. ಆಗ, ನೀವು ಸತ್ಯವೇದದಲ್ಲಿ ಅನೇಕ ಬಾರಿ ದೇವರು ತನ್ನ ಹಿಂಬಾಲಕರು ಒಂದು ಪಾಪವನ್ನು ಮಾಡಿದಾಗ ಅವರು ಒಂದು ಕುರಿಮರಿಯನ್ನು ಯಜ್ಞಕ್ಕಾಗಿ ತರಬೇಕೆಂದು ಹೇಳುತ್ತಿದ್ದನು ಎಂದು ಪರಿಚಯದಲ್ಲಿ ಹೇಳಬಹುದಾಗಿದೆ.

2. ನಿಮ್ಮ ಕಥೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅಥವಾ ಕಥೆಯ ಕುರಿತಾಗಿ ಕೇಳುವ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವ ಸಲುವಾಗಿ ಕೇಳಿಸಿಕೊಳ್ಳುವವರು ಏನೆಲ್ಲಾ ಮಾಹಿತಿಯನ್ನು ತಿಳಿದುಕೊಳ್ಳಬೇಕೆಂದು ನೀವು ಬಯಸುವಿರೋ, ಆ ಭಾಗವನ್ನೂ ಸಹ ನಿಮ್ಮ ಪರಿಚಯದಲ್ಲಿ ಸೇರಿಸಿಕೊಳ್ಳಬೇಕು.

3. ಕೆಲವೊಮ್ಮೆ ಯಾವ ಪರಿಚಯದ ಅಗತ್ಯವೂ ಇರುವುದಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಂಡಿರಿ.

4. *ಕಥೆ* ಮಾತ್ರದಲ್ಲಿ ನಾವು ಸತ್ಯವೇದದಲ್ಲಿ ಕಂಡುಬರುವ ಮಾಹಿತಿಯನ್ನು ಮಾತ್ರ ಉಪಯೋಗಿಸುತ್ತೇವೆಯೇ ಹೊರತು ಇನ್ನಿತರ ಸತ್ಯವೇದಕ್ಕನುಗುಣವಾದ ಮಾಹಿತಿಯನ್ನಾಗಲೀ ಅಥವಾ ಗ್ರೀಕ್/ಇಬ್ರಿಯ ಪದದ ಅರ್ಥವಿವರಣೆಯನ್ನಾಗಲೀ ಉಪಯೋಗಿಸುವುದಿಲ್ಲ, ಏಕೆಂದರೆ ಆ ರೀತಿಯ ಮಾಹಿತಿಯು ಕೆಲವರಿಗೆ ಮಾತ್ರ ಗ್ರಹಿಸುವಂತಹುದಾಗಿರುತ್ತದೆ. ವಾಕ್ಯಗಳನ್ನು ಕಥೆಯ ಮೂಲಕ ಹೇಳಬೇಕೆಂದು ನಾವು ಎಲ್ಲಾ ವಿಶ್ವಾಸಿಗಳಿಗೆ ಪ್ರೋತ್ಸಾಹಿಸುತ್ತೇವೆ ಮತ್ತು ಬಲಪಡಿಸುತ್ತೇವೆ. ಕಥೆಯನ್ನು ಉಪಯೋಗಿಸುವುದಕ್ಕೆ ಮತ್ತು **ಭ**ರವಸೆ ಇಡುವುದಕ್ಕೆ ಜನರಿಗೆ ಪ್ರೋತ್ಸಾಹದ ಅಗತ್ಯವಿದೆ.
5. ನೀವು ಸಂಗ್ರಹಿಸಿರುವ ಸತ್ಯವೇದದ ಮಾಹಿತಿಯನ್ನು ಪರಿಚಯವೆನ್ನಲಾಗುತ್ತದೆ. ನೀವು ಪರಿಚಯ ಮಾಡಿದ ನಂತರ, "ಈಗ ಹೇಳುವ ಕಥೆ" ಅಥವಾ "ಇದು ಸತ್ಯವೇದದ ಕಥೆ" ಎಂದು ಹೇಳುವುದರೊಂದಿಗೆ ನಿಮ್ಮ ಕಥೆಯ ನಿಲುವು ಸರಿಯಾಗಿದೆ ಎಂಬುದನ್ನು ಖಾತರಿ ಪಡಿಸಿಕೊಳ್ಳಿ. ಮುಂದೆ ಇಂಥಹ ಕಥೆಯನ್ನು ನಾನು ಹೇಳುತ್ತೇನೆಂದು ಹೇಳಬೇಡಿ ಅದರ ಬದಲು ಕಥೆಯೇ ಜನರ ಹೃದಯದಲ್ಲಿ ಮಾತನಾಡಲಿ.

ಅಧ್ಯಾಯ 5: ಸಿದ್ಧತೆ ಹಾಗೂ ನಿರೂಪಣೆ

ನಮ್ಮ ಕೌಶಲ್ಯಗಳನ್ನು ಪ್ರಯತ್ನಿಸೋಣ

ಮೊದಲು, ಈ ನಿದರ್ಶನದ ಕಥೆಯನ್ನು ಕಲಿಯಿರಿ.

ನೀವು ಮತ್ತೊಮ್ಮೆ ಕೌಶಲ್ಯ 1ನ್ನು ಪುನರ್‌ಪರಿಶೀಲಿಸುವುದಕ್ಕೆ ಮತ್ತು ಆ ಮಾಹಿತಿಯನ್ನು ಲೂಕನ ಸುವಾರ್ತೆಯಲ್ಲಿರುವ ಈ ಸತ್ಯವೇದದ ಕಥೆಯನ್ನು ಕಲಿಯುವುದಕ್ಕೆ ಉಪಯೋಗಿಸಲು ಬಯಸುತ್ತಿರಬಹುದು.

" ಅವರು ಸಂಚಾರ ಮಾಡುತ್ತಿರುವಾಗ ಆತನು ಒಂದಾನೊಂದು ಹಳ್ಳಿಗೆ ಬಂದನು; ಅಲ್ಲಿ ಮಾರ್ಥಳೆಂಬ ಒಬ್ಬ ಸ್ತ್ರೀಯು ಆತನನ್ನು ತನ್ನ ಮನೆಯಲ್ಲಿ ಇಳಿಸಿಕೊಂಡಳು. ಆಕೆಗೆ ಮರಿಯಳೆಂಬ ಒಬ್ಬ ತಂಗಿ ಇದ್ದಳು. ಈಕೆಯು ಸ್ವಾಮಿಯ ಪಾದಗಳ ಬಳಿಯಲ್ಲಿ ಕೂತುಕೊಂಡು ಆತನ ವಾಕ್ಯವನ್ನು ಕೇಳುತ್ತಿದ್ದಳು. ಆದರೆ ಮಾರ್ಥಳು ಬಹಳ ಸೇವೆಯ ವಿಷಯವಾಗಿ ಬೇಸತ್ತು ಆತನ ಬಳಿಗೆ ಬಂದು–ಸ್ವಾಮೀ, ನನ್ನ ತಂಗಿಯು ಸೇವೆಗೆ ನನ್ನೊಬ್ಬಳನ್ನೇ ಬಿಟ್ಟಿದ್ದಾಳೆ, ಇದಕ್ಕೆ ನಿನಗೆ ಚಿಂತೆಯಿಲ್ಲವೋ? ನನಗೆ ನೆರವಾಗಬೇಕೆಂದು ಆಕೆಗೆ ಹೇಳು ಅಂದಳು.

ಸ್ವಾಮಿಯು ಆಕೆಗೆ– ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ. ಕೆಲವು ಮಾತ್ರ ಬೇಕಾದದ್ದು, ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ; ಅದು ಆಕೆಯಿಂದ ತೆಗೆಯಲ್ಪಡುವದಿಲ್ಲ ಎಂದು ಉತ್ತರಕೊಟ್ಟನು." (ಲೂಕ ೧೦:೩೯–೪೨).

ಸಿದ್ಧತೆ: ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದು

ಆತ್ಮೀಕ ನಿಧಿಯ ಬೇಟೆ 1 – ಆತ್ಮೀಕ ಅವಲೋಕನಗಳನ್ನು ಕಂಡುಹಿಡಿಯುವುದು

ಕಥೆಯನ್ನು ಕಲಿತುಕೊಳ್ಳುವುದಕ್ಕೆ ಕಳೆದ ಸಮಯದಲ್ಲಿ, ನೀವು ಕೆಲವು ಬೆಲೆಯುಳ್ಳ ನಿಧಿಗಳನ್ನು ಕಂಡಿರಬಹುದು. ನೀವು ಕಥೆಯನ್ನು ಪುನಃ ನಿಧಾನವಾಗಿ ನೋಡುವುದಾದರೆ, ಅಂದರೆ ಒಂದು ಸಮಯದಲ್ಲಿ ಒಂದು ಭಾಗದಂತೆ ನೋಡಿದರೆ ಮತ್ತು ಬುದ್ಧಿವಂತ ಸಮಾಲೋಚಕನ ಪ್ರಶ್ನೆಗಳನ್ನು ಉಪಯೋಗಿಸಿದರೆ, ನೀವು ಇನ್ನೂ ಅಧಿಕವಾದ ನಿಧಿಗಳನ್ನು ಕಂಡುಹಿಡಿಯುವಿರಿ.

ಬುದ್ಧಿವಂತ ಸಮಾಲೋಚಕನ ಪ್ರತಿಯೊಂದು ಪ್ರಶ್ನೆಯನ್ನೂ ಪ್ರಯತ್ನಿಸಿ: ಕಥೆಯಲ್ಲಿನ ಸನ್ನಿವೇಶವೇನು, ಕಥೆ ಹಿಂದಿನ ಭಾಗದಲ್ಲಿ ಏನು ನಡೆದಿದೆ (ಆತ್ಮಿಕವಾಗಿ ಅಥವ ಹಿಂದಿನ ಚರಿತ್ರೆ) ಎಂಬುದಾಗಿ ನೋಡಿರಿ ಇದರಿಂದ ಕಥೆಯನ್ನು ನಾವು ಚನ್ನಾಗಿ ಅರ್ಥಮಾಡಿಕೋಳ್ಳಬಹುದು. ಕಥೆಯಲ್ಲಿನ ಜನರು ಏನು ಮಾಡುತಿದ್ದಾರೆ ಅಥವ ಏನು ಮಾತನಾಡುತಿದ್ದಾರೆ ಇದರಿಂದ ನಾವು ಆತ್ಮೀಕ ವಾಗಿ ಏನನ್ನು ಕಲಿಯಬಹುದು. ಜನರು ಹೇಳಿದಂತವುಗಳಿಂದ ಮತ್ತು ಮಾಡಿದಂತವುಗಳಿಂದ, ಹಾಗೂ ಅವರು ಮಾಡಿದ ಆಯ್ಕೆಗಳಿಂದ ಮತ್ತು ಮಾಡಬಹುದಾಗಿದ್ದ

ಆಯ್ಕೆಗಳಿಂದ ನಾನು ಆತ್ಮೀಕವಾಗಿ ಏನು ಕಲಿತುಕೊಳ್ಳಬಹುದು? ಆ ಆಯ್ಕೆಯಿಂದ ಯಾವುದಾದರೂ ಫಲಿತಾಂಶಗಳು ಉಂಟಾದವೋ ಮತ್ತು ಯಾರಿಗೆಲ್ಲಾ ಪರಿಣಾಮವನ್ನುಂಟು ಮಾಡಿತು? ಸಮಾಲೋಚಕನು ಉಪಯೋಗಿಸಿದ ಸಾಧನಗಳನ್ನು ಉಪಯೋಗಿಸಿ, ಅಂದರೆ ಆತನ ಅನೇಕ ಪ್ರಶ್ನೆಗಳು. ಹಾಗೂ ಸಮಾಲೋಚಕನು ಕೇಳಿದ್ದು ಮಾತ್ರವಲ್ಲದೆ, ನಾವು ಕೂಡ ಕೇಳುತ್ತೇವೆ, ಈ ಪರಿಸ್ಥಿತಿಯಲ್ಲಿ ಮತ್ತು ಜನರ ಜೀವಿತಗಳಲ್ಲಿ ದೇವರ ಕಾರ್ಯವನ್ನು ನಾವು ಎಲ್ಲಿ ನೋಡುತ್ತೇವೆ?

ಈ ಎಲ್ಲಾ ಪ್ರಶ್ನೆಗಳು ಕೆಳಗಿನವುಗಳಂತೆ ಆತ್ಮೀಕ ಅವಲೋಕನಗಳನ್ನು ಕಂಡುಹಿಡಿಯುವುದಕ್ಕೆ ಸಹಾಯವನ್ನು ಮಾಡುತ್ತವೆ:

1. ಮಾರ್ಥಳು ತಾನೊಬ್ಬಳೇ ಎಲ್ಲಾ ಅತಿಥಿ ಸತ್ಕಾರವನ್ನು ಮಾಡುವುದಕ್ಕೆ ಅಸಮರ್ಥಳು ಎಂದು ಅರಿತಾಗ, ಆಕೆ ಕೆಲವು ನಕಾರವಾದ ನಿರ್ಧಾರಗಳನ್ನು ಮಾಡುತ್ತಾಳೆ. ಆಕೆ ಆಮಂತ್ರಣವನ್ನು ಕೊಟ್ಟಿದ್ದರೂ ಸಹ, ತನ್ನ ವಾಗ್ದಾನಕ್ಕೆ ಬೇರೆಯವರನ್ನು ದೂರುತ್ತಾಳೆ. ಯೇಸು ಕಾಳಜಿ ತೋರಿಸದಿರುವುದಕ್ಕೆ ಆಕೆ ಆತನನ್ನು ದೂರುತ್ತಾಳೆ. ಆಕೆ ಜೋರಾಗಿ ಯೇಸುವಿಗೆ ಮಾತನಾಡುತ್ತಾಳೆ. ಯೇಸುವಿನ ಬಳಿ ಸಹಾಯವನ್ನು ಕೇಳುವುದಕ್ಕೆ ಆಕೆ ಸೋತುಹೋಗುತ್ತಾಳೆ.
2. ಮಾರ್ಥಳು ಯೇಸುವನ್ನು "ಸ್ವಾಮಿ" ಎಂದು ಸಂಬೋಧಿಸಿದಳು, ಆದರೆ ತಾನೇ ಎಲ್ಲವನ್ನು ನಿಯಂತ್ರಿಸುವವಳು ಎಂಬಂತೆ ವರ್ತಿಸುತ್ತಾಳೆ.
3. ಮಾರ್ಥಳ ಅಗೌರವಕ್ಕೆ ಯೇಸು ನಕಾರಾತ್ಮಕವಾಗಿ ಪ್ರತಿಕ್ರಿಯಿಸಲಿಲ್ಲ.
4. ಯೇಸು ಮಾರ್ಥಳನ್ನು ಪ್ರೀತಿಯಿಂದ ತಿದ್ದುತ್ತಾನೆ.
5. ಮಾರ್ಥಳು ತಾನು ಏನು ಮಾಡುತ್ತಿರುವಳೋ ಅದೇ ಅಗತ್ಯವಾದುದು ಎಂದು ಭಾವಿಸಿದಳು, ಆದರೆ ಮರಿಯಳು ಅಗತ್ಯವಾಗಿರುವಂತಹುದನ್ನೇ ಆಯ್ಕೆ ಮಾಡಿರುವಳು ಎಂದು ಯೇಸು ಹೇಳಿದನು.
6. ಮಾರ್ಥಳಿಗೆ ಒಂದು ಆಯ್ಕೆ ಇತ್ತು.
7. ಮರಿಯಳು ತನ್ನ ಸಂಪ್ರದಾಯಕ್ಕೆ ಹಾಗೂ ತನ್ನ ಕುರಿತಾಗಿ ಜನರ ಅಪೇಕ್ಷೆಗೆ ವಿರುದ್ಧವಾಗಿ ಯೇಸುವನ್ನೇ ಆರಿಸಿಕೊಂಡಳು.
8. ಮರಿಯಳು ಆಯ್ಕೆ ಮಾಡಿಕೊಂಡಿದ್ದನ್ನು ಯೇಸು ಎಂದಿಗೂ ತೆಗೆದುಹಾಕಲಿಲ್ಲ.

ಆತ್ಮೀಕ ನಿಧಿಯ ಬೇಟೆ 2 – ಆತ್ಮೀಕ ಅನ್ವಯಿಸುವಿಕೆಗಳನ್ನು ಕಂಡುಹಿಡಿಯುವುದು

ಈಗ, ನಾವು ಪಟ್ಟಿ ಮಾಡಿರುವ ಮತ್ತು ನೀವು ಈಗ ತಾನೇ ಕಂಡುಹಿಡಿದಿರುವ ಕೆಲವು ಆತ್ಮೀಕ ಅವಲೋಕನಗಳ ಆಧಾರದ ಮೇರೆಗೆ, ಪುನಃ ಕಥೆಯ ಕಡೆಗೆ ಹೋಗಿ, ಕೆಲವು ಆತ್ಮೀಕ ಅನ್ವಯಿಸುವಿಕೆಗಳ ನಿಧಿಗಳಿಗಾಗಿ ಹುಡುಕಿ.

ಮೊದಲು, ನೀವು ಕಂಡಿಹಿಡಿದಿರುವ ಒಂದು ಆತ್ಮೀಕ ಅವಲೋಕನವನ್ನು ನೆನಪಿಸಿಕೊಳ್ಳಿ, ಮತ್ತು ನಂತರ ನೀವು ಕೆಲವು ಮುಖ್ಯವಾದ ಪ್ರಶ್ನೆಗಳನ್ನು ಕೇಳಿ, ಅವು ಈ ರೀತಿ: ಇಂದು ಅಂತಹ ಸಂಗತಿಯು ಸಂಭವಿಸುತ್ತದೆಯೇ? ಇದು ಯಾವ ರೀತಿಯಲ್ಲಿ ಸಂಭವಿಸಬಹುದಾಗಿದೆ? ಇದು ಎಂದಾದರೂ ನನಗೆ ಅಥವಾ ನನಗೆ ತಿಳಿದಿರುವ ವ್ಯಕ್ತಿಗಳಿಗೆ ಸಂಭವಿಸಿದೆಯೇ? ಮತ್ತು, ಒಂದು ವೇಳೆ ಇದು ಎಂದಾದರೂ ನನಗೆ ಸಂಭವಿಸಿದರೆ, ನನಗೆ ಸಹಾಯ ಮಾಡುವಂತಹ ಯಾವ ಸಂಗತಿಯನ್ನು ನಾನು ಕಥೆಯಲ್ಲಿ ನೋಡುತ್ತೇನೆ?

ಈ ಪ್ರಶ್ನೆಗಳು ನೀವು ಕಂಡುಹಿಡಿಯುವಂತೆ ಮಾಡಬಹುದಾದ ಕೆಲವು ಆತ್ಮೀಕ ಅನ್ವಯಿಸುವಿಕೆಗಳು ಇಲ್ಲಿವೆ:

1. ದೇವರ ವಾಕ್ಯದಿಂದ ನೀವು ಕಲಿತುಕೊಳ್ಳಬೇಕಾಗಿರುವ ಪ್ರಾಮುಖ್ಯವಾದ ಸಮಯವನ್ನು ಕಳೆದುಕೊಳ್ಳುವಂತಹ ಅತಿ ಹೆಚ್ಚಿನ ಕೆಲಸವನ್ನು ಆಯ್ಕೆ ಮಾಡಿಕೊಳ್ಳಬೇಡದಂತೆ ಏಚ್ಚರ ವಹಿಸಿ.

2. ನಮ್ಮ ಜೀವಿತಗಳಲ್ಲಿ ಒಂದು ಸಮಸ್ಯೆ ಇರುವಾಗ, ದೇವರಿಗೆ "ನಿನಗೆ ಚಿಂತೆಯಿಲ್ಲವೇ?" ಎಂದು ಕೇಳುವುದು ಎಷ್ಟು ದುಃಖಕರವಾದ ಸಂಗತಿಯಾಗಿದೆ. ಸಹಾಯಕ್ಕಾಗಿ ಕೇಳಿಕೊಳ್ಳುವುದು ಒಳ್ಳೆಯದು, ಆದರೆ ಚಿಂತೆಯಿಲ್ಲವೆಂದು ದೇವರನ್ನು ದೂರುವುದು ಆತನ ಹೃದಯವನ್ನು ಮುರಿಯುತ್ತದೆ.

3. ನಮಗೆ ನೆರವೇರಿಸಲು ಅಸಾಧ್ಯವಾದಂತವುಗಳನ್ನು ತೆಗೆದುಕೊಳ್ಳುವಂತಹ ಆಯ್ಕೆಯನ್ನು ನಾವು ಮಾಡಿದಾಗ, ನಮ್ಮ ಈ ಕಾರ್ಯಕ್ಕೆ ದೇವರು ಚಿಂತಿಸುವುದಿಲ್ಲ ಎಂದು ಆತನನ್ನು ದೂರುವುದು ಎಷ್ಟು ಮೂರ್ಖತನವಾಗಿದೆ!

4. ನಮ್ಮ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕೆಂದು ನಾವು ದೇವರಿಗೆ ಹೇಳಿಕೊಡಬೇಕೇ?

5. ನಮ್ಮಿಂದ ಮುಗಿಸಲು ಸಾಧ್ಯವಾಗದಂತಹ ಕೆಲಸವನ್ನು ನಾವು ತೆಗೆದುಕೊಂಡ ನಂತರ, ಅಥವಾ ದೇವರು ಮಾರ್ಗದರ್ಶಿಸದ ಕೆಲಸವನ್ನು ದೇವರಿಗಾಗಿ ಮಾಡುತ್ತಿರುವುದಾದರೆ, ಇದಕ್ಕಾಗಿ ದೇವರ ವಾಕ್ಯದಿಂದ ಕಲಿತುಕೊಳ್ಳುವುದಕ್ಕೆ ಸಮಯವನ್ನು ಕಳೆಯುವ ಬೇರೆಯವರನ್ನು ನಮ್ಮ ಸಹಾಯಕ್ಕಾಗಿ ಎಳೆದುಕೊಳ್ಳುವುದು ಸರಿಯೋ?

6. ಒಂದು ಸಂಗತಿಯು ನಾವಂದುಕೊಂಡ ಹಾಗೆ ನಡೆಯದಿರುವಾಗ ಅನೇಕ ಬಾರಿ ನಾವು ದೇವರ ಪ್ರೀತಿಯ ಕುರಿತು ಪ್ರಶ್ನೆ ಮಾಡುತ್ತೇವೆ.

7. ನಾವು ದೇವರನ್ನು ಅಗೌರವದಿಂದ ನೋಡಿದರೂ ಸಹ, ಆತನು ನಮ್ಮೊಂದಿಗೆ ಕನಿಕರದಿಂದ ಮಾತನಾಡುತ್ತಾನೆ. ನಮ್ಮ ತಪ್ಪುಗಳನ್ನು ನಮಗೆ ತಿಳಿಸುವಾಗ ಯೇಸು ತಾಳ್ಮೆಯುಳ್ಳವನು ಮತ್ತು ದೀರ್ಘಶಾಂತನೂ ಆಗಿರುತ್ತಾನೆ.

8. ಯೇಸು ಮಾರ್ಥಳನ್ನು ಆಕೆಯ ಹೆಸರಿಡಿದು ಕರೆದುದರ ನಿಮಿತ್ತ ಆಕೆಯ ಕುರಿತಾಗಿ ಯೇಸುವಿಗೆ ಇದ್ದ ಪ್ರಾಮಾಣಿಕವಾದ ಕಾಳಜಿ ಮತ್ತು ವೈಯಕ್ತಿಕ ಸಂಬಂಧವನ್ನು ಇದು ತೋರ್ಪಡಿಸುತ್ತದೆ, ಹಾಗಾಗಿ ದೇವರು ನಮ್ಮ ಹೆಸರಿನಿಂದ ನಮ್ಮನ್ನು ತಿಳಿದವನಾಗಿರುವನು ಮತ್ತು ನಮ್ಮೊಂದಿಗೆ ವೈಯಕ್ತಿಕವಾಗಿ ಮಾತನಾಡುತ್ತಾನೆ.

9. ಅಡುಗೆ ಮನೆಯಲ್ಲಿ ಕೆಲಸ ಮಾಡುವುದು, ಅಥವಾ ಸತ್ಕಾರ ಮಾಡುವುದು, ಅಥವಾ ಇನ್ನಿತರ ಸೇವೆಯ ಕಾರ್ಯವನ್ನು ಮಾಡುವುದಕ್ಕೆ ಕಳೆಯುವ ಸಮಯವು ವ್ಯರ್ಥವೆಂದು ಹೇಳುತ್ತಿಲ್ಲ, ಆದರೆ ದೇವರು ತನ್ನ ವಾಕ್ಯದ ಮೂಲಕ ನಮ್ಮೊಂದಿಗೆ ಮಾತನಾಡುವುದನ್ನು ನಮ್ಮ ಕೆಲಸಗಳು ತಡೆಯುತ್ತಿದ್ದರೆ, ನಾವು ಒಳ್ಳೆಯ ಸಂಗತಿಯನ್ನು ಆರಿಸಿಕೊಂಡಿಲ್ಲ.

10. ಮಾರ್ಥಳ ನಡವಳಿಕೆಯ ಕುರಿತಾಗಿ ಯೇಸುವಿನ ಕೊನೆಯ ಹೇಳಿಕೆಯಲ್ಲಿ, ಮರಿಯಳು ಅಗತ್ಯವಾಗಿರುವಂತಹ ಒಂದು ಸಂಗತಿಯನ್ನು ಆರಿಸಿಕೊಂಡಿದ್ದಾಳೆ ಎಂದು ಹೇಳಿದನು. ಸ್ಪಷ್ಟವಾಗಿ ಹೇಳುವುದಾರೆ, ಮರಿಯಳು ಏನು ಮಾಡುತ್ತಿದ್ದಳೋ ಅದನ್ನು ಬಿಟ್ಟುಬಂದು ತನಗೆ ಸಹಾಯ ಮಾಡಬೇಕೆಂದು ಮಾರ್ಥಳು ಬಯಸುತ್ತಿದ್ದ ರೀತಿಯಿಂದ, ಆಕೆ ತಾನು ಏನು ಮಾಡುತ್ತಿದ್ದಳೋ ಅದೇ ಅಗತ್ಯವಾದುದೆಂದು ಆಕೆ ಅಂದುಕೊಂಡಿದ್ದಳು. ಕೆಲವೊಮ್ಮೆ ದೇವರು ಯಾವುದನ್ನು ನಾವು ಮಾಡುವ ಅಗತ್ಯವಲ್ಲವೆಂದು ಆಲೋಚಿಸುತ್ತಾನೋ ಅದನ್ನೇ ನಾವು ಮಾಡುತ್ತಾ ಅದೇ ಅತಿಮುಖ್ಯವಾದ ಸಂಗತಿಯೆಂದು ನಿರ್ಧರಿಸುತ್ತೇವೆ.

11. ಕೆಲವೊಮ್ಮೆ ನಾವು ಪರಿಸ್ಥಿತಿಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುತ್ತೇವೆ ಮತ್ತು ನಾವೇನು ಮಾಡಬೇಕೆಂದು ದೇವರು ಬಯಸುತ್ತಾನೆ ಎಂದು ಕೇಳಲು ನಾವು ನಿಲ್ಲುವುದಿಲ್ಲ. ಯಾವುದು ಅತಿ ಮುಖ್ಯವಾದುದು ಮತ್ತು ಅಗತ್ಯವಾಗಿರುವಂತಹುದು ಎಂದು ನಾವೇ ನಿರ್ಧರಿಸುತ್ತೇವೆ, ಹಾಗೂ ಬೇರೆಯವರನ್ನು ದೇವರು ಯಾವುದಕ್ಕಾಗಿ ಕರೆದಿರುವನೋ ಅದನ್ನು ಮಾಡದಂತೆ ಅವರನ್ನೂ ಸಹ ನಾವು ಎಳೆದುಕೊಳ್ಳಲು ನಿರ್ಧರಿಸಬಹುದು!

12. ಮರಿಯಳು ಯಾವುದನ್ನು ಆರಿಸಿಕೊಂಡಿರುವಳೋ ಅದು ಒಳ್ಳೆಯದು ಮತ್ತು ಅದನ್ನು ಅವಳಿಂದ ತೆಗೆದುಹಾಕಲ್ಪಡುವುದಿಲ್ಲ ಎಂದು ಯೇಸು ಹೇಳಿದನು. ಈ ಮಾತಿನ ಅರ್ಥ, ಮಾರ್ಥಳು ಏನನ್ನು ಮಾಡುತ್ತಿದ್ದಳೋ ಅದನ್ನು ತೆಗೆದುಹಾಕಬಹುದು ಎಂಬುದಾಗಿದೆ. ಅಂತಿಮ ನ್ಯಾಯತೀರ್ಪಿನಲ್ಲಿ, ನಮ್ಮ ಜೀವಿತಗಳಲ್ಲಿ ನಾವು ಏನನ್ನು ಮಾಡಿರುವೆವೋ ಅವುಗಳ ಕಡೆಗೆ ನೋಡುವಾಗ, ಅವುಗಳಲ್ಲಿ ನಾವು ದೇವರಿಗಾಗಿ ಮಾಡುತ್ತಿರುವೆವು ಎಂದು ನಿರ್ಧರಿಸಿದಂತಹ ಕೆಲವು ಸಂಗತಿಗಳು ಒಳ್ಳೆಯ ಸಂಗತಿಗಳಾಗಿರಲಿಲ್ಲ ಎಂಬುವುಗಳಾಗಿರಬಹುದು. ಆತನಿಂದ ಕಲಿತುಕೊಳ್ಳುವುದು ಒಳ್ಳೆಯ ಆಯ್ಕೆಯಾಗಿದೆ ಎಂದು ಈ ಕಥೆಯಲ್ಲಿ ನಮಗೆ ಯೇಸು ತಿಳಿಸುತ್ತಿರುವನು.

13. ನಾವು ಆತ್ಮೀಕ ಆಯ್ಕೆಗಳನ್ನು ಮಾಡುವಾಗ ಅನೇಕ ವೇಳೆ ನಮ್ಮ ಸಂಸ್ಕೃತಿ ಹಾಗೂ ಕುಟುಂಬದ ವಿರುದ್ಧವಾಗಿ, ಜನರು ನಮ್ಮಿಂದ ಏನನ್ನು ಅಪೇಕ್ಷಿಸುತ್ತಾರೋ ಅದರ ವಿರುದ್ಧವಾಗಿ ಆಯ್ಕೆ ಮಾಡಲೇಬೇಕಾಗಿದೆ.

    ಈಗ ನೀವಾಗಿ ನೀವೇ ಆತ್ಮೀಕ ನಿಧಿಗಳನ್ನು ಕಂಡುಹಿಡಿದಿರುವಿರಿ. ಈಗ ನೀವು ಕಥೆಯ ಪ್ರಾರಂಭಕ್ಕೆ ಪುನಃ ಹೋಗಬೇಕು ಮತ್ತು ಕೇಳುಗರು ತಮ್ಮಷ್ಟಕ್ಕೆ ತಾವು ಆ ನಿಧಿಗಳನ್ನು ಕಂಡುಕೊಳ್ಳುವಂತೆ ನಡೆಸುವಂತಹ ಪ್ರಶ್ನೆಗಳನ್ನು ನೀವು ರೂಪಿಸುವ ಸಮಯ ಇದಾಗಿದೆ. ನಾವು ಈಗ ಮುಂದೆ ಮಾಡುತ್ತಿರುವ ಕಾರ್ಯವೇನೆಂದರೆ, ನೀವು ರಚಿಸಿರುವ ಕೆಲವು ಪ್ರಶ್ನೆಗಳನ್ನು ಉಪಯೋಗಿಸುವ ಒಂದು ನಿರೂಪಣೆಯನ್ನು ನೋಡೋಣ.

ನೀವು ಒಂದು ಕಥೆಯನ್ನು ಜನರಿಗೆ ಹೇಳುವಾಗ, ನೀವು ನಿಜವಾಗಿಯೂ ಏನು ಮಾಡುವಿರಿ ಎಂಬುದನ್ನು ಪುನರ್‌ಪರಿಶೀಲನೆ ಮಾಡೋಣ...

ನಿರೂಪಣೆ ಹಂತ ಒಂದು:
ಕಥೆಯನ್ನು ಮೂರು ಬಾರಿ ಹೇಳುವುದು

ಕೇಳುಗರು ಮೂರು ಬಾರಿ ಕಥೆಯನ್ನು ಕೇಳಿಸಿಕೊಳ್ಳುವುದರಿಂದ, ಅವರಿಗೆ ಮುಂದೆ ಕೇಳಲ್ಪಡುವ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸಲು ಇದು ಅವರಿಗೆ ಸಹಾಯ ಮಾಡುತ್ತದೆ.

1. **ನೀವು ಕಥೆಯನ್ನು ಹೇಳಿ,**
2. **ಆ ಕಥೆಯನ್ನು ಒಬ್ಬರು ಪುನಃ ಹೇಳುವಂತೆ ಕೇಳಿ ಮತ್ತು**
3. **ಕಥೆಯ ಮೂಲಕ ನಡೆಸಿರಿ** (ಇದು ನೀವು ಕಥೆಯನ್ನು ಪುನಃ ಹೇಳುವಂತಹುದಾಗಿರುತ್ತದೆ, ಆದರೆ ನೀವು ಹೇಳುವಂತಹ ಸಂದರ್ಭದಲ್ಲಿ ತರಗತಿಯ ಸದಸ್ಯರು ಇದಕ್ಕೆ ಸಹಾಯ ಮಾಡುವಂತೆ ಕೇಳಿರಿ.)

ಮೊದಲ ಬಾರಿ – ನೀವು ಕಥೆಯನ್ನು ಹೇಳಿ.

ಕಥೆಯನ್ನು ನಿಮಗೆ ಸಾಧ್ಯವಾದಷ್ಟು ಮಟ್ಟಿಗೆ ನಿಖರವಾಗಿ ಮತ್ತು ಆಸಕ್ತಿಕರವಾಗಿ ಹೇಳಿ. ನೀವು ಕಥೆಯನ್ನು ಹೇಳುತ್ತಿರುವಂತೆಯೇ ಹೆಚ್ಚಾಗಿ ದೇಹದ ಚಲನೆಯನ್ನು ಮತ್ತು ಭಾವಾಭಿನಯವನ್ನು ಉಪಯೋಗಿಸಿ.

ಎರಡನೇ ಬಾರಿ – ಒಬ್ಬ ಸ್ವಯಂ ಸೇವಕರು ಕಥೆಯನ್ನು ಪುನಃ ಹೇಳುವಂತೆ ಹೇಳಿ.

ಮುಖ್ಯ ಉದ್ದೇಶ: ಒಬ್ಬರನ್ನು ಸ್ವಯಂ ಇಚ್ಛೇಯಿಂದ ಕಥೆಯನ್ನು ಪುನಃ ಹೇಳುವಂತೆ ಹೇಳುವುದರಿಂದ ಅವರು ಗುಂಪಲ್ಲಿ ಮತನಾಡಲು ಸಹಾಯವಾಗಿತ್ತದೆ. ಅನೇಕರು ಮಾತನಾಡಲು ಸಂಕೋಚ ಪಡುತ್ತಾರೆ ಈ ರೀತಿ ಗುಂಪಲ್ಲಿ ಅವರು ಮಾತನಾಡಲು ಸಹಾಯ ಮಾಡಿದಾಗ ಇದು ಸಹಾಯವಾಗುತ್ತದೆ. ನಾವು ಸ್ವಯಂ ಇಚ್ಛೇಯಿಂದ ಕಥೆಯನ್ನು ಪುನಃ ಹೇಳುವಂತೆ ಕೇಳಿದಾಗ ಎಲ್ಲರಿಗೂ ಸಮಾನವಾಗಿ ನೋಡುವಂತೆ ಆಗುತ್ತದೆ. ಇದರಿಂದ ನಾವು ಮುಂದೆ ಕೇಳುವ ಪ್ರಶ್ನೆಗಳಿಗೆ ಸಂಕೋಚಪಡದೆ ಉತ್ತರಿಸಲು ಮುಂದೆ ಬರುತ್ತಾರೆ. ಇದರಿಂದ ಎಲ್ಲರನ್ನೂ ಪ್ರೋತ್ಸಾಹಿಸುವಂತಾಗುತ್ತದೆ.

ಈ ಭಾಗದ ಎಸ್ ಟಿ ಎಸ್ ನಲ್ಲಿ ನಾವು ಪ್ರತಿಯೋಬ್ಬರು ಕಥೆಯನ್ನು ಕಲಿತುಕೋಳ್ಳಲಿ ಎಂಬುದಾಗಿ ನೋಡುವುದಿಲ್ಲ ಆದರೆ ಕಥೆಯಲ್ಲಿನ ಪ್ರತೀ ಭಾಗವು ಅವರಿಗೆ ಗೋತ್ತರಬೇಕೆಂದು ಆಸೆಪಡುತ್ತೇವೆ.

ಒಬ್ಬ ಸ್ವಯಂ ಇಚ್ಛೆಯಿಂದ ಕಥೆಯನ್ನು ಪುನಃ ಹೇಳುಲು ಎರಡು ಆಯ್ಕೆಗಳು.

ಆಯ್ಕೆ 1: ಹೇಳಿ, ನಿಮ್ಮ ಪಕ್ಕದಲ್ಲಿರುವ ವ್ಯಕ್ತಿಯ ಕಡೆಗೆ ತಿರುಗಿ, ಅವರು ಕಥೆಯನ್ನು ಪುನಃ ಹೇಳುವಂತೆ ಕೇಳಿ. ಸ್ವಯಂ ಸೇವಕರು ಕಥೆಯನ್ನು ಪುನಃ ಹೇಳುವಂತೆ ಮಾಡುವುದರಲ್ಲಿರುವ ಬಹುದೊಡ್ಡ ಲಾಭವೆಂದರೆ, ಜನರು ಜೋರಾಗಿ ಮಾತನಾಡುವಂತೆ ಇದು ಪ್ರೋತ್ಸಾಹಿಸುತ್ತದೆ. ಅನೇಕರು ಬಹಿರಂಗವಾಗಿ ಮಾತನಾಡಲು ಹಿಂಜರಿಯುತ್ತಾರೆ. ಯಾವಗಲು ಅವರಿಗೆ ತಿಳಿದಿರುವ ಸ್ನೇಹಿತರೋಂದಿಗೆ ಕೂರುತ್ತಾರೆ ಆದುದರಿಂದ ಅವರಿಗೆ

ಮೊದಲೇ ಈ ಸ್ನೇಹಿತರು ಗೊತ್ತಿರುವುದರಿಂದ ಅವರು ಸಂಕೋಚಪಡದೆ ಅವರ ಜೊತೆಗೆ ಕಥೆಯನ್ನು ಹೇಳಲು ಇಷ್ಟಪಡುತ್ತಾರೆ.

ಕ್ರೈಸ್ತ ಸಮುದಾಯದಲ್ಲಿಯೂ ಸಹ ಬಹುತೇಕ ಬೋಧನೆಯನ್ನು ಭಾಷಣದ ಹಾಗೆ ಮಾಡಲಾಗುತ್ತದೆ, ಹಾಗಾಗಿ ಜನರು ಮಾತನಾಡುವಂತೆ ಮತ್ತು ತಮ್ಮ ಆಲೋಚನೆಗಳನ್ನು ಜೋರಾಗಿ ಹೇಳುವಂತೆ ಅವರಿಗೆ ಪ್ರೋತ್ಸಾಹಿಸುವ ಅಗತ್ಯವಿದೆ. ನೀವು ಮೊದಲ ಬಾರಿಗೆ ಒಂದು ಗುಂಪಿನ ಜನರಿಗೆ ಕಥೆಯನ್ನು ಹೇಳುತ್ತಿರುವುದಾದರೆ, ಈ ಕಥೆಯನ್ನು ಪುನಃ ಹೇಳುವಂತೆ ನಿಮ್ಮ ಪಕ್ಕದವರಿಗೆ ಕೇಳುವ ಈ ಆಯ್ಕೆಯು, ಜನರು ಸಾಮಾನ್ಯವಾಗಿ ತಮಗೆ ಇಷ್ಟವಾದವರ ಪಕ್ಕದಲ್ಲಿ ಕೂರುವ ಪರಿಪಾಠವನ್ನು ಹೊಂದಿರುವುದರಿಂದ ಇದು ಸಾಮಾನ್ಯವಾಗಿ ಹೆದರಿಕೆ ಅಥವ ನಾಚಿಕೆ ಇಲ್ಲದೆಯೇ ಮಾಡುವಂತಹ ಕಾರ್ಯವಾಗಿರುತ್ತದೆ. ಅವರು ಎಷ್ಟು ಹೇಳಲು ಇಚ್ಛೆ ಪಡುತ್ತಾರೆ **ಅಷ್ಟನ್ನೇ ಚನ್ನಾಗಿ ಹೇಳಲು ಪ್ರೋತ್ಸಾಹಿಸಿ.**

ನೀವು ಕಥೆಯ ಸ್ವಲ್ಪ ಭಾಗವನ್ನು ಮರೆತಿರುವಿರಿ ಎಂದು ಭಾವಿಸುವುದಾದರೆ, ಜನರು ಒಬ್ಬರೊಂದಿಗೆ ಒಬ್ಬರು ಕಥೆಯನ್ನು ಹೇಳುವುದರಲ್ಲಿ ತೊಡಗಿರುವಾಗ, ಈ ವಿಧಾನವು ನಿಮ್ಮ ಕಥೆಯ ನಿಖರತೆಗಾಗಿ ನೀವು ಹೇಳಿರುವ ಕಥೆಯನ್ನು ಪುನಃ ಪರೀಕ್ಷಿಸಲು ಸಮಯವನ್ನು ನೀಡುತ್ತದೆ. ಅವರು ಎಷ್ಟು ಹೇಳುತ್ತಾರೆ ಅಷ್ಟನ್ನು ಸಮದಾನವಾಗಿ ನೀವು ಕೇಳಬೇಕು.

ಆಯ್ಕೆ 2: ಆಯ್ಕೆ ಒಂದನ್ನು ಪ್ರಯತ್ನಿಸಿದ ಮೇಲೆ ಇದನ್ನು ಪ್ರಯತ್ನಿಸಿ. ಅವರು ತಮಗೆ ಗೊತ್ತಿರುವವರ ಮದ್ಯೆ ಕಥೆಯನ್ನು ಹೇಳಿದರೆ ಅವರಿಗೆ ಸ್ವಲ್ಪ ಧೈರ್ಯಬರುತ್ತದೆ.

ಯಾರಾದರೂ ಖುದ್ದಾಗಿ ತಾವು ಕಥೆಯನ್ನು ಪುನಃ ಹೇಳಲು ಬಯಸುತ್ತಿರುವಿರೇ ಎಂದು ಕೇಳಿರಿ. ಇದನ್ನು ಕೇಳಿದ ಕೇಳುಗರು ನಾಚಿಕೆಯನ್ನು ತೋರ್ಪಡಿಸಿದರೆ ಮತ್ತು ನೀವು ಕೇಳಿದ್ದಕ್ಕೆ ಶೀಘ್ರವಾಗಿ ಪ್ರತಿಕ್ರಿಯಿಸದಿದ್ದರೆ, ಆಗ "ನಿಮಗೆ ಎಷ್ಟು ನೆನಪಿದೆಯೋ ಅಷ್ಟು ಮಾತ್ರ ಹೇಳಿ" ಎಂದು ತಿಳಿಸಿರಿ. ಕೊನೆಗೆ ಇದನ್ನು ಪ್ರಯತ್ನಿಸಲು ಮುಂಬರುವ ವ್ಯಕ್ತಿಗೆ ಚಪ್ಪಾಳೆಯ ಮೂಲಕ ಅಥವಾ ಇನ್ನಿತರ ರೀತಿಯಲ್ಲಿ ಪ್ರೋತ್ಸಾಹಿಸಿರಿ. ನಗೆಯನ್ನು ಬೀರಿ, ಆ ವ್ಯಕ್ತಿಗೆ, "ನೀವು ಕಥೆಯನ್ನು ಮಾತ್ರ ಹೇಳಬೇಕು, ಪರಿಚಯವನ್ನಲ್ಲ (ಪೀಠಿಕೆಯನ್ನಲ್ಲ) . ಕಥೆಯಲ್ಲಿ ಏನನ್ನಾದರೂ ಮರೆತುಹೋದರೆ ಚಿಂತಿಸಬೇಡಿ, ಏಕೆಂದರೆ ನೀವು ಒಂದು ಬಾರಿ ಮಾತ್ರ ಕೇಳಿಸಿಕೊಂಡಿರುವಿರಿ" ಎಂದು ತಿಳಿಸಿರಿ.
ಕಥೆಯು ಉದ್ದವಾಗಿದ್ದರೆ ಅಥವ (ಅನೇಕ ಬಾರಿ ಅವರನ್ನು ನೀನು ಪ್ರೋತ್ಸಾಹಿಸಿದರೂ ಅವರು ಹೇಳಲು ಮುಂದೆ ಬರದಿದ್ದರೆ ಹಾಗ ನೀವು ಒಬ್ಬರ ಹೆಸರನ್ನು ಕರೆದು ಹೇಳುವಂತೆ ತಿಳಿಸಿ) ಆದರು ಜನರು ಇದನ್ನು ಪ್ರಾರಂಭಿಸಲು ಕಷ್ಟಪಡುತ್ತಾರೆ. ಆಗ ನೀವು ಅವರಿಗೆ, "ಈ ರೀತಿ... ಹೇಳುವ ಕಥೆಯ ಭಾಗದಿಂದ ಪ್ರಾರಂಭಿಸಿ" ಎಂದು ಹೇಳಿ ಅವರು ಪ್ರಾರಂಭಿಸಲು ಸಹಾಯ ಮಾಡಬಹುದು ಮತ್ತು ನಂತರ ಕಥೆಯ ಮೊದಲ ಸಾಲನ್ನು ಪುನಃ ಹೇಳಿ.

ಎಲ್ಲರೂ ಕಥೆಯನ್ನು ಒಟ್ಟಾಗಿ ಎಷ್ಟು ಗೊತ್ತಿದೆಯೋ ಅಷ್ಟನ್ನು ಮಾತ್ರ ಹೇಳುವಂತೆ ತಿಳಿಸಿ ಆಗ ಅವರಿಗೆ ಪ್ರೋತ್ಸಾಹವಾಗುತ್ತದೆ.

(೨೫ ದೇಶಗಳಲ್ಲಿ ಸೇವೆ ಮಾಡಿದ ನನ್ನ ಅನುಭವದಲ್ಲಿ ಸ್ವಯಂ ಇಚ್ಛೆಯಿಂದ ಕಥೆಯನ್ನು ಪುನಃ ಹೇಳಲು ಮುಂದೆ ಬರುತಾರೆ ಎಂದು ಹೇಳುತೇನೆ ಜನರು ಅನಂತರ, ಕಥೆಯನ್ನು ಚೆನ್ನಾಗಿ ಹೇಳಿದ್ದರೆ, ಅವರು ಎಷ್ಟು

ಚೆನ್ನಾಗಿ ಕಥೆಯನ್ನು ಹೇಳಿದರು ಮತ್ತು ಅದರಿಂದ ನೀವು ಎಷ್ಟು ಪ್ರಭಾವಿತರಾದಿರಿ ಎಂಬುದನ್ನು ತೋರ್ಪಡಿಸಿ ಹೇಳಿ).

ಕೆಲವೊಮ್ಮೆ, ಕಥೆಯನ್ನು ಪುನಃ ಹೇಳುವಂತವರು ಕಥೆಯನ್ನು ಹೆಚ್ಚಾಗಿ ನೆನಪಿನಲ್ಲಿಟ್ಟುಕೊಂಡಿರುವುದಿಲ್ಲ ಅಥವಾ ಅವರು ಕಥೆಯನ್ನು ಅಷ್ಟು ಚೆನ್ನಾಗಿ ಹೇಳುವುದಿಲ್ಲ. ಈ ರೀತಿ ಆದರೆ, ಇದನ್ನು ಕೇಳಿಸಿಕೊಳ್ಳುತ್ತಿರುವವರು ಸರಿಪಡಿಸುವಂತೆ ಅವರಿಗೆ ಹೇಳಬೇಡಿ. ಈ ರೀತಿ ಆ ವ್ಯಕ್ತಿಯ ಮುಂದೆ ಅನೇಕ ತಿದ್ದುವಿಕೆಗಳನ್ನು ಮಾಡಿದಾಗ, ಇದು ಆ ವ್ಯಕ್ತಿಗೆ ಮುಜುಗರವನ್ನು ತರಬಲ್ಲದು. ಹಾಗೂ, ಒಂದು ಕಥೆಯನ್ನು ಅನೇಕ ತಪ್ಪುಗಳಿಂದ ಹೇಳಿದಾಗ, ಕಥೆಯನ್ನು ಪುನಃ ಸರಿಯಾಗಿ ಹೇಳುವಂತೆ ಮಾಡುವುದು ಬಹಳ ಕಷ್ಟಕರವಾಗಿರುತ್ತದೆ.

ಆದಾಗ್ಯೂ, ಕಥೆಯನ್ನು ಪುನಃ ಹೇಳುವವರು ಕಥೆಯನ್ನು ಬಹಳ ಚೆನ್ನಾಗಿ ಅಥವಾ ತಪ್ಪಾಗಿ ಹೇಳಿದರೂ ಸಹ, ಅದರಲ್ಲಿ ಅವರಿಗೆ ಹೊಗಳಿಕೆಯನ್ನು ತರುವಂತಹ ಸಂಗತಿಯನ್ನು ಕಂಡುಕೊಳ್ಳಿರಿ. ನೀವು, "ನಿಮ್ಮ ಧೈರ್ಯವನ್ನು ನಾನು ಮೆಚ್ಚುತ್ತೇನೆ," "ಇದು ಬಹಳ ಉತ್ತಮವಾದ ಕೆಲಸವಾಗಿತ್ತು," "ಒಬ್ಬ ವ್ಯಕ್ತಿಯು ಕುಷ್ಠನಾಗಿದ್ದುದರ ಭಾಗವನ್ನು ನೀವು ಹೇಳಿದ ರೀತಿ ಬಹಳ ಚೆನ್ನಾಗಿ ಹೇಳಿದಿರಿ," "ಹೇಳುವ ಮಾತುಗಳನ್ನು ನೀವು ನಟನೆಯ ಮೂಲಕ ತೋರಿಸಿದ್ದನ್ನು ನಾನು ಬಹಳ ಇಷ್ಟಪಟ್ಟೆ," ಅಥವಾ ಪ್ರೋತ್ಸಾಹಿಸುವಂತಹ ಇನ್ನಿತರ ನಿರ್ಧಿಷ್ಟವಾದ ಗುರುತುಗಳಿಂದ ಅವರಿಗೆ ಹೇಳಿರಿ.

ಕಥೆಯನ್ನು ಪುನಃ ಹೇಳಿದವರು ಹೆಚ್ಚಿನ ಮಾಹಿತಿಯನ್ನು ಸೇರಿಸಿದ್ದರೆ, ಅದನ್ನೂ ಸಹ ತಿಳಿಸಬೇಕು ಆದರೆ ಅದನ್ನೂ ಸಹ ಮೃದುವಾಗಿ ಈ ರೀತಿ ಹೇಳಬೇಕು, "ನೀವು ಬಹಳ ಅತ್ಯಾಸಕ್ತಿಯುಳ್ಳವರು. ನೀವು ನಮ್ಮೊಂದಿಗೆ ಬೇರೆ ಮಾಹಿತಿಯನ್ನೂ ಸಹ ಹಂಚಿಕೊಂಡಿರಿ, ಆದರೆ ಇದು ಕಥೆಯಲ್ಲಿ ಸೇರಿಸಲ್ಪಡುವುದು ಬೇಡ ಎಂದು ನನಗನ್ನಿಸುತ್ತದೆ".

ಕಥೆಯು ಬಹಳ ದೊಡ್ಡದಾಗಿದ್ದರೆ, ನೀವು "ನಿಮ್ಮಲ್ಲಿ ಯಾರಾದರೊಬ್ಬರು ಮುಂದೆ ಬಂದು, ಕಥೆಯನ್ನು ಪ್ರಾರಂಭಿಸಿದರೆ ಸಾಕು, ನಂತರ ಬೇರೆಯವರು ಕಥೆಯನ್ನು ಮುಂದುವರೆಸುವಂತೆ ಕೇಳುತ್ತೇವೆ" ಎಂದು ಕಥೆಯನ್ನು ಹೇಳಲು ಬರುವಂತಹ ವ್ಯಕ್ತಿಗೆ ಪ್ರೋತ್ಸಾಹಿಸುವ ಇನ್ನೊಂದು ಮಾರ್ಗವಾಗಿದೆ. ನಂತರ ಒಬ್ಬ ಧೈರ್ಯಶಾಲಿಯು ಕಥೆಯನ್ನು ಪ್ರಾರಂಭಿಸಿದ ನಂತರ, ಗುಂಪಿನಲ್ಲಿರುವ ಬೇರೊಬ್ಬರು ಮುಂದೆ ಬಂದು ಅದನ್ನು ಮುಂದುವರೆಸುವಂತೆ ಹೇಳಿ, ಹೀಗೆ ಕಥೆಯು ಸಂಪೂರ್ಣವಾಗುವವರೆಗೂ ಮಾಡಬೇಕು.

ನಿರಾಕರುಣೆಯ ಪಲಿತಾಂಶ: ನಾವು ಕಥೆಗೆ ಏನನ್ನು ಸೇರಿಸಲು ಇಷ್ಟಪಡುವುದಿಲ್ಲ ಹಾಗು ಎಸ್ ಟಿ ಎಸ್ ಅದನ್ನು ಪ್ರೋತ್ಸಾಹಿಸುವುದಿಲ್ಲ. ಕೇಳಿದ ಇತರರು ಕಥೆಗೆ ಸ್ವಂತವಾಗಿ ಸೇರಿಸಲು ಇಷ್ಟಪಡುವುದಿಲ್ಲ.

ಯಾರದರು ಸ್ವಂತ್ತವಾಗಿ ಏನಾದರು ಕಥೆಗೆ ಸೇರಿಸಲು ಪ್ರಯತ್ನಿಸಿದರೆ ಅವರನ್ನು ಮುಗುಳು ನಗೆ ಮುಖನೋಡಿ ಹಾಗ ಅವರೇ ಅರ್ಥ ಮಾಡಿಕೋಳ್ಳುತ್ತಾರೆ. ಅವರು ಅರ್ಥಮಾಡಿಕೋಳ್ಳಲಿಲ್ಲವೆಂದು ನೆನಸಿರಿ ಆಗ ಅವರಿಗೆ ಸತ್ಯವೇದ ಏನು ಹೇಳುತ್ತೆ ಎಂದು ಕೇಳಿ ಪ್ರೋತ್ಸಾಹಿಸಿರಿ.

ಎಸ್ ಟಿ ಎಸ್ ನ ಈ ಭಾಗದಲ್ಲಿ ಒಬ್ಬ ಸ್ವಯಂ ಹಿಚ್ಚೆಯಿಂದ ಕಥೆ ಹೇಳಿಸುವುದೆಂದರೆ ಅವರು ಸಂಪೂರ್ಣವಾಗಿ ಕಥೆ ಕಲಿಯ ಬೇಕಾಗಿರುವ ಅವಶ್ಯಕತೆ ಇರುವುದಿಲ್ಲ ಆದರೆ ಅವರಿಗೆ ಕಥೆಯುಗೊತ್ತಾಗದಿದ್ದರೆ ಸಾಕು. ಸ್ವಯಂ ಹಿಚ್ಚೆಯಿಂದ ಕಥೆ ಹೇಳಿಸುವುದರಿಂದ ನಾವು ಕಥೆ ಕಲಿಯಲೇಬೇಕೆಂದು ಒತ್ತಾಯ ಮಾಡುವುದಿಲ್ಲ. ಸ್ವಯಂ ಹಿಚ್ಚೆಯಿಂದ ಕಥೆ ಹೇಳಿಸುವವರು ಒಂದು ಸಲ ಮಾತ್ರ ಕಥೆ ಕೇಳಿರುತ್ತಾರೆ ಆದಕಾರಣ ಅವರು ಕಥೆಯಲ್ಲಿ ಅನೇಕ ಭಾಗ ಮರೆತುಹೋಗಬಹುದು. ಅನೇಕರು ಪದೆ ಪದೆ ಕಥೆ ಹೇಳುತ್ತಿದ್ದರೆ ಅವರಿಗೆ ತಪ್ಪಿಲ್ಲದ ಸಂಪೂರ್ಣಕಥೆ ಜ್ಞಾಪನದಲ್ಲಿಟ್ಟುಕೋಳ್ಳಲು ಸಹಾಯವಾಗುತ್ತದೆ.

ಈ ಭಾಗದಲ್ಲಿ ಸ್ವಯಂ ಹಿಚ್ಚೆಯಿಂದ ಕಥೆ ಹೇಳಿಸುವವರು ನಿರುತ್ಸಾಹ ಪಡಸದೆ ಅವರಿಗೆ ಪ್ರೋತ್ಸಾಹಪಡಿಸಬೇಕು. ಕೆಲ ಧೈರ್ಯವಂತರು ಮಾತ್ರ ಮೋದಲು ಕಥೆ ಹೇಳಲು ಮುಂದೆಬರುತ್ತಾರೆ. ಗುಂಪಿನಲ್ಲಿರುವ ಇತರರು ಕಥೆ ಹೇಳುವವರನ್ನು ನೋಡುತ್ತಿರುತ್ತಾರೆ ಕಾರಣ ಅವರು ಜನರ ಮದ್ಯೆ ಮಾತನಾಡಲು ಭಯ ಅಥವ ನಾಚಿಕೆ ಪಡುತ್ತಿರುತ್ತಾರೆ.

ಒಂದೇ ಕಥೆಯನ್ನು ಪದೆ ಪದೆ ಹೇಳುತ್ತಿದ್ದರೆ ಕೇಳುವವರಲ್ಲಿ ಆಸಕ್ತಿ ಕಳೆದು ಹೋಗುತ್ತದೆ ಅಲ್ಲದೆ ಅದು ತಮಾಸೆಗೂ ಕಾರಣವಾಗುತ್ತದೆ.
ಒಬ್ಬ ಸ್ವಯಂ ಇಚ್ಚೆಯಿಂದ ಕಥೆ ಹೇಳಿಸುವುದರ ಉದ್ದೇಶ ಎಲ್ಲರು ಚರ್ಚೆಯಲ್ಲಿ ಭಾಗವಹಿಸುವ ಉದ್ದೇಶದಿಂದ ಮತ್ತು ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸಿ ಮುಂದೆ ಕಲಿಯಲು ಹೋಗುವ ಆತ್ಮೀಕ ನಿಧಿಗಳನ್ನು ಎಲ್ಲರು ಸೇರಿ ಕಂಡುಕೋಳ್ಳಲು.

ಎಸ್ ಟಿ ಎಸ್ ನ ಈ ಭಾಗದಲ್ಲಿ ಕಥೆಯನ್ನು ಕಲಿತುಕೋಳ್ಳುವ ಉದ್ದೇಶವೆಂದರೆ ಅವರು ಕಥೆಯನ್ನು ಚನ್ನಾಗಿ ಅರ್ಥಮಾಡಿಕೋಂಡು ಚರ್ಚೆಯಲ್ಲಿ ಭಾಗವಹಿಸಿ ಕಥೆಯಲ್ಲಿನ ಆಧ್ಯಾತ್ಮಿಕವಾದ ಸತ್ಯತೆಗಳನ್ನು ಕಂಡುಕೋಳ್ಳಲು ಸಹಾಯ ಮಾಡುವುದೇ ನಮ್ಮ ಉದ್ದೇಶ.

ಕಥೆಯಲ್ಲಿರುವ ಆಧ್ಯಾತ್ಮಿಕವಾದ ಸತ್ಯತೆಗಳನ್ನು ಕಂಡುಕೋಳ್ಳುವಾಗ ಕಲಿಯುವವರಿಗೆ ಕಥೆಯು ತಾನಾಗಿಯೆ ಬರುತ್ತದೆ. ಇದರ ಬಗ್ಗೆ ಅನೇಕ ಸಲಹೆಗಳನ್ನು ನಮ್ಮ ಮುಂದಿನ ಅಧ್ಯಯದಲ್ಲಿ ಬರೆಯಲ್ಪಟ್ಟಿದೆ.

ಎಸ್ ಟಿ ಎಸ್ ನ ತರಬೇತಿಯಲ್ಲಿ ಕಥೆಯನ್ನು ಕಲಿತುಕೋಳ್ಳಲು ಸುಲುಭ ರೀತಿಯಲ್ಲಿ ಕಲಿಸಿಕೋಡಲಾಗುತ್ತದೆ. ಸ್ವಯಂ ಇಚ್ಚೆಯಿಂದ ಕಥೆ ಹೇಳಿಸುವುದು ಹಾಗು ಕಥೆಯಲ್ಲಿ ನಡೆಸುವುದು ಜೊತೆ ಜೊತೆಗೆ ಬರುವುದರಿಂದ ಕಥೆ ಕಲಿಯುವವರಿಗೆ ಕಥೆಯನ್ನು ಕಲಿತುಕೋಳ್ಳಲು ಬಹಳ ಸಹಾಯವಾಗುತ್ತದೆ. ಕಥೆಯಲ್ಲಿ ನಡೆಸುವವರು ಆತ್ಮೀಕ ನಿಧಿಗಳನ್ನು ಕಂಡುಹಿಡಿಯಲು ಕೇಳುವ ಪ್ರಶ್ನೆಗಳು ಕಥೆಯ ಪ್ರತೀ ಭಾಗದಲ್ಲಿ ಇರುವುದರಿಂದ ಗುಂಪಿನ ಎಲ್ಲಾ ಸದಸ್ಯರಿಗೂ ಕಥೆಸಂಪೂರ್ಣವಾಗಿ ಜ್ಞಾಪನದಲ್ಲಿಟ್ಟುಕೋಳ್ಳಲು ಸಹಾಯವಾಗುತ್ತದೆ.

ನಾವು ಅನೇಕ ಹೋಸ ಸ್ಥಳಗಳಿಗೆ ಎಸ್ ಟಿ ಎಸ್ ನ ತರಬೇತಿಯನ್ನು ನಡೆಸಲು ಹೋಗುವಾಗ ಕಾರ್ಯಕ್ರಮದ ಮುಖ್ಯಸ್ಥರು ನಮ್ಮನು ಪಕ್ಕಕ್ಕೆ ಕರೆದು ನಮ್ಮ ಜನರು ನೀವು ಕೇಳುವ ಪ್ರಶ್ನೇಗಳಿಗೆ ಉತ್ತರ ಕೋಡುವುದಿಲ್ಲ ಆದುದರಿಂದ ಬೇಸರಗೋಳ್ಳಬೇಡಿ ಎನ್ನುತ್ತಾರೆ ಆದರೆ ಅವರಿಗೆ ನಾವು ನೋಡೋಣ ಎಂದು ಹೇಳುತ್ತೇವೆ.

ಅನೇಕ ಹೋಸ ಸ್ಥಳಗಳಲ್ಲಿ ಜನರು ನಮ್ಮ ಕಾರ್ಯಗಾರದಲ್ಲಿ ಸಂತೋಷದಿಂದ ಉತ್ತರಗಳನ್ನು ಕೊಡುತಿರುತ್ತಾರೆ (ಇದ್ದನ್ನು ನೋಡುವ ನಮ್ಮ ಸ್ಥಳೀಯ ಕಾರ್ಯಕ್ರಮದ ಮುಖ್ಯಸ್ಥರು ಅಚ್ಚರ್ಯಪಡುತ್ತಾರೆ). ನಮ್ಮ ಎಸ್ ಟಿ ಎಸ್

ಕಾರ್ಯಗಾರದಲ್ಲಿ ಜನರು ಸ್ವಲ್ಪ ಸ್ವಲ್ಪವಾಗಿ ಉತ್ತರಗಳನ್ನು ಕೋಡುತ್ತಿರುತ್ತಾರೆ, ನಾವು ಅವರನ್ನು ಮಾತಾಡುವಂತೆ ಪ್ರೋತ್ಸಾಹಿಸುತ್ತಿರುತೇವೆ.

ಕೆಲವರು ಉತ್ತರ ಕೋಡಲು ಹೆಚ್ಚು ಸಮಯ ತೆಗೆದುಕೋಳ್ಳುತ್ತಾರೆ ಆದರೆ ಕೆಲವರು ಅತಿಬೇಗ ಉತ್ತರಿಸಲು ಪ್ರಯತ್ನಿಸುತ್ತಾರೆ. ಕೆಲವರು ಹೆಚ್ಚಾಗಿ ಮಾತನಾಡುವುದಿಲ್ಲ ಕಾರಣ ಅವರು ಹಿಂದೆ ಕಲಿತಿರುವ ಸ್ಥಳದಲ್ಲಿ ಕ್ರೈಸ್ತ ಬೋದನೆಯಲ್ಲಿ ಹೇಚ್ಚಾಗಿ ಮಾತನಾಡಬಾರದು ಎಂದು ಕೇಳಿರಬಹುದು. ಅಷ್ಟೇಅಲ್ಲದೆ ನಾವು ಉತ್ತರಿಸುವಾಗ ತಪ್ಪುಗಳಾಗಬಹುದೆಂದು ಉತ್ತರ ಹೇಳಲು ಭಯ ಮತ್ತು ಸಂಕೋಚ ಪಡುತ್ತಾರೆ. ಕೆಲವರು ನಮಗೆ ಆತ್ಮೀಕವಾದ ವಿಚಾರಗಳು ಚನ್ನಾಗಿ ಗೋತ್ತಿರುವುದಿಲ್ಲವೆಂದು ಹಾಗು ನಮಗೆ ಆ ಅನುಬವ ಇರುವುದಿಲ್ಲವೆಂದು ನೆನಸಿರುತ್ತಾರೆ. ಇಂಥ ತಪ್ಪಾದ ಭಾವನೆಗಳ್ನು ಹೋಗಲಾಡಿಸಲು ನಾವು ಸಂತೋಷಿಸುತ್ತೇವೆ.

ಮಾಡದಿರುವ ಕೆಲವು ಉದಾಹರಣೆಗಳು

೭೦ ವರ್ಷದ ವಿಧ್ಯಾವಂತನು ಎಸ್ ಟಿ ಎಸ್‌ನ ಮೋದಲ ದಿನದ ತರಬೇತಿ ರುಚಿ ನೋಡಿದ ಮೇಲೆ ಹೀಗೆ ಹೇಳುತ್ತಾನೆ. ನಾವು ಚೀನಾದೇಶದ ಜನರು ನಾವು ಇದೇ ರೀತಿ ಕಲಿಯಬೇಕು ಇದೇ ರೀತಿ ಮಾತನಾಡಬೇಕೆಂದು ಕಲಿತ್ತಿದ್ದೆವು ಆದರೆ ಈ ದಿನ ನನ್ನ ಜೀವಿತದ ಬಹು ಪ್ರಮುಖ್ಯವಾದ ತರಬೇತಿ ದಿನ ಮತ್ತು ಇದು ಒಳ್ಳೆಯ ದಿನ ಕಾರಣ ನಮ್ಮಷ್ಟಕ್ಕೆ ನಾವೆ ಆತ್ಮೀಕ ನಿಧಿಗಳನ್ನು ಕಂಡುಕೋಳ್ಳಲು ಕಲಿತುಕೋಡೆವು.

ನೇಪಾಳದಲ್ಲಿ ಅನೇಕ ಅವಿಧ್ಯಾವಂತರು ಎಸ್ ಟಿ ಎಸ್‌ನ ತರಬೇತಿಯಲ್ಲಿ ಜೋರಗಿ ಉತ್ತರಕೊಡಲು ಹೆಚ್ಚಾದ ಸಮಯ ತೆಗೆದುಕೊಂಡರು. ಆದರೆ ಸ್ವಲ್ಪ ಸಮಯವಾದ ಮೇಲೆ ಅವರು ಸಮತೋಷವಾಗಿ ಗುಂಪಿನಲ್ಲಿ ಕಲಿಯಲು ಮುಂದಾದರು ಹಾಗು ಉತ್ತರ ಕೋಡಲು ಮುಗಿಬಿಳುತ್ತಿದ್ದರು. ದೇವರು ಅವಿಧ್ಯವಂತರೋಂದಿಗೆ ಮಾತನಾಡುವುದಿಲ್ಲವೆಂದು ಯಾರು ಹೇಳಿದರೋ ಗೋತ್ತಿಲ್ಲ ಆದರೆ ದೇವರು ಎಲ್ಲರಲ್ಲೀಯೂ ಮಾತನಾಡುತ್ತಾನೆ ಎಂದು ಒಬ್ಬ ನಾಯಕರು ತರಬೇತಿ ಕೂಟದಲ್ಲಿ ತಿಳಿಸಿದರು.

ಥಾಯಲಾಂಡಿನ ಥಾಯ್ ನಾಯಕರು ಎಸ್ ಟಿ ಎಸ್ ತರಬೇತಿ ಮುಗಿದ ಮೇಲೆ ಈ ರೀತಿ ಬರೆದರು: ನಮ್ಮ ತರಬೇತಿಯಲ್ಲಿ ಮಹಿಳೆಯರು ಪ್ರಾರಂಭದಲ್ಲಿ ಉತ್ತರ ಕೊಡಲೇ ಇಲ್ಲ, ಅವರು ಉತ್ತರಕೋಡಬಹುದೆಂದು ಅರಿಯಲು ಅವರಿಗೆ ಅನೇಕ ದಿನಗಳು ಬೇಕಾಯಿತು. ನಾವು ಮಾತಾಡಿದ ಪ್ರತಿ ಮಾತಿನಲ್ಲಿ ಒಂದು ಮೌಲ್ಯ ಇರಬೇಕು ಸುಮ್ ಸುಮ್ನೆ ಉತ್ತರ ಕೋಡಬಾರದೆಂದು ನೆನೆಸಿದ್ದರು. ನಾವು ಅವರನ್ನು ಮಾತನಾಡುವಂತೆ ಪ್ರೋತ್ಸಾಹಿಸಿದೆವು ಆಗ ಅವರು ಪ್ರೋತ್ಸಾಹ ಹೋಂದಿ ಅನೇಕ ಅದ್ಬುತವಾದ ಆತ್ಮೀಕ ನಿಧಿಗಳನ್ನು ಅವರು ಕಂಡುಕೋಂಡರು.

ಮೂರನೆಯ ಬಾರಿ – ಕಥೆಯ ಮೂಲಕ ನಡೆಸಿ

ಮೊದಲು ನೀವು ಕಥೆಯನ್ನು ಹೇಳಿ. ನಂತರ ಸ್ವಯಂಸೇವಕರು ಕಥೆಯನ್ನು ಪುನಃ ಹೇಳಲಿ. ಈಗ, ಮೂರನೆಯ ಬಾರಿ ಕಥೆಯನ್ನು ಹೇಳುವುದಕ್ಕೆ, ಪ್ರತಿಯೊಬ್ಬರೂ ನಿವ್ಮೊಂದಿಗೆ ಕಥೆಯನ್ನು ಹೇಳುವಂತೆ ಮಾಡಿ.

ಇದು ಆಗಾಗ್ಗೆ ಬರುವ ಸಂಕೋಚವನ್ನು ಉಪಯೋಗಿಸಿಕೊಂಡು ಕಥೆಯನ್ನು ಹೇಳುವಂತಹ ಒಂದು ಶೈಲಿಯಾಗಿದೆ. ಕಥೆ ಹೇಳುವವರಾಗಿ ನೀವು ಇದನ್ನು ಮಾಡಿದ ನಂತರ, ಕೇಳುಗರ ನೆನಪಿನ ಶಕ್ತಿಯ ಸಾಮರ್ಥ್ಯವನ್ನು

ಪರೀಕ್ಷಿಸುವಂತಹುದರ ಬದಲಾಗಿ, ಕಥೆಯ ಅಂಶಗಳನ್ನು ಜ್ಞಾಪಿಸಿಕೊಳ್ಳುವುದಕ್ಕೆ ಅವರಿಗೆ ಸಹಾಯ ಮಾಡಬೇಕು. ಕಥೆಯನ್ನು ಹೇಳುವವರಾಗಿ ನೀವು, ಬೇರೊಬ್ಬರು ಮುಂದಿನ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನು ಹೇಳುತ್ತಾರೆ ಎಂಬ ನಿರೀಕ್ಷೆಯನ್ನು ಹೊತ್ತವರಂತೆ ಕೇಳುಗರ ಕಡೆಗೆ ನೋಡಬೇಕು. ನೆನಪಿಡಿ, ಇದು ಪುನಃ ಕಥೆಯನ್ನು ಹೇಳುವಂತಹ ಒಂದು ಕಾರ್ಯವಾಗಿದೆ.
ನೀವು ಕಥೆಯನ್ನು ಹೇಳುತ್ತಿರುವವರಂತೆ ಕಥೆಯನ್ನು ಪ್ರಾರಂಭಿಸಿ, ಆದರೆ ಪ್ರತಿ ಮಾತು ಅಥವಾ ವಾಕ್ಯ ಜೋಡಣೆ (ಅಥವಾ ಒಂದು ಹೊಸ ಆಲೋಚನೆ) ಇವನ್ನು ಹೇಳದೆ, ಸಂಕೋಚಗೊಂಡಂತೆ ಹೇಳಿ. ನೀವು ಹೇಳದೆ ಬಿಟ್ಟಂತಹ ಅಂಶವನ್ನು ಕೇಳುಗರು ಹೇಳುವಂತೆ ಆಹ್ವಾನಿಸಿ.

ಉದಾಹರಣೆಗೆ: ನೀವು, ಯೇಸು ಮತ್ತು ಆತನ ಶಿಷ್ಯರು ಒಂದು ಪಟ್ಟಣಕ್ಕೆ ಬಂದರು ಮತ್ತು ಅಲ್ಲಿ ಒಬ್ಬ ಸ್ತ್ರೀಯನ್ನು ಬೇಟಿ ಮಾಡಿದರು, ಆಕೆ ಹೆಸರೂ... ನಂತರ ನೀವು ಸಂಕೋಚಗೊಂಡವರಂತೆ ನಟಿಸಿ, ಹಾಗೂ ಅಲ್ಲಿ ಬಿಟ್ಟಿರುವ ಅಂಶವನ್ನು ಜನರು ಹೇಳುವುದಕ್ಕೆ ನೀವು ಎದುರುನೋಡುವಂತೆ ದೃಷ್ಟಿಸಬೇಕು. ಅವರು "ಮಾರ್ಥ" ಎಂದು ಹೇಳಿದ ನಂತರ, ನೀವು "ಸರಿ" ಅಥವಾ "ಹೌದು" ಎಂದು ಪ್ರತಿಕ್ರಿಯಿಸಿ, ಮುಂದುವರೆಸಿ.

ಸಾಮಾನ್ಯವಾಗಿ ಜನರಿಗೆ ಹೆಸರುಗಳನ್ನು ಅಥವಾ ಮೊತ್ತ (ಸಂಖ್ಯೆ)ವನ್ನು ನೆನಪಿನಲ್ಲಿಟ್ಟುಕೊಳ್ಳುವದರಲ್ಲಿ ಬಹಳ ಕಷ್ಟವುಂಟಾಗುತ್ತದೆ. ನಡೆಸಲ್ಪಡುವಿಕೆಯನ್ನು ಸುಲಭವಾಗಿ ಮಾಡುವುದಕ್ಕೆ, ನಾವು ಸಾಮಾನ್ಯವಾಗಿ ಒಂದು ಹೆಸರನ್ನು ನೆನಪಿಸಿಕೊಂಡು ಹೇಳಿ ಎಂದು ಕೇಳುವುದಿಲ್ಲ.

ಒಂದು ಹೆಸರನ್ನು ನೆನಪಿಸಿಕೊಂಡು ಹೇಳಿ ಎಂದು ಕೇಳುವ ನಿರ್ಧಾರವನ್ನು ಮಾಡಲು ಜ್ಞಾನವಿರಬೇಕು. ಈ ಚಿಕ್ಕ ಕಥೆಯಲ್ಲಿ ಮಾರ್ಥ, ಮರಿಯಳು ಮತ್ತು ಯೇಸು ಎಂಬ ಹೆಸರುಗಳನ್ನು ಪುನಃ ಪುನಃ ಬಳಸಲಾಗಿದೆ, ಹಾಗಾಗಿ ಕೇಳುಗರು ಅವರ ಹೆಸರುಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಂಡು ಹೇಳಬಹುದು. ಜ್ಞಾನವನ್ನು ಉಪಯೋಗಿಸಿ, ಸುಲಭವಾದ ಪ್ರಶ್ನೆಗಳನ್ನು ಕೇಳಿ, ಇದರಿಂದ ಕೇಳುಗರು ಧೈರ್ಯವುಳ್ಳವರಾಗುತ್ತಾರೆ. ನಂತರ, ಅವರು ಬಹಳ ಸ್ವತಂತ್ರವಾಗಿ ನಿಮ್ಮ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಪ್ರಾರಂಭಿಸುತ್ತಾರೆ.

ಕೇಳಿ : "ಮಾರ್ಥಳು ಏತಕ್ಕಾಗಿ ಯಾರನ್ನು ಆಹ್ವಾನಿಸಿದಳು?" ಅವರು "ಮಾರ್ಥಳು ಯೇಸುವನ್ನು ತನ್ನ ಮನೆಗೆ ಆಹ್ವಾನಿಸಿದಳು" ಎಂದು ಹೇಳಿದ ನಂತರ, ನೀವು "ಸರಿ" ಎಂದು ಹೇಳಿ.

ಕೆಲವೊಮ್ಮೆ ಕಥೆ ಹೇಳುವವರು, ಕಥೆಯನ್ನು ನಿಲ್ಲಿಸಿ, ಕಥೆಯ ಮುಂದಿನ ಭಾಗವನ್ನು ಕೇಳುಗರು ಹೇಳುವಂತೆ ಕೇಳುತ್ತಾರೆ, ಅದು ಈ ರೀತಿ ಇರುತ್ತದೆ, "ಕಥೆಯಲ್ಲಿ ಹೇಳಲ್ಪಟ್ಟಿರುವಂತೆ ಮಾರ್ಥಳಿಗೆ ಒಬ್ಬ ಸಂಬಂಧಿ ಇರುತ್ತಾರೆ. ಅವರು ಯಾರು ಮತ್ತು ಆಕೆಯ ಕುರಿತಾಗಿ ನಮಗೆ ಏನನ್ನು ಹೇಳಲಾಗಿದೆ? ಮರಿಯಳು ಮಾರ್ಥಳ ಸಹೋದರಿ ಮತ್ತು ಮರಿಯಳು ಯೇಸುವಿನ ಪಾದದ ಬಳಿ ಕುಳಿತು ಆತನ ಬೋಧನೆಯನ್ನು ಕೇಳುತ್ತಿದ್ದಳು" ಎಂದು ಅವರು ಹೇಳಿದಾಗ, ನೀವು "ಸರಿಯಾಗಿ ಹೇಳಿದಿರಿ" ಎಂದು ತಿಳಿಸಿ.

ನೀವು, ಆಗ "ಮಾರ್ಥಳಿಗೆ ಒಂದು ಸಮಸ್ಯೆಯಾಯಿತು, ಅಥವಾ ಆಕೆ ಏನೋ ಒಂದು ಸಂಗತಿಯನ್ನು ಸಮಸ್ಯೆಯೆಂದು ಭಾವಿಸಿದಳು. ಅದು ಯಾವುದು?" ಎಂದು ಕೇಳಿ.

ಕೇಳುಗರಿಂದ ಕಥೆಯ ಮೂಲಕ ಸಹಾಯದ ಪಟ್ಟಿಯನ್ನು ಪಡೆಯಲು, ನೀವು ಸಂಕೋಚಗೊಂಡವರಂತೆ ಮತ್ತು ನಿಮಗೆ ಕಥೆಯ ಕೆಲವು ಭಾಗ ನೆನಪಿಲ್ಲವೆಂಬಂತೆ ನಟಿಸಿ, ಬಿಟ್ಟಿರುವ ಸ್ಥಳವನ್ನು ತುಂಬುವಂತೆ ಅಥವಾ ಮುಂದಿನ ಭಾಗವನ್ನು ಹೇಳುವಂತಹ ಶೈಲಿಯನ್ನು ಉಪಯೋಗಿಸಿ ಗುಂಪಿನವರು ನಿಮಗಾಗಿ ಕಥೆಯನ್ನು ನೆನಪಿಸಿಕೊಳ್ಳುವಂತೆ ನೀವು ನಟಿಸಬಹುದು.

ಒಂದು ವೇಳೆ ಇಲ್ಲಿ, ಅಥವಾ ಇನ್ಯಾವುದೇ ಸಮಯದಲ್ಲಿ, ಕೆಲವು ಕಥೆಯ ಭಾಗವನ್ನು ತಿಳಿಸಲು ಕೇಳುಗರು ಪ್ರತಿಕ್ರಿಯಿಸದಿದ್ದರೆ, ಉತ್ತರವನ್ನು ನಿಧಾನವಾಗಿ ಹೇಳಲು ಪ್ರಾರಂಭಿಸಿ, ಇದರಿಂದ ಜನರು ಕಥೆಯ ಮುಂದಿನ ಭಾಗವನ್ನು ನೆನಪಿಸಿಕೊಳ್ಳುವಂತೆ ಮತ್ತು ಖಾಲಿಯಾಗಿರುವ ಪದಗಳನ್ನು ಅಥವಾ ಆಲೋಚನೆಯನ್ನು ಹೇಳುವುದಕ್ಕೆ ಅವರಿಗೆ ಅವಕಾಶವನ್ನು ಮಾಡಿಕೊಡುತ್ತದೆ.

ನಿಮ್ಮ ಪ್ರಶ್ನೆಗಳಲ್ಲಿನ ಮುಖ್ಯವಾದ ಪದಗಳನ್ನು ಒದಗಿಸುವುದರಿಂದ, ಜನರು ಕಥೆಯ ಮುಂದಿನ ಭಾಗವನ್ನು ನೆನಪಿಸಿಕೊಳ್ಳುವಂತೆ ನೀವು ಮಾಡಬಹುದು. ನಿಮ್ಮ ಪ್ರಶ್ನೆಗಳು ಆ ಮುಖ್ಯವಾದ ಪದಗಳನ್ನು ಒಳಗೊಂಡಿರುವುದು ಪ್ರಾಮುಖ್ಯವಾಗಿದೆ, ಏಕೆಂದರೆ ಆ ಪದಗಳು ಕಥೆಯ ಮುಂದಿನ ಭಾಗದಿಂದ ಯಾವುದೇ ಮಾಹಿತಿಯನ್ನು ಬಿಡದಂತೆ ಉತ್ತರಿಸುವಂತಹ ಕೇಳುಗರನ್ನು ಪ್ರೇರೇಪಿಸುತ್ತದೆ.

ಮುಖ್ಯವಾದ ಪದಗಳು ಇಲ್ಲದಿರುವುದು: ಉದಾಹರಣೆಗೆ, ನೀವು ಕಥೆಯನ್ನು ಪುನರ್‌ಪರಿಶೀಲಿಸುವಾಗ, ನೀವು, "ಮಾರ್ಥಳು ಏನನ್ನು ಹೇಳಿದಳು?" ಎಂದು ನೀವು ಹೇಳಿದರೆ, ಗುಂಪಿನ ಒಬ್ಬ ವ್ಯಕ್ತಿಯು, "ಮಾರ್ಥಳು, ನನಗೆ ಮರಿಯಳು ಸಹಾಯ ಮಾಡುವಂತೆ ಆಕೆಗೆ ಹೇಳು ಎಂದು ಹೇಳಿದಳು" ಎಂದು ಸರಿಯಾಗಿ ಪ್ರತ್ಯುತ್ತರ ಕೊಡಬಹುದು. ಇಲ್ಲಿ ಮಾರ್ಥಳು, ನನಗೆ ಮರಿಯಳು ಸಹಾಯ ಮಾಡುವಂತೆ ಆಕೆಗೆ ಹೇಳು ಎಂದು ಹೇಳಿರುವುದು ಸರಿಯಾಗಿಯೇ ಇದೆ, ಹಾಗಾಗಿ ಕೊಟ್ಟಂತಹ ಉತ್ತರವು ಸರಿಯಾದ ಉತ್ತರವಾಗಿದೆ. ಆದರೆ ಮಾರ್ಥಳು "ನನಗೆ ಮರಿಯಳು ಸಹಾಯ ಮಾಡುವಂತೆ ಆಕೆಗೆ ಹೇಳು" ಎಂದು ಹೇಳುವುದಕ್ಕಿಂತಲೂ ಮೊದಲು, ಆಕೆಯು, "ಸ್ವಾಮೀ, ಮರಿಯಳು ನನ್ನೊಬ್ಬಳನ್ನೇ ಎಲ್ಲಾ ಕೆಲಸ ಮಾಡುವಂತೆ ಬಿಟ್ಟಿರುವಳು" ಎಂದು ಹೇಳಿದಳು. ಹಾಗಾಗಿ, ನಿಮ್ಮ ಪುನರ್‌ಪರಿಶೀಲನೆಯ ಪ್ರಶ್ನೆಗಳಲ್ಲಿ ನೀವು ಬಹಳ ಸಾಮಾನ್ಯವಾಗಿರುವುದರಿಂದ, ಕಥೆಯಲ್ಲಿರುವುದಕ್ಕಿಂತಲೂ ಮುಂದಾಗಿ ಹೋಗುವಂತೆ ಅನುಮತಿಸಿರುವಿರಿ.

ಮುಖ್ಯವಾದ ಪದಗಳೊಂದಿಗೆ: ನೀವು ಬಯಸುವ ಉತ್ತರವನ್ನು ಕೊಡಲು ಕೇಳುಗರಿಗೆ ಸಹಾಯ ಮಾಡಲು, ಕಥೆಯ ಅಂಶವನ್ನು ನೆನಪಿಗೆ ತರುವಂತಹ ಒಂದು ಪ್ರಶ್ನೆಯನ್ನು ನೀವು ಕೇಳಬಹುದು. ಇದಕ್ಕೆ ಒಂದು ಉದಾಹರಣೆ: "ಮಾರ್ಥಳು ಮರಿಯಳನ್ನು ಏನೆಂದು ಕೇಳಿದಳು?". ನಿಮ್ಮ ಪ್ರಶ್ನೆಯಲ್ಲಿ "ಕೇಳು" ಎಂಬ ಪದವನ್ನು ಉಪಯೋಗಿಸುವುದರಿಂದ, ಕೇಳುಗರು ಯೇಸುವಿಗೆ ಮಾರ್ಥಳು ಏನೆಂದು ಕೇಳಿದಳು ಎಂಬುದನ್ನು ನೆನಪಿಸಿಕೊಳ್ಳುವಂತೆ ನಡೆಸಿರುವಿರಿ.

ಕೇಳುಗರು ಹೆಚ್ಚು ಸ್ವತಂತ್ರದಿಂದ ಮಾತನಾಡುವಂತೆ, ಪ್ರೋತ್ಸಾಹಕರವಾಗಿ ಪ್ರತಿಕ್ರಿಯಿಸಲು ಪ್ರಯತ್ನಿಸುವುದಕ್ಕೆ, ಒಂದು ವೇಳೆ ಆ ವ್ಯಕ್ತಿಯ ಉತ್ತರವು ನಿಖರವಾಗಿ ಸರಿಯಾಗಿಲ್ಲದಿದ್ದರೂ ಸಹ, ಈ ರೀತಿ ಅವರಿಗೆ ಪ್ರೋತ್ಸಾಹಿಸಲು ನಿಮ್ಮ ಕೇಳುಗರಿಗೆ ಹೆಚ್ಚಿನ ಉತ್ತರಗಳನ್ನು ಕಂಡುಕೊಳ್ಳಲು ಸಹಾಯ ಮಾಡಿ.

ಉದಾಹರಣೆಗೆ, ಈ ಪ್ರಶ್ನೆಯನ್ನು ಪ್ರಯತ್ನಿಸಿ, "ಮಾರ್ಥಳು ಯೇಸುವನ್ನು ಏನೆಂದು ಕರೆದಳು; ಆಕೆ ಯಾವ ಪದಗಳನ್ನು ಉಪಯೋಗಿಸಿದಳು?" ಅದಕ್ಕೆ ಅವರು "ಒಡೆಯ" ಅಥವಾ "ಸ್ವಾಮಿ" ಎಂದು ಉತ್ತರಿಸಬಹುದು. ಅವರು "ಸ್ವಾಮಿ" ಎಂದು ಉತ್ತರಿಸಿದರೆ, ಇದು ಸರಿ ಎಂದು ಹೇಳಿ. ಒಂದು ವೇಳೆ ಅವರು "ಒಡೆಯ" ಎಂದು ಹೇಳಿದರೆ, "ಮಾರ್ಥಳು ಇಲ್ಲಿ ಯೇಸುವನ್ನು ಸ್ವಾಮಿ ಎಂದು ಕರೆದಳು" ಎಂದು ಹೇಳಿ. ಕೇಳುಗರು ಹೇಳಿದಂತಹ "ಒಡೆಯ" ಎಂಬ ಉತ್ತರವು ನಿಖರವಾಗಿ ಸರಿಯಾದ ಉತ್ತರವಾಗಿಲ್ಲದಿದ್ದರೂ ಸಹ, ಆ ವ್ಯಕ್ತಿಗೆ ಸರಿಯಾದ ಆಲೋಚನೆ ಇತ್ತು. ನೀವು ಪ್ರತಿಕ್ರಿಯೆಯನ್ನು ಪ್ರೋತ್ಸಾಹಿಸುತ್ತಿರುವಿರಿ, ಆದರೆ ಅದೇ ಸಮಯದಲ್ಲಿ ಕಥೆಯನ್ನು ನಿಖರವಾಗಿ ಇಡುವ ರೀತಿಯಲ್ಲಿ ನೀವು ಮೃದುವಾಗಿ ಸರಿಯಾದ ಉತ್ತರವನ್ನು ಕೊಡುತ್ತಿರುವಿರಿ.

ಪ್ರಾರಂಭದಿಂದ ಅಂತ್ಯದವರೆಗೂ ನೀವು ಕಥೆಯ ಮೂಲಕ ನಡೆಸುತ್ತಿರುವಾಗ, ನೀವು *ಯೇಸುವನ್ನು ಮನೆಯೊಳಗೆ ಯಾರು ಆಹ್ವಾನಿಸಿದರು? ಕಥೆಯಲ್ಲಿ ಮರಿಯಳು ಏನು ಮಾಡುತ್ತಿರುವಳು? ಮಾರ್ಥಳು ಏನು ಮಾಡುತ್ತಿರುವಳು? ಎಂದು ಕೇಳಬಹುದು. ನಂತರ ಒಂದು ಸಮಸ್ಯೆ ಉದ್ಭವವಾಗುತ್ತದೆ. ಆ ಸಮಸ್ಯೆಯನ್ನು ವಿವರಿಸಿ. ಮಾರ್ಥಳು ಯೇಸುವಿಗೆ ಹೇಳುವಾಗ, ಆಕೆ ಆತನನ್ನು ಏನೆಂದು ಕರೆದಳು? ನಂತರ ಮಾರ್ಥಳು ಯೇಸುವನ್ನು ಏನೆಂದು ಕೇಳಿದಳು? ಈ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕೆಂದು ಮಾರ್ಥಳು ಬಯಸುತ್ತಿದ್ದಳು? ಮಾರ್ಥಳು ಮಾಡುತ್ತಿದ್ದುದರ ಕುರಿತಾಗಿ ಯೇಸು ಏನು ಹೇಳಿದನು? ಹಾಗಾಗಿ, ಮರಿಯಳು ಹೋಗಿ ಮಾರ್ಥಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ ಎಂದು ಯೇಸು ಹೇಳಿದನು, ಸರಿಯೋ? ಇಲ್ಲಾ, ನೀವು ಹೇಳುತ್ತಿರುವುದು ಸರಿಯಲ್ಲ. ಹಾಗಾಗಿ ಮರಿಯಳ ಕುರಿತಾಗಿ ಮತ್ತು ಆಕೆಯ ಆಯ್ಕೆಗಳ ಕುರಿತಾಗಿ ಯೇಸು ಏನು ಹೇಳಿದನು?* ಎಂದು ಕೇಳಬಹುದು.

ಕಥೆಯ ಕುರಿತಾಗಿ ಸ್ಪಷ್ಟವಾಗಿ ತಪ್ಪಾದ ಒಂದು ಸಂಗತಿಯನ್ನು ಹೇಳಲಾಯಿತು ಎಂಬುದನ್ನು ಗಮನಿಸಿ. ತಿಳಿಯದೆ ಈ ರೀತಿ ತಪ್ಪಾಗಿದ್ದರೆ, ಜನರು ನಿಮಗೆ ಸಹಾಯ ಮಾಡಲು ಬಯಸುತ್ತಾರೆ ಮತ್ತು ಅವರು ಆ ಕಥೆಯನ್ನು ಸರಿಪಡಿಸುತ್ತಾರೆ. ತಪ್ಪಾಗಿ ಹೇಳುವುದರಿಂದ ಜನರು ಕಥೆಯನ್ನು ನೆನಪಿಸಿಕೊಳ್ಳುವಂತೆ ಮಾಡುವ ಶೈಲಿಯ ನಿಮಿತ್ತ ಕೇಳುಗರು ತಪ್ಪನ್ನು ಗುರುತಿಸಿ ಅವರಿಗೆ ಅದು ಆಶ್ಚರ್ಯವನ್ನುಂಟು ಮಾಡುತ್ತದೆ ಮತ್ತು ಅವರು ಇದರಲ್ಲಿ ಸತತವಾಗಿ ಭಾಗವಹಿಸುವಂತೆ ಮಾಡುತ್ತದೆ, ಆದರೆ ಇದನ್ನು ಮಿತವಾಗಿ ಬಳಸಿ, ಒಂದು ವೇಳೆ ನಡೆಸಲ್ಪಡುವ ಯಾವಾಗಲೂದರೂ ಒಮ್ಮೆ ಮಾತ್ರ.

ಈ ಮೂರನೆಯ ಬಾರಿ ಹೇಳುವಂತ ಸಂದರ್ಭದಲ್ಲಿ, ಕಥೆಯನ್ನು ಕೇಳುಗರ ಮನಸ್ಸಿನಲ್ಲಿ ಬಂಧಿಸಿಡಲಾಗುತ್ತದೆ. ಇನ್ನೂ ಹೆಚ್ಚಾಗಿ, ಬಹಳ ಸುಲಭವಾಗಿರುವಂತಹ ಪ್ರಶ್ನೆಗಳು (ಇವು ಕೇವಲ ಕಥೆಯ ಪುನರ್‌ಪರಿಶೀಲನೆಯ ಪ್ರಶ್ನೆಗಳು), ಕೇಳುಗರು ಉತ್ತರಗಳನ್ನು ಕಥೆ ಹೇಳುವವರಿಗೆ ಜೋರಾಗಿ ಹೇಳುವಂತೆ ಪ್ರೋತ್ಸಾಹಿಸುತ್ತದೆ. ಜನರು ಈ ಸುಲಭವಾದ ಪ್ರಶ್ನೆಗಳನ್ನು ಉತ್ತರಿಸುವಾಗ, ಮತ್ತು ತಾವು ಆತ್ಮವಿಶ್ವಾಸವುಳ್ಳವರಾಗಿರುವಂತೆ ಅವರಿಗೆ ದೃಢವಾಗುತ್ತದೆ. ಆ ಭರವಸೆಯು *ಕಥೆ* ಮಾತ್ರದಲ್ಲಿ ಸ್ವಲ್ಪ ಸವಾಲಾಗಿರುವ ಮುಂದಿನ ಎರಡು ಭಾಗಗಳಿಗೆ ಅಗತ್ಯವಾಗಿರುವಂತಹುದಾಗಿದೆ. ಚರ್ಚೆಯ ಮೂಲಕ, ಕೇಳುಗರು ಕಥೆಯಲ್ಲಿರುವ ನಿಧಿಗಳಿಗಾಗಿ ಹುಡುಕಬೇಕು ಮತ್ತು ತಾವು ಕಂಡುಹಿಡಿದವುಗಳನ್ನು ಜೋರಾಗಿ ಹೇಳಬೇಕು.

ನೀವು ಸಿದ್ಧರಾಗಿರುವಿರೇ? ನಮ್ಮ ಕೌಶಲ್ಯಗಳನ್ನು ನಿರೂಪಣೆಯಲ್ಲಿ ಪ್ರಯತ್ನಿಸೋಣ.

ನಿರೂಪಣೆಯ ಹಂತ ಎರಡು: ಆತ್ಮೀಕ ಅವಲೋಕನಗಳ ಚರ್ಚೆ

ಆತ್ಮೀಕ ಅವಲೋಕನಗಳು. ನಾವು ಆತ್ಮೀಕ ಅವಲೋಕನಗಳಿಗಾಗಿ ಮತ್ತು ಆತ್ಮೀಕ ಅನ್ವಯಿಸುವಿಕೆಗಳಿಗಾಗಿ ಹುಡುಕುವಾಗ ನೀವು ಅನೇಕ ನಿಧಿಗಳನ್ನು ಕಂಡುಹಿಡಿದಿರುವಿರಿ. *ಕಥೆ* ಮಾತ್ರದಲ್ಲಿ ಮಾರ್ಥ/ಮರಿಯಳ ಕಥೆಯ ಕಾರ್ಯಾಗಾರವನ್ನು ಲೋಕದೆಲ್ಲೆಡೆ ನಡೆಸಿದಾಗ ಕಂಡುಹಿಡಿಯಲಾದ ಅನೇಕ ಆತ್ಮೀಕ ನಿಧಿಗಳಲ್ಲಿ ಕೆಲವು ನಿಧಿಗಳ ಕಡೆಗೆ ನಡೆಸುವಂತಹುದೇ ಈ ಕೆಳಗಿನ ನಮೂನೆಯ ಪ್ರಶ್ನೆಗಳಾಗಿವೆ. ಇವುಗಳನ್ನು ನಾವು ಅನೇಕ ದೇಶಗಳಲ್ಲಿ ನೋಡಿದ್ದೇವೆ.

ಕಂಡುಹಿಡಿಯಲ್ಪಟ್ಟಿರುವ ಇವುಗಳ ಒಂದು ಭಾಗವನ್ನು, ಅಥವಾ ಎಲ್ಲಾವುಗಳನ್ನು, ನೀವು ಈ ಕಥೆಯನ್ನು ಬೋಧಿಸುವಾಗ ನಿರೂಪಿಸಬಹುದಾಗಿದೆ. ಪವಿತ್ರಾತ್ಮನು ದೇವರ ವಾಕ್ಯದ ಎಲ್ಲಾ ಆಳ ಮತ್ತು ಐಶ್ವರ್ಯವನ್ನು ನಮಗೆ ಪ್ರಕಟಿಸುವುದಕ್ಕೆ ಮುಂದುವರೆಸಿದಾಗ ಇನ್ನೂ ಅನೇಕ ನಿಧಿಗಳು ಕಂಡುಹಿಡಿಯಲ್ಪಡಲಾಗುತ್ತವೆ ಎಂಬುದರಲ್ಲಿ ಸಂದೇಹವೇ ಇಲ್ಲ. ಪ್ರತಿಯೊಂದು ಅವಲೋಕನವು ಕಥೆಯನ್ನು ನಡೆಸಲ್ಪಡುವುದಕ್ಕೆ ಸರಿಹೊಂದುವ ರೀತಿಯಲ್ಲಿರುವಂತೆ ಹೇಳುತ್ತಾ ಕಾಲಾನುಕ್ರಮದಲ್ಲಿ ಕಥೆಯ ಮೂಲಕ ಪ್ರಯಾಣ ಮಾಡುವೆವು ಎಂಬುದನ್ನು ಗಮನಿಸಿ.

[ಇಲ್ಲಿ ಪ್ರತಿಯೊಂದು ಸಂಖ್ಯೆಗನುಗುಣವಾಗಿ ಕೊಟ್ಟಿರುವ ಅವಲೋಕನಗಳ ಪದಗಳನ್ನು *ಇಟ್ಯಾಲಿಕ್ ಶೈಲಿಯಲ್ಲಿ* ಕೊಡಲ್ಪಟ್ಟಿರುವಂತವುಗಳು ಗುಂಪಿನವರಿಗೆ ಕಥೆ ಹೇಳುವವರು ಕೇಳಬಹುದಾದಂತಹ ಪ್ರಶ್ನೆಗಳಾಗಿವೆ. ಇಟ್ಯಾಲಿಕ್ ಶೈಲಿಯಲ್ಲಿ ಇಲ್ಲದಿರುವ ಪದಗಳು ಗುಂಪಿನವರು ಕಂಡುಹಿಡಿದಿರುವ ಹಾಗೂ ಜೋರಾಗಿ ಹೇಳುವ ಉತ್ತರಗಳು ಅಥವಾ ನಿಧಿಗಳು ಆಗಿರುವ ಸಾಧ್ಯತೆಗಳಿವೆ.

1. *ಈ ಕಥೆಯಲ್ಲಿ, ಯೇಸು ಮರಿಯಳ ಸ್ವಭಾವವನ್ನು ಹೊಗಳುತ್ತಿರುವಂತೆ ಮತ್ತು ಮಾರ್ಥಳನ್ನು ಟೀಕಿಸುತ್ತಿರುವಂತೆ ತೋರುತ್ತದೆ. ನಾನು ಹೇಳಿದ್ದು ಸರಿಯೋ?* [ಉತ್ತರಕ್ಕಾಗಿ ಕಾಯುತ್ತಿರಿ]. *ಈಗ ನನಗೆ ಗಲಿಬಿಲಿಯಾಗಿದೆ! ಅತಿಥಿ ಸತ್ಕಾರ ಒಂದು ಒಳ್ಳೆಯ ಸಂಗತಿಯಾಗಿದೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಅತಿಥಿಗಳಿಗಾಗಿ ಒಳ್ಳೆಯ ಊಟವನ್ನು ಸಿದ್ಧಪಡಿಸುವುದು ಒಂದು ಒಳ್ಳೆಯ ಸಂಗತಿಯಾಗಿದೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಈ ಕಥೆಯು ಊಟವನ್ನು ಸಿದ್ಧಪಡಿಸುವುದಕ್ಕಿಂತಲೂ ಸತ್ಯವೇದದ ಅಧ್ಯಯನ ಮಾಡುತ್ತಿರುವುದು ಒಳ್ಳೆಯದೆಂದು ನಾವು ನಿರ್ಧರಿಸಿದರೇ, ಪ್ರಿಯರೇ, ನಿಮ್ಮ ಊಟವನ್ನು ಯಾರು ಸಿದ್ಧಪಡಿಸುವರು*

   ಹಾಗೂ, ಪುರುಷರೇ, ಈ ರೀತಿ ಸತ್ಯವೇದದ ಅಧ್ಯಯನವನ್ನು ತಪ್ಪಿಸಿ ಮಾಡುವುದು ಕಡಿಮೆ ಮೌಲ್ಯದ ಸಂಗತಿಯೆಂದು ಈ ಕಥೆಯು ನಮಗೆ ಬೋಧಿಸುವಾಗ, ನಿಮ್ಮ ಹೆಂಡತಿಯು ಸತ್ಯವೇದದ ಅಧ್ಯಯನವನ್ನು ತಪ್ಪಿಸಿ ಅಡುಗೆ ಸಿದ್ಧಪಡಿಸುವುದಕ್ಕಾಗಿ ಅಡಿಗೆ ಮನೆಗೆ ಹೋಗುವಂತೆ ನೀವು ಅವರಿಗೆ ಹೇಳುವುದು ಸರಿಯೇ? [ಉತ್ತರಕ್ಕಾಗಿ ಕಾಯುತ್ತಿರಿ]. *ಹಾಗಾಗಿ ಯೇಸು ಮರಿಯಳ ವಿಷಯದಲ್ಲಿ ಸಂತೋಷವುಳ್ಳವನಾಗಿದ್ದನು ಆದರೆ ಮಾರ್ಥಳ ವಿಷಯದಲ್ಲಿ ಸಂತೋಷಿಸಲಿಲ್ಲ, ಏಕೆ? ಯೇಸು ಯಾವಾಗಲೂ ಸತ್ಯವನ್ನು ಮಾತನಾಡುತ್ತಾನೆ ಎಂದು ನಮಗೆ ತಿಳಿದಿದೆ, ಆದರೆ ಆತನು ಮಾತನಾಡುತ್ತಿರುವ ಆ ಸತ್ಯವು ನಿಜವಾಗಿಯೂ ಏನಾಗಿದೆ? ಪುನಃ ನಾವು ಈ ಕಥೆಯನ್ನು ಮತ್ತೊಮ್ಮೆ ನೋಡಿಕೊಳ್ಳಬೇಕಾಗಬಹುದು?*

2. *ಮಾರ್ಥಳು ಯೇಸುವನ್ನು ಹೇಗೆ ತನ್ನ ಮನೆಗೆ ಆಹ್ವಾನಿಸಿದಳು? ಎಂಬುದನ್ನು ನಾವು ಹೇಗೆ ನೋಡಿದೆವೆಂಬುದನ್ನು ನೆನಪಿಸಿಕೊಳ್ಳಿ. ಯೇಸುವು ಬಹಳ ವಿಶೇಷವಾದ ವ್ಯಕ್ತಿಯಾಗಿದ್ದರೆಂದು ಮಾರ್ಥಳಿಗೆ*

ತಿಳಿದಿರಬಹುದಾದಂತಹ ಯಾವುದಾದರೂ ಸಂಗತಿ ಈ ಕಥೆಯಲ್ಲಿದೆಯೇ? ಎಂದು ನನಗೆ ಆಶ್ಚರ್ಯವಾಗುತ್ತದೆ [ಉತ್ತರಕ್ಕಾಗಿ ಕಾಯುತ್ತಿರಿ].

ಕೇಳುಗರು ಈ ರೀತಿ ಉತ್ತರಿಸಬಹುದು: ಮಾರ್ಥಳು ಯೇಸುವನ್ನು ಮನೆಗೆ ಆಹ್ವಾನಿಸಿದಳು, ಮಾರ್ಥಳು ಯೇಸುವನ್ನು "ಸ್ವಾಮಿ" ಎಂದು ಕರೆದಳು, ಮರಿಯಳು ಯೇಸುವಿನ ಬೋಧನೆಯನ್ನು ಕೇಳಿಸಿಕೊಳ್ಳುತ್ತಿದ್ದುದರಿಂದ, ಅಥವಾ ಮಾರ್ಥಳು ಯೇಸುವನ್ನು ಭೇಟಿಯಾದಾಗ, ಅವನೊಂದಿಗೆ ಶಿಷ್ಯರಿದ್ದರು, ಇದು ಆತನನ್ನು ಸಾಮಾನ್ಯದಿಂದ ಉನ್ನತವಾಗಿ ನೋಡುವಂತೆ ಮಾಡಿರಬಹುದು. ಇವೆಲ್ಲವುಗಳು ಒಳ್ಳೆಯ ಪ್ರತಿಕ್ರಿಯೆಗಳಾಗಿವೆ.

3. *ಮಾರ್ಥಳ ತಂಗಿ ಮರಿಯಳು ಯೇಸುವಿನ ಪಾದದ ಬಳಿ ಕುಳಿತುಕೊಂಡು ಆತನ ಬೋಧನೆಯನ್ನು ಕೇಳುತ್ತಿದ್ದಳು ಎಂಬುದನ್ನು ನಾವು ಈ ಕಥೆಯಲ್ಲಿ ನೋಡುತ್ತೇವೆ. "ಆತನ ಪಾದಗಳ ಬಳಿ ಕುಳಿತುಕೊಳ್ಳುವುದು" ಎಂಬ ವರ್ಣನೆಯು ನಿಮಗೆ ಯಾವ ಅರ್ಥವನ್ನು ಕೊಡುತ್ತದೆ?* [ಉತ್ತರಕ್ಕಾಗಿ ಕಾಯುತ್ತಿರಿ]. ಒಬ್ಬ ವ್ಯಕ್ತಿಯ ಕಾಲಬಳಿ ಕುಳಿತಿರುವುದೆಂದರೆ ಇದು ಸಮರ್ಪಿಸಿಕೊಂಡಂತಹ ಒಬ್ಬ ವಿದ್ಯಾರ್ಥಿ/ಶಿಕ್ಷಕನ ಸಂಬಂಧವನ್ನು ವರ್ಣಿಸುವ ರೀತಿಯಾಗಿದೆ. ಹಾಗೂ ಇದು ಸಮರ್ಪಣೆಯನ್ನು ಮತ್ತು ಗುರುತನ್ನು / ಗೌರವವನ್ನು ತೋರಿಸುವಂತಹುದಾಗಿದೆ.

4. *ಮಾರ್ಥಳು ಯೇಸುವನ್ನು ಏನೆಂದು ಕರೆದಳು?* [ಉತ್ತರಕ್ಕಾಗಿ ಕಾಯುತ್ತಿರಿ]. *"ಸ್ವಾಮಿ" ಎಂಬುದರ ಅರ್ಥವೇನು?* [ಉತ್ತರಕ್ಕಾಗಿ ಕಾಯುತ್ತಿರಿ]. *ಮಾರ್ಥಳಿಗೆ ಯೇಸುವಿನ ಬಗ್ಗೆ ತಿಳಿದಿತ್ತು ಎಂದು ಪುನಃ ತೋರಿಸುವ ಸಂಗತಿ ಏನಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ]. ಯೇಸು ವಿಶೇಷವಾದವರೆಂದೂ, ತಾನು ಒಡೆಯನ ಸ್ಥಾನದಲ್ಲಿ ನೋಡುವಂತವನು ಎಂದು ಆಕೆಗೆ ತಿಳಿದಿತ್ತು. *ಆಕೆ "ಆತನು ಕರ್ತನು" ಎಂದು ಹೇಳುತ್ತಾಳೆ, ಆದರೆ ಅಡುಗೆ ಮನೆಯಲ್ಲೇ ಇದ್ದು, ಆತನ ಬೋಧನೆಯನ್ನು ಕಲಿತುಕೊಳ್ಳಲಿಲ್ಲ? ಮಾರ್ಥಳ ಈ ನಡವಳಿಕೆಯ ಕುರಿತಾಗಿ ನೀವು ಏನು ಹೇಳುವಿರಿ?* [ಉತ್ತರಕ್ಕಾಗಿ ಕಾಯುತ್ತಿರಿ]. *ಆಕೆಯ ಮಾತುಗಳು ಮತ್ತು ಆಕೆಯ ನಡವಳಿಕೆ ಒಂದಕ್ಕೊಂದು ಹೊಂದಿಕೊಳ್ಳುತ್ತವೆಯೋ ಅಥವಾ ಹೊಂದಿಕೊಳ್ಳುವುದಿಲ್ಲವೋ? ಈ ಭಾಗದ ಕಥೆಯಲ್ಲಿ ಇದನ್ನು ನೀವು ಹೇಗೆ ನೋಡುವಿರಿ?*

5. *ಮಾರ್ಥಳು ಬಹಳ ಕೆಲಸದಲ್ಲಿ ತೊಡಗಿದ್ದಳು ಮತ್ತು ಒಬ್ಬಳೇ ಸತ್ಕರಿಸುವವಳಾಗಿದ್ದಳು ಎಂದು ಕಥೆಯು ತಿಳಿಸುತ್ತದೆ. ಮಾರ್ಥ ಎಷ್ಟು ದೊಡ್ಡ ಅಡಿಗೆಯನ್ನು ಅಥವಾ ವಿವಿಧ ಭಕ್ಷ್ಯಗಳನ್ನು ಮಾಡುತ್ತಿದ್ದಳು ಎಂಬುದನ್ನು ನಾವು ಈ ಕಥೆಯಿಂದ ಹೇಳಲು ಸಾಧ್ಯವೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಆಕೆ ಸರಳವಾದ ಆಹಾರವನ್ನು, ಅಂದರೆ ಆಕೆ ಅತಿಥಿಗಳಿಗೆ ಹಣ್ಣು ಅಥವಾ ಟೀ ಅಥವಾ ಲಘು ಉಪಹಾರವನ್ನು ಸಿದ್ಧಪಡಿಸುತ್ತಿದ್ದಳೇ ಅಥವಾ ದೊಡ್ಡ ಅಡುಗೆಯನ್ನು ಸಿದ್ಧಪಡಿಸುತ್ತಿದ್ದಳೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಯೇಸುವನ್ನು ಮನೆಗೆ ಆಹ್ವಾನಿಸುವುದು ಯಾರ ಆಲೋಚನೆಯಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ].

ನನಗೊಂದು ಪ್ರಶ್ನೆಯಿದೆ. ಯೇಸುವು ಬಹಳ ಬೆಲೆಯುಳ್ಳದ್ದನ್ನು ಬೋಧಿಸಲಿಕ್ಕಿರುವನು ಎಂಬುದು ಮಾರ್ಥಳಿಗೆ ತಿಳಿದಿದ್ದರೆ, ಬಹಳ ಸಮಯವನ್ನು ತೆಗೆದುಕೊಳ್ಳುವಂತಹ ಬಗೆಬಗೆಯ ಅಡುಗೆಯನ್ನು

ಮಾಡುವುದಕ್ಕೆ ಆಯ್ಕೆ ಮಾಡಿಕೊಂಡದ್ದು ಆಶ್ಚರ್ಯ ಸಂಗತಿಯಲ್ಲವೇ? ಆಕೆಯ ನಿರ್ಧಾರ ಕುರಿತು ನಿಮಗೆ ಏನನ್ನಿಸುತ್ತದೆ? [ಉತ್ತರಕ್ಕಾಗಿ ಕಾಯುತ್ತಿರಿ]. *ಮಾರ್ಥಳು ತನಗೆ ಮಾಡಲಿಕ್ಕೆ ಬಹಳ ಕೆಲಸ ಉಂಟೆಂದು ಯೇಸುವಿಗೆ ದೂರುತ್ತಾಳೆ ಆದರೆ ಆಕೆಯ ಸಮಯವನ್ನೆಲ್ಲಾ ಅಡುಗೆ ಮಾಡುವುದಕ್ಕೆ ಉಪಯೋಗಿಸಿಕೊಳ್ಳುವುದನ್ನು ಆಕೆಯೇ ಆರಿಸಿಕೊಂಡಿದ್ದಳು! ಆಕೆ ಸರಿಯಾಗಿ ಆಲೋಚಿಸುತ್ತಿರುವಳೇ?* [ಉತ್ತರಕ್ಕಾಗಿ ಕಾಯುತ್ತಿರಿ].

6. ಇಲ್ಲಿ ಇನ್ನೊಂದು ಪ್ರಶ್ನೆಯಿದೆ. *ಮಾರ್ಥಳು **ನಿಖರವಾಗಿ** ಯೇಸುವನ್ನು ಏನೆಂದು ಕೇಳಿದಳು?* [ಉತ್ತರಕ್ಕಾಗಿ ಕಾಯುತ್ತಿರಿ]. *ಆಕೆ ಯಾರಿಗೆ ಏನನ್ನು ಹೇಳಿದಳು? ("ನನ್ನ ಬಗ್ಗೆ ಚಿಂತೆಯಿಲ್ಲವೇ?") ನನಗೆ ಆಶ್ಚರ್ಯವಾಗುತ್ತದೆ. ಆಕೆಯ ಮಾತುಗಳಿಂದ ಕರ್ತನಲ್ಲಿಟ್ಟಿದ್ದ ಆಕೆಯ ಭರವಸೆಯ ಕುರಿತಾಗಿ ಏನು ತೋರಿಸುತ್ತದೆ?* [ಉತ್ತರಕ್ಕಾಗಿ ಕಾಯುತ್ತಿರಿ].

7. *ತನ್ನ ಸಮಸ್ಯೆಗೆ ಯಾವುದು ಪರಿಹಾರವೆಂದು ಮಾರ್ಥಳು ಆಲೋಚಿಸಿದಳು? "ಯೇಸುವಿಗೆ, ಮರಿಯಳು ಬಂದು ನನಗೆ ಸಹಾಯ ಮಾಡುವಂತೆ ಆಕೆಗೆ ನೀನು ಹೇಳು!"* [ಉತ್ತರಕ್ಕಾಗಿ ಕಾಯುತ್ತಿರಿ]. *ಈಗ ಮಾರ್ಥಳು ಯೇಸುವನ್ನು ಹೇಗೆ ಸತ್ಕರಿಸುತ್ತಿದ್ದಳು? ಅತನನ್ನು ಕರ್ತನಂತೆ?* [ಉತ್ತರಕ್ಕಾಗಿ ಕಾಯುತ್ತಿರಿ]. ನೀವು ಹೇಳಿದ್ದು ಸರಿ. ಆಕೆ ಯೇಸುವಿಗೆ ತಾನು ಯಜಮಾನಿಯಂತೆ ಮತ್ತು ಆತನು ಆಕೆಯ ಸೇವಕನಂತೆ ತೋರ್ಪಡಿಸಿದಳು! ಮಾರ್ಥಳು ಯಾವ ರೀತಿಯ ಆತ್ಮೀಕ ಜ್ಞಾನವನ್ನು ಪ್ರಕಟಿಸುತ್ತಿರುವಳು? [ಉತ್ತರಕ್ಕಾಗಿ ಕಾಯುತ್ತಿರಿ].

8. *ಮಾರ್ಥಳು ಆಡಿದಂತಹ ಮಾತುಗಳನ್ನು, ಮತ್ತು ಪುನಃ ಯೇಸು ಆಕೆಗೆ ಏನು ಹೇಳಿದನು ಎಂಬುದನ್ನು ನಾವು ಕೇಳಿದಾಗ, ಇಲ್ಲಿ ಯೇಸು ಮಾರ್ಥಳನ್ನು ಗದರಿಸುವುದು ಮತ್ತು ಮರಿಯಳನ್ನು ಹೊಗಳುವುದಕ್ಕೆ ಇರುವ ಯಾವುದಾದರೂ ಕಾರಣವನ್ನು ಕಾಣುವಿರೇ? ಒಂದೇ ಒಂದು ಸಂಗತಿ ಬೇಕೆಂದು ಯೇಸು ಹೇಳಿದನು, ಅದು ಯಾವುದು?* [ಉತ್ತರಕ್ಕಾಗಿ ಕಾಯುತ್ತಿರಿ].

9. *ಹಾಗಾಗಿ, ತನಗೆ ಬಹಳಷ್ಟು ಕೆಲಸವಿರುವುದರಿಂದ ಆಕೆ ದೂರಿದ ಇಬ್ಬರು ವ್ಯಕ್ತಿಗಳು ಯಾರು?* [ಉತ್ತರಕ್ಕಾಗಿ ಕಾಯುತ್ತಿರಿ]. ಹೌದು. ಮರಿಯಳು ಮತ್ತು ಯೇಸು! *ಮಾರ್ಥಳು ಅವರನ್ನು ಹೇಗೆ ದೂರಿದಳು?* [ಉತ್ತರಕ್ಕಾಗಿ ಕಾಯುತ್ತಿರಿ]. *ಮಾರ್ಥಳು, "ಯೇಸುವೇ, ನನ್ನ ತಂಗಿಯು ಎಲ್ಲಾ ಕೆಲಸವನ್ನು ನನಗೊಬ್ಬಳಿಗೆ ಬಿಟ್ಟಿರುವುದರಿಂದ ನಿನಗೆ ಚಿಂತೆಯಿಲ್ಲವೇ?" ಎಂದು ಕೇಳಿರಬಹುದು. ಹಾಗೂ, ಮರಿಯಳು ಎಲ್ಲಾ ಕೆಲಸವನ್ನು ತನಗೇ ಬಿಟ್ಟಿರುವಳು ಎಂಬುದನ್ನು ಈಕೆ ಒತ್ತಿ ಹೇಳುತ್ತಿರುವುದನ್ನು ಗಮನಿಸಿ. ಆದರೆ ನೆನಪಿಡಿ, ಆಮಂತ್ರಣ ಕೊಟ್ಟವರು ಯಾರು?* [ಉತ್ತರಕ್ಕಾಗಿ ಕಾಯುತ್ತಿರಿ]. ದೊಡ್ಡ ಔತಣವನ್ನು ಮಾಡುವ ಆಯ್ಕೆಯನ್ನು *ಯಾರು ಮಾಡಿದ್ದರು?* [ಉತ್ತರಕ್ಕಾಗಿ ಕಾಯುತ್ತಿರಿ].

ಈ ಕಥೆಯಲ್ಲಿ, ಮಾರ್ಥಳ ಅತಿರೇಕವಾದ ಪರಿಸ್ಥಿತಿಗೆ ಕಾರಣವಾಲ್ಲವೆಂದು ಯಾರ ಹೆಸರನ್ನು ಇಲ್ಲಿ ಹೇಳಲಾಗಿಲ್ಲ? [ಉತ್ತರಕ್ಕಾಗಿ ಕಾಯುತ್ತಿರಿ]. ಹೌದು. ಈ ಅತಿರೇಕವಾದ ಪರಿಸ್ಥಿತಿಗೆ ಖುದ್ದಾಗಿ ತಾನೇ ಕಾರಣ ಎಂಬುದನ್ನು ಮಾರ್ಥಳು ಹೇಳುತ್ತಿಲ್ಲ.

10. *ಯೇಸುವಿನಿಂದ ಕಲಿತುಕೊಳ್ಳದಂತೆ ಆಕೆಯನ್ನು ದೂರವಿಟ್ಟಂತಹ ನಿರ್ಧಾರಗಳನ್ನು ಆಕೆಯೇ ಮಾಡಿದ್ದನ್ನು ಗಮನಿಸಿ. ಆದರೆ, ಆಕೆಯೇ (ಆಕೆಯೇ ಉಂಟುಮಾಡಿಕೊಂಡಿರುವ) ಸಮಸ್ಯೆಯ ಪರಿಹಾರಕ್ಕೆ ಇದು ಬೇರೆಯವರಿಗೆ ಮೇಲೆ ಹೇಗೆ ಪರಿಣಾಮ ಬೀರಬಹುದಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ]. ಹೌದು. ಮರಿಯಳು ಯೇಸುವಿನ ಸನ್ನಿಧಾನವನ್ನು ಬಿಟ್ಟುಬಿಡಬೇಕಾಗಿತ್ತು. *ಮಾರ್ಥಳ ಈ ಪರಿಹಾರಕ್ಕೆ ನೀವು ಏನೆಂದು ಭಾವಿಸುವಿರಿ?* [ಉತ್ತರಕ್ಕಾಗಿ ಕಾಯುತ್ತಿರಿ].

11. *ಮಾರ್ಥಳು ಯೇಸುವಿಗೆ ಯಾವ ರೀತಿಯ ಗೌರವವನ್ನು ತೋರಿಸಿದಳು?* [ಉತ್ತರಕ್ಕಾಗಿ ಕಾಯುತ್ತಿರಿ]. ಮಾರ್ಥಳು ಯೇಸುವಿನೊಂದಿಗೆ ಮಾತನಾಡಿದ ರೀತಿ ಅಗೌರವವನ್ನು ತೋರ್ಪಡಿಸುತ್ತದೆ. ಮೊದಲಿಗೆ ಆಕೆ ತನ್ನ ಕುರಿತಾಗಿ ಯೇಸು ಚಿಂತಿಸುತ್ತಿಲ್ಲವೆಂದು ಆತನನ್ನು ದೂರಿದಳು, ನಂತರ ಆತನು ಆಕೆಯ ಸೇವಕನೆಂಬಂತೆ ಆತನೊಂದಿಗೆ ಮಾತನಾಡಿದಳು!

12. *ಮಾರ್ಥಳಿಗೆ ಪ್ರತ್ಯುತ್ತರ ಕೊಡುವಾಗ ಯೇಸು ಯಾವ ರೀತಿಯ ಭಾವನೆಯನ್ನು ವ್ಯಕ್ತಪಡಿಸಿದನು? ಆಸಕ್ತಿಕರವಾಗಿದೆ. ಮಾರ್ಥಳ ದೂರುಗಳಿಗೆ ಮತ್ತು ಎಲ್ಲರ ಮುಂದೆ ಯೇಸು ಏನು ಮಾಡಬೇಕೆಂದು ಆಕೆ ಆಜ್ಞೆ ನೀಡಿದ ರೀತಿಗೆ, ಆತನು ಮಾರ್ಥಳಿಗೆ ಇನ್ನ್ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬಹುದಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ].

13. ನಾನೂ ಸಹ ಅದನ್ನು ನೋಡುತ್ತೇನೆ. ಆತನು ಈ ರೀತಿಯ ಅಗೌರವದಿಂದ ನಿಜವಾಗಿಯೂ ಕೋಪಗೊಳ್ಳಬಹುದಿತ್ತು, ಅಥವಾ ಆತನಿಗೆ ಬಹಳ ಅವಮಾನವಾದಂತೆ ಭಾವಿಸಿ ಆ ಕೋಣೆಯನ್ನು ಬಿಟ್ಟು ಹೊರಟು ಹೋಗಬಹುದಿತ್ತು. *ಆದರೆ ಯೇಸು ನಡೆದುಕೊಂಡ ರೀತಿ ಹಾಗಿರಲಿಲ್ಲ. ಆತನು ಯೇಸುವಿನೊಂದಿಗೆ ಮಾತನಾಡಿದ ರೀತಿಯನ್ನು ವರ್ಣಿಸಿ.* [ಉತ್ತರಕ್ಕಾಗಿ ಕಾಯುತ್ತಿರಿ]. ಆತನು ಮರಿಯಳ ಆಯ್ಕೆಯು ಒಂದು ಒಳ್ಳೆಯ ಆಯ್ಕೆಯಾಗಿದೆ ಎಂದು ಮೃದುವಾಗಿ ಮಾರ್ಥಳಿಗೆ ವಿವರಿಸುತ್ತಾನೆ.

14. *ಮಾರ್ಥಳು ಯೇಸುವಿಗೆ ಇನ್ನಿತರ ಯಾವ ವಿಧದಲ್ಲಿ ಅಗೌರವವನ್ನು ತೋರ್ಪಡಿಸುತ್ತಿದ್ದಳು ಎಂದು ನೀವು ಭಾವಿಸುವಿರಿ?* [ಉತ್ತರಕ್ಕಾಗಿ ಕಾಯುತ್ತಿರಿ]. ಯೇಸು ಗೌರವಾನ್ವಿತನಾದ ಬೋಧಕನಾಗಿದ್ದನು. ಮಾರ್ಥಳು ಇಲ್ಲಿ ಯೇಸುವನ್ನು ಟೀಕಿಸುತ್ತಿರುವುದು ಮಾತ್ರವಲ್ಲದೆ, ಆತನ ಹಿಂಬಾಲಕರು ಆತನೊಂದಿಗಿರುವಾಗಲೇ ಆಕೆ ಟೀಕಿಸುತ್ತಿರುವಳು! ಇದನ್ನು ಮಾಡಿದುದರಿಂದ, ಮಾರ್ಥಳು ಪುನಃ ಯೇಸುವಿನ ಬಗ್ಗೆ ಯಾವ ಗೌರವವನ್ನು ತೋರಿಸುತ್ತಿಲ್ಲ ಎಂಬುದನ್ನು ತೋರಿಸಿತು! *ಯೇಸು ಮಾರ್ಥಳಿಗೆ ನೀಡಿದ ಪ್ರತಿಕ್ರಿಯೆಯಲ್ಲಿ ಆತನು ಗರ್ವ ಅಥವಾ ದೀನತೆಯನ್ನು ತೋರ್ಪಡಿಸಿದನೇ? ನಿಮ್ಮ ಉತ್ತರವನ್ನು ವಿವರಿಸಿ.* [ಉತ್ತರಕ್ಕಾಗಿ ಕಾಯುತ್ತಿರಿ].

15. *ಯೇಸು ಮಾರ್ಥಳನ್ನು ಕರೆದ ರೀತಿಯಿಂದ, ಆತನು ಆಕೆಯನ್ನು ಅರಿತಿದ್ದನು ಅಥವಾ ಅರಿತಿರಲಿಲ್ಲ ಎಂಬುದನ್ನು ನಾವು ಹೇಳಲು ಸಾಧ್ಯವೇ?* [ಉತ್ತರಕ್ಕಾಗಿ ಕಾಯುತ್ತಿರಿ]. ಹೌದು. ಯೇಸು ಆಕೆಯೊಂದಿಗೆ ಮಾತನಾಡಿದಾಗ ಆಕೆಯ ಹೆಸರನ್ನು ಉಪಯೋಗಿಸುದದರಿಂದ ಆಕೆಯಲ್ಲಿ ಆತನಿಗಿರುವ ಯಥಾರ್ಥವಾದ ಆಸಕ್ತಿಯನ್ನು ತೋರಿಸಿದನು. ಯೇಸು ಆಕೆಯ ಹೆಸರನ್ನು ಕರೆದನು, ಒಮ್ಮೆ ಅಲ್ಲ ಆದರೆ ಎರಡು ಬಾರಿ!

16. *ಮಾರ್ಥಳು ಚಿಂತಿಸುತ್ತಿದ್ದ ರೀತಿಯು ಆಕೆಗೆ ಹೊಸದಾಗಿತ್ತು ಅಥವಾ ಇದು ಆಕೆಗಿದ್ದ ಹವ್ಯಾಸವೇ ಆಗಿತ್ತು ಎಂದು ತೋರಿಸುವಂತಹ ಯಾವುದಾದರೂ ಮಾಹಿತಿಯನ್ನು ನಾವು ಈ ಕಥೆಯಲ್ಲಿ ನೋಡುತ್ತೇವೆಯೇ?*

[ಉತ್ತರಕ್ಕಾಗಿ ಕಾಯುತ್ತಿರಿ]. ಮಾರ್ಥಳು ಅನೇಕ ವಿಷಯಗಳ ಕುರಿತಾಗಿ ಚಿಂತೆಯುಳ್ಳವಳು ಮತ್ತು ಕಾಳಜಿಯುಳ್ಳವಳು ಆಗಿದ್ದಳು ಎಂದು ಯೇಸು ಆಕೆಗೆ ಹೇಳಿರುವುದರಿಂದ, ಇದು ಆಕೆಯ ಹವ್ಯಾಸವಾಗಿತ್ತು.

17. *ಮಾರ್ಥಳು ಊಟವನ್ನು ಸಿದ್ಧಪಡಿಸುತ್ತಾ ಅಡುಗೆ ಮನೆಯಲ್ಲಿರುವಂತೆ, ಅಥವಾ ಯೇಸುವಿನ ಪಾದದ ಬಳಿ ಕುಳಿತು ಕೇಳಿಸಿಕೊಳ್ಳುವಂತಹ ಆಯ್ಕೆ ಆಕೆಗೆ ಇತ್ತು ಅಥವಾ ಇಲ್ಲ ಎಂಬುದನ್ನು ಈ ಕಥೆಯಲ್ಲಿ ತೋರಿಸುವಂತಹ ಸಂಗತಿ ಯಾವುದಾದರೂ ಇದೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. ಹೌದು. ನೀವು ಹೇಳಿದ್ದು ಸರಿ.

18. "ಮರಿಯಳು ಒಳ್ಳೆಯದನ್ನು ಆಯ್ಕೆ ಮಾಡಿಕೊಂಡಿರುವಳು" ಎಂದು ಯೇಸು ಹೇಳುವಾಗ, ಮಾರ್ಥಳಿಗೂ ಸಹ ಆಯ್ಕೆಯ ಅವಕಾಶವಿತ್ತು ಎಂದು ಯೇಸು ನಮಗೆ ತೋರಿಸಿದನು. *ಯೇಸುವಿನ ಈ ಮಾತುಗಳಿಂದ, ಮಾರ್ಥಳು ಏನನ್ನು ಆಯ್ಕೆ ಮಾಡಿಕೊಂಡಿದ್ದಳು ಎಂಬುದನ್ನು ನಾವು ನೋಡುತ್ತೇವೆ?* [ಉತ್ತರಕ್ಕಾಗಿ ಕಾಯುತ್ತಿರಿ]. ಮಾರ್ಥಳು ಅಡುಗೆ ಮನೆಯಲ್ಲಿ ವ್ಯಸ್ತಳಾಗಿರುವುದಕ್ಕೆ ಆಯ್ಕೆ ಮಾಡಿಕೊಂಡಿದ್ದಳು.

19. ಯೇಸು ಹೇಳಿದನು, "ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ. ಮರಿಯಳು ಉತ್ತಮವಾಗಿರುವ ಆ ಒಂದು ಸಂಗತಿಯನ್ನೇ ಆಯ್ಕೆ ಮಾಡಿಕೊಂಡಿರುವಳು." *ಈ ದೊಡ್ಡ ಔತಣವನ್ನು ಮರಿಯಳ ಆಯ್ಕೆಗೆ ಹೋಲಿಸುತ್ತಾ ಇಲ್ಲಿ ಯೇಸು ಮಾರ್ಥಳ ಆಯ್ಕೆಯ ಕುರಿತಾಗಿ ಏನು ಹೇಳುತ್ತಿರುವನು?* [ಉತ್ತರಕ್ಕಾಗಿ ಕಾಯುತ್ತಿರಿ]. ಮರಿಯಳು ಆಯ್ಕೆ ಮಾಡಿಕೊಂಡಿದ್ದ ಆ ಒಂದು ಸಂಗತಿಯೇ ಅಗತ್ಯವಾಗಿತ್ತು.

20. *ಮಾರ್ಥಳು ತಾನು ಮಾಡಬೇಕೆಂದು ಆಯ್ಕೆ ಮಾಡಿಕೊಂಡ ಸಂಗತಿಯು ಅಗತ್ಯವಾದುದೆಂದು ಆಕೆ ಆಲೋಚಿಸಿದಂತೆ ಕಾಣುತ್ತದೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಮಾರ್ಥಳು ಮಾಡುತ್ತಿದ್ದುದು ಅಗತ್ಯವೆಂದು ಯೇಸು ಆಲೋಚಿಸಿದನೇ?* [ಉತ್ತರಕ್ಕಾಗಿ ಕಾಯುತ್ತಿರಿ]. ಊಟ ಮಾಡುವುದು *ಅಗತ್ಯವೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ದಯವಿಟ್ಟು ನನಗೆ ಸಹಾಯ ಮಾಡಿ. ಹಾಗಾದರೆ ಈ ಕಥೆಯಲ್ಲಿ ಯಾವುದು ಅಗತ್ಯವಾದುದು ಮತ್ತು ಯಾವುದು ಅಗತ್ಯವಲ್ಲವೆಂದು ಯೇಸು ಹೇಳುತ್ತಿರುವನೋ ಅದರ ಕುರಿತಾಗಿ ಸರಿಯಾದ ವಿವರಣೆಯನ್ನು ನೀಡಿ.*

21. *ಅತಿಥಿ ಸತ್ಕಾರವನ್ನು ಬಹಳವಾಗಿ ಮಾಡುವಂತಹ ಈ ಸಂಸ್ಕೃತಿಯಲ್ಲಿ ಮರಿಯಳಿಂದ ಏನನ್ನು ಅಪೇಕ್ಷಿಸಲಾಗುತ್ತಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ]. *ಈ ಕಥೆಯಲ್ಲಿ ಮರಿಯಳು ಯಾವ ರೀತಿಯ ಕಠಿಣವಾದ ನಿರ್ಧಾರವನ್ನು ತೆಗೆದುಕೊಂಡಳು? ಮರಿಯಳು ತಾನು ಆಯ್ಕೆ ಮಾಡುವುದಕ್ಕಾಗಿ ಆಕೆ ಯಾವುದರ ವಿರುದ್ಧವಾಗಿ ಆಯ್ಕೆ ಮಾಡಬೇಕಾಗಿತ್ತು ಮತ್ತು ಯಾವುದರ ವಿರುದ್ಧವಾಗಿ ಹೋಗಬೇಕಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ]. ಹೌದು. ಆಕೆಯ ಸಂಸ್ಕೃತಿ ಮತ್ತು ಆಕೆಯ ಕುಟುಂಬದವರ ಅಪೇಕ್ಷೆಗಳ ವಿರುದ್ಧವಾಗಿ.

22. *ಮಾರ್ಥಳು ತನ್ನ ಕೆಲಸವು ಅಧಿಕವಾಗಿದ್ದು, ಅದನ್ನು ಮಾಡಲು ಅಸಮರ್ಥಳಾದಾಗ ಆಕೆ ಏನು ಮಾಡಿದಳು ಎಂಬುದನ್ನು ನಾವು ನೋಡುತ್ತೇವೆ. ಒಂದು ಕ್ಷಣ ಆಲೋಚಿಸಿ. ತನ್ನ ಅಧಿಕ ಕೆಲಸವನ್ನು ಆಕೆ ನಿಭಾಯಿಸಲು*

ಸಾಧ್ಯವಾಗದಿದ್ದಾಗ ಆಕೆ ಇನ್ನೇನನ್ನು ಮಾಡಬಹುದಾಗಿತ್ತು? [ಉತ್ತರಕ್ಕಾಗಿ ಕಾಯುತ್ತಿರಿ]. ಅನೇಕ ಕಾರ್ಯಗಳನ್ನು ಮಾಡಬಹುದಿತ್ತು. ಮಾರ್ಥಳು ತನ್ನ ಕೆಲಸವನ್ನು ತಾನು ಪೂರೈಸಲು ಅಸಾಧ್ಯವೆಂದು ಕಂಡುಬಂದಾಗ ಆಕೆ ಮಾಡಬಹುದಾಗಿದ್ದ ಎಲ್ಲಾ ಸಾಧ್ಯವಾದ ಸಂಗತಿಗಳ ಕುರಿತಾಗಿ ಆಲೋಚಿಸುವಂತೆ ಜನರಿಗೆ ಪ್ರೋತ್ಸಾಹಿಸಿ.

23. *ಮಾರ್ಥಳಿಗೆ ಲಭ್ಯವಾಗಬಹುದಾಗಿದ್ದ ಪರಿಹಾರ ಯಾವುದಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ]. *ಸಹಾಯಕ್ಕಾಗಿ ಮಾರ್ಥಳು ಇನ್ಯಾರ ಬಳಿ ಹೋಗಬಹುದಾಗಿತ್ತು?* [ಉತ್ತರಕ್ಕಾಗಿ ಕಾಯುತ್ತಿರಿ]. ಅನೇಕ ಬಾರಿ ನಾವು ಈ ಕಥೆಯನ್ನು ಕೇಳಿಸಿಕೊಂಡಾಗ ಮತ್ತು ಇದರ ಅರ್ಥವನ್ನು ಚರ್ಚಿಸುವಾಗ, ಜನರು ಕೊಡುವ ಕೊನೆಯ ಸಲಹೆಯೆಂದರೆ, ಮಾರ್ಥಳು ಯೇಸುವಿನ ಬಳಿಗೆ ಹೋಗಿ, "ಸ್ವಾಮಿ, ಈ ಎಲ್ಲಾ ಔತಣವನ್ನು ಸಿದ್ಧಪಡಿಸುವುದಕ್ಕೆ ನನಗೆ ಸಾಧ್ಯವಿಲ್ಲ. ನಾನೇನು ಮಾಡಲಿ?" ಎಂದು ಕೇಳಬಹುದಾಗಿತ್ತು ಎಂಬುದೇ.

24. *ಮಾರ್ಥಳು ಬಹಳ ಸಂಕೋಚ ಸ್ವಭಾವದವಳಾಗಿದ್ದರಿಂದ ಆಕೆ ಯೇಸುವಿನ ಬಳಿಗೆ ಹೋಗಿ, ಸಹಾಯಕ್ಕಾಗಿ ಆತನನ್ನು ಕೇಳಿಕೊಳ್ಳಲಿಲ್ಲವೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಮಾರ್ಥಳ ಮನೋಭಾವನೆಯನ್ನು ನೀವು ಹೇಗೆ ವರ್ಣಿಸಬಲ್ಲಿರಿ?* [ಉತ್ತರಕ್ಕಾಗಿ ಕಾಯುತ್ತಿರಿ]. *ಈ ಕಥೆಯಲ್ಲಿ ಆಕೆಯ ಮನೋಭಾವನೆಯನ್ನು ಯೇಸುವಿನ ಮನೋಭಾವನೆಯೊಂದಿಗೆ ಹೋಲಿಸಿ.*

ಈ ಕಥೆಯಲ್ಲಿ ಮರಿಯಳು **ಯೇಸುವಿನಿಂದ** ಕಲಿಯುತ್ತಿದ್ದರೆ ಇಲ್ಲಿ ಮಾರ್ಥಳು **ಯೇಸುವಿಗೆ** ಕಾರ್ಯಮಾಡುತ್ತಿದ್ದಾಳೆ. ಇಲ್ಲಿ ಯೇಸು ಮಾರ್ಥಳು ಮಾಡುತ್ತಿರುವ ಕಾರ್ಯ ಒಳ್ಳೆಯದಲ್ಲವೆಂದು ಹೇಳಲಿಲ್ಲ. ಇದರಿಂದ ಕಾರ್ಯ / ಕೆಲಸ ಮತ್ತು ಕೃಪೆ ಬಗ್ಗೆ ಚರ್ಚಿಸಲು ದಾರಿಮಾಡಿಕೊಡುತ್ತದೆ.

ನಿಮ್ಮ ಬೋಧನೆಯ ಶೈಲಿಯನ್ನು ನಿಮ್ಮ ಪ್ರಶ್ನೆಗಳು ಹೇಗೆ ತೋರಿಸುತ್ತವೆ

ನೀವು ಕಂಡುಹಿಡಿದಿರುವ ಅದ್ಭುತವಾದ ಅವಲೋಕನಗಳನ್ನು ಕಂಡುಹಿಡಿಯುವುದಕ್ಕೆ ಸಹಾಯ ಮಾಡಲು ನೀವು ಹೇಗೆ ಪ್ರಶ್ನೆಗಳನ್ನು ರೂಪಿಸಬೇಕೆಂಬುದನ್ನು ನಿರ್ಧರಿಸುವುದಕ್ಕಿಂತಲೂ ಮೊದಲು, ಬೋಧಕರು ಪ್ರಶ್ನೆಗಳನ್ನು ಕೇಳುವುದಕ್ಕೆ ಉಪಯೋಗಿಸುವ ಕೆಲವು ಶೈಲಿಗಳ ಕಡೆಗೆ ನಾವು ಗಮನಿಸುವ ಅಗತ್ಯವಿದೆ.

ಕಥೆ ಹೇಳುವವರು ಪ್ರಶ್ನೆಗಳನ್ನು ಕೇಳುವ ರೀತಿಯ ಮೂಲಕ, ಕೇಳುಗರು ತಮ್ಮನ್ನು ನಿರೂಪಣೆಗಾರರನ್ನಾಗಿ ಹೇಗೆ ಗ್ರಹಿಸುತ್ತಾರೆ ಎಂದು ತಿಳಿದುಕೊಳ್ಳುವರು. ಕಥೆ ಹೇಳುವವರ ಧ್ವನಿ, ವ್ಯಕ್ತಪಡಿಸುವಿಕೆ, ಶರೀರದ ಭಂಗಿ ಮತ್ತು ಪ್ರಶ್ನೆಗಳನ್ನು ಕೇಳುವ ಕ್ರಮಗಳಿಂದ ಅವರು ವಿವಿಧ ವ್ಯಕ್ತಿತ್ವಗಳನ್ನು ತೋರಿಸಬಹುದು ಅಂದರೆ, ಬಹಳ ಕಟ್ಟುನಿಟ್ಟಿನ ಶಾಲಾ ಶಿಕ್ಷಕರ ಹಾಗೆ, ಹಿತಚಿಂತನೆಯ ಪ್ರಾಧ್ಯಾಪಕರಾಗಿ ಅಥವಾ ಜೊತೆಯಲ್ಲಿ ಏರುವವರ ಹಾಗೆ.

ಬಹಳ ಕಟ್ಟುನಿಟ್ಟಿನ ಶಾಲಾ ಶಿಕ್ಷಕರ ಶೈಲಿಯು *ಕಥೆ* ಮಾತ್ರದೊಂದಿಗೆ ಅಷ್ಟಾಗಿ ಸರಿದೂಗುವುದಿಲ್ಲ. ಈ ಬಹಳ ಕಟ್ಟುನಿಟ್ಟು ಭಾಗವಹಿಸುವವರನ್ನು, "ಒಂದು ಸರಿಯಾದ ಉತ್ತರವಿದೆ, ಆದರೆ ಇದನ್ನು ತಪ್ಪಾಗಿ ಹೇಳಿದರೆ, ಬಹಿರಂಗವಾಗಿಯೇ ನನಗೆ ಅವಮಾನವಾಗುತ್ತದೆ" ಎಂದು ಭಾವಿಸುವಂತೆ ಮಾಡುತ್ತದೆ. ಹಾಗಾಗಿ ಜನರು ಇದನ್ನು ಹಿಡಿದಿಟ್ಟುಕೊಂಡು ಚೆನ್ನಾಗಿ ಪ್ರತಿಕ್ರಿಯೆಯನ್ನು ಕೊಡುವುದಿಲ್ಲ. *ಕಥೆ* ಮಾತ್ರದ ಇಡೀ ಪ್ರಕ್ರಿಯೆಯಲ್ಲಿ

ದೇವರು ಜನರಿಗೆ ಕೊಟ್ಟಿರುವ ಸಾಮರ್ಥ್ಯವನ್ನು ಅವರು ತರ್ಕ ಮಾಡುವುದಕ್ಕೆ ಮತ್ತು ದೇವರ ವಾಕ್ಯದಿಂದ ಆಳವಾದ ಆತ್ಮೀಕ ಮಾಹಿತಿಯನ್ನು ಕಂಡುಹಿಡಿಯುವುದಕ್ಕೆ ಅವರಿಗೆ ಪ್ರೋತ್ಸಾಹ ಮಾಡುತ್ತಿರುವುದರ ನಿಮಿತ್ತ, ನಾವು ಒಬ್ಬ ಕಟ್ಟುನಿಟ್ಟಿನ ಶಾಲಾ ಶಿಕ್ಷಕರಾಗಿ ವರ್ತಿಸಲು **ಬಯಸುವುದಿಲ್ಲ**!

ಹಿತಚಿಂತನೆ ಮಾಡುವ ಪ್ರಾಧ್ಯಾಪಕರುಗಳು ಕನಿಕರವುಳ್ಳವರು ಮತ್ತು ಮುಗುಳ್ನಗೆಯವರು ಆಗಿರುತ್ತಾರೆ. ಆದರೆ, ಇವರು ಕೇಳುವ ಪ್ರಶ್ನೆಗಳಲ್ಲಿಯೇ ಪ್ರಾಧ್ಯಾಪಕರಾಗಿ ಇವರಿಗೆ ಮೊದಲೇ ಸರಿಯಾದ ಉತ್ತರ ತಿಳಿದಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಕಥೆ ಹೇಳುವವರು, "ನಾನು ಜ್ಞಾನದ ಪರ್ವತದ ಮೇಲೆ ನಿಂತಿರುವೆನು. ಹಾಗಾಗಿ ನನಗೆ ಈಗಾಗಲೇ ತಿಳಿದಿರುವ ಮಾಹಿತಿಯನ್ನು ನೀವು ಪಡೆದುಕೊಂಡಿರುವಿರಿ ಎಂಬುದನ್ನು ತೋರಿಸುವುದಕ್ಕೆ ಪರ್ವತದ ಮೇಲಕ್ಕೆ ನೀವು ಏರಲು ಸಮರ್ಥರಾಗಿರುವಿರೇ?" ಎಂದು ಹೇಳುತ್ತಿರುವ ಹಾಗೆ ಕೇಳುಗರು ಗ್ರಹಿಸುತ್ತಾರೆ. ಕಲಿಯುವವರು ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಆದರೆ ನೀವು ಗಮನಿಸುವುದಾದರೆ, ಪ್ರತಿಕ್ರಿಯೆ ನೀಡುವವರು ಭಾಗವಹಿಸುವವರಾಗಿದ್ದು ಇವರು ಆಲೋಚಿಸುವುದರಲ್ಲಿ ತೀಕ್ಷ್ಣರು ಮತ್ತು ಸರಿಯಾದ ಉತ್ತರಗಳನ್ನು ಕೊಡುವುದಕ್ಕೆ ಪಳಗಿದವರೂ ಆಗಿರುವರು ಎಂಬುದನ್ನು ನೋಡುವಿರಿ. ಈ ರೀತಿಯಾದ ಕೆಲವೇ ಕೆಲವರು ಈ ಶೈಲಿಯ ಕಥೆಗಾರರನ್ನು ಇಷ್ಟಪಡುತ್ತಾರೆ. ಗುಂಪಿನ ಇನ್ನಿತರರಿಗಿಂತಲೂ ಬಹಳವಾಗಿ ತಿಳಿದುಕೊಂಡಿರುವಂತಹ ಈ ಆಯ್ದ ಗುಂಪಿನ ಭಾಗದಲ್ಲಿ ಭಾಗವಹಿಸುವುದು ಒಂದು ಮೋಜಿನ ಸಂಗತಿಯಾಗಿರುತ್ತದೆ.

ದುರದೃಷ್ಟವಶಾತ್, ಗುಂಪಿನಲ್ಲಿರುವ "ಉಳಿದ ಜನರು" ಚರ್ಚೆಯಲ್ಲಿ ಭಾಗವಹಿಸುವುದಿಲ್ಲ. ಅವರು ಎಂದಿಗೂ ಬುದ್ಧಿವಂತರು ಎಂದು ಭಾವಿಸಿಕೊಳ್ಳಲಿಲ್ಲ; ಅವರಿಗೆ ತಮ್ಮ ಬಗ್ಗೆ ಖಚಿತತೆ ಇರುವುದಿಲ್ಲ; ಅವರೂ ಸಹ ಮೇಲೆ ಏರಲು ಸಾಧ್ಯ ಎಂಬುದನ್ನು ನಂಬುವುದಿಲ್ಲ.

ಜೊತೆಯಲ್ಲಿ ಏರುವಂತಹ ಕಥೆ ಹೇಳುವವರು ತಾವೆಲ್ಲರೂ ಒಂದು ಪರ್ವತವನ್ನು ಹತ್ತುತ್ತಿರುವೆವು, ಮತ್ತು ಅವರೆಲ್ಲರೂ ಸೇರಿ ಒಟ್ಟಾಗಿ ಮಾಹಿತಿಯನ್ನು ಕಂಡುಹಿಡಿಯುತ್ತಿರುವೆವು ಎಂದು ಕೇಳುಗರು ಭಾವಿಸುವಂತೆ ಚಾಣಕ್ಷತೆಯಿಂದ ಅವರಿಗೆ ಸಹಾಯ ಮಾಡಬಹುದು.

ಜೊತೆಯಲ್ಲಿ ಹತ್ತುವವರನ್ನು ಖುದ್ದಾಗಿ ಕರೆದುಕೊಂಡು ಹೋಗುವುದು ಕಥೆ ಹೇಳುವಂತವರು ಅಳವಡಿಸಿಕೊಳ್ಳಬೇಕಾದಂತಹ ಒಂದು ಸವಾಲಿನ ಪಾತ್ರವಾಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಿ. ಆದರೆ, ಈ ಪಾತ್ರವು ಪ್ರತಿಯೊಬ್ಬರಿಗಾಗಿ ಬಹಳ ಪ್ರತಿಫಲ ನೀಡುವಂತಹುದೂ ಸಹ ಆಗಿದೆ. ಇದು ಸ್ವಾಭಾವಿಕವಾಗಿ ಎಲ್ಲರೂ ಪಾಲ್ಗೊಳ್ಳುವಂತೆ ಆಹ್ವಾನಿಸುತ್ತದೆ ಮತ್ತು ಭಾಗವಹಿಸುವವರಲ್ಲಿ ಹಾಗೂ ಕಥೆ ಹೇಳುವವರಲ್ಲಿ ಒಂದೇ ರೀತಿಯ ಗರ್ವವನ್ನು ತರುವುದರಲ್ಲಿ ಬಹಳ ಕಡಿಮೆ ಅವಕಾಶವನ್ನು ಕೊಡುತ್ತದೆ.

ಒಂದು ಕಾರ್ಯಾಗಾರದ ಊಟದ ವಿರಾಮದ ಸಮಯದಲ್ಲಿ, ಇದರಲ್ಲಿ ಭಾಗವಹಿಸಿದ್ದ ಒಬ್ಬ ವ್ಯಕ್ತಿ ಕಥೆ ಹೇಳುವವರ ಜೊತೆಯಲ್ಲಿ ಹತ್ತುವವರಾಗಿದ್ದಾಗ ಆಗುವ ಮೌಲ್ಯದ ಕುರಿತಾಗಿ ಪರಿಶೀಲಿಸಿದರು. ಈಕೆ ಹೇಳಿದರು, "ನಾನು ನಿಮ್ಮ ಮಾರ್ಥ-ಮರಿಯಳ ಕಥೆಯನ್ನು ನಿಜವಾಗಲೂ ಇಷ್ಟಪಟ್ಟೆ. ಇದು ನಾನು ಅಧಿಕವಾಗಿ ಆಲೋಚಿಸುವಂತೆ ಮಾಡಿತು. ಇದರಲ್ಲಿ ನಾನು ಬಹಳವಾಗಿ ಇಷ್ಟಪಟ್ಟ ಸಂಗತಿ ಏನೆಂಬುದು ನಿಮಗೆ ಗೊತ್ತೇ?" ನಾನು "ಯಾವುದು?" ಎಂದು ಮುಗುಳ್ನಗುತ್ತಾ ಪ್ರತಿಕ್ರಿಯಿಸಿದೆ.

"ನಿಮಗೇ ಉತ್ತರಗಳು ತಿಳಿಯದಿದ್ದ ಸಮಯಗಳಲ್ಲಿ, ಆ ಉತ್ತರಗಳನ್ನು ನಾವು ನಿಮಗಾಗಿ ಕಂಡುಹಿಡಿಯುವಂತೆ ಅನುಮತಿಸಿದ್ದು" ಎಂದು ಹೇಳಿದರು.

"ಓಹ್!" ಎಂದು ನಾನು ಹೀಗೆ ವಿವರಿಸಿದೆ, "ಇದು ಒಳ್ಳೆಯದು. ನಾವು *ಕಥೆ* ಮಾತ್ರದಲ್ಲಿ ಬೋಧಿಸುತ್ತಿರುವುದನ್ನು ಮಾದರಿಯಲ್ಲಿ ಮಾಡುವುದಕ್ಕೆ ಶಕ್ತನಾಗಿದ್ದೆ. ನಿಜವಾಗಿಯೂ, ಲೋಕದೆಲ್ಲೆಡೆ ನಾನು ಆ ಕಥೆಯನ್ನು ಅನೇಕ ಬಾರಿ ಹೇಳಿರುವೆನು, ಹಾಗಾಗಿ ನಾನು ಪ್ರಶ್ನೆಗಳನ್ನು ಕೇಳಿದಾಗ, ನನಗೆ ಉತ್ತರಗಳು ಬಹಳಷ್ಟು ತಿಳಿದಿರುತ್ತವೆ. ಆದರೆ ಕಂಡುಹಿಡಿಯುವುದಕ್ಕೆ ನಿಮಗೆ ಎಲ್ಲಾ ಅವಕಾಶವನ್ನು ಕೊಡಬೇಕೆಂದು ಬಯಸುವುದರಿಂದ ನಾನು ಉತ್ತರ ಕೊಡದೆ ಇರುತ್ತೇನೆ."

ಆಕೆ ತಲೆಯಾಡಿಸುತ್ತಾ, "ಓಹ್, ಅದು ನನಗೆ ಗೊತ್ತು, ಆದರೆ ನಿಮಗೆ ಯಾವ ಸ್ಥಳದಲ್ಲಿ ಉತ್ತರ ಗೊತ್ತಿರುವುದಿಲ್ಲವೋ ಅಲ್ಲಿ ನಾವು ಉತ್ತರಗಳನ್ನು ಕಂಡುಹಿಡಿಯುವಂತೆ ಅನುಮತಿಸಿದುದರ ಕುರಿತಾಗಿ ಮಾತನಾಡುತ್ತಿರುವೆನು. ನಿಮಗೆ ಎಲ್ಲವೂ ತಿಳಿದಿಲ್ಲ ಎಂಬುದು ನಮಗೆ ಗೊತ್ತಾಗುವಂತೆ ಮಾಡಿದಾಗ ನಿಮಗದು ಭಯವನ್ನು ಉಂಟುಮಾಡಲಿಲ್ಲ ಎಂಬುದನ್ನು ನಾನು ಇಷ್ಟಪಟ್ಟೆ" ಎಂದು ಹೇಳಿದರು.

ಹಾಂ?... ನಾನು ನನ್ನ ಕೆಲಸವನ್ನು ಮಾಡಿರುವೆನೆಂದು ನಂತರ ನನಗೆ ತಿಳಿಯಿತು. ನಾವು ಶೋಧಿಸಿದ ಮತ್ತು ಗುಂಪು ಕಂಡುಹಿಡಿದಂತಹ ಸಂಗತಿಗಳು ನನಗೆ ಈಗಾಗಲೇ ತಿಳಿದಿದ್ದವು ಎಂಬುದನ್ನು ನಾನು ಒತ್ತಿ ಹೇಳುವ ಅಗತ್ಯವಿರಲಿಲ್ಲ. ಆಕೆ ಮತ್ತು ಇನ್ನಿತರರು ತುಂಬು ಹೃದಯದಿಂದ ಭಾಗವಹಿಸಿದ್ದರು. ಅವರು ಆಲೋಚಿಸುವುದಕ್ಕೆ ಮತ್ತು ಕಂಡುಹಿಡಿಯುವುದಕ್ಕೆ ಸ್ವತಂತ್ರವನ್ನು ಮತ್ತು "ಅನುಮತಿ"ಯನ್ನು ಗ್ರಹಿಸಿದ್ದರು. ನಾವು ವಾಸ್ತವವಾಗಿ ಒಟ್ಟಾಗಿ ಪರ್ವತವನ್ನು ಹತ್ತಿದ್ದೆವು.

ನನಗೆ ಚಿರಪರಿಚಿತವಿರುವ ಕಥೆಗಳನ್ನು ನಾನು ಹೇಳುವಾಗಲೂ ಸಹ, ಇದರಲ್ಲಿ ಭಾಗವಹಿಸುವವರು ನಾನು ಗುರುತಿಸದೇ ಇರುವ ಹೊಸ ಆತ್ಮೀಕ ಅವಲೋಕನವನ್ನು ಮತ್ತು ಆತ್ಮೀಕ ಅನ್ವಯಿಸುವಿಕೆಗಳನ್ನು ಕಂಡುಹಿಡಿಯುವವರಾಗಿರುತ್ತಾರೆ ಎಂಬುದನ್ನು ನಾನು ಹೇಳಲೇಬೇಕಾಗಿದೆ. ಆದರೆ ಆ ನಿಧಿಗಳು ನಾನು ನೇರವಾಗಿ ಪ್ರಶ್ನೆಗಳನ್ನು ಕೇಳುವುದರ ಫಲಿತಾಂಶದಿಂದ ಬಂದಂತಹ ಅಪರೂಪದ ನಿಧಿಗಳಾಗಿರುತ್ತವೆ. ಆ ನಿಧಿಗಳು ನೇರವಾಗಿ ಚರ್ಚೆಯು ನಡೆಯುತ್ತಿರುವಾಗ ಮತ್ತು ಪವಿತ್ರಾತ್ಮನ ಸ್ವರವನ್ನು ಕೇಳಿಸಿಕೊಳ್ಳುವವರಿಗೆ ಆತನು ಕೊಡುವ ಸೌಮ್ಯ ಮಾರ್ಗದಿಂದ ಕಂಡುಹಿಡಿಯಲ್ಪಡುವ ನಿಧಿಗಳಾಗಿರುತ್ತವೆ. ಜನರು ಈಗತಾನೇ ಏನನ್ನು ಅರ್ಥ ಮಾಡಿಕೊಂಡಿರುವರೋ ಅದನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದಕ್ಕೆ *ಕಥೆ* ಮಾತ್ರದ ವೇದಿಕೆಯು ಸ್ಥಳವನ್ನು ಒದಗಿಸಿಕೊಡುತ್ತದೆ.

ಜೊತೆ ಜೊತೆಯಲ್ಲಿ ಹತ್ತುವವರಾಗುವುದು ಹೇಗೆ

ಪ್ರಶ್ನೆಗಳನ್ನು ಕೇಳುವ ರೀತಿಯು ಭಾಗವಹಿಸುವಿಕೆಗೆ ಪ್ರೋತ್ಸಾಹವನ್ನು ತರುತ್ತದೆ ಅಥವಾ ನಿರುತ್ಸಾಹವನ್ನು ತರುತ್ತದೆ. ಉದಾಹರಣೆಗೆ, ಕಥೆ ಹೇಳುವವರು, "ಅಬ್ರಹಾಮನು ಎಷ್ಟು ಒಂಟೆಗಳನ್ನು ತಂದಿದ್ದನು?" ಎಂದು ಕೇಳಿದರೆ, ಇಲ್ಲಿ ಒಂದು ನಿಖರವಾದ ಉತ್ತರವಿದೆ ಎಂಬುದು ಕೇಳುಗರಿಗೆ ತಿಳಿದಿದೆ. ಅವರು, "ನಾನು ಸರಿಯಾದ ಉತ್ತರವನ್ನು

ಕೊಡುವುದು ಉತ್ತಮವಾಗಿರುತ್ತದೆ" ಎಂದು ಆಲೋಚಿಸುತ್ತಿರುತ್ತಾರೆ. ಈ ರೀತಿಯಾದ ಪ್ರಶ್ನೆಯು ಒಂದು ಮೌನದ ಭಾವನೆಯನ್ನು ಉಂಟುಮಾಡುತ್ತದೆ ಮತ್ತು ಚರ್ಚೆಯ ಹೆಚ್ಚಿನಾಂಶವನ್ನು ಮುಚ್ಚಿಬಿಡುತ್ತದೆ.

ಅದರ ಬದಲು, ನೀವು ಆಶ್ಚರ್ಯಪಡುವವರಾಗಿರುವಂತೆ ಕಾಣುವ ಧ್ವನಿಯಿಂದ, "ಹಾಗಾದರೆ, ಅಬ್ರಹಾಮನ ಬಳಿ ಎಷ್ಟು ಒಂಟೆಗಳಿದ್ದವು?..." ಎಂದು ಕೇಳಿ. ನಿಮ್ಮ ಭಂಗಿ, ಮುಖದ ಭಾವನೆ ಮತ್ತು ಧ್ವನಿಯು, ನೀವೂ ಸಹ ಸಂಖ್ಯೆಯನ್ನು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ಪ್ರೇರೇಪಿಸುತ್ತದೆ. ಇದು ಭಾಗವಹಿಸುವವರು ವೈಯಕ್ತಿಕವಾಗಿ ಸಹಾಯ ಮಾಡುವುದಕ್ಕೆ ಪ್ರೋತ್ಸಾಹಿಸುತ್ತದೆ. ಒಂದು ವೇಳೆ ಯಾರಾದರೂ, "12" ಎಂದು ಹೇಳಿದರೆ, ಆಗ ನೀವು "ಇದು ಹನ್ನೆರಡೋ ಅಥವಾ ಅದಕ್ಕಿಂತಲೂ ಸ್ವಲ್ಪ ಹೆಚ್ಚಾಗಿದೆಯೋ ಎಂದು ನೋಡೋಣ" ಎಂಬುದಾಗಿ ಪ್ರತಿಕ್ರಿಯಿಸಬಹುದು. ಮತ್ತೊಬ್ಬರು, "14" ಎಂದು ಹೇಳಿದಾಗ, ನೀವು "ಆಹ್. ನಾನು ಒಪ್ಪಿಕೊಳ್ಳುತ್ತೇನೆ, 14 ಎಂಬುದಾಗಿ ನನಗೂ ಅನ್ನಿಸುತ್ತದೆ. ಧನ್ಯವಾದಗಳು. ಒಳ್ಳೆಯ ಉತ್ತರ" ಎಂದು ಹೇಳಿ.

ನಿಮಗೆ ಸಹಾಯದ ಅಗತ್ಯವಿದೆಯೆಂಬ ರೀತಿಯಲ್ಲಿ ನೀವು ನಟಿಸಿದಾಗ, ಜನರು ಇನ್ನೂ ಹೆಚ್ಚು ಸ್ವತಂತ್ರದಿಂದ ಪ್ರತಿಕ್ರಿಯಿಸುವರು. ಒಂದು ವೇಳೆ ಇದು ನಡೆಸುವುದರ ಮೂಲಕವಾಗಲಿ ಅಥವಾ ಅವಲೋಕನಗಳಾಗಲಿ ಅಥವಾ ಅನ್ವಯಿಸುವಿಕೆಗಳಾಗಲಿ, ಜನರು ಪರಿಪೂರ್ಣವಾದ ಉತ್ತರಗಳೊಂದಿಗೆ ಸಿದ್ಧರಾಗಬೇಕೆಂದು ಪ್ರಯತ್ನಿಸುವುದರ ಬದಲಾಗಿ, ಅವರು ಸಹಾಯ ಮಾಡುವುದಕ್ಕೆ ಬಯಸುತ್ತಾರೆ ಮತ್ತು ಇದರಲ್ಲಿ ಭಾಗವಹಿಸಲು ನಿರಾಳ ಮನಸ್ಸುಳ್ಳವರಾಗಿರುತ್ತಾರೆ ಮತ್ತು ತಮ್ಮ ಆಲೋಚನೆಗಳನ್ನು ತಿಳಿಸುತ್ತಾರೆ.
ನೀವು ಉಪಯೋಗಿಸುವ ಪ್ರಶ್ನೆಗಳ ಶೈಲಿಯಿಂದ ಜನರಿಗಾಗಿ ನೀವು ಒಂದು ವಾತಾವರಣವನ್ನು ಸೃಷ್ಟಿಸುವಿರಿ. ಬೋಧಕರು ಮತ್ತು ಸಭಾಪಾಲಕರುಗಳು ಭಾಷಣವನ್ನು ಕೊಡುವಾಗ, ಸಾಮಾನ್ಯವಾಗಿ ಅವರು ಎಲ್ಲಾ ಉತ್ತರಗಳನ್ನು ತಿಳಿದಿರುವ ಪಂಡಿತರುಗಳ ಹಾಗೆ ಬೋಧಿಸುವರು ಎಂಬುದಾಗಿ ಗ್ರಹಿಸಲ್ಪಡುತ್ತದೆ. ಲೋಕದಲ್ಲಿನ ಅನೇಕ ಜನರು ಕಲಿಯುವುದಕ್ಕೆ ಚರ್ಚೆಯು ಒಂದು ಮಾರ್ಗವಾಗಿದೆ ಎಂಬುದನ್ನು ಎಂದಿಗೂ ಅನುಭವಿಸಿಲ್ಲ. ಕ್ಲಿಷ್ಟವಾದ ಆಲೋಚನೆಯ ಶೈಲಿಯ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ಹೊಸದಾಗಿ ಭಾಗವಹಿಸುವವರಿಗೆ, ಕಥೆ ಹೇಳುವವರು ತಾವು ಒಬ್ಬ ಶಾಲೆಯ ಶಿಕ್ಷಕರು "ಸರಿಯಾದ" ಉತ್ತರವನ್ನೇ ಅಪೇಕ್ಷಿಸುವ ರೀತಿಯನ್ನು ತೋರಿಸದೆ, ಅವರನ್ನು ಪೋಷಿಸಲು ಸಾಧ್ಯ.

ಮಾಹಿತಿಯು ಪೂರ್ಣವಾಗದಿದ್ದರೂ ಸಹ, ಕಥೆ ಹೇಳುವವರು ಆಶ್ಚರ್ಯದಿಂದ ಮತ್ತು ಆನಂದದಿಂದ ಪ್ರತಿಕ್ರಿಯಿಸಬಹುದು. ನೀವು, "ಓಹ್, ನಾನು ಅದನ್ನು ಮೆಚ್ಚಿದೆ", "ನನಗನ್ನಿಸುತ್ತದೆ ಅಲ್ಲೇ ನಿಮಗೆ ಉತ್ತರವಿದೆ" ಅಥವಾ "ಇದು ನಿಜವಾಗಿಯೂ ಅರ್ಥವನ್ನು ಕೊಡುತ್ತದೆ" ಎಂಬ ಸಂಗತಿಗಳನ್ನು ಹೇಳಬಹುದಾಗಿದೆ.

ಕಥೆಗೆ ಸರಿಯಿಲ್ಲದ ಉತ್ತರ ಅಥವಾ ಹೊಂದಿಕೊಳ್ಳದ ಉತ್ತರಗಳನ್ನು ಕೆಲವೊಮ್ಮೆ ಜನರು ಹಂಚಿಕೊಳ್ಳುತ್ತಾರೆ. ಜೊತೆಯಲ್ಲಿ ಹತ್ತುವವರಾಗಿ ಕಥೆ ಹೇಳುವವರಾದ ನೀವು ಅವರ ಹೇಳಿಕೆಗಳನ್ನು ಪುನಃ ಸರಿಯಾದವುಗಳ ಕಡೆಗೆ ನಡೆಸಬಹುದು ಮತ್ತು ಸ್ಪಷ್ಟೀಕರಣಕ್ಕಾಗಿ ಅವರನ್ನು ಕೇಳುವುದರಿಂದ ತಿದ್ದುವಿಕೆಯನ್ನು ಮಾಡಬಹುದು. ಈ ರೀತಿಯಾಗಿ ಮಾಡುವಂತಹುದು ಭಾಗವಹಿಸುವವರಾಗಿ ಇರಿಸುಮುರಿಸನ್ನು ತರುವುದಿಲ್ಲ.

ಉದಾಹರಣೆಗೆ, ಕೆಲವರು ಒಂದು ಹೇಳಿಕೆಯನ್ನು ನೀಡಿ, ಇದು ಸರಿ ಎಂದು ಹೇಳಬಹುದು, ಆದರೆ ಇದು ಕಥೆಯಲ್ಲಿ ಇಲ್ಲವೆಂಬುದು ನಿಮಗೆ ಖಚಿತವಾಗಿ ತಿಳಿದಿರುತ್ತದೆ. ಆಗ ನೀವು "ಓಹ್, ನನಗೆ ಸಹಾಯ ಮಾಡಿ, ಇದು ಕಥೆಯಲ್ಲಿ

ಎಲ್ಲಿದೆ?" ಎಂದು ಹೇಳಬಹುದು. ಅವರು ಹೇಳಿದ್ದು ಕಥೆಯಲ್ಲಿ ಸಮರ್ಥವಾಗಿಲ್ಲವೆಂಬುದು ನಿಮಗೆ ತಿಳಿದಿದ್ದರೂ ಸಹ, ನಿಮ್ಮ ಮೃದವಾದ ಪ್ರತಿಕ್ರಿಯೆಯು ಆ ವ್ಯಕ್ತಿಗೆ ಬಹಿರಂಗವಾಗಿ ತಿದ್ದುವಿಕೆಯನ್ನು ಮಾಡಿದ್ದಕ್ಕೆ ಅವಮಾನವಾಗದಂತೆ ಅನುಮತಿಸುತ್ತದೆ. ಆ ವ್ಯಕ್ತಿಯು ಸ್ವತಂತ್ರದ ಭಾವನೆಯೊಂದಿಗೆ ಕಂಡುಹಿಡಿಯುವುದನ್ನು ಮುಂದುವರೆಸುವುದಕ್ಕೆ ಪ್ರೋತ್ಸಾಹಿಸಲ್ಪಡುತ್ತಾನೆ.

ಹೇಳಿದಂತಹ ಒಂದು ಸಂಗತಿಯು ಸರಿಯಾಗಿಲ್ಲ ಅಥವಾ ಪ್ರಶ್ನಾರ್ಥಕವಾಗಿದೆ ಎಂದು ನೀವು ಭಾವಿಸುವುದಾದರೆ, ಗುಂಪಿನವರು ಇದಕ್ಕೆ ಏನು ಹೇಳುವರು ಎಂದು ಅವರನ್ನು ಕೇಳುವುದು ಮತ್ತೊಂದು ರೀತಿಯ ಮೃದು ಧೋರಣೆಯಾಗಿರುತ್ತದೆ. ನೀವು, "ಹಾಂ, ಆಸಕ್ತಿಕರವಾಗಿದೆ. ಇನ್ನುಳಿದವರು ಇದರ ಕುರಿತಾಗಿ ಏನೆಂದು ಭಾವಿಸುವಿರಿ ಎಂದು ನಾನು ತಿಳಿಯಲಪೇಕ್ಷಿಸುವೆನು? ಇದನ್ನು ನಾವು ಕಥೆಯಲ್ಲಿ ಹೇಗೆ ನೋಡುವೆವು?" ಎಂದು ಹೇಳಬಹುದು. ಪುನಃ, ಚರ್ಚೆಯು ಇಡೀ ಗುಂಪಿನೊಂದಿಗೆ ಅನುಮತಿಸುವುದರಿಂದ, ನಿಮ್ಮನ್ನೇ ನೀವು ಶಾಲಾ ಶಿಕ್ಷಕರಾಗಿ ಅಥವಾ ಪ್ರಾಧ್ಯಾಪಕರಾಗಿ ಹೆಚ್ಚಿಸಿಕೊಳ್ಳುವುದಿಲ್ಲ. ಪವಿತ್ರಾತ್ಮನೇ ಶ್ರೇಷ್ಠ ಬೋಧಕನಾಗಿ ಮತ್ತು ದೇವರ ವಾಕ್ಯವೇ ಅಂತಿಮವಾದ ಅಧಿಕಾರವಾಗಿ ಅನುಮತಿಸಲ್ಪಡುತ್ತದೆ.

ನಿಮಗೆ ಯಾವುದೋ ಸಂಗತಿ ತಿಳಿದಿಲ್ಲ ಎಂದು ನೀವು ಎಷ್ಟು ಹೆಚ್ಚು ನಟಿಸುವಿರೋ, ಅಷ್ಟು ಹೆಚ್ಚಾಗಿ ಜನರು ಸಹಾಯಕರಾಗಿರುತ್ತಾರೆ. ಪ್ರಶ್ನೆಗಳನ್ನು ಕೇಳುವುದರಲ್ಲಿ ಮತ್ತು ಚರ್ಚೆಗಳನ್ನು ನಡೆಸುವುದರಲ್ಲಿ ಇದನ್ನೇ ನೀವು ಖುದ್ದಾಗಿ ಮಾಡಲು ಪ್ರಯತ್ನಿಸುತ್ತಿರುವಿರಿ. ನಿಮಗೆ ಎಲ್ಲವೂ ತಿಳಿದಿದೆ ಎಂಬ ರೀತಿಯಲ್ಲಿ ನೀವು ವರ್ತಿಸಿದರೆ, ಜನರು ನಿಮಗೆ ಉತ್ತರವನ್ನು ನೀಡಲು ಇನ್ನೂ ಹೆಚ್ಚಾಗಿ ಹಿಂಜರಿಯುವವರಾಗಿರುತ್ತಾರೆ. ನಾವು ಹೇಳಿದ ಹಾಗೆಯೇ, ಒಂದು ತರಗತಿಯ ವಾತಾವರಣವನ್ನು ಸೃಷ್ಟಿಸುವುದಕ್ಕೆ ಪ್ರಯತ್ನಿಸಬೇಡಿ ಏಕೆಂದರೆ ಆ ವಾತಾವರಣದಲ್ಲಿ ಜನರು ಒಂದು ತಪ್ಪಾದ ಉತ್ತರವನ್ನು ಹೇಳಲೂ ಹೆದರುತ್ತಾರೆ.

ನಿಮ್ಮ ಪ್ರಶ್ನೆಗಳನ್ನು ಸಂಭಾವನಾ ಪದಗಳೊಂದಿಗೆ ಮತ್ತು ಹೇಳಿಕೆಗಳೊಂದಿಗೆ ಪ್ರಾರಂಭಿಸಿ, ಅಂದರೆ: "ಒಂದು ವೇಳೆ ನಾನು ಆಶ್ಚರ್ಯಪಟ್ಟಂತೆ...", "ಈ ರೀತಿ ಇದ್ದಿದ್ದರೆ...?", "ಇದು ಸಾಧ್ಯವಾಗುವಂತೆ ಕಾಣುತ್ತದೆಯೇ...?", "ಇದು ಈ ರೀತಿ ಇದೆಯೇ...?", "ನೀವು ಏನು ನೋಡುತ್ತಿರುವಿರಿ...?", "ಇದರ ಅರ್ಥ ಏನಾಗಿರಬಹುದು...?" ಈ ಎಲ್ಲಾ ಪ್ರಾಯೋಗಿಕವಾದ, ಕಂಡುಹಿಡಿಯಲ್ಪಡುವ ರೀತಿಯ ಹೇಳಿಕೆಗಳು ಜೊತೆಯಲ್ಲಿ ಕಂಡುಹಿಡಿಯುವವರಿಗೆ ಒಂದು ವಾತಾವರಣವನ್ನು ಒದಗಿಸಿಕೊಡುವಂತೆ ಕಥೆ ಹೇಳುವವರಿಗೆ ಸಹಾಯ ಮಾಡುತ್ತದೆ.

ಕಥೆ ಮಾತ್ರದ ಶೈಲಿಯಲ್ಲಿ ಬಹುಶಃ ಬಹಳ ಸವಾಲಾಗಿರುವ ಅಂದರೆ ಕಲಿತುಕೊಳ್ಳುವುದಕ್ಕೆ ಬಹಳ ಅಭ್ಯಾಸವನ್ನು ಮಾಡಬೇಕಾಗಿರುವ ಅಂಶವೆಂದರೆ... ಪ್ರಶ್ನೆಗಳನ್ನು ಹೇಗೆ ಕೇಳಬೇಕೆನ್ನುವ ಕೌಶಲ. ನೀವು ತಿಳುವಳಿಕೆ ಇಲ್ಲದಿರುವವರಂತೆ ಕಾಣುವುದಕ್ಕೆ ಪ್ರಯತ್ನಿಸುತ್ತಿಲ್ಲ ಅಥವಾ ನಿಮಗೆ ನಿಜವಾಗಿಯೂ ತಿಳಿದಿರುವಂತಹುದು ನಿಮಗೆ ತಿಳಿದಿಲ್ಲ ಎಂಬಂತಿರುವುದು ಎಂದಲ್ಲ. ಅದರ ಬದಲು, ನೀವೂ ಕೂಡ ಅವರೊಂದಿಗೆ ಕಲಿಯುವವರಾಗಿರುವಿರಿ ಎಂದು ತಿಳಿಸುವುದಕ್ಕೆ ಇದು ಪ್ರಶ್ನೆಗಳನ್ನು ಕೇಳುವ ಒಂದು ಮಾರ್ಗವಾಗಿದೆ. ಈ ರೀತಿಯಾಗಿ ಕೇಳುವಂತಹ ಪ್ರಶ್ನೆಗಳು ಜನರು ತಮ್ಮ ಉತ್ತರಗಳನ್ನು ಹೇಳುವುದಕ್ಕೆ ಅವರನ್ನು ಪ್ರೋತ್ಸಾಹಿಸುತ್ತದೆ.

ನಿರೂಪಣೆಯ ಹಂತ ಎರಡು: ಆತ್ಮೀಕ ಅನ್ವಯಿಸುವಿಕೆಗಳ ಚರ್ಚೆ

ಆತ್ಮೀಕ ಅನ್ವಯಿಸುವಿಕೆಗಳು. ಈ ಮೊದಲೇ, ನಾವು ಮಾರ್ಥ–ಮರಿಯಳ ಕಥೆಯೆಡೆಗೆ ನೋಡಿದಾಗ, ನಾವು ಕೆಲವು ಅತ್ಯದ್ಭುತವಾದ ಆತ್ಮೀಕ ಅನ್ವಯಿಸುವಿಕೆಗಳನ್ನು ಕಂಡುಹಿಡಿದಿರುವೆವು. ನಾವು ದೇವರ ವಾಕ್ಯದಿಂದ ಕೆಲವು ಮುಖ್ಯವಾದ ಸಂಗತಿಗಳನ್ನು ಕಂಡುಹಿಡಿದೆವು ಮತ್ತು ಆ ಅನ್ವಯಿಸುವಿಕೆಗಳನ್ನು ನಮ್ಮ ಜೀವಿತಗಳಲ್ಲಿ ಹೇಗೆ ಅಳವಡಿಸಿಕೊಳ್ಳಬೇಕೆಂದು ದೇವರು ಬಯಸಬಹುದೆಂಬುದರ ಕುರಿತಾಗಿಯೂ ಸಹ ನಾವು ಆಲೋಚಿಸಿದೆವು.

ಕಥೆ ಮಾತ್ರದ ಮುಂದಿನ ಪ್ರಕ್ರಿಯೆ ಯಾವುದೆಂದರೆ, ನೀವು ಕಂಡುಹಿಡಿದಿರುವ ಆತ್ಮೀಕ ಅನ್ವಯಿಸುವಿಕೆಗಳ ಕಡೆಗೆ ಕೇಳುಗರನ್ನು ನಡೆಸಲು ಸಾಧ್ಯವಾಗುವಂತೆ ಮಾಡುವ ಚರ್ಚೆಯ ಪ್ರಶ್ನೆಗಳನ್ನು ಕೇಳುವುದು. ಈ ಕೌಶಲ್ಯವು ಸವಾಲಾಗಿರುವಂತಹುದು ಮತ್ತು ಪ್ರತಿಫಲ ಕೊಡುವಂತಹುದೂ ಆಗಿದೆ. ನೀವು ಕಂಡುಹಿಡಿದಿರುವ ನಿಧಿಗಳನ್ನು ಹಾಗೆಯೇ ನಿಮ್ಮ ಕೇಳುಗರ ಕೈಗೆ ಒಪ್ಪಿಸಬೇಕೆಂಬ ನಿಮ್ಮ ಶೋಧನೆಯನ್ನು ನೀವು ಎದುರಿಸಬೇಕಾಗುತ್ತದೆ. ಅದರ ಬದಲು, ಕಥೆಯಲ್ಲಿರುವ ನಿಧಿಗಳನ್ನು ಕೇಳುಗರು ತಾವೇ ಖುದ್ದಾಗಿ ಕಂಡುಹಿಡಿಯುವುದಕ್ಕೆ ಸಹಾಯ ಮಾಡುವಂತಿರುವ ಪ್ರಶ್ನೆಗಳನ್ನು ರೂಪಿಸುವ ಕೌಶಲ್ಯವನ್ನು ನೀವು ಬೆಳೆಸಿಕೊಳ್ಳುವ ಅಗತ್ಯವಿದೆ.

ಕೆಳಗಿರುವಂತವುಗಳು ಕೆಲವು ನಮೂನೆಯ ಪ್ರಶ್ನೆಗಳಾಗಿದ್ದು, ಮಾರ್ಥ–ಮರಿಯಳ ಕಥೆಯಲ್ಲಿರುವ ಕೆಲವು ಅನ್ವಯಿಸುವಿಕೆಗಳನ್ನು ಕಂಡುಹಿಡಿಯುವುದಕ್ಕೆ ಜನರಿಗೆ ಸಹಾಯ ಮಾಡುವುದಕ್ಕೆ ಇದರಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು. ಮೊದಲಿನ ಹಾಗೆಯೇ, ನಾವು ಆತ್ಮೀಕ ಅನ್ವಯಿಸುವಿಕೆಗಳನ್ನು ಕಂಡುಹಿಡಿದಾಗ, ಕಥೆಯನ್ನು ಕಾಲಾನುಕ್ರಮದಲ್ಲಿ ಪರೀಕ್ಷಿಸಲಾಗಿದೆ. ಪ್ರತಿ ಬಾರಿ, ಪ್ರಶ್ನೆಗಳನ್ನು ಕೇಳುವುದಕ್ಕೂ ಮುನ್ನ, ಕಥೆಯ ಒಂದು ಚಿಕ್ಕ ಭಾಗವನ್ನು ಪುನಃ ಹೇಳಲಾಗುತ್ತದೆ. ನಂತರ ಕೇಳುಗರ ಅನ್ವಯಿಸುವಿಕೆಗಳನ್ನು ಬಹಳ ಸಾಮಾನ್ಯವಾಗಿ ಮತ್ತು ದೂರಾವಾಗಿರುವುದರಿಂದ ತೆಗೆದುಹಾಕಿ, ಅವು ಬಹಳ ನಿರ್ದಿಷ್ಟವಾಗಿಯೂ ಮತ್ತು ವೈಯಕ್ತಿಕವಾಗಿಯೂ ಇರುವ ಹಾಗೆ ಕೆಲವು ಪ್ರಶ್ನೆಗಳನ್ನು ಕೇಳಲಾಗುತ್ತದೆ.

1. *ಈ ಕಥೆಯಲ್ಲಿ ಮರಿಯಳು ಅಡುಗೆ ಮನೆಯಿಂದ ಹೊರಗೆ ಬಂದು, ತನ್ನ ಸಮಯವನ್ನು ಯೇಸುವಿನ ಬೋಧನೆಯನ್ನು ಕೇಳುವುದಕ್ಕೆ ಆಯ್ಕೆ ಮಾಡಿಕೊಳ್ಳುತ್ತಾಳೆ. ಇದು ನಮಗೆ ಯಾವುದಾದರೂ ಅನ್ವಯಿಸಿಕೊಳ್ಳುವುದನ್ನು ನೀಡುವಂತಹುದೋ? ಇಂದು ನಿಜವಾಗಿಯೂ ಒಬ್ಬ ವ್ಯಕ್ತಿ ಯೇಸುವಿನ ಪಾದದ ಬಳಿ ಕುಳಿತು, ಆತನಿಂದ ಕಲಿತುಕೊಳ್ಳಲು ಸಾಧ್ಯವೇ?* [ಉತ್ತರಕ್ಕಾಗಿ ಕಾಯುತ್ತಿರಿ].

   ಕೇಳುಗರು ಕೆಳಕಂಡಂತಹ ಅನ್ವಿಯಿಸುವಿಕೆಗಳ ಬಳಿಗೆ ಬರುತ್ತಾರೆಂದು ನಾವು ನಿರೀಕ್ಷಿಸುತ್ತೇವೆ. ಈ ದಿನ, ದೇವರ ವಾಕ್ಯವನ್ನು ಓದುವುದು ಅಥವಾ ದೇವರನ್ನು ಆರಾಧಿಸುವುದು ಅಥವಾ ಸಭಾಪಾಲಕರಿಂದ ಮತ್ತು ಬೋಧಕರಿಂದ ಕಲಿತುಕೊಳ್ಳುವುದು, ಯೇಸು ಹೇಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಿರುವಂತೆ ಇರುವಂತಹುದಾಗಿದೆ. ಈದಿನ, ಯೇಸುವಿನ ಪಾದದ ಬಳಿ ಕುಳಿತುಕೊಳ್ಳುವ ಆಲೋಚನೆಯು, ನಮಗೆ ಏನು ಕಲಿಸಲ್ಪಟ್ಟಿದೆಯೋ ಅದರಲ್ಲಿರುವ ಯಥಾರ್ಥವಾದ ಆಸಕ್ತಿಯನ್ನು ತೋರಿಸುತ್ತದೆ.

2. *ಮಾರ್ಥಳು ತೆಗೆದುಕೊಂಡ ಕೆಲಸ ಆಕೆಗೆ ಅತ್ಯಧಿಕವಾದ ಕೆಲಸವಾಗಿತ್ತು ಎಂಬುದನ್ನು ನಾವು ನೋಡಿದೆವು. ಈದಿನ ನಮಗೆ ಅಂತಹ ಸಮಸ್ಯೆ ಸಂಭವಿಸಲು ಸಾಧ್ಯವೇ? ನಿಮಗೆ ಏನನ್ನಿಸುತ್ತದೆ?* [ಉತ್ತರಕ್ಕಾಗಿ ಕಾಯುತ್ತಿರಿ]. ನಾವು ಎಂದಾದರೂ ಅಧಿಕ ಜವಾಬ್ದಾರಿಗಳಿಗೆ "ಹೌದು" ಎಂದು ಹೇಳಲು ಸಾಧ್ಯವೇ?

3. *ಇಂದು ಸೇವೆಯಲ್ಲಿರುವವರು ಅಥವಾ ಕೆಲಸದಲ್ಲಿ ಅಥವಾ ಮನೆಯಲ್ಲಿರುವವರು ತಮಗೆ ನಿಭಾಯಿಸಲು ಸಾಧ್ಯವಾಗುವುದಕ್ಕಿಂತಲೂ ಹೆಚ್ಚಿನ ಕೆಲಸವನ್ನು ತೆಗೆದುಕೊಂಡಿರುವರೋ? ಇದು ಯಾವ ಮಾರ್ಗದಲ್ಲಿ ಅಥವಾ ಸಂದರ್ಭದಲ್ಲಿ ಸಂಭವಿಸಬಹುದಾಗಿದೆ?* [ಉತ್ತರಕ್ಕಾಗಿ ಕಾಯುತ್ತಿರಿ]. *ನಾವು ಮಾಡಬೇಕೆಂದು ನಿರ್ಧರಿಸುವ ಕೆಲವು ಸೇವೆಯ ಕೆಲಸಗಳು ಅಥವಾ ಇನ್ನಿತರ ಕೆಲಸಗಳು ನಮಗೆ ಅತಿಭಾರವಾಗಿ ಪರಿಣಮಿಸಲು ಅಥವಾ ಕರ್ತನಿಂದ ಕಲಿತುಕೊಳ್ಳುವ ನಮ್ಮ ಸಮಯವನ್ನು ತೆಗೆದುಹಾಕುವ ಹಾಗಾದರೆ ನಾವು ಹೇಗೆ ಪ್ರತಿಕ್ರಿಯಿಸಬಹುದಾಗಿದೆ?* [ಉತ್ತರಕ್ಕಾಗಿ ಕಾಯುತ್ತಿರಿ].

4. *ಜನರಿಗೆ ಜೀವನದಲ್ಲಿ ಆಯ್ಕೆಗಳಿವೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಒಳ್ಳೆಯ ಕೆಲಸ ಮಾಡುವುದಕ್ಕೆ ಆಯ್ಕೆ ಮಾಡಿರುವುದರಿಂದ ಅವು ನೋಡುವುದಕ್ಕೆ ಒಳ್ಳೆಯ ರೀತಿಯಲ್ಲಿ ಕಾಣುವುದರಿಂದ, ಬಹುಶಃ ಅದು ಕ್ರೈಸ್ತ ಕೆಲಸಗಳಾಗಿದ್ದರೂ ಸಹ, ಜನರಿಗೆ ಹೀಗೆ ಆಯ್ಕೆ ಮಾಡಲು ಸಾಧ್ಯವೇ? ದೇವರು ನಮ್ಮನ್ನು ಮಾಡು ಎಂದು ಹೇಳದಿರುವಂತಹ ಅಥವಾ ಆತನಿಗೆ ಅಗತ್ಯವಾಗಿಲ್ಲದಂತಹ ಸಂಗತಿಯನ್ನು ನಾವು ದೇವರಿಗಾಗಿ ಮಾಡುತ್ತೇವೆ ಎಂದು ಜನರು ಆಯ್ಕೆ ಮಾಡಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಈ ರೀತಿಯಾಗಿ ನಿಮಗೆ ಎಂದಾದರೂ ಸಂಭವಿಸಿದ್ದನ್ನೂ ಅಥವಾ ಅನುಭವಿಸಿದ್ದೂ ಉಂಟೋ? ಇದರ ಕುರಿತಾಗಿ ತಿಳಿಸಿ.*

   ದೇವರಿಗಾಗಿ ಏನಾದರೂ ಮಾಡಬೇಕೆಂದು ಮಾಡುವ ಆಯ್ಕೆಯು, ನಮ್ಮ ರಕ್ಷಕನಿಂದ ಕಲಿತುಕೊಳ್ಳುವ ಸಮಯವನ್ನು ಹೇಗೆ ತೆಗೆದುಹಾಕಬಲ್ಲುದೆಂಬುದನ್ನು ವಿವರಿಸಿ? [ಉತ್ತರಕ್ಕಾಗಿ ಕಾಯುತ್ತಿರಿ]. *ನಾವು ಮಾಡಬೇಕೆಂಬುದಾಗಿ ನಿರ್ಧರಿಸಿರುವ ಸೇವೆಯ ಕಾರ್ಯವು ನಾವು ಕರ್ತನಿಂದ ಕಲಿತುಕೊಳ್ಳುವ ಸಮಯವನ್ನು ಕಸಿದುಕೊಳ್ಳುತ್ತಿದೆ ಎಂದು ನಾವು ಗ್ರಹಿಸಿದಾಗ ಏನು ಮಾಡಬೇಕು?* [ಉತ್ತರಕ್ಕಾಗಿ ಕಾಯುತ್ತಿರಿ]

5. *ಊಟವನ್ನು ಸಿದ್ಧಪಡಿಸುವುದಕ್ಕೆ ಮರಿಯಳು ತನಗೆ ಸಹಾಯ ಮಾಡಲು ಬರುತ್ತಿಲ್ಲ ಎಂದು ಆಕೆಯನ್ನು ಮಾರ್ಥಳು ದೂರುತ್ತಾಳೆ. ಇಂದು ಜನರು ತಮ್ಮ ಸಾಮರ್ಥ್ಯಕ್ಕೂ ಮೀರಿದ ಅನೇಕ ಕಾರ್ಯಗಳನ್ನು ಹೆಗಲೇರಿಸಿಕೊಂಡಾಗ ಅವರು ಯಾವುದನ್ನು ಅಥವಾ ಯಾರನ್ನು ದೂರುವ ನಿರ್ಧಾರಕ್ಕೆ ಬರುತ್ತಾರೆ? ಅಂದರೆ, ಇಂತಹ ಜನರು ಮಿತಿಮೀರಿದ ಕೆಲಸಕ್ಕಾಗಿ ಜವಾಬ್ದಾರಿಯನ್ನು ತಕ್ಷಣವೇ ಸ್ವೀಕರಿಸುತ್ತಾರೋ ಅಥವಾ ಅವರು ಇದಕ್ಕಾಗಿ ಬೇರೆಯವರನ್ನು ದೂರುತ್ತಾರೋ? ನೀವು ಏನನ್ನು ಗಮನಿಸಿರುವಿರಿ?* [ಉತ್ತರಕ್ಕಾಗಿ ಕಾಯುತ್ತಿರಿ].

6. ತನ್ನ ಸಮಸ್ಯೆಯ ಕುರಿತಾಗಿ ಯೇಸು ಚಿಂತಿಸುತ್ತಿಲ್ಲ ಎಂದು ಮಾರ್ಥಳು ಮೂರ್ಖತನದಿಂದ ಯೇಸುವನ್ನು ಧೈರ್ಯವಾಗಿ ದೂರಿದ್ದನ್ನು ನಾವು ನೋಡಿದೆವು. ಇಂದು ಜನರು ತಮ್ಮ ಸಂದರ್ಭಗಳಿಗಾಗಿ ಅಥವಾ ತಾವೇ ಖುದ್ದಾಗಿ ಮಾಡಿದ ನಿರ್ಧಾರಗಳ ನಿಮಿತ್ತ ಬೇರೆಯವರನ್ನು ದೂರುವರೇ? [ಉತ್ತರಕ್ಕಾಗಿ

ಕಾಯುತ್ತಿರಿ]. ತಾವೇ ನಿರ್ಧಾರಗಳನ್ನು ಮಾಡಿ ನಂತರ ದೇವರಿಗೆ ನಮ್ಮ ಬಗ್ಗೆ ಚಿಂತೆಯಿಲ್ಲವೆಂದೂ ಆತನಿಗೇ ಹೇಳುವಂತಹವರನ್ನು ನೀವು ಎಂದಾದರೂ ನೋಡಿರುವಿರೇ? [ಉತ್ತರಕ್ಕಾಗಿ ಕಾಯುತ್ತಿರಿ].

7. *ಮಾರ್ಥಳಿಗೆ ಯೇಸು ಒಬ್ಬ ಬೋಧಕನು ಮತ್ತು ಆತನಿಗೆ ಶಿಷ್ಯರಿರುವರು ಎಂಬುದನ್ನು ತಿಳಿದಿದ್ದಳು ಎಂದು ಕಥೆಯಲ್ಲಿ ನೋಡುತ್ತೇವೆ. ಮಾರ್ಥಳು ಯೇಸುವನ್ನು "ಸ್ವಾಮಿ" ಎಂದು ಕರೆದಳು, ಇದರ ಅರ್ಥ ಆಕೆಯು ಆತನನ್ನು ತನ್ನ ನಾಯಕನಾಗಿ, ತನಗಿಂತ ಹೆಚ್ಚಿನವನಾಗಿ ಆತನನ್ನು ಭಾವಿಸಿದಳು. ನಂತರ ತನ್ನ ಸಮಸ್ಯೆಯನ್ನು ಪರಿಹರಿಸಲು ಏನು ಮಾಡಬೇಕೆಂಬುದನ್ನು ಆಕೆ ಯೇಸುವಿಗೆ ಹೇಳಿದಳು. ಇಂದು ಜನರಿಗೆ ಒಂದು ಸಮಸ್ಯೆಯಿದ್ದು (ಕೆಲವೊಮ್ಮೆ ಅವರು ತಮ್ಮಷ್ಟಕ್ಕೆ ತಾವೇ ಉಂಟುಮಾಡಿಕೊಂಡಿರುತ್ತಾರೆ) ನಂತರ ಬ್ರಹ್ಮಾಂಡದ ದೇವರಿಗೆ ಇದನ್ನು ಹೇಗೆ ಪರಿಹರಿಸುವುದೆಂದು ಹೇಳುವರೇ?* [ಉತ್ತರಕ್ಕಾಗಿ ಕಾಯುತ್ತಿರಿ].

   ಜನರು ಇದನ್ನು ಹೇಗೆ ಮಾಡಲು ಸಾಧ್ಯ? [ಉತ್ತರಕ್ಕಾಗಿ ಕಾಯುತ್ತಿರಿ]. *ನಮ್ಮ ದೇವರನ್ನು "ಸ್ವಾಮಿ" ಎಂದು ಕರೆದು, ನಂತರ ನಮ್ಮಷ್ಟಕ್ಕೆ ನಾವೇ ಉಂಟುಮಾಡಿಕೊಂಡ ಸಮಸ್ಯೆಗಳನ್ನು ಪರಿಹರಿಸುವುದು ಹೇಗೆಂದು ಆತನಿಗೇ ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ? ನಿಮಗೆ ಏನನ್ನಿಸುತ್ತದೆ?* [ಉತ್ತರಕ್ಕಾಗಿ ಕಾಯುತ್ತಿರಿ].

8. ದೂಷಣೆಗಳ ಕುರಿತಾಗಿರುವ ಇದು ಆಸಕ್ತಿಕರವಾಗಿದೆ: ಜನರು ತಮಗೆ ನಿಭಾಯಿಸಲು ಸಾಧ್ಯವಾಗದಂತಹ ಸಂಗತಿಗಳನ್ನು ನಾವು ತೆಗೆದುಕೊಂಡಾಗ ಮತ್ತು ಆನಂತರ ಇದಕ್ಕಾಗಿ ಬೇರೆ ಜನರು ನಮಗೆ ಸಹಾಯ ಮಾಡುತ್ತಿಲ್ಲ ಎಂದು ದೇವರನ್ನು ದೂರಿದಾಗ, ಆತನು ಹೇಗೆ ಭಾವಿಸಬಹುದು? [ಉತ್ತರಕ್ಕಾಗಿ ಕಾಯುತ್ತಿರಿ].

9. ಮರಿಯಳು ಒಳ್ಳೆಯ ಭಾಗವನ್ನು ಆರಿಸಿಕೊಂಡಿದ್ದಳು, ಆದರೂ ಸಹ ಆಕೆಯ ಸಹೋದರಿ ಮಾರ್ಥಳು, ಇದಕ್ಕಾಗಿ ಆಕೆಯನ್ನು ಟೀಕಿಸಿದಳು. ಇಂದು, ಜನರು ಒಂದು ಒಳ್ಳೆಯ ಕೆಲಸವನ್ನು ಮಾಡುವರು, ಆದರೆ ಅವರಿಗೆ ಅಗೌರವನ್ನು ತೋರಿಸುವರು ಹಾಗೂ ತಮಗೆ ಗೌರವ ಕೊಡಬೇಕಾಗಿರುವವರೇ ಏನು ಮಾಡಬೇಕೆಂದು ಅವರಿಗೆ ಹೇಳುವ ಹಾಗೆ ಎಂದಾದರೂ ಸಂಭಾವಿಸಿದೆಯೇ? [ಉತ್ತರಕ್ಕಾಗಿ ಕಾಯುತ್ತಿರಿ]. ಇದು ಯಾವ ರೀತಿಗಳಲ್ಲಿ ಅಥವಾ ಯಾವ ಸ್ಥಳಗಳಲ್ಲಿ ಸಂಭವಿಸಬಹುದಾಗಿದೆ? ಮನೆಯಲ್ಲಿರಬಹುದು, ಕೆಲಸದಲ್ಲಿ, ಶಾಲೆಯಲಿ, ಸೇವೆಯಲ್ಲಿ ಅಥವಾ ನಾವು ಸೇವೆ ಮಾಡುವವರ ನಡುವೆ ಇರಬಹುದೇ? [ಉತ್ತರಕ್ಕಾಗಿ ಕಾಯುತ್ತಿರಿ].

   ಒಂದು ಒಳ್ಳೆಯ ಕೆಲಸವನ್ನು ಮಾಡಿದರೂ ಸಹ, ಅವಮಾನಕರ ರೀತಿಯಲ್ಲಿ ವರ್ತಿಸಿದಾಗ ಇದು ಹೇಗನ್ನಿಸುತ್ತದೆ? [ಉತ್ತರಕ್ಕಾಗಿ ಕಾಯುತ್ತಿರಿ]. ಯೇಸು ಆ ರೀತಿಯ ಅಗೌರವವನ್ನು ಹೇಗೆ ನಿಭಾಯಿಸಿದನು ಎಂಬುದನ್ನು ನಾವು ನೋಡಿದೆವು. ಆತನು ಪ್ರತಿಕ್ರಿಯಿಸಿದ ವಿಧಾನದಿಂದ ನಾವು ಏನನ್ನು ಕಲಿಯಬಹುದಾಗಿದೆ?

10. *ಮಾರ್ಥಳ ಹಾಗೆ ಶಾರೀರಿಕ ಕೆಲಸಗಳನ್ನು ಮಾಡುತ್ತಾ, ಅದೇ ಸಮಯದಲ್ಲಿ ದೇವರಿಂದ ಕಲಿತುಕೊಳ್ಳುವುದಕ್ಕೆ ಮತ್ತು ಆರಾಧಿಸುವುದಕ್ಕೆ ಸಾಧ್ಯವೆಂದು ನೀವು ಭಾವಿಸುವಿರೇ? ಇದು ಯಾವ ರೀತಿ ಇರುತ್ತದೆ ಎಂಬುದನ್ನು ವಿವರಿಸುವುದಕ್ಕೆ ಪ್ರಯತ್ನಿಸಿ.* [ಉತ್ತರಕ್ಕಾಗಿ ಕಾಯುತ್ತಿರಿ].

11. *ಇನ್ನೊಂದು ಕಡೆ, ಒಬ್ಬ ವ್ಯಕ್ತಿಯು ಮರಿಯಳ ಹಾಗೆ ಕಲಿತುಕೊಳ್ಳುತ್ತಾ ಮತ್ತು ಸತ್ಯವೇದದ ಅಧ್ಯಯನವನ್ನು ಮಾಡುತ್ತಿದ್ದು, ಆಗಲೂ ಸಹ ಆ ವ್ಯಕ್ತಿಯ ಆಲೋಚನೆಗಳು ನಿಜವಾಗಿಯೂ ಬೇರೆ ಇನ್ನಿತರ ಕಾರ್ಯಗಳ ಮೇಲೆ ಕೇಂದ್ರೀಕೃತವಾಗಿರಬಹುದಾದಂತಹ ಸಾಧ್ಯತೆಗಳು ಇರುಬಹುದು ಎಂದು ನೀವು ಆಲೋಚಿಸುವಿರೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಇದೇ ರೀತಿ ನೀವು (ಅಥವಾ ನಿಮಗೆ ತಿಳಿದಿರುವ ಯಾರಾದರೂ) ಎಂದಾದರೂ ಮಾಡಿರುವಿರೆಂದು ನೀವು ಭಾವಿಸುವಿರೇ?* [ಉತ್ತರಕ್ಕಾಗಿ ಕಾಯುತ್ತಿರಿ].

12. *ನನ್ನ ಸತ್ಯವೇದವನ್ನು ಓದುತ್ತಿದ್ದಾಗ ಮತ್ತು ಪ್ರಾರ್ಥನೆಯನ್ನು ಮಾಡುತ್ತಿದ್ದಾಗ, ನನ್ನ ಮನಸ್ಸು ಅಲೆದಾಡುವುದಕ್ಕೆ ಪ್ರಾರಂಭಿಸಿ, ಆಗ ನಾನು ಬೇರೆ ಸಂಗತಿಗಳ ಕುರಿತಾಗಿ ಆಲೋಚಿಸಲು ಪ್ರಾರಂಭಿಸುವಿರಿ, ಇದು ನಾನು ಮಾಡಬೇಕಾಗಿರುವಂತಹ ಕೆಲವು ಕೆಲಸಗಳ ಕುರಿತಾಗಿದ್ದುದರ ಸಮಯಗಳ ಆಲೋಚಿಸುತ್ತಿದ್ದೆ. ಈರೀತಿ ಯಾರಿಗಾದರೂ ಎಂದಾದರೂ ಸಂಭವಿಸಿದೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಮಾರ್ಥ ಮತ್ತು ಮರಿಯಳ ಈ ಕಥೆಯ ಬೆಳಕಿನಲ್ಲಿ, ಈ ಮಾನಸಿಕ ಅಲೆದಾಟವನ್ನು ನೀವು ಹೇಗೆ ವರ್ಣಿಸುವಿರಿ?* [ಉತ್ತರಕ್ಕಾಗಿ ಕಾಯುತ್ತಿರಿ].

13. *ಮರಿಯಳು ಏನನ್ನು ಆರಿಸಿಕೊಂಡಿರವಳೋ ಅದನ್ನು ಅವಳಿಂದ ತೆಗೆದುಹಾಕಲ್ಪಡುವುದಿಲ್ಲ ಎಂದು ಯೇಸು ಮಾರ್ಥಳಿಗೆ ಹೇಳಿದನು. ಇಂದು ತಾವು ಯೇಸುವನ್ನು ಹಿಂಬಾಲಿಸುವುದಕ್ಕೆ ಮತ್ತು ಆತನು ಹೇಳಿದಂತೆ ಮಾಡುವುದಕ್ಕೆ ನಿರ್ಧಾರ ಮಾಡಿ, ತಮ್ಮ ಕುಟುಂಬಗಳಿಂದ ಅಥವಾ ಸಂಸ್ಕೃತಿಯ ನಿಮಿತ್ತ ಘರ್ಷಣೆಗೆ ಜನರು ಒಳಗಾಗಿರುತ್ತಿರುವರೇ?* [ಉತ್ತರಕ್ಕಾಗಿ ಕಾಯುತ್ತಿರಿ].

    ಮರಿಯಳ ನಿರ್ಧಾರದ ಕುರಿತಾಗಿ ಯೇಸು ಹೇಳಿದ್ದು, ಆಕೆ ಮಾಡಿರುವ ಆಯ್ಕೆಗಳೊಂದಿಗೆ ಯೇಸು ತಾನು ಯಾವುದಕ್ಕೆ ಮಧ್ಯಸ್ಥಿಕೆ ವಹಿಸುತ್ತಾನೆ ಮತ್ತು ಯಾವುದಕ್ಕೆ ಮಧ್ಯಸ್ಥಿಕೆ ವಹಿಸುವುದಿಲ್ಲ ಎಂಬುದರ ಕುರಿತಾಗಿರುವುದು ಇಂದು ನಮಗೆ ಅರ್ಥಗರ್ಭಿತವಾಗಿರುವಂತಹುದಾಗಿದೆಯೇ? [ಉತ್ತರಕ್ಕಾಗಿ ಕಾಯುತ್ತಿರಿ].

14. *ಮರಿಯಳ ಆಯ್ಕೆಯೊಂದಿಗೆ ಮಾರ್ಥಳ ಆಯ್ಕೆಯನ್ನು ಹೋಲಿಕೆ ಮಾಡಿ. ಅವು ಒಂದೇ ರೀತಿಯಾಗಿವೆಯೇ ಅಥವಾ ವ್ಯತ್ಯಾಸವಾಗಿವೆಯೇ?* [ಉತ್ತರಕ್ಕಾಗಿ ಕಾಯುತ್ತಿರಿ]. *ಯಾವ ಸ್ತ್ರೀ ಯೇಸುವಿಗೆ ಕೊಡುತ್ತಿರುವಳು ಮತ್ತು ಯಾವ ಸ್ತ್ರೀ ಯೇಸುವಿನಿಂದ ಪಡೆದುಕೊಳ್ಳುತ್ತಿರುವಳು?* [ಉತ್ತರಕ್ಕಾಗಿ ಕಾಯುತ್ತಿರಿ]. *ಯಾವ ಕ್ರಿಯೆಯನ್ನು ಯೇಸು ಹೆಚ್ಚು ಬೆಲೆಯುಳ್ಳದ್ದಾಗಿ ಎಣಿಸುತ್ತಾನೆ?* [ಉತ್ತರಕ್ಕಾಗಿ ಕಾಯುತ್ತಿರಿ]. ಇದು ನಮಗೆ ಏನಾದರೂ ತೋರಿಸಿಕೊಡಬಲ್ಲದೇ? [ಉತ್ತರಕ್ಕಾಗಿ ಕಾಯುತ್ತಿರಿ].

    ಮರಿಯಳು ಯೇಸುವಿನಿಂದ ಹೊಂದಿಕೊಳ್ಳುತ್ತಿರುವ ಸಮಯದಲ್ಲಿ, ಮಾರ್ಥಳು ಯೇಸುವಿಗಾಗಿ ಕೆಲಸವನ್ನು ಮಾಡುತ್ತಿದ್ದಳು ಎಂದು ಕೇಳುಗರು ಕಂಡುಹಿಡಿಯುವರು ಎಂದು ನಿರೀಕ್ಷಿಸುತ್ತೇವೆ. ಮಾರ್ಥಳು ಮಾಡುತ್ತಿದ್ದ ಕೆಲಸ ಅಗತ್ಯವಾಗಿಲ್ಲದಿರುವುದು ಎಂದು ಯೇಸು ಹೇಳಿದನು.

15. *ನಿಮ್ಮ ಮನಸ್ಸಿಗೆ ಬರುವ ಯಾವ ಧರ್ಮದ ಕುರಿತಾದರೂ ಯೋಚಿಸಿನೋಡಿ. [ಜನರು ಆಲೋಚಿಸುವುದಕ್ಕೆ ವಿರಾಮ ನೀಡಿ]. ಆ ಧರ್ಮದಲ್ಲಿ, ಅದರ ಹಿಂಬಾಲಕರು ಆ ದೇವತೆ ಅಥವಾ ದೇವರುಗಳನ್ನು ಮೆಚ್ಚಿಸಲು ಅಥವಾ ಶಾಂತಿಪಡಿಸಲು ಕೆಲಸಗಳನ್ನು ಮಾಡುತ್ತಿರುವರೇ ಅಥವಾ ಆ ದೇವತೆಯಿಂದ ಉಚಿತವಾಗಿ ಪಡೆದುಕೊಳ್ಳುತ್ತಿರುವುದಕ್ಕೆ ಅವರು ಅವುಗಳನ್ನು ಮಾಡುತ್ತಿರುವರೇ? ಯೇಸು ಬೆಲೆಯೆಂದು ಎಣಿಸಿದಂತಹ ಒಳ್ಳೆಯ ಕೆಲಸಗಳಿಗೆ ಮೊದಲ ಆದ್ಯತೆಯನ್ನು ಕೊಡುವಂತಹ ಒಂದು ಧರ್ಮಕ್ಕೆ ಹೋಲಿಸಿ ನೋಡಿ?* [ಉತ್ತರಕ್ಕಾಗಿ ಕಾಯುತ್ತಿರಿ].

16. *ನಾವು ನೋಡಿದ ಹಾಗೆ, ಮಾರ್ಥಳು ತಾನು ಮಾಡಬಹುದಾದ ಕೆಲಸಕ್ಕಿಂತಲೂ ಅಧಿಕವಾದ ಕೆಲಸವಿದೆ ಎಂಬುದನ್ನು ಗ್ರಹಿಸಿದಾಗ, ಆಕೆ ಮರಿಯಳನ್ನು ಮತ್ತು ಯೇಸುವನ್ನು ದೂರಿದಳೇ ಹೊರತು ತನ್ನನ್ನು ದೂರಲಿಲ್ಲ. ಮಾರ್ಥಳು ತಾನು ಮಾಡಬೇಕೆಂದುಕೊಂಡಿದ್ದ ಕೆಲಸವನ್ನು ಮಾಡಲು ತನ್ನ ಅಸಮರ್ಥತೆಯನ್ನು ಗ್ರಹಿಸಿದಾಗ, ಆಕೆ ಏನು ಮಾಡಬೇಕೆಂದು ಯೇಸುವಿಗೆ ಕೇಳುವಂತಹ ಅವಕಾಶವನ್ನು ಹಗುರವಾಗಿ ಪರಿಗಣಿಸಿದಳು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ನಾವು ನಮ್ಮ ಅಧಿಕವಾದ ಸಮರ್ಪಣೆಯ ಸಮಯಗಳನ್ನು ಹೇಗೆ ನಿಭಾಯಿಸುತ್ತೇವೆ ಎಂಬುದರ ಕುರಿತಾಗಿ ಪುನಃ ಆಲೋಚಿಸಿ. ಜ್ಞಾನವುಳ್ಳ ಆಯ್ಕೆಗಳ ಕುರಿತಾಗಿ ಈ ಕಥೆಯು ನಮಗೆ ಏನನ್ನು ಕಲಿಸುತ್ತದೆ?* [ಉತ್ತರಕ್ಕಾಗಿ ಕಾಯುತ್ತಿರಿ].

    ಮರಿಯಳಿಗೆ ತಾನು ಆಯ್ಕೆ ಮಾಡಿಕೊಂಡ ಸಂಗತಿಯ ನಿಮಿತ್ತ ಆಕೆ ಅದು ಆಕೆಯ ಸಂಸ್ಕೃತಿಯ ವಿರುದ್ಧವಾಗಿ ಹೋಗುವಂತೆ ಮತ್ತು ಆಕೆಯ ಸುತ್ತಮುತ್ತಲಿನವರ ಅಪೇಕ್ಷೆಗೆ ವಿರುದ್ಧವಾಗಿ ಹೋಗುವಂತೆ ಮಾಡಿದರೂ ಸಹ, ಯೇಸುವಿನ ಬಳಿ ಕುಳಿತು ಬೋಧನೆಯನ್ನು ಕೇಳುವಂತಹ ಆಕೆಯ ಆಯ್ಕೆಗಾಗಿ ಯೇಸು ಆಕೆಯನ್ನು ಗೌರವಿಸಿದನು. ಇದು ನಮಗೆ ಏನನ್ನು ಕಲಿಸುವಂತಹುದಾಗಿದೆ? [ಉತ್ತರಕ್ಕಾಗಿ ಕಾಯುತ್ತಿರಿ]. *ದೇವರನ್ನು ತಿಳಿದುಕೊಳ್ಳುವುದಕ್ಕೆ ಬೆಂಬಿಡದೆ ಹೋಗುವುದರಲ್ಲಿ, ಅಥವಾ ಆತನೊಂದಿಗೆ ಸಮಯವನ್ನು ಕಳೆಯುವುದರಲ್ಲಿ, ನಾವು ಎಂದಾದರೂ ನಮ್ಮ ಸಂಸ್ಕೃತಿಗೆ ವಿರುದ್ಧವಾಗಿ ಅಥವಾ ನಮ್ಮ ಮೇಲಿ ಜನರಿಟ್ಟಿರುವ ಅಪೇಕ್ಷೆಗೆ ವಿರುದ್ಧವಾಗಿ ನಾವು ಆಯ್ಕೆ ಮಾಡುವ ಅಗತ್ಯವಿದೆಯೇ? ಹೇಗೆ?*

    ನೀವು ಕಥೆಮಾತ್ರದ ಪದ್ಧತಿಯಲ್ಲಿ ಮಾರ್ಥ ಹಾಗು ಮರಿಯಳ ಕಥೆಯನ್ನು ಕಲಿತಿದ್ದೀರಿ, ನೀವು ಈ ಕಥೆಯನ್ನು ಇತರರಿಗೆ ಬೇರೆ ಬೇರೆ ರೀತಿಯಲ್ಲಿ ತಿಳಿಸಬಹುದು. ನೀವು ಪ್ರಾರ್ಥನೆಯಲ್ಲಿ ಮುಗಿಸಬಹುದು, ಒಂದು ಉತ್ತಮವಾದ ರೀತಿಯನ್ನು ಕಂಡುಕೋಳ್ಳಬಹುದು. ಈ ರೀತಿಯ ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ನೀವು ಈ ಕಥೆಯಲ್ಲಿ ಏನು ಕಲಿತುಕೋಡಿರಿ?.
- ದೇವರು ಕಥೆಯಲ್ಲಿ ನಮಗೆ ಏನನ್ನು ತೋರಿಸಿದನು?.
- ನೀನು ದೇವರ ಬಗ್ಗೆ ಏನನ್ನು ಕಲಿತುಕೋಂಡೆ?
- ನೀನು ಕಥೆಯಿಂದ ಕಲಿತಿರುವುದು ಮುಂದಿನ ವಾರದಲ್ಲಿ ನಿನಗೇನು ಸಹಾಯವಾಗುತ್ತದೆ.

ಕಥೆಯಲ್ಲಿ ಆಳವಾಗಿ ಕಲಿಯಲು ಯಾವ ಪ್ರಶ್ನೇಗಳನ್ನು ಕೇಳಬಹುದು ಎಂಬುದಾಗಿ ಉದಾಹರಣೆಯಾಗಿ ಒಂದು ಕಥೆಯ ಮೂಲಕ ಕಲಿತಿಕೋಳ್ಳಿರಿ:

ಕ್ರಯಾಶೀಲತೆಯ ಹೆಚ್ಚು ಸೇನಬಲ

ಕಥೆಯನ್ನು ಜನರು ಕಲಿತ ಚನ್ನಾಗಿ ಕಲಿತ್ತಿದ್ದರೆಂದು ಕಂಡುಕೋಂಡ ಮೇಲೆ ಕಥೆಯಲ್ಲಿ ನಡೆಸುವವನು ಜನರು ಕಥೆಲ್ಲಿರುವ ಎಲ್ಲಾ ಅಂಶಗಳನ್ನು ಜ್ಞಾಪದಲ್ಲಿಟ್ಟುಕೋಳ್ಳಲು ಕೆಲವು ಕ್ರಯಾಶೀಲತೆಯನ್ನು ವೃದ್ದಿ ಪಡೆಸುಕೋಳ್ಳಲು ಬಲತುಂಬಿಸಬೇಕು.

ಉದಾಹರಣೆಗೆ, ೫ ದಿನದ ತರಭೇತಿ ಕಾರ್ಯಗಾರದಲ್ಲಿ ಬಂದಿರುವ ನಾಯಕರುಗಳು ಸತ್ಯವೇದದ ೨೧ ಕಥೆಗಳನ್ನು ಕಲಿತು ಅವುಗಳಲ್ಲಿ ಆಳವಾಗಿ ಕಲಿತ್ತಿದ್ದರೆ. ಆ ಎಲ್ಲಾ ಕಥೆಗಳನ್ನು ಜ್ಞಾಪನದಲ್ಲಿಟ್ಟುಕೋಳ್ಳಲು ಅವರಿಗೆ ಜ್ಞಾಪನದ ಕ್ರಯಾಶೀಲತೆಯ ಬಲತುಂಬಿಸಿಕೋಳ್ಳಬೇಕು. ಅವರು ಸತತವಾಗಿ ಅದನ್ನು ಅಭ್ಯಾಸ ಮಾಡುತ್ತಿರಬೇಕು.

ಕಥೆ ಕಲಿತವರಿಗೆ ಅವರು ಇತರರಿಗೆ ಆ ಕಥೆಗಳನ್ನು ಹೇಳುವಂತೆ ತಿಳಿಸುವಂತೆ ಹೇಳಿ ಆಗ ಅವರು ಆ ಕಥೆಗಳೆಲ್ಲವನ್ನು ಜ್ಞಾಪನದಲ್ಲಿಟ್ಟುಕೋಳ್ಳಲು ಸಹಾಯವಾಗುತ್ತದೆ. ಅದೇ ರೀತಿ ಅವರು ಕಥೆಯನ್ನು ಪದ್ಯಗಳಾಗು ಮತ್ತು ಹಾಡುಗಳಾಗಿ ಆಡುವಂತೆ ತಿಳಿಸಿ ಆಗ ಅವರಿಗೆ ಪ್ರತಿ ಕಥೆಯು ಅವರ ಜ್ಞಾಪನದಲ್ಲಿದ್ದುಬಿಡುತ್ತದೆ.

ಅವಿಧ್ಯಾವಂತರಿಗೂ ಹಾಗು ಯಾರ ಭಾಷೆಯಲ್ಲಿ ಸತ್ಯವೇದ ಇಲ್ಲವೋ ಅಥವ ವಿಧ್ಯಾವಂತರಾಗಿದ್ದರೂ ಆದರೆ ಸತ್ಯವೇದದ ಕಥೆಗಳನ್ನು ಅವರ ಭಾಷೆಯಲ್ಲಿ ದ್ವನಿಮುದ್ರಿಸಿರುವುದಿಲ್ಲವೋ ಅಂಥಹ ಜನರಿಗೆ ಈ ಕ್ರಯಾಶೀಲತೆಯಿಂದ ಬಲತುಂಬಿಸಿ ಅವರ ಜ್ಞಾನ ವೃದ್ದಿ ಮಾಡಿಕೋಳ್ಳಲು ಈ ಪದ್ಧತಿ ಬಹಳ ಸಹಾಯವಾಗುತ್ತದೆ. ಇಂಥವರಿಗೆ ಇಂಥಹ ಸಹಾಯ ಬೇಕಾಗುತ್ತದೆ.

ಸಿಕ್ಕಿರುವ ಅವಕಾಶವನ್ನು ಸರಿಯಾದ ಸಮಯಕ್ಕೆ ಚನ್ನಾಗಿ ಉಪಯೋಗಿಸುವುದು ಒಂದು ಸಂತೋಷದ ಸಂಗತಿ. ತರಬೇತಿಗೆ ಬೊದಿರುವ ನಾಯಕರ ಯಾವುದಾದರು ಭಾಷೆಯಲ್ಲಿ ಸತ್ಯವೇದದ ಕಥೆಗಳು ಮದ್ರಣವಾಗಿಲ್ಲವೆಂದು ತಿಳಿದುಬಂದರೆ ಆ ತರಭೇತಿ ಕಾರ್ಯಗಾರದಲ್ಲಿ ಬಂದಿರುವ ನಾಯಕರುಗಳು ಒಳ್ಳೆಯ ಕಥೆ ಹೇಳುವವರಾದರೆ ಅವರನ್ನು ಪ್ರತ್ಯೆಕಿಸಿ ಅವರಿಂದ ಸತ್ಯವೇದದ ಕಥೆಗಳನ್ನು ದ್ವನಿಮುದ್ರಣ ಮಾಡಿರಿ.

ಅನೇಕ ವರ್ಷಗಳ ಈ ಎಸ್ ಟಿ ಎಸ್ ಸೇವೆಯಲ್ಲಿ ನಾವು ಹೃದಯದ ಜೋಬು ಎಂಬುದಾಗಿ ಕರೆಯುತ್ತೇವೆ. ಒಂದು ಸಲ ನೀವು ಕಥೆಕಲಿತುಕೋಡರೆ ಆ ಕಥೆಯು ನಿಮ್ಮ ಹೃದಯ ಜೋಬಿನಲ್ಲಿರುತ್ತದೆ.

ಅವಿಧ್ಯಾವಂತರು ಕಾಲಕ್ರಮೇಣ ಅವರು ಕಲಿತಿರುವ ನೂರಾರು ಕಥೆಗಳನ್ನು ಜ್ಞಾಪನದಲ್ಲಿಟ್ಟುಕೋಳ್ಳಲು ಕಷ್ಟಪಡುತ್ತಾರೆ ಕಾರಣ ಅವರು ಅವುಗಳನ್ನು ಕ್ರಮಬದ್ದವಾಗಿ ತಮ್ಮ ಹೃದಯದ ಜೋಬಿನಲ್ಲಿಟ್ಟಿರುವುದಿಲ್ಲ.

ಈ ಸಮಸ್ಯೆಯನ್ನು ಅರಿತ ನಾವು ಹೃದಯ ಜೋಬು ಕಿರು ಪುಸ್ತಕಗಳನ್ನು ಮುದ್ರಿಸುವಂತೆ ಮಾಡಿತು. ಸ್ವಲ್ಪ ದಪ್ಪನಾದ ಪೇಪರಿನಲ್ಲಿ ಜೋಬಿನಲಿ ಇಟ್ಟುಕೋಳ್ಳುವ ಅಳತೆಯುಳ್ಳ ಕಾರ್ಡಗಳಲ್ಲಿ ಆ ಕಥೆಗೆ ಸಂಭಂದಿಸಿದಂತೆ ಅರ್ಥವಾಗುವ ರೀತಿಯಲ್ಲಿ ಒಂದು ಚಿತ್ರವನ್ನು ಬರೆದಿರುತ್ತದೆ. ಅವುಗಳನ್ನು ಒಂದು ರಿಂಗಿನಲ್ಲಿ ಒಟ್ಟಾಗಿ ಸೇರಿಸಿ ಅವುಗಳನ್ನು ಕಥೆ ಹೇಳುವವರು ತಮ್ಮ ಜೋಬಿನಲ್ಲಿಟ್ಟಿಕೋಳ್ಳಬಹುದು. ಇದರಿಂದ ಕಥೆ ಹೇಳುವವರು ಆಚಿತ್ರಪಠವನ್ನು ನೋಡಿ ಕಥೆ ಹೇಳಲು ಸಹಾಯವಾಗುತ್ತದೆ.

ಈ ರೀತಿಯ ಅನೇಕ ಉಪಕರಣಗಳನ್ನು ತಯಾರಿಸಲು ಆಲೋಚನೆಕೋಟ್ಟ ಸೃಷ್ಟಿಕರ್ತನಾದ ದೇವರಿಗೆ ವಂದನೆಗಳು.

ಅಧ್ಯಾಯ 6 : ಚರ್ಚೆಯನ್ನು ನಡೆಸುವುದಕ್ಕಾಗಿ ಸಾಮಾನ್ಯವಾದ ಸೂಚನೆಗಳು

ಚರ್ಚೆಯು ಮುಂದುವರೆಯುತ್ತಿರುವಂತೆಲ್ಲಾ, ನೀವು ಬೋಧಿಸುವಾಗ ದೇವರು ನಿಮ್ಮ ಹಳೆಯ ಅನುಭವಗಳನ್ನು ಮತ್ತು ಸತ್ಯವೇದದ ಜ್ಞಾನವನ್ನು ಪ್ರಶ್ನೆಗಳನ್ನು ರೂಪಿಸುವುದಕ್ಕೆ ಉಪಯೋಗಿಸಬಹುದು. ಚರ್ಚೆ ನಡೆಸುವುದಕ್ಕೆ ಯಾವುದರ ಅಗತ್ಯವಿದೆಯೆಂದು ಪವಿತ್ರಾತ್ಮನಿಗೆ ತಿಳಿದಿದೆ ಹಾಗೂ ನೀವು ಬೋಧಿಸುವಾಗ ಆತನು ನಿಮ್ಮನ್ನು ನಡೆಸುವನು.

ಬಹುಶಃ ನಾವು ನಿಮಗೆ ತಿಳಿಸಿಕೊಡುವ ಕೌಶಲ್ಯಗಳಲ್ಲಿ ಬಹಳ ಮುಖ್ಯವಾದ ಒಂದು ಕೌಶಲ್ಯವು ಕಥೆಯ ಯಶಸ್ವಿಯಾದ ಚರ್ಚೆಗೆ ನಡೆಸುವಂತಹುದಾಗಿದೆ, ಅದು – **ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವ** ಅಂಶವಾಗಿದೆ. ನೀವು ಒಂದು ಕಥೆಯನ್ನು ಸಿದ್ಧಪಡಿಸುತ್ತಿರುವಾಗ ನೀವು ದೇವರ ವಾಕ್ಯವನ್ನು ಚೆನ್ನಾಗಿ ಕೇಳಿಸಿಕೊಳ್ಳುವ ಅಗತ್ಯವಿದೆ, ಮತ್ತು ಕಥೆಯನ್ನು ಹೇಳುವವರಾಗಿ ನೀವು, ದೇವರು ಕಥೆಯಲ್ಲಿ ತೋರಿಸುವ ಅನ್ವಯಿಸುವಿಕೆಗಳಿಗೆ ಪ್ರತಿಕ್ರಿಯಿಸುವ ಅಗತ್ಯವಿದೆ. ಅದೇ ರೀತಿಯಲ್ಲಿ, ಚರ್ಚೆಯು ನಡೆಯುತ್ತಿರುವಾಗ, ನೀವು **ಕೇಳಿಸಿಕೊಳ್ಳಿ ಮತ್ತು ಪ್ರತಿಕ್ರಿಯಿಸಿ.** ಜನರು ಏನು ಹೇಳುವರೋ ಅದನ್ನು ಸರಿಯಾಗಿ ಕೇಳಿಸಿಕೊಳ್ಳಿ ಮತ್ತು ಅವರಿಗೆ ಪ್ರತಿಕ್ರಿಯಿಸಿ.

ಪ್ರೀತಿಯ ಹಿರಿಯ ಸಹೋದರ

ಒಂದು ಹಳ್ಳಿಯಲ್ಲಿ ಪ್ರತಿ ದಿನ ಒಂದು ನಿರ್ದಿಷ್ಟ ಸಮಯದಲ್ಲಿ ಕೆಲವು ಹಿರಿಯ ಸಹೋದರು ಒಟ್ಟಾಗಿ ಕೂಡಿಕೋಳ್ಳುತಿದ್ದರು ಆದರೆ ಕೆಲವರು ಅತಿಬುದ್ಧಿಯಿಂದ ಮಾತನಾಡುವ ಹಿರಿಯ ಸಹೋದರನ ಅತ್ತಿರ ಕೂಡಿಬರುತ್ತಿದ್ದರು. ಕೆಲವರು ಮಾತ್ರ ಏನು ಮಾತನಾಡದೆ ಹಿರಿಯರು ಮಾತನಾಡುವುದನ್ನು ಕೇವಲ ಕೇಳಿಸಿಕೋಳ್ಳುತ್ತಿದ್ದರು. ಆದರೆ ಅನೇಕರು ಈ ವಿಶೇಷವಾದ ಹಿರಿಯ ಸಹೋದರನ ಹತ್ತಿರ ಹೆಚ್ಚು ಸಮಯ ಕಳೆಯುತಿದ್ದರು. ಅವರೆಲ್ಲರು ಸೇರಿ ಈ ಹಿರಿಯ ಸಹೋದರನನ್ನು ಪ್ರೀತಿಯ ಹಿರಿಯ ಸಹೋದರ ಎಂದು ಕರೆಯುತ್ತಿದ್ದರು.

ಈ ಹಿರಿಯ ಸಹೋದರನು ಹೆಚ್ಚಾದ ಜ್ಞಾನದ ವಿಷಯಗಳನ್ನು ತಿಳಿಸುತಿದ್ದರೂ ಆದರೆ ಆತನು ತುಂಬಾ ಕೇಳುವವನು ಕೂಡ ಆಗಿದ್ದನು. ಆತನ ಹತ್ತಿರಕೆ ಬರುವವರಿಗೆ ಅವರಿಗೆ ಅವರವರ ಜ್ಞಾನದ ಬುದ್ಧಿಯನ್ನು ಬೆಳೆಸಿಕೋಳ್ಳಲು ಆತನು ಸಹಾಯಮಾಡುತ್ತಿದ್ದನು. ಅವರೆಲ್ಲರಿಗಿಂತ ಈತನಿಗೆ ಹೆಚ್ಚು ಬುದ್ಧಿ ಇದ್ದರು ಆತನು ಜನರೇ ಅವರವರ ಸಮಸ್ಯೆಗಳಿಗೆ ಅವರೇ ಉತ್ತರಗಳನ್ನು ಕಂಡುಕೋಳ್ಳುವಂತ ಅವಕಾಶ ಮಾಡಿಕೋಡುತ್ತಿದ್ದನು. ಈತನಿಗೆ ಅವರ ಪ್ರಶ್ನೆಗಳಿಗೆ ಉತ್ತರಗೋತ್ತಿದ್ದರು ಜನರೇ ಅವರವರ ಸಮಸ್ಯೆಗಳಿಗೆ ಅವರೇ ಉತ್ತರ ಕಂಡುಕೋಳ್ಳುವ ಅವಕಾಶ ಮಾಡಿಕೋಡುತ್ತಿದ್ದನು. ಆದುದರಿಂದ ಜನರು ಜ್ಞಾನವಾಗಿ ಬೆಳೆಯಲು ಸಹಾಯವಾಯಿತು.

ಈ ಪ್ರೀತಿಯ ಹಿರಿಯ ಸಹೋದರನು ತನ್ನ ಮಕ್ಕಳಿಗೂ ಹಾಗು ತನ್ನ ಹೆಂಡತಿಗೂ ಆಲೋಚಿಸುವ ಅವಕಾಶವನ್ನು ಕೋಡುತ್ತಿದ್ದನು. ಇತರರು ಮಾತನಾಡಲು ಅವಕಾಶ ಕೊಡಲು ಈತನು ಬಯಪಡುತ್ತಿರಲಿಲ್ಲ ಕಾರಣ ಇವನಲ್ಲಿ ತುಂಬ ಬುದ್ಧಿ ಎತ್ತು ಅಲ್ಲದೆ ಅವನು ಇತರರಿಗೆ ಹೆಚ್ಚು ಸಮಯ ಮಾತನಾಡಲು ಕೋಟ್ಟರೆ ಇವನಿಗೆ ಲಾಭವಾಗುತ್ತಿತ್ತು ಕಾರಣ ಇವನು ಇನ್ನೂ ಬುದ್ಧಿವಂತನಾಗಬಹುದೆಂದು ಇವನು ಅರಿತಿದ್ದನು.

ಆತನ ಹಿಂಬಾಲಕರು ಈತನ ಪದ್ದತಿಯನ್ನೇ ಅವಲಂಬಿಸಿದರು. ಅವರು ಇತರರಿಗೆ ಮಾತನಾಡಲು ಹೆಚ್ಚು ಅವಕಾಶಕೋಟ್ಟು ಅವರ ಜ್ಞಾನ ವೃದ್ಧಬೆಳೆಸಿಕೋಳ್ಳಲು ಸಹಾಯಮಾಡುತ್ತಿದ್ದರು. ಈ ಪ್ರೀತಿಯ ಹಿರಿಯ

ಸಹೋದರನ ಮಕ್ಕಳು ಕೂಡ ತಂದೆಯ ಹಾಗೆ ಅವರು ಬಹಳ ಬುದ್ದಿವಂತರಾಗಿ ಅವರ ತಂದೆಯ ಮಾರ್ಗದಲ್ಲಿಯೇ ನಡೆದರು.

ಯೇಸುವಿನ ಸೇವೆಯ ಆರಂಭದ ದಿನಗಳಲ್ಲಿ ಸುಮಾರು ೫೦೦೦ ಜನರು ಆತನ ಬೊದನೆ ಕೇಳಲು ಬಂದರು ಎಂದು ಸತ್ಯವೇದದಲ್ಲಿ ತಿಳಿಸುತ್ತದೆ. ಆದರೆ ಅವರಿಗೆ ಆಗ ಆಹಾರ ಬೇಕಾಯಿತು. ಯೇಸು ತನ್ನ ಶಷ್ಯರಾದ ಫಿಲಿಪ್ಪ ಹಾಗು ಇತರರಿಗೆ ಪ್ರಶ್ನೆಕೇಳುತ್ತಾರೆ ಅದರ ಮುಖಾಂತರ ಅವರು ಯೋಚನೆ ಮಾಡುವ ಹಾಗೆ ಮಾಡಿ ಉತ್ತರ ಕಂಡುಕೋಳ್ಳುವಂತೆ ಮಾಡುತ್ತಾನೆ. ಆದರೆ ಯಾರು ಯೇಸುವನ್ನು ಮಹಾತ್ಕಾರ್ಯ ಮಾಡುವಂತೆ ಕೇಳಲಿಲ್ಲ ಆದರೆ ಆ ಕೂಟದಲ್ಲಿ ಒಬ್ಬ ಹುಡುಗ ತಂದಿದ್ದ ಆಹಾರದಿಂದ ಯೇಸುವೇ ಮಹಾತ್ಕಾರ್ಯ ಮಾಡಿ, ಎಲ್ಲರೂ ಊಟ ಮಾಡುವ ಹಾಗೆ ಮಾಡುತ್ತಾನೆ.

ಯೇಸು ತನ್ನ ಬೋದನೆಯಲ್ಲಿ ತನ್ನ ಶಿಷ್ಯರಿಗೂ ಹಾಗು ಆತನ ವಾಕ್ಯ ಕೇಳಲು ಬರುವವರಿಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಜನರು ಯೋಚಿಸಿ ದೈವೀಕ ಉತ್ತರವನ್ನು ಕೊಡುವಂತೆ ಅವಕಾಶ ಕೊಡುತ್ತಿದ್ದನು. ಆತನ ಮೂರು ವರ್ಷದ ಸೇವೆಯಲ್ಲಿ ತನ್ನ ಶಿಷ್ಯರಿಗೆ ತನ್ನ ಬೋದನೆಯನ್ನು ಕೇಳಿ, ಅದನ್ನು ನಂಬಿ ಕೇಳಿದನ್ನು ಜ್ಞಾನವಾಗಿ ತಮ್ಮ ಜೀವಿತಕ್ಕೆ ಅನ್ವಹಿಸಿಕೋಳ್ಳುವಂತೆ ಮಾಡುತಿದ್ದನು. ಆತನು ತನ್ನ ಶಿಷ್ಯರನ್ನು ಇತರರಿಗೆ ಸೇವೆ ಮಾಡಿ ಅವರನ್ನು ಕರ್ತನ ಕಡೆಗೆ ನಡೆಸುವಂತೆ ಸಿದ್ದಪಡಿಸಿದನು.

ಎಸ್ ಟಿ ಎಸ್ ನ ಮೂಲಕ ದೇವರ ವಾಕ್ಯವನ್ನು ಕಲಿತಿರುವವರು ಅವರು ಈಗ ಅನೇಕ ಕುಟುಂಬಗಳಲ್ಲಿ ಹಾಗು ಸೇವೆಯಲ್ಲಿ ನಾಯಕರಾಗಿದ್ದಾರೆ. ಅವರಿಗೆ ಸತತವಾಗಿ ಬೋದಿಸುವವರಿಗಿಂತ ಹೆಚ್ಚಾದ ಆತ್ಮೀಕ ದೇವರ ಜ್ಞಾನ ಇರುತ್ತದೆ. ಇದರಿಂದ ದೇವರ ವಾಕ್ಯವೇ ಅವರಿಗೆ ಉತ್ತಮವಾದ ಜ್ಞಾನವನ್ನು ಕೊಟ್ಟು ಬರುವಂತ ಪ್ರಶ್ನೆಗಳಿಗೆ ಅವರೇ ಉತ್ತರಕೋಡುತ್ತಾರೆ.

ಜ್ಞಾನಿಗಳಾದ ಈ ನಾಯಕರು ಇತರರನ್ನು ಆತ್ಮೀಕವಾಗಿ ನಡೆಸುವುದನ್ನು ನೋಡಿದಾಗ ಎಷ್ಟು ಸಂತೋಷವಾಗುತ್ತದೆ. ಇವರು ಇತರರನ್ನು ಆಲೋಚಿಸುವಂತೆ ಮಾಡಿ ಅವರಿಂದಲೇ ಉತ್ತರ ಪಡೆಯಲು ಸಹಾಯ ಮಾಡುತ್ತಾರೆ. ಇವರು ಪ್ರೀತಿಯ ಹಿರಿಯ ಸಹೋದರನ ಹಾಗೆ ಇತರರ ಮಾತುಗಳನ್ನು ಸಾವಧಾನವಾಗಿ ಕೇಳಿ ಅವರು ಆಲೋಚಿಸುವಂತೆ ಮಾಡಿ ಅವರೇ ವಾಕ್ಯದಲ್ಲಿ ಆಳವಾಗಿ ಅಧ್ಯಾಯನ ಮಾಡುವಾಗೆ ಮಾಡುತ್ತಾರೆ.

ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವುದು ಒಂದು ಸವಾಲು:

ಕಥೆ ಮಾತ್ರದಲ್ಲಿ ಒಳಗೊಂಡಿರುವ ಕೌಶಲ್ಯಗಳನ್ನು ಹೊಂದಿಕೊಳ್ಳುವುದಕ್ಕೆ ನೀವು ಮೊದಲು ಪ್ರಯತ್ನ ಮಾಡುವಾಗ, ಇಲ್ಲಿ ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಬಹಳಷ್ಟು ಸಂಗತಿಗಳಿವೆ. *ಕಥೆ* ಮಾತ್ರಕ್ಕೆ ಹೊಸದಾಗಿ ಬಂದವರು ಉದ್ದೇಶಪೂರ್ವಕವಾಗಿಯೇ ತಮ್ಮ *ಕಥೆ* ಮಾತ್ರದ ನಿರೂಪಣೆಯ ಮೇಲೆ, ಕಥೆಯನ್ನು ಹೇಳುವುದರಲ್ಲಿ, ಪ್ರಕ್ರಿಯೆಯ ಕ್ರಮದ ಮೇಲೆ ಮತ್ತು ಪ್ರಶ್ನೆಗಳನ್ನು ಕೇಳುವುದರ ಮೇಲೆ ದೃಷ್ಟಿಯಿಟ್ಟಿರುತ್ತಾರೆ. ಆಸಕ್ತಿಕರವಾಗಿ, ಈ ಹೊಸಬರು ಪ್ರಕ್ರಿಯೆಯ ಮೇಲೆಯೇ ಹೆಚ್ಚು ಗಮನವನ್ನು ಹರಿಸುವುದರಿಂದ ಬಹಳ ಮುಖ್ಯವಾಗಿರುವ ಸಂಗತಿ ಬಿಟ್ಟುಹೋಗುತ್ತದೆ... ಅಂದರೆ ಜನರು! **ಸತ್ಯವೇದದ ಒಂದು ಕಥೆಯನ್ನು ಬೇರೆಯವರೊಂದಿಗೆ ಚರ್ಚಿಸುವುದೇ** ನಿಮ್ಮ ಗುರಿಯಾಗಿದೆ. ಜನರು ಏನು ಹೇಳಿದರು ಮತ್ತು ಕೇಳಿದರು ಎಂಬುದನ್ನು ಸರಿಯಾಗಿ ಕೇಳಿಸಿಕೊಳ್ಳದೆ, ಅವರ ಭಾಗವಹಿಸುವಿಕೆಗೆ ಪ್ರತಿಕ್ರಿಯಿಸದೆ, ಅಲ್ಲಿ ಯಾವ ಚರ್ಚೆಯೂ ಇರುವುದಿಲ್ಲ.

ಪ್ರವೇಶಿಸುವುದಕ್ಕಿರುವ ಉತ್ತಮವಾದ ಮಾನಸಿಕ ದ್ವಾರಗಳಲ್ಲಿ ಒಂದು ದ್ವಾರವೆಂದರೆ ಅದು ಸಂಭಾಷಣೆಯ ದ್ವಾರವಾಗಿದೆ. ಒಂದು ಕಥೆಯಲ್ಲಿರುವ ಅನೇಕ ಮೌಲ್ಯಾಧಾರಿತ ನಿಧಿಗಳನ್ನು ಕಂಡುಹಿಡಿಯುವುದರಲ್ಲಿ ನೀವು ಸಮಯವನ್ನು ಕಳೆದ ನಂತರ, ಬೇರೆಯವರೊಂದಿಗೆ ಕಥೆಯ ಕುರಿತಾಗಿ ಮಾತನಾಡುವುದು ಸಂತೋಷವನ್ನುಂಟು ಮಾಡುವಂತಹುದಾಗಿದೆ. ಹಾಗಾಗಿ **ನಿಮ್ಮ** "ನಿರೂಪಣೆಯ" ಕುರಿತಾಗಿ ಮತ್ತು **ನೀವು** ಹೇಳುವುದಕ್ಕೆ ಯೋಜಿಸಿಕೊಂಡಿರುವ ಎಲ್ಲದರ ಕುರಿತಾಗಿ ಆಲೋಚಿಸುವುದರ ಬದಲು, ಪ್ರಶ್ನೆಗಳನ್ನು ಕೇಳಿ ಮತ್ತು ಜನರು ಏನು ಹೇಳುವರು ಎಂಬುದನ್ನು ಕೇಳಿಸಿಕೊಳ್ಳಿ. ಕಥೆಯ **ಕುರಿತಾಗಿ** ಅವರೊಂದಿಗೆ ಮಾತನಾಡಿ. ಅವರೊಂದಿಗೆ ಸಂಭಾಷಣೆಯನ್ನು ಮಾಡಿ.

ಸಂಭಾಷಣೆ ನಡೆಯುವಾಗ, ಕಥೆಯ ಮೂಲಕ ಚರ್ಚೆಯು ಮುಂದುವರೆಯುವಂತೆ ನೀವು ಸಿದ್ಧಪಡಿಸಿಕೊಂಡಿರುವ ನಿಮ್ಮ ಕೆಲವು ಪ್ರಶ್ನೆಗಳನ್ನು ಉಪಯೋಗಿಸುತ್ತಿರುವಿರಿ. ಹಾಗೂ, ನೀವು ಸಿದ್ಧಪಡಿಸುತ್ತಿದ್ದ ಸಮಯದಲ್ಲಿ ಕಂಡುಹಿಡಿದಿರುವ ಕೆಲವು ನಿಧಿಗಳನ್ನು ಕಂಡುಹಿಡಿಯಲು ಜನರಿಗೆ ಸಹಾಯ ಮಾಡುವುದಕ್ಕೆ ನೀವು ಕೆಲವು ಪ್ರಶ್ನೆಗಳನ್ನು ಉಪಯೋಗಿಸುವಿರಿ. ನಮ್ಮಲ್ಲಿ ಅನೇಕರು ಪ್ರತಿದಿನ ಬೇರೆಯವರೊಂದಿಗೆ ಮಾತನಾಡುತ್ತೇವೆ ಮತ್ತು ಇದನ್ನು ನಾವು ಬರೆದಿಟ್ಟುಕೊಳ್ಳದೆಯೇ ಮಾತನಾಡುತ್ತೇವೆ! ನಮಗೆ ಆಸಕ್ತಿಯಾಗಿರುವ ಸಂಗತಿಗಳ ಬಗ್ಗೆ ನಾವು ಆರಾಮವಾಗಿ ಮಾತನಾಡುತ್ತೇವೆ. ಅದೇ ರೀತಿ ಸತ್ಯವೇದದ ಕಥೆಯ ಕುರಿತಾಗಿ ಒಂದು ಸಂಭಾಷಣೆಯಲ್ಲಿ ತೊಡಗಿಕೊಳ್ಳಿ!

ನಿಜವಾಗಿಯೂ, ಪ್ರಕ್ರಿಯೆಗೆ ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವುದು ಎಷ್ಟು ಪ್ರಾಮುಖ್ಯವಾಗಿದೆಯೆಂದರೆ, ಅದಕ್ಕೆ ನಾವು, "*ಕಥೆ* ಮಾತ್ರದ ಸ್ಪಷ್ಟವಾದ ಅರ್ಥವೆಂದರೆ ಅದು ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವುದು" ಎಂದು ಹೇಳುತ್ತೇವೆ.

ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವ ಕ್ರಯೆ:

ಎಸ್ ಟಿ ಎಸ್ ಮೂಲಕ ಕಲಿಯುವ ಕಥೆಗಳಲ್ಲಿ ಕೀರ್ತನೆ ೨೩ ಕೂಡ ಒಂದು. ಸತ್ಯವೇದವನ್ನು ಚನ್ನಾಗಿ ತಿಳಿದುಕೋಂಡಿರುವವರಿಗೂ ಹಾಗು ಸ್ವಲ್ಪ ತಿಳಿದಿರುವವರಿಗೂ ಈ ಅಧ್ಯಾಯದ ಬಗ್ಗೆ ಗೋತ್ತಿರುತ್ತದೆ. ಇದನ್ನು ನಿದಾನವಾಗಿ ಅಭ್ಯಾಸ ಮಾಡಿದಾಗ ಕೀರ್ತನೆಗಳಲ್ಲಿಯು ವಿಷೇಶವಾದ ರೀತಿಯಲ್ಲಿ ಆತ್ಮೀಕ ವಿಷಯಗಳನ್ನು ಕಲಿಯಬಹುದೆಂದು ನಮಗೆ ತಿಳಿಯುತ್ತದೆ.

ಭೌದ್ಯರ ಮದ್ಯೆ ಸೇವೆ ಮಾಡುತ್ತಿರುವ ನಮ್ಮ ಸಹಸೇವಕನಾದ ರಮೇಶ ಎಂಬುವವರು ಒಂದು ದಿನ ನಾನು ಕೀರ್ತನೆ ೨೩ನ್ನು ಎಸ್ ಟಿ ಎಸ್ ಪದ್ದತಿಯಲ್ಲಿ ಅಭ್ಯಾಸ ಮಾಡಿದೆವು ಎಂದು ನನಗೆ ತಿಳಿಸಿದರು (ಇವರು ನೇಪಾಳಿನಲ್ಲಿದ್ದು ಅವರು ನಮ್ಮ ಸಹಭಾಗದಿಂದ ಸೇವೆ ಮಾಡುತ್ತಿದ್ದಾರೆ). ಇವರು ಕೀರ್ತನೆ ಭಾಗವನ್ನು ಈ ಪದ್ದತಿಯಲ್ಲಿ ಕಲಿಯುತ್ತಿದ್ದಾರೆಂದು ಕೇಳಿ ನನಗೆ ಆಚ್ಚರ್ಯವೆನಿಸಿತು. ಅವರನ್ನು ನೀವು ಏನು ಕಲಿತಿರೆಂದು ನನಗೆ ಬೋದಿಸಿ ಎಂದು ಕೇಳಿದೆ. ಆ ದಿನವನ್ನು ನಾನು ಮರೆಯಲು ಸಾದ್ಯವಾಗುವುದಿಲ್ಲ.

ನಾನು ಆತನು ಹೇಳುವುದನ್ನು ಕೇಳದೆ ಅತನಿಗೆ ಪದೇ ಪದೇ ಸಹಾಯ ಮಾಡಲು ಪ್ರಯತ್ನಪಟ್ಟೆ ಆಗ ಆತನಿಗೆ ಆತನಲ್ಲಿರುವ ವಿಚಾರಗಳನ್ನು ನನ್ನಗೆ ತಿಳಿಸಲು ಸಾದ್ಯವಾಗಲಿಲ್ಲ, ಇದರಿಂದ ನನಗೆ ಇತರರು ಹೇಳುವಾಗ

ಕೇಳಬೇಕೆಂದು ಕಲಿತುಕೊಂಡೆನು. ಆತನು ರೊಟ್ಟಿ ತುಣುಕುಗಳನ್ನು ಸ್ವಲ್ಪ ಸ್ವಲ್ಪವಾಗಿ ನನಗೆ ಆಕುತ್ತಾ ನನ್ನನು ಯಾವ ರೀತಿ ನಡೆಸಿದನೆಂಬುದಾಗಿ ಕಲಿಯೋಣ.

ಆತನು ಕಥೆಯ ಎಲ್ಲಾ ಭಾಗದಲ್ಲಿಯೂ ಪ್ರಶ್ನೇಗಳನ್ನು ಕೇಳಿದನು. ಆತನು ಕೇಳಿದ ಅನೇಕ ಪ್ರಶ್ನೆಗಳಿಗೆ ಈಗಲು ಉತ್ತರ ಹುಡುಕುತಿದ್ದೇನೆ. ಆದರೆ ಆತನು ಕೇಳಿದ ಒಂದು ಪ್ರಶ್ನೆಯನ್ನು ನಿಮಗೆ ತಿಳಿಸಲು ಇಷ್ಟಪಡುತ್ತೇನೆ.

ರಮೇಶನು ಕೇಳಿದ ಮೋದಲ ಪ್ರಶ್ನೆ : ಕುರಿಯು ಕುರುಬನನ್ನು ಯಾವ ರೀತಿಯಲ್ಲಿ ನೋಡುತ್ತದೆ.

ಅನೇಕ ವರ್ಷಗಳಿಂದ ಕಲಿತ ನಾನು ಈ ರೀತಿ ಉತ್ತರ ಕೋಟ್ಟೆ: ನನ್ನ ಕುರುಬನು, ಅಂದರೆ ಕ್ರಿಸ್ತನನ್ನು ತಮ್ಮ ಜೀವಿತಕ್ಕೆ ಅನ್ವಹಿಸಿಕೋಳ್ಳುವಾಗೆ ಮಾಡುತ್ತದೆ.

ಆದರೆ ರಮೇಶನು ಈ ಉತ್ತರಕೋಟ್ಟು ಮುಂದೆ ಹೋಗಲು ಬಿಡಲಿಲ್ಲ. ಕಥೆಯಲ್ಲಿ ಮೋದಲು ಏನು ಹೇಳುತ್ತದೆ ಎಂಬುದಾಗಿ ನಿದಾನವಾಗಿ ನಾವು ಎಸ್ ಟಿ ಎಸ್ ನಲ್ಲಿ ಕಲಿಸಿಕೋಡುತ್ತೇವೆ. ಅದನ್ನು ಕಲಿತ ಮೇಲೆ ನಮ್ಮ ವಯಕ್ತಿಕ ಆಲೋಚನೆಗೆ ಅವಕಾಶಕೋಡುತ್ತೇವೆ ಅದಾದಮೇಲೆ ನಮ್ಮ ಜೀವಿತಗಳಿಗೆ ಅನ್ವಹಿಸಿಕೋಳ್ಳುತ್ತೇವೆ.

ರಮೇಶನು ನನಗೆ ಕಥೆ ಏನು ಹೇಳುತ್ತದೆ ಎಂದು ನಿದಾನವಾಗಿ ಕೇಳೋಣವೆಂದು ತಿಳಿಸಿದ, ಆಗ ಆತನು ನನನ್ನು ಕಥೆಯಲ್ಲಿ ನಿದಾನವಾಗಿ ನಡೆಯುವಂತೆ ಮಾಡಿ ಕಥೆ ಏನು ಹೇಳುತ್ತದೆ ಎಂದು ನನ್ನನ್ನು ಕಥೆ ಕಲಿಸುವುದರಲ್ಲಿ ನನ್ನನ್ನು ನಡೆಸಿದ.

ಕೋನೆಗೆ ಆತನ ಮಾತನ್ನು ಕೇಳಲು ಒಪ್ಪಿಕೋಂಡೆ. ನನ್ನ ವಿಧ್ಯಾರ್ಥಿ ಯಾವ ರೀತಿ ನನಗೆ ಕಲಿಸುತ್ತಾನೆ ಎಂಬುದಾಗಿ ನನ್ನೋಳಗೆ ಅಂದುಕೊಂಡೆ.

ರಮೇಶನು ನನಗೆ ಕೇಳಿದ: ಇಲ್ಲಿ ಕುರಿ ಮಾತನಾಡುತ್ತದೆಯಲ್ಲವೇ ಎಂದ___

ನಾನು ಅದನ್ನು ಒಪ್ಪಿಕೊಂಡೆ.

ಸರಿ_ ಕುರಿಯು ಯಾವ ರೀತಿ ಕರುಬನ ಬಗ್ಗೆ ಮಾಡನಾಡುತ್ತಿದೆ, ಹಾಗು ಕುರಿಯು ಕರುಬನನ್ನು ಯಾರಿಗೆ ಹೋಲಿಸುತ್ತಿದ್ದಾನೆ?.

ಅದಕ್ಕೆ ನಾನು___ ಅಂದರೆ. . . . ಕುರಿಯು ಕುರುಬನನ್ನು ಯಾವ ರೀತಿ ಕರೆಯುತ್ತಿದ್ದಾನೆಂದಲ್ಲವೇ?

ಅದಕ್ಕೆ ರಮೇಶನು ಹೌದು ಎಂದ___ ಆದರೆ ಕುರಿಯು ಕುರುಬನನ್ನು ಯಾವ ರೀತಿಯಲ್ಲಿ ನೋಡುತ್ತಿದ್ದಾನೆಂದು ನೀನು ನೋಡಲಿಲ್ಲವೋ?

ಓ , ಹೌದು ಈಗ ನನಗೆ ಸ್ವಲ್ಪ ಸ್ವಲ್ಪವಾಗಿ ಅರ್ಥವಾಗುತ್ತದೆ ಅಂದೆ.

ಕುರುಬನ ಸಂಭಂದದಲ್ಲಿ ಕುರಿಯು ಯಾವ ಸ್ಥಾನದಲ್ಲಿದೆ. ನೀವು ನೋಡಿ ಎಂದ. ನಾನು ಕಥೆಯಲ್ಲಿ ಏನು ನೋಡಲಿಲ್ಲವೋ ಅದನ್ನು ನೋಡುವಂತೆ ರಮೇಶನು ನನಗೆ ಬಲವಂತದಿಂದ ನೋಡುವಂತೆ ಮಾಡಿದ. (ಎಸ್ ಟಿ ಎಸ್ ನಲ್ಲಿ ನಾವು ಕಂಡುಕೋಂಡಿದ್ದನ್ನು ಮಾತ್ರ ಇತರರು ಕಂಡುಕೋಳ್ಳಲೇಬೇಕೆಂದು ಒತ್ತಾಯ ಮಾಡುವುದಿಲ್ಲ ಅದನ್ನು ಅವರೇ ಕಂಡುಕೋಳ್ಳುವಂತೆ ಪ್ರೋತ್ಸಾಹಿಸುತ್ತೇವೆ. ಇತರರಿಗೆ ಬೋದಿಸುವ ರಮೇಶನು ಈ ಕಥೆಯಲ್ಲಿ ನನಗೆ ಏನೋ ಕಲಿಸಬೇಕೆಂದು ಇಷ್ಟಪಟ್ಟನು, ಆತನೇ ಅದನ್ನು ಹುಡುಕಿಕೋಡಲಿಲ್ಲ ಆದರೆ ಆತನು ಪ್ರಶ್ನೆಗಳನ್ನು ಕೇಳುತ್ತಾ ಅವುಗಳನ್ನು ನಾನೆ ಕಂಡುಕೋಳ್ಳುವಂತೆ ಮಾಡಿದ).

ನಾನು ಹೇಳಿದೆ: ಊ ಕುರಿಯನ್ನು ನಡೆಸುತ್ತಿದ್ದಂತೆ ನನಗನಿಸುತ್ತದೆ ಕುರುಬನು ಕುರಿಯ ಮುಂದೆ ಇರುತ್ತಾನೆ.

ಆದಕ್ಕೆ ರಮೇಶನು ಹೌದು ಅದು ಸರಿ, ಈಗ ನಾವು ಕಥೆಯಲ್ಲಿನ ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ಭಾಗಕ್ಕೆ ಹೋಗೋಣ_ಇಲ್ಲಿ ಕುರುಬನನ್ನು ಯಾರಿಗೆ ಓಲಿಸುತ್ತದೆ?

ನೀನು_ಎಂದು ನಾನು ಹೇಳಿದೆ_..

ಓ, ಮತ್ತೆ ನೋಡಿ ಎಂದ ರಮೇಶ. ನೀನು ಹತ್ತಿರವಿರುವುದರಿಂದ ಕೇಡಿಗೆ ಹೆದರೆನು; ಕುರಿಯು ಯಾವ ರೀತಿ ಕುರುಬನನ್ನು ಓಲಿಸಿತ್ತಿದೆ?

ನಿಲ್ಲಿ___ ನನಗೆ ಆಚ್ಚಾರ್ಯವಾಯಿತು, ನೀನು..... ಇಲ್ಲಿ ಬದಲಾವಣೆಯನ್ನು ನೋಡುತ್ತೇವೆ. ಇದನ್ನು ನಾನು ಈ ಕಥೆಯಲ್ಲಿ ಎಂದೂ ನೋಡಿರಲಿಲ್ಲ. ಇಲ್ಲಿ ಕುರಿಯು ಕುರುಬನ ಬಗ್ಗೆ ಮಾತನಾಡುತ್ತಿಲ್ಲ ಆದರೆ ಕುರುಬನ ಜೋತೆಗೆ ಮಾತನಾಡುತ್ತಿದೆ.

ಹೌದು... ಅದೇ ರೀತಿ ನೋಡಿ... ಕರುಬನು ಎಲ್ಲಿದ್ದನೇ.. ಇಲ್ಲಿ ಏನು ಬದಲಾವಣೆ ನೋಡುತ್ತೀರಿ.

ನೋಡಿ ನಾನು ಕೇಳಿದೆನೆಂದು..

ಮೊದಲು ಕುರುಬನು ಮುಂದೆ ಇದ್ದನು ಆದರೆ ಈಗ ನೋಡಿ ಕುರುಬನು ಎಲ್ಲಿ ಇದ್ದಾನೆ?

ನಾನು ಆಚ್ಚಾರ್ಯ ಪಟ್ಟು ನೋಡಿದೆ, ಕುರುಬನು ಮುಂದೆ ಇದ್ದನು ಆದರೆ ಈಗ ಕುರುಬನು ಕುರಿಯ ಜೋತೆಗಿದ್ದಾನೆ.

ಹೌದು, ಮೊದಲು ಕುರುಬನು ಮುಂದೆ ಇದ್ದನು ಆದರೆ ಈಗ ನೋಡಿ ಕುರುಬನು ಕುರಿಯ ಜೋತೆಗಿದ್ದಾನೆ. ಅಷ್ಟೇ ಅಲ್ಲ ಮತ್ತೆ ಕಥೆಯಲ್ಲಿ ನೋಡಿರಿ. ನೀನು ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ_ ಕರುಬನು ಕುರಿಯ ತಲೆಗೆ ತೈಲವನ್ನು ಹಚ್ಚಿಸುತ್ತಿದ್ದರೆ ಈಗ ಕುರುಬನು ಎಲ್ಲಿರುತ್ತಾನೆ?.

ಈಗ ನಾನು ನೋಡುತ್ತಿದೇನೆ, ಕುರುಬನು ಕುರಿಯ ಮೇಲಿದ್ದಾನೆ ಎಂದು ನಾನು ಹೇಳಿದೆ.

ಅದಕ್ಕೆ ರಮೇಶನು ಇನ್ನೂ ಇದೆ ಆಳವಾಗಿ ನೋಡಿರಿ ಎಂದ. ಕಥೆಯ ಮುಂದಿನ ಭಾಗದಲ್ಲಿ_ ನಿಶ್ಚಯವಾಗಿ ನನ್ನ ಜೀವಮಾನದಲೆಲ್ಲಾ ಶುಭವೂ ಕೃಪೆಯೂ ನನನ್ನು ಹಿಂಬಾಲಿಸುವವು.../// ಆಗಾದರೆ ಈಗ ಕುರುಬನು ಎಲ್ಲಿದ್ದಾನೆಂದು ಕುರಿಯು ಅಂದುಕೋಳ್ಳುತ್ತದೆ?

ನನಗೆ ರಮೇಶನು ಕಲಿಸಲು ಪ್ರಾರಂಬಿಸಿದನು, ಮೊದಲು ಕುರುಬು ಕುರಿಯ ಮುಂದೆ, ಕುರಿಯ ಪಕ್ಕದಲ್ಲಿ, ಕುರಿಯ ಮೇಲೆ ಮತ್ತು ಕುರಿಯ ಹಿಂದೆ ಅಂದರೆ ಕುರುಬನು ಕುರಿಯ ಸುತ್ತಲೂ ಇರುತ್ತಾನೆಂದು ಅರ್ಥವಾಯಿತು.

ಇಲ್ಲಿಗೆ ಕಥೆಯ ಕೋನೆಯ ಭಾಗಕ್ಕೆ ಬಂದಿದ್ದೇವು ಆಗ ನಾವು ನಮ್ಮ ಜೀವಿತಕ್ಕೆ ಅನ್ವಹಿಸಿಕೋಂಡೆವು. ಕಥೆಯಲ್ಲಿನ ಅನೇಕ ಆತ್ಮೀಕ ಆರ್ಶಿವಾದಗಳನ್ನು ನಮ್ಮ ಜೀವಿತಗಳಿಗೆ ಅನ್ವಹಿಸಿಕೋಂಡೆವು, ಯೇಸು ಕ್ರಿಸ್ತನು ಯಾವಾಗಲು ನಮ್ಮ ಮುಂದೆ, ಹಿಂದೆ, ಮೇಲೆ ಮತ್ತು ನಮ್ಮ ಪಕ್ಕದಲ್ಲಿರುತ್ತಾನೆ. ಇದು ಎಂಥಹ ಆಶೀರ್ವಾದವಲ್ಲವೆ. ಇದು ನಮ್ಮ ಸೌಭಾಗ್ಯವೇ ಸರಿ.

ಹಳೆಯ ಕೃತಿ: ನಾವು ಸೇವೆಯಲ್ಲಿ ಮಾಡುವ ಅನೇಕ ತಪ್ಪುಗಳ ಬಗ್ಗೆ ಒಂದು ದಿನ ನಮ್ಮ ಕಚೇರಿಯಲ್ಲಿ ಮಾತನಾಡುತ್ತಿದ್ದೆವು. ನಾವು ಪದೇ ಪದೇ ತಪ್ಪುಗಳನ್ನು ಮಾಡುತ್ತಿದ್ದರೂ ದೇವರು ನಮ್ಮ ಮೇಲೆ ಕರುಣೆಯನ್ನು ತೋರಿಸಿ ಕ್ಷಮಿಸುತ್ತಾ ಬಂದಿದ್ದಾನೆ. ನಮಗೆ ಅನೇಕ ಕೋರತೆಗಳಿದ್ದರು ದೇವರು ನಮ್ಮ ಜೋತೆಗೆ ಸದಾ ಕಾಲ ಇರುವುದರಿಂದ ನಾವು ಚಿಂತೆಪಡುವ ಅವಶ್ಯಕತೆ ಇರುವುದಿಲ್ಲ. ಇದು ದೇವರಿಂದ ನಮಗಿರುವ ಸಮಧಾನದ ಒಂದು ಕವಚ ಇದ್ದ ಹಾಗೆ. ಅಂದರೆ ದೇವರು ನಮ್ಮ ಜೋತೆಗೆ ಸದಾ ಕಾಲ ಇರುತ್ತಾನೆ. ಇದರಿಂದ ನಾವೇ ದನ್ಯರು.

ಖಿನೇ ಕೀರ್ತನೆ ಪದೇ ಪದೇ ನನ್ನ ಜೀವಿತಕ್ಕೆ ಅನ್ವಯವಾಗುತ್ತಿರುತ್ತದೆ. ಅಂದರೆ ನಿಶ್ಚಯವಾಗಿ ನನ್ನ ಜೀವಮಾನದಲೆಲ್ಲಾ ಶುಭವೂ ಕೃಪೆಯೂ ನನನ್ನು ಹಿಂಬಾಲಿಸುವವು ಎಂಬ ಬರವಸೆ ನನಗಿದೆ.

ಓ.. ಉಪಧ್ಯಾಯರೇ ನಿಮ್ಮ ಶಿಷ್ಯರ ಮಾತನ್ನು ಕೇಲಿಸಿಕೋಳ್ಳಿ..... ಈ ಅಧ್ಯಾಯದಿಂದ ನಾನು ತುಂಬಾ ಕಲಿತುಕೋಂಡೆ.

ಅನೇಕ ಸಲ ಇತರ ಸಂಕೃತಿಯವರಿಂದ ಅನೇಕ ಹೋಸ ವಿಚಾರಗಳು ಕಲಿಯಲು ಸಹಾಯವಾಗುತ್ತದೆ. ಯೂರೋಪಿನವರೂ, ಪಶ್ಚಿಮ ದೇಶದವರು ಬೋದಿಸಿದಾಗಲು ನಾವು ಕಲಿಯಬಹುದು, ಭಾರತ, ಟಾಗೋ, ಮೋಜೋಂಬಿಕ್ಯೂ, ನೈಜಾರ್ ಮತ್ತು ಪಲಿಪ್ಪಿನ ಅನೇಕ ದೇಶಗಲ್ಲಿ ಈಗ ಎಸ್ ಟಿ ಎಸ್ ಮೂಲಕ ತರಬೇತಿಯನ್ನು ಕೊಟ್ಟು ಅನೇಕರನ್ನು ನಾಯಕರುಗಳಾಗಿ ಮಾಡುತ್ತಿದ್ದಾರೆ. ಇದರಿಂದ ಸ್ಥಳೀಯ ನಾಯಕರುಗಳು ತಮ್ಮ ದೇಶಗಳ ಜನರನ್ನು ಕ್ರೀಸ್ತನ ಶಿಷ್ಯರನ್ನಾಗಿ ಮಾಡಲು ಸಹಾಯವಾಗುತ್ತದೆ.

ಎಸ್ ಟಿ ಎಸ್ ಮೂಲಕ ದೇವರ ದ್ವನಿ ಕೇಳಲು, ದೇವರ ವಾಕ್ಯವನ್ನು ಕಲಿಯುವಾಗ ಎಲ್ಲರೂ ಕೇಳುವವರಾಗಿರಬೇಕು. ಸಾವಧಾನವಾಗಿ ಕೇಳಿ ಅದಕ್ಕೆ ಉತ್ತರವನ್ನು ಕೋಡಬೇಕು. ಒಬ್ಬರು ಕಲಿತು ಬೋದಿಸುವುದಕ್ಕಿಂತ ಯಾವಾಗಲು ಒಬ್ಬರಿಂದ ಒಬ್ಬರು ಹೆಚ್ಚಾಗಿ ಕಲಿಯಬಹುದು. ಎಸ್ ಟಿ ಎಸ್ ಮೂಲಕ ದೇವರ ವಾಕ್ಯ ಕಲಿತ ನಾಯಕರುಗಳು ೪ ಮತ್ತು ೫ ವಂಶಾವಳಿಗಳಾಗಿ ಬೆಳೆದವೆ ಮತ್ತು ಅನೇಕ ದೇಶಗಳಲ್ಲಿ ಇವರಿಂದ ಕಲಿಯಲು ಅನೇಕ ಆಹ್ವಾನಗಳು ಬರುತ್ತಿರುತ್ತವೆ.

ಯಶಸ್ಸಿಗೆ ನಡೆಸುವಂತಹ ವಿವರಣೆಗಳು

ನಿಮ್ಮ ಪ್ರಶ್ನೆಗಳನ್ನು ಬರೆದಿಟ್ಟುಕೊಳ್ಳದೆಯೇ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಸಾಧ್ಯವೆಂದು ನೀವು ಯೋಚಿಸಿದರೂ ಸಹ, ಕಥೆಯ ಕುರಿತಾಗಿ ನೀವು ಕೇಳಬೇಕೆಂದಿರುವ ಪ್ರಶ್ನೆಗಳನ್ನು **ಬರೆದಿಟ್ಟುಕೊಳ್ಳದಿರುವುದೇ** ಮುಖ್ಯವಾಗಿದೆ. ನಿಮ್ಮ ಪ್ರಶ್ನೆಗಳನ್ನು ನೆನಪಿಸಿಕೊಳ್ಳಲು, ಮನಸ್ಸಿನಲ್ಲಿಯೇ ಕಥೆಯನ್ನು ಯೋಚಿಸಿ, ಇದರಿಂದ ನೀವು ಸಿದ್ಧಪಡಿಸಿದಂತಹ ಪ್ರಶ್ನೆಗಳನ್ನು ಈ ಕಥೆಯ ಅಂಶಗಳು ನೆನಪಿಗೆ ತರುವಂತೆ ಮಾಡಿ. **ನೀವು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಕಥೆಯೇ ನಿಮಗೆ ಮಾರ್ಗವಾಗುತ್ತದೆ; ಕಥೆಯೇ ನಿಮ್ಮ ಮುಖ್ಯಾಂಶಗಳ ಪಟ್ಟಿಯಾಗುತ್ತದೆ!**

ನಿಮ್ಮ ಪರಿಚಯವನ್ನು (ಪೀಠಿಕೆಯನ್ನು) ಪುನಃ ಆಲೋಚಿಸಿ. ನಿಮ್ಮ ಕಥೆಯಲ್ಲಿ ಅಡಗಿರುವ ಅನೇಕ ನಿಧಿಗಳನ್ನು ನೀವು ಕಂಡುಹಿಡಿದಿರುವಿರಿ, ಈಗ ನೀವು ಸಿದ್ಧಪಡಿಸಿರುವ ಪರಿಚಯಕ್ಕೆ ಕೆಲವನ್ನು ಸೇರಿಸಬೇಕೆಂದಿರುಬಹುದು ಅಥವಾ ತೆಗೆದುಹಾಕಲೂಬಹುದು. ನಿಮ್ಮ ಪರಿಚಯದಲ್ಲಿರುವ ಮಾಹಿತಿಯು ನಿಜವಾಗಿಯೂ ಕಥೆಯಲ್ಲಿರುವುದನ್ನು ಒಳಗೊಂಡಿರುವುದಾದರೆ, ಆ ಅಂಶಗಳನ್ನು ಪರಿಚಯದಿಂದ ತೆಗೆದುಹಾಕುವಂತೆ ನೀವು ಬುದ್ಧಿವಂತರಾಗಿರುತ್ತೀರಿ.

ಉದಾಹರಣೆಗೆ, ಮೊದಲಿಗೆ ನೀವು ಆದಿಕಾಂಡ 12:1:9ರಲ್ಲಿರುವ ಅಬ್ರಾಮನ ಕಥೆಯನ್ನು "ತನ್ನ ಜನರನ್ನು ಬಿಟ್ಟು ಮತ್ತು ತನ್ನ ದೇಶವನ್ನು ಬಿಟ್ಟು, ಒಂದು ಹೊಸ ದೇಶವನ್ನು ಪ್ರಾರಂಭಿಸುವುದಕ್ಕೆ ದೇವರಿಂದ ಕರೆಯಲ್ಪಟ್ಟ ಒಬ್ಬ ವ್ಯಕ್ತಿಯ ಕುರಿತಾಗಿ ಈ ಕಥೆಯಿದೆ" ಎಂದು ನೀವು ಪರಿಚಯದಲ್ಲಿ ಸೇರಿಸುವುದಕ್ಕೆ ಆಲೋಚನೆ ಮಾಡಿರಬಹುದು. ಆದಾಗ್ಯೂ, ನೀವು ಆತ್ಮೀಕ ನಿಧಿಗಳಿಗಾಗಿ ಹುಡುಕುತ್ತಾ ಕಥೆಯ ಭಾಗವನ್ನು ಓದುತ್ತಿರುವಾಗ, ನೀವು ಸಿದ್ಧಪಡಿಸಿದಂತಹ ಅಬ್ರಾಮನ ಆ ನಿರ್ದಿಷ್ಟವಾದ ಮಾಹಿತಿಯು ಕಥೆಯಲ್ಲಿಯೇ ಇರುವುದನ್ನು ಗ್ರಹಿಸುವಿರಿ. ಹಾಗಾಗಿ, ನಿಮ್ಮ ಪರಿಚಯದಿಂದ ಆ ಮಾಹಿತಿಯನ್ನು ನೀವು ತೆಗೆದುಹಾಕಬಹುದು.

ಒಂದುವೇಳೆ, ಕಥೆಯ ಕುರಿತಾಗಿ ನೀವು ಕೆಲವು ಒಳದೃಷ್ಟಿಯನ್ನು ಕಂಡುಹಿಡಿದಿದ್ದು, ಇದರೊಂದಿಗೆ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಸೇರಿಸುವುದರಿಂದ ಇದು ಇನ್ನೂ ಚೆನ್ನಾಗಿ ಅರ್ಥವನ್ನು ಕೊಡುವಂತಹುದಾಗಿದ್ದರೆ, ಆ ಮಾಹಿತಿಯನ್ನು ನಿಮ್ಮ ಪರಿಚಯದಲ್ಲಿ ಹೇಳಿ.

ಉದಾಹರಣೆಗೆ, ಮಾರ್ಥ/ಮರಿಯಳ ಕಥೆಯಲ್ಲಿರುವ ಅನೇಕ ನಿಧಿಗಳಲ್ಲಿ, ಬಹು ಅತಿಥಿಗಳಿಗಾಗಿ ಮಾರ್ಥಳು ದೊಡ್ಡ ಔತಣವನ್ನು ಸಿದ್ಧಪಡಿಸಿದುದರ ಆಯ್ಕೆಯೂ ಸಹ ಒಂದು ನಿಧಿಯಾಗಿದೆ. ಮಾರ್ಥಳು ತನ್ನ ಮನೆಯಲ್ಲಿ ಉಪಸ್ಥಿತರಿದ್ದ ಯೇಸುವಿನ ಹಿಂಬಾಲಕರ ಸಮ್ಮುಖದಲ್ಲಿಯೇ ಯೇಸುವನ್ನು ಟೀಕಿಸುವುದರಿಂದ ಮತ್ತು ಆತನ ಮೇಲೆ ಯಜಮಾನಿಕೆಯನ್ನು ತೋರಿಸುವುದರಿಂದ ಆಕೆ ಅಂತಹ ಅಗೌರವವನ್ನು ವ್ಯಕ್ತಪಡಿಸಿದ ಆಘಾತಕಾರಿ ಪ್ರತಿಕ್ರಿಯೆಯು ಮತ್ತೊಂದು ನಿಧಿಯಾಗಿದೆ. ಯೇಸು ಮತ್ತು ಆತನ ಶಿಷ್ಯರು ಒಂದಾನೊಂದು ಹಳ್ಳಿಯನ್ನು ಪ್ರವೇಶ ಮಾಡುವುದರಿಂದ ಕಥೆಯು ಪ್ರಾರಂಭವಾಗುತ್ತದೆ. ಆದರೆ ಕಥೆಯಲ್ಲಿ ಮಾರ್ಥಳು ಯೇಸುವನ್ನು ತನ್ನ ಮನೆಗೆ ಆಹ್ವಾನಿಸಿದ್ದಳು ಎಂಬುದನ್ನು ಮಾತ್ರ ನಮಗೆ ಹೇಳಲ್ಪಟ್ಟಿದೆ. ಯೇಸು ತನ್ನ ಶಿಷ್ಯರೊಂದಿಗೆ ಬಂದನು ಎಂಬುದಾಗಿ ಕಥೆಯಲ್ಲಿ ಹೇಳಲ್ಪಟ್ಟಿಲ್ಲ.

ಚರ್ಚೆಗೆ ಒಂದು ಸ್ಪಷ್ಟತೆಯನ್ನು ಕೊಡುವುದಕ್ಕೆ, ಈ ಕಥೆಗೆ ಈ ರೀತಿಯ ಒಂದು ಪರಿಚಯವನ್ನು (ಪೀಠಿಕೆಯನ್ನು) ಕೊಡುವುದು ವಿವೇಕತನವಾಗಿದೆ. "ಯೇಸು ಭೂಮಿಯ ಮೇಲಿದ್ದಾಗ ಆತನೊಂದಿಗೆ ಹೋಗುವುದಕ್ಕಾಗಿ ಆತನು

ಕೆಲವು ವ್ಯಕ್ತಿಗಳನ್ನು ಆರಿಸಿಕೊಂಡನು. ಈ ವ್ಯಕ್ತಿಗಳನ್ನು ಶಿಷ್ಯರು ಎಂದರು ಕರೆಯಲಾಗಿದ್ದು, ಯೇಸು ಕೆಲ ತಾಸುಗಳಿಗಾಗಿ ತಾನೊಬ್ಬನೇ ಹೊರಟನು ಅಥವಾ ಇನ್ನೂ ಕೆಲವೆಡೆ ಯೇಸು ಸ್ವಲ್ಪ ಸಮಯಕ್ಕಾಗಿ ತನ್ನೊಂದಿಗೆ ಬೇರೆಯವರನ್ನು ಬಿಟ್ಟು ಕೆಲವರನ್ನು ಮಾತ್ರ ಕರೆದುಕೊಂಡು ಹೋದನು ಎಂದು ನಮಗೆ ಹೇಳಲ್ಪಟ್ಟ ಕಡೆಗಳಲ್ಲಿ ಹೊರತು ಪಡಿಸಿ, ಈ ಶಿಷ್ಯರು ಯಾವಾಗಲೂ ಯೇಸುವಿನೊಂದಿಗೆ ಇರುತ್ತಿದ್ದರು." ಯೇಸು ಭೇಟಿಕೊಟ್ಟ ಸ್ಥಳದಲ್ಲಿ ಆತನ ಶಿಷ್ಯರೂ ಸಹ ಆತನೊಂದಿಗಿದ್ದರು ಎಂಬುದನ್ನು ಕೇಳುಗರು ಗ್ರಹಿಸುವಂತೆ ಈ ಮಾಹಿತಿಯು ಸಹಾಯ ಮಾಡುತ್ತದೆ.

ಕಥೆ ಹೇಳುವವರು ತಮ್ಮ ಬಳಿ ಇರುವ ಜನರಲ್ಲಿ ಒಬ್ಬರು ಅಥವಾ ಹೆಚ್ಚಿನ ಜನರಿಗೆ ನಿಮ್ಮ ಕಥೆಯಲ್ಲಿ ಮತ್ತು ಪರಿಚಯದಲ್ಲಿ ಏನು ಹೇಳುವಿರೋ ಅದನ್ನು ಹೊರತು ಪಡಿಸಿ, ಅವರಿಗೆ ಸತ್ಯವೇದದ ಕುರಿತಾಗಿ ತಿಳಿದಿಲ್ಲ ಎಂಬುದನ್ನು ನೀವು ಊಹಿಸಬೇಕು. **ಈ ಮಾಹಿತಿಯನ್ನು ಒಳಗೊಂಡಿರುವ ಪ್ರಶ್ನೆಗಳನ್ನು ನೀವು ಅವರಿಗೆ ಕೇಳುವುದಕ್ಕೂ ಮೊದಲೇ,** ನೀವು ಕೇಳುಗರೊಂದಿಗೆ ಚರ್ಚಿಸುವುದಕ್ಕೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಿಸುವುದು, *ಕಥೆ* ಮಾತ್ರಕ್ಕೆ ಒಂದು ಯಶಸ್ಸಿನ ಕೀಲಿಗೈಯಾಗಿದೆ.

ಬಂದಿರುವಂತವರಿಗೆ ನೀವು ಕೆಲವು ಕಥೆಗಳನ್ನು ಕಲಿಸಿರುವುದಾದರೆ, ಈ ಮೊದಲೇ ಹೇಳಲ್ಪಟ್ಟಿರುವ ಕಥೆಗಳ ಮಾಹಿತಿಯ ಆಧಾರದ ಮೇಲೆ ಒಳಗೊಂಡಿರುವ ಪ್ರಶ್ನೆಗಳನ್ನು ಕೇಳಬಹುದು. ಅನೇಕ ಕಥೆಗಳ ಒಳಗೆ ಯಥೇಚ್ಚವಾದ ಮಾಹಿತಿಗಳಿವೆ ಎಂಬುದನ್ನು ಮನದಲ್ಲಿಟ್ಟುಕೊಂಡು, ಸಾಮಾನ್ಯವಾಗಿ ಒಂದು ಕಥೆಯನ್ನು ಚೆನ್ನಾಗಿ ಕಲಿಸಲು ಸತ್ಯವೇದದ ಇನ್ನಿತರ ಕಡೆಗೆ ನೀವು ಹೋಗುವ ಅಗತ್ಯವಿಲ್ಲ.

ಅಪರೂಪವಾಗಿ, ಕುಷ್ಠರೋಗಿಗಳು, ಸಬ್ಬತ್, ತಿನ್ನುವುದು ಅಥವಾ ಯೆಹೂದ್ಯರು ಸಮಾರ್ಯದವರ ಕುರಿತಾಗಿ ಹೇಗೆ ಆಲೋಚನೆಯನ್ನು ಹೊಂದಿದ್ದರು ಎಂಬುದರ ಕುರಿತಾಗಿ ಇದ್ದ ದೇವರ ನಿಯಮಗಳ ಬಗೆಗಿನ ಹೆಚ್ಚಿನ ಮಾಹಿತಿಯನ್ನು ತರುವಂತಹುದು, ಒಂದು ಕಥೆಯ ಘಟನೆಗಳಿಗೆ ಆಳವಾದ ಅರ್ಥವನ್ನು ಕೊಡಬಲ್ಲದು.

ಹಾಗೂ, ಕಥೆಯಲ್ಲಿರುವ ನಿಧಿಗಳ ಚರ್ಚೆಯನ್ನು ಮಾಡುವಾಗ, ಸತ್ಯವೇದದ ಇನ್ನಿತರ ವಾಕ್ಯಭಾಗಗಳಲ್ಲಿ ವಿವರಿಸಿರುವಂತಹ ಬಹಳ ಸ್ಪಷ್ಟವಾದ ಗುರುತುಗಳನ್ನು ಸಹ ನೀವು ಪರಿಚಯಿಸಲು ಬಯಸಬಹುದು. ಈ ಗುರುತಿನ ಅರ್ಥವನ್ನು ಕೇಳುಗರು ಕಂಡುಹಿಡಿಯುವುದಕ್ಕೆ ಸಹಾಯವಾಗುವಾಂತೆ ಅವರಿಗೆ ಮತ್ತೊಂದು "ಕಥೆ"ಯನ್ನು ಹೇಳಿ. ಸತ್ಯವೇದದ ಮತ್ತೊಂದು ವಾಕ್ಯಭಾಗದಿಂದ ಇದಕ್ಕೆ ಸೇರಿಸಲ್ಪಡುವ ಕೆಲವು ವಾಕ್ಯಗಳನ್ನು ತೋರಿಸಿ. ನೀವು ನಿರೂಪಿಸುತ್ತಿರುವಂತಹ ಕಥೆಯ ಒಳಗಿನ ಆಳವಾದ ಆತ್ಮೀಕ ಭಾಗಗಳನ್ನು ನಿಮ್ಮ ಕೇಳುಗರು ನಿಜವಾಗಲೂ ಗ್ರಹಿಸುತ್ತಿರುವರು ಎಂಬ ಭರವಸೆ ನಿಮಗಿರುವುದಾದರೆ ಮಾತ್ರ ಹೀಗೆ ಮಾಡಿರಿ.

ನೀವು ಕೊಡುತ್ತಿರುವ ಕಥೆಯ ಕುರಿತಾಗಿರುವ ಹೆಚ್ಚಿನ ಮಾಹಿತಿಯಿಂದ ಕೇಳುಗರು ಸುಲಭವಾಗಿ ಅನ್ವಯಿಸುವಿಕೆಗಳನ್ನು ಮಾಡುವಂತೆ ಅವು ಬಹಳ ಸ್ಪಷ್ಟವಾಗಿರಬೇಕು. ಈ ಭಾಗದ ಚರ್ಚೆಯನ್ನು ಹೀಗೆ ಹೇಳುತ್ತಾ ಪ್ರಾರಂಭಿಸಿ: "ಇದು ನಡೆದ ಬಹಳ ದೀರ್ಘಕಾಲದ ನಂತರ ನಡೆದ ಮತ್ತೊಂದು ಕಥೆಯಿದೆ." ಕೆಲವು ಸಂಕೇತಗಳ ಅಧ್ಯಯನವನ್ನು ಅಥವಾ ಸಂಕೇತಗಳನ್ನು ಒಳಗೊಂಡಿರುವ ಒಂದು ವಾಕ್ಯಭಾಗಕ್ಕೆ ಅವರನ್ನು ನಡೆಸಬಹುದು. ಅನೇಕ ಬಾರಿ ಇದು ಹೊಸ ಒಡಂಬಡಿಯ ನಂತರದಲ್ಲಿ ನಡೆಯುತ್ತದೆ.

ಉದಾಹರಣೆಗೆ, ನೀವು ವಿಮೋಚನಕಾಂಡ 17:1-7ನ್ನು ಹೇಳಿರುವಿರಿ ಹಾಗೂ ನಿಮ್ಮ ಗುಂಪಿನವರು ಆತ್ಮೀಕ ನಿಧಿಗಳನ್ನು ಅವಲೋಕಿಸಿ, ಅನ್ವಯಿಸುವಿಕೆಗಳನ್ನು ಮಾಡಿ, ಚರ್ಚೆಯನ್ನು ಮುಗಿಸಿದಾಗ, ನೀವು ಈ ರೀತಿ ಹೇಳುವುದಕ್ಕೆ ಬಯಸಬಹುದು:

"ನಾವು ಸತ್ಯವೇದದಲ್ಲಿರುವ ಕಥೆಗಳನ್ನು ಒಟ್ಟಾಗಿ ಚರ್ಚಿಸುವುದಕ್ಕೂ ಬಹಳ ಮುಂಚಿತವಾಗಿ, ಹೊಸ ಒಡಂಬಡಿಕೆಯಲ್ಲಿರುವ ಒಂದು ಕಥೆಯ ಭಾಗವನ್ನು ನಾನು ನಿಮಗೆ ಹಂಚಲು ಬಯಸಿದ್ದೆ. ಇದು ಮೋಶೆ ಮತ್ತು ಬಂಡೆಯ ಕಥೆಯಲ್ಲಿರುವುದಕ್ಕಿಂತಲೂ ಹೆಚ್ಚಾದ ಸಂಗತಿಗಳನ್ನು ಕಂಡುಹಿಡಿಯುವುದಕ್ಕೆ ನಮಗೆ ಸಹಾಯ ಮಾಡಬಲ್ಲದು. ನಾವು 1 ಕೊರಿಂಥ 10:2-4ರಲ್ಲಿ ಹೀಗೆ ಕೇಳಿದ್ದೇವೆ,

> ಅವರೆಲ್ಲರೂ ಸಮುದ್ರವನ್ನು ದಾಟಿಹೋದರು; ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು; (3) ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು; (4) ಅವರೆಲ್ಲರೂ ದೈವಿಕವಾದ ಒಂದೇ ನೀರನ್ನು ಕುಡಿದರು; ಹೇಗಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೇ.'

ಈ ಕಥೆಯಲ್ಲಿ ಬಂಡೆಯು ಒಂದು ಸಂಗತಿಗೆ ಅಥವಾ ಒಬ್ಬ ವ್ಯಕ್ತಿಗೆ ಗುರುತಾಗಿದೆ ಎಂದು ದೇವರು ಹೇಳಿದರು. ಬಂಡೆಯು ಏನನ್ನು ಪ್ರತಿನಿಧಿಸುತ್ತದೆ? ಇದು ನಿಮಗೆ ಹೇಗೆ ಮಾತನಾಡುತ್ತದೆ?

ಕಥೆಗೆ ಕೇಳುಗರು ಕೊಡುವ ಪ್ರತಿಕ್ರಿಯೆಯನ್ನು ಕೇಳಿಸಿಕೊಳ್ಳಿ. ಜನರು ಕೊಡುವಂತ ಉತ್ತರಗಳು ಅವರ ಅಗತ್ಯತೆಗಳನ್ನು ಮತ್ತು ಅವರ ವೈಯಕ್ತಿಕ ಪ್ರಶ್ನೆಗಳನ್ನು ಗ್ರಹಿಸುವಂತೆ ನಿಮಗೆ ಸಹಾಯ ಮಾಡುತ್ತವೆ. ನೀವು ಮುಂದುವರೆಸಿದಂತೆಲ್ಲ ಆ ಒಳದೃಷ್ಟಿಗಳು ಮೂಲವಾದ ಪ್ರಶ್ನೆಗಳನ್ನು ರೂಪಿಸುವುದಕ್ಕೆ ನಿಮಗೆ ಸಹಾಯ ಮಾಡುತ್ತವೆ. ಇದನ್ನು "ಆ ಕ್ಷಣದಲ್ಲಿ ಕಲಿಸುವುದು ಅಥವಾ ಬೋಧಿಸುವುದು" ಎಂದು ಕರೆಯಲಾಗುತ್ತದೆ.

ಹೆಚ್ಚಿನ ಪ್ರಶ್ನೆಗಳು ಜನರು ಏನು ಮಾಡಿದರು ಅಥವಾ ದೇವರು ಏನು ಮಾಡಿದರು ಎಂಬುದರ ಕುರಿತಾಗಿರಬೇಕು. ಈ ಪ್ರಶ್ನೆಗಳು ಆತ್ಮೀಕ ಸತ್ಯಗಳನ್ನು ಕಂಡುಹಿಡಿಯುವುದಕ್ಕೆ ಕೇಳುಗರನ್ನು ನಡೆಸುತ್ತವೆ. ಪಾತ್ರಗಳು ಮಾತನಾಡುವಂತಹ ಮಾತುಗಳು ಮತ್ತು ಕ್ರಿಯೆಗಳನ್ನು ಪುನರ್‌ಪರಿಶೀಲಿಸಿ. "ಏಕೆ" ಎಂಬ ಪ್ರಶ್ನೆಗಳನ್ನು ಕೇಳುವುದರ ಕುರಿತಾಗಿ ಎಚ್ಚರಿಕೆಯಿಂದಿರಿ, ಏಕೆಂದರೆ ಆಗ ಅವರು ವಾಕ್ಯದಿಂದ ತೆಗೆದು ಹೇಳಲಾಗದಂತಹ ಊಹೆಗೆ ಮತ್ತು ಆಲೋಚನೆಗೆ ಅವರನ್ನು ಕರೆದೊಯ್ಯುವಂತೆ ಮಾಡಬಹುದು. ಸಾಮಾನ್ಯವಾಗಿ "ಏನು" ಎಂಬಂತಹ ಪ್ರಶ್ನೆಗಳನ್ನು ಕೇಳುವುದು ಉತ್ತಮವಾಗಿರುತ್ತವೆ.

ಅವಲೋಕನದ ಪ್ರಶ್ನೆಗಳನ್ನು ಕೇಳಿ. ಒಂದು ಕಥೆಯ ಮೊದಲ ಭಾಗದ ಚಿಕ್ಕ ಅಂಶವನ್ನು ಪುನಃ ಹೇಳಿದ ನಂತರ, "ಕಥೆಯ ಮೊದಲ ಭಾಗದಲ್ಲಿರುವ ಯಾವುದಾದರೂ ನಮಗೆ ನಂಬಿಕೆಯ (ಕಥೆಯಲ್ಲಿನ ಪಾತ್ರಗಳನ್ನು ಆಯ್ಕೆ ಮಾಡಿ) ಕುರಿತಾಗಿ ಏನನ್ನಾದರೂ ತೋರಿಸಬಲ್ಲದೇ?" "ಆ ವ್ಯಕ್ತಿಯು ಯಾವುದಕ್ಕೆ ಮೌಲ್ಯವನ್ನು ಕೊಟ್ಟನು ಎಂಬುದನ್ನು ಕಥೆಯು ನಮಗೆ ಹೇಗೆ ತೋರಿಸುತ್ತದೆ?" ಎಂದು ಹೇಳಬಹುದು.

ಹೇಳಿ, "ದೇವರ ಗುಣಲಕ್ಷಣದ ಕುರಿತಾಗಿ ನಮಗೆ ಯಾವುದು ತಿಳಿಯಪಡಿಸುತ್ತದೆ?" ಅಥವಾ "ಕಥೆಯಲ್ಲಿನ ಯಾವುದು ನಂಬಿಗಸ್ತಿಕೆಯ ಕುರಿತಾಗಿ ತೋರಿಸುತ್ತದೆ?". "ಕಥೆಯಲ್ಲಿನ ಯಾವ ಭಾಗ ಅಗೌರವವನ್ನು ತೋರ್ಪಡಿಸುತ್ತದೆ ಅಥವಾ ಭಯ, ಅಥವಾ ಗಲಿಬಿಲಿ, ಅಥವಾ ದುರಾಸೆ, ಅಥವಾ ಕನಿಕರ ಅಥವಾ ಧೈರ್ಯ ಅಥವಾ ಭರವಸೆ, ಅಥವಾ ಜ್ಞಾನ?" ನೀವು ಕೇಳುವಂತಹ ಪ್ರಶ್ನೆಗಳು ನೀವು ಈಗಷ್ಟೇ ಹೇಳಿದ ಕಥೆಯ ಒಳಗೆ ಇರುವಂತಹ ಮಾಹಿತಿಯನ್ನು ಒಳಗೊಂಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಆ ಪ್ರಶ್ನೆಗಳಿಗೆ ಹೌದು ಅಥವಾ ಇಲ್ಲ ಎಂಬ ಪ್ರತಿಕ್ರಿಯೆಗಳಾಗಿ ಬಂದರೆ, ಆಗ ನೀವು "ಹೌದು" ಎಂದು ಹೇಳಿದವುಗಳನ್ನು ಒಂದು ಪ್ರಶ್ನೆಯ ಮೂಲಕ ಕೇಳಬಹುದು, ಅಂದರೆ, "ನಮಗೆ ಸಹಾಯ ಮಾಡಿ. ಇದನ್ನು ಈ ಭಾಗದಲ್ಲಿ ನೀವು ಹೇಗೆ (ಎಲ್ಲಿ) ನೋಡುವಿರಿ?"

ಕಥೆಯಲ್ಲಿರುವ ಸತ್ಯಗಳ ಅನ್ವಯಿಸುವಿಕೆಗಳನ್ನು ಕೇಳುಗರು ಕ್ರಮೇಣವಾಗಿ ಮಾಡುವಂತೆ ಅವರಿಗೆ ಸಹಾಯ ಮಾಡಿ. ನೀವು ನಿಮ್ಮ ಚರ್ಚೆಯ ಸಮಯದಲ್ಲಿ ಆತ್ಮೀಕ ಅನ್ವಯಿಸುವಿಕೆಗಳ ಬೇಟೆಯಲ್ಲಿ ಹಾದುಹೋಗುವಾಗ ಜನರು ಹೇಳುವುದನ್ನು ಗಮನವಿಟ್ಟು ಕೇಳಿಸಿಕೊಳ್ಳಿ. ಕಥೆಯಲ್ಲಿರುವ ಜನರಲ್ಲಿ ನೋಡಿರುವಂತಹ ಅದೇ ಭಾವನೆಗಳು ಮತ್ತು ಪ್ರತಿಕ್ರಿಯೆಗಳು (ಸಂದೇಹ, ಭಯ, ನಂಬಿಕೆ, ನಿರೀಕ್ಷೆ, ಗಲಿಬಿಲಿ, ಇತರೆ) ಅವರಿಗೆ ಅಥವಾ ಅವರಿಗೆ ಪರಿಚಯವಿರುವಂತವರಿಗೆ ಸಂಭವಿಸಿದೆಯೇ ಎಂದು ಕೇಳುವ ಅವಕಾಶಗಳಿಗಾಗಿ ಕೇಳಿಸಿಕೊಳ್ಳಿ. ನೀವು "ಹೌದು" ಎಂದು ಕೇಳಿಸಿಕೊಂಡಾಗ ಅಥವಾ ಅವರ ದೇಹ ಚಲನೆಯು "ಹೌದು" ಎಂಬುದನ್ನು ಸೂಚಿಸಿದಾಗ, ಅದು "ಯಾರಾದರೂ ಆ ಅನುಭವವನ್ನು ಹಂಚಿಕೊಳ್ಳಲು ಬಯಸುವಿರೇ?" ಎಂದು ಕೇಳಲು ಒಳ್ಳೆಯ ಸಮಯವಾಗಿರುತ್ತದೆ.

ವೈಯಕ್ತಿಕ ಅನ್ವಯಿಸುವಿಕೆಗಳನ್ನು ಹಂಚಿಕೊಳ್ಳಿರಿ. ನೀವು ಅನ್ವಯಿಸುವಿಕೆಗಳ ಚರ್ಚೆಯನ್ನು ಮುಗಿಸಿದಾಗ, ಈ ರೀತಿ ಮಾಡುವುದಕ್ಕೆ ನೀವು ದೇವರಿಂದ ನಡೆಸಲ್ಪಡುವುದಾದರೆ, ಕಥೆಯ ಕೆಲವು ಭಾಗಗಳು ನಿಮಗೆ ನಿಮಗೆ ಹೇಗೆ ಪರಿಣಾಮ ಬೀರಿತು ಎಂಬುದನ್ನು ಹಂಚಿಕೊಳ್ಳಿ. ಅಥವಾ, ಅವರಿಗೆ ಕಥೆಯ ಯಾವುದಾದರೂ ನಿರ್ದಿಷ್ಟ ಭಾಗವು ಹೇಗೆ ಪರಿಣಾಮ ಬೀರಿದೆ ಎಂಬುದನ್ನು ಕೇಳಬಹುದು.

ಪ್ರಶ್ನೆಗಳ ಆಧಾರದ ಮೇಲೆ ಸಹಾಯವಾಗುವಂತಹ ಸುಳಿವುಗಳು. ನೀವು ಕೇಳುವ ಪ್ರಶ್ನೆಗಳು

- ಕಥೆ ಹೇಳುವವರ ಪ್ರಶ್ನೆಗಳಿಗೆ ಕೊಡಲ್ಪಡುವ ಉತ್ತರಗಳು ಕಥೆಯಿಂದ ಒಳಗೊಂಡಿರುವಂತಹುದು
- ಕಥೆಯಲ್ಲಿ ರುಜುಪಡಿಸುವಂತಹುದಾಗಿರಬೇಕು.

ಕಥೆಯಿಂದಲ್ಲದೆ ಬೇರೆ ವಿಷಯಗಳಿಂದ ಕೊಡುವ ಮಾಹಿತಿ. ಕಥೆಯಲ್ಲಿರುವ ಒಂದು ಬಹಳ ಮುಖ್ಯವಾದ ಒಳದೃಷ್ಟಿ ಅಥವಾ ಅನ್ವಯಿಸುವಿಕೆಯು ಆ ಸತ್ಯವನ್ನು ತೋರಿಸುವುದಕ್ಕೆ ವಾಕ್ಯವನ್ನು ಬಿಟ್ಟು ಬೇರೆ ಸಂಗತಿಯನ್ನು ಹೇಳುವಂತಹ ಅಗತ್ಯವಿರುವುದಾದರೆ, ಆಗ ನೀವು ಆ ವಾಕ್ಯಾಧಾರಿತ ಮಾಹಿತಿಯನ್ನು ಕಥೆಗೆ ಕೊಡುವ ಪರಿಚಯದಲ್ಲಿ ಸೇರಿಸಬಹುದು. ಅದೇ ರೀತಿಯಲ್ಲಿ, ಕಥೆಯಲ್ಲಿಯೇ ರುಜುಪಡಿಸುವಂತಹ ಎಲ್ಲಾ ಅನ್ವಯಿಸುವಿಕೆಯನ್ನು ನಿರೂಪಿಸಿದ ನಂತರ ಹೆಚ್ಚಿನ ವಾಕ್ಯವನ್ನು ಕೊಡಬಹುದು.

ಇದನ್ನು ಅಪರೂಪವಾಗಿ ಮಾತ್ರ ಮಾಡಿ, ಏಕೆಂದರೆ ವಾಕ್ಯವನ್ನು ಹೊರತು ಪಡಿಸಿ ಬೇರೆ ಸಂಗತಿಗಳನ್ನು ಉಪಯೋಗಿಸುವುದರಿಂದ, ಕೇಳುಗರು ಕಥೆಯನ್ನು ಮಾತ್ರ ಕೇಳಿಸಿಕೊಳ್ಳುವುದನ್ನು ಬಿಟ್ಟು ಕಥೆ ಹೇಳುವವರ

ಶೋಧನೆಯ ಮೇಲೆಯೇ ಆಧಾರಗೊಳ್ಳುವಂತೆ ಮಾಡುತ್ತದೆ. ಹಿಂದೆ ಹೇಳಲ್ಪಟ್ಟ ಕಥೆಯ ಸಮಯದಲ್ಲಿ ಕೇಳುಗರು ಪಡೆದುಕೊಂಡ ಸತ್ಯವೇದದ ಮಾಹಿತಿಯ ಆಧಾರದ ಮೇಲೆ ಕಥೆ ಹೇಳುವವರು ಪ್ರಶ್ನೆಯನ್ನು ಕೇಳಬಹುದು.

ಒಳ್ಳೆಯ ಉತ್ತರಗಳು. ಜನರು ಸರಿಯಾದ ಉತ್ತರಗಳನ್ನು ಕೊಟ್ಟಾಗ ಅವರನ್ನು ಪ್ರೋತ್ಸಾಹಿಸಿ. ಅವರಿಗೆ, "ಒಳ್ಳೆಯ ಉತ್ತರ," "ನಾನೆಂದೂ ಇದರ ಬಗ್ಗೆ ಆಲೋಚಿಸಿಲ್ಲ," ಅಥವಾ "ಇದು ಅರ್ಥವನ್ನು ಕೊಡುತ್ತದೆ" ಎಂದು ಹೇಳಿರಿ.

ಅಷ್ಟೇನೂ ಸರಿಯಾದ ಉತ್ತರಗಳಲ್ಲ. ಕೇಳುಗರು ಕೊಟ್ಟಂತಹ ಉತ್ತರಗಳು ತಪ್ಪಾದ ಮಾಹಿತಿಯಾಗಿದ್ದರೆ, ನೀವು, "ಈಗ ನಾವು ಪುನಃ ಕಥೆಯ ಕಡೆಗೆ ನೋಡಿ ಈ ಉತ್ತರ ಸರಿ ಹೊಂದುತ್ತದೆಯೋ ಎಂದು ನೋಡೋಣ" ಎಂದು ಹೇಳಿರಿ. ನಂತರ ಅವರು ಇದನ್ನು ಪರಿಶೀಲಿಸಿ ನೋಡಿದಾಗ ಅವರು ಕೊಟ್ಟ ಉತ್ತರಗಳು ತಪ್ಪಾದವುಗಳು ಎಂಬುದು ತಿಳಿದುಬಂದರೆ, ನೀವು "ನಾನು ಈ ಭಾಗವನ್ನು ಅಷ್ಟು ಸ್ಪಷ್ಟವಾಗಿ ಹೇಳಲಿಲ್ಲ" ಅಥವಾ "ನನ್ನ ಪ್ರಶ್ನೆಯು ಸರಿಯಾಗಿ ಹೇಳಲ್ಪಡಲಿಲ್ಲವೇನೋ" ಎಂದು ಇದರ ಹೊಣೆಯನ್ನು ನಿಮ್ಮ ಮೇಲೆ ಹೊರಿಸಿಕೊಳ್ಳಬಹುದು.

ಒಬ್ಬ ಕೇಳುಗರ ಉತ್ತರ ಅಥವಾ ಒಂದು ಪ್ರಶ್ನೆಯು ಸಂಪೂರ್ಣವಾಗಿ ನಿಮ್ಮ ವಿಷಯದ ಹೊರಗೆ ಇರುವುದಾದರೆ, ಆಗ ನೀವು "ನೀವು ಹೇಳಿದ ಈ ವಿಷಯವನ್ನು ಮತ್ತೊಮ್ಮೆ ಎಂದಾದರೂ ಚರ್ಚಿಸೋಣ" ಅಥವಾ "ಇಲ್ಲದಿದ್ದರೆ ಮುಂದಿನ ಬಾರಿ ನಾವು ಉತ್ತರವನ್ನು ಕಂಡುಕೊಳ್ಳೋಣ" ಎಂದು ಹೇಳಬಹುದು. ಕೆಲವು ಪ್ರಶ್ನೆಗಳು ಬಹಳ ಕಷ್ಟಕರವಾಗಿರುವುದರಿಂದ ನೀವು ಅವುಗಳಿಗೆ ಉತ್ತರಿಸಲು ಸಮಯವನ್ನು ಕೊಡದಿದ್ದರೆ ಇದು ಅವರನ್ನು ಬೇರೆಡೆಗೆ ಎಳೆದೊಯ್ಯುತ್ತದೆ, ಇದರಿಂದ ಇಡೀ ಗುಂಪಿನವರು ನಿಮ್ಮ ಮುಖ್ಯವಾದ ವಿಷಯವನ್ನು ಬಿಟ್ಟು ಬೇರೆ ವಿಷಯಕ್ಕೆ ಅವರ ಗಮನವನ್ನು ಸೆಳೆಯುತ್ತದೆ.

ಕೊನೆಯ ಒಂದು ಸಂಭವನೀಯ ಪ್ರಶ್ನೆ. ಎಲ್ಲಾ ಅವಲೋಕನಗಳ ಮತ್ತು ಅನ್ವಯಿಸುವಿಕೆಗಳ ಪ್ರಶ್ನೆಗಳ ಚರ್ಚೆಯನ್ನು ಮುಗಿಸಿದ ನಂತರ, ನೀವು "ಈ ಕಥೆಯು ನಿಮ್ಮ ಕುರಿತಾಗಿ ಏನು ಮಾತನಾಡುತ್ತದೆ?" ಅಥವಾ "ಈ ಕಥೆಯ ಕುರಿತಾಗಿ ಮಾಡಿದ ಚರ್ಚೆಯಿಂದ ನೀವು ಕಲಿತುಕೊಳ್ಳಬಹುದಾದಂತಹ ಹೊಸ ಸಂಗತಿ ಯಾವುದು?" ಎಂದು ಕೇಳಬಹುದು.

ಗುಂಪುಗಳು ದೊಡ್ಡದಾಗಿದ್ದರೆ ಅಥವಾ ಸಮಯದ ಅಭಾವವಿದ್ದರೆ. ಪ್ರಶ್ನೆಗಳನ್ನು ಕೇಳುವುದು ಮತ್ತು ಕೇಳುಗರು ಕೊಡುವ ಪ್ರತಿಕ್ರಿಯೆಗಳಿಗೆ ಪ್ರತಿಕ್ರಿಯಿಸುವುದು *ಕಥೆ* ಮಾತ್ರದಲ್ಲಿ ಉಪಯೋಗಿಸುವ ಒಂದು ಉನ್ನತ ಮಟ್ಟವಾಗಿದೆ. ನಿಮಗೆ ಲಭ್ಯವಿರುವ ಸಮಯವು ಉತ್ತರಗಳ ಗಮನಿಸುವಿಕೆಗೆ ಅಥವಾ ಸಂದರ್ಭಗಳಿಗೆ ಅಥವಾ ಗುಂಪಿನ ಹೆಚ್ಚಿನ ಭಾಗ ಉತ್ತರವನ್ನು ಪಡೆಯುವುದರಲ್ಲಿ ವಿಫರಾದಾಗ, ಇದಕ್ಕೆ ಒಂದು ಆಯ್ಕೆ ಇದೆ. *ಕಥೆ* ಮಾತ್ರವನ್ನು ಉಪಯೋಗಿಸುವಂತಹ ಶಿಕ್ಷಕರು ಪರಿಣಾಮವನ್ನು ಬೀರುವಂತಹ ಪ್ರಶ್ನೆಗಳನ್ನು ಕೇಳಬಹುದಾಗಿದೆ. ಜನರು ಕೇಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ಆಲೋಚಿಸಬೇಕು, ಆದರೆ ಅವುಗಳನ್ನು ಜೋರಾಗಿ ಹೇಳಬಾರದು ಎಂದು ಹೇಳಿರಿ. ನೀವು ಕಥೆ ಹೇಳುವವರಾಗಿ ಕೇಳುಗರು ತಮ್ಮ ಉತ್ತರಗಳಿಗಾಗಿ ಕೆಲವು ಕ್ಷಣಗಳನ್ನು ತೆಗೆದುಕೊಳ್ಳುವಂತೆ ಅನುಮತಿಸುವುದನ್ನು ಖಚಿತಪಡಿಸಿಕೊಳ್ಳಿ.

ಕಥೆಯು ಸರಿಯಾಗಿ ಸಂಪೂರ್ಣವಾಗಿಡುವುದು: ಹಿಂದೆ ಕಲಿತ್ತಿದ್ದನ್ನು ಜ್ಞಾಪಿಸಿಕೋಳ್ಳುವುದರ ಮಹತ್ವ.

ಎಸ್ ಟಿ ಎಸ್ ನ ಮೂಲಕ ದೇವರ ವಾಕ್ಯವನ್ನು ಒಟ್ಟಾಗಿ ಚರ್ಚಿಸುವುದರಿಂದ ಪುನರುಜ್ಜೀವಿತಗೋಳಿಸುವ ಮಹತ್ವವನ್ನು ಪಡೆದುಕೋಳ್ಳುತ್ತದೆ.

ಎಸ್ ಟಿ ಎಸ್ ನ ಮೂಲಕ ಸತ್ಯವೇದದ ಕಥೆಗಳನ್ನು ಮೊದಲಿನಿಂದ ಕ್ರಮಬದ್ಧವಾಗಿ ಕಲಿಯುವಾಗ ಹಿಂದಿನ ಕಥೆಯನ್ನು ಗುರುತು ಮಾಡಿಕೋಳ್ಳುವುದು ಒಂದು ಒಳ್ಳೆಯ ಕೆಲಸವಾಗಿದೆ. ಕಥೆಗೆ ಪೀಠಿಕೆ ಹೇಳುವುದರ ಬದಲು ಕಥೆ ಹೇಳುವವರು ಕಥೆಯನ್ನು ಕಲಿಯಲು ಬಂದಿರುವವರಿಗೆ ಹಿಂದೆ ಕಲಿತ ಕಥೆಯನ್ನು ಹಾಗು ಆ ಕಥೆಯಲ್ಲಿ ಕಲಿತುಕೋಂಡ ಆತ್ಮೀಕ ನಿದಿಗಳನ್ನು ಗುರುತುಮಾಡಿಕೋಳ್ಳುವುದು ಬಹಳ ಒಳ್ಳೆಯದು.

ಹೋಸಬರು ಆ ಕೂಟಕ್ಕೆ ಬಂದಿರಬಹುದು, ಅವರಿಗೋಸ್ಕರ ಹಿಂದೆ ಕಲಿತ್ತಿದ್ದನ್ನು ಜ್ಞಾಪಿಸಿಕೋಳ್ಳುವುದು ಬಹಳ ಒಳ್ಳೆಯದು. ಕೆಲವೋಮ್ಮೆ ಕೆಲವರು ಹಿಂದಿನ ತರಗತಿಗೆ ಬಂದಿಲ್ಲದಿರಬಹುದು. ಇಂತವರಿಗೆ ಹಿಂದೆ ಕಲಿತ್ತಿದ್ದನ್ನು ಜ್ಞಾಪಿಸಿಕೋಳ್ಳುವುದರಿಂದ ಈ ದಿನದ ತರಗತಿಯಲ್ಲಿ ಅವರು ಭಾಗವಹಿಸಲು ಹಾಗು ಹಿಂದಿನ ಕಥೆಯನ್ನು ಕಲಿಯುವುದಕ್ಕೆ ಅವರಿಗೆ ತುಂಬ ಸಹಾಯವಾಗುತ್ತದೆ.

ಕೆಲವು ಸಮಯ ಹಿಂದೆ ಕಂಡುಕೊಂಡ ಆತ್ಮೀಕ ನಿದಿಗಳನ್ನು ಜ್ಞಾಪಿಸಿಕೋಳ್ಳುವುದು ಮತ್ತು ಅವುಗಳಿಂದ ಅವರು ಏನು ಕಲಿತಿರಬಹುದೆಂದು ತಿಳಿಯುತ್ತದೆ. ಹಿಂದಿನ ಕಥೆಯನ್ನು ಗುರುತು ಮಾಡಿಕೋಳ್ಳುವುದರಿಂದ ಅವರು ಇತರರಿಗೆ ತಿಳಿಸಲು ಸಹಾಯವಾಗುತ್ತದೆ. ಕಳೆದ ವಾರ ಅವರು ಕಲಿತ ಕಥೆಯನ್ನು ಯಾರಿಗಾದರು ಹೇಳಿದ್ದರೆ ಅದರಿಂದ ಅವರಿಗಾದ ಅನುಭವದ ಕುರಿತು ಅವರಿಂದ ಸಾಕ್ಷಿ ಹೇಳಿಸಲು ಇದು ಒಂದು ಒಳ್ಳೆಯ ಸಮಯವಾಗಿರುತ್ತದೆ.

ಈ ಸಮಯದಲ್ಲಿ ಕಳೆದ ತರಗತಿಗೆ ಆಜರಾದ ಎಲ್ಲಾ ಸದಸ್ಯರಗೆ ನೀವು ಕಳೆದ ತರಗತಿಯಲ್ಲಿ ಏನು ಹೋಸದಾಗಿ ಕಲಿತುಕೋಡಿರಿ ಎಂದು ಕೇಳುತ್ತಾ ಹಿಂದೆ ಕಲಿತ್ತಿದ್ದನ್ನು ಜ್ಞಾಪಿಸಿಕೋಳ್ಳುವುದು ಒಳ್ಳೆಯದು. ಇದರಿಂದ ಬೋದಿಸುವವರಿಗೆ ತರಗತಿಗೆ ಬರುವ ಸದಸ್ಯರು ತಾನು ಕಲಿಸಿಕೋಡುತ್ತಿರುವ ಎಲ್ಲಾ ವಿಷಯಗಳು ಅವರಿಗೆ ಅರ್ಥವಾಗುತ್ತಿದಿಯೋ ಅಥವ ಇಲ್ಲವೋ ಎಂದು ಕಂಡುಕೋಳ್ಳಬಹುದು. ಹಿಂದೆ ಕಲಿತ್ತಿದ್ದನ್ನು ಜ್ಞಾಪಿಸಿಕೋಳ್ಳುವುದರಿಂದ ಎಲ್ಲರೂ ಈಗ ಏನು ಕಲಿಯಲು ಹೋಗುತ್ತಿದ್ದೇವೆ ಎಂದು ಗೋತ್ತಾಗುತ್ತದೆ.

ಹಿಂದಿನ ಕಥೆಯನ್ನು ಎಲ್ಲರು ಅರ್ಥಮಾಡಿಕೋಳ್ಳದೆ ಮುಂದಿನ ಕಥೆಯನ್ನು ಕಲಿತುಕೋಳ್ಳಲು ಆತುರ ಪಡಬಾರದು.

ಕಥೆ ಮಾತ್ರವನ್ನು ಏಕೆ ಮತ್ತು ಎಲ್ಲಿ ಉಪಯೋಗಿಸಬೇಕು

ಕಥೆ ಮಾತ್ರವನ್ನು ಏಕೆ ಉಪಯೋಗಿಸಬೇಕು?

ಸಾಂಪ್ರದಾಯಿಕವಾದ ಬೋಧನೆಗೂ, ವಿಷಯಗಳಿಗೆ ಸಂಬಂಧಿಸಿದ ಬೋಧನೆಯ ರೀತಿಗೂ ಮತ್ತು ತರ್ಕಬದ್ಧವಾಗಿ, ಮೌಖಿಕ ಶೈಲಿಯಲ್ಲಿನ ಈ ಕಥೆಯ ಹೇಳುವಿಕೆಗೂ ನಡುವೆ ಇರುವ ಬಹುದೊಡ್ಡ ವ್ಯತ್ಯಾಸಗಳಲ್ಲಿ ಒಂದು ವ್ಯತ್ಯಾಸವನ್ನು, 'ಯಾರು ಅಥವಾ ಏನು ಈಗ ಬೋಧಿಸಲಿರುವಿರಿ?' ಎಂಬ ಬಹುಮುಖ್ಯವಾದ ಪ್ರಶ್ನೆಯಲ್ಲಿ ಪ್ರತಿಬಿಂಬಿಸಲ್ಪಡುತ್ತದೆ.

ವಿಷಯಗಳಿಗೆ ಸಂಬಂಧಿಸಿದ ಬೋಧನೆಯಲ್ಲಿ ಬೋಧಿಸುವವರು ಏನನ್ನು ಬೋಧಿಸಬೇಕೆಂಬುದನ್ನು ಬಹು ಮುಂಚಿತವಾಗಿಯೇ ನಿರ್ಧರಿಸಿರುತ್ತಾರೆ. ಬೋಧಕರಿಂದ ಆರಿಸಲ್ಪಟ್ಟಂತಹ ವಚನಗಳು ಅಥವಾ ವಾಕ್ಯಭಾಗಗಳು ಬೋಧಕರ ದೃಷ್ಟಿಯ ಪ್ರಕಾರ ಸರಿಯಾಗಿವೆ ಎಂದು ರುಜು ಪಡಿಸುವುದಕ್ಕಾಗಿ ಅವುಗಳನ್ನು ಕೇಳುಗರಿಗೆ ಕೊಡಲಾಗುತ್ತದೆ. ಈ ವಿಧಾನವು ತಪ್ಪಲ್ಲ, ಆದರೆ ಬೋಧಿಸುವುದಕ್ಕೆ ಇರುವ ಮಾರ್ಗ ಇದೊಂದೇ ಅಲ್ಲ.

ವಿಷಯಗಳಿಗೆ ಸಂಬಂಧಿಸಿದ ಬೋಧನೆಯು ಕಥೆಯನ್ನು ಮಧ್ಯೆ ವಿಭಜಿಸುವಂತಹುದು ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಬಹಳ ಕಷ್ಟಕರವಾಗುವಂತೆ ಮಾಡುತ್ತದೆ. ಸತ್ಯವೇದದ ಕಥೆಗಳು ನಮ್ಮ ಆತ್ಮಕ್ಕೆ, ಪ್ರಾಣಕ್ಕೆ ಮತ್ತು ದೇಹಕ್ಕೆ ಮಾತನಾಡುವಂತಹುದಾಗಿವೆ. ಬೋಧಕನು ಕಥೆಯನ್ನು ಹೆಚ್ಚಾಗಿ ವಿಭಜಿಸುತ್ತಾ, ಮಾಹಿತಿಯನ್ನು ಪಂಗಡವಾಗಿ ನಿರೂಪಿಸುವುದರಿಂದ, ಮಾಹಿತಿಯು ಹೆಚ್ಚಾಗಿ ನಮ್ಮ ಮನಸ್ಸಿಗೆ ಹೋಗುತ್ತದೆಯೇ ಹೊರತು, ನಮ್ಮ ಪ್ರಾಣ ಮತ್ತು ಆತ್ಮಗಳಿಗೆ ಹೋಗುವುದಿಲ್ಲ.

ನೀವು ಒಂದು ಘಟನೆಯ ಕುರಿತಾಗಿ ಒಬ್ಬರೊಂದಿಗೆ ಹಂಚಿಕೊಳ್ಳುವಾಗ, ಆ ವ್ಯಕ್ತಿಯು ನೀವು ಹೇಳುವಾಗೆಲ್ಲ ನಿಮಗೆ ಪ್ರಶ್ನೆಗಳನ್ನು ಕೇಳುತ್ತಾ ಮತ್ತು ಟೀಕೆಗಳನ್ನು ಮಾಡುತ್ತಾ ಇರುವಂತಹ ಸಂದರ್ಭದಲ್ಲಿ ಹಾದುಬಂದಿರುವಿರೇ? ನೀವು ಕಥೆಯನ್ನು ಮುಗಿಸುವುದರೊಳಗೆ, ಬಹಳ ತಡೆಗಳ ನಿಮಿತ್ತ ಇದು ತಮ್ಮ ಪರಿಣಾಮವನ್ನೇ ಕಳೆದುಕೊಂಡಿರುತ್ತದೆ. ಸತ್ಯವೇದದ ಕಥೆಗಳು ಹೇಗಿವೆಯೋ ಅದೇ ರೀತಿಯಲ್ಲಿ ಅವುಗಳನ್ನು ನಿರೂಪಿಸಿದಾಗ ಆ ಕಥೆಗಳೂ ಸಹ ಗರಿಷ್ಠ ಮಟ್ಟದ ಬಲವನ್ನು ಪಡೆದುಕೊಂಡಿರುತ್ತವೆ. ನೆನಪಿಡಿ: ದೇವರು ಸತ್ಯವೇದದ 75% ಅನ್ನು ನಮಗೆ ಕಥೆಯ ರೂಪದಲ್ಲಿ ಕೊಟ್ಟಿರುವನು. ಕರ್ತನು ತನ್ನ ಪೂರ್ಣ ಕಥೆಯನ್ನು ಹೇಳುವಂತೆ ನಾವು ಬಿಟ್ಟುಕೊಡಬೇಕು.

“ಮೌಖಿಕವಾಗಿ ಕಲಿತುಕೊಳ್ಳುವವರು” ಅಂದರೆ ಅರ್ಥವೇನು ಮತ್ತು ಮೌಖಿಕವಾಗಿ ಕಲಿತುಕೊಳ್ಳುವವರು ಹೇಗೆ ಮಾಹಿತಿಯನ್ನು ಪಡೆದುಕೊಳ್ಳುವರು ಎಂಬುದರ ವಿಂಗಡನೆಯನ್ನು ನಾವು ಅರಿತುಕೊಂಡಾಗ, ಸತ್ಯವೇದದ ಕಥೆಗಳನ್ನು ಅದರ ಸಮಗ್ರತೆಯಲ್ಲಿ ಉಪಯೋಗಿಸುವುದರ ಮೌಲ್ಯವು ಅತಿಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ಓದಲು ತಿಳಿಯದಂತಹ ಜನರು ಅಂದರೆ ಮೌಖಿಕ ಕೇಳುಗರು. ಸಂಶೋಧನೆಯ ನಿಮಿತ್ತ, ಅನೇಕ ದೇಶಗಳು ಒಂದು ವೇಳೆ ತಮ್ಮ ಅಕ್ಷರತೆ ಪ್ರಮಾಣ ಅಥವಾ ಪ್ರಚಾರದ ಪ್ರಮಾಣವನ್ನು ಹಿಗ್ಗಿಸುವುದಾದರೆ, ಆ ಪ್ರಮಾಣವು ಅಕ್ಷರತೆಯ ಕ್ಷೀಣ ಅಳತೆಯ ಆಧಾರದ ಮೇಲೆ ಇರುವಂತಹುದಾಗಿದೆ, ಅಂದರೆ ಒಬ್ಬ ವ್ಯಕ್ತಿ ತನ್ನ ಸ್ವಂತ ಹೆಸರನ್ನು ಸಹಿ ಮಾಡುವ ಸಾಮರ್ಥ್ಯದ ಕುರಿತಾಗಿ! ಅನೇಕ ಪರೀಕ್ಷೆಗಳು ಮತ್ತು ಸಂಶೋಧನೆಗಳು, ಅಂದರೆ ರಾಷ್ಟ್ರೀಯ ಪ್ರೌಢ ಶಿಕ್ಷಣ ಅಧ್ಯಯನಗಳಂತವು, ಅಮೇರಿಕದ ಶೇಕಡ 43ರಷ್ಟು ಜನರು ಓದಲು ಬಾರದವರು ಅಥವಾ ವಿಷಯದ ಪ್ರಕರಣವನ್ನು ಅರ್ಥಮಾಡಿಕೊಳ್ಳುವಷ್ಟು ಓದುವಷ್ಟರ ಮಟ್ಟವನ್ನು ತಿಳಿಯದವರು ಎಂಬುದನ್ನು ತೋರಿಸುತ್ತದೆ. ಇದರ ಜೊತೆಗೆ, ಅಮೇರಿಕದ ಮತ್ತೊಂದು ಶೇಕಡ 44ರಷ್ಟು ಜನರು ಮಾಹಿತಿಯನ್ನು ಕೇಳುವುದರಿಂದ ಮತ್ತು ಚರ್ಚಿಸುವುದರಿಂದ ಅರ್ಥ ಮಾಡಿಕೊಳ್ಳುವವರಾಗಿದ್ದಾರೆ. ಈ ಆಶ್ಚರ್ಯಚಕಿತಗೊಳಿಸುವ ಅಂಕಿಅಂಶಗಳು ಇನ್ನಿತರ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿಯೂ ಸತ್ಯವಾಗಿರುವಂತವುಗಳಾಗಿವೆ. ಇದರ ಅರ್ಥ ಅಭಿವೃದ್ಧಿ ಹೊಂದಿರುವ ದೇಶಗಳ ಶೇಕಡಾ 87ರಷ್ಟು ಜನರು ಅನಕ್ಷರಸ್ಥರಾಗಿರುವರು ಅಥವಾ ಹೆಚ್ಚಾಗಿ ಮೌಖಿಕವಾಗಿ ಕೇಳುವಂತವರಾಗಿರುವರು.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ, ಓದು ಬರಹ ತಿಳಿದಿರುವುದರ ಪ್ರಮಾಣವು ಬಹಳ ಕಡಿಮೆಯಲ್ಲಿದೆ, ಹಾಗಾಗಿ ಅನಕ್ಷರಸ್ಥರು ಅಥವಾ ಹೆಚ್ಚಾಗಿ ಮೌಖಿಕವಾಗಿ ಕೇಳಿಸಿಕೊಳ್ಳುವಂತವರ ಶೇಕಡವಾರು ಇಂತವರಲ್ಲಿ ಹೆಚ್ಚಾಗಿದೆ.

ಮೌಖಿಕವಾಗಿ ಕೇಳಿಸಿಕೊಳ್ಳುವಂತವರು, ಬರೆದುಕೊಳ್ಳುವುದಕ್ಕೆ ಆಗುವುದಿಲ್ಲ ಅಥವಾ ಬರೆಯಲು ಸಾಧ್ಯವಿಲ್ಲ, ಹಾಗಾಗಿ, ಮಾಹಿತಿಯನ್ನು ಒಂದು ಕಥೆಯ ರೂಪದಲ್ಲಿ ರಚಿಸಿದಾಗ ಅದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಲು ಮಾರ್ಗವಾಗಿದೆ. ಮೌಖಿಕವಾಗಿ ಕೇಳುವವರಿಗೆ ಮಾಹಿತಿಯನ್ನು ಭಾವನೆಯಲ್ಲಿ, ಉಪದೇಶದಲ್ಲಿ, ಪ್ರಸಂಗದಲ್ಲಿ, ಅಥವಾ ಕಥೆಯ ರೂಪುರೇಖೆಯಲ್ಲಿ ನಿರೂಪಿಸುವಾಗ, ನೆನಪಿನಲ್ಲಿಟ್ಟುಕೊಳ್ಳುವುದಕ್ಕಾಗಿ ಜನರು ಮಾಡಿದಂತಹ ಚೌಕಟ್ಟು ಕಳೆದುಹೋಗುತ್ತದೆ.

ಪ್ರಸ್ತುತದಲ್ಲಿ ಬಳಕೆಯಲ್ಲಿರುವ ಅನೇಕ ವಿಧಾನಗಳ ಬೀಳುವಿಕೆಗಳು

ನಾವು ಒಬ್ಬ ಸ್ನೇಹಿತರಿಗೆ ಒಂದು ವಸ್ತುವನ್ನು ಹಡಗಿನಲ್ಲಿ ರವಾನಿಸಿರುತ್ತೇವೆ ಮತ್ತು ಆ ವಸ್ತುವು ಹಾಗೆಯೇ ಮುಚ್ಚಲ್ಪಟ್ಟ ಸ್ಥಿತಿಯಲ್ಲಿಯೇ ಪುನಃ ನಮಗೇ ಹಿಂತಿರುಗಿ ಬರುವುದನ್ನು ಊಹಿಸಿಕೊಳ್ಳಿ. ಆ ಸ್ನೇಹಿತರಿಗೆ ಆ ವಸ್ತುವು ಬೇಡವಾಗಿಲ್ಲವೆಂಬುದಾಗಿ ನಾವು ಊಹಿಸಬೇಕೆ? ಇದನ್ನು ಕಳುಹಿಸಿದಂತಹ ವ್ಯಕ್ತಿಗೆ ಇದನ್ನು ಹೇಗೆ ತೆರೆಯಬೇಕೆಂದು ತಿಳಿದಿಲ್ಲ ಎಂಬುದಾಗಿರಬಹುದೇ? ನಾವು ಸತ್ಯವೇದದ ಸತ್ಯಗಳನ್ನು ಸಾಂಪ್ರದಾಯಿಕವಾಗಿ, ಬೋಧನೆಯಾಗಿ ಅಥವಾ ವಿಶ್ಲೇಷಕವಾಗಿ ಸುತ್ತಿಟ್ಟಾಗ, ಪ್ರಾಥಮಿಕವಾಗಿ ಮೌಖಿಕವಾದ ಕೇಳುಗರು ಇದನ್ನು ಸುಲಭವಾಗಿ ತೆರೆಯಲು ಸಾಧ್ಯವಿಲ್ಲ.

"ಕಥೆಯನ್ನು" ಕಳೆದುಕೊಳ್ಳುವುದರ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಸತ್ಯವೇದಕ್ಕನುಗುಣವಾದ ಸತ್ಯಗಳನ್ನು ಹೇಳುವುದಕ್ಕೆ ಆಶಿಸುವ ನಮ್ಮ ಸಮಯ ಇದಾಗಿದೆ. ಸುವಾರ್ತೆಯನ್ನು ಕೇಳುವುದಕ್ಕೆ ಅಗತ್ಯವಿರುವ ಮತ್ತು ಶಿಷ್ಯತ್ವವನ್ನು ಹೊಂದಿಕೊಳ್ಳುವ ಅಗತ್ಯವಿರುವ ಅತಿಹೆಚ್ಚಿನ ಗರಿಷ್ಠ ಮಟ್ಟವು ಮೌಖಿಕ ಕೇಳುವವರದಾಗಿದೆ. ಈ ರೀತಿಯ ಸಂಪರ್ಕ ಸಾಧನವಾಗಿರುವ ನಾವು ಕಥೆಯನ್ನು ಬಿಟ್ಟು ಹೊರಗೆ ಬರುವಾಗ, ಮತ್ತು ಮಾಹಿತಿಯನ್ನು ಪುನಃ ರಚಿಸಿ ಮತ್ತು ಪುನಃ ಸಂಯೋಜಿಸುವಾಗ, ಮೌಖಿಕ ಕೇಳುಗರು ಆ ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ, ಹಾಗೂ ಅದಲ್ಲದೆ ಅವರಲ್ಲಿ ಅನೇಕರು ನಾವು ನಿರೂಪಿಸುವ ಸತ್ಯಗಳನ್ನು ಸಹ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಸತ್ಯವೇದಕ್ಕನುಗುಣವಾದ ಮಾಹಿತಿಯನ್ನು ತಿಳಿಸುವುದಕ್ಕಾಗಿ ಸಾಂಪ್ರದಾಯಿಕವಾದ ಬೋಧನೆಯನ್ನು ಅನೇಕ ಬಾರಿ ಹೆಚ್ಚಾಗಿ ಉಪಯೋಗಿಸುವ ಒಂದು ವಿಧಾನವಾಗಿದೆ. ಸಾಂಪ್ರದಾಯಿಕವಾಗಿ ಬೋಧಿಸುವಾಗ, ಬೋಧಕರು ಮೊದಲೇ ಆರಿಸಲ್ಪಟ್ಟಂತಹ ಅಂಶಗಳನ್ನು ತಾಳೆ ನೋಡುವುದಕ್ಕಾಗಿ ಇವರು ಇಡೀ ಸತ್ಯವೇದದಿಂದ ವಾಕ್ಯ ಭಾಗಗಳನ್ನು ಆಯ್ಕೆ ಮಾಡುತ್ತಾರೆ. ಸಭೆಯವರು ಇದನ್ನು ಕೇಳಿಸಿಕೊಂಡು, ಬರೆದುಕೊಳ್ಳಬಹುದು. ಆದರೆ, ಈ ರೀತಿಯಾಗಿ ಅನುಸರಿಸುವುದಕ್ಕೆ ಅಲ್ಲಿ ಯಾವ ಕಥೆ ಇರುವುದಿಲ್ಲ. ಮಾಹಿತಿಯನ್ನು ಒಟ್ಟಾಗಿ ಇಡುವಂತಹ ಯಾವ ಸಂಗತಿಯೂ ಇರುವುದಿಲ್ಲ. ಇದು ಮೂಳೆಗಳಿಲ್ಲದಿರುವ ಮನುಷ್ಯನ ದೇಹದಂತಿರುತ್ತದೆ!
ಆನಂತರ, ಸಭೆಯಲ್ಲಿ ಅನೇಕರು ಏನನ್ನು ಬೋಧಿಸಲಾಗಿದೆಯೋ ಅದನ್ನು ಹೆಚ್ಚಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ, ಹಾಗೂ ಇದರ ಮಾಹಿತಿಯನ್ನು ಬೇರೆಯವರಿಗೆ ಪುನಃ ಹೇಳುವುದಕ್ಕೆ ಸಮರ್ಥರಾಗಿರುವುದಿಲ್ಲ. ಅನುಸರಿಸುವುದಕ್ಕೆ ಒಂದು ಕಥೆಯೇ ಇಲ್ಲದಿದ್ದರೆ, ಮಾಹಿತಿಯನ್ನು ಒಟ್ಟಾಗಿ ಇಡುವುದನ್ನು ಯಾವುದೂ ಮಾಡುವುದಿಲ್ಲ.

ಅದಲ್ಲದೆ, ಕೇಳುಗರಲ್ಲಿ ಅನೇಕರು ತಮಗಾಗಿ ಸಾಂಪ್ರದಾಯಿಕವಾದ ಮಾಹಿತಿಯ ರೀತಿಯನ್ನು ಕಂಡುಕೊಳ್ಳಲು ಯಾವ ಮಾರ್ಗವು ಇರುವುದಿಲ್ಲ, ಹಾಗಾಗಿ ಬೋಧಕರ ಮೇಲಿನ ಅವಲಂಬನೆಯನ್ನು ಕಾಯ್ದುಕೊಂಡು ಹೋಗುತ್ತಾರೆ. ಅನೇಕ

ಪಕ್ಷಿಗಳು ಆಹಾರವನ್ನು ಶೇಖರಿಸಿಕೊಂಡು, ನಂತರ ಅವುಗಳನ್ನು ತಮಗಾಗಿ ಕಾಯುತ್ತಿರುವ ಮರಿಗಳ ಬಾಯಿಗೆ ಆಹಾರವನ್ನು ತುಣುಕಾಗಿ ಹಾಕುವ ಹಾಗೆಯೇ ತುಣುಕಾದ ಮಾಹಿತಿಯನ್ನು ಕೇಳುಗರಿಗೆ ಕೊಡಲಾಗುತ್ತದೆ. ಪ್ರತಿ ವಾರ ಈ ಕೇಳುಗರು ತಮ್ಮ ಮುಂದಿನ ಆಹಾರಕ್ಕಾಗಿ ಕಾಯುತ್ತಾರೆ. ಅತಿ ಹೆಚ್ಚಾಗಿ ಸಾಂಪ್ರದಾಯಿಕ ಬೋಧನೆಯು ಐವತ್ತು ವರ್ಷದ ಪಕ್ಷಿಗಳನ್ನು ಒಂದು ಗೂಡಿನಲ್ಲಿ ಇಡುವಂತೆ ಮಾಡುತ್ತದೆ!

ಸಾಂಪ್ರದಾಯಿಕ ಬೋಧನೆಯನ್ನು ಅತಿರೇಕವಾಗಿ ಉಪಯೋಗಿಸುವದರ ಮತ್ತೊಂದು ಬೀಳುವಿಕೆಯು ಇಲ್ಲಿದೆ: ಜನರು ಕೇಳಲು ಅಗತ್ಯವಾದಂತಹುದು ಎಂದು ಆಲೋಚಿಸಿಕೊಂಡು ಬೋಧಕರು ಒಂದು ವಿಷಯವನ್ನು ಆರಿಸಿಕೊಳ್ಳುತ್ತಾರೆ, ನಂತರ ಸತ್ಯವೇದದಲ್ಲಿರುವ ಅನೇಕ ಕಡೆಗಳಿಂದ ಈಗಾಗಲೇ ತಮಗೆ ತಿಳಿದಿರುವಂತಹ ವಚನಗಳನ್ನು ಅವರು ಆರಿಸಿಕೊಳ್ಳುತ್ತಾರೆ. ಈ ವಿಧಾನವು ಬೋಧಕರು ಹೊಸ ಮಾಹಿತಿಯನ್ನು ಮತ್ತು ಒಳದೃಷ್ಟಿಯನ್ನು ತೋರ್ಪಡಿಸುವುದಕ್ಕೆ ಸಾಧ್ಯವಾಗುವಂತೆ ಮಾಡುವುದಿಲ್ಲ, ಏಕೆಂದರೆ ಅನೇಕ ಬಾರಿ ಬೋಧಕರು ತಮಗೆ ಚೆನ್ನಾಗಿ ತಿಳಿದಿರುವಂತಹ ವಾಕ್ಯಭಾಗಗಳನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಾರೆ.

ಅನೇಕ ವಿಶ್ವಾಸಿಗಳು ಕ್ರೈಸ್ತ ಕೂಟಗಳಿಗೆ ಹೋಗುತ್ತಾರೆ. ಸಾಂಪ್ರದಾಯಿಕವಾದ ಬೋಧಿಸಲ್ಪಡುವ ವಿಷಯವು ಸುವಾರ್ತೆ ಸಾರುವುದು, ತಲುಪದಿರುವಂತಹ ಜನರ ಗುಂಪುಗಳನ್ನು ತಲುಪುವುದು, ಕುಟುಂಬ, ಆರ್ಥಿಕ ಪರಿಸ್ಥಿತಿ, ಉಪವಾಸ, ಪ್ರಾರ್ಥನೆ, ದೇವರ ಗುಣಲಕ್ಷಣಗಳು, ವ್ಯವಹಾರ ಅಥವಾ ಪ್ರವಾದನೆಯಲ್ಲಿ ಪ್ರಾಮಾಣಿಕತೆ ಇಂತಹವುಗಳಿರಬಹುದು. ಇವೆಲ್ಲವೂ ಮುಖ್ಯವಾದ ವಿಷಯಗಳು. ಆಸಕ್ತಿಕರವಾದುದೆಂದರೆ, ಈ ಎಲ್ಲಾ ವಿಷಯಗಳು ಸಹ ಕಥೆಗಳ ನಿರೂಪಣೆಯ ಮೂಲಕ ಮತ್ತು ಚರ್ಚೆಯ ಮೂಲಕ ಆವೃತವಾಗಿರುವಂತವುಗಳಾಗಿವೆ.

ಮೌಖಿಕವಾಗಿ ತರ್ಕಬದ್ಧ ವಿಧಾನದ ಕಥೆ ಹೇಳುವಿಕೆಯಲ್ಲಿ, ಬೋಧಕರು ಇಡೀ ಕಥೆಯನ್ನು ಉಪಯೋಗಿಸುತ್ತಾರೆ ಮತ್ತು ಕಲಿಸಬೇಕಾದ ಒಳದೃಷ್ಟಿಗಳನ್ನು ಮತ್ತು ಪಾಠಗಳನ್ನು ನಿರ್ಧರಿಸಲು ಕಥೆಯ ಅಂಶಗಳಿಗೆ ಬಿಡುತ್ತಾರೆ.

ಬೋಧಕರು ತಾವು ಆರಿಸಿರುವಂತಹ ವಿಷಯವನ್ನು ಬೋಧಿಸುವುದಕ್ಕೆ ವಾಕ್ಯ ಭಾಗದ ಯಾವ ಭಾಗವನ್ನು ಅಥವಾ ಯಾವ ಕಥೆಯನ್ನು ಹೇಳಬೇಕು ಎಂದು ನಿರ್ಧರಿಸುವಾಗ, ವಾಕ್ಯಭಾಗದಲ್ಲಿ ಉಳಿದ ಮಾಹಿತಿ ಅಥವಾ ಕಥೆಯು ಕಳೆದುಹೋಗುತ್ತದೆ. ಒಂದು ಕಥೆಯನ್ನು ಪ್ರಶ್ನೆಗಳ ಮತ್ತು ಚರ್ಚೆಯ ಮೂಲಕ ಸಂಪೂರ್ಣವಾಗಿ ತೆರೆದಿಡುವಾಗ ಮತ್ತು ಮುಂದುವರೆಸುವಾಗ, ಬೋಧನೆಯಲ್ಲಿ ತೊಡಗಿಸಿಕೊಂಡಿರುವವರಿಗೆ ಪವಿತ್ರಾತ್ಮನು ತನ್ನ ವಿಷಯವನ್ನು ಕೊಡುವುದಕ್ಕೆ ಬರುವವನಾಗಿರುತ್ತಾನೆ.

ಹಾಗೂ, ಬೋಧಕರು ಒಂದು ವಿಷಯದ ಬಗ್ಗೆ ಪಟ್ಟಿಯನ್ನು ಮಾಡಿ, ನಂತರ ತಮ್ಮ ಪಟ್ಟಿಯನ್ನು ಪರಿಶೀಲಿಸುವುದಕ್ಕಾಗಿ ವಾಕ್ಯಗಳನ್ನು ಆರಿಸಿಕೊಳ್ಳುವಾಗ, ಇದನ್ನು ಕೇಳಿಸಿಕೊಳ್ಳುವವರಿಗೆ ಸತ್ಯವೇದಕ್ಕನುಗುಣವಾದ ಮಾಹಿತಿಯು ಒಂದು ಆಜ್ಞೆಯಂತೆ ಅಥವಾ ಒಂದು ನಿಯಮದಂತೆ ಬರುತ್ತದೆ. ಕಥೆಗಳನ್ನು ಉಪಯೋಗಿಸುವಾಗ, ಇಡೀ ಕಥೆಯ ಆಸಕ್ತಿಯು ಕೇಳುಗರಿಗೆ ಮಾತನಾಡುವಂತೆ ಅನುಮತಿಸುತ್ತದೆ.

ಕೆಲವೊಮ್ಮೆ ಬೋಧಕರು ತಾವು *ಕಥೆ* ಮಾತ್ರವನ್ನು ಉಪಯೋಗಿಸುತ್ತಿದ್ದೇವೆ ಎಂದು ಆಲೋಚಿಸುತ್ತಾರೆ, ಆದರೆ ವಾಸ್ತವಿಕವಾಗಿ ಅವರು ಇದನ್ನು ಕೇವಲ ಭಾಗಶಃ ಮಾತ್ರ ಮಾಡುತ್ತಿರುತ್ತಾರೆ. ಅವರು ಈ ತಪ್ಪನ್ನು ಮಾಡುತ್ತಾರೆ. ಒಂದು ಕಥೆಯನ್ನು ಹೇಳಲಾಗುತ್ತದೆ, ನಂತರ ಕಥೆಯು ನಿರೂಪಿಸದಿರುವಂತಹ ಒಂದು ವಿಷಯದ ಕುರಿತಾಗಿ ಅವರು ಕಥೆಯನ್ನು ಮಾತನಾಡುತ್ತಾರೆ. ಕಥೆಯು ಬೋಧಕರಿಗೆ ಸರಿ ಹೊಂದುವಂತೆ ಅದನ್ನು ಮಾಡಲ್ಪಟ್ಟಿದೆಯೇ ಹೊರತು ಬೋಧಕರು ಕಥೆಗೆ ಸರಿಹೊಂದಿಕೊಳ್ಳುವುದಕ್ಕಾಗಿ ಅಲ್ಲ.

ನೀವು ಬೋಧಿಸುವ ಯಾವುದೇ ಒಳದೃಷ್ಟಿಯು ಕಥೆಯಲ್ಲಿ ಇರುವಂತಹುದಾಗಿರಬೇಕು. ಬೋಧಕರು ತಮಗೆ ಈಗಾಗಲೇ ಏನು ತಿಳಿದಿದೆಯೋ ಮತ್ತು ಏನನ್ನು ನಂಬುತ್ತಾರೋ ಅದನ್ನು ಬೋಧಿಸುವುದಕ್ಕಾಗಿ ಕಥೆಯನ್ನು ಉಪಯೋಗಿಸುವುದಾದರೆ, ಅವರು ಪವಿತ್ರಾತ್ಮನಿಂದ ಕಲಿಸಲ್ಪಡುವಂತಹ ಹೊಸ ಮಾಹಿತಿಯನ್ನು ಕಲಿಯುವ ಧನ್ಯ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಒಂದು ಕಥೆಯಲ್ಲಿರುವ ನಿಧಿಗಳನ್ನು ಕಂಡುಹಿಡಿಯುವುದಕ್ಕೆ ಕಲಿತುಕೊಳ್ಳುವಂತಹುದು ಸವಾಲಾಗಿದೆ. ಇದರೊಂದಿಗೆ, ಕೇಳುಗರಿಗೆ ಪ್ರಶ್ನೆಗಳನ್ನು ಕೇಳುವುದರ ವಿಧಾನದಲ್ಲಿ ಈ ನಿಧಿಗಳನ್ನು ನಿಧಾನವಾಗಿ ಹೇಗೆ ಕೊಡುವುದು ಎಂಬುದು ಕಥೆ ಹೇಳುವವರಿಗೆ ಒಂದು ಸವಾಲಾಗಿರುತ್ತದೆ.

ಮುಖ್ಯವಾದ ನಿರ್ಧಾರ: ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸತ್ಯವೇದಕ್ಕನುಗುಣವಾದ ಸತ್ಯಗಳನ್ನು ತೋರ್ಪಡಿಸುವುದು ಮತ್ತು 10/40ರಲ್ಲಿ ದೇವರ ಮಾಕ್ಯ ಕೇಳದೇ ಕಳೆದು ಹೋದಂತವರ ಮತ್ತು ಲೋಕದಲ್ಲಿ ಸುವಾರ್ತೆಯು ಇನ್ನೂ ತಲುಪದಿರುವ ಜನರನ್ನು ತಲುಪುವುದಕ್ಕಾಗಿ ನಮಗೆ ಸಾಧ್ಯವಾದುದೆಲ್ಲವನ್ನೂ ಮಾಡುವುದೇ ನಮ್ಮ ಗುರಿಯಾಗಿದ್ದರೆ, ನಾವು ಮಾಹಿತಿಯನ್ನು ನಿರೂಪಿಸುವ ವಿಧಾನದಲ್ಲಿ ಒಂದು ದೊಡ್ಡ ಬದಲಾವಣೆ ಆಗಲೇಬೇಕಾಗಿದೆ. ನಾವು ಪ್ರತಿಕ್ರಿಯಿಸುತ್ತೇವೆಯೇ? (ಮೌಖಿಕವಾಗಿ ಕಲಿಯುವವರ ಶಿಷ್ಯತ್ವ [Making Disciples of Oral Learners] ಎಂಬ ಪುಸ್ತಕವನ್ನು www.oralbible.com ಎಂಬ ವೆಬ್ ವಿಳಾಸದಲ್ಲಿ ಪಡೆಯಬಹುದು. ಇದು ರೆಕಾರ್ಡಿಂಗ್ ವಿಧಾನದಲ್ಲೂ ಲಭ್ಯವಿದೆ)

ಈ ಕೆಲಸ ಏನು ಅಥವಾ ಯಾರು ಮಾಡುತ್ತಾರೆ?

ಒಬ್ಬ ವ್ಯಕ್ತಿ ವೈಯಕ್ತಿಕವಾಗಿ ಕರ್ತನನ್ನು ಎಷ್ಟು ವರ್ಷಗಳಿಂದ ನಂಬಿದ್ದರೂ ಪರವಾಗಿಲ್ಲ, ಅಥವಾ ಆ ವ್ಯಕ್ತಿಗೆ ಸತ್ಯವೇದದ ಜ್ಞಾನವು ಔಪಚಾರಿಕವಾಗಿ ಅಥವಾ ಅನೌಪಚಾರಿಕವಾಗಿ ಇದ್ದರೂ ಸಹ, ಸತ್ಯವೇದವನ್ನು ಅರ್ಥಮಾಡಿಕೊಳ್ಳುವುದಕ್ಕೆ ಇರುವುದು ಒಂದೇ ಒಂದು ವಿಧಾನ. ದೇವರೊಂದಿಗಿನ ನಮ್ಮ ಸಂಬಂಧ ಆತ್ಮೀಕವಾದದ್ದು. ವಾಕ್ಯಗಳು ಮನುಕುಲಕ್ಕಾಗಿ ಇರುವ ದೇವರ ಆತ್ಮೀಕ ಸಂದೇಶಗಳನ್ನು ಒಳಗೊಂಡಿವೆ, ಹಾಗಾಗಿ ಸತ್ಯವೇದವು ಒಳಗೊಂಡಿರುವ ಆತ್ಮೀಕ ಸತ್ಯಗಳನ್ನು ಪವಿತ್ರಾತ್ಮನ ಬೋಧನೆಯ ಮೂಲಕ ಮಾತ್ರ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಯೇಸು ಕ್ರಿಸ್ತನಲ್ಲಿರುವ ಅನೇಕ ವಿಶ್ವಾಸಿಗಳು ದೇವರ ವಾಕ್ಯವನ್ನು ತಮಗೆ ಬೋಧಿಸುವುದಕ್ಕಾಗಿ ಬೇರೆಯವರನ್ನು ಅವಲಂಬಿಸಿದವರಾಗಿದ್ದಾರೆ. ಸಭೆಗೆ–ಹೋಗುವವರು ತಮ್ಮ ಸಭಾಪಾಲಕರುಗಳು ತಮಗೆ ಆತ್ಮೀಕ ಸತ್ಯವನ್ನು ಹೇಳುವುದಕ್ಕೆ ಅವರಿಗಾಗಿ ಕಾಯುವವರಾಗಿದ್ದಾರೆ. ಸಭಾಪಾಲಕರುಗಳು ಕಲಿಯುವುದಕ್ಕೆ ಸತ್ಯವೇದದ ಶಾಲೆಗಳಿಗೆ ಮತ್ತು ಕೂಟಗಳಿಗೆ ಹೋಗುತ್ತಾರೆ, ಮತ್ತು ಮುಂದುವರೆಯುವಂತಹ ಪ್ರೇರಣೆಗಾಗಿ ವಿಮರ್ಶೆಗಳನ್ನು ನೋಡುತ್ತಾರೆ ಹಾಗೂ ಹೊಸ ಮಾಹಿತಿಯನ್ನು ಕಂಡುಕೊಳ್ಳುವುದಕ್ಕೆ ಕೂಟಗಳಿಗೆ ಭೇಟಿ ಕೊಡುತ್ತಾರೆ.

ಈ ಎಲ್ಲಾ ಮೂಲಗಳು ದೊಡ್ಡ ಮೌಲ್ಯವನ್ನು ಹೊಂದಿವೆ, ಆದರೆ ದೇವರ ಸಂದೇಶವನ್ನು ಅರ್ಥ ಮಾಡಿಕೊಳ್ಳುವ ಉತ್ತಮ ಮೂಲವನ್ನು ಹಗುರವಾಗಿ ಪರಿಗಣಿಸಲಾಗಿದೆ! ಈ ಮೂಲವು ನಮಗೆ ದೇವರಿಂದ ಬಂದಂತಹ ವರವಾಗಿದೆ. ಆ ಮೂಲ ಯಾವುದು? ಈ ಕಥೆಯನ್ನು ಆಲೋಚಿಸಿ ನೋಡಿ:

ಯೇಸುವಿನಿಂದ ಮೂರು ವರ್ಷಗಳಿಗಿಂತಲೂ ಅಧಿಕವಾದ ವೈಯಕ್ತಿಕ ಬೋಧನೆಯನ್ನು ಪಡೆದ ನಂತರ, ಶಿಷ್ಯರು ಆತನಿಂದ ಬೆಚ್ಚಿಬೀಳುವಂತಹ ಸಂದೇಶವನ್ನು ಕೇಳಿದರು. ಅದು ಯೇಸು ಅವರನ್ನು ಬಿಟ್ಟುಹೋಗುತ್ತಿದ್ದನು! ಆತನು ತನ್ನ ಶಿಷ್ಯರಿಗೆ, "ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಭಯಪಡದಿರಲಿ" ಎಂದು ಹೇಳಿದನು. ಯೇಸು ಈ ರೀತಿ ಹೇಳಿದುದರಿಂದ, ಶಿಷ್ಯರಲ್ಲಿ ಯಾವ ರೀತಿಯ ಭಾವನೆ ಇತ್ತು ಎಂಬುದನ್ನು ನಾವು ತಿಳಿಯಲು ಸಾಧ್ಯವೇ? ಹೌದು. ಅವರಿಗೆ ಭಯವಾಗಿತ್ತು. ಅವರ ಅತ್ಯುತ್ತಮ, ವೈಯಕ್ತಿಕ ಬೋಧಕನು ಇನ್ನು ಮುಂದೆ ತಮ್ಮ ಜೊತೆ ಇರುವುದಿಲ್ಲ. ಅವರನ್ನು ಯಾರು ಸಂತೈಸುವರು? ಅವರಿಗೆ ಯಾರು ಬೋಧಿಸುವರು? ಶಿಷ್ಯರಿಗೆ ಯೇಸುವಿನ ಕೊನೆಯ ಸಂದೇಶದ ಭಾಗವಾಗಿ, ಅವರು ಒಬ್ಬೊಂಟಿಗರಾಗಿ ಇರುವುದಿಲ್ಲ ಎಂಬ ಭರವಸೆಯನ್ನು ಆತನು ಕೊಟ್ಟನು. ಯೇಸು ಅವರಿಗೆ ಜೊತೆಯಲ್ಲಿ ವಾಸಿಸುವ ಒಬ್ಬ ಬೋಧಕನ ಕುರಿತಾಗಿ ವಾಗ್ದಾನ ಮಾಡಿದನು. ಈ ಬೋಧಕನು ಪ್ರತಿ ಒಬ್ಬ ಶಿಷ್ಯನೊಂದಿಗೂ ಹಗಲು ಮತ್ತು ರಾತ್ರಿ, ವಾರದ ಏಳು ದಿನಗಳು ಜೊತೆಯಲ್ಲಿಯೇ ಇರುತ್ತಾನೆ.

"ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು." **ಯೋಹಾನ 14:26**.

"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು."

ಯೋಹಾನ 16:13.

ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳುವ ಉತ್ತಮವಾದ ಮೂಲವು ಪವಿತ್ರಾತ್ಮನು – ಯೇಸು ನಮ್ಮೊಂದಿಗೆ ಬಿಟ್ಟು ಹೋಗಿರುವ ವರ.

ಪವಿತ್ರಾತ್ಮನು ಹೇಗೆ ಆತ್ಮೀಕ ಸತ್ಯವನ್ನು ಬೋಧಿಸುವನು ಎಂಬುದಾಗಿ ದೇವರು ಮತ್ತೊಂದು ವಾಕ್ಯಭಾಗದಲ್ಲಿ ಹೀಗೆ ವಿವರಿಸುತ್ತಾನೆ. **1ಕೊರಿಂಥ 2:9-16**

"(9) ಆದರೆ ಬರೆದಿರುವ ಪ್ರಕಾರ – ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. (10) ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. (11) ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವುದಿಲ್ಲ.

"(12) ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. (13) ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ

ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ. (14) ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತದೆ; ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. (15) ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ; ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ. (16) ಕರ್ತನ ಮನಸ್ಸನ್ನು ತಿಳಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು."

ಬಹಳ ದೀರ್ಘಕಾಲ ಪವಿತ್ರಾತ್ಮನ ತರಗತಿಯು ಖಾಲಿಯಾಗಿ ಉಳಿದಿದೆ. ನಾವು ಆತನ ತರಗತಿಗೆ ಹೋಗಿ, ನಮ್ಮ ಕೈಗಳನ್ನು ಮೇಲಕ್ಕಿತ್ತಿ, ಪ್ರಶ್ನೆಗಳನ್ನು ಕೇಳೋಣ! ನಾವು ಪ್ರತಿಯೊಂದು ಕಥೆಯನ್ನು ಅಧ್ಯಯನ ಮಾಡುವಾಗ, ಅದರ ಅಂಶವನ್ನು ಅರ್ಥಮಾಡಿಕೊಳ್ಳುವುದಕ್ಕೆ ಜ್ಞಾನಕ್ಕಾಗಿ ಕರ್ತನನ್ನು ಕೇಳಿಕೊಳ್ಳೋಣ ಮತ್ತು ಆತನು ನಮಗೆ ಉತ್ತರಗಳನ್ನು ಕೊಡುವನು ಎಂದು ನಂಬಿಕೆ ಇಡೋಣ.

ಕಥೆ ಮಾತ್ರವನ್ನು ಉಪಯೋಗಿಸುವುದಕ್ಕೆ ಮಾರ್ಗಗಳು

ಈಗಿರುವ ನಿಮ್ಮ ಸೇವೆಯೊಳಗೆ ಕಥೆ ಮಾತ್ರವನ್ನು ಸೇರಿಸಿಕೊಳ್ಳಿ: ನೀವು ಚಿಕ್ಕ ಮಕ್ಕಳೊಂದಿಗೆ, ಯೌವನಸ್ಥರೊಂದಿಗೆ, ಪ್ರಾಯಸ್ಥರೊಂದಿಗೆ ಅಥವಾ ಪ್ರೌಢಾವಸ್ಥೆಯಲ್ಲಿರುವವರೊಂದಿಗೆ ಕೆಲಸ ಮಾಡುತ್ತಿದ್ದರೂ ಸಹ, *ಕಥೆ ಮಾತ್ರವು* ಆಸಕ್ತಿಯನ್ನು ಹುರಿದುಂಬಿಸುತ್ತದೆ ಮತ್ತು ನಿಮ್ಮ ಜನರನ್ನು ದೇವರ ವಾಕ್ಯದ ಅಧ್ಯಯನದೊಳಗೆ ಸೇರಿಕೊಳ್ಳುವಂತೆ ಮಾಡುತ್ತದೆ.

1. ನಿಮಗೆ ದೊರಕುವ ಯಾವ ಸಮಯವೇ ಆದರೂ ಸಹ, ನೀವು ಹೇಳುವಂತಹ ಅವಲೋಕನಗಳ ಮತ್ತು ಅನ್ವಯಿಸುವಿಕೆಗಳ ಸಂಖ್ಯೆಯಿಂದ ಕಥೆಯ ನಿರೂಪಣೆಯ ಅವಧಿಯನ್ನು ನೀವು ಸರಿಹೊಂದಿಕೊಳ್ಳುವಂತೆ ಮಾಡಬಹುದು. ನಿಮಗೆ ನಿಗದಿ ಮಾಡಲ್ಪಟ್ಟಿರುವ ಸಮಯವಿರುವುದಾದರೆ, ಅಂದರೆ 30 ನಿಮಿಷಗಳಿಗಿಂತಲೂ ಕಡಿಮೆ ಸಮಯವಿದ್ದರೆ, ಆಗ ಹಂತ ಒಂದರ 2ನೇ ಭಾಗವನ್ನು ನೀವು ಹೇಳದೆ ಬಿಡಬಹುದು. ಕಥೆಯನ್ನು ಪುನಃ ಹೇಳುವಂತಹ ಸ್ವಯಂಸೇವಕರು ಬೇಡ. ನೀವೇ ಕಥೆಯನ್ನು ಹೇಳಿ. ನಂತರ ಗುಂಪಿನವರು ಒಟ್ಟಾಗಿ ಕಥೆಯನ್ನು ಹೇಳುವಂತೆ ಅವರಿಗೆ ಪ್ರಶ್ನೆಯನ್ನು ಕೇಳುವುದರಿಂದ ಗುಂಪನ್ನು ನಡೆಸಬಹುದು. ಆಗಲೂ ಸಹ *ಕಥೆ* ಮಾತ್ರದ ಮಾದರಿಯು ಕೆಲಸ ಮಾಡುತ್ತದೆ.

2. *ಕಥೆ* ಮಾತ್ರದ ಕಥೆಯನ್ನು ಹೇಳುವುದಕ್ಕೆ ಕೊಡುವ ಸಮಯವು ಹಾಗೂ ಅವಕಾಶ ಬಹಳ ಕಡಿಮೆ ಇರುವುದಾದರೆ, ಆಗ ನೀವು ಕೆಲವು ಅನೇಕ ರಚನಾತ್ಮಕ ಸಂಗತಿಗಳನ್ನು ಮಾಡಬಹುದು. ಒಂದು ಕಥೆಯನ್ನು ಕೇವಲ ಒಂದು ನಿಮಿಷದಲ್ಲಿ ಹೇಳಿ ಮುಗಿಸಬಹುದು ಮತ್ತು ಆಯ್ಕೆ ಮಾಡಿರುವಂತಹ ಕೆಲವು ಅವಲೋಕನಗಳನ್ನು ಮತ್ತು ಅನ್ವಯಿಸುವಿಕೆಗಳನ್ನು 5 ರಿಂದ 10 ನಿಮಿಷಗಳಲ್ಲಿ ಹೇಳಬಹುದು. ಕಥೆಯನ್ನು ಹೇಳಿ, ನಂತರ ನೇರವಾಗಿ ಅಲ್ಲಿ ಆಯ್ಕೆ ಮಾಡಿಕೊಂಡಿರುವ ಕೆಲವು ಅವಲೋಕನಗಳನ್ನು ತಿಳಿಸಿ, ಅದಾದ ನಂತರ ಅವುಗಳ ಅನ್ವಯಿಸುವಿಕೆಗಳನ್ನು ಹೇಳಿ. ನೀವು ಪ್ರತಿಯೊಂದು ಪ್ರಶ್ನೆಯನ್ನು ಕೇಳುವುದಕ್ಕೂ ಮುನ್ನ, ಜನರು ಕಂಡುಹಿಡಿಯಬೇಕೆಂದು ನೀವು ಬಯಸುವಂತಹ ನಿಧಿಯನ್ನು ಹೊಂದಿರುವ ಅಂಶದ ಕಥೆಯ ಭಾಗವನ್ನು ವಿವರವಾಗಿ ಮತ್ತೊಮ್ಮೆ ಹೇಳಿ.

ಉದಾಹರಣೆಗೆ, ಒಂದು ವೇಳೆ, ನೀವು ಮಾರ್ಕ 1:40-45ರಲ್ಲಿರುವ ಒಬ್ಬ ಕುಷ್ಠರೋಗಿಯ ಕಥೆ ಹೇಳುತ್ತಿರುವಿರಿ, ಆಗ ನೀವು, "ಆ ಕುಷ್ಠರೋಗಿಯು ಕೆಳಗೆ ಬೊಗ್ಗಿ, 'ನಿನಗೆ ಮನಸ್ಸಿದ್ದರೆ ನನ್ನನ್ನು ಗುಣಪಡಿಸಬಲ್ಲೆ' ಎಂದು ಬೇಡಿಕೊಂಡಾಗ ಯೇಸುವಿಗೆ ಹೇಗೆ ಕನಿಕರ ಉಂಟಾಯಿತು ಎಂಬುದನ್ನು ನೆನಪಿಸಿಕೊಳ್ಳಿ." ಎಂದು ಹೇಳಬಹುದು. ಇದೇ ಕೀಲಿಗೈಯಾಗಿದೆ. ಜನರು ತಾವು ಈಗ ತಾನೇ ಕೇಳಿದಂತಹ ಕಥೆಯನ್ನು ನೆನಪಿಗೆ ತಂದುಕೊಳ್ಳುವಂತೆ ಸಾಕಷ್ಟು ವಿವರವನ್ನು ಹೊಂದಿರುವಂತಹ ಒಂದು ಪ್ರಶ್ನೆಯನ್ನು ಕೇಳಿ, ಇದರ ನಿಮಿತ್ತ ನಿಮ್ಮ ಪ್ರಶ್ನೆಗೆ ಅವರು ಚೆನ್ನಾಗಿ ಉತ್ತರಿಸುವಂತಾಗುತ್ತದೆ.

ಸಭಾಪಾಲಕರುಗಳ ನವೀನತೆ: ಸಾಂಪ್ರದಾಯಿಕವಾದ ಪಂಗಡಗಳು ಮತ್ತು ಸಭೆಗಳು ವೇದಿಕೆಯ ಮೇಲಿಂದ *ಕಥೆ* ಮಾತ್ರವನ್ನು ಉಪಯೋಗಿಸಲು ಹಿಂಜರಿಯುತ್ತಾರೆ. ಸಂದೇಶವನ್ನು ಕೊಡುತ್ತಿರುವಂತಹ ಸಮಯದಲ್ಲಿ ಪ್ರಶ್ನೆಗಳನ್ನು ಕೇಳುವುದು ಸಭಾಪಾಲಕರಿಗೆ ಬಹಳ ವ್ಯತ್ಯಾಸವಾಗಿರುವಂತಹ ಸಂಗತಿಯಾಗಿರುತ್ತದೆ. ಅದಲ್ಲದೆ, ಕಥೆಯನ್ನು ಓದುವುದರ ಬದಲು ಅದನ್ನು ಹೇಳುವುದು ಕೆಲವೊಂದು ಗುಂಪುಗಳಲ್ಲಿ ದೊಡ್ಡ ಪ್ರವೇಶವಾಗಿರುತ್ತದೆ. *ಕಥೆ* ಮಾತ್ರದ ಕಾರ್ಯಾಗಾರಕ್ಕೆ ಬಂದು ಭಾಗವಹಿಸಿ, ಇದರ ಕಲ್ಪನಾ ಶಕ್ತಿಯನ್ನು ಮೆಚ್ಚಿದಂತಹ ಲೋಕದ ಅನೇಕ ಸ್ಥಳಗಳಲ್ಲಿನ ಸಭಾಪಾಲಕರುಗಳು ಈ ಕೆಳಗಿನ ಪರಿಹಾರಗಳನ್ನು ಕಂಡುಹಿಡಿದಿರುವರು.

1. ಕೆಲವು ಸಭಾಪಾಲಕರುಗಳು ಇದನ್ನು ಯೌವನಸ್ಥರೊಂದಿಗೆ ಒಂದು ಸಾಧಾರಣವಾದ ಕೂಟದಲ್ಲಿ ಉಪಯೋಗಿಸುತ್ತಾರೆ. ಯೌವನಸ್ಥರಿಂದ ಬಂದಂತಹ ಪ್ರತಿಕ್ರಿಯೆಯು ಬಹಳ ಸಕಾರಾತ್ಮಕವಾಗಿತ್ತು. ಪೋಷಕರು ಸಭಾಪಾಲಕರುಗಳ ಬಳಿಗೆ ಬಂದು, "ನೀವು ನಮಗೂ ಸಹ ಇದೇ ರೀತಿಯಲ್ಲಿ ಏಕೆ ಕಲಿಸಬಾರದು?" ಎಂದು ಕೇಳಿದರು.

2. ಇನ್ನಿತರ ಸಭಾಪಾಲಕರುಗಳು *ಕಥೆ* ಮಾತ್ರವನ್ನು ವೇದಿಕೆಯ ಮೇಲಿಂದ ಹೇಳುವುದಕ್ಕೆ ಉಪಯೋಗಿಸಿದರು, ಆದರೆ ಕಥೆಯನ್ನು ಹೇಳುವುದರ ಬದಲು, ಅವರು ವಾಕ್ಯಭಾಗದಿಂದ ಕಥೆಯನ್ನು ಓದಿದರು, ಆದರೆ ಇದನ್ನು ಅವರು ಸಾಂಪ್ರದಾಯಿಕವಾಗಿ ರೀತಿಯಲ್ಲಿ ಓದುವುದರ ಬದಲು ಹುರಿದುಂಬಿಸುವಂತಹ ಆಸಕ್ತಿಕರವಾದ ಶೈಲಿಯಲ್ಲಿ ಓದಿದರು. ಅವರು ಇದನ್ನು "ಕಥೆ ಹೇಳುವ" ಶೈಲಿ ಎಂದು ಹೇಳುವರು.

   ಆನಂತರ, ಅವರು ಆತ್ಮೀಕ ಅವಲೋಕನಗಳು ಮತ್ತು ಅನ್ವಯಿಸುವುಕೆಗಳ ಪ್ರಶ್ನೆಗಳನ್ನು ಕೇಳುವರು. ಕೆಲವು ಪ್ರೋತ್ಸಾಹಕರವಾಗಿ ಕೇಳಿಬಂದ ಪ್ರತಿಕ್ರಿಯೆಗಳು; ಇನ್ನಿತರರು ಮನವೊಲಿಸುವ ಶೈಲಿಯ ಪ್ರಶ್ನೆಗಳನ್ನು ಕೇಳುವರು, ಇದು ಜನರಿಗೆ ಪ್ರಶ್ನೆಯನ್ನು ಮುಂದುವರೆಯುವಂತೆ ಅವಕಾಶ ನೀಡುತ್ತದೆ ಮತ್ತು ತಮ್ಮ ಮನಸ್ಸಿನಲ್ಲಿ ಒಂದು ಪ್ರತಿಕ್ರಿಯೆಯ ಬಗ್ಗೆ ಆಲೋಚಿಸುವಂತೆ ಅನುಮತಿಸುತ್ತದೆ. ಇದು ಮುಖ್ಯವಾದುದು. ಅಂತಹ ಸಭಾಪಾಲಕರುಗಳು ಜನರು ತಾವು ಕೊಡಬೇಕಾಗಿರುವ ಉತ್ತರಗಳ ಕುರಿತಾಗಿ ಆಲೋಚಿಸುವಕ್ಕೆ ಅಗತ್ಯವಾಗಿರುವ ಸಮಯವನ್ನು ಒದಗಿಸಿಕೊಡಬೇಕೆಂಬುದನ್ನು ಖಚಿತಪಡಿಸಿಕೊಳ್ಳಬೇಕು.

3. ಕೆಲವರು ಇದನ್ನು, "ನಮ್ಮಿಂದ ಬಹಳ ದೂರವಿದ್ದಂತಹ ಓದಲು ಬರದಿರುವವರನ್ನು ತಲುಪುವುದಕ್ಕೆ ಇದು ಒಂದು ಮಾರ್ಗ" ಎಂದು ಪ್ರದರ್ಶನ ನೀಡಿದರು. ಸತ್ಯವೇದವನ್ನು "ಬೇರೆಯವರಿಗೆ" ಈ ರೀತಿಯಾಗಿ

ನಿರೂಪಿಸುವುದರ ಸಕಾರಾತ್ಮಕ ಪ್ರತಿಕ್ರಿಯೆಗಳು, *ಕಥೆ* ಮಾತ್ರವನ್ನು ನಿಯಮಾನುಸಾರವಾಗಿ ಅವರ ಸಭೆಗಳಲ್ಲಿ ಉಪಯೋಗಿಸುವುದಕ್ಕೆ ಬಾಗಿಲನ್ನು ತೆರೆಯುವಂತೆ ಮಾಡಿತು.

4. ಕೆಲವು ಸಭಾಪಾಲಕರುಗಳು ತಮ್ಮ ಭಾನುವಾರದ ಶಾಲೆಯ (ಸಂಡೇ ಸ್ಕೂಲ್) ಕಾರ್ಯಕ್ರಮದ ನಾಯಕರುಗಳಿಗೆ ಪರಿಚಯ ಮಾಡಿಸಿತು. ಇನ್ನಿತರರು ತಮ್ಮ ಮಧ್ಯವಾರದಲ್ಲಿ ನಡೆಯುವ ಕೂಟಗಳಲ್ಲಿ ಇದನ್ನು ಉಪಯೋಗಿಸಿದರು.

5. ಬೇರೆಯವರು ಹೊಸ ವಿಶ್ವಾಸಿಗಳ ತರಗತಿಗಳಿಗಾಗಿ ಇದನ್ನು ಒಂದು ಆಯ್ಕೆಯಾಗಿ ಉಪಯೋಗಿಸಿದರು.

ಯಾವ ಪ್ರತಿಕ್ರಿಯೆಗಳು ಇಲ್ಲದೆ, ಸಂಪೂರ್ಣವಾದ *ಕಥೆ* ಮಾತ್ರದ ಜೀವಂತಿಕೆ:

1. ಒಂದು ಗುಂಪು ಬಹಳ ದೊಡ್ಡದಾಗಿದ್ದರೆ, ಅಥವಾ ಪ್ರತಿಕ್ರಿಯೆಗಳನ್ನು ಕೊಡಲು ಸಮರ್ಥರಲ್ಲದಿದ್ದರೆ, ನೀವು ನಿಮ್ಮ *ಕಥೆ* ಮಾತ್ರದ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳಬೇಕು. ಇದನ್ನು ಮಾಡಲು ಸಾಧ್ಯ. ಎಲ್ಲಾ ಭಾಗಗಳನ್ನು ಮಾಡಬಹುದು ಆದರೆ ನೀವು ಬೋಧಿಸುತ್ತಿರುವ ಗುಂಪಿನಿಂದ ಯಾವ ಪ್ರತಿಕ್ರಿಯೆಯನ್ನು ನಿರೀಕ್ಷಿಸದಂತೆ ಒಬ್ಬ ವ್ಯಕ್ತಿಯು ಸಂಪೂರ್ಣ ಕಥೆಯನ್ನು ಪುನಃ ಹೇಳುವಂತೆ ಕೇಳಬೇಕು.

2. *ಕಥೆ* ಮಾತ್ರದ ಕಥೆಗಳನ್ನು ರೇಡಿಯೋ ಅಥವಾ ದೂರದರ್ಶನದಲ್ಲಿ ನಿರೂಪಿಸಬಹುದು. ಪುನಃ ಕಥೆಯನ್ನು ಹೇಳುವಂತಹುದನ್ನು ಬಿಡಲಾಗುವುದು ಅದರೆ ಇನ್ನುಳಿದ ಸಂಗತಿಗಳು ಒಳಗೊಂಡಿರುತ್ತವೆ. ವಿಶೇಷವಾಗಿ ರೇಡಿಯೋದಲ್ಲಿ ನಡೆಸುವಾಗ ಕೀಲಿಗೈಯೆಂದರೆ, ಪ್ರತಿ ಪ್ರಶ್ನೆಯ ನಂತರದ ಐದು ಸೆಕೆಂಡ್‌ಗಳ ಸ್ಥಳವನ್ನು ವೇಗವಾಗಿ ಮಾತನಾಡುವುದಾಗಿದೆ.

3. ಉದಾಹರಣೆಗೆ, ಒಂದು ಪ್ರಶ್ನೆಯನ್ನು ಕೇಳಿ, ನಂತರ, "ಹಾಗಾದರೆ ನಿಮಗೆ ಏನನ್ನಿಸುತ್ತದೆ? ಇದರ ನಂತರ ಏನಾಯಿತು ಎಂಬ ಕಲ್ಪನೆ ನಿಮಗಿದೆಯೇ? ನೀವು ಏನು ಹೇಳುವಿರಿ? ನಿಮ್ಮ ಉತ್ತರ...?" ಎಂದು ಹೇಳಿ. ನೀವು ಹೇಳುವುದನ್ನು ಕೇಳಿಸಿಕೊಳ್ಳುವುದಕ್ಕೆ ಕೇಳುಗರಿಗೆ ಯಾವ ಗಲಿಬಿಲಿಯನ್ನು ಉಂಟು ಮಾಡದಂತಹ ವೇಗವಾಗಿ ಮಾತನಾಡುವಿಕೆ ಇದಾಗಿದೆ, ಆದರೆ ಇದರಿಂದ ಜನರು ಬೇರೆ ಸಂಗತಿಗಳನ್ನು ಕೇಳದಂತೆ ಇಡುತ್ತದೆ, ಏಕೆಂದರೆ ಅವರಿಗೆ ಮುಂದೆ ರೇಡಿಯೋದಿಂದ ಏನೂ ಕೇಳಿಸುವುದಿಲ್ಲ.

4. ನೀವು *ಕಥೆ* ಮಾತ್ರದಲ್ಲಿ ಪರಿಣತರಾಗಿದ್ದು, ರೇಡಿಯೋ ಸ್ಟುಡಿಯೋದಲ್ಲಿ ಮೂರು ಅಥವಾ ನಾಲ್ಕು ಜನರಿಂದ ಮೈಕ್ರೋಫೋನ್‌ನಲ್ಲಿ ನಡೆಸುವ ಅವಕಾಶವಿದ್ದರೆ, ನೀವು ಒಂದು ಅತ್ಯಾಕರ್ಷಕವಾದ ಕಾರ್ಯಕ್ರಮವನ್ನು ನಡೆಸಬಹುದು. ಈ ವಿಧಾನವನ್ನು *ಕಥೆ* ಮಾತ್ರದಲ್ಲಿ ಉಪಯೋಗಿಸಿದ ಮೊದಲ ಕಥೆ ಹೇಳುವವರು ಫಿಲಿಫೈನ್ಸ್‌ನಲ್ಲಿದ್ದವರು. ಪ್ರತಿ ವಾರದ ಪ್ರಸಾರದ ಕೆಲವು ತಿಂಗಳುಗಳ ಬಳಿಕ, ಪ್ರತಿ ಕಾರ್ಯಕ್ರಮಕ್ಕಾಗಿ ೧೪೦೦ ಸಹಯೋಗದ ಮೂಲಪಾಠಗಳನ್ನು ಮತ್ತು ದೂರವಾಣಿಯ ಕರೆಗಳನ್ನು ಪಡೆದುಕೊಳ್ಳುತ್ತಿತ್ತು.

ಅಧ್ಯಾಯ 7
ನಿಖರತೆಯಿಂದ ಅನ್ವಹಿಸಿಕೋಳ್ಳುವುದು – ಆನೆಯನ್ನು ಕಂಡುಹಿಡಿಯುವುದು

ಕಥೆ ಹೇಳುವವರು ಹೊಸ ಹೊಸ ಕೌಶಲ್ಯವನ್ನು ಪ್ರತಿ ಕಥೆಯಲ್ಲಿ ಕಲಿತಿರಬೇಕು, ಕಥೆಯಲ್ಲಿನ ಎಲ್ಲಾ ಅಂಶಗಳನ್ನು ನೋಡುವವರಾಗಿರಬೇಕು ಅದು ಸಣ್ಣದಿರಲಿ ಅಥವ ದೋಡ್ಡದಿರಲಿ, ಈಗೆ ಕಲಿಯುವಾಗ ಕಥೆಯ ಸಂಪೂರ್ಣ ಅಂಶಗಳನ್ನು ಕಲಿಯಲು ಮರಿಯಬಾರದು. ಕಥೆಯ ಆತ್ಮೀಕವಾದ ಕಲಿಯಬಹುದಾದ ಎಲ್ಲಾ ಅಂಶಗಳನ್ನು ಕಲಿಯಲು ಮರೆಯಬಾರದು ಕಾರಣ ಸತ್ಯವೇದವು ಕೇವಲ ಒಂದು ಚರಿತ್ರೆಯ ಪುಸ್ತಕವಲ್ಲ.

ಉದಾಹರಣೆಗೆ, ದಾವಿದನು ಮತ್ತು ಗೊಲಿಯಾತನ ಕಥೆಯನ್ನು ಅನೇಕರು ಈಗೆ ಬೋದಿಸುವಾಗ ದಾವಿದನು ಚಿಕ್ಕವನಾಗಿದ್ದರು ಅವನು ದೈರ್ಯವಂತನಾಗಿದ್ದನು ಹಾಗು ಯುದ್ದ ಮಾಡಲು ಒಳ್ಳೆಯ ಕೌಶಲ್ಯವನ್ನು ಕಲಿತಿದ್ದನು, ಅವನಿಗೆ ಕಷ್ಟಕರವಾದದ್ದನ್ನು ಎದುರಿಸಿ ಗೆಲ್ಲಲು ಶಕ್ತಿವಂತನಾಗಿದ್ದನು. ಕೊನೆಗೆ ತಮ್ಮ ಜೀವಿತಕ್ಕೆ ಅನ್ವಹಿಸಿಕೋಳ್ಳುವಾಗ ಬೋದಿಸುವವರು ಕೇಳುವವರಿಗೆ ನೀವು ಸಹ ದಾವಿದನ ಹಾಗೆ ದೈರ್ಯವಂತರಾಗಿ ಬಂದ ಎಲ್ಲಾ ಕಷ್ಟಗಳನ್ನು ಎದುರಿಸಬೇಕು ಎಂದು ಬೋದಿಸುತ್ತಾರೆ.

ಒಳ್ಳೆಯ ಸಂದೇಶ... ಆದರೆ ಕಥೆಯಲ್ಲಿ ಅಷ್ಟೇ ಇದೆಯೆ?

ಕಥೆಯಲ್ಲಿ ಬೋದಿಸಲು ಒಳ್ಳೆಯ ಸಂದೇಶದ ವಿಷಯವಿದೆ ಆದರೆ ಅದರಲ್ಲಿರುವ ಎಲ್ಲಾ ಆತ್ಮೀಕ ವಿಷಯಗಳನ್ನು ನೋಡಬೇಕು. ಕಥೆಯಲ್ಲಿ ದಾವಿದನು ತಾನು ನಂಬಿರುವ ದೇವರು ಇಸ್ರಯೇಲ್ಯರ ಮೇಲೆ ಯುದ್ದಕ್ಕೆ ಬಂದಿರುವ ಗೊಲಿಯಾತನನ್ನು ಹಾಗು ತಪ್ಪು ದೇವರುಗಳನ್ನು ನಂಬಿರುವ ವಿರೋದಿಗಳನ್ನು ನಾಶಮಾಡುತ್ತಾನೆ ಎಂದು ತಿಳಿದಿದ್ದನು. ಸೌಲನು ಮತ್ತು ಇಸ್ರಯೇಲ್ಯರ ಸೈನ್ಯವು ನಿಜದೇವರಾದ ಯಹೋವನು ನಮಗೆ ವಿರೋದವಾಗಿ ಯುದ್ದಕ್ಕೆ ಬಂದಿರುವ ತಪ್ಪು ದೇವರುಗಳನ್ನು ನಂಬಿರುವ ವಿರೋದಿಗಳನ್ನು ನಾಶಮಾಡುತ್ತಾನೆ ಎಂಬ ಬರವಸೆ ಇಡಬೇಕಾಗಿತ್ತು. ಹಿಂದೆ ಅನೇಕ ಸಲ ವಿರೋದಿಗಳು ಇಸ್ರಯೇಲರ ಮೇಲೆ ಯುದ್ದಕ್ಕೆ ಬಂದಾಗ ಇಸ್ರಯೇಲರು ನಿಜದೇವರಾದ ಯಹೋವನ ಮೇಲೆ ನಂಬಿಕೆ ಇಟ್ಟಾಗ ಅವರನ್ನು ಯಹೋವನೇ ಬಿಡಿಸಿದನೇಂದು ಅವರಿಗೆ ತಿಳಿದಿತ್ತು.

ಸತ್ಯವೇದದ ಎಲ್ಲಾ ಕಥೆಗಳಲ್ಲಿ ಈ ರೀತಿಯ ಅನೇಕ ಆತ್ಮೀಕ ಸತ್ಯಾಂಶಗಳಿರುತ್ತವೆ ಆದಕಾರಣ ಕಥೆಯಲ್ಲಿನ ಎಲ್ಲಾ ಆತ್ಮೀಕ ಸತ್ಯಾಂಶಗಳನ್ನು ಒಂದೂ ಬಿಡದಂತೆ ಸಾವದಾನವಾಗಿ ಕಲಿಯಬೇಕು ಹಾಗು ತಮ್ಮ ಜೀವಿತಕ್ಕೆ ಅನ್ವಹಿಸಿಕೋಳ್ಳಬೇಕು.

ಕಥೆ ಹೇಳುವವರು ತಾವು ಆತ್ಮೀಕ ನಿಧಿಗಳಿಗೆ ಹುಡುಕಾಡುವಾಗ ಈ ಆನೆಯನ್ನು ಕಂಡುಹಿಡಿಯುವ ತತ್ವವು ಇವರಿಗೆ ಸಹಾಯ ಮಾಡುತ್ತದೆ.

ಮೊದಲು ವಿಷಯ... **ಆನೆಯನ್ನು ಕಳೆದುಕೊಳ್ಳುವುದು.**

ಇದಕ್ಕೆ ಚಿರಪರಿಚಿತವಿರುವಂತಹ ವಿಷಯವನ್ನು ನೀವು ಈಗಾಗಲೇ ಕೇಳಿಸಿಕೊಂಡಿರಬಹುದು. ಐದು ಮಂದಿ ಕುರುಡರು ಒಂದು ಆನೆಯ ಬಳಿಗೆ ಕರೆತರುತ್ತಾರೆ. "ಈಗ ನೀವು ಒಂದು ಆನೆಯ ಮುಂದೆ ನಿಂತಿರುವಿರಿ. ದಯವಿಟ್ಟು ಇದರ ವರ್ಣನೆಯನ್ನು ಮಾಡಿ." ತಕ್ಷಣವೇ, ಅವರಲ್ಲಿ ನಾಲ್ಕು ಮಂದಿ ತಾವು ಮೊದಲು ಆನೆಯ ಭಾಗಗಳನ್ನು ಮುಟ್ಟಿ ತಿಳಿದುಕೊಳ್ಳಲು ಪ್ರಾರಂಭಿಸಿದರು.

ಒಬ್ಬನು ಬಾಲವನ್ನು ಮುಟ್ಟಿ, "ಇದು ಒಂದು ಚಿಕ್ಕ ಮರದ ರೆಂಬೆಯಾಗಿ ಇದೆ" ಎಂದು ಆನೆಯನ್ನು ವರ್ಣಿಸಿದನು.

ಎರಡನೇ ಕುರುಡನು ಆನೆಯ ಕಿವಿಯನ್ನು ಹಿಡಿದುಕೊಂಡು, "ಒಂದು ಆನೆ ಎಂದರೆ ಮರದ ಮೇಲಿರುವ ಒಂದು ದೊಡ್ಡ ಎಲೆಯ ಆಕಾರದಲ್ಲಿದೆ" ಎಂದು ಹೇಳಿದನು.

ನಂತರ ಅವರಲ್ಲಿ ಮತ್ತೊಬ್ಬನು ಆನೆಯ ಸೊಂಡಿಲನ್ನು ಮುಟ್ಟಿದನು. "ಇದು ವಿವಿಧ ದಿಕ್ಕಿನಲ್ಲಿ ಬಾಗುವಂತಹ ಒಂದು ಉದ್ದವಾದ ಕಾಲ್ಚೀಲ" ಅಂದನು.

ನಾಲ್ಕನೆಯ ವ್ಯಕ್ತಿಯು ಆನೆಯ ಹೊಟ್ಟೆಯನ್ನು ಹೋಗಿ ಮುಟ್ಟಲು ಪ್ರಯತ್ನಿಸಿದನು. ಅವನಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ಅವನು, "ಒಂದು ಆನೆಯು ದುಂಡಾಗಿರುವ ಒಂದು ದೊಡ್ಡ ಬಂಡೆಯ ರೀತಿಯಲ್ಲಿದೆ; ಆದರೆ ಇದು ಬಂಡೆಯಷ್ಟು ಗಟ್ಟಿಯಾಗಿಲ್ಲ ಮತ್ತು ಇದು ಚಲಿಸುತ್ತದೆ!" ಎಂದು ಹೇಳಿದನು.

ಐದನೆಯ ಕುರುಡನು, "ಓ, ಆನೆಯನ್ನು ವರ್ಣಿಸುವುದಕ್ಕೆ ನಾನು ಅದನ್ನು ಮುಟ್ಟುವ ಅವಶ್ಯಕತೆ ಇಲ್ಲ, ನಾನು ಅನೇಕ ಬಾರಿ ಜೋರಾದ ಆನೆಯ ತುತ್ತೂರಿ ಶಬ್ದವನ್ನು ಕೇಳಿರುವೆನು. ಆನೆಯು ಒಂದು ದೊಡ್ಡ ವಾದ್ಯದ ಸಾಧನವಾಗಿದೆ ಎಂದು ಎಲ್ಲರಿಗೂ ತಿಳಿದಿದೆ!" ಅಂದನು.

ಪ್ರತಿವ್ಯಕ್ತಿಯೂ ಆನೆಯ ಕೆಲವು ಭಾಗವನ್ನು ಸರಿಯಾಗಿ ವರ್ಣಿಸಿದ್ದರೂ ಸಹ, ಅವರಲ್ಲಿ ಯಾರೊಬ್ಬರು ಆ ಪ್ರಾಣಿಯು ಯಾವ ರೀತಿಯಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ಆನೆಯನ್ನು ಕಳೆದುಕೊಂಡರು.

ನಾವು ಸತ್ಯವೇದದಲ್ಲಿನ ಒಂದು ಕಥೆಯಲ್ಲಿರುವ ನಿಧಿಗಳನ್ನು ಹುಡುಕುವಾಗ, ಪ್ರತಿ ಕಥೆಗೂ ಒಂದು ಸಂಪೂರ್ಣತೆ ಎನ್ನುವುದು ಇದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಇದನ್ನು ಸಂಪೂರ್ಣತೆ ಎಂದು ಕರೆಯುತ್ತೇವೆ, "ಆನೆ." ಒಂದು ಕಥೆಯು ಉದ್ದವಾಗಿರುವಾಗ, ಇದರಲ್ಲಿ ಅನೇಕ ಬಾರಿ ವಿವಿಧ ಭಾಗಗಳಿರುತ್ತವೆ, ಇದು ಒಂದು ಕ್ರಿಯೆಗಿಂತ ಹೆಚ್ಚಾಗಿರುವ ಒಂದು ಆಟದಂತೆ. ಈ ರೀತಿಯ ಉದ್ದ ಕಥೆಗಳಲ್ಲಿ, ಪ್ರತಿಯೊಂದು ಕ್ರಿಯೆ ಅಥವಾ ದೃಶ್ಯವು ತನ್ನದೇ ಆದ ಸತ್ಯದ ಆನೆಯನ್ನು ಹೊಂದಿರುತ್ತದೆ.

ಕೆಲವೊಮ್ಮೆ, ಪರಿಚಯವಿರುವಂತಹ ಕಥೆಯನ್ನು ಓದುತ್ತಿರುವಾಗ, ಈ ಕಥೆಯು ಯಾವುದರ ಕುರಿತಾಗಿದೆ ಎಂಬ ಪೂರ್ವಾಭಾವಿ ಆಲೋಚನೆ ನಮಗೆ ಇರಬಹುದು, ಹಾಗಾಗಿ ಇದನ್ನು ಕೇಳಿಸಿಕೊಳ್ಳುವುದರಲ್ಲಿ ನಾವು

ನಿಜವಾಗಿಯೂ ಸೋತುಹೋಗುತ್ತೇವೆ. ಕಂಡುಹಿಡಿಯುವುದಕ್ಕೆ ಸಮಯವನ್ನು ಸಹ ತೆಗೆದುಕೊಳ್ಳದಂತಹ ಆ ಕುರುಡು ವ್ಯಕ್ತಿಯನ್ನು ನೆನಪು ಮಾಡಿಕೊಳ್ಳಿ (ಏಕೆಂದರೆ ಆನೆಯು ಒಂದು ವಾದ್ಯವಾಗಿದೆ ಎಂದು ಅವನು ಬಹಳವಾಗಿ ಭಾವಿಸಿದ್ದನು)? ಸತ್ಯವೇದದ ಒಂದು ವಾಕ್ಯಭಾಗದ ಕುರಿತಾಗಿ ನಮಗೆ ಎಲ್ಲವೂ ಈಗಾಗಲೇ ತಿಳಿದಿದೆ ಎಂದು ನಾವೂ ಸಹ ಆಲೋಚಿಸಬಹುದು, ಇದರ ಫಲಿತಾಂಶವಾಗಿ ಕಥೆಯ ಎಲ್ಲಾ ಸತ್ಯವನ್ನು ನಾವು ಸಂಪೂರ್ಣವಾಗಿ ಕಳೆದುಕೊಳ್ಳುತ್ತೇವೆ.

ಹಾಗೂ, ಕುರುಡರು ಮಾಡಿದಂತಹ ಅದೇ ತಪ್ಪನ್ನು ಮಾಡುವುದು ಸುಲಭ. ಕಥೆಯ ಕೆಲವು ವೈಯಕ್ತಿಕ ಭಾಗಗಳನ್ನು ಬಲವಾಗಿ ಹಿಡಿದುಕೊಳ್ಳುತ್ತೇವೆ ಹಾಗೂ ಅಲ್ಲಿಯೇ ನಿಂತು ಹೋಗುವುದರಿಂದ ಹೀಗೆ ಮಾಡುತ್ತೇವೆ. ಇಡೀ ಕಥೆಯನ್ನು ಗಣನೆಗೆ ತೆಗೆದುಕೊಂಡು ಮತ್ತು ಅದರ ಎಲ್ಲಾ ಭಾಗಗಳು ಯಾವ ರೀತಿ ಇವೆ ಎಂಬುದನ್ನು ಗಣನೆಗೆ ತೆಗೆದುಕೊಂಡು ನಿಂತಲ್ಲಿಯೇ ಬೀಳುವುದರಿಂದ, ನಾವು ಇಡೀ ಆನೆಯ ರೂಪವನ್ನು ಕಳೆದುಕೊಳ್ಳಬಹುದು.

ನಾವು ಸಂಪೂರ್ಣ ಕಥೆಯನ್ನು ನಿಖರವಾಗಿ ಗ್ರಹಿಸುತ್ತಿರುವೆವೋ ಎಂಬುದನ್ನು ನಿಖರವಾಗಿ ಖಚಿತಪಡಿಸಿಕೊಳ್ಳುವುದಕ್ಕೆ ಇದನ್ನು ಕೇಳಿಸಿಕೊಳ್ಳುವುದರ ಮತ್ತು ಇದರ ಬಗ್ಗೆ ಪ್ರಾರ್ಥನೆ ಮಾಡುವುದರ ಅಗತ್ಯ ನಮಗಿದೆ. ನೀವು ಕಂಡುಹಿಡಿದಿರುವ ಆ ವೈಯಕ್ತಿಕ ಸತ್ಯಗಳಿಗೆ ಬೆಲೆಯಿದೆ, ಅದರೆ ಆ ವೈಯಕ್ತಿಕ ಭಾಗಗಳು ಆಗಲೂ ಸಹ ಇಡೀ ಆನೆಯನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲದಿರಬಹುದು.

ಸತ್ಯವೇದದಲ್ಲಿ ಆನೆಯನ್ನು ಕಂಡುಹಿಡಿಯುವುದರ ಉದಾಹರಣೆ

ಮೊದಲು ಮಾರ್ಕ 1:40-45 ಓದಿ. ನಂತರ ನೀವು ಸಮಯವನ್ನು ತೆಗೆದುಕೊಂಡು, ಕಥೆಯಲ್ಲಿರುವ ಆನೆಗಾಗಿ ಹುಡುಕಿ.

> "ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು ಆತನ ಮುಂದೆ ಮೊಣಕಾಲೂರಿಕೊಂಡು – ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ ಎಂದು ಬೇಡಿಕೊಳ್ಳಲು ಆತನು ಕನಿಕರಪಟ್ಟು ಕೈನೀಡಿ ಅವನನ್ನು ಮುಟ್ಟಿ – ನನಗೆ ಮನಸ್ಸುಂಟು; ಶುದ್ಧವಾಗು ಅಂದನು. ಕೂಡಲೆ ಅವನ ಕುಷ್ಠವು ಹೋಗಿ ಅವನು ಶುದ್ಧನಾದನು.
> ಆಗ ಯೇಸು ಅವನಿಗೆ – ಯಾರಿಗೂ ಏನೂ ಹೇಳಬೇಡ ನೋಡು; ಆದರೆ ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆಯು ನೇಮಕ ಮಾಡಿರುವದನ್ನು ಅರ್ಪಿಸಿ ನಿನ್ನ ಶುದ್ಧಾಚಾರವನ್ನು ನೆರವೇರಿಸು, ಅದು ಜನರಿಗೆ ಸಾಕ್ಷಿಯಾಗಲಿ ಎಂದು ಖಂಡಿತವಾಗಿ ಹೇಳಿ ಅವನನ್ನು ಕಳುಹಿಸಿಬಿಟ್ಟನು. ಆದರೆ ಅವನು ಹೊರಟುಹೋಗಿ ಆ ಸಂಗತಿಯನ್ನು ಬಹಳವಾಗಿ ಸಾರಿ ಹಬ್ಬಿಸಿದ್ದರಿಂದ ಯೇಸು ಬಹಿರಂಗವಾಗಿ ಇನ್ನು ಯಾವ ಊರೊಳಕ್ಕೂ ಹೋಗಲಾರದೆ ಹೊರಗೆ ಅಡವಿಯ ಸ್ಥಳಗಳಲ್ಲಿ ಇದ್ದನು. ಮತ್ತು ಜನರು ನಾಲ್ಕು ಕಡೆಯಿಂದಲೂ ಆತನ ಬಳಿಗೆ ಬರುತ್ತಿದ್ದರು."

ನಿಜವಾಗಿಯೂ ಈ ಕಥೆಯಲ್ಲಿ ಅನೇಕ ಅದ್ಭುತವಾದ ಮತ್ತು ಮುಖ್ಯವಾದ ನಿಧಿಗಳಿವೆ. ಆದರೆ ನೀವು ಆನೆಯನ್ನು ನೋಡುತ್ತಿರುವಿರೇ? ಅನೇಕ ಬಾರಿ ಬೋಧಕರು ಇದನ್ನು ಕಳೆದುಕೊಳ್ಳುತ್ತಾರೆ.

ಅವರು ಇದನ್ನು ನೋಡುವರು:

1. ಯೇಸು ಗುಣಪಡಿಸಬಲ್ಲನು ಎಂದು ಆ ವ್ಯಕ್ತಿಯ ನಂಬಿಕೆ,
2. ಗುಣಪಡಿಸುವುದಕ್ಕೆ ಯೇಸುವಿಗೆ ಮನಸ್ಸಿತ್ತು.
3. ಗುಣಪಡಿಸುವುದಕ್ಕೆ ಯೇಸುವಿಗಿರುವ ಸಾಮರ್ಥ್ಯ.
4. ಯೇಸುವಿನ ಕನಿಕರ ಮತ್ತು ಸೌಮ್ಯತೆ.
5. ಕುಷ್ಠರೋಗಿಯನ್ನು ಮುಟ್ಟಿಯೂ ಸಹ ಯೇಸು ತನ್ನ ಪ್ರೀತಿಯನ್ನು ತೋರಿಸುತ್ತಿರುವನು.
6. ಅಸ್ಪೃಶ್ಯನೊಂದಿಗೆ ಯೇಸು ತನ್ನನ್ನು ಗುರುತಿಸಿಕೊಳ್ಳುವುದು.

ಆದರೆ ನಂತರ, ಅವರು ಕಥೆಯನ್ನು ವೇಗವಾಗಿ ತೆಗೆದುಕೊಂಡು ಹೋಗುತ್ತಾರೆ, ಮತ್ತು ಇದನ್ನು ಚೆನ್ನಾಗಿ ಕೇಳಿಸಿಕೊಳ್ಳುವುದಿಲ್ಲ. ಅದರ ಬದಲು ಪರಿಚಯವಿರುವ ಕೆಲವು ವಾಕ್ಯಗಳನ್ನು ಅವರು ಬಿಗಿಯಾಗಿ ಹಿಡಿದುಕೊಳ್ಳುತ್ತಾರೆ, ನಂತರ ತಮಗೆ ತಿಳಿದಿರುವ ಇನ್ನಿತರ ಸತ್ಯಗಳನ್ನು ಕಥೆಗೆ ಹೊಂದಿಕೊಳ್ಳುವಂತೆ ವಾಕ್ಯಗಳಿಗೆ ಸೇರಿಸುತ್ತಾರೆ.

೧. ತಾನು ಗುಣಪಡಿಸಿರುವುದಾಗಿ ಯಾರಿಗೂ ಹೇಳಬಾರದು ಮತ್ತು ತಮ್ಮನ್ನು ಯಾಜಕರ ಬಳಿ ಹೋಗಿ ತೋರಿಸಿಬೇಕು ಎಂದು ಯೇಸು ಹೇಳಿದ್ದನ್ನೂ ಸಹ ಅವರು ಹೇಳುವರು. ಆದರೆ ಸಭಾಪಾಲಕರು, ಈ ವ್ಯಕ್ತಿಯು ಎಷ್ಟು ಉತ್ಸಾಹಭರಿತನಾಗಿದ್ದನೆಂದರೆ ತಾನು ಗುಣವಾದ ಸಂಗತಿಯನ್ನು ಎಲ್ಲರ ಬಳಿಯೂ ಹೇಳಿದನು ಮತ್ತು ಯೇಸು ಏನು ಮಾಡಿದನು ಎಂಬ ಸಾಕ್ಷಿಯನ್ನೂ ಹೇಳಿದನು ಎಂದು ಹೇಳುತ್ತಾ ಮುಂದುವರೆಸುವರು. ಆಮೇಲೆ ಅವರು ಸಂತೋಷ ಮತ್ತು ಹೊಗಳುವಿಕೆಯ ಕುರಿತಾಗಿ ಒಂದು ಸಂದೇಶವನ್ನು ಬೋಧಿಸುವರು.

೨. ಕೆಲವರು ಹೀಗೆ ವಿವರಿಸುವರು, "ಗುಣ ಹೊಂದಿದ ವ್ಯಕ್ತಿಯು ಏನು ನಡೆದಿತ್ತು ಎಂಬುದನ್ನು ಜನರಿಗೆ ಹೇಳಬಾರದಾಗಿದ್ದರೂ ಸಹ, ಅವನು ಸಂತೋಷದ ನಿಮಿತ್ತ ಇದನ್ನು ತಡೆಯಲಾರದೆ ಸಾಕ್ಷಿಯಾಗಿ ಹೇಳಿದನು." ನಂತರ ಸಾಕ್ಷಿ ಹೇಳುವುದರ ಕುರಿತಾಗಿ ಒಂದು ಸಂದೇಶವನ್ನು ಕೊಡುವರು.

೩. ಈ ವ್ಯಕ್ತಿಯು ತನ್ನ ಸ್ವಸ್ಥತೆಯ ಕುರಿತಾಗಿ ಎಲ್ಲರೊಂದಿಗೆ ಹೇಳುವುದಕ್ಕೆ ಬಹಳ ಉತ್ಸುಕನಾಗಿದ್ದುದರ ನಿಮಿತ್ತ, ಯೇಸು ಪಟ್ಟಣದ ಹೊರಗೆ ಹೋಗಬೇಕಾಯಿತು ಮತ್ತು "ಆತನ ಬಳಿಗೆ ಎಲ್ಲಾ ಕಡೆಗಳಿಂದಲೂ ಜನರು ಬಂದರು" ಎಂದು ಬೋಧಿಸುತ್ತಾರೆ. ಈ ವ್ಯಕ್ತಿಯ ಘೋಷಣೆಯ ಫಲಿತಾಂಶವಾಗಿ ಮೊದಲಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಯೇಸುವಿನ ಬಳಿಗೆ ಸ್ವಸ್ಥತೆಗಾಗಿ ಬರಲು ಸಾಧ್ಯವಾಯಿತು ಎಂದು ಹೇಳುವರು. ನಂತರ ದೇವರ ಸಾರ್ವಭೌಮತ್ವ ಹೇಗೆ ಈ ಸ್ವಸ್ಥತೆ ಹೊಂದಿದ ವ್ಯಕ್ತಿಯ ಮೂಲಕ ನೆರವೇರಿಸಲ್ಪಟ್ಟಿತು ಎಂಬುದಾಗಿ ಪ್ರಸಂಗ ಕೊಡಲಾಗುತ್ತದೆ.

ಆದರೆ ನಾವು ಒಮ್ಮೆ ಇದರ ಕಡೆಗೆ ನೋಡೋಣ. ಮೇಲೆ ಕೊಡಲ್ಪಟ್ಟಿರುವ ಆ ಎಲ್ಲಾ ನಿಧಿಗಳು ಕಥೆಯ ಕುರಿತಾಗಿ ನಿಖರತೆಯನ್ನು ಕೊಡಲು ಸಾಧ್ಯವಾಗಿದೆಯೇ, ಅಥವಾ ಅವುಗಳಲ್ಲಿ ಅರ್ಧ ಭಾಗವು ಕಥೆಯು ನಿಜವಾಗಿ ಏನಾಗಿದೆಯೋ ಅದರ ಕುರಿತಾಗಿದೆಯೇ? ಕೇವಲ ಅರ್ಧ ಆನೆಯನ್ನು ಮಾತ್ರ ಕಂಡುಹಿಡಿಯಲಾಗಿದೆಯೇ?

ಈ ಕಥೆಯಲ್ಲಿ ಈಗಾಗಲೇ ಕಂಡುಹಿಡಿಯಲಾಗಿರುವ ನಿಧಿಗಳು ಅಂದರೆ ಸ್ವಸ್ಥತೆಯ ಕುರಿತಾಗಿ ಮತ್ತು ಸ್ವಸ್ಥತೆ ಹೊಂದಲು ಕುಷ್ಠರೋಗಿಗಿದ್ದ ನಂಬಿಕೆ, ಇವುಗಳ ಕುರಿತಾಗಿ ಚರ್ಚಿಸುವುದು ಒಳ್ಳೆಯದು. ಆದರೆ, ಇಲ್ಲಿ ಕುಷ್ಠರೋಗಿಯ ಅವಿಧೇಯತೆ ಮತ್ತು ಅವನನ್ನು ಆಗ ತಾನೇ ಸ್ವಸ್ಥ ಪಡಿಸಿದಂತಹ ಯೇಸುವಿಗೆ ಅವನು ಮಾಡಿದ ಅಗೌರವ, ಈ ಸತ್ಯಗಳನ್ನು ನಾವು ಬಿಟ್ಟುಬಿಟ್ಟರೆ, ನಾವು ಆನೆಯ ಇನ್ನೊಂದು ಭಾಗವನ್ನು ಕಂಡುಕೊಳ್ಳಲಾರೆವು.

ನಾವು ಸ್ವಸ್ಥತೆಯ ಮೇಲಿನ ಮಾಹಿತಿಯನ್ನು ಗಂಭೀರವಾಗಿ ತೆಗೆದುಕೊಂಡ ಹಾಗೆಯೇ, ಸ್ವಸ್ಥತೆ ಹೊಂದಿದ ಕುಷ್ಠರೋಗಿಯ ಅವಿಧೇಯತೆಯನ್ನು ಸಹ ನಾವು ಗಂಭೀರವಾಗಿ ಪರಿಗಣಿಸಬೇಕು.

ನಾವು ಈ ಕಥೆಯನ್ನು ತಡೆಯಲಶಕ್ಯವಾದ ಸಂತೋಷ, ಸಾಕ್ಷಿ ಕೊಡುವುದರ ಮಹತ್ವ, ಅಥವಾ ದೇವರ ಸಾರ್ವಭೌಮತ್ವದ ಕುರಿತಾಗಿ ಪ್ರಸಂಗಿಸಲು ಉಪಯೋಗಿಸುವುದಾದರೆ, ನಾವು ಆನೆಯನ್ನು ಕಂಡುಹಿಡಿಯಲಿಲ್ಲ. ಕಥೆಯ ಮೊದಲ ಭಾಗವು ಸಂತೋಷದ ಅಥವಾ ಸಾಕ್ಷಿ ಕೊಡುವುದರ ಕುರಿತಾಗಿ ಇಲ್ಲ; ಇದು ಸ್ವ–ಚಿತ್ತದ ಕುರಿತಾಗಿದೆ. ದೇವರಿಂದ ಜೀವನವನ್ನು ಬದಲಾಯಿಸುವಂತಹ ವರಕ್ಕಾಗಿ ಬೇಡಿಕೊಂಡು, ಅದನ್ನು ಹೊಂದಿದ ನಂತರ, ದೇವರ ಆಜ್ಞೆಗಳಿಗೆ ಅವಿಧೇಯರಾಗಿ ಜೀವಿಸುವವರ ಕುರಿತಾಗಿ ಈ ಕಥೆಯು ಹೇಳುತ್ತದೆ.

ಈ ಕಥೆಯನ್ನು ಸಂಪೂರ್ಣ ಸತ್ಯವನ್ನು ಗ್ರಹಿಸುವುದಕ್ಕೆ ವಾಕ್ಯಭಾಗದ ಎಲ್ಲಾ ಕಡೆಗಳಲ್ಲಿ ಕರ್ತನು ನಮಗೆ ಸಾಕಷ್ಟು ಮಾಹಿತಿಯನ್ನು ಕೊಟ್ಟಿರುವನು. ಚೆನ್ನಾಗಿ ಸಿದ್ಧರಾಗಿರುವಂತಹ ಕಥೆ ಹೇಳುವವರು/ಬೋಧಕರು ಕಥೆಯ ಸಂದರ್ಭವನ್ನು ಓದಿರುತ್ತಾರೆ. ಈ ಕಥೆಗಿಂತಲೂ ಮೊದಲು ಬರುವಂತಹ ಎರಡು ವಚನಗಳು ಯೇಸುವಿನ ಚಿತ್ತವನ್ನು ಸ್ಪಷ್ಟಪಡಿಸುತ್ತದೆ.

“ಆತನು ಅವರಿಗೆ – ನಾವು ಸಮೀಪದಲ್ಲಿರುವ ಬೇರೆ ಊರುಗಳಿಗೆ ಹೋಗೋಣ; ಅಲ್ಲಿಯೂ ನಾನು ಸುವಾರ್ತೆಯನ್ನು ಸಾರಬೇಕು; ಇದಕ್ಕಾಗಿಯೇ ನಾನು ಹೊರಟು ಬಂದಿದ್ದೇನೆ ಎಂದು ಹೇಳಿದನು. 39 ಬಳಿಕ ಆತನು ಗಲಿಲಾಯದಲ್ಲೆಲ್ಲಾ ಹೋಗಿ ಅವರ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ದೆವ್ವಗಳನ್ನು ಬಿಡಿಸುತ್ತಾ ಇದ್ದನು.” ಮಾರ್ಕ 1:38-39

ಯೇಸು ಇನ್ನಿತರ ಊರುಗಳಿಗೆ ಹೋಗಬಯಸಿದ್ದನು ಎಂಬುದನ್ನು 38ನೇ ವಚನದಲ್ಲಿ ದೇವರು ನಮಗೆ ತಿಳಿಸಿರುವನು ಎಂಬುದನ್ನು ಗಮನಿಸಿ. ಆದರೆ ದುರದೃಷ್ಟಕರವಾಗಿ ಸ್ವಸ್ಥತೆಯ ನಂತರ, ಆ ವ್ಯಕ್ತಿಯ ಸ್ವಚಿತ್ತದ ನಿಮಿತ್ತ, ಯೇಸು ಬಹಿರಂಗವಾಗಿ ಇನ್ನಿತರ ಊರುಗಳಿಗೆ ಹೋಗಲು ಸಾಧ್ಯವಾಗಲಿಲ್ಲ ಎಂದು ದೇವರ ವಾಕ್ಯವು ನಮಗೆ ತಿಳಿಸುತ್ತದೆ.

ಕುಷ್ಠರೋಗಿಯು ಏನು ಮಾಡಬೇಕೆಂದು ಯೇಸು ಬಯಸಿದನು? ಕಥೆಯಲ್ಲಿ ಯೇಸು ಅವನಿಗೆ “ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆಯು ನೇಮಕ ಮಾಡು...” ಎಂದು ಖಂಡಿತವಾಗಿ ಹೇಳಿದನು. ಹಾಗಾಗಿ ಇಲ್ಲಿ ಎಲ್ಲದಕ್ಕಿಂತ ಮೊದಲು ಮೋಶೆಯು ನೇಮಕ ಮಾಡಿರುವುದಕ್ಕೆ ವಿಧೇಯನಾಗು ಎಂದು ಯೇಸು ಹೇಳಿದ್ದಕ್ಕೆ ಸ್ವಸ್ಥತೆ ಹೊಂದಿದ ಕುಷ್ಠರೋಗಿಯಿಂದ ಅಗೌರವವು ಉಂಟಾಯಿತು.

ಕುಷ್ಠರೋಗಿಯು ತಾನು ಗುಣ ಹೊಂದಿದುರ ಸಾಕ್ಷಿಯನ್ನು ಯಾಜಕರಿಗೆ ತೋರಿಸಬೇಕೆಂದು ಯೇಸು ಖಂಡಿತವಾಗಿ ಆಜ್ಞಾಪಿಸಿದ್ದನ್ನು ಮಾಡಲಾಗಲಿಲ್ಲ. ಯಾಜಕರು ಸ್ವಸ್ಥತೆಯ ಕುರಿತಾಗಿ ತಿಳಿಯಬೇಕು, ಅದನ್ನು ದೃಢಪಡಿಸಬೇಕೆಂದು

ಯೇಸು ಬಯಸಿದ್ದನು. ಹಾಗಾಗಿ ಆ ವ್ಯಕ್ತಿಯು ಯೇಸುವಿಗಾಗಲಿ ಅಥವಾ ಯಾಜಕರಿಗಾಗಲಿ, ಅಥವಾ ಹಳೇ ಒಡಂಬಡಿಕೆಯಲ್ಲಿರುವ ದೇವರ ಆಜ್ಞೆಗಳಿಗೆ ಗೌರವವನ್ನು ತೋರಿಸಲಿಲ್ಲ.

ಕಥೆಯನ್ನು ಎಚ್ಚರಿಕೆಯಿಂದ ಓದುವುದರಿಂದ (ಮತ್ತು ನಮ್ಮ ಕಲ್ಪನೆಗಳನ್ನು ಕಥೆಯೊಳಗೆ ಸೇರಿಸದೆಯೇ), ಈ ಮುಖ್ಯ ಸತ್ಯ, ಅಂದರೆ ಈ ಆನೆಯನ್ನು ಕಂಡುಹಿಡಿಯಬಹುದು: ಯಾರೂ ಮುಟ್ಟದಿರುವಂತಹ ವ್ಯಕ್ತಿಗೆ ಯೇಸು ಅದ್ಭುತವಾಗಿ ಮತ್ತು ಕನಿಕರದೊಂದಿಗೆ ಹೊಸ ಜೀವನವನ್ನು ತಂದುಕೊಟ್ಟನು, ನಂತರ ಆ ವ್ಯಕ್ತಿಯು ತನ್ನ ಸ್ವಂತ ಚಿತ್ತವನ್ನು ಅನುಸರಿಸಿ, ತನ್ನನ್ನು ಈಗ ತಾನೇ ಸ್ವಸ್ಥಪಡಿಸಿದವನಿಗೆ ಅವಿಧೇಯನಾದನು. ಈ ಕಥೆಯಲ್ಲಿರುವ ಆನೆ (ಸತ್ಯವು) ಇದಾಗಿದೆ.

ಕುಷ್ಠರೋಗಿಗೆ ಸ್ವಸ್ಥಪಡಿಸಿದವನಿಗಿಂತ ಸ್ವಸ್ಥತೆಯ ಮೇಲೆ ಹೆಚ್ಚು ಗಮನವಿದ್ದಂತೆ ತೋರುತ್ತದೆ. ಇಡೀ ಸತ್ಯವೇದದಲ್ಲಿ, ಜನರು ಇದೇ ರೀತಿಯ ತಪ್ಪನ್ನು ಮಾಡುವುದನ್ನು ನಾವು ನೋಡುತ್ತೇವೆ. ಜನರು "ಧಾರ್ಮಿಕ" ಪಾಪಗಳನ್ನು ಮಾಡುತ್ತಾರೆ. ಅವರ ಉತ್ಸಾಹದಲ್ಲಿ ದೇವರು ತಮಗೆ ಏನು ಮಾಡಬೇಕೆಂದು ಹೇಳುತ್ತಿರುವನೋ ಅದನ್ನು ಕೇಳಿಸಿಕೊಳ್ಳದೆ ಅಥವಾ ಅದಕ್ಕೆ ಗೌರವ ತೋರಿಸದೆ, "ದೇವರಿಗಾಗಿ" ಕಾರ್ಯಗಳನ್ನು ಮಾಡುವರು! ಸಾಕ್ಷಿ ಕೊಡುವುದು ತಪ್ಪೋ? ಇಲ್ಲಾ... ಸತ್ಯಾಂಶವೆಂದರೆ ನಾವು ಸಾಕ್ಷಿ ಕೊಡಬೇಕೆಂದು ಹೇಳಲಾಗಿದೆ. ಆದರೆ ಇದು ಯೇಸುವಿನ ಯೋಜನೆಯನುಸಾರ ಆ ನಿರ್ದಿಷ್ಟ ಸಮಯಕ್ಕೆ ಮತ್ತು ಸ್ಥಳಕ್ಕೆ ತಪ್ಪಾಗಿತ್ತೇ? ... ಖಂಡಿತವಾಗಿಯೂ ಹೌದು!

ಅನೇಕ ಬಾರಿ ನಾವು ಬೇಕೆಂದೇ ಧಾರ್ಮಿಕವಾದ ಅವಿಧೇಯತೆಯನ್ನು ಹಗುರವಾಗಿ ಪರಿಗಣಿಸುತ್ತೇವೆ ಅಥವಾ ಇದರ ಕುರಿತಾಗಿ ಚರ್ಚಿಸುವುದಿಲ್ಲ. ಆದರೆ ಸತ್ಯವೇದದಲ್ಲಿ ಸತತವಾಗಿ, ದೇವರು ವಿಧೇಯತೆಯನ್ನು ಬಯಸುತ್ತಾನೆ (ಮತ್ತು ಅಗತ್ಯವಾದುದು) ಎಂಬುದನ್ನು ಆತನು ತೋರಿಸುತ್ತಾನೆ.

ಕೆಲವು ಸಂಗತಿಗಳು ಧಾರ್ಮಿಕವಾಗಿದ್ದರೂ ಸಹ ಅವು ಸರಿಯಾಗಿರುವಂತೆ ಕಾಣುವುದರಿಂದ ಅವುಗಳನ್ನು ಮಾಡುವವರ ಕುರಿತಾಗಿ ದೇವರು ಹೇಗೆ ಅವಲೋಕಿಸುತ್ತಾನೆ ಎಂಬುದಕ್ಕೆ 1 ಸಮುವೇಲದಲ್ಲಿರುವುದು ಒಂದು ಉತ್ಕೃಷ್ಟವಾದ ಉದಾಹರಣೆಯಾಗಿದೆ. ಇಲ್ಲಿ ಒಬ್ಬ ವ್ಯಕ್ತಿಯು ಒಂದು ಧಾರ್ಮಿಕವಾದ ಕ್ರಿಯೆಯನ್ನು ಮಾಡುತ್ತಿರುವನು, ಆದರೆ ಈ ಕ್ರಿಯೆಯ ಸಮಯ ಮತ್ತು ಸಂದರ್ಭಗಳು ದೇವರ ಖಂಡಿತವಾದ ನಿಯಮಕ್ಕೆ ಅವಿಧೇಯತೆಯಲ್ಲಿ ಸುತ್ತಲ್ಪಟ್ಟಿರುತ್ತದೆ. ಕರ್ತನು ಈ ಅಗೌರವವನ್ನು ತನ್ನ ನಿಯಮಗಳಿಗೆ ವಿರುದ್ಧವಾಗಿರುವ ಬಹಳ ಘೋರ ಪಾಪವೆಂದು ಹೋಲಿಸುತ್ತಾನೆ.

"ಅದಕ್ಕೆ ಸಮುವೇಲನು–ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವುದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ. ಅವಿಧೇಯತ್ವವು ಮಂತ್ರತಂತ್ರಗಳಷ್ಟೇ ಕೆಟ್ಟದ್ದಾಗಿರುವದು; ಹಟವು ಮಿಥ್ಯಾಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರುವದು. ನೀನು ಯೆಹೋವನ ಮಾತನ್ನು ತಳ್ಳಿಬಿಟ್ಟದ್ದರಿಂದ ಆತನು ನಿನ್ನನ್ನು ಅರಸುತನದಿಂದ ತಳ್ಳಿಬಿಟ್ಟಿದ್ದಾನೆ ಎಂದು ನುಡಿದನು." ಸಮುವೇಲ 15:22-23

ಈ ಕಥೆಯ ಕುರಿತಾಗಿ ನಾವು ಚರ್ಚೆಯನ್ನು ಮಾಡುತ್ತಿರುವಾಗ, ಇಲ್ಲಿ ಕುಷ್ಠರೋಗಿಯ ಅಲಕ್ಷ್ಯತೆ, ಅಥವಾ ಅವನ ಅವಿಧೇಯತೆಯನ್ನು ಸಮರ್ಥಿಸುತ್ತಿರುವುದಾದರೆ, **ಮನುಕುಲದ ಅತಿಹೆಚ್ಚಿನ ಸಾಮಾನ್ಯವಾದ ಪಾಪಕ್ಕೆ ಬಹುಶಃ ದೃಢೀಕರಣ ಮಾಡಿದಂತಾಗುತ್ತದೆ.** ಕೆಲವೊಮ್ಮೆ ಈ ಪಾಪವು ಅಷ್ಟೇನೂ ಸೂಕ್ಷ್ಮವಾಗಿರುವುದಿಲ್ಲ ಏಕೆಂದರೆ ನಾವು

ಜೋರಾಗಿ, "ನಾನು ದೇವರಿಗಿಂತ ನನ್ನ ಮಾರ್ಗವನ್ನೇ ಆರಿಸಿಕೊಂಡೆನು" ಎಂದು ಹೇಳುವುದಿಲ್ಲ, ದೇವರು ಹೇಳಿರುವುದನ್ನು ನಾವು ಅಲಕ್ಷಿಸಿದರೆ ಮತ್ತು ಅದರ ಬದಲು ನಾವು ಏನನ್ನು ಮಾಡಲು ಬಯಸುತ್ತೇವೆಯೋ ಅದರ ಮೇಲೆ ದೃಷ್ಟಿ ಹರಿಸಿದಾಗ, ಇದು ಪಾಪವಾಗಿದೆ. ವಿಧೇಯತೆಯ ಕೊರತೆಯು ಅವಿಧೇಯತೆಯಾಗಿದೆ.

ಕಥೆಯ ಈ ಎರಡನೆ ಭಾಗವಾಗಿರುವ ಅವಿಧೇಯತೆಯ ಕ್ರಿಯೆ ಮತ್ತು ಅದರ ಫಲಿತಾಂಶದ ಕುರಿತಾಗಿ ನಾವು ಹಗುರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಕುಷ್ಠರೋಗಿಯ ಅವಿಧೇಯತ್ವವನ್ನು ನಾವು ಯಾವುದೇ ಕಾರಣ ಕೊಟ್ಟು ನೆಪ ಹೇಳಿದರೆ, ದೇವರ ಚಿತ್ತಕ್ಕಿಂತಲೂ ಮಿಗಿಲಾಗಿ ನಮ್ಮ ಚಿತ್ತವನ್ನು ಮಾಡುವಂತೆ ನಿರ್ಧರಿಸುವ ಈ ಸಾಮಾನ್ಯವಾದ ಪಾಪವನ್ನು ನಾವು ಉತ್ತೇಜನ ಪಡಿಸಿದಂತಾಗುತ್ತದೆ. ಈ ದಿನ ವಿಶ್ವಾಸಿಗಳು, "ಓಹ್, ಈ ಪರಿಸ್ಥಿತಿಯ ಕುರಿತಾಗಿ ದೇವರು ತನ್ನ ವಾಕ್ಯದಲ್ಲಿ ಏನು ಹೇಳುತ್ತಾನೆ ಎಂಬುದು ನನಗೆ ಗೊತ್ತು, ಆದರೆ ಇದನ್ನು ವ್ಯತ್ಯಾಸವಾಗಿ ಮಾಡುವುದಕ್ಕೆ ನನ್ನ ಬಳಿ ಒಳ್ಳೆಯ ಕಾರಣಗಳಿವೆ" ಎಂದು ಹೇಳುವುದು ಎಷ್ಟು ದುಃಖಕರವಾಗಿದೆ. ವಿಚಿತ್ರ. ಜನರು ತಮ್ಮ ಕ್ರಿಯೆಗಳ ಕುರಿತಾಗಿ "ನಾನು ದೇವರ ವಾಕ್ಯಕ್ಕೆ ಅವಿಧೇಯನಾಗುತ್ತೇನೆ ಏಕೆಂದರೆ ಆತನು ಮಾಡುವುದಕ್ಕಿಂತಲೂ ಉತ್ತಮವಾದ ನಿರ್ಧಾರಗಳನ್ನು ನಾನು ಮಾಡುತ್ತೇನೆ" ಎಂದು ಹೇಳುವುದನ್ನು ನಾವು ಬಹಳ ಅಪರೂಪವಾಗಿ ಕೇಳಿಸಿಕೊಳ್ಳುತ್ತೇವೆ.

ನಾವು ಒಂದು ಕಥೆಯ ಒಂದೇ ಭಾಗದ ಕುರಿತಾಗಿ ಬಹಳ ಸಮಯವನ್ನು ಕಳೆದಿದ್ದೇವೆ. ಈ ನಿರ್ದಿಷ್ಟವಾದ ವಾಕ್ಯಭಾಗವನ್ನು ಆರಿಸಿಕೊಂಡಿದ್ದು ಏಕೆಂದರೆ ಇದು ಜನರು ಪ್ರಾಧಾನ್ಯವಾಗಿ ಕೇಳುವುದಕ್ಕೆ ಸೋಲುವಂತಹ ಸಂಗತಿಯಾಗಿದೆ, ಮತ್ತು ಇದರ ಫಲಿತಾಂಶವಾಗಿ ಇದರ ಎರಡನೇ ಭಾಗವನ್ನು ಕಳೆದುಕೊಳ್ಳುತ್ತಾರೆ. ನಾವು ಕಥೆಯ ಸಂಪೂರ್ಣತೆಯನ್ನು ಹೇಗೆ ಸುಲಭವಾಗಿ ಬಿಟ್ಟುಬಿಡುತ್ತೇವೆ ಮತ್ತು ಹೀಗೆ ಮಾಡುವುದರಿಂದ ದೇವರ ಸಂಪೂರ್ಣ ಸಂದೇಶವನ್ನು ಬೋಧಿಸುವುದಕ್ಕೆ ತಡೆಯಾಗುತ್ತೇವೆ ಎಂಬುದನ್ನು ವಿವರಿಸಲು ಬಯಸಿದೆವು.

ನಾವು ಒಂದು ಕಥೆಯನ್ನು ಬೋಧಿಸಲು ಸಿದ್ಧರಾಗುವಾಗ ಒಂದು ಗಂಭೀರವಾದ ಜವಾಬ್ದಾರಿಕೆಯನ್ನು ತೆಗೆದುಕೊಳ್ಳುತ್ತೇವೆ. ದೇವರು ಏನೆಲ್ಲಾ ಹೇಳುವನೋ ಅದೆಲ್ಲವನ್ನು ಎಚ್ಚರಿಕೆಯಿಂದ ಮತ್ತು ಸೂಕ್ಷ್ಮವಾಗಿ ಕೇಳಿಸಿಕೊಳ್ಳುವುದನ್ನು ನಮಗೆ ನೆನಪಿಗೆ ತರುವುದಕ್ಕೆ ಈ ಆನೆಯ ಉದಾಹರಣೆಯನ್ನು ಉಪಯೋಗಿಸಲಾಗಿದೆ. ಸತ್ಯವೇದವು ಹೇಳುವಂತೆ, "ಕಿವಿಯುಳ್ಳವನು ಕೇಳಿಸಿಕೊಳ್ಳಲಿ" ಎಂಬಂತೆ ಆಗಲಿ.

ನಾವು ಬೋಧಿಸುವ ಪ್ರತಿಯೊಂದು ಕಥೆಗಾಗಿ ನಾವು *ಕಥೆ* ಮಾತ್ರದ ಅಂಶಗಳನ್ನು ಉಪಯೋಗಿಸಿಕೊಂಡು ಹೇಳುತ್ತೇವೆ, ನಾವು ಇಡೀ ಕಥೆಯನ್ನು ಎಚ್ಚರಿಕೆಯಿಂದ ಕೇಳಿಸಿಕೊಳ್ಳಬೇಕು ಮತ್ತು ಪ್ರತಿ ಕಥೆಯಲ್ಲಿ ದೇವರು ಏನು ಹೇಳುತ್ತಿರುವನ್ನು ಎಂಬುದನ್ನು ಅರ್ಥ ಮಾಡಿಕೊಳ್ಳಲು ದೇವರಲ್ಲಿ ಪ್ರಾರ್ಥಿಸಬೇಕು ಹಾಗೂ ಭರವಸೆ ಇಡಬೇಕು. ಹಾಗೂ, ಕಥೆಯ ಎಲ್ಲಾ ವೈಯಕ್ತಿಕ ಭಾಗಗಳು ಕಥೆಯ ಸಂಪೂರ್ಣತೆಯನ್ನು ಹೇಗೆ ತೋರಿಸುತ್ತವೆ ಎಂಬುದನ್ನು ನೋಡುವ ಅಗತ್ಯವೂ ಇದೆ.

ಕುಷ್ಠರೋಗಿಯ ಕಥೆಯಲ್ಲಿ, ಅವಿಧೇಯತೆಯ ಪರಿಣಾಮಗಳನ್ನು ನಾವು ನೋಡುವಂತೆ ದೇವರು ಮಾಡಿರುವನು. ಆದಾಗ್ಯೂ, ಸತ್ಯವೇದದ ಇನ್ನಿತರ ಕಥೆಗಳಲ್ಲಿ ಜನರ ಪಾಪದ ಪರಿಣಾಮಗಳನ್ನು ನಮಗೆ ತೋರಿಸಲಾಗಿಲ್ಲ ಎಂಬುದನ್ನು ಗಮನಿಸಿ. ನಾವು ದೇವರ ನಾಯಕತ್ವದಲ್ಲಿ ಭರವಸೆ ಇಡುವುದರ ನಿಮಿತ್ತ ದೇವರಿಗೆ ವಿಧೇಯರಾಗುವ ಜ್ಞಾನವನ್ನು ತೋರ್ಪಡಿಸುವುದು ಕೇವಲ ಅವಿಧೇಯರಾದಾಗ ಎದುರಿಸುವ ಪರಿಣಾಮಗಳಿಗೆ ಹೆದರಿ ಮಾಡುವುದಲ್ಲ ಎಂಬುದನ್ನು ಆ ಕಥೆಗಳ ಮೂಲಕವೂ ಸಹ ನಾವು ಬೋಧಿಸಬಹುದು.

ಮಾರ್ಕನ ಈ ಕಥೆಯನ್ನು ಇದರ ಸಂಪೂರ್ಣತೆಯಲ್ಲಿ ನಾವು ಬೋಧಿಸಿದಾಗ, ನಮಗೆ ಜೀವವನ್ನೂ ಹಾಗೂ ಸ್ವಸ್ಥತೆಯ ಸಂತೋಷವನ್ನು ತರುವ ರಕ್ಷಕನಿಗೆ ಅವಿಧೇಯತ್ವವನ್ನು ತೋರಿಸಿದುದರ ನಿಮಿತ್ತ ಬರುವ ದುಃಖ ಮತ್ತು ಪರಿಣಾಮಗಳ ಕುರಿತಾಗಿ ಜನರು ಕಲಿತುಕೊಳ್ಳುವಂತೆ ಇದು ಸಹಾಯ ಮಾಡುತ್ತದೆ. ಮಾರ್ಕನ ಕಥೆಯಲ್ಲಿನ ಈ ಅವಿಧೇಯತೆಗೆ ನಾವು ತಪ್ಪಾದ ಅರ್ಥ ಕೊಟ್ಟರೆ, ಅಥವಾ ಒಟ್ಟಾರೆ ಇದನ್ನು ಬಿಟ್ಟುಬಿಟ್ಟರೆ, ನಾವು ಕಥೆಯನ್ನು ಸರಿಯಾಗಿ ಉಪಯೋಗಿಸಿಲ್ಲ ಮತ್ತು ವಿಶ್ವಾಸಿಗಳು ದೇವರಿಗೆ ನಂಬಿಕೆಯಿಂದ ವಿಧೇಯರಾಗುವುದಕ್ಕೆ ಪ್ರೋತ್ಸಾಹಿಸುವುದರಲ್ಲಿ ಸೋತುಹೋಗುತ್ತೇವೆ.

ಒಂದು ಕಥೆಯಲ್ಲಿ ಪಾಪದ ಪರಿಣಾಮಗಳ ಕುರಿತಾಗಿ ಹೇಳದಿದ್ದರೆ, ಆಗಲೂ ಸಹ ಅಲ್ಲಿ ಪರಿಣಾಮಗಳು ಉಂಟಾಗುತ್ತವೆ. ಲೋಕದಲ್ಲಿ ಪಾಪದ ಬೆಲೆಯು ಕಾಣುವ ಹಾಗೆ ಇಲ್ಲದಿದ್ದರೂ ಸಹ, ನಮ್ಮ ಪಾಪವು ಕರ್ತನನ್ನು ದುಃಖ ಪಡಿಸುತ್ತದೆ ಮತ್ತು ಇದು ನಾವು ಸಂತೋಷವನ್ನು ಮತ್ತು ಸಮಾಧಾನವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳಿರಿ.

ಪ್ರತಿ ಕಥೆಯಲ್ಲಿರುವಂತೆ ಖಂಡಿತವಾಗಿಯೂ ಅನೇಕ ಅದ್ಭುತವಾದ ನಿಧಿಗಳು ಸಂಪೂರ್ಣವಾಗುವಂತೆ ಮಾಡುತ್ತವೆ. ಈ ಕಥೆಯನ್ನು ಪುನಃ ಪುನಃ ಬೋಧಿಸಲ್ಪಟ್ಟಿರುವುದರಿಂದ, ಕಥೆ ಹೇಳುವವರಿಗೆ ಮತ್ತು ಇದನ್ನು ಕೇಳಿಸಿಕೊಂಡು ಚರ್ಚೆ ಮಾಡುವವರಿಗೆ ಪವಿತ್ರಾತ್ಮನಿಂದ ಇದರ ಒಳಗಿನ ನಿಧಿಗಳು ಪ್ರಕಟವಾಗುತ್ತವೆ.

ಅಧ್ಯಾಯ 8
ಅವಿದ್ಯಾವಂತರು ಮತ್ತು ಮೌಖಿಕ ಸತ್ಯವೇದ ಶಾಲೆಗಳು

ನಮ್ಮ ಎಸ್ ಟಿ ಎಸ್ ಕಾರ್ಯಗಾರಕ್ಕೆ ಅನೇಕ ಸಲ ಓದಲು ಬರದೇ ಇರುವ ಅಭ್ಯರ್ಥಿಗಳು ಬರುತ್ತಾರೆ. ಇವರಿಗೆ ವಿದ್ಯಾವಂತರು ಕಥೆಗಳನ್ನು ಓದುವುದರ ಮುಖಾಂತರ ಹಾಗು ಕಥೆಗಳನ್ನು ಆಯಾ ಭಾಷೆಗಳಲ್ಲಿ ಧ್ವನಿ ಮುದ್ರಣ ಮಾಡಿರುತ್ತೇವೆ ಆ ಉಪಕರಣಗಳಿಂದ ಓದಲು ಬರದೇ ಇರುವ ಅಭ್ಯರ್ಥಿಗಳು ಕಥೆಗಳನ್ನು ಕಲಿಯಬೇಕಾಗುತ್ತದೆ.

ನಮ್ಮ ಎಸ್ ಟಿ ಎಸ್ ಕಾರ್ಯಗಾರಕ್ಕೆ ಕಥೆಗಳನ್ನು ಧ್ವನಿ ಮುದ್ರಣ ಮಾಡುವುದಕ್ಕಾಗಿ ನಾವು ಮೆಗಾ ವಾಯ್ಸ ಸಂಸ್ಥೆಯಿಂದ ತಯರಾಗಿರುವ ಸೋಲಾರ್ ಧ್ವನಿ ಮುದ್ರಣ ಉಪಕರಣಗಳನ್ನು ಉಪಯೋಗಿಸುತ್ತೇವೆ. ದಿ ಗಾಡ್ಸ ಸ್ಟೋರಿ ಪ್ರೋಜೆಕ್ಟ್ ಸಂಸ್ಥೆಯಾದ ನಾವು ಈ ಉಪಕರಣಗಳಲ್ಲಿ ದೇವರ ಕಥೆ ಸಿನಿಮ, ಆ ಭಾಷೆಯಲ್ಲಿ ಲಬ್ಯವಿದ್ದರೆ ಹೊಸಒಡಂಬಡಿಗೆ ಹಾಗು ಸತ್ಯವೇದದ ಕಥೆಗಳನ್ನು ಮುದ್ರಿಸುತ್ತೇವೆ.

ತರಭೇತಿ ಮುಗಿದ ಮೇಲೆ ಪ್ರತಿ ಹಳ್ಳಿಗೆ ಕಥೆಗಳಿರುವ ಒಂದು ಮೆಗಾ ವಾಯ್ಸ ಉಪಕರಣವನ್ನು ಕೊಡುತ್ತೇವೆ. ಮೆಗಾ ವಾಯ್ಸ ಉಪಕರಣವನ್ನು ಪಡೆದಿರುತ್ತಾರೋ ಅವರು ಈ ಉಪಕರಣಕ್ಕೆ ಜವಬ್ದಾರಿಯಾಗಿರುತ್ತಾರೆ ಆದರೆ ತರಬೇತಿಗೆ ಆಜರಾಗುವ ಎಲ್ಲಾ ಅಬ್ಯರ್ಥಿಗಳಿಗೆ ಕೇಳಲು ಕೊಡಬೇಕು ಇದರಿಂದ ಹಳ್ಳಿಯ ಜನರು ಅನೇಕ ಸತ್ಯವೇದದ ಕಥೆಗಳನ್ನು ಕಲಿಯಲು ಸಹಾಯವಾಗುತ್ತದೆ.

ಅನೇಕ ಸಲ ಹಳ್ಳಿಯ ಎಲ್ಲಾ ಜನರು ಅನೇಕ ಸತ್ಯವೇದದ ಕಥೆಗಳನ್ನು ಕಲಿಯಲು ಸಹಾಯವಾಗುತ್ತದೆ ಹಾಗು ಅವರು ಆನಂದ ಪಡುತ್ತಾರೆ. ಅವಿದ್ಯವಂತರಿಗೂ ಹಾಗು ಅವರ ಸಭೆಯ ಪಾಸ್ಟರಿಗೂ ಈ ಉಪಕರಣವು ಒಂದು ಅಮೂಲ್ಯವಾದ ಬಹುಮಾನವಾಗಿರುತ್ತದೆ. ಮೆಗಾ ವಾಯ್ಸ ಉಪಕರಣವನ್ನು ಆ ಸಭೆಯ ಪಾಸ್ಟರ್ ತಮ್ಮ ಸೇವೆಯಲ್ಲಿ ಉಪಯೋಗಿಸುತ್ತಾರೆ. ಆ ಪ್ರಾಂತ್ಯದಲ್ಲಿ ಈ ಮೆಗಾ ವಾಯ್ಸ ಉಪಕರಣವು ಸತ್ಯವೇದದ ಕಥೆಗಳನ್ನು ಕಲಿಯಲು ಒಂದು ಉಪಯುಕ್ತವಾದ ಉಪಕರಣವಾಗಿರುತ್ತದೆ. ಕಥೆ ಕಲಿಯುವವರು ಸಂಪೂರ್ಣವಾದ ಕಥೆಗಳನ್ನು ಕಲಿಯುತ್ತಾರೆ.

ನಾವು ಮುದ್ರಣವಾಗಿರುವ ಈ ಪುಸ್ತಕಗಳನ್ನು ಲಭ್ಯವಿರುವ ಭಾಷೆಗಳಲ್ಲಿ ಪ್ರತೀ ಎಸ್ ಟಿ ಎಸ್ ತರಭೇತಿಗಳಿಗೆ ಒದಗಿಸುತ್ತೇವೆ ಅವುಗಳ ಮೂಲಕ ಅನೇಕ ವಿಧ್ಯಾವಂತರು ಹಾಗು ಅವಿಧ್ಯಾವಂತರು ಸತ್ಯವೇದದ ಕಥೆಗಳನ್ನು ಸಂಪೂರ್ಣವಾಗಿ ಕಲಿಯಲು ಸಹಾಯವಾಗುತ್ತದೆ ಹಾಗು ಇತರರಿಗೆ ಹೇಳಲು ಬಹಳ ಸಹಾಯವಾಗುತ್ತದೆ. ಓದಲು ಬರುವವರು ಸತ್ಯವೇದದಲ್ಲಿ ಕಥೆಗಳನ್ನು ಕಲಿಯುತ್ತಾರೆ.

ಸಂತೋಷದ ಸಂಗತಿಯೆಂದರೆ ಅನೇಕ ಸಲ ಓದಲು ಬರದೇ ಇರುವ ಅಭ್ಯರ್ಥಿಗಳು ದೇವರ ಕಥೆಗಳಲ್ಲಿರುವ ಒಳ್ಳೆಯ ಉತ್ತಮವಾದ ಆತ್ಮೀಕ ನಿಧಿಗಳನ್ನು ಕಂಡುಕೋಳ್ಳುತ್ತಾರೆ. ಓದಲು ಬರುವವರು ಹಾಗು ಓದಲು ಬರದೇ ಇರುವವರು ಆತ್ಮೀಕ ನಿಧಿಗಳನ್ನು ಕಂಡುಕೊಳ್ಳಲು ಮೋದಲ ಸಲ ಒಳ್ಳೆಯ ಪ್ರಶ್ನೆಗಳನ್ನು ಕೇಳಲು ಕಷ್ಟಪಡುತ್ತಾರೆ. ಇದನ್ನು ಜ್ಞಾಪನದಲಿಟ್ಟುಕೊಳ್ಳಿ ಒಳ್ಳೆಯ ಪ್ರಶ್ನೆಗಳನ್ನು ಕೇಳುವುದು ದೇವರು ಕೊಟ್ಟ ಒಂದು ವರ.

ತಿಳಿಯದ ರೀತಿಯಲ್ಲಿ ಅನ್ವಹಿಸಿಕೊಳ್ಳುವುದು:

ಯುಗಾಂಡ ದೇಶದ ದ್ವರಿನೊ ಎಂಬ ಸ್ಥಳದ ತರಭೇತಿಯಲ್ಲಿ ಒಬ್ಬ ಹಿರಿಯ ವಯಸ್ಸಿನವರು ಕೋಟ್ಟ ಸಂದೇಶವನ್ನು ನಾನು ಮತ್ತು ಆಫ್ರಿಕ ದೇಶದ ನಿರ್ದೇಶಕರು ಮರೆಯಲು ಸಧ್ಯವಿಲ್ಲ.

"ಇಲ್ಲಿನ ತರಭೇತಿಗೆ ಬಂದಿರುವ ದೈವಜನರು ಅತಿ ಬಡವರು ಹಾಗು ಅವಿಧ್ಯಾವಂತರು, ಈ ಸ್ಥಳ ಬೆಳವಣಿಗೆ ಕಾಣದ ಊರು ಎಂದು ಹೇಳಿದರು".

ಒಬ್ಬರು ತನ್ನ ಮೊದಲ ಕಥೆಯನ್ನು ಒಂದು ಮರದ ಕೆಳಗೆ ಒಂದು ಗುಂಪಿಗೆ ಹೇಳಿದರು. ಆ ಗುಂಪಿನಲ್ಲಿದ್ದ ಸುಮಾರು ೬೫ ವರ್ಷದ ಹಿರಿಯ ವಯಸ್ಸಿನವರು ಸತ್ಯವೇದದ ೨ ಅರಸು ಪುಸ್ತಕದ ಕಳೆದು ಹೋದ ಕೊಡಲಿ ಕಥೆಯಲ್ಲಿ ಆತನ ಗುಂಪಿನವರನ್ನು ಈ ರೀತಿ ಚರ್ಚೆಯಲ್ಲಿ ನಡೆಸುತ್ತಿದ್ದನು.

ಸ್ವಲ್ಪಕಾಲ ಚರ್ಚೆಯಲ್ಲಿ ನಡೆಸಿದ ಮೇಲೆ ತಮ್ಮ ಜೀವಿತಗಳಿಗೆ ಅನ್ವಹಿಸಿಕೊಳ್ಳಲು ಪ್ರಾರಂಬ ಮಾಡುತ್ತಾ ಅವರು ಈಗೆ ಹೇಳುತ್ತಾರೆ ಕಥೆಯಲ್ಲಿ ನೋಡಿದಿರಾ ಏಲೀಶನ ಶಿಷ್ಯನು ಅತಿ ಬೇಗ ನಿರಾಶನಾಗುತ್ತಾನೆ ಕಾರಣ ಅವನು ಅದನ್ನು ಇತರರಿಂದ ಸಾಲವಾಗಿ ಪಡೆದಿದ್ದ. ಆ ಗುಂಪಿನಲ್ಲಿದ್ದವರೆಲ್ಲರೂ ನೋಡಿದಿರಾ ಹೇಗೆ ಏಲೀಶನ ಶಿಷ್ಯನಿಗೆ ಸಾಲವಾಗಿ ಪಡೆದಿದ್ದ ಕಳೆದು ಹೋದ ಕೊಡಲಿ ದೇವರು ಮತ್ತೆ ಹಿಂತಿರುಗಿಸುತ್ತಾನೆ?

ಆ ಹಿರಿವಯಸ್ಸಿನವರು ಗುಂಪಿನ ಕಡೆ ನೋಡಿ ಈಗ ಹೇಳಿ ನಿಮ್ಮ ಮನೆಗಳಲ್ಲಿ ಏನಾದರು ಸಾಲವಾಗಿ ಪಡೆದಿರುವ ವಸ್ತುಗಳಿವೆಯೋ ಎಂದು ಕೇಳಿದಾಗ ಆ ಗುಂಪಿನ ಸದಸ್ಯರೆಲ್ಲರು ಒಬೊಬ್ಬರ ಮುಖಗಳನ್ನು ನೋಡಿಕೋಂಡರು.

ನಿಮ್ಮದನಲ್ಲದ ವಸ್ತುಗಳು ನಿಮ್ಮ ಮನೆಯಲಿದಿಯೋ ಎಂದು ಮತ್ತೆ ಕಥೆ ಹೇಳುವವನು ಜನರನ್ನು ಕೇಳಿದಾಗ ಆ ಕೂಡದಲ್ಲಿ ಭಾಗವಹಿಸಿದ ಸದಸ್ಯರೆಲ್ಲರು ಬಡವರಾಗಿದ್ದರು ಅವರಲ್ಲಿ ಹೆಚ್ಚಾಗಿ ಏನು ಇಲ್ಲದ ಕಾರಣ ಅವರೆಲ್ಲರು ಆಚ್ಚರ್ಯಚಿಕಿತರಾದರು ಮತ್ತು ಗಲಿಬಿಲಿಗೊಂಡರು ಕಾರಣ ಅವರ ಮನೆಗಳಲ್ಲಿ ಅವರ ವಸ್ತುಗಳಲ್ಲದೆ ಬೇರೆಯವರ ವಸ್ತುಗಳಿರಲಿಲ್ಲ.

ಕಥೆ ಹೇಳುವವನು ಬೇಸರಗೊಳ್ಳುತ್ತಾನೆ ಕಾರಣ ಆತನು ಕಂಡುಕೊಂಡ ವಿಚಾರ ಬೇರೆಯವರು ಕಂಡುಕೊಳ್ಳಲಿಲ್ಲವೆಂದು, ಆತನು ಕೊಪಗೋಂಡು ನಮ್ಮ ಹೆಂಡತಿಯರ ಬಗ್ಗೆ ಹೇಳಿ, ಅವರನ್ನು ನೀವು ಸ್ವಂತ ಮಾಡಿಕೊಂಡಿದ್ದೀರೋ?

ಎಲ್ಲರು ಹೌದು? ನಾವು ೪ ಮೇಕೆಗಳನ್ನು ಕೊಟ್ಟು ಅವರನ್ನು ನೀವು ಸ್ವಂತ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ಕಥೆ ಹೇಳುವವನು ಉತ್ತರಕೊಟ್ಟಿದ್ದಾನೆಂದು ನೆನೆಸುತ್ತೇನೆ ಆದರೆ ಆ ಮೇಕೆಗಳಿಗೆ ಪ್ರಾಣಕೊಟ್ಟವರ್ಯಾರು ಹಾಗು ಅವುಗಳನ್ನು ಸಾಕಲು ಶಕ್ತಿಕೊಟ್ಟವರ್ಯಾರು? ದೇವರಲ್ಲವೇ. . . ದೇವರೊಬ್ಬನೆ ಎಲ್ಲರ ಜೀವಿಗಳ ಒಡೆಯನಾಗಿದ್ದಾನೆ. ನೀವಲ್ಲ. ಆಗ ಅವರೆಲ್ಲ ಆಚ್ಚಾರ್ಯವಾಗಿ ಗುಂಪಿನ ಸದಸ್ಯರೆಲ್ಲರು ಒಬ್ಬರನೊಬ್ಬರು ಆಚ್ಚರ್ಯದಿಂದ ನೋಡಿಕೊಂಡರು.

ಸರಿ, ನಿಮ್ಮ ಹೆಂಡತಿಯರನ್ನು ಚನ್ನಾಗಿ ನೊಡಿಕೊಳ್ಳುತ್ತಿದ್ದೀರೋ? ಅವರನ್ನು ದೇವರಿಂದ ಸಾಲವಾಗಿ ಪಡೆಯದೆ ನಿಮ್ಮ ಸ್ವತ್ತಾಗಿದ್ದರೆ. ಆಗ ನಾನು ನನ್ನ ಹೆಂಡತಿಯನ್ನು ಹೊಡೆಯುತ್ತೇನೆ ಮತ್ತು ಒದೆಯುತ್ತೇನೆ ಕಾರಣ ಅವಳು ಅನ್ನ ಸ್ವತ್ತು. ಆದರೆ ಅವಳನ್ನು ದೇವರಿಂದ ಸಾಲವಾಗಿ ಪಡೆದಿದ್ದೇನೆ, ಅವಳು ನನ್ನ ಸ್ವತ್ತಲ್ಲ ಆದುದರಿಂದ ಅವಳನ್ನು ದೇವರಿಂದ ಸಾಲವಾಗಿ ಪಡೆದಿರುವುದರಿಂದ ಬಹಳ ಜೋಪಾನವಾಗಿ ನೊಡಿಕೊಳ್ಳಬೇಕು ಅಷ್ಟೇಅಲ್ಲದೆ ತಮ್ಮ ಮಕ್ಕಳನ್ನು ಚನ್ನಾಗಿ ನೊಡಿಕೊಳ್ಳಬೇಕು.

ಈ ಕಥೆಯನ್ನು ಕೇಳುವಾಗ ಅಳಲಾರಂಬಿಸಿದನು ಹಾಗು ದೇವರಲ್ಲಿ ಕ್ಷಮಾಪಣೆ ಕೇಳಿಕೊಂಡ, ಗುಂಪಿನ ಅನೇಕರು ಅದೇ ರೀತಿ ದೇವರಲ್ಲಿ ಕ್ಷಮಾಪಣೆ ಕೇಳಿಕೊಂಡರು ಕಾರಣ, ಕಥೆಯ ಮೂಲಕ ಪವಿತ್ರಾತ್ಮನು ಅವರ ಜೀವಿತದಲ್ಲಿ ಮಾತನಾಡಿದನು. ಅವರ ಕಂಣ್ಣಿದ ಕಣ್ಣೀರು ದಾರಾಕಾರವಾಗಿ ಹರಿಯಿತು. ತರಬೇತಿಯು ಕೆಲಕಾಲ ನಿಂತು ಹೊಯಿತು ಕಾರಣ ಅನೇಕರು ತಮ್ಮನ್ನು ತಾವು ದೇವರಿಗೆ ಸಮರ್ಪಿಸಿಕೋಳ್ಳುತ್ತಿದ್ದರು.

ಈ ವಿಷಯವನ್ನು ಕೇಳಿ ನನಗೆ ಆಚ್ಚರ್ಯವಾಯಿತು ಕಾರಣ ಕಥೆಯಲ್ಲಿ ಈ ಅಂಶವಿತ್ತೋ? ಕಥೆಗೆ ಏನ್ನನ್ನೋ ಸೇರಿಸಿದರೆಂದು ನನಗನಿಸಿತು. ಆಗಾದರೆ ಇದು ಒಳ್ಳಯ ಅಳವಡಿಕೊಲ್ಳುವಿಕೆಯೋ? ಆ ದಿನ ಆ ತರಬೇತಿಗೆ ಬಂದಿದ್ದ ಜನರಿಗೆ ಇದು ಒಳ್ಳೆಯ ಸಂದೇಶವೆ ಆಗಿತ್ತು. ನನ್ನ ಹೃದಯಕ್ಕು ಈ ಮಾತುಗಳು ಮುಟ್ಟಿದವು ಕಾರಣ ನಾವು ನಮ್ಮಲ್ಲಿ ಕೆಲಸ ಮಾಡುವವರನ್ನು ಅವರು ತಪ್ಪು ಮಾಡಿದಾಗ ಯಾವ ರೀತಿ ನೊಡಿಕೋಳ್ಳುತ್ತಿದ್ದೇವೆ, ಅವರನ್ನು ದೇವರಿಂದ ಸಾಲ ತೆಗೆದುಕೋಡ್ಡಿದ್ದೇವೆ. ಆ ದಿನ ನನ್ನ ಹೃದಯದಲ್ಲಿ ದೇವರು ಮಾತನಾಡಿದನು.

(ಈ ತರಬೇತಿಯಲ್ಲಿ ಅವಿಧ್ಯಾವಂತನಾದ ಹಿರಿಯ ಮನುಷ್ಯನು ತನ್ನ ಜ್ಞಾನದ ಬುದ್ದಿವಂತಿಕೆಯಿಂದ ದೇವರ ವಾಕ್ಯದ ಕಥೆಯಿಂದ ಎಲ್ಲರ ಹೃದಯದಲ್ಲಿ ಮಾತನಾಡುವ ಹಾಗೆ ಮಾಡಿದ. ಆತನು ಒಳ್ಳೆಯ ಪ್ರಶ್ನೆಗಳನ್ನು ಕೇಳುವ ಮೂಲಕ ಆ ಹಳ್ಳಿಯ ಜನರನ್ನು ಆತನು ಕಥೆಯಲ್ಲಿರುವ ಈ ಸತ್ಯಾಂಶವನ್ನು ಕಂಡುಕೊಳ್ಳುವಂತೆ ನಡೆಸಿದನೋ? ವಿಧ್ಯಾವಂತರಾದ ಅನೇಕರು ಅವಿಧ್ಯಾವಂತನಾದ ಈತನಿಂದ ಕಲಿಯಬಹುದೋ? ಹೌದು ಹೌದು ಮತ್ತು ಹೌದು).

ಮೌಖಿಕ ಸತ್ಯವೇದ ಶಾಲೆಗಳು: ಅನೇಕ ಎಸ್ ಟಿ ಎಸ್ ತರಬೇತಿ ಕೂಟಗಳಲ್ಲಿ ದೇವರ ವಾಕ್ಯವನ್ನು ಆಳವಾಗಿ ಕಲಿಯುವುದಗೋಸ್ಕರ ಮೌಖಿಕ ಸತ್ಯವೇದ ಶಾಲೆಗಳನ್ನು (ಓ ಬಿ ಎಸ್) ಪ್ರಾರಿಬಿಸಲು ಆಸಕ್ತಿ ತೋರಿಸುತ್ತಾರೆ. ಸ್ಥಳಿಯಾ ಪಾಸ್ಟರ್ಸ್ ಹಾಗು ನಾಯಕರು ದೇವರ ವಾಕ್ಯವನ್ನು ಆಳವಾಗಿ ತಮ್ಮ ಸ್ವಂತ ಸ್ಥಳಗಳಲ್ಲಿ ಕಲಿಯಲು ಆಸೆಪಡುತ್ತಾರೆ.

ದೇವರ ಕಥೆಗಳನ್ನು ಕಲಿಯಲಿ ಇಚ್ಚಿಸುವವರು ಓ ಬಿ ಎಸ್ ಗೆ ಅರ್ಜಿ ಸಲ್ಲಿಸುತ್ತಾರೆ ಅಥವ ಸ್ಥಳಿಯ ಪಾಸ್ಟರ್ಸ್ ಹಾಗು ನಾಯಕರು ಕಲಿಯಲು ಇಚ್ಚಿಸುವವರನ್ನು ತರಬೇತಿಗೆ ಕಳಿಸಿಕೊಡುತ್ತಾರೆ. ಎಸ್ ಟಿ ಎಸ್ ತರಬೇತಿಗೆ ಆಜರಾದ ೧೨ ವಿಧ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಆಯ್ಕೆಯಾದ ವಿಧ್ಯಾರ್ಥಿಗಳಿಗೆ ನುರಿತ ಅಧ್ಯಾಪಕರಿಂದ ಒಂದು ವಾರ ವಿಶೇಷ ತರಬೇತಿ ಇರುತ್ತದೆ. ಈ ನುರಿತ ಅಧ್ಯಾಪಕರು ಮುಂದೆ ಈ ಓ ಬಿ ಎಸ್ ನ ಮೇಲ್ವೀಚರಣೆ ನೋಡಿಕೊಳ್ಳುತ್ತಾರೆ.

ಪ್ರತಿ ಶಾಲೆ ಸುಮಾರು ಒಂದು ವರ್ಷಗಳ ಕಾಲ ನಡೆಯುತ್ತದೆ. ಈ ಒಂದು ವರ್ಷಗಳ ಕಾಲದಲ್ಲಿ ವಿಧ್ಯಾರ್ಥಿಗಳು ತಿಂಗಳಲ್ಲಿ ಎರಡು ವಾರ ಕಥೆಗಳನ್ನು ಕಲಿಯುತ್ತಾರೆ. ಎರಡು ವಾರ ತಮ್ಮ ಊರಿಗೆ ಹೋಗುತ್ತಾರೆ. ಕೆಲವು ಸ್ಥಳಗಳಲ್ಲಿ

ಪ್ರತಿದಿನ ಕೂಡಿಕೋಳ್ಳುತ್ತಾರೆ. ನುರಿತ ಅಧ್ಯಾಪಕರು ಎರಡು ವಾರದ ಕೋನೆಯ ೩ ದಿನಗಳು ತರಬೇತಿಗೆ ದರ್ಶನಕೊಡುತ್ತಾರೆ. ವಿಧ್ಯಾರ್ಥಿಗಳೇ ತಮ್ಮ ಊಟವನ್ನು ತೆಗೆದುಕೊಂಡು ಬರುತ್ತಾರೆ ಅಥವ ಸ್ಥಳಿಯವಾಗಿ ಕೋಂಡುಕೊಳ್ಳುತ್ತಾರೆ. ವಿಧ್ಯಾರ್ಥಿಗಳು ತಂಗುವ ಅನುಕೂಲತೆಯನ್ನು ಸ್ಥಳಿಯ ಪಾಸ್ಟರ್ಸ್ ಹಾಗು ನಾಯಕರು ನೋಡಿಕೊಳ್ಳುತ್ತಾರೆ.

ಒಂದು ವರ್ಷದ ತರಬೇತಿಯಲ್ಲಿ ವಿಧ್ಯಾರ್ಥಿಗಳು ಸತ್ಯವೇದದಲ್ಲಿ ಕ್ರಮಬದ್ದವಾಗಿ ಸುಮಾರು ೨೧೦ ಕಥೆಗಳನ್ನು ಕಲಿಯುತ್ತಾರೆ. ಇವೆ ಇವರ ವರ್ಷದ ಪಠ್ಯವಾಗಿರುತ್ತದೆ. ಎಲ್ಲಾ ವಿಧ್ಯಾರ್ಥಿಗಳು ೨೧೦ ಕಥೆಗಳು ಕಲಿಯಲೇಬೇಕು ಕಲಿತ ಮೇಲೆ ಅವರಿಗೆ ಪ್ರಮಾಣ ಪತ್ರ ಕೊಡಲಾಗುತ್ತದೆ.

ಕಲಿತ ಕಥೆಗಳನ್ನು ಇತರರಿಗೆ ಹೇಳಬೇಕು ಮತ್ತು ವಾಕ್ಯದಲ್ಲಿ ಆಳವಾಗಿ ಕಲಿಯುವ ಕೌಶಲ್ಯವನ್ನು ಅಭ್ಯಾಸಮಾಡಬೇಕು ಅದಕೊಸ್ಕರ ಅವರು ಕಲಿತಿದ್ದನ್ನು ಬೇರೆಯವರಿಗೆ ಹೇಳಬೇಕು ಅದನ್ನು ನಾವು ಪ್ರಾಕ್ಟಿಕಲ್(ಕಾರ್ಯರೂಪ) ಎಂದು ಕರೆಯುತ್ತೇವೆ. ಇದು ತರಬೇತಿಯ ಒಂದು ಭಾಗ.

ಒಬ್ಬ ಬಿಷಪ್ ಒಂದು ವಿಷೇಶವಾದ ಓ ಬಿ ಎಸ್‌ನ್ನು ನಡೆಸುಕೊಟ್ಟರು. ಆತನ ಸಭೆಯ ಅನೇಕರು ಹೂಗಳ ತೋಟದಲ್ಲಿ ಕೆಲಸ ಮಾಡುವವರು ಪ್ರತಿ ದಿನ ಊಟದ ಸಮಯದಲ್ಲಿ ಕೂಡುಕೊಳ್ಳುತ್ತಿದ್ದರು. ಅವರು ಸುಮಾರು ೪ ಸ್ಥಳಗಳಲ್ಲಿ ಈ ರೀತಿಯ ಕೂಟಗಳನ್ನು ಪ್ರಾರಂಬಿಸಿದರು ಅವರು ಪ್ರತಿ ವಾರ ೫ ಸತ್ಯವೇದ ಕಥೆಗಳನ್ನು ಕಲಿತುಕೊಳ್ಳುತ್ತಿದ್ದರು. ಹೂಗಳ ತೋಟದಲ್ಲಿ ಕೆಲಸ ಮಾಡುವ ಇತರ ಕೆಲಸಗಾರರು ಕಥೆ ಕೇಳಲು ಇಚ್ಚೆ ಪಟ್ಟರು ಕೊನೆಗೆ ಅವರು ಆ ಕೂಟಕ್ಕೆ ಸೇರಿಕೊಂಟರು. ಕೇವಲ ೪ ತಿಂಗಳಲ್ಲಿ ಅನೇಕರು ರಕ್ಷಣೆ ಹೋಂದಿದರು ಹಾರು ಸುಮಾರು ೧೬ ಸಭೆಗಳು ಪ್ರಾರಂಭವಾದವು.

ವ್ಯವಹಾರ (ಬಿಸ್ನೆಸ್) ಮಾಡುವ ಕೆಲವರು ಕೆಲಸ ಮುಗಿದ ಮೇಲೆ ಓ ಬಿ ಎಸ್ ಆಗಿ ಸೇರಿಕೊಳ್ಳುತ್ತಾರೆ. ಅವರ ಉದೇಶ ೨೧೦ ಸತ್ಯವೇದದ ಕಥೆಗಳ್ನು ಕಲಿಯಲು ಸೇರುತ್ತಿದ್ದರು.

ಕೆಲವು ಸ್ಥಳಗಳಲ್ಲಿ ಪ್ರತಿ ಸಂಜೆ ಓ ಬಿ ಎಸ್ ಶಾಲೆಯಲ್ಲಿ ಕೂಡಿಕೊಳ್ಳುತ್ತಾರೆ. ಮೂರು ನಾಲ್ಕು ಕುಟುಂಬಗಳು ಒಂದು ಶಾಲೆಯಾಗಿ ಸೇರಿಬರುತ್ತಾರೆ.

ಪಿಲಿಪ್ಪಿಯನ್ಸನ ಎಸ್ ಟಿ ಎಸ್ ನಾಯಕರು ಪ್ರತಿ ವಾರ ರೇಡಿಯೊ ಕಾರ್ಯಕ್ರಮ ನಡೆಸಿಕೊಡುತ್ತಾರೆ. ಅವರು ಸ್ಟುಡಿಯೊದಲ್ಲಿ ಸಣ್ಣ ಗುಂಪಿಗೆ ಎಸ್ ಟಿ ಎಸ್ ಶೈಲಿಯ ಮೂಲಕ ಸತ್ಯವೇದದ ಕಥೆಗಳನ್ನು ಹೇಳುತ್ತಾರೆ. ಸ್ಟುಡಿಯೊದಲ್ಲಿ ಕಥೆಗಳನ್ನು ಕೇಳಿದ ಅನೇಕರು ತಮ್ಮ ಫೋನಿನ ಮೂಲಕ ಅಥವ ಪತ್ರಗಳ ಮೂಲಕ ತಮ್ಮ ಉತ್ತರಗಳನ್ನು ಕಳಿಸಿಕೊಡುತ್ತಾರೆ. ಇವರಲ್ಲಿ ಅನೇಕರು ಭಯೋತ್ಪಾಧಕರು ಸೇರಿದ್ದಾರೆ.

ಈ ನಾಯಕರು ಕೋನೆಗೆ ಸ್ಟುಡಿಯೊ ಮೂಲಕ ಒಂದು ಎಸ್ ಟಿ ಎಸ್ ತರಬೇತಿ ನಡೆಸಲು ತೀರ್ಮಾನಿಸುತ್ತಾರೆ. ಸ್ಟುಡಿಯೊ ಮೂಲಕ ದೇವರ ಕಥೆಗಳನ್ನು ಕೇಳಿದ ಅನೇಕರು ಇವರಿಗೆ ಫೋನ್ ಮಾಡಿ ನೀವು ಏಕೆ ಒಂದು ಶಾಲೆಯನ್ನು ಈ ನಮ್ಮ ದ್ವೀಪದಲ್ಲಿ ತೆರೆಯಬಾರದು ? ಎಂದು ಕೇಳಿದರು.

ಆವರ ಕೋರಿಕೆಯ ಮೇರೆಗೆ ಚಲಿಸುವ ಓ ಬಿ ಎಸ್ ಶಾಲೆಯಾಯಿತು. ಮೂರು ಸ್ಥಳಗಳಲ್ಲಿ ೭, ೧೩ ಹಾಗು ೧೭ ಜನ ತಮ್ಮ ಸ್ವತ್ತ ಸ್ಥಳಗಳಲ್ಲಿ ಕೂಡಿಕೊಂಡು ಕಥೆಗಳನ್ನು ಕಲಿಯಲು ಪ್ರಾರಂಬಿಸಿದರು. ವಾರಕ್ಕೆ ೩ ಸಲ ಫೋನಿನ

ಮೂಲಕ ವಿಧ್ಯಾರ್ಥಿಗಳಿಗೆ ಕಥೆಗಳನ್ನು ಕಲಿಸುತ್ತಾ ಕಥೆಯಲ್ಲಿರುವ ಆತ್ಮೀಕ ನಿಧಿಗಳನ್ನು ಕಂಡುಕೊಳ್ಳಲು ಪ್ರಶಾರೊಬಿಸಿದರು.

ಕೇವಲ ಎರಡು ವರ್ಷಗಳಲ್ಲಿ ಓ ಬಿ ಎಸ್ ಶಾಲೆಗಳಿಂದ ಕಲಿತ ಅನೇಕ ಅನುಭವಗಳಿಂದ ಈಗ ಸುಮಾರು ೯ ರಾಷ್ಟ್ರಗಳಲ್ಲಿ ಓ ಬಿ ಎಸ್ ಶಾಲೆಗಳು ನಡೆಯಿತ್ತಿವೆ.

ಓ ಬಿ ಎಸ್ ಶಾಲೆಗೆ ಬಂದ ಸುಮಾರು ೪೦% ವಿಧ್ಯಾರ್ಥಿಗಳು ಅನೇಕ ವಿಶ್ವವಿಧ್ಯಾನಿಲಯಗಳಿಂದ ಪರಿಣತಿ ಪಡೆದಿರುವವರಾಗಿದ್ದಾರೆ ಹಾಗು ಅನೇಕರು ಒಳ್ಳೆಯ ಸುವಾರ್ತಿಕರಾಗಿ, ಪಾಸ್ಟರ್ಸ್ ಆಗಿ ಉತ್ತಮ ಸೇವೆ ಮಾಡುತ್ತಿದ್ದಾರೆ.

ಸುಮಾರು ೯೫% ವಿಧ್ಯಾರ್ಥಿಗಳು ತಮ್ಮ ಓ ಬಿ ಎಸ್ ತರಬೇತಿಯನ್ನು ಮುಗಿಸಿದ್ದಾರೆ.

ಮೌಖಿಕ ಸತ್ಯವೇದ ಶಾಲೆಯ ಪರಿಣಾಮ– ಆತಂಕ, ಆಶ್ಚರ್ಯ, ಅದರದ ಭಯ:

ಒಂದು ದಿನ ನಮ್ಮ ಆಫ್ರಿಕ ದೇಶದ ನಿರ್ದೇಶಕರು ಫೋನ್ ಮಾಡಿ ಒಂದು ಪ್ರಶ್ನೆಯನ್ನು ಕೇಳಿದರು, ಲೇಕ್ ವಿಕ್ಟೋರಿಯ ದೀಪದಲ್ಲಿ ನಡೆಯುತ್ತಿರುವ ತರಬೇತಿಯಲ್ಲಿ ಒಂದು ಹೋಸ ಸಮಸ್ಯೆ ಎದುರಾಗಿತ್ತು. ಆ ದೀಪದ ಜನರು ದ್ವಿಪತ್ನಿಯರನ್ನು ಹೊಂದಿದ್ದರು. ತರಬೇತಿಗೆ ಅವಕಾಶ ಕೊಟ್ಟು ಸಹಾಯ ಮಾಡಿದ ನಾಯಕರು ಹಾಗು ಅಲ್ಲಿನ ಸಭಪಾಲಕರು ಕೂಡ ದ್ವಿಪತ್ನಿಯರನ್ನು ಹೊಂದಿದ್ದನು. ಇಂಥಹ ಸಮಯದಲ್ಲಿ ನಾವು ಏನು ಮಾಡಬೇಕೆಂದು ಕೇಳಿದರು. ಈಗಿರುವಾಗ ಇವರಿಗೆ ಕೆಲವು ಕಥೆಗಳನ್ನು ಆರಿಸಿಕೊಳ್ಳೋಣವೇ? ಎಂದು ಕೇಳಿದರು.

ಇನ್ನೋಂದು ಆತಂಕ ಕಾದಿತ್ತು. ಉತ್ತರಕ್ಕಾಗಿ ದೇವರಲ್ಲಿ ಮೋರೆಯಿಟ್ಟೆ, ದೇವರು ಇದಾದ ನಂತರ ಅತಿಬೇಗ ಉತ್ತರವನ್ನು ಕೊಟ್ಟರು ಅದೇನೆಂದರೆ ನಾವು ಯಾವಾಗಲು ಕಥೆಗಳನ್ನು ಆಯ್ಕೆಮಾಡಲು ಪ್ರೋತ್ಸಾಹಿಸುವುದಿಲ್ಲ ಕಾರಣ ದೇವರ ವಾಕ್ಯವು ಪ್ರತಿಯೊಬ್ಬರಲ್ಲಿ ಮಾತನಾಡುತ್ತದೆ ಆದಕಾರಣ ಜನರ ಹೃದಯದಲ್ಲಿ ಮಾತನಾಡಲು ಕಥೆಗಳನ್ನು ಆಯ್ಕೆಮಾಡಬಾರದು ಎಂದು ನಾವು ತಿಳಿಸುತ್ತೇವೆ. ಪ್ರತಿ ತರಬೇತಿಯಲ್ಲಿ ಪವಿತ್ರಾತ್ಮನು ಕೆಲಸ ಮಾಡುತ್ತಾನೆ ಹಾಗು ತರಬೇತಿಯಲ್ಲಿ ಕಲಿಯವ ಕಥೆಗಳ ಮೂಲಕ ದೇವರು ಪ್ರತಿಯೊಬ್ಬರ ಹೃದಯಲ್ಲಿ ಮಾತನಾಡುತ್ತಾನೆ ಕಾರಣ ಇದು ದೇವರ ವಾಕ್ಯ.

ಇದು ನಿಜವಾ?, ನಿಮಗೆ ಗೊತ್ತಿಲ್ಲವೇ ಇದು ಬಹಳ ಕುಗ್ರಾಮ, ಅಲ್ಲಿ ತರಬೇತಿ ಕೊಡುತ್ತಿರುವ ಬೊದಕರು ನನ್ನ ಸಲಹೆಗಾಗಿ ಕಾಯುತ್ತಿದ್ದಾರೆ ಎಂದು ಆ ನಿರ್ದೇಶಕರು ಹೇಳಿದರು. ಆ ದ್ವೀಪದಲ್ಲಿ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಮಾತ್ರ ಸೆಲ್ ಫೋನ್ ಕೆಲಸ ಮಾಡುತ್ತದೆ ಅಷ್ಟೆ ಅಲ್ಲದೆ ಅವರು ಎತ್ತರವಾದ ಮರವನ್ನು ಹತ್ತಿ ಸೆಲ್ ಫೋನ್‌ನಲ್ಲಿ ಮಾತನಾಡಬೇಕು ಹಾಗು ಅವರು ನನ್ನ ಉತ್ತರಕ್ಕಾಗಿ ಕಾಯುತ್ತಿದ್ದಾರೆ ಎಂದರು.

ಆಗ ನಾನು ಅವರಿಗೆ ಬರವಸೆ ಕೋಟ್ಟು ತಿಳಿಸಿ ಹೇಳಿದೆ ಇದು ದೇವರ ವಾಕ್ಯ ಆದಕಾರಣ ಇದು ಎಲ್ಲರ ಹೃದಯದಲ್ಲಿ ಮಾತನಾಡುತ್ತದೆ ಅವರು ದ್ವಿಪತ್ನಿಯರನ್ನು ಹೊಂದಿದ್ದರು (ಈ ದ್ವೀಪದಲ್ಲಿ ಅನೇಕ ಕ್ರೈಸ್ತರು ದ್ವಿಪತ್ನಿಯರನ್ನು ಹೊಂದಿದ್ದರು) ಈ ಕಥೆಗಳ ಮೂಲಕ ಅವರ ಹೃದಯದಲ್ಲಿ ಮಾತನಾಡುತ್ತಾನೆ. ನಾನು ದೇವರಲ್ಲಿ ಪ್ರಾರ್ಥಿಸಿ ದೇವರೆ ಇವರ ಜೊತೆಯಲ್ಲಿ ಮಾತನಾಡಲಿ ಎಂದಿ ಬೇಡಿಕೊಂಡು ಈ ಉತ್ತರವನ್ನು ತಿಳಿಸಿದೆ ಆಗ ಅವರು ನಮ್ಮಿಂದ ಉತ್ತರವನ್ನು ಪಡೆದುಕೊಂಡು ಮರದಿಂದ ಇಳಿದರು. ನಾವು ಅವರಿಗಾಗಿ ಪ್ರಾರ್ಥಿಸುತ್ತಿದ್ದೆವು.

ತರಬೇತಿ ಮುಗಿದ ಮೇಲೆ ಅವರು ತಮ್ಮ ಮನೆಗೆ ಹೋಗಿ ಈ ಪತ್ರವನ್ನು ಬರೆದರು.

ತರಬೇತಿಯ ಮೂರನೇ ದಿನದ ತರಬೇತಿಯಲ್ಲಿ ಇದ್ದಕ್ಕೆ ಇದ್ದ ಹಾಗೆ ದ್ವಿಪತ್ನಿ ಹೊಂದಿರುವವರ ಬಗ್ಗೆ ತಿಳಿಯದ ರೀತಿಯಲ್ಲಿ ಚರ್ಚೆಯಾಯಿತು. ತರಬೇತಿ ಕೊಡುವ ನಾಯಕರು ಈ ವಿಷಯದ ಬಗ್ಗೆ ಮಾತನಾಡಲು ಇಷ್ಟವಿರಲಿಲ್ಲ, ಆದರೆ ಪವಿತ್ರಾತ್ಮನೇ ತರಬೇತಿಗೆ ಬಂದ ನಾಯಕರ ಹೃದಯದಲ್ಲಿ ಮಾತನಾಡಿ ಅವರ ಹೃದಯಲ್ಲಿ ಆತ್ಮೀಕ ಬೀಜವನ್ನು ಹುಟ್ಟು ಆಕಿದನು.

ಆ ತರಬೇತಿಗೆ ಬಂದಿದ್ದ ಅನೇಕ ಸಭಾಪಾಲಕರು ನಮ್ಮನ್ನು ಸುತ್ತುವರೆದು ಈಗೆ ಹೇಳಿದರು, ಇಲ್ಲಿಯವರೆಗೂ ಈ ದೀಪಕ್ಕೆ ಯಾವ ಕ್ರೈಸ್ತ ಉಪನ್ಯಾಸಕರು ಬಂದಿರಲಿಲ್ಲ. ನಮ್ಮ ಊರಿಗೆ ಬಂದವರಲ್ಲಿ ನೀವೆ ಮೋದಲಿನವರು ಅಲ್ಲದೆ ನೀವು ನಮಗೆ ಸತ್ಯವೇದವನ್ನು ಸುಲುಭವಾಗಿ ಕಲಿಯುವ ವಿದಾನವನ್ನು ಕಲಿಸಿಕೊಟ್ಟಿದ್ದೀರಿ. ನಿಮಗೆ ದನ್ಯವಾದಗಳು ದಯಮಾಡಿ ನಮ್ಮ ಊರಿನಲ್ಲಿ ಮೌಖಿಕ ಸತ್ಯವೇದ ಶಾಲೆಯನ್ನು ಪ್ರಾರಂಭ ಮಾಡಿ ಎಂದು ವಿನಂತಿಸಿಕೊಂಡರು. ನಮಗೆ ಪ್ರಾರಂಭ ಮಾಡಲು ಇಷ್ಟವಿದೆ ಎಂದು ಅವರಿಗೆ ನಾವು ತಿಳಿಸಿದೆವು.

ಎರಡು ವಾರಗಳ ನಂತರ ಅಲ್ಲಿ ಮೌಖಿಕ ಸತ್ಯವೇದ ಶಾಲೆಯು ಪ್ರಾರಂಭವಾಯಿತು.

ಮೌಖಿಕ ಸತ್ಯವೇದ ಶಾಲೆಯು ಪ್ರಾರಂಭವಾದ ಮೂರು ತಿಂಗಳಗಳ ನಂತರ ನಮ್ಮ ನಿರ್ದೇಶಕರು ಆಶ್ಚರ್ಯಕರವಾದ ಒಂದು ಪತ್ರ ಬರೆದರು. (ಮೂರು ತಿಂಗಳಲ್ಲಿ ೧೨ ವಿಧ್ಯಾರ್ಥಿಗಳು ಸುಮಾರು ೬೦ ಕಥೆಗಳನ್ನು ಕಲಿತಿದ್ದರು). ಯಾವ ಕಥೆ ಅವರ ಹೃದಯದಲ್ಲಿ ಮಾತನಾಡಿತೋ ನಮಗೆ ಗೊತ್ತಿಲ್ಲ ಆದರೆ ಅವರು ದ್ವೀಪತ್ನಿ ಹೋಂದುವ ಪದ್ದತಿ ಬಹಳ ತಪ್ಪು, ನಾವು ದೇವರ ವಾಕ್ಯವನ್ನು ಗೌರವಿಸುವ ಸಲುವಾಗಿ ಇನ್ನು ಮುಂದೆ ಯಾರು ಒಂದಕ್ಕಿಂತ ಹೆಚ್ಚಾಗಿ ಹೆಂಡತಿಯನ್ನು ಪಡೆಯಬಾರದು ಎಂದು ಕರ್ತನಲ್ಲಿ ಪ್ರಮಾಣ ಮಾಡಿದರು ಹಾಗು ದ್ವೀಪತ್ನಿ ಹೊಂದಿದ್ದ ಅನೇಕ ಸಭಾಪಾಲಕರು ತಮ್ಮ ಅಧಿಕಾರದಿಂದ ಇಳಿದು ಹೋದರು.

ಇಲ್ಲಿಯವರೆಗೂ ಈ ಒಳ್ಳೆಯ ದೇವ ಜನರು ನಂಬಿಗಸ್ತರಾಗಿ ದೇವರಲ್ಲಿ ಬೆಳೆಯುತ್ತಿದ್ದಾರೆ ಹಾಗು ಅವರು ದೇವರಿಗೆ ಪ್ರಮಾಣ ಮಾಡಿದ ಹಾಗೆ ಒಂದೇ ಹೆಂಡತಿಯನ್ನು ಪಡೆಯಲು ಇಚ್ಛೆಪಡುತ್ತಿದ್ದಾರೆ.

ಇಲ್ಲಿ ೧೨ ವಿಧ್ಯಾರ್ಥಿಗಳು ಒಂದು ವರ್ಷ ತರಬೇತಿಯನ್ನು ಮುಗಿಸಿ ಮತ್ತೊಂದು ಓ ಬಿ ಎಸ್ ನ್ನು ಪ್ರಾರಂಭಮಾಡಿದರು.

ಒಬ್ಬ ವಿಧ್ಯಾರ್ಥಿಯು ಒಂದು ವರ್ಷ ತರಬೇತಿ ಮುಗಿದ ಮೇಲೆ ಅವರು ಓ ಬಿ ಎಸ್ ನ ಗ್ರಾಜುಯೇಶ್‌ನಲ್ಲಿ ತಮ್ಮ ಸಾಕ್ಷಿಯನ್ನು ಈ ರೀತಿ ತಿಳಿಸಿದರು (ಇವರೆ ನಮ್ಮ ತರಬೇತಿ ಕೊಡುವವರನ್ನು ತಮ್ಮ ಊರಿಗೆ ಕರೆಸಿಕೋಂಡು ಓ ಬಿ ಎಸ್ ನ್ನು ಪ್ರಾರಂಭಮಾಡಿದರು).

ನಮ್ಮ ಆಫ್ರೀಕ ದೇಶದ ಎಸ್ ಟಿ ಎಸ್ ನಿರ್ದೇಶಕರಿಗೆ ಅವರಿಗಿರುವ ಪಾಶ್ಚಾತ್ಯ ರಾಷ್ರಗಳ ಸ್ನೇಹಿತರಿಂದ ನಮ್ಮ ಅನಾಥಾಶ್ರಮಕ್ಕೆ ಧನ ಸಹಾಯ ಮಾಡುವಂತೆ ಕಳೆದ ಮೂರು ವರ್ಷಗಳಿಂದ ವಿನಂತಿಕೊಂಡೆವು.

ಕಳೆದ ವರ್ಷ ನಾವು ಬೇಟೆಯಾದೆವು ಆದರೆ ಅವರು ಹಣ ಕೊಡಲಿಲ್ಲಿ, ಆದರೆ ಅವರು ಮತ್ತು ಅವರ ಸಂಗಡಿಗರು ಲೇಕ್ ವಿಕ್ಟೋರಿಯ ದ್ವೀಪಕ್ಕೆ ಬಂದು ದೇವರ ವಾಕ್ಯವನ್ನು ಯಾವ ರೀತಿ ಕಲಿಯಬಹುದೆಂಬುದಾಗಿ ಕಲಿಸಿಕೊಟ್ಟರು.

ಈಗ ನಾನು ಸಂತೋಷವಾಗಿ ಹೇಳಲು ಇಚ್ಚಿಸುತ್ತೇನೆ... ನಮ್ಮ ೭೦ ಅನಾಥ ಮಕ್ಕಳಿಗೆ ಕಳೆದ ವಾರದ ವರೆಗೂ ಎಲ್ಲಾ ಸಹಾಯ ಒದಗಿ ಬಂತು, ಬದಲಾವಣೆ ಹೊಂದಿದ ನಮ್ಮ ಸಮುದಾಯ ನಮ್ಮ ಮಕ್ಕಳಿಗೆ ಸಹಾಯ ಮಾಡಲು ಮುಂದಾಗಿದ್ದಾರೆ.

(ಹಿಂದಿನಿಂದ ಬಂದ ಸಂಪ್ರದಾಯದಂತೆ ನಾವು ಯೋಚಿಸುತ್ತಿದ್ದೆವು ಹಾಗು ನಾವೆಲ್ಲರೂ ದುಷ್ಟರಾಗಿದ್ದೆವು ಆದರೆ ದೇವರ ವಾಕ್ಯವನ್ನು ಕೇಳಿ ಅದನ್ನು ಅರ್ಥ ಮಾಡಿಕೊಂಡೆವು, ಆಗ ನಮ್ಮ ಸಮುದಾಯದವರು ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರುಗಿಕೊಂಡೆವು. ಹಳೆಯ ಸಂಪ್ರದಾಯವನ್ನು ಬಿಟ್ಟು ದೇವರ ಮಾರ್ಗದಲ್ಲಿ ನಡೆಯಲು ಪ್ರಾರಂಬಮಾಡಿದೆವು. ಯಾಕೋಬ ೧:೨೭ ರಲ್ಲಿ ತಿಳಿಸಿದ ಹಾಗೆ ಅವರು ಬದಲಾದರು, ದಿಕ್ಕಿಲ್ಲದವರನ್ನೂ , ವಿಧೆವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂದಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಸುದ್ಧವೂ ನಿರ್ಮಲವೂ ಆಗಿರುವ ಭಕ್ತಿ. ಈ ದೀಪದಲ್ಲಿ ಜನರು ಬದಲಾವಣೆ ಹೋಂದಿಕೊಂಡರು ಹಾಗು ಈ ಬಡ ಹಾಗು ಅನಾಥ ಮಕ್ಕಳಿಗೆ ಸಹಾಯ ಮಾಡಲು ಮುಂದೆ ಬಂದರು)

ಪದವಿ ಪಡೆದವರು ಮುಂದುವರೆಸುತ್ತಾರೆ:

ಕರ್ತನ ಸಹಾಯದ ಮೇರೆಗೆ ಮೆಫಾ ವಾಯ್ಸ ಪ್ಲೇಯರನ್ನು ಪ್ರತೀ ಓ ಬಿ ಎಸ್ ಪದವಿದಾರನು ಪಡೆಯುತ್ತಾನೆ. ಪದವಿ ಪಡೆದವರು ಸುವಾರ್ತಿಕರಾಗಿ, ಉಪದ್ಯಾಯರಾಗಿ ಮತ್ತು ಸಭಾಪಾಲಕರಾಗಿ ಮುಂದುವರೆಯುತ್ತಾರೆ. ಸುಮಾರು ೨೫% ಓ ಬಿ ಎಸ್ ಪದವಿ ಪಡೆದವರು ತಮ್ಮ ಇತರ ಸೇವೆಯನ್ನು ಮಾಡುತ್ತಾ ಎಸ್ ಟಿ ಎಸ್ ತರಭೇತಿಗಳಲ್ಲಿ ಹಾಗು ಓ ಬಿ ಎಸ್ ಶಾಲೆಗಳಲ್ಲಿ ಮೇಲ್ವೀಚಾರಕರಾಗಿ ಸಹಾಯ ಮಾಡುತ್ತಾರೆ. ಅವಶ್ಯಕತೆ ಇರುವ ಸ್ಥಳಗಳಲ್ಲಿ ಅವರನ್ನು ಆಹ್ವಾನಿಸುತ್ತೇವೆ ಆಗ ಅವರು ತರಬೇತುದಾರರಾಗಿ ಬಂದು ಸಹಾಯ ಮಾಡುತ್ತಾರೆ. ಕರ್ತನ ಸಹಾಯದ ಮೇರೆಗೆ ಕೆಲವು ಸಮಯ ಸ್ವಲ್ಪ ಧನ ಸಹಾಯ ಮಾಡುತ್ತಿರುತ್ತೇವೆ.

ಸ್ಥಳೀಯವಾಗಿ ಶಕ್ತಿಗೊಳಿಸುವುದು:

ಒಂದು ದೇಶದ ನಮ್ಮ ನಿರ್ದೇಶಕರನ್ನು ಅವರ ದೇಶದ ಕೆಲವು ಶಾಲೆಗಳಲ್ಲಿ ಬೋದಿಸುವಂತೆ ಆಹ್ವಾನಿಸಿದರು. ಅವರು ಶಾಲೆ ನಡೆಸುತ್ತಿದ್ದರು. ನಮ್ಮ ನಿರ್ದೇಶಕರು ಹಾಗು ಆತನ ಸಂಗಡಿಗರು ಅನೇಕ ಎಸ್ ಟಿ ಎಸ್ ಕೂಟಗಳನ್ನು ಹಾಗು ಓ ಬಿ ಎಸ್ ಶಾಲೆಗಳನ್ನು ನಡೆಸುತ್ತಿದ್ದರು, ಈ ಆಹ್ವಾನವನ್ನು ಇಷ್ಟಪಟ್ಟು ನಮ್ಮ ನಾಯಕರಿಗೆ ಹೆಚ್ಚು ಬಲತುಂಬಿಸಿ ಅವರು ಆ ಶಾಲೆಗಲ್ಲಿ ತರಬೇತಿ ಕೊಡುವಂತೆ ತಿಳಿಸಿದೆವೆ ಇದರಿಂದ ನಮ್ಮ ಹಣ, ಸಮಯವನ್ನು ಸ್ಥಳೀಯ ನಾಯಕರಿಗೆ ಅವಕಾಶ ಕೊಟ್ಟಾಗ ಅವರು ಅದ್ದನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಲು ಸಹಾಯವಾಯಿತು.

ಈ ಪದ್ದತಿಯಿಂದ ಸ್ಥಳೀಯ ನಾಯಕರಿಗೆ ಹೆಚ್ಚು ಶಕ್ತಿ ಬಂತು ಹಾಗು ಅವರು ಸಿಮಾರು ೨೫ ಹಳ್ಳಿಗಳಲ್ಲಿ ಓ ಬಿ ಎಸ್ ಪ್ರಾರಂಬಿಸಲು ಸಹಾಯವಾಯಿತು. ಇದನ್ನು ಸಾದಿಸಲು ೩ ಉಪಾಧ್ಯಾಯರು ಆ ಪ್ರಾತ್ಯಗಳಿಗೆ ಒಂಬತ್ತು ತಿಂಗಳಲ್ಲಿ ಸುಮಾರು ಮೂರು ಸಾರಿ ಆ ಪ್ರಾತ್ಯಗಳಿಗೆ ಹೊಗಬೇಕಾಯಿತು. ಮೂರು ತರಬೇತಿಗಳನ್ನು ಮುಗಿಸಿದ ಮೇಲೆ ಪ್ರತೀ

ತರಬೇತಿದಾರನು ಹೊಸದಾಗಿ ಪ್ರಾರಂಬ ಮಾಡಿದ ಓ ಬಿ ಎಸ್ ಗೆ ದರ್ಶನ ಕೊಡಬೇಕು. ತರಬೇತಿಯ ಮುಖ್ಯಸ್ಥರು ಇತರ ಅನ್ನೋಂದು ತಿಂಗಳು ಪ್ರತೀ ಓ ಬಿ ಎಸ್ ನ್ನು ದರ್ಶಿಸುತ್ತಾ ಅಲ್ಲಿನವರಿಗೆ ಸಹಾಯ ಮಾಡಬೇಕು.

ದೇವರ ಕಥೆ ಸಿನಿಮಾದ ವಿ ಸಿ ಡಿ ಗಳನ್ನು ಅದರ ಜೊತೆಗೆ ಸತ್ಯವೇದದ ಕಥೆಗಳನ್ನು ಹಾಗು ಹೊಸ ಒಡಂಬಡಿಕೆಯನ್ನು ಮುದ್ರಿಸಿರುವ ಮೆಘಾ ವಾಯ್ಸ ಪ್ಲೇಯರನ್ನು ತರಬೇತಿ ಮುಗಿದ ಮೇಲೆ ತರಬೇತಿ ಹೊಂದಿದ ಎಲ್ಲಾರಿಗೂ ಬಹುಮಾನವಾಗಿ ಹಾಗು ಧಾನವಾಗಿ ಕೊಡುವ ಅಧಿಕಾರವನ್ನು ಸ್ಥಳಿಯ ನಾಯಕರಿಗೆ ಕೊಡಲಾಗುವುದು. ನಾಯಕರ ಪ್ರತೀ ಓ ಬಿ ಎಸ್ ಗೆ ಬಂದಾಗ ಅನೇಕ ಅನುಕೂಲಗಳಾಗುವಂತೆ ಮಾಡಿದೆವು. ತರಬೇತಿಯ ಮುಖ್ಯಸ್ಥರ ಊಟ ಹಾಗು ಪ್ರಯಾಣದ ಖರ್ಚು ಬಹಳ ಕಡಿಮೆ ಆದರೆ ಅವರು ಸುಮಾರು ೨,೫೦೦ ಜನರಿಗೆ ಸಹಾಯ ಮಾಡಬಹುದು. ತರಬೇತಿಯ ಮುಖ್ಯಸ್ಥರು ಸ್ಥಳೀಯರಿಗೆ ತರಬೇತಿಯನ್ನು ಕೊಟ್ಟು ಅವರು ಮುಂದಿನ ಓ ಬಿ ಎಸ್ ಗೆ ಹೋಗಬೇಕು ಆದರೆ ಸ್ಥಳಿಯರು ಸತ್ಯವೇದದ ಸತ್ಯಾಂಶಗಳನ್ನು ತಮ್ಮ ಸ್ಥಳಿಯರಿಗೆ ತಿಳಿಸುತ್ತಾ ಅದನ್ನು ಮುಂದುವರೆಸಿಕೊಂಡು ಹೋಗಬೇಕು.

ಅಧ್ಯಾಯ 9

ಮುಳ್ಳುಗಳನ್ನು (ಕಠಿಣವಾದವಗಳನ್ನು) ಹೊರಗೆ ಎಳೆಯುವುದು – ಆಲೋಚನೆಯಲ್ಲಿ ನಿದರ್ಶನದ ರೂಪಾಂತರ

ಮುಳ್ಳುಗಳನ್ನು ಹೊರಗೆ ಎಳೆಯುವುದು: ಮೌಖಿಕ ಕಾರ್ಯವಿಧಾನವನ್ನು ಅನುವೋದಿಸುವ ಹೋರಾಟ

ಮುಳ್ಳುಹಂದಿಯು ತನ್ನನ್ನು ಬೆದರಿಸುವ ಪ್ರಾಣಿಗಳಲ್ಲಿ ತನ್ನ ಬೆನ್ನುಮೂಳೆಗಳಲ್ಲಿರುವ ಮುಳ್ಳುಗಳನ್ನು ನಾಟಿ ತನ್ನನ್ನು ರಕ್ಷಿಸಿಕೊಳ್ಳುತ್ತದೆ. ಅದರ ಹರಿತವಾದ ಮುಳ್ಳುಗಳು ಸುಲಭವಾಗಿ ಒಳಗೆ ಹೋಗುತ್ತವೆ, ಆದರೆ ಮುಳ್ಳಿನಲ್ಲಿರುವ ಒಂದು ಚಿಕ್ಕ ಕೊಕ್ಕೆಯ ನಿಮಿತ್ತ, ಇವುಗಳನ್ನು ಹೊರಗೆ ಎಳೆಯುವುದು ಬಹಳ ನೋವನ್ನು ಉಂಟುಮಾಡುತ್ತವೆ.

ಈ ಅಧ್ಯಾಯದ ನಾವು ಹೇಳಿರುವ ಮುಳ್ಳುಗಳನ್ನು ಹೊರಗೆ ಎಳೆಯುವುದು ಎಂಬ ಶೀರ್ಷಿಕೆಯಲ್ಲಿ, ಸಮಯಕ್ಕೆ ಸರಿಯಾಗಿರುವ ಪ್ರಸಂಗ ಮತ್ತು ಬೋಧನೆಯ ವಿಧಾನಗಳನ್ನು ತೆಗೆದುಹಾಕುವುದಲ್ಲ. ಮುಳ್ಳುಗಳೆಂದರೆ ಈ ಕೆಳಗಿನ ನಂಬಿಕೆಗಳಾಗಿವೆ:

- ಬರವಣಿಗೆಯ ರೂಪದಲ್ಲಿರದೆ ನೀವು ಪರಿಣಾಮಕಾರಿಯಾಗಿ ಬೋಧಿಸಲು ಸಾಧ್ಯವಿಲ್ಲ.
- ವಾಕ್ಯಭಾಗವನ್ನಲ್ಲದೆ ಬೇರೆ ಹೊರಗಿನ ಮಾಹಿತಿಯನ್ನು ಉಪಯೋಗಿಸಲೇಬೇಕು.
- ಸಾಂಪ್ರದಾಯಿಕ ವಿಧಾನಗಳನ್ನು ಬಿಟ್ಟು ನೀವು ಆಳವಾಗಿ ಪ್ರಸಂಗಿಸಲು ಸಾಧ್ಯವಿಲ್ಲ.
- ಅವಿಧ್ಯಾವಂತರು ಯಾವುದೇ ಕಾರಣಕ್ಕೂ ಸತ್ಯವೇದವನ್ನು ಆಳವಾಗಿ ಕಲಿತುಕೊಳ್ಳಲು ಸಾದ್ಯವಿಲ್ಲ.

ಮೌಖಿಕವಾಗಿ ಕಲಿಯುವವರನ್ನು ಹೊರತು ಪಡಿಸಿ, ಅನೇಕ ಜನರು ಕಥೆ ಮಾತ್ರದ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ಕಷ್ಟಪಡುತ್ತಾರೆ ಎಂಬ ಸಂಗತಿಯು ನಮಗೆ ಮುಂದುವರೆಯುತ್ತಲೇ ಇರುವಂತಹ ಒಂದು ಅನುಭವವಾಗಿದೆ.

ಕಥೆ ಮಾತ್ರವನ್ನು ಗಂಭೀರವಾಗಿ ಕಲಿಯಲು ಪ್ರಯತ್ನಿಸುವವರಿಗೆ, ಪ್ರತಿ ಅಂಶವನ್ನು ಆ ವ್ಯಕ್ತಿಯು ಶೇಕಡ 100ರಷ್ಟು ಒಪ್ಪಿಕೊಳ್ಳಲೇಬೇಕೆಂಬ ಯೋಜನೆ ಅಂದರೆ ಬರವಣಿಗೆಯಲ್ಲಿ ಇಲ್ಲದಿರುವುದು, ಇಂತಹ ಸಂಗತಿಗಳು ನಾಟಿಕೊಂಡಿರುವ ಮುಳ್ಳುಹಂದಿಯ ಮುಳ್ಳನ್ನು ಹೊರಗೆಳೆಯುವಾಗ ಆಗುವ ಕಷ್ಟದಂತೆಯೇ ಇದೆ! ನಾವು ಎಳೆಯುತ್ತೇವೆ. ಕಲಿತುಕೊಳ್ಳುವವರು, "ಆ!" ಎಂದು ಚೀರುತ್ತಾರೆ. ನಂತರ ಮುಳ್ಳು ಹೊರಗೆ ಬಂದಿರುತ್ತದೆ.

ಮುಳ್ಳು ಹೊರಗೆ ಬಂದ ಮೇಲೆ, ಕಲಿಯುವವರು ತಾವು ಕಾರ್ಯ ಸಾಧಿಸುವಂತಹ ಒಂದು ಹೊಸ ಕೌಶಲವನ್ನು ಕಲಿತಿರುವೆವು ಎಂಬುದನ್ನು ನೋಡಿ ಆಚ್ಚರಿಯನ್ನು ಮತ್ತು ಸಂತೋಷವನ್ನು ವ್ಯಕ್ತಪಡಿಸುವರು!

ಸಂಪ್ರದಾಯಕವಾಗಿ ಕಲಿಯುವುದು ಹಾಗು ಎಸ್ ಟಿ ಎಸ್ ವಿಧಾನದಲ್ಲಿ ಕಲಿಯುವುದು:

ಒಂದು ಕಥೆಯಿಂದ ಸಾಮಾನ್ಯವಾಗಿ ಬೋಧಿಸುವ ವಿಧಾನ.
ಪ್ರಸಂಗಿಸುವ ಮತ್ತು ಬೋಧಿಸುವ ಸರ್ವೇಸಾಮಾನ್ಯವಾದ ಶೈಲಿಯನ್ನು ಉಪಯೋಗಿಸುವಾಗ, ವಾಕ್ಯಭಾಗದ ಕೆಲವು ಭಾಗಗಳು, ಅಥವಾ ಇಡೀ ವಾಕ್ಯಭಾಗಗಳು, ಕೇಳುಗರಿಗಾಗಿ ಓದಲಾಗುತ್ತದೆ. ನಂತರ ಕೆಲವು ಭಾಗವನ್ನು ಹಾಗೆಯೇ ಓದುತ್ತಾರೆ ಏಕೆಂದರೆ ಬೋಧಿಸುವದಕ್ಕೆ ಒಂದು ಆಧಾರವಾಗಿ ಇವುಗಳನ್ನು ಪ್ರಸ್ತಾಪಿಸಲಾಗುತ್ತದೆ. ಇನ್ನೂ ಹೆಚ್ಚಾದ ವಾಕ್ಯಗಳನ್ನು ಕೆಲವು ಸತ್ಯಗಳಿಗೆ ಪ್ರಾಮುಖ್ಯತೆ ಕೊಡುವುದಕ್ಕಾಗಿ ಪ್ರಸ್ತಾಪಿಸಲಾಗುತ್ತದೆ. ಇನ್ನೂ ಕೆಲವು ಕಡೆ, ಸತ್ಯವೇದದಲ್ಲಿ ಇಲ್ಲದಿರುವಂತಹ ಹೊರಗಿನ ಮಾಹಿತಿಯನ್ನು ಹೇಳಲಾಗುತ್ತದೆ, ನಂತರ ಬೋಧಕರ ಮುಖ್ಯ ಅಂಶಗಳನ್ನು ರುಜುಪಡಿಸುವುದಕ್ಕೆ ಕೆಲವು ಗ್ರೀಕ್ ಮತ್ತು ಇಬ್ರಿಯ ಕುರಿತಾಗಿ ಹೇಳಲಾಗುತ್ತದೆ. ಒಮ್ಮೊಮ್ಮೆ ಜನರನ್ನು ಎಚ್ಚರವಾಗಿರುವಂತೆ ಮಾಡಲು ಸ್ವಲ್ಪ ಹಾಸ್ಯ ಅಥವಾ ಒಂದು ಕಥೆಯನ್ನು ಹೇಳಲಾಗುತ್ತದೆ.

ನಂತರ ಕೇಳುಗರಿಗೆ ಅನ್ವಯಿಸುವಿಕೆಗಳನ್ನು ಹೇಳಲಾಗುತ್ತದೆ. ಇದು ಇಷ್ಟೇ. ಅನ್ವಯಿಸುವಿಕೆಗಳನ್ನು **ಬೋಧಕರೇ ಮಾಡುತ್ತಾರೆ.** ಜನರು ಏನು ಮಾಡಬೇಕು ಅಥವಾ ಏನು ಮಾಡಬಾರದು ಎಂಬುದನ್ನು ಹೇಳುವುದರ ಮೂಲಕ ಅನ್ವಯಿಸುವಿಕೆಗಳನ್ನು ಕೊಡಲಾಗುತ್ತದೆ. ಈ ಶೈಲಿಯ ನಿರೂಪಣೆಯೆಲ್ಲವೂ ಸಾಮಾನ್ಯವಾದುದು ಮತ್ತು ನಿಶ್ಚಯವಾಗಿಯೂ ತಪ್ಪಲ್ಲ. ಆದರೆ ವಾಕ್ಯಭಾಗವನ್ನು ಬೋಧಿಸುವುದಕ್ಕೆ ಇರುವಂತಹುದು ಇದೊಂದೇ ಮಾರ್ಗವಲ್ಲ.

ಕಥೆ ಮಾತ್ರದ ಶೈಲಿ. ವ್ಯತ್ಯಾಸವನ್ನು ತೋರಿಸುವಂತೆ, ಒಬ್ಬ ವ್ಯಕ್ತಿಯು *ಕಥೆ* ಮಾತ್ರವನ್ನು ಉಪಯೋಗಿಸಿಕೊಂಡು ಬೋಧಿಸುವಾಗ, ಕಥೆಯನ್ನು ಮೂರು ಬಾರಿ ಕೇಳಲಾಗುತ್ತದೆ, ಮೂರು ವ್ಯತ್ಯಾಸವಾದ ರೀತಿಗಳಲ್ಲಿ. ನಂತರ, ಪ್ರಶ್ನೆಗಳ ಮೂಲಕ, ಕೇಳುಗರು ಅನೇಕ ಆತ್ಮೀಕ ಅವಲೋಕನಗಳನ್ನು ಮತ್ತು ಆತ್ಮೀಕ ಅನ್ವಯಿಸುವಿಕೆಗಳನ್ನು ಕಂಡುಹಿಡಿಯುವಂತೆ (ಕೆಳಗೆ ಕೊಡಲ್ಪಟ್ಟಿರುವ ಪಟ್ಟಿಯಂತೆ) ಆಹ್ವಾನಿಸಲಾಗುತ್ತದೆ. ಈ ಚರ್ಚೆಯ ಶೈಲಿಯು ಕೇಳುಗರು ಮಾಹಿತಿಯನ್ನು ಕಾರ್ಯಗತಗೊಳಿಸುವಂತೆ, ಮಾನಸಿಕವಾಗಿ ತೊಡಗಿಸಿಕೊಳ್ಳುವಂತೆ ಮತ್ತು ತಾವೇ ಖುದ್ದಾಗಿ ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವ ಸಂತೋಷವನ್ನು ಹೊಂದುವಂತೆ ಅನುಮತಿಸುತ್ತದೆ. ಬಹಳ ಸಾಮಾನ್ಯವಾಗಿ, ಬೋಧಕರು ಕಂಡುಹಿಡಿಯದಿರುವಂತಹ ಇನ್ನೂ ಅಧಿಕವಾದ ಸತ್ಯಗಳನ್ನು ಕೇಳುಗರು ಕಂಡುಹಿಡಿಯುತ್ತಾರೆ.

ಅಮೇರಿಕದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುವ, ಉನ್ನತ ವ್ಯಾಸಂಗ ಮಾಡಿದ ಸಭಾಪಾಲಕರು ಮತ್ತು ನಾಯಕರೂ ಆಗಿರುವ ಇವರು *ಕಥೆ* ಮಾತ್ರದ ಒಂದು ಕಾರ್ಯಾಗಾರದಲ್ಲಿ ಭಾಗವಹಿಸಿದರು. ಇದನ್ನು ಮುಗಿಸಿದ ಲೇಖಕರು, ಈಗ *ಕಥೆ* ಮಾತ್ರವನ್ನು ತಮ್ಮ ಸೇವೆಯಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿರುವರು. ಅವರು ಈ ರೀತಿ ಬರೆದಿರುವರು:

> "ಈ ರೀತಿಯಾಗಿ (*ಕಥೆ* ಮಾತ್ರದ ರೀತಿ) ಪ್ರಸ್ತಾಪಿಸುವುದು ಮತ್ತು ವ್ಯಾಸಾಂಗ ಮಟ್ಟದಲ್ಲಿ ಪ್ರಸ್ತಾಪಿಸುವುದರ ವ್ಯತ್ಯಾಸವು ಒಬ್ಬ ರೈತನಿಗೆ ಸಂಬಂಧಿಸಿದ ಹಾಗಿದೆ, ನಾವು ಸತ್ಯವೇದವನ್ನು ಅರ್ಥ ಗ್ರಹಿಸುವ ಮತ್ತು ವಿವರವಾಗಿ ಪರೀಕ್ಷಿಸುವ ಪುಸ್ತಕ ಎಂಬುದಾಗಿ ಸ್ವಲ್ಪ ಮಟ್ಟಿಗೆ ವ್ಯವಹರಿಸುತ್ತೇವೆ, ಆದರೆ ಇದನ್ನು ಇತಿಹಾಸದ ನೈಜ ಚೌಕಟ್ಟಿನಲ್ಲಿ ಬಾಳಿದಂತಹ ಘಟನೆಗಳ ದಾಖಲೆ ಎಂದು ಹೆಚ್ಚಾಗಿ ವ್ಯವಹರಿಸುತ್ತೇವೆ. ಈ ಚೌಕಟ್ಟಿನಲ್ಲಿ, ನಾವು ಘಟನೆಗಳನ್ನು ಅವುಗಳ ಸಮಾಂತರ ವಾಸ್ತವಿಕದ

ಒಳಪ್ರವಾಹದೊಂದಿಗೆ ನೈಜವಾಗಿ ಅದರ ಮಾರ್ಗದ ಜೊತೆಯಲ್ಲಿ ಕಂಡುಹಿಡಿಯಬೇಕಾಗಿದೆ ಎಂಬುದನ್ನು ನೋಡಲು ಪ್ರಾರಂಭಿಸಿದೆವು."

ನಾವು ಲೋಕದೆಲ್ಲೆಡೆ *ಕಥೆ* ಮಾತ್ರವನ್ನು ಪರಿಚಯ ಮಾಡಿದಾಗ, ನಾವು ಈ ಮರುಕಳಿಸುವ ಪ್ರತಿಕ್ರಿಯೆಯನ್ನು ಗಮನಿಸಿದೆವು: ಅನೇಕ ಭಾಗಗಳಿಗೆ, *ಕಥೆ* ಮಾತ್ರದ ಕೌಶಲವನ್ನು ಹೆಚ್ಚಾಗಿ ವಿದ್ಯಾಭ್ಯಾಸ ಮಾಡಿದವರಿಗಿಂತಲೂ, ಅತಿಕಡಿಮೆ ವಿದ್ಯಾಭ್ಯಾಸವುಳ್ಳವರು ಅತಿ ಶೀಘ್ರವಾಗಿ ಹೊಂದಿಕೊಂಡಿರುವರು. ಲೋಕದಲ್ಲಿ ಕಡಿಮೆ ಓದಿರುವ ಜನರು ಹೆಚ್ಚು ವಿದ್ಯಾವಂತರಿಗಿಂತಲೂ ತಿಳುವಳಿಕೆಯುಳ್ಳವರೆಂದು ಅರ್ಥವೇ? ಖಂಡಿತವಾಗಿಯೂ ಇಲ್ಲ!

ಇದನ್ನು ಗುರುತಿಸಲು ನಾವು ಮಾಡುವುದೇನೆಂದರೆ: ಜನರು ಒಂದು ನಿರ್ದಿಷ್ಟವಾದ ವಿಧಾನವನ್ನು ಅಧ್ಯಯನ ಮಾಡಿದಾಗ, ಮತ್ತು ಇದನ್ನು ಸ್ವಲ್ಪ ಮಟ್ಟಿನ ಯಶಸ್ಸಿನಲ್ಲಿ ಉಪಯೋಗಿಸಿದಾಗ, ಪ್ರತಿರೋಧದಲ್ಲಿರುವಂತೆ ಒಂದು ಹೊಸ ವಿಧಾನವನ್ನು ಕಲಿತುಕೊಳ್ಳುವುದು ಒಂದು ದೊಡ್ಡ ಸವಾಲಾಗಿರುವಂತೆ ಕಾಣುತ್ತದೆ. *ಕಥೆ* ಮಾತ್ರದ ಎಲ್ಲಾ ಭಾಗಗಳನ್ನು ಒಪ್ಪಿಕೊಳ್ಳುವುದರಲ್ಲಿ ಕಾಲೇಜು, ವಿಶ್ವವಿದ್ಯಾಲಯ, ಬೈಬಲ್ ಶಾಲೆ ಮತ್ತು ಕೂಟಗಳ ಪದವೀಧರರು ಹೆಚ್ಚಾಗಿ ಕಷ್ಟಪಡುತ್ತಾರೆ.
ಕಥೆ ಮಾತ್ರದ ಕಾರ್ಯಾಗಾರಗಳಲ್ಲಿ ಭಾಗವಹಿಸಿರುವ ಹೆಚ್ಚಿನ ವ್ಯಾಸಾಂಗ ಮಾಡಿರುವ ಕ್ರೈಸ್ತರು ಯಥಾರ್ಥವಾದ ಮಾನಸಿಕ ಸಮ್ಮತಿಯನ್ನು ಕೊಟ್ಟಿದ್ದರೂ ಸಹ, ಅವರು ವಾಕ್ಯ ಕಲಿಯುವುದಕ್ಕೆ ಪ್ರಯತ್ನಿಸುವಾಗ ಮತ್ತು ಅದನ್ನು *ಕಥೆ* ಮಾತ್ರದ ಶೈಲಿಯಲ್ಲಿ ನಿರೂಪಿಸುವಾಗ, ಅವರು ಸಾಮಾನ್ಯವಾಗಿ ಈ ಪ್ರಕ್ರಿಯೆಯ ಭಾಗವನ್ನು ಮಾತ್ರ ಉಪಯೋಗಿಸುತ್ತಾರೆ.

ಉನ್ನತ ವ್ಯಾಸಾಂಗ ಮಾಡಿದವರು ಮತ್ತು ಬೋಧನೆಯಲ್ಲಿ ಮೊದಲಿನಿಂದಲೂ ಯಶಸ್ಸಿನಲ್ಲಿರುವವರು ಅಷ್ಟು ಸುಲಭವಾಗಿ *ಕಥೆ* ಮಾತ್ರವನ್ನು ತಮ್ಮ ಸಿದ್ಧತೆಯೊಳಗೆ ಮತ್ತು ನಿರೂಪಣೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಕಷ್ಟದ ಕ್ಷೇತ್ರಗಳು ಇವುಗಳನ್ನು ಒಳಗೊಂಡಿವೆ:

- ಕ್ರಮದಲ್ಲಿರುವ ಸಮಾಂತರ ವಾಕ್ಯಭಾಗಗಳನ್ನು ಬಿಟ್ಟುಬಿಡುವುದು.
- ಯಾವುದೇ ರೀತಿ ಬರೆದುಕೊಳ್ಳದೆಯೇ ಕಲಿಯುವುದು.
- ಬರವಣಿಗೆ ಇಲ್ಲದೆಯೇ ಬೋಧಿಸುವುದು.
- ಕೇವಲ ಒಂದು ವಾಕ್ಯಭಾಗಕ್ಕೆ ಮಾತ್ರ ನಿರೂಪಣೆಯ ಮಿತಿಯಿರುವುದು.
- ಇನ್ನಿತರ ಬೇರೆ ಮಾಹಿತಿಯನ್ನು ತರದಿರುವುದು.
- ಭಾಷಣಕ್ಕೆ ವಿರೋಧವಾಗಿರುವಂತೆ ಚರ್ಚೆಯ ಮೂಲಕ ಸತ್ಯಗಳ ಕಡೆಗೆ ನಡೆಸುವುದು.
- ಒಂದು ಕಥೆಯನ್ನು ಓದದೆಯೇ (ಅಥವಾ ಸ್ವಲ್ಪ ಮಾತ್ರ ಓದಿ) ಅದನ್ನು ಹೇಳುವುದು.
- ಕಥೆ ಮಾತ್ರವೊಂದೇ ನಿಲ್ಲುವುದಕ್ಕೆ ಭರವಸೆ ಇಡುವುದು.
- ಆಯ್ದುಕೋಂಡ ಕಥೆಯ ಭಾಗದಲ್ಲಿ ಅನೇಕ ಟಾಪಿಕ್ಸ್‌ಗಳನ್ನು ಕಲಿತುಕೋಳ್ಳುವುದು.
- ಭೋಧಕರು ಕಲಿಸಿದ್ದನ್ನು ಹಾಗು ಕಲಿತವರು ಹೋಸದಾಗಿ ಕಲಿತ ಆತ್ಮೀಕ ನಿಧಿಗಳನ್ನು ಮನೆಗೆ ತೆಗೆದುಕೋಂಡುಹೋಗುವುದು.

ಗಮನಿಸುವುದಕ್ಕೆ ಪ್ರಾಮುಖ್ಯವಾದುದು: ಚಿರಪರಿಚಿತವಾಗಿರುವ ಆ ವಿಧಾನಗಳಲ್ಲಿ ಯಾವುದನ್ನೂ ನಾವು ಖಂಡಿತವಾಗಿ ತಪ್ಪೆಂದು ಪರಿಗಣಿಸುತ್ತಿಲ್ಲ ಅಥವಾ ಅವುಗಳನ್ನು ತ್ಯಜಿಸುವ ಅಗತ್ಯವಿದೆಯೆಂದು ಹೇಳುತ್ತಿಲ್ಲ. ಆದರೆ,

ಮೌಖಿಕ ವಿಧಾನಗಳ ಮೂಲಕ ತಲುಪುವ ಅಗತ್ಯವಿರುವಂತಹ ಲೋಕದಲ್ಲಿ ಅತಿಹೆಚ್ಚಿನ ಶೇಕಡವಾರು ಜನರಲ್ಲಿ ಇದು ಹೆಚ್ಚಾಗುತ್ತಿರುವ ಅರಿವಾಗಿದೆ. ಹಾಗಾಗಿ, ಕಥೆ ಮಾತ್ರದ ಮೌಖಿಕ ವಿಧಾನವನ್ನು ಸೇರಿಸುವುದಕ್ಕೆ ತಮ್ಮ ವಾಕ್ಯಗಳ ನಿರೂಪಣೆಗಳ ಸಂಗ್ರಹವನ್ನು ವಿಸ್ತರಿಸುವಲ್ಲಿ ಕ್ರೈಸ್ತ ಸಭಾಪಾಲಕರುಗಳು ಮತ್ತು ವಿದ್ಯಾವಂತರು ತೋರುತ್ತಿರುವ ಆಸಕ್ತಿಯನ್ನು ನಾವು ಕೊಂಡಾಡುತ್ತೇವೆ.

ಕೆಳಗಿನ ಎರಡೂ ಕಥೆಗಳು ಮೇಲಿನ ಪಟ್ಟಿಯ ಅನೇಕ ಸತ್ಯಗಳನ್ನು ತೋರ್ಪಡಿಸುತ್ತದೆ.

ಥಾಯ್‌ಲ್ಯಾಂಡ್‌ನಲ್ಲಿರುವ ಒಬ್ಬ ಯೌವನಸ್ಥ ಸೇವಕನು ಗಮನಿಸಿದ ಸಂಗತಿ:

> ನಾನು ಪಾಠದ ಉದ್ದೇಶವನ್ನು ಸಿದ್ಧಪಡಿಸುವುದಕ್ಕೆ ಮತ್ತು ನನ್ನ ಪಾಠವನ್ನು ಒಂದು ಸ್ಪಷ್ಟವಾದ ಉದ್ದೇಶದೊಂದಿಗೆ ಪ್ರಾರಂಭಿಸುವುದನ್ನು ಬಹಳವಾಗಿ ಉಪಯೋಗಿಸುತ್ತಿದ್ದೆ. ಮತ್ತು ಆ ಉದ್ದೇಶವನ್ನು ಪಾಠದುದ್ದಕ್ಕೂ ಬಲಪಡಿಸುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದೆ ಮತ್ತು ನಾನು ಹೇಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಿರುವವರೂ ಇದನ್ನು ಬಿಟ್ಟುಬಿಡದಂತೆ ಮುಕ್ತಾಯದಲ್ಲೂ ಸಹ ಸೇರಿಸುತ್ತಿದ್ದೆ. ಆದಾಗ್ಯೂ, ಒಂದು ಪಾಠವನ್ನು ಬೋಧಿಸಿದ ನಂತರ, ಕೇಳುಗರು ಇದನ್ನು ನೆನಪಿನಲ್ಲಿಟ್ಟುಕೊಂಡಿರುವಂತೆ ಕಾಣುತ್ತಿರಲಿಲ್ಲ.
>
> *ಕಥೆ* ಮಾತ್ರದಲ್ಲಿ, ನನ್ನ ವೈಶಿಷ್ಟ್ಯವಾದ ಉದ್ದೇಶಗಳಿಗೆ ಸಮಾನಾಂತರವಾಗಿ ನಡೆಸುವ ಒಂದು ಸ್ಪಷ್ಟವಾದ ಉದ್ದೇಶವನ್ನು ಹೊಂದಿದೆ, ಆದರೆ ಒಂದು ದೊಡ್ಡ ವ್ಯತ್ಯಾಸವೆಂದರೆ, ಕೇಳುಗರು ನನ್ನ ಪ್ರಶ್ನೆಗಳಿಗೆ ಉತ್ತರಿಸುವಾಗ ತಾವೇ ಸ್ವಂತವಾಗಿ ನನ್ನ ಉದ್ದೇಶಗಳನ್ನು ಕಂಡುಹಿಡಿಯುವುದಕ್ಕೆ ಸಮರ್ಥರಾಗಿರುತ್ತಾರೆ. ತಮ್ಮಷ್ಟಕ್ಕೆ ತಾವೇ ಕಂಡುಹಿಡಿಯುವುದು ಅವರ ಹೃದಯಗಳಲ್ಲಿ ಮತ್ತು ಮನಸ್ಸಿನಲ್ಲಿ ಮುದ್ರೆಯನ್ನು ಹಾಕುತ್ತದೆ ಹಾಗೂ ಇದರ ಫಲಿತಾಂಶವಾಗಿ ನಾನು ಏನನ್ನು ಬೋಧಿಸುವುದಕ್ಕೆ ಬಯಸಿದ್ದೆನೋ ಅದನ್ನು ಅವರು ದೀರ್ಘಕಾಲ ನೆನಪಿನಲ್ಲಿಟ್ಟುಕೊಂಡಿರುವರು.

ಯಾರೂ ಅಲ್ಲ ಆದರೆ ದೇವರೇ ಆ ಕಥೆಯನ್ನು ಆರಿಸುತ್ತಾನೆ

ಒಂದೊಂದೇ ಕಥೆ ಕಲಿಸಿದರೆ ಒಳ್ಳೆಯದು ಎಂದು ಒಬ್ಬರು ತಿಳಿಸಿದರು. ಒಂದು ಕಥೆಯನ್ನು ಕಲಿಯುತ್ತಿರುವಾಗ ಸತ್ಯವೇದದ ಇತರ ಬಾಗಗಳನ್ನು ನೋಡುವುದು ಒಳ್ಳೆಯದು ಆದರೆ ಅದೇ ಕಥೆಯ ಬಾಗದಲ್ಲಿ ಹೆಚ್ಚು ಸಮಯ ಕಳೆದಾಗ ಇನ್ನೂ ಹೆಚ್ಚಾಗಿ ಕಲಿಯಬಹುದು. ಉದಾಹರಣೆಗೆ: ಒಂದು ಸಲ ಒಬ್ಬರು ಕೇಳಿದರು ಕ್ರಿಸ್ತನು ಸಕಲ ಪಾಪಗಳಿಗಾಗಿ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ತ್ಯಾಗ ಮಾಡುತ್ತಾರೆನೆಂದು ಸತ್ತಯವೇದದ ಅನೇಕ ಅಧ್ಯಾಯಗಳಲ್ಲಿ ನಾವು ನೋಡುತ್ತೇವೆ, ಆಗಾದರೆ ನಾವೇಕೆ ಅವಗಳೆಲ್ಲವನ್ನು ಒಟ್ಟಾಗಿ ಓದಬಾರದು (ಲೂಕ ೨೪:೨೭ ಹಾಗು ಅಪೋಸ್ತಲರ ಕೃತ್ಯಗಳನ್ನು ನೋಡಿ) ಅದಕ್ಕೆ ನಾನು ಸತ್ಯವೇದದಲ್ಲಿ ಇದರ ಬಗ್ಗೆ ಒಂದು ದೊಡ್ಡ ಚಿತ್ರಣವನ್ನು ಒಂದು ಅಧ್ಯಾಯಲ್ಲಿರುವಾಗ ನಾವು ಅನೇಕ ಅಧ್ಯಾಯಗಳನ್ನು ನೋಡುತ್ತಾ ಹೋದರೆ ಅದು ನಡತೆಯ ಸ್ವಭಾವನ್ನು ತಿಳಿಸುತ್ತದೆ, ನಾವು ಆತ್ಮೀಕವಾಗಿ ಕಲಿಯಬೇಕಾಗಿದೆ ಎಂದು ತಿಳಿಸಿದೆ.

ಇಂತಹ ಪ್ರಶ್ನೆಗಳಿಗೆ ನಾವು ಅನೇಕ ರೀತಿಯಲ್ಲಿ ಉತ್ತರ ಕೊಡಬಹುದು. ಕ್ರೀಸ್ತನ ವಿರೋದಿಗಳು ಆತನು ಶಿಲುಬೆಯಲ್ಲಿ ಸಾಯುವುದನ್ನು ಅವರು ಸಣ್ಣದಾಗಿ ನೊಡಿದರು. ಮಾನವನು ತಾನೆ ರಕ್ಷಣೆ ಹೊಂದರು ಅಸಾಯಕನಾಗಿದ್ದಾನೆ ಅದ್ದಕ್ಕೆ

ದೇವರೆ ಕ್ರೀಸ್ತನನ್ನು ಅವರಿಗೋಸ್ಕರ ಬಲಿ ಕೊಡಲು ತೀರ್ಮಾನಿಸುತ್ತಾನೆ ಅದು ಆವಿರೊಧಿಗಳಿಗೆ ತಿಳಿಯಲಿಲ್ಲ ಆದರೆ ರಕ್ಷಣೆ ಹೊಂದಿದ ನಮಗೆ ಗೊತ್ತಿದೆ.

ನಾವು ಕಲಿಯುವ ಪ್ರತಿ ಕಥೆಯಲ್ಲಿ ಬೋಧಿಸುವವರನು ಅದರ ಅರ್ಥವನ್ನು ತಿಳಿಸದಿದ್ದರು ಪವಿತ್ರಾತ್ಮನೆ ಸಹಾಯ ಮಾಡಿ ಅದರಲ್ಲಿರುವ ಗೂಡರ್ಥಗಳನ್ನು ಕಲಿಸಿಕೊಡುತ್ತಾನೆ. ಅಷ್ಟೆ ಅಲ್ಲದೆ ಆ ಕಥೆಯಲ್ಲಿ ಆಳವಾಗಿ ಕಲಿಯಲು ಸಹಾಯವಾಗುತ್ತದೆ. ಆದುದರಿಂದ ನಾವು ಕಥೆಯನ್ನು ಸಂಪೂರ್ಣವಾಗಿ ಹಾಗು ಆತ್ಮೀಕವಾಗಿ ಕಲಿಯಲು ಪ್ರೋತ್ಸಹಿಸುತ್ತೇವೆ.

ಲಚ್ಚರ್ ಪದ್ದತಿಯಲ್ಲಿ ಕಲಿಸುವಾಗ, ಬೋಧಿಸುವವನಿಗೆ ಯಾರು ರಕ್ಷಣೆಹೊಂದಿದ್ದಾರೆಂದು ತಿಳಿದುಕೊಳ್ಳಲು ಸಾದ್ಯವಾಗುವುದಿಲ್ಲ. ಅದು ಕೇವಲ ಬೊದಿಸುವವನ ಜ್ಞಾನವಗಿರುತ್ತದೆ ಆದುದರಿಂದ ಇತರರನ್ನು ರಕ್ಷಣೆಯಲ್ಲಿ ನಡೆಸಲು ಸಾದ್ಯಯವಾಗುವುದಿಲ್ಲ. ಆದರೆ ಎಸ್ ಟಿ ಎಸ್ ಮೂಲಕ ಎಲ್ಲರು ಒಟ್ಟಾಗಿ ಚರ್ಚಿಸುವಾಗ ಕಥೆ ಹೇಳುವವನಿಗೆ ಎಲ್ಲರ ಮನಸ್ಸನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ ಹಾಗು ಎಲ್ಲರು ಆತ್ಮೀಕ ವಿಷಯಗಳ ಬಗ್ಗೆ ಒಟ್ಟಾಗಿ ಚರ್ಚಿಸಲು ಸಹಾಯವಾಗುತ್ತದೆ.

ಎಲ್ಲರು ಒಟ್ಟಾಗಿ ಚರ್ಚಿಸುವಾಗ ದೇವರ ಬಗ್ಗೆ ತಿಳಿದುಕೊಳ್ಳಲು ಒಲವು ಮೂಡುತ್ತದೆ ಅಥವ ಏಸುಕ್ರಿಸ್ತನ ಬಗ್ಗೆ ತಿಳಿದುಕೊಳ್ಳಲು ಒಲವು ಮೂಡುತ್ತದೆ. ಕಥೆ ಹೇಳುವವನು ಅವರ ಅವಶ್ಯಕತೆಯ ಮೇರೆಗೆ ಆತ್ಮೀಕವಾಗಿ ಸಹಾಯ ಮಾಡುತ್ತಾನೆ. ಅಷ್ಟೆ ಅಲ್ಲದೆ ಕಥೆ ಹೇಳುವವನು ಸುಲುಬವಾಗಿ ಸುವಾರ್ತೆಯನ್ನು ತಿಳಿಸಬಹುದು ಹಾಗು ವಾಕ್ಯದ ಆದಾರದ ಮೇರೆಗೆ ಕ್ರಿಸ್ತನೇ ಸಕಲ ಪಾಪಗಳಿಗಾಗಿ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ತ್ಯಾಗ ಮಾಡುತ್ತಾರೆನೆಂದು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಇದರ ಬಗ್ಗೆ ಒಂದು ಸಾಕ್ಷಿಯನ್ನು ಮುಂದೆ ಓದಿರಿ.

ಪೂರ್ವ ಮತ್ತು ಉತ್ತರ ನೈಜೀರಿಯಾದಲ್ಲಿ *ಕಥೆ* ಮಾತ್ರದ ಐದು ಕಾರ್ಯಾಗಾರಗಳನ್ನು ನಡೆಸಲಾಗಿದೆ. ಮೂರು ತಿಂಗಳ ನಂತರ, ಬೋಧಕರು "ಅವರು ಇದನ್ನು ಸಾಧಿಸಿರುವರೇ" ಎಂಬುದನ್ನು ನೋಡಲು ನೈಜೀರಿಯಾಗೆ ಹಿಂತಿರುಗಿ ಹೋದರು. ತರಬೇತಿಯು ನಡೆಯುವಾಗಲಿಂದ ಅವರಿಗೆ ಏನೆಲ್ಲಾ ಕಲಿಸಲ್ಪಟ್ಟಿತ್ತೋ ಅದನ್ನು ನಾಲ್ಕು ಭಾಷೆಗಳಿಗೆ ಭಾಷಾಂತರಿಸಲಾಗಿತ್ತು, ಆದರೆ ಅವರಿಗೆ ಖಚಿತವಾಗಿ ತಿಳಿದಿರಲಿಲ್ಲ.

"ಅವರು ಅದನ್ನು ಮಾಡಿದ್ದು ಮಾತ್ರವಲ್ಲದೆ" ಇಂದು ಮುಂದುವರೆಸುತ್ತಾ, "ಅವರು ಅದನ್ನು ಅಭ್ಯಾಸ ಮಾಡಿ, ಅದನ್ನು ಉಪಯೋಗಿಸುವರು" ಎಂದು ಹೇಳಿದರು.

ಒಬ್ಬ ಸುವಾರ್ತಿಕನು ಈ ಬೋಧಕನಿಗೆ ತಾನು ಒಂಬತ್ತು ಮುಸ್ಲಿಂ ಪುರುಷರನ್ನು ಕರ್ತನ ಕಡೆಗೆ ನಡೆಸಿದೆನು ಎಂದು ಹೇಳಿದರು. ಈ ವ್ಯಕ್ತಿಗಳನ್ನು ತಲುಪಿದ ಸಂಗತಿ ಯಾವುದು ಎಂಬುದನ್ನು ಆ ಸುವಾರ್ತಿಕನು ಹಂಚಿಕೊಂಡನು. ಹೊಸ ವಿಶ್ವಾಸಿಗಳು, "ಕಥೆಯಲ್ಲಿರುವ ವ್ಯಕ್ತಿಗಳ ಕುರಿತಾಗಿ ನಮಗೆ ತಿಳಿದಿದೆ, ಆದರೆ ಖುರಾನ್ ನಮಗೆ ಸಂಪೂರ್ಣ ಕಥೆಯನ್ನು ಹೇಳುವುದಿಲ್ಲ ಮತ್ತು... ಯಾರೂ ಕೂಡ ನಮ್ಮೊಂದಿಗೆ ಇದನ್ನು ಚರ್ಚಿಸಿಲ್ಲ" ಎಂದು ಹೇಳಿದರೆಂದು ಆ ಸುವಾರ್ತಿಕನು ತಿಳಿಸಿದನು.

ಅವರನ್ನು ಮುಟ್ಟಿದಂತಹ ಯಾವ ಕಥೆಯನ್ನು ಅವರಿಗೆ ಹೇಳಿದೆ ಎಂದು ಕೇಳಿದಾಗ, ಆ ಸುವಾರ್ತಿಕನು, "ವಿಮೋಚನಕಾಂಡ 17ರಲ್ಲಿ ನಿಮಗೂ ಗೊತ್ತಿರುವಂತದ್ದು, ಮೋಶೆ ಮತ್ತು ಬಂಡೆಯ ಕುರಿತಾಗಿ" ಎಂದು ಹೇಳಿದನು.

ಕಥೆ ಮಾತ್ರದ ಹಿರಿಯ ಬೋಧಕನಾಗಿ, ಈ ಸುದ್ದಿ ನನಗೆ ಆಶ್ಚರ್ಯವನ್ನುಂಟು ಮಾಡಿತು. "ಆದರೆ ಈ ಕಥೆಯಲ್ಲಿರುವ ಯಾವ ಸಂಗತಿಯು ಅವರನ್ನು ಮುಟ್ಟುವಂತೆ ಮಾಡಿತು?" ಎಂದು ನಾನು ಕೇಳಿದೆ.

***ಕಥೆ* ಮಾತ್ರದ ಬೋಧಕರು ಹೀಗೆ ಹೇಳಿದರು:**

> "ಸುವಾರ್ತಿಕನು ನನಗೆ ಹೀಗೆ ಹೇಳಿದನು, ಹೊಸ ವಿಶ್ವಾಸಿಗಳು "ನಾವು ಕಥೆಯನ್ನು ಕೇಳಿ, ಅದರ ಕುರಿತಾಗಿ ಮಾತನಾಡಿದಾಗ, ಮೋಶೆಯು ಒಬ್ಬ ನಂಬಿಗಸ್ತನಾದ ನಾಯಕನೆಂದು ತಿಳಿಯಿತು, ಆದರೆ ಜನರು ಮೋಶೆಗೆ ಗೌರವವನ್ನು ತೋರಿಸುವವರಾಗಿರಲಿಲ್ಲ. ಆಗ ಮೋಶೆ ದೇವರ ಬಳಿಗೆ ಹೋಗಿ, ಈ ಜನರೊಂದಿಗೆ ಏನು ಮಾಡುವುದು ಎಂದು ಕೇಳಿದ್ದನ್ನು ಕಂಡು ನಾವು ಅಚ್ಚರಿಗೊಂಡೆವು. ಮೋಶೆಯು ಜನರಿಗಾಗಿ ಚಿಂತಿಸಿದನು! ನಮ್ಮ ನಾಯಕರುಗಳು ನಮಗಾಗಿ ಚಿಂತಿಸುವುದಿಲ್ಲ. ಮತ್ತು ಆಗ ದೇವರು ಜನರಿಗೆ ಶಿಕ್ಷೆ ಕೊಡಲಿಲ್ಲ. ಆತನು ಅವರಿಗೆ ನೀರನ್ನು ಕೊಟ್ಟನು. ಆತನು ಕರುಣೆಯನ್ನು ತೋರಿಸಿದನು. ನಾವು ಆ ದೇವರನ್ನು ತಿಳಿದುಕೊಳ್ಳಬೇಕು' ಎಂದು ಹೇಳಿದರು."

ನನ್ನೊಳಗೆ ನಾನು ಆಲೋಚಿಸಿದೆ. ನಾನು ಸುವಾರ್ತೆ ಸಾರುವುದಕ್ಕಾಗಿ ಆ ಮೋಶೆಯ ಕಥೆಯನ್ನು ಆಯ್ಕೆ ಮಾಡಿದ್ದೇನೋ? ಮುಸ್ಲಿಮರಿಗೆ ಇದು ಒಳ್ಳೆಯ ಕಥೆ ಎಂಬ ನನ್ನ ಪಟ್ಟಿಯಲ್ಲಿ ಈ ಕಥೆಯು ಇದೆಯೇ? ಯಾವುದೇ ಕಾರಣಕ್ಕು ನಾನು ಕಥೆಯನ್ನು ಮೊದಲೆ ಆರಿಸಿಕೊಳ್ಳುವುದಿಲ್ಲ. ಅತ್ಮೀಕವಾಗಿ ಹೆಚ್ಚಾಗಿ ತಿಳಿದುಕೊಳ್ಳಲು ದೇವರೆ ಸಹಾಯ ಮಾಡುತ್ತಾನೆ.

ಆ ಕಥೆಯು ನನ್ನ ಪಟ್ಟಿಯಲ್ಲಿದೆಯೋ ಅಥವಾ ಇಲ್ಲವೋ, ಅದನ್ನು ಲೆಕ್ಕಿಸುವುದಿಲ್ಲ, ಆದರೆ ಇದು ಪವಿತ್ರಾತ್ಮನ ಪಟ್ಟಿಯಲ್ಲಿತ್ತು! ಇದನ್ನು ನಾವು ಹೆಚ್ಚೆಚ್ಚಾಗಿ *ಕಥೆ* ಮಾತ್ರವನ್ನು ಉಪಯೋಗಿಸುವುದರಲ್ಲಿ ನೋಡುತ್ತೇವೆ. ದೇವರ ವಾಕ್ಯವು, ಆತನು ಬರೆದಂತೆಯೇ ಸಂಪೂರ್ಣವಾಗಿ ಹೇಳಲ್ಪಟ್ಟಾಗ, ಮತ್ತು ಚರ್ಚೆಯ ಮೂಲಕ ಕಲಿಯುವವರಿಂದ ಇದರ ನಿಧಿಗಳು ಕಂಡುಹಿಡಿಯಲ್ಪಟ್ಟಾಗ, ಅಸಾಧಾರಣವಾದ ಬಲವು ಬಿಡುಗಡೆಯಾಗುತ್ತದೆ!

ವಿಮೋಚನಕಾಂಡ ೧೭ರ ಕಥೆ ಕಲಿಯುವವರಿಗೆ ಅದರ ಮುಂದೆ ಬರುವ ಕಥೆಯನ್ನು ಕಲಿಯಿರಿ ಎಂಬುದಾಗಿ ನಾವು ಪ್ರೋತ್ಸಾಹಿಸುತ್ತೇವೆ. ಈ ಕಥೆಯನ್ನು ಚರ್ಚೆಯ ಮೂಲಕ ಕಲಿಯುವವರು ದೇವರು ಬಂಡೆಯ ಮೂಲಕ ನೀರನ್ನು ತಂದರು ಎಂದು ಚನ್ನಾಗಿ ಅರ್ಥಮಾಡಿಕೊಂಡಿರುತ್ತಾರೆ ಆಗ ಅವರು ಮುಂದೆ ಬರುವ ಕಥೆಯನ್ನು ೧ ಕೊರಿಂತದವರಿಗೆ ಬರೆದ ಪತ್ರಿಕೆ ೧೦:೧–೬ ಓದಿದಾಗ ಅವರು ತುಂಬಾ ಆನಂದ ಪಡುತ್ತಾರೆ ಮತ್ತು ಹಿಂದಿನ ಕಥೆಯ ಆತ್ಮೀಕತೆಯಾದ ದೇವರು ಬಂಡೆಯ ಮೂಲಕ ನೀರನ್ನು ತಂದರು ಎಂಬುದರ ಬಗ್ಗೆ ಚನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. "ಅವರೆಲ್ಲರೂ ದೈವಿಕವಾದ ಆಹಾರವನ್ನು ತಿಂದರು, ಅವರೆಲ್ಲರೂ ದೈವಿಕವಾದ ಇಂದೇ ನೀರನ್ನು ಕುಡಿದರು. ಹೇಗಂದರೆ ಅವರ ಹಿಂದೆ ಹೋಗುತ್ತದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು ಆ ಬಂಡೆ ಕ್ರಿಸ್ತನು". ಕಲಿರುವವರು ಇದನ್ನು ನೋಡಿದಾಗ ಅವರಿಗೆ ಕ್ರಿಸ್ತನ ದೈವತ್ವದ ಚಿತ್ತಣದ ಬಗ್ಗೆ ಸಂಪೂರ್ಣವಾಗಿ ತಿಳಿಯುತ್ತದೆ.

ಬಿಡುಗಡೆಯ ಅಂಶದ ಬಗ್ಗೆ ಮಾತನಾಡೋಣ ! ದೇವರ ಏರ್ಪಾಟಿನ ಬಗ್ಗೆ ಈ ಎರಡು ಕಥೆಗಳು ಒಂದರ ಜೊತೆಗೆ ಒಂದು ತಿಳಿಸುತ್ತದೆ. ಆಗಾದರೆ ಎರಡನೆಯ ಕಥೆಯು *ಮುಸ್ಲಿಮರ ಮಧ್ಯದಲ್ಲಿ ಸೇವೆ ಮಾಡಲು ಸಹಾಯ*

ಮಾಡುತ್ತದೆಯೇ? ಇಲ್ಲ. ಅಲ್ಲವಾ_. ನೈಜೀರಿಯದ ಸೇವಕನು ಮೋಶೆಯ ಕಥೆಯ ಬಗ್ಗೆ ಕೊಟ್ಟ ಸಾಕ್ಷಿಯನ್ನು ಗಮನಿಸಿದಿರೋ_ ದೇವರನ್ನು ಕಂಡುಕೊಳ್ಳುವುದು ಹೇಗೆ ಎಂದು ಸುಮಾರು ೯ ಜನರು ಅವರನ್ನು ಪ್ರಶ್ನೆ ಕೇಳಿದರು. ಅವರು ದೇವರ ಕರುಣೆಯ ಬಗ್ಗೆ ತಿಳಿದುಕೊಳ್ಳಲು ಇಷ್ಟಪಡುತ್ತಿದ್ದರು. ಇದು ದೇವರ ಕರುಣೆಯೇ ಸರಿ. ಆತನು ತನ್ನ ಭಕ್ತರಿಗೆ ಮಹಾಕರುಣೆಯನ್ನು ತೋರಿಸುತ್ತಾನೆ. ಮೋಶೆಯ ಕಥೆ ಹೇಳಿದ ಸುವಾರ್ತಿಕನು ಆ ೯ ಜನರಿಗೆ ದೇವರ ಬಗ್ಗೆ ನಂಬಿಕೆ ಇಡಲು ಈ ಕಥೆಯನ್ನು ಉಪಯೊಗಿಸಿಕೊಂಡು ದೇವರ ಮಗನಾದ ಯೇಸು ಕ್ರಿಸ್ತನ ಮೂಲಕ ರಕ್ಷಣೆ ಇದೆ ಎಂದು ತಿಳಿಸಿದರು.

ಪತ್ರಿಕೆಗಳ ಕುರಿತಾಗಿ ಏನು ಹೇಳುವುದು?

ಆದರೆ ಸತ್ಯವೇದವನ್ನು ಅದರ ಕಥೆಗಳನ್ನು ಉಪಯೋಗಿಸಿಕೊಂಡು ಮೌಖಿಕ ವಿಧಾನಗಳಲ್ಲಿ ಸುತ್ತಲ್ಪಟ್ಟಂತೆ ಬೋಧಿಸುವ ಈ ನಿದರ್ಶನದ ರೀತಿಯನ್ನು ಪರಗಣಿಸಿದಾಗ, ದೇವರ ಎಲ್ಲಾ ವಾಕ್ಯಗಳನ್ನು ಪ್ರೀತಿಸುವವರು, ಮತ್ತು ದೇವರ ಎಲ್ಲಾ ಸಲಹೆಯು ಸಂಬಂಧಪಟ್ಟಿರುವಂತಹುದು ಎಂಬುದನ್ನು ತಿಳಿದವರು, ಈ ಪ್ರಶ್ನೆಯನ್ನು ಕೇಳುವರು: "ಪತ್ರಿಕೆಗಳ ಕುರಿತಾಗಿ ಏನು ಹೇಳುವಿರಿ?" ನಾವು ಪರಿಗಣನೆಗಾಗಿ ಅಸಂಖ್ಯಾತ ಪ್ರತಿಕ್ರಿಯೆಗಳನ್ನು ಕೊಡುವೆವು.

ಒಂದು ಈ ರೀತಿಯಾಗಿದೆ: ದೀರ್ಘಕಾಲದವರೆಗೆ ಸತ್ಯವೇದದ ಕಥೆಗಳನ್ನು ಸ್ವಲ್ಪಸ್ವಲ್ಪವಾಗಿ ಪರೀಕ್ಷಿಸಿ, ಸರಿಯಾಗಿ ಕ್ರಮದಲ್ಲಿಡದೆ ಹಾಗೂ ಸಾಂಪ್ರದಾಯಿಕ ಸಂದೇಶಗಳನ್ನು ಹೇಳುವುದಕ್ಕೆ ಉತ್ತೇಜಕವಾಗಿ ಮಾತ್ರ ಉಪಯೋಗಿಸಲಾಗಿದೆ. ದುಃಖಕರವಾಗಿ, ಮೌಖಿಕ ಕೇಳುಗರಿಂದ ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ, ಈ ಕಥೆಗಳನ್ನು ಅವುಗಳ ಬರೆಯಲ್ಪಟ್ಟಿರುವ ಹಾಗೆಯೇ ಸಂಪೂರ್ಣವಾಗಿ ಕೇಳಿಸಿಕೊಳ್ಳುವ ಅಗತ್ಯವಿದೆ.

ಈ ಭೂಲೋಕದಲಿವೀಗ ವಾಸವಾಗಿರುವವರು ಸತ್ಯವೇದದ ಶೇಕಡ 75 ಭಾಗವನ್ನು ಶೇಕಡ 80ರಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದರೆ, ಅದಕ್ಕೆ ಖಂಡಿತವಾಗಿ ನಾವೆಲ್ಲರೂ ಸಂತೋಷವನ್ನು ಆಚರಿಸುತ್ತಿದ್ದೆವು.

ಸತ್ಯವೇದಕ್ಕನುಗುಣವಾದ ಮತ್ತು ಬಲವಾದ ಈ ವಿಧಾನವನ್ನು ಬೋಧಿಸುವುದಕ್ಕೆ ಹಾಗೂ ಪ್ರಸಂಗಿಸುವುದಕ್ಕೆ ಒಂದು ಮಾರ್ಗವೆಂದು ಕಂಡುಹಿಡಿಯುತ್ತಿರುವ ಕ್ರೈಸ್ತ ವಿದ್ಯಾವಂತರನ್ನು, ಸಭಾಪಾಲಕರುಗಳನ್ನು ಮತ್ತು ಮಿಶಿನರಿಗಳನ್ನು ಕಂಡು ನಾವು ಪ್ರೋತ್ಸಾಹಗೊಂಡಿದ್ದೇವೆ. *ಕಥೆ* ಮಾತ್ರದ ಪರಿಣಾಮವು ಸಿದ್ಧಾಂತಕ್ಕಿಂತಲೂ ಮಿಗಿಲಾಗಿ ಹೋಗುವಂತಹುದಾಗಿದೆ. ಈ ಮೌಖಿಕ ಆಧಾರವುಳ್ಳ ವಿಧಾನದಲ್ಲಿ ಕಥೆಗಳನ್ನು ಅವುಗಳ ಸಂಪೂರ್ಣತೆಯಲ್ಲಿ ನಿರೂಪಿಸುವುದಕ್ಕೆ ಮತ್ತು ಅವುಗಳನ್ನು ಆಳವಾಗಿ ಚರ್ಚಿಸುವುದಕ್ಕೆ ಸಾಹಸ ಮಾಡುವವರು ಮತ್ತು ಪ್ರಯತ್ನಿಸುವವರು, ಸಮರ್ಥನೀಯವಾದ, ಸಕಾರಾತ್ಮಕವಾದ ಫಲಿತಾಂಶಗಳನ್ನು ಕಾಣುತ್ತಿರುವರು.

ವಾಕ್ಯಗಳನ್ನು ಬೋಧಿಸುವುದಕ್ಕೆ ಉಪಯೋಗಿಸುವ ಅಧಿಕವಾದ ಸಾಮಾನ್ಯ ಶೈಲಿಯಿಂದ ಯಾರಿಗೆ ಕಲಿಯಲು ಸಾಧ್ಯವಿಲ್ಲವೋ ಅಥವಾ ಕಲಿಯುವುದಕ್ಕೆ ಅರ್ಹತೆ ಇಲ್ಲವೋ ಅವರಿಂದ ಸತ್ಯವೇದದ ಶೇಕಡ 75ರಷ್ಟು ಭಾಗವು ಅರ್ಥಮಾಡಿಕೊಳ್ಳಲಾಗುತ್ತಿದೆ ಮತ್ತು ಇನ್ನಿತರರಿಗೆ ಸಾರಲ್ಪಡುತ್ತಿದೆ ಎಂಬುದನ್ನು ಇವರು ಖಿದ್ದಾಗಿ ನೋಡುತ್ತಿರುವರು, (ಲೋಕದ ಶೇಕಡ 80ರಷ್ಟು), ಸುಮಾರು ೯೦ ದೇಶಗಳಲ್ಲಿ ಉಪಯೋಗಿಸುತ್ತಿದ್ದಾರೆ.

ಕಥೆ ಮಾತ್ರವನ್ನು ಪರಿಚಯಿಸಲ್ಪಟ್ಟ ದೇಶಗಳಲ್ಲಿ ಈ ವಾಸ್ತವವು ಸಾಕ್ಷಿಯನ್ನು ಕೊಟ್ಟಿದೆ. ಮೊದಲ ವರ್ಷದಲ್ಲಿ ಕಥೆ ಮಾತ್ರವನ್ನು ಸುಮಾರು 90 ದೇಶಗಳಲ್ಲಿ ಪರಿಚಯಿಸಲಾಗಿತ್ತು, ಈ ಬೋಧನೆಯ ವಿಧಾನಕ್ಕೆ ಸೇರಿಸಲ್ಪಟ್ಟಂತಹ ಕಲಿಯುವ ಜನರು ಅಂತಿಮವಾಗಿ ತಾವು ಸತ್ಯವೇದವನ್ನು ಅರ್ಥಮಾಡಿಕೊಳ್ಳಲು ಶಕ್ತರಾದೆವೆಂದು ಉಲ್ಲಾಸಿಸುತ್ತಿದ್ದರು.

ಇದು ಬಹಳ ಉನ್ನತವಾಗಿ ಬಳೆಯಿತು, ಪಿಲ್ಲಿಪಿಯನ್ಸ್ ನಲ್ಲಿ ಸುಮಾರು ೩ ತರಬೇತಿಗಳನ್ನು ನಡೆಸಿದೆವು. ನಾಲ್ಕು ತಿಂಗಳಾದ ಮೇಲೆ ಅವರು ನಮಗೆ ಒಂದು ವರದಿ ಕಳಿಸಿಕೊಟ್ಟರು. " ತರಬೇತಿ ಹೊಂದಿದ ನಾಯಕರನ್ನು ನಾನು ಸಂದಿಸಿದಾಗ ನನಗೆ ಅವರು ತಿಳಿಸಿದರು ಸುಮಾರು ೨೫ ಭಾಷೆಗಳಲ್ಲಿ ೧,೪೦೦ ನಾಯಕರು ಎಸ್ ಟಿ ಎಸ್ ಮೂಲಕ ತರಬೇತಿ ಹೊಂದಿದ್ದಾರೆ ಎಂದು ತಿಳಿಸಿದರು.

ಅಮೇರಿಕದಲ್ಲಿ ವಿಕ್ಲಿಪ್ ತರ್ಜುಮೆದಾರರು ಕೂಡ ಎಸ್ ಟಿ ಎಸ್ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಇವರು ಪಿಲ್ಲಿಪಿಯನ್ಸ್ ನ ಕೆಲವು ಹಳ್ಳಿಯ ನಾಯಕರನ್ನು ಈ ತರಬೇತಿಗೆ ಕಳುಹಿಸಿದರು. ಅವರು ತರಬೇತಿ ಪಡೆದ ನಾಲ್ಕು ತಿಂಗಳಾದ ಮೇಲೆ ತಮ್ಮ ಊರಲ್ಲೇ ಒಂದು ಎಸ್ ಟಿ ಎಸ್ ತರಬೇತಿಯನ್ನು ನಡೆಸಿದರು. ಅಮೇರಿಕದ ವಿಕ್ಲಿಪ್ ತರ್ಜುಮೆದಾರರು ಈ ರೀತಿ ಬರೆಯುತ್ತಾರೆ... ವಿಧ್ಯಾವಂತರಾದ ಸಭಾಪಾಲಕರು ನೀವು ಯಾವಾಗ ಮತ್ತೆ ಬಂದು ನಮಗೆ ಹೆಚ್ಚಾಗಿ ಕಲಿಸುತ್ತೀರಿ ಎಂದು ಕೇಳಿದರು. ಅವರಿಗೆ ಕಲಿಸಿದವರಲ್ಲಿ ಮೂವರು ಅವಿಧ್ಯಾವಂತರಾಗಿದ್ದರೆಂದು ಅವರಿಗೆ ತಿಳಿದಿರಲಿಲ್ಲ.

ಹೊಸದಾಗಿ ಬಲಗೊಂಡಿರುವ ಈ ಮೌಖಿಕ ಕಲಿಯುವವರು, ಇವರಲ್ಲಿ ಅನೇಕರು ಅನಕ್ಷರಸ್ಥರು, ಇವರು ತಾವು ಅರ್ಥಮಾಡಿಕೊಂಡಿರುವುದನ್ನು ಬೇರೆಯವರೊಂದಿಗೆ ಬಹಳ ಹುರುಪಿನಿಂದ ಕಥೆಗಳನ್ನು ಹಂಚಿಕೊಳ್ಳುತ್ತಿರುವರು. ಆತ್ಮೀಕ ಫಲದ ಮುಂದುವರೆಯುತ್ತಿರುವುದರ ಉಪಯೋಗ ಮತ್ತು ಆಸ್ತಿಯು ದೇವರ ವಾಕ್ಯದ ಬಲಕ್ಕೆ ಒಂದು ಸಾಕ್ಷಿಯಾಗಿದೆ, ಇದು ಇದರ ಮೂಲರೂಪದಲ್ಲಿ "ಸುತ್ತಿಟ್ಟಾಗ," ಅದು ಕಥೆಯಾಗಿದೆ.

ಆಹ್, ಆದರೂ ಸಹ... ಪತ್ರಿಕೆಗಳ ಕುರಿತಾಗಿ ಏನು ಹೇಳುವುದು?

ಕಥೆ ಮಾತ್ರದ ಮೂಲ ತತ್ವಗಳನ್ನು ಸತ್ಯವೇದದ ಯಾವುದೇ ಭಾಗಕ್ಕೆ ಅಳವಡಿಸಿಕೊಳ್ಳಬಹುದಾಗಿದೆ.

ಪತ್ರಿಕೆಗಳಿಂದ ಕೆಲವು ವಾಕ್ಯಭಾಗಗಳನ್ನು *ಕಥೆ* ಮಾತ್ರದ ಶೈಲಿಯನ್ನು ಶೇಕಡ 100ರಷ್ಟು ಸುಲಭವಾಗಿ ನಿರೂಪಿಸಬಹುದೆಂಬುದನ್ನು ನಾವು ಕಾರ್ಯಾಗಾರಗಳಲ್ಲಿ ಬೋಧಿಸುತ್ತೇವೆ. ನಾವು ಅನೇಕಬಾರಿ ಕಾರ್ಯಾಗಾರಗಳಲ್ಲಿ ಪತ್ರಿಕೆಗಳಿಂದ ಮತ್ತು ಕೀರ್ತನೆಗಳಿಂದ ಒಂದು ಕಥೆಯನ್ನು ನಿರೂಪಿಸುವುದಕ್ಕಾಗಿ ಮತ್ತು ತೋರ್ಪಡಿಸುವುದಕ್ಕಾಗಿ ಸೇರಿಸಿಕೊಳ್ಳುತ್ತೇವೆ. ಸತ್ಯವೇದದ ಈ ವಿಭಾಗಗಳು ಕಥೆಗಳಾಗಿ ಸ್ವಲ್ಪ ಕಡಿಮೆಯಾಗಿ ಗುರುತಿಸಲ್ಪಡುತ್ತವೆ, ಆದರೆ ಪತ್ರಿಕೆಯಲ್ಲಿರುವ ಅನೇಕ ವಿಭಾಗಗಳು, ಕೀರ್ತನೆಗಳ ಪುಸ್ತಕಗಳು ಮತ್ತು ಪ್ರವಾದಿಗಳು ಕಣ್ಣಿಗೆ ಗೋಚರವಾಗುವಂತವುಗಳು ಮತ್ತು ಗ್ರಹಿಸಬಲ್ಲ ಕಥೆಗಳಾಗಿವೆ ಎಂಬುದನ್ನು ನಾವು ತೋರಿಸುತ್ತೇವೆ. ಹಾಗಾಗಿ, ಅವುಗಳನ್ನು *ಕಥೆ* ಮಾತ್ರದ ವಿಧಾನವನ್ನು ಉಪಯೋಗಿಸಿಕೊಂಡು ಬಹಳ ಪರಿಣಾಮಕಾರಿಯಾಗಿ ನಿರೂಪಿಸಬಹುದಾಗಿದೆ.

ಐದು ವಚನಗಳ ಮೊದಲನೆಯ ಕೀರ್ತನೆಯು ನಿಮಗೆ ಚೆನ್ನಾಗಿ ತಿಳಿದಿದ್ದರೆ, ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ಕೀರ್ತನೆ ಒಂದರಲ್ಲಿರುವ ಎರಡು ಬಗೆಯ ವ್ಯಕ್ತಿಗಳು ಏನು ಮಾಡುತ್ತಿರುವರು ಎಂಬುದನ್ನು ನೋಡಿ. ಅವರ

ಆಯ್ಕೆಗಳ ಕಡೆಗೆ ಜಾಗ್ರತೆಯಿಂದ ನೋಡಿ, ಅವರು ಏನನ್ನು ಆಯ್ಕೆ ಮಾಡಿಕೊಂಡಿರುವರು ಮತ್ತು ಫಲಿತಾಂಶಗಳು ಹಾಗೂ ಅವರ ಆಯ್ಕೆಗಳ ಪರಿಣಾಮಗಳು. ದೇವರು ಅವರ ಜೀವಿತಗಳಲ್ಲಿ ಹೇಗೆ ಪರಿಣಾಮವನ್ನು ಬೀರುತ್ತಿರುವನು ಮತ್ತು ನೀವು ದೇವರ ಯಾವ ಗುಣಲಕ್ಷಣವನ್ನು ನೋಡುತ್ತಿರುವಿರಿ ಎಂದು ಗಮನಿಸಿ.

ಪುನಃ ನಿಮ್ಮ ಕಣ್ಣುಗಳನ್ನು ಮುಚ್ಚಿ, ಕೀರ್ತನೆ 23ರ ಕುರಿಯ ನಿರೂಪಕನು ತನ್ನ ಕುರುಬನನ್ನು ಮಧುರವಾಗಿ ಮತ್ತು ವೈಯಕ್ತಿಕ ರೀತಿಯಾಗಿ ವರ್ಣಿಸುತ್ತಿರುವುದನ್ನು ನಿಮ್ಮ ಮನಸ್ಸಿನಲ್ಲಿ ನೋಡಿ. ಆ ಕುರಿ ಹೇಳುವುದನ್ನು ಚೆನ್ನಾಗಿ ಕೇಳಿಸಿಕೊಳ್ಳಿ. ನೀವು ಪೂರ್ಣ ಕಥೆಯನ್ನು ನೋಡಿದ ನಂತರ ಮಾತ್ರವೇ ನೀವು ಕಥೆಯಲ್ಲಿ ಏನು ಗಮನಿಸಿದಿರೋ (ಅವಲೋಕನ) ಅದರಿಂದ ಅನ್ವಯಿಸುವಿಕೆಯ ಪ್ರಶ್ನೆಗಳನ್ನು ಕೇಳಿ. ಇಂದು ಕುರಿ–ಜನರಾಗಿ ನಮಗೆ ಮತ್ತು ಕುರುಬನಾಗಿ ಯೇಸುವಿಗೆ ಯಾವುದು ಅನ್ವಯಿಸುತ್ತದೆ?

ಯೆಶಾಯ 1:10-20, ರೋಮ 1:14-25 ಮತ್ತು ಯಾಕೋಬ 1:22-27ರಲ್ಲಿನ ಕಥೆಯ ಕಡೆಗೆ ನೋಡುವುದಕ್ಕೆ ಪ್ರಯತ್ನಿಸಿ. ಅಂಗೀಕರಿಸುವಂತೆ, ಒಂದು ಮಟ್ಟದ ಕಥೆಯನ್ನು ಅದರ ಸಂಭಾಷಣೆಯೊಂದಿಗೆ ಮತ್ತು ಜನರು ಜೀವನದ ಒಂದು ಭಾಗವನ್ನು ಅನುಭವಿಸುತ್ತಿರುವುದರ ನೆನಪನ್ನು ಇಟ್ಟುಕೊಳ್ಳುವುದಕ್ಕಿಂತಲೂ ಮೇಲಿನ ವಾಕ್ಯಭಾಗಗಳು ನೆನಪಿನಲ್ಲಿಟ್ಟುಕೊಳ್ಳಲು ದೊಡ್ಡ ಸವಾಲಾಗಿರುತ್ತದೆ. ಆದರೆ ನಿಧಾನವಾಗಿ ಚಲಿಸಿ, ಪಾತ್ರಗಳು ಏನು ಹೇಳುತ್ತಿವೆ, ಮಾಡುತ್ತಿವೆ ಮತ್ತು ಅವು ಯಾವ ಆಯ್ಕೆಗಳನ್ನು ಮಾಡುತ್ತಿವೆ ಎಂಬುದನ್ನು ಗಮನಿಸಿ. ಆ ಆಯ್ಕೆಗಳ ಫಲಿತಾಂಶಗಳನ್ನು ಮತ್ತು ಪರಿಣಾಮವನ್ನು ನೀವು ನೋಡುವಿರಿ.

ಈ ವಾಕ್ಯಭಾಗಗಳಲ್ಲಿ ಸ್ಪಷ್ಟವಾಗಿ, ದೇವರು ತನ್ನ ಗುಣಲಕ್ಷಣವನ್ನು ಅನೇಕ ರೀತಿಗಳಲ್ಲಿ ಪ್ರಕಟಿಸುತ್ತಾನೆ. ಪುನಃ, *ಕಥೆ* ಮಾತ್ರದ ತತ್ವಗಳನ್ನು ಉಪಯೋಗಿಸಿಕೊಳ್ಳಿ. ಆರಂಭದಲ್ಲಿ, ನೀವು ಕಂಡುಹಿಡಿದ ಆತ್ಮೀಕ ಅವಲೋಕಗಳನ್ನು ಕಥೆಯಲ್ಲಿರುವವರಿಗೇ ಸೀಮಿತವಾಗಿಡಿ. ಇದನ್ನು ಮುಗಿಸಿದ ನಂತರ ಮಾತ್ರವೇ ಇಂದು ಕಥೆಯನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಪುನಃ ಹೋಗಿ ಪರಿಗಣಿಸಬೇಕು. ಪುನಃ "ಕಥೆಯ" ಪ್ರಾರಂಭದಿಂದ ಆರಂಭಿಸಿ. ಪ್ರತಿಯೊಂದು ಅವಲೋಕನವೂ ಇಂದಿನ ಜನರಿಗೆ ಹೇಗೆ ಅಳವಡಿಸಿಕೊಳ್ಳಬಹುದಾಗಿದೆ ಎಂಬುದನ್ನು ಕಂಡುಹಿಡಿಯಲು ಪ್ರಶ್ನೆಗಳನ್ನು ಉಪಯೋಗಿಸಿ.

ಇಡೀ ಸತ್ಯವೇದದಲ್ಲಿ ನಾವು ಮೂರು ವಿಧದ ವಾಕ್ಯಭಾಗಗಳನ್ನು ಕಂಡುಕೊಳ್ಳುತ್ತೇವೆ:

- ಕಥೆಯ ವಾಕ್ಯಭಾಗಗಳು.
- ಕಿರು–ಕಥೆಯ ವಾಕ್ಯಭಾಗಗಳು.
- ಕಥೆಯ ರೂಪದಲ್ಲಿರದ ವಾಕ್ಯಭಾಗಗಳು.

ಈ ಮೂರು ವಿಧಗಳಲ್ಲಿ ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಕಥೆಯ ವಾಕ್ಯಭಾಗಗಳು ಬಹಳ ಸುಲಭವಾದುದಾಗಿದೆ.

ಕಥೆಯ ವಾಕ್ಯಭಾಗಗಳನ್ನು ಮನೋನೇತ್ರಗಳೊಂದಿಗೆ ನೋಡಬಹುದಾಗಿದೆ. ಭೌತಿಕ ಲೋಕದಲ್ಲಿ ಜರುಗಿದಂತ ಘಟನೆಗಳೇ ಕಥೆಗಳಾಗಿವೆ. ಇವು ಪರಸ್ಪರ ಪ್ರಭಾವ ಬೀರುವವುಗಳಾಗಿವೆ ಮತ್ತು ಇವುಗಳಿಗೆ ಪಾತ್ರಗಳು, ಕ್ರಿಯೆಗಳು ಮತ್ತು ಸಂಭಾಷಣೆಗಳು ಇವೆ. ಇದರ ಫಲಿತಾಂಶವಾಗಿ, ಕಥೆಗಳನ್ನು ಪಾತ್ರಗಳೊಂದಿಗೆ ಅನುಭವಿಸಬಹುದಾಗಿದೆ; ಅವುಗಳನ್ನು ನೋಡಬಹುದು, ಕೇಳಿಸಿಕೊಳ್ಳಬಹುದು ಮತ್ತು ಅನುಭವಿಸಬಹುದು.

ಕಿರು–ಕಥೆಯ ವಾಕ್ಯಭಾಗಗಳು ಕಲಿತುಕೊಳ್ಳುವುದಕ್ಕೆ ಸ್ವಲ್ಪ ಹೆಚ್ಚಿನ ಸವಾಲಾಗಿವೆ. ಅವು ಹೇಳಲ್ಪಡುವುದಕ್ಕೆ ಕಥೆಯಷ್ಟಿಲ್ಲದಿದ್ದರೂ ಸಹ, ಅವುಗಳಲ್ಲಿ ಗೋಚರವಾಗುವ ವಿಭಾಗಗಳನ್ನು ಅವು ಒಳಗೊಂಡಿವೆ, ಹಾಗಾಗಿ ನಾವು ಏನನ್ನು "ನೋಡುವೆವೋ" ಹಾಗೂ ಏನನ್ನು ಕೇಳಿಸಿಕೊಳ್ಳುವೆವೋ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳಬಹುದಾಗಿದೆ. ಕಿರು–ಕಥೆಯ ವಾಕ್ಯಭಾಗಗಳು ಪ್ರಭಾವ ಬೀರುವುದರಲ್ಲಿ ಕಡಿಮೆಯಾಗಿರುತ್ತವೆ ಮತ್ತು ಇವು ವಿಷಯದಲ್ಲಿ ವಿವರಣಾತ್ಮಕವಾಗಿವೆ. ಪ್ರವಾದಿಗಳಲ್ಲಿ ಅನೇಕರು ಈ ಕಿರು–ಕಥೆಯ ವಿಭಾಗಕ್ಕೆ ಸರಿಹೊಂದುವರು. ಕಿರು–ಕಥೆಗಳಿಗೆ ಉದಾಹರಣೆಗಳು, ಕೀರ್ತನೆ 1, ರೋಮ 11 ಮತ್ತು ಯಾಕೋಬನ ಪತ್ರಿಕೆಯ ಅನೇಕ ಭಾಗಗಳು.

ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಬಹಳ ಕಷ್ಟವಾದುದೆಂದರೆ ಅದು ಕಥೆಯ ರೂಪದಲ್ಲಿರದ ವಾಕ್ಯಭಾಗಗಳು, ಏಕೆಂದರೆ ಗೋಚರವಾಗುವುದರಲ್ಲಿ ಇದು ಮೂರರಲ್ಲಿ ಬಹಳ ಕನಿಷ್ಟ ಪ್ರಮಾಣದ್ದಾಗಿದೆ. ಇವು ಬೋಧನೆಯ ವಿವರಣಾತ್ಮಕ ಪ್ರವೃತ್ತಿಯದಾಗಿದ್ದು, ಅನೇಕ ಬಾರಿ ಸ್ವಭಾವದಲ್ಲಿ ವಿಷಯಗಳಿಗೆ ಸಂಬಂಧಿಸಿರುವಂತಹುದಾಗಿರುತ್ತದೆ. ಪತ್ರಿಕೆಗಳ ಅನೇಕ ಭಾಗಗಳನ್ನು ಕಥೆಯ ರೂಪದಲ್ಲಿರದ ವಾಕ್ಯಭಾಗಗಳಾಗಿ ಪರಿಗಣಿಸಲಾಗುತ್ತದೆ.

ಪತ್ರಿಕೆಗಳಲ್ಲಿನ ಅನೇಕ ಭಾಗಗಳು ಕಥೆಯ ರೂಪದಲ್ಲಿರದ ವಾಕ್ಯಭಾಗಗಳಾಗಿ ಪರಿಗಣಿಸಲಾಗಿದ್ದರೂ ಸಹ, *ಕಥೆ* ಮಾತ್ರದ ಬಹುತೇಕ ವಿಧಾನಗಳ ಉಪಯೋಗದಿಂದ ಅವುಗಳನ್ನು ನಿರೂಪಿಸಬಹುದು ಮತ್ತು ಕಲಿಸಬಹುದಾಗಿದೆ. ಚೆನ್ನಾಗಿ ಹೇಳಲ್ಪಟ್ಟ ಕಥೆಗಳು ಕೇಳುಗರನ್ನು ಸೆಳೆಯುತ್ತವೆ. ಪತ್ರಿಕೆಗಳು ವಿಷಯಾಸಕ್ತಿಯ ಪತ್ರಗಳಾಗಿದ್ದು, ವಿಷಯಾಸಕ್ತಿಯ ದೇವರ ಮೂಲಕ ವಿಷಯಾಸಕ್ತಿಯಿರುವ ಜನರಿಂದ ಬರೆಯಲ್ಪಟ್ಟಿವೆ. ಸಿದ್ಧತೆ ಮಾಡಿಕೊಳ್ಳುವಾಗ ಬೋಧಕರು ಆ ವಿಷಯಾಸಕ್ತಿಯನ್ನು ಗುರುತಿಸಲೇಬೇಕು, ಮತ್ತು ಆ ಮಾತುಗಳನ್ನು ಬೇರೆಯವರಿಗೆ ಅದೇ ಅತ್ಯಾಸಕ್ತಿಯೊಂದಿಗೆ ಓದಬೇಕು ಅಥವಾ ಹೇಳಬೇಕು.

ಸೇವೆಯಲ್ಲಿ, ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟ ಎಂಬುದನ್ನು ನಿಭಾಯಿಸುವುದಕ್ಕಿರುವ ಒಂದು ಮಾರ್ಗವೆಂದರೆ, ನೀವು ಬೋಧಿಸಬೇಕೆಂದಿರುವ ಕಥೆಯ ರೂಪದಲ್ಲಿರದ ವಾಕ್ಯಭಾಗಗಳನ್ನು ಜೋರಾಗಿ ಓದುವುದು, ನಂತರ ಅವುಗಳನ್ನು ಬೋಧಿಸುವುದಕ್ಕೆ *ಕಥೆ* ಮಾತ್ರದ ತತ್ವಗಳನ್ನು ಉಪಯೋಗಿಸುವುದು.

ಆದರೂ ಸಹ, ವಾಕ್ಯಭಾಗವನ್ನು ಮೌಖಿಕವಾಗಿ ನಿರೂಪಿಸುವುದು ಹೇಗೆ ಎಂಬುದನ್ನೂ ನೀವು ಲೆಕ್ಕಾಚಾರ ಮಾಡಲು ಸಾಧ್ಯವಿಲ್ಲದಿದ್ದರೆ, ಸೇವೆ ಮಾಡುವುದಕ್ಕೆ ಮತ್ತು ಬೇರೆಯವರಿಗೆ ತರಬೇತಿ ಕೊಡುವುದಕ್ಕೆ ಓದಲು ಬಾರದಂತವರಿಗೆ ನೀವು ಹೇಗೆ ತರಬೇತಿ ಕೊಡಲು ಸಾಧ್ಯ?

ಬಹುಶಃ ಸತ್ಯವೇದವನ್ನು ಕಲಿಸುವ ಈ ಬಿಕ್ಕಟ್ಟು ಕಥೆಯ ರೂಪದಲ್ಲಿರದ ವಾಕ್ಯಭಾಗಗಳಲ್ಲಿ ಒಮ್ಮೆ ಕೆಲವು ವಚನಗಳನ್ನು ಮಾತ್ರ ತಿಳಿಸುವುದರಿಂದ ಪರಿಹರಿಸಲು ಸಾಧ್ಯ. ಕೇವಲ ಕೆಲವು ವಚನಗಳನ್ನು ಮಾತ್ರ ಬೋಧಿಸುವ ವಿಧಾನವನ್ನು ಅನೇಕ ಬಾರಿ ಗುಣಮಟ್ಟದ ವಿವರಣಾತ್ಮಕ ಪ್ರಸಂಗಗಳಲ್ಲಿ ಮಾಡಲಾಗುತ್ತದೆ. ಆ ಕೆಲವು ವಚನಗಳು, ಭಾವನೆಯೊಂದಿಗೆ ಹೇಳುವುದಾದರೆ ಮತ್ತು ಆನಂತರ ಕಾಲಾನುಕ್ರಮದಲ್ಲಿ ಚರ್ಚಿಸುವುದಾದರೆ, ಇದನ್ನು ಕೇಳುಗರು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮನ್ನೇ ನೀವು ಆ ಕೆಲವು ವಾಕ್ಯಗಳಿಗೆ ಮಾತ್ರ ಮತ್ತು ವಾಕ್ಯಭಾಗದ ಸಂದರ್ಭಕ್ಕೆ ಅನುಕೂಲ ಮಾಡಿಕೊಡುವ ಸತ್ಯವೇದದ ಮಾಹಿತಿಯ ಒಂದು ಚಿಕ್ಕ ಪರಿಚಯಕ್ಕೆ ಮಾತ್ರ ಸೀಮಿತಗೊಳಿಸುವುದೇ ಒಂದು ಸವಾಲಾಗಿದೆ.

ಇದನ್ನು ಮಾಡಲು ಸಾಧ್ಯವೇ? ವಿಷಯದ ಮೇಲೆ "ಬೆಳಕನ್ನು ಬೀರುವುದಕ್ಕೆ" ಸತ್ಯವೇದದಲ್ಲಿನ (ಅಥವಾ ಸತ್ಯವೇದವಲ್ಲದೆ ಇನ್ನಿತರ ಹೊರಗಿನ ಮೂಲಗಳು) ಇನ್ನಿತರ ಅನೇಕ ವಾಕ್ಯಭಾಗಗಳಿಗೆ ಹೋಗದೆಯೇ ಇದರ ಕುರಿತಾಗಿ ಮಾತನಾಡುವುದಕ್ಕೆ ನಿಮಗೆ ಬಹಳಷ್ಟಿದೆಯೇ?

ಹೌದು, ಇದನ್ನು ಮಾಡಲು ಸಾಧ್ಯ ಮತ್ತು ಇದನ್ನು ನಾವು ಕಾರ್ಯಾಗಾರಗಳಲ್ಲಿ ತೋರ್ಪಡಿಸುತ್ತೇವೆ.

ಒಂದು ಬಹಳ ಚಿಕ್ಕ ವಾಕ್ಯಭಾಗದಿಂದ ನಾವು ದೇವರ ವಾಕ್ಯದ ವೈಭವವನ್ನು ತೋರ್ಪಡಿಸುತ್ತೇವೆ. ಕಥೆಯನ್ನು ಬೆಳೆಸುವುದಕ್ಕೆ ಮತ್ತು ಚರ್ಚಿಸುವುದಕ್ಕೆ ಕೇಳುಗರಿಗೆ ಅಗತ್ಯವಿರುವ ಸಂದರ್ಭವನ್ನು ಮತ್ತು ಹಿಂದಿನ ಸತ್ಯವೇದಕ್ಕನುಗುಣವಾದ ಮಾಹಿತಿಯನ್ನು ಕೊಡುವ ಒಂದು ಚಿಕ್ಕ ಪರಿಚಯವನ್ನು ನಾವು ಮೊದಲು ಕೊಡುತ್ತೇವೆ. ನಾವು ಹೇಳುತ್ತೇವೆ, "ಆದಿಸಭೆಯ 'ಪ್ರಧಾನ ಕಛೇರಿ'ಯಾಗುವ ಪಟ್ಟಣವಾದ ಯೆರೂಸಲೇಮಿನಲ್ಲಿ ಯೇಸುವು ತನ್ನ ಶಿಷ್ಯರೊಂದಿಗೆ ತನ್ನ ಕೊನೆ ಮಾತುಗಳನ್ನು ಹೇಳುತ್ತಿರುವನು. ಈ ಶಿಷ್ಯರುಗಳು ಯೇಸುವಿನೊಂದಿಗೆ ಅನೇಕ ಸ್ಥಳಗಳಲ್ಲಿ ಅಂದರೆ ಯೂದಾಯದ ಬಹಳಷ್ಟು ಪ್ರದೇಶ ಮತ್ತು ನೆರೆಯ ಪ್ರದೇಶವಾಗಿದ್ದ ಸಮಾರ್ಯ, ಇಲ್ಲಿ ತಿರಸ್ಕರಿಸಲ್ಪಟ್ಟ ಜನರು ಜೀವಿಸುತ್ತಿದ್ದಂತಹ ಪ್ರದೇಶವನ್ನೊಳಗೊಂಡು ಮೂರು ವರ್ಷಗಳ ಕಾಲ ಆತನೊಂದಿಗೆ ಪ್ರಯಾಣ ಮಾಡಿದ್ದರು."

ನಂತರ ನಾವು ಅ.ಕೃ. 1:8ರಲ್ಲಿ ಕಂಡುಬರುವ ನಮ್ಮ "ಕಥೆ"ಯನ್ನು ಹೇಳುವೆವು. ಹೌದು, ನಿಜವಾದ *ಕಥೆ* ಮಾತ್ರವನ್ನು ಮಾಡುತ್ತಾ ನಾವು ಒಂದು ವಚನದ ದೀರ್ಘವಾದ ಕಥೆಯನ್ನು ಹೇಳುತ್ತೇವೆ. ಅಲ್ಲಿ ಎಷ್ಟು ಕಂಡುಹಿಡಿಯಲು ಸಾಧ್ಯವೋ ಮತ್ತು ಚರ್ಚಿಸಲು ಸಾಧ್ಯವೋ, ಅಷ್ಟರಲ್ಲಿ ನಾವು ವಚನದ ಅರ್ಧ ಭಾಗವನ್ನು ಮಾತ್ರ ಮುಗಿಸಿರುತ್ತೇವೆ! ಈ ಕಥೆಯು ಸುಲಭವಾಗಿ 30 ನಿಮಿಷಗಳನ್ನು ತೆಗೆದುಕೊಳ್ಳಬಹುದಾಗಿದೆ. ವಾಕ್ಯದಲ್ಲಿ ಪರಿಣಿತರಾಗಿರುವ ಜನರು, ಮತ್ತು ಸತ್ಯವೇದಕ್ಕೆ ಹೊಸದಾಗಿರುವ ಜನರು, ಇವರೆಲ್ಲರೂ ಹೃದಯಪೂರ್ವಕವಾಗಿ ಚರ್ಚೆಯಲ್ಲಿ ಭಾಗವಹಿಸುವರು. ಅದ್ಭುತವಾದ ಸಂಶೋಧನೆಗಳು ಮತ್ತು ಕಂಬನಿ ಸುರಿಸುವ ಅನ್ವಯಿಸುವಿಕೆಗಳನ್ನು ಕಂಡುಹಿಡಿಯಲಾಗುತ್ತದೆ. ಇದಕ್ಕಿಂತ ಹೆಚ್ಚಾಗಿ, ಜನರು ತಾವೇ ಖುದ್ದಾಗಿ ಕಂಡುಹಿಡಿದವರಾಗಿ, ವಾಕ್ಯಭಾಗವನ್ನು ಅರ್ಥಮಾಡಿಕೊಂಡಿರುವುದರಿಂದ, ಅವರು ಮಾಡುವುದಕ್ಕೆ, ಕಥೆಯನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದಕ್ಕೆ ಸಿದ್ಧರಾಗಿರುತ್ತಾರೆ.

ಜನರು ಕಲಿತುಕೊಂಡು ಅದರಂತೆ ಕ್ರಿಯೆ ಮಾಡಬೇಕೆಂದು ಬಯಸುವ ಸತ್ಯವೇದಕ್ಕನುಗುಣವಾದ ಸತ್ಯಗಳನ್ನು ತಿಳಿಸಲು ಸಭಾಪಾಲಕರುಗಳು ಮತ್ತು ಕ್ರೈಸ್ತ ಶಿಕ್ಷಕರು ಉಪಯೋಗಿಸುವ ಪ್ರವಚನ ಮತ್ತು ಪ್ರಸಂಗದ ನಿರೂಪಣೆಯು ಬಹಳ ಪರಿಣಾಮವನ್ನು ಬೀರಲು ಸಾಧ್ಯವಿಲ್ಲದಿರಬಹುದು ಎಂಬ ಸಾಧ್ಯತೆಗಳು ಉಂಟೆಂಬುದನ್ನು ಪರಿಗಣಿಸಲೇಬೇಕು. ಕೆಲವು ಪರಸ್ಪರ ಕ್ರಿಯೆಯ ಕಾರ್ಯಗಳು, ಕೇಳುಗರ ಸಂಶೋಧನೆ, ಕ್ರೈಸ್ತ ಬೋಧನೆಯಲ್ಲಿ ನಿರೂಪಣೆಯ ಶೈಲಿ ಇವುಗಳನ್ನು ಸೇರಿಸಿಕೊಳ್ಳುವದಕ್ಕೆ ಪ್ರಾಮುಖ್ಯತೆಯನ್ನು ಕೊಡಬಹುದಾಗಿದೆ.

"ಕಥೆಯನ್ನು" ಉಪಯೋಗಿಸುವ ಕೆಲವರು ತಾವು ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಬೋಧಿಸುವಾಗ ಅಂತವರಿಗೆ ಮೊದಲಿನ ಬರೆಯಲ್ಪಟ್ಟಿರುವ ಪತ್ರಿಕೆಗಳನ್ನು ಪರಿಚಯಿಸುತ್ತಿರುತ್ತಾರೆ. ಈ ಸಭಾಪಾಲಕರುಗಳು ಮತ್ತು ಬೋಧಕರು ಅ.ಕೃ.ಗಳ ಕಥೆಗಳನ್ನು ಹೇಳುವಾಗ, ಸೇವೆಯ ಪ್ರಯಾಣಗಳು ಮತ್ತು ಹೊಸ ಒಡಂಬಡಿಕೆಯ ಬರಹಗಾರರ ಪತ್ರಗಳೊಂದಿಗೆ ಬೆಸೆದಿರುವ ಪತ್ರಿಕೆಗಳನ್ನು ಇದರಲ್ಲಿ ಸೇರಿಸಿ ಹೇಳುತ್ತಾರೆ. *ಕಥೆ* ಮಾತ್ರವನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಸಾಮಾನ್ಯವಾದ ತತ್ವಗಳಾದ ಪ್ರಶ್ನೆಗಳನ್ನು ಕೇಳುವುದು, ಆತ್ಮೀಕ ಅವಲೋಕನಗಳನ್ನು ಮತ್ತು ಆತ್ಮೀಕ

ಅನ್ವಯಿಸುವಿಕೆಗಳನ್ನು ಕಂಡುಹಿಡಿಯುವುದಕ್ಕೆ ಪರಸ್ಪರ ಚರ್ಚೆಯನ್ನು ಉಪಯೋಗಿಸುವುದು ಹಾಗೂ ಪತ್ರಿಕೆಗಳನ್ನು ಬೋಧಿಸುವಾಗ ಅವುಗಳಿಗೆ ಅಳವಡಿಸಿಕೊಳ್ಳುವುದು ಇವು ಚೆನ್ನಾಗಿ ಕಾರ್ಯ ನಿರ್ವಹಿಸುತ್ತವೆ.

ಅನೇಕ ಸಲ ಚನ್ನಾಗಿ ಓದಿರುವ ಅಧ್ಯಾಪಕರು ಸಭಾಪಾಲಕರಿಗೂ ಉಪಧ್ಯಾಯರಿಗು ಕಲಿಸುತ್ತಾರೆ. ಆದರೆ ಚನ್ನಾಗಿ ಓದಿರುವ ಅಧ್ಯಾಪಕರಿಗೆ ದೇವರ ವಾಕ್ಯವನ್ನು ಮೌಖಿಕವಾಗಿ ಕಲಿಯಲು ಇಚ್ಚಿಸುವವರ ಅನಿಸಿಕೆಗಳು ಅವರಿಗೆ ಅರ್ಥವಾಗುವುದಿಲ್ಲ ಹಾಗು ಅವರಿಗೆ ಮೌಖಿಕವಾಗಿ ಕಲಿಸಲು ಬರುವುದಿಲ್ಲ. ಅವರು ಯಾವ ರೀತಿ ಓದಲು ಬರದವರ ಮದ್ಯೆ ದೇವರ ವಾಕ್ಯ ಕಲಿಸಲು ಸಾದ್ಯ? ಹಾಗು ಓದಲು ಬರೆಯಲು ತಿಳಿಯದಿರುವವರು ಕಥೆಯಲ್ಲದ ಅಂಶಗಳನ್ನು ಕಲಿಯಲು ಸಾದ್ಯವೇ? ಆಗದರೆ ಈ ಮೌಖಿಕವಾಗಿ ಕಲಿಯಲು ಇಚ್ಚಿಸುವವರಿಗೆ ಕಲಿಸಲು ಒಂದು ಉತ್ತಮವಾದ ತರಬೇತಿ ಬೇಕಲ್ಲವೇ?

ವಾಕ್ಯ ಭಾಗದ ವಚನವನ್ನು ಬಾಯಿಪಾಠ (ಕಂಠಪಾಠ) ಮಾಡುವುದರ ಪ್ರಾಮುಖ್ಯತೆಯ ಕುರಿತಾಗಿ ಏನು ಹೇಳುವುದು?

ಎರಡು ಅಂಶಗಳು ನನ್ನ ಗಮನಕ್ಕೆ ಬರುತ್ತವೆ. ಮೋದಲನೆಯದು ನಮ್ಮ ಹೃದಯದಲ್ಲಿ ದೇವರ ವಾಕ್ಯವು ಅಡಗಿರಲು ಸತ್ಯವೇದದ ಬಲವಾದ ಎಚ್ಚರಿಗೆ ಬೇಕು, ಎರಡದನೆಯದು ದೇವರ ವಾಕ್ಯವನ್ನು ಕಂಠಪಾಠ ಮಾಡಿ ಜ್ಞಾಪನದಲ್ಲಿಟ್ಟುಕೊಳ್ಳುವುದು.

ದೇವರ ಕೃಪೆಯಿಂದ, ಅನೇಕ ದೇವಜನರು ದೇವರ ವಾಕ್ಯವನ್ನು ಕಂಠಪಾಠ ಮಾಡುವುದರಲ್ಲಿ ತೊಡಗಿದ್ದಾರೆ. ಇವರು ದೇವರ ವಾಕ್ಯದ ಜೊತೆಗೆ ಅಧ್ಯಾಯ ಹಾಗು ವಚನ ಕೂಡ ಜ್ಞಾಪನದಲ್ಲಿಟ್ಟುಕೊಳ್ಳಬೇಕು. ಯವ್ವನ ಕಾಲದಲ್ಲಿ ದೇವರ ವಾಕ್ಯವನ್ನು ಕಂಠಪಾಠ ಮಾಡಿದವರು ಅವರು ದೊಡ್ಡವರಾದ ಮೇಲೆ ಅವರಿಗೆ ತುಂಬಾ ಸಹಾಯವಾಗುತ್ತದೆ.

ಆದರೆ, ದೇವರ ವಾಕ್ಯವನ್ನು ಕಂಠಪಾಟ ಮಾಡುವುದರಲ್ಲಿ ಈ ಸಮಸ್ಯೆಗಳನ್ನು ನೋಡುತ್ತೇವೆ: ಅನೇಕರು ದೇವರ ವಾಕ್ಯವನ್ನು ಕಂಠಪಾಠ ಮಾಡಿದವರು ಅವುಗಳನ್ನು ಜ್ಞಾಪನದಲ್ಲಿಟ್ಟುಕೊಳ್ಳುವುದಕ್ಕಾಗಿ ಪದೇ ಪದೇ ಅವುಗಳನ್ನು ಅಭ್ಯಾಸ ಮಾಡುತ್ತಿರಬೇಕು ಇಲ್ಲದಿದ್ದರೆ ಅವುಗಳು ಮರೆತು ಹೋಗುವ ಸಾಧ್ಯತೆ ಹೆಚ್ಚು. ಕಥಾರೂಪವಾಗಿ ಕಲಿಯುವುದರಿಂದ ಅದು ಸಂಪೂರ್ಣವಾಗಿ ಮೋದಲಿನಿಂದ ಕೊನೆಯವರೆಗೂ ಜ್ಞಾಪನದಲ್ಲಿರುತ್ತದೆ. ಇದರ ಬಗ್ಗೆ ಈ ಪುಸ್ತಕದಲ್ಲಿ ವಿವರವಾಗಿ ಬರೆದಿದ್ದೇವೆ. ಕಥೆ ಕಲಿತ ಮೇಲೆ ನೀವು ಸ್ವಲ್ಪ ನೋಡಿಕೊಂಡರೆ ಸಾಕು ಅದು ನಿರಂರತವಾಗಿ ಜ್ಞಾಪನದಲ್ಲಿರುತ್ತದೆ ಕಾರಣ ಅದು ಒಂದು ಕಥೆಯಾಗಿರುತ್ತದೆ. ಇದು ಸ್ವಾಭಾವಿಕ ಹಾಗು ಬಹಳ ಸುಲುಬದ ಪದ್ದತಿ.

೩೩ ಘಂಟೆಯ ಎಸ್ ಟಿ ಎಸ್ ತರಭೇತಿಯಲ್ಲಿ ಸತ್ಯವೇದದ ಸುಮಾರು ೨೧ ವಿಧ ವಿಧವಾದ ಕಥೆಗಳನ್ನು ಕಲಿಯುತ್ತಾರೆ. ಈ ಕಥೆಗಳನ್ನು ಪದೇ ಪದೇ ಚರ್ಚಿಸುವುದರಿಂದ ಜೀವಿತದ ಕಾಲವೆಲ್ಲಾ ಜ್ಞಾಪನದಲ್ಲಿರುತ್ತದೆ. ಎಸ್ ಟಿ ಎಸ್ ತರಭೇತಿಯಲ್ಲಿ ಕಲಿಯುವ ಈ ೨೧ ಕಥೆಗಳು ಸುಮಾರು ೧೪೮ ವಚನಗಳನ್ನು ಹೊಂದಿವೆ.

ಅಚ್ಚರ್ಯಕರವಲ್ಲವೆ! ಸುಮಾರು ೧೪೮ ದೇವರ ವಚನಗಳು ನಮ್ಮ ಹೃದಯದ ಜೊಬಿನಲ್ಲಿರುತ್ತವೆ. ಈ ದೇವರ ವಾಕ್ಯಗಳನ್ನು ಎಲ್ಲಿ ಬೇಕಾದರು ಇತರರಿಗೆ ತಿಳಿಸಬಹುದು. ಸತ್ಯವೇದ ಸಂಪೂರ್ಣವಾಗಿ ತಿಳಿಯದಿರುವ ಕ್ರೈಸ್ತರಿಗೆ ಈ ವಚನೆಗಳು ಸೇವೆ ಮಾಡಲು ಉಪಯೊಗವಾಗುತ್ತವೆ.

ಕಂಠಪಾಠ ಮಾಡುವುದು ಮತ್ತು ಜ್ಞಾಪನದಲ್ಲಿಟ್ಟುಕೊಳ್ಳುವುದು.

ವಿವಿಧ ಭಾಷೆಗಳಲ್ಲಿ ಬರೆದಿರುವ ಸತ್ಯವೇದದ ಹಾಳೆಗಳನ್ನು ಒಂದಕ್ಕೊಂದು ಹೋಲಿಸಿ ನೋಡಿ. ಅವು ಒಂದೇ ರೀತಿಯಾಗಿ ಕಾಣುತ್ತವೆಯೇ? ಪದಗಳು ಒಂದೇ ರೀತಿಯಾಗಿ ಇವೆಯೇ? ಇಲ್ಲಾ. ಸತ್ಯಾಂಶವೆಂದರೆ, ಅವರು ತಮ್ಮ ವಾಕ್ಯಗಳನ್ನು ಪ್ರಸ್ತುತ ಪಡಿಸಲು ಬೇರೆ ಶೈಲಿಯ ಅಕ್ಷರಗಳನ್ನು ಉಪಯೋಗಿಸಿಕೊಂಡಿರಬಹುದು. ಇವು ಸಂಪೂರ್ಣವಾಗಿ ವ್ಯತ್ಯಾಸವಾಗಿ **ಕಾಣುತ್ತವೆ,** ಮತ್ತು ಹೇಳುವಂತಹ ಮಾತುಗಳ **ಶಬ್ಧವು** ಸಂಪೂರ್ಣವಾಗಿ ವ್ಯತ್ಯಾಸವಾಗಿರುತ್ತದೆ, ಆದರೆ ಅವುಗಳಿಗೆ ಒಂದು ಸಂಗತಿ ಸಾಮಾನ್ಯವಾಗಿರುತ್ತದೆ. ಪ್ರತಿ ಸತ್ಯವೇದದ ಬಗ್ಗೆ ಒಂದೇ ರೀತಿಯಾಗಿರುವುದು ಯಾವುದು? ಹೌದು. ನೀವು ಹೇಳಿದ್ದು ಸರಿ. ಅದರಲ್ಲಿರುವ ಅಂಶಗಳು (ಅರ್ಥಗಳು) ಒಂದೇ ರೀತಿಯಾಗಿವೆಯೇ ಹೊರತು, ಒಂದೇ ರೀತಿಯ ಪದಗಳಲ್ಲ. ಪದಗಳು ಸಂಪೂರ್ಣವಾಗಿ ವ್ಯತ್ಯಾಸವಾಗಿದ್ದರೂ ಸಹ, ಸಂದೇಶವು ಬದಲಾಗುವುದಿಲ್ಲ.

ಅಲಕ್ಷತೆಯ ಮಾತಿನ ಆಯ್ಕೆಗಳಿಂದ, ಧ್ವನಿಯ ಏರಿಕೆ ಇಳಿಕೆಯಿಂದ ಅಥವಾ ಕ್ರಿಯೆಗಳಿಂದ ಕಥೆಯ ನಿಖರವಾದ ಅಂಶಕ್ಕೆ ಯಾವುದನ್ನೂ ಸೇರಿಸಬಾರದು, ತೆಗೆದುಹಾಕಬಾರದು ಅಥವಾ ಬದಲಾಯಿಸಬಾರದೆಂದು ನಾವು *ಕಥೆ* ಮಾತ್ರದಲ್ಲಿ ಪ್ರತಿಯೊಬ್ಬರಿಗೂ ಎಚ್ಚರಿಕೆಯನ್ನು ಕೊಡುತ್ತೇವೆ. ಜನರು ಸತ್ಯವೇದದ ಕಥೆಗಳನ್ನು ಸಂಭಾಷಣೆಯ ವಿಧಾನದಲ್ಲಿ ಹೇಳುವಂತೆ ಪ್ರೋತ್ಸಾಹಿಸುತ್ತೇವೆ. ಆದರೆ, ಕೊಡುವ ಮಾಹಿತಿಯು ಎಷ್ಟೇ ಚಿಕ್ಕದಾಗಿದ್ದರೂ ಸರಿ ಅಥವಾ ಮುಖ್ಯವಾಗಿ ಕಂಡುಬರದಿದ್ದರೂ ಪರವಾಗಿಲ್ಲ, ಆ ಅಂಶಗಳನ್ನು ಅಥವಾ ಮಾಹಿತಿಯನ್ನು ಬದಲಾಯಿಸಬಾರದೆಂಬುದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡಲಾಗುವುದು.

ಮೊದಲೇ ಹೇಳಿದ ಹಾಗೆ, ನಾವು ವಾಕ್ಯಗಳನ್ನು ಪೂರ್ವಸಾಂಸ್ಕೃತಿಕವಾಗಿ ನೋಡುತ್ತೇವೆ. *ಕಥೆ* ಮಾತ್ರವನ್ನು ಉಪಯೋಗಿಸುವ ಕಥೆಗಾರರು ಅಗತ್ಯವಿರುವ ಹಾಗೆ ಪರಿಚಯದಲ್ಲಿ ವಿವರಣೆಗಳೊಂದಿಗೆ ಇವುಗಳನ್ನು ಕಂಡುಕೊಳ್ಳುತ್ತಾರೆ, ಇದರಿಂದ ಸತ್ಯವೇದದ ಕಥೆಗಳ ಎಲ್ಲಾ ಅಂಶಗಳನ್ನು ಲೋಕದೆಲ್ಲೆಡೆ ಇರುವ ಕೇಳುಗರು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಅವಿಧ್ಯಾವಂತನು ಸತ್ಯವೇದವನ್ನು ಆಳವಾಗಿ ಅಭ್ಯಾಸ ಮಾಡಲು ಸಾದ್ಯವೇ?

ವಿಧ್ಯಾವಂತರು ಮಾತ್ರ ಜ್ಞಾನವಾಗಿ ಯೋಚಿಸಲು ಹಾಗು ಚರ್ಚಿಸಲು ಸಾದ್ಯ ಹಾಗು ಅನೇಕ ವಿಚಾರಗಳನ್ನು ಜ್ಞಾಪನದಲ್ಲಿಟ್ಟುಕೊಳ್ಳಲು ಶಕ್ತಿ ಹೋಂದಿದ್ದಾರೆ ಆದರೆ ಅವಿಧ್ಯಾವಂತರಿಗೆ ಜ್ಞಾನವಾಗಿ ಯೋಚಿಸಲು ಸಾದ್ಯವಿಲ್ಲ ಹಾಗು ಜ್ಞಾಪನದಲ್ಲಿಟ್ಟುಕೊಳ್ಳಲು ಶಕ್ತಿ ಹೋಂದಿರುವುದಿಲ್ಲಿ ಎಂದು ಅನೇಕರು ನೆನೆಸುತ್ತಾರೆ.

ನಿಜ, ಜ್ಞಾನವಾಗಿ ಯೋಚಿಸಲು ಹಾಗು ಚರ್ಚಿಸಲು ಸಾದ್ಯ ಹಾಗು ಅನೇಕ ವಿಚಾರಗಳನ್ನು ಜ್ಞಾಪನದಲ್ಲಿಟ್ಟುಕೊಳ್ಳಲು ಒಂದು ವಿದವಾದ ವಿಧ್ಯೆ ಬೇಕು. ಇವುಗಳು ಮೌಖಿಕವಾಗಿ ಕಲಿಯಲು ಇಚ್ಛಿಸುವವರಿಗೆ ಕಷ್ಟವಾಗಬಹುದು ಆದರೆ ಅವರ ಜ್ಞಾಪನ ಶಕ್ತಿ ವಿಧ್ಯಾವಂತರಿಗಿಂತ ಚನ್ನಾಗಿರುತ್ತದೆ.

ಸತ್ಯವೇದದ ವಿಚಾರ ಮಾತಾಡುವುದಾದರೆ, ಕೇವಲ ವಿಧ್ಯಾವಂತರು ಮಾತ್ರ ಜ್ಞಾನವಾಗಿ ಯೋಚಿಸಲು ಹಾಗು ಚರ್ಚಿಸಲು ಸಾದ್ಯ ಹಾಗು ಅನೇಕ ವಿಚಾರಗಳನ್ನು ಜ್ಞಾಪನದಲ್ಲಿಟ್ಟುಕೊಳ್ಳಲು ಶಕ್ತಿ ಹೋಂದಿದ್ದಾರೆ ನೆನಸಲು ಸಾದ್ಯವೆ?

ಆದರೆ ಅವಿಧ್ಯಾವಂತರಿಗೂ ಕೂಡ ತಮ್ಮ ಸಂಕೃತಿಯ ಜ್ಞಾನವು ಅವರು ಜ್ಞಾಪನದಲ್ಲಿಟ್ಟುಕೊಳ್ಳಲು ಶಕ್ತಿ ಹೋಂದಿರುತ್ತಾರಲ್ಲವೇ?

ಹಾಗೆ ನೋಡುವುದಾದರೆ ದೇವರು ಎಲ್ಲಾ ಮಾನವರನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದ್ದಾರೆ. (ಆದಿಕಾಂಡ ೧:೨೬–೨೭) ಆದರೆ ಆದಮನು ಪಾಪದಲ್ಲಿ ಬಿದ್ದ ಕಾರಣ ಎಲ್ಲರ ಜ್ಞಾನವು ಭೂಸಂಭಂದವಾದ ವಿಚಾರಗಳಲ್ಲಿ ತಮ್ಮನು ತಾವು ತೊಡಗಿಸಿಕೊಂಡರು. (ರೋಮಪುರದವರಿಗೆ ಬರೆದ ಪತ್ರ ೧:೧೯–೨೩).

ಮಾರ್ಕನ ಸುವಾರ್ತೆ ೧೨:೨೪ ರಲ್ಲಿ ನಾವು ನೊಡುತ್ತೇವೆ. ವಿಧ್ಯಾವಂತರಾದ ಸದ್ದುಕಾಯರು ಯೇಸುವನ್ನು ಸೋಲಿಸಲು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ ಆದರೆ ಆತನು ಅವರಿಗೆ ಮತ್ತೆ ಪ್ರಶ್ನೆಗಳನ್ನು ಕೇಳಿ ಅವರು ಗಲಿಬಿಲಿ ಹೋಂದುವ ಹಾಗೆ ಮಾಡುತ್ತಾನೆ. ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದಿರುವದರಿಂದಲೇ ತಪ್ಪುವವರಾಗಿದ್ದೀರಲ್ಲವೇ? ಎಂದು ಕೇಳುತ್ತಾರೆ.

ವಿಧ್ಯಾವಂತರಾದ ಸದ್ದುಕಾಯರಿಗೆ ಆ ಕಾಲದ ಧರ್ಮಗ್ರಂಥಗಳ ಬಗ್ಗೆ ತಿಳಿದಿತ್ತು ಎಂದು ನಮಗೆಲ್ಲರಿಗೆ ತಿಳಿದಿರುವ ವಿಚಾರ. ಆದರೆ ಯೇಸು ಅವರಿಗೆ ಕೇಳುವ ಪ್ರಶ್ನೆಗಳನ್ನು ನೊಡುವಾಗ ಅವರಿಗೆ ಆ ಧರ್ಮಗ್ರಂಥಗಳ ಆತ್ಮೀಕ ಸತ್ಯತೆ ಅವರಿಗೆ ತಿಳಿದಿರುವುದಿಲ್ಲವೆಂದು ಗೊತ್ತಾಗುತ್ತದೆ. ಆ ಧಾರ್ಮೀಕ ನಾಯಕರಿಗೆ ಆತ್ಮೀಕ ವಿಚಾರಗಳು ತಿಳಿದಿರುವುದಿಲ್ಲ ಅಲ್ಲದೆ ಅವರು ಆತ್ಮೀಕ ವಿಚಾರಗಳ ಬಗ್ಗೆ ಹೆಚ್ಚು ಒಲವು ತೊರಿಸುತ್ತಿರಲಿಲ್ಲ. ಅದಕೊಸ್ಕರವಾಗಿ ಅವರು ಯಾವಾಗಲು ನಕಾರಾತ್ಮಕವಾಗಿ ಯೊಚಿಸುತ್ತಿರುತ್ತಾರೆ. ಅವರಿಗಿದ್ದ ವಿಧ್ಯಾಜ್ಞಾನವು ಸತ್ಯಾಂಶವನ್ನು ತಿಳಿಯಲು ಸಾಧ್ಯವಾಗಲಿಲ್ಲ.

ನಾವು ಮೊದಲೆ ತಿಳಿಸಿದ ಹಾಗೆ ಯಾವಾಗಲು ಧರ್ಮಗ್ರಂಥಗಳನ್ನು ವಿವರಾತ್ಮಕವಾದ ಸಂಸ್ಕೃತಿಯಾಗಿ ನೋಡಬೇಕು. ಎಸ್ ಟಿ ಎಸ್ ನಲ್ಲಿ ಕಥೆ ಹೇಳುವವನು ಮೊದಲು ಪೀಠಿಕೆ ಕೊಟ್ಟು ಎಲ್ಲಾ ವಿಚಾರಗಳನ್ನು ವಿವರಿಸುತ್ತಾನೆ. ಕಥೆಗಳಲ್ಲಿರುವ ಅನೇಕ ಆತ್ಮೀಕ ನಿಧಿಗಳನ್ನು ಅನೇಕ ದೇಶಗಲ್ಲಿ ಎಸ್ ಟಿ ಎಸ್ ತರಬೇತಿಯಲ್ಲಿ ಕಲಿತುಕೊಲ್ಳುತ್ತಾರೆ. ಅವರು ವಿಧ್ಯಾವಂತರಾಗಿರಬಹುದು ಇಲ್ಲ ಅವಿಧ್ಯಾವಂತರಾಗಿರಬಹುದು. ಇದರಲ್ಲಿ ತಾರತಮ್ಯವಿಲ್ಲ.

ಅಪೊಸ್ತಲರ ಕೃತ್ಯಗಳು ೪:೧೩ ರಲ್ಲಿ ಯೇಸು ವಿಧ್ಯವಂತರಾದ ಕೆಲವು ಶಿಷ್ಯರನ್ನು ಆರಿಸಿಕೊಂಡಿರುವುದನ್ನು ಓದುತ್ತೇವೆ. ಪೇತ್ರ ಯೋಹಾನರು ತಮ್ಮ ಶಕ್ತಿಯುತವಾದ ಬೋದನೆಗಳಿಂದ ಸದ್ದುಕಾಯರು ಕೊಪಗೊಳ್ಳುವಂತೆ ಮಾಡುತ್ತಾರೆ. ಧಾರ್ಮೀಕ ನಾಯಕರು ಪೇತ್ರ ಯೋಹಾನರನ್ನು ಬಂದಿಸಿ ಪ್ರಶ್ನೆಗಳನ್ನು ಕೇಳಲು ಸಭಾಮಂದಿರದ ನ್ಯಾಯಾಧಿಪತಿಗಳ ಹತ್ತಿರ ತಂದರು. ಆ ಧಾರ್ಮೀಕ ನಾಯಕರ ಹಾಗು ವಿಧ್ಯಾವಂತರಾದ ಸದ್ದುಕಾಯರ ಮದ್ಯದಲ್ಲಿ ಪೇತ್ರನು ಪವಿತ್ರಾತ್ಮನ ಬಲದಿಂದ ಯೇಸುವಿನ ಬಗ್ಗೆ ಶಕ್ತಿಯುತವಾದ ಉಪದೇಶವನ್ನು ಮಾಡಿದನು. ವಿಧ್ಯವಂತರಾದ ಆ ನಾಯಕರು ಅವರ ಬೋದನೆಯನ್ನು ಕೇಳಿ ಆಚ್ಚರ್ಯಚಿಕಿತರಾದರು.

ಪೇತ್ರನ ಉಪದೇಶವು ಸಭಾಮಂದಿರದ ನ್ಯಾಯಾಧಿಪತಿಗಳ ಮೇಲೆ ಬಹಳ ಪ್ರಭಾವ ಬೀರಿತು.

ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಭ್ಯಾಸ ಮಾಡಿದ ಸಾದಾರಣರೆಂದು ತಿಳಿದು ಆಶ್ಚರ್ಯಪಟ್ಟರು. ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು (ಅಪೊಸ್ತಲರ ಕೃತ್ಯಗಳು ೪:೧೩).

ಈಗಲು ಈ ಕಾರ್ಯಗಳು ನಡೆಯುತ್ತವೆಯೋ? ವಿಧ್ಯಾಭ್ಯಾಸವಿಲ್ಲದ ದೇವಜನರು ದೇವರ ವಾಕ್ಯದ ಸತ್ಯಾಂಶಗಳನ್ನು ಇತರರಿಗೆ ತಿಳಿಸಲು ಸಾದ್ಯವೇ?

ಈ ಸಾಕ್ಷಿಯು ವರದಿಯು ಈ ಪ್ರಶ್ನೆಗೆ ಉತ್ತರಿಸಲು ಸಹಾಯವಾಗುತ್ತದೆ ಎಂದು ನೆನೆಸುತ್ತೇನೆ.

ದೇವರ ವಾಕ್ಯವು ಹೃದಯದಲ್ಲಿ ಆಳವಾಗಿ ಮಾತನಾಡುತ್ತದೆ.

ಪಶ್ಚಿಮ ದೇಶಗಳ ಎಸ್ ಟಿ ಎಸ್ ತರಬೇತಿ ಕೊಡುವ ನಾಯಕರು ಕೆಲವು ಸಮಯ ಹಳ್ಳಿಗಳಲ್ಲಿ ಎಸ್ ಟಿ ಎಸ್ ಉಪಯೋಗಕ್ಕೆ ಬರುತ್ತದೊ ಇಲ್ಲವೊ ಪರಿಕ್ಷಿಸಲು ಉಪಯೋಗಿಸುತ್ತಾರೆ. ಕೆನ್ಯಾ ದೇಶದ ಎಕಲಕಲ ಎಂಬ ಗ್ರಾಮದಲ್ಲಿ ಕೆಲವು ಪಶ್ಚಿಮ ದೇಶಗಳ ಎಸ್ ಟಿ ಎಸ್ ತರಬೇತಿ ಕೊಡುವ ನಾಯಕರು ದರ್ಶಿಸಿದರು. ಇದರ ಮೊದಲು ಆಫ್ರೀಕ ದೇಶದ ನಾಯಕರು ಈ ಗ್ರಾಮದಲ್ಲಿ ಸೇವೆ ಮಾಡಿ ಎಸ್ ಟಿ ಎಸ್ ಮೂಲಕ ಅನೇಕ ಸತ್ಯವೇದದ ಕಥೆಗಳನ್ನು ಕಲಿಸುತ್ತಿದ್ದರು.

ನಾವು ಮೊದಲು ಇಲ್ಲಿಗೆ ಬಂದಾಗ ಈ ಸಭೆಯಲ್ಲಿ ಚಪ್ಪಾಳೆಗಳ ಜೊತೆಗೆ ಹಾಡುಗಳನ್ನು ಹೇಳುತ್ತಿದ್ದರು, ಕೇವಲ ಒಂದು ಅಥವ ಎರಡು ದೇವರ ವಚನಗಳನ್ನು ಭೋದಿಸುತ್ತಿದ್ದರು, ಇವರಿಗೆ ಹೆಚ್ಚಾಗಿ ಸತ್ಯವೇದದ ಜ್ಞಾನವಿರಲಿಲ್ಲಿ. ಆದರೆ ಈಗ ಇವರು ಅನೇಕರನ್ನು ರಕ್ಷಣೆಯ ಮಾರ್ಗಕ್ಕೆ ನಡೆಸುತ್ತಿದ್ದಾರೆ ಹಾಗು ಆತ್ಮೀಕವಾಗಿ ಬೆಳೆಯುತ್ತಿದ್ದಾರೆ ಎಂದು ಈ ಹಳ್ಳಿಯ ನಾಯಕ ನಮಗೆ ತಿಳಿಸಿದರು.

ನಾವು ಕಂಡಿದ್ದನ್ನು ನೊಡಲು ನಮ್ಮ ಜೊತೆಗೆ ಬಂದು ಸೇರಿರಿ. ಏಕಲಕಲ ಗ್ರಾಮದದಲ್ಲಿ ಸೀಮೆಂಟ್ ಇಟ್ಟಿಗೆಗಳಿಂದ ಕಟ್ಟಿದ ಶೀಟ್ ಮನೆಯೊಳಗೆ ನೀವು ಪ್ರವೇಶಿಸಿದರೆ ಕಂಬಾ ಸಮುದಾಯಕ್ಕೆ ಸೇರಿದ ಸುಮಾರು ೬೦ ಜನರು ಈ ಮನೆಯಲ್ಲಿ ತುಂಬಿರುತ್ತಾರೆ. ಅವರಲ್ಲಿ ಸುಮಾರು ೧೫ ಮಂದಿ ಸಭಾಪಾಲಕರು, ಇವರು ೧೧ ವಿವಿದ ಸಭೆಗಳಿಗೆ ಸೇರಿರುತ್ತಾರೆ, ಇವರೆಲ್ಲರೂ ಕಾರ್ಯಕ್ರಮ ಪ್ರಾರಂಬವಾಗಲು ಕಾಯುತ್ತಿರುತ್ತಾರೆ.

ಇಲ್ಲಿ ಮಹಿಳೆಯರೆಲ್ಲಾ ಬಹಳ ಸುಂದರವಾದ ವಿದ ವಿದ ಉಡುಪುಗಳನ್ನು ದರಿಸಿರುತ್ತಾರೆ ಹಾಗು ಗಂಡಸರು ವಿಧ ವಿಧವಾದ ಸೂಟ್ ಹಾಗು ಟೈ ಗಳನ್ನು ದರಿಸಿರಿತ್ತಾರೆ. ನೀವು ಅವರನ್ನು ಗಮನವಿಟ್ಟು ನೋಡಿದರೆ ಅವರು ದರಿಸಿರುವ ಸೂಟ್‌ಗಳು ಬಹಳ ದೊಡ್ಡದಾಗಿರುತ್ತವೆ, ಅವರ ಕೈತೊಳುಗಳು ಬಹಳ ಚಿಕ್ಕದಾಗಿ ಗಲೀಜಾಗಿರುತ್ತವೆ. ಇದನ್ನು ನೊಡಿದಾಗ ಅವುಗಳನ್ನು ಅನೇಕರು ಬಳಸಿರಬಹುದೆಂದು ತಿಳಿಯುತ್ತದೆ. ಇವುಗಳನ್ನು ಅನೇಕರು ಭಾನುವಾರದಂದು ಧರಿಸುವ ಉಡುಪುಗಳಾಗಿರುತ್ತವೆ.

ಪ್ರತಿ ಕೂಟವನ್ನು ಸಂಜೆ ನಾಲ್ಕು ಗಂಟೆಗೆ ಮುಗಿಸಬೇಕೆಂದು ತಿಳಿಸುತ್ತಾರೆ ಕಾರಣ ಅವರ ಹಳ್ಳಿಗಳಿಗೆ ಹೋಗಲು ಒಂದು ನದಿಯನ್ನು ದಾಟಬೇಕು ಅಷ್ಟೇ ಅಲ್ಲದೆ ಸಂಜೆಯ ಸಮಯದಲ್ಲಿ ಘಡ್ಗಮುರ್ಗಗಳು ಬರುವ ಹೊಳಗಾಗಿ ಅವರು ಊರು ಸೇರಬೇಕು. ಅವರು ಗುಡುಸಲುಗಳಿಂದ ಗುಂಡಾಗಿ ಕಟ್ಟಿರುವ ಸಭೆಗಳಿಗೆ ಹೋಗಲು ಸುಮಾರು ನಾಲ್ಕು ಗಂಟೆಗಳು ಹಿಡಿಯುತ್ತದೆ.

ನಾವು ಅಲ್ಲಿರುವಾಗ ಒಬ್ಬ ಆಪೀಕದ ನಾಯಕನು ಆದಿಕಾಂಡ ೩೫: ೧–೫ ವಚನಗಳ ಕಥೆಯನ್ನು ಹೇಳಿ ಆ ಗುಂಪನ್ನು ಚರ್ಚೆಯಲ್ಲಿ ನಡೆಸುತ್ತಿದ್ದನು. ಸ್ವಹೀಲಿ ಭಾಷೆಯಲ್ಲಿ ಬೋದಿಸುತ್ತಿದ್ದರು ಅದ್ದನ್ನು ಕಾಂಬ ಭಾಷೆಗೆ ಭಾಶಾಂತರ

ಮಾಡುತ್ತಿದ್ದರು. ನೀವು ಹಿಂದಿನ ಬೇಂಚಿನಲ್ಲಿ ಕುಳಿತಿರುವಾಗ ಆಫ್ರಿಕದ ಒಬ್ಬ ನಾಯಕನು ಇಂಗ್ಲೀಷ್ ಭಾಷೆಯಲಿ ಅಲ್ಲಿ ಏನು ನಡೆಯುತ್ತಿದೆ ಎಂದು ನಮಗೆ ತಿಳಿಸುತ್ತಿರುತ್ತಾನೆ.

ದೇವರು ಯಾಕೋಬನನ್ನು ದೀರ್ಘ ಕಾಲ ರಕ್ಷಿಸುತ್ತಾ ಬರುತ್ತಾನೆ, ಈ ದೇವರು ಯಾಕೋಬನಿಗೆ ಕಾಣಿಸಿಕೊಂಡ ಸ್ಥಳವಾದ ಬೇತೇಲಿಗೆ ಹೋಗುವಂತೆ ಯಾಕೋಬನಿಗೂ ಹಾಗು ಅವನ ಕುಟುಂಭಕ್ಕೆ ತಿಳಿಸುತ್ತಾನೆ. ಎಂಬುದಾಗಿ ಅಲ್ಲಿ ಅವರು ಚರ್ಚಿಸುತ್ತಿದ್ದರು.
ಯಾಕೊಬನು ಒಳ್ಳೆಯ ಆತ್ಮೀಕ ನಾಯಕ, ಆತನು ತನ್ನ ಕುಟುಂಬದವರನ್ನು ತಮ್ಮಲ್ಲಿರುವ ಎಲ್ಲಾ ವಿಗ್ರಹಗಳನ್ನು ತೆಗೆದು ಹಾಕುವ ಹಾಗೆ ತಿಳಿಸುತ್ತಿದ್ದಾನೆ, ಈತನು ದೇವರಲ್ಲಿ ತಗ್ಗಿಸಿಕೋಂಡ ನಾಯಕ ಎಂದು ಚರ್ಚಿಸುತ್ತಿದ್ದರು.

ಕಥೆಯಲ್ಲಿ ಆತ್ಮೀಕವಾಗಿ ನಡೆಸುತ್ತಿದ್ದ ನಾಯಕನು ಜನರಿಗೆ ಯಾಕೊಬನು ಈಗ ಒಳ್ಳೆಯ ಆತ್ಮೀಕ ನಾಯಕನಾಗಿ ಈ ಕಥೆಯಲ್ಲಿ ತೋರ್ಪಡಿಕೊಳ್ಳುತ್ತಿದ್ದಾನೊ ಅಥವ ಆತನು ಧೀರ್ಘಕಾಲದಿಂದ ಒಳ್ಳೆಯ ಆತ್ಮೀಕ ನಾಯಕನಾಗಿದ್ದನೊ? ಎಂದು ಕೇಳಿದನು. ಮತ್ತೆ ಅವರಿಗೆ ಕಥೆಯಲ್ಲಿ ಯಾಕೊಬನು ವಿಗ್ರಹಗಳನ್ನು ಏನು ಮಾಡಿದನು ಇದರಿಂದ ಯಾಕೊಬನ ಬಗ್ಗೆ ನಿಮಗೇನನಿಸುತ್ತದೆ ಎಂದು ಕೇಳಿದನು.

ಅಲ್ಲಿದ್ದ ಜನರು ಒಬ್ಬರನೊಂದಿಗೆ ಒಬ್ಬರು ಚರ್ಚಿಸಲು ಪ್ರಾರಿಬಿಸಿದರು.

ಕೆಲವು ನಿಮಿಷಗಳಾದ ಮೇಲೆ ನಿಮಗೆ ತರ್ಜುಮೆ ಮಾಡುವವನು ನಿಮ್ಮ ಕಿವಿಗೆ ಕೆಲವು ಮಾತುಗಳನ್ನು ಹೇಳುತ್ತಾನೆ. ಜನರು ಕಥೆಯಲ್ಲಿ ಈಗ ಹೆಚ್ಚಾಗಿ ನೋಡುತ್ತಿದ್ದಾರೆ. ಅವರೆಲ್ಲಾ ಯಾಕೊಬನು ಅವರ ಕುಟುಂಬಗಳಲ್ಲಿನ ಅನ್ಯ ದೇವರ ವಿಗ್ರಹಗಳನ್ನು ಸೆಕೆಮ್ ಪಟ್ಟಣದ ಹತ್ತರವಿರುವ ಏಲಾವೃಕ್ಷದ ಬುಡದಲ್ಲಿ ಹೂಳಿಟ್ಟನು. ಇಲ್ಲಿ ಆತನ ದುರಾಸೆಯ ಬಗ್ಗೆ ಹಾಗು ಆತನು ದೇವರು ಒದಗಿಸುತ್ತಾನೆಂದು ನಂಬಲಿಲ್ಲವೆಂದು ಒಟ್ಟಾಗಿ ಮಾತನಾಡುತ್ತಾರೆ.

ಯಾಕೊಬನು ಅನ್ಯ ದೇವರ ವಿಗ್ರಹಗಳನ್ನು ಅವರ ಮನೆಗಳಲ್ಲಿಡಲು ಅನುಮತಿಕೊಟ್ಟಿರುತ್ತಾನೆ. ಒಬ್ಬನು ಹೇಳುತ್ತಾನೆ ಕಥೆಯಲ್ಲಿ ಕಿವಿ ಓಲೆಗಳ ಬಗ್ಗೆ ಬರೆದಿದೆ ಅಂದರೆ ಅವರು ಅಲ್ಲಿನ ಸಂಪ್ರಧಾಯಕ್ಕೆ ಹೊಂದಿಕೊಂಡಿದ್ದರು. ಅನ್ಯ ದೇವರ ವಿಗ್ರಹಗಳನ್ನು ಅವರ ಮನೆಗಳಲ್ಲಿರುವುದು ಯಾಕೊಬನಿಗೆ ಮೊದಲೆ ಗೊತ್ತಿತ್ತು.

ಈ ಸಭೆಯಲ್ಲಿ ಸೇರಿದ್ದವರು ಯಾಕೋಬನ ಕ್ರಿಯೆಯ ಬಗ್ಗೆ ಚರ್ಚಿಸಿದರು. ಒಬ್ಬ ಮಹಿಳೆ ಎದ್ದು ನಿಂತ್ತು ಕಾಂಬ ಜನಾಂಗದ ಪದ್ದತಿಯ ಬಗ್ಗೆ ತಿಳಿಸಲು ಪ್ರಾರಂಬಿಸಿದಳು.

ತರ್ಜುಮೆ ಮಾಡುವವನು ನಿಮ್ಮ ಕಿವಿಗೆ ಈ ಮಾತುಗಳನ್ನು ಗೊಣಗುತ್ತಾನೆ, ಈ ಮಹಿಳೆ ಹೇಳುತ್ತಾಳೆ ಈಗ ನಾವು ಕ್ರೈಸ್ತರು ಆದರು ನಮ್ಮ ಹಳೆದ ಪದ್ದತಿಯ ತಾಯಿತ ಮತ್ತು ಪವಿತ್ರವೆನ್ನುವ ದಾರಗಳು ನಮ್ಮಲ್ಲಿವೆ, ಇನ್ನು ಮೇಲೆ ಅವುಗಳನ್ನು ನಮ್ಮಲ್ಲಿ ಮುಚ್ಚಿಡಬಾರದು, ಅವುಗಳನ್ನು ನಾಶಪಡಿಸಬೇಕು ಎಂದಳು!

ಕೆಲವು ನಿಮಿಷಗಳಾದ ಮೇಲೆ ದೊಡ್ಡ ಶರೀರದ ಮನುಷ್ಯನು ಕೂಗಾಡಲು ಪ್ರಾರಂಬಿಸುತ್ತಾನೆ ಅವನ ಜೊತೆಗೆ ಎಲ್ಲರೂ ದ್ವನಿಗೂಡಿಸುತ್ತಾರೆ.

ಆಗ ನೀವು ತರ್ಜುಮೆ ಮಾಡುವವನ್ನು ಗಮನಿಸುತ್ತಿರಬೇಕು ಕಾರಣ ಅವನು ಇಲ್ಲಿ ನಡೆಯುತ್ತಿರುವ ವಿಚಾರಗಳನ್ನು ತಿಳಿಸುವವನಾಗಿದ್ದಾನೆ. ಇವುಗಳು ನಮಗೆ ತಿಳಿಯದಿದ್ದರೆ ಪ್ರಾಣಸಂಕಟ.

ಜನರೆಲ್ಲರು ಚರ್ಚೆಮಾಡಿ ಮುಗಿಸಿದ ಮೇಲೆ ತರ್ಜುಮೆ ಮಾಡುವವನು ನಿಮ್ಮ ಕಿವಿಗೆ ಹೀಗೆ ಗೊಣಗುತ್ತಾನೆ ಈ ಮನುಷ್ಯ ಹೇಳುತ್ತಾನೆ, ನಾನು ನನ್ನ ಮನೆಯ ಯಜಮಾನ, ಹಾಗು ನಾನೆ ನಾಯಕನಾಗಿ ನಡೆಸುತ್ತೇನೆ, ನಾನು ಏನು ಹೇಳುತ್ತೇನೆ ನನ್ನ ಮನೆಯವರು ಪಾಲಿಸುತ್ತಾರೆ. ಆದರೆ ನಾನು ಯಾಕೊಬನ ಹಾಗೆ ಕಾರಣ ನಾನು ಅವರನ್ನು ಆತ್ಮೀಕವಾಗಿ ನಡೆಸಲಿಲ್ಲ ಆದಕಾರಣ "ನಾನು ಬದಲಾಗಬೇಕು".

[ಆ ದಿನ ಸಭೆಯ ಎಲ್ಲಾ ಗಂಡಸರು ಹಾಗು ಹೆಂಗಸರು ಯಾಕೊಬನ ಬೂಟಾಟಿಕೆಯ ಜೀವಿತದ ಬಗ್ಗೆ ಚರ್ಚಿಸಿದರು ಹಾಗು ಯಾಕೊಬನ ಪಾಪವನ್ನು ನೋಡಿ ಅವರವರ ಪಾಪಗಳ ಮನವರಿಕೆ ಮಾಡಿಕೊಂಡರು.

ಈ ರೀತಿ ದೇವರ ವಾಕ್ಯದ ಕಥೆಗಳ ಮೂಕಲ ದೇವರು ಅದ್ಬುತವಾಗಿ ಪ್ರಪಂಚಾದ್ಯಾಂತ ಜನರ ಹೃದಯಲ್ಲಿ ಮಾತನಾಡಿ ಅನೇಕರು ಬದಲಾಗುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇವರೆಲ್ಲರೂ ಅವಿಧ್ಯಾವಂತರು ಆದರೆ ದೇವರಾತ್ಮನು ಇವರ ಹೃದಯದಲ್ಲಿ ದೇವರ ವಾಕ್ಯದ ಸತ್ಯಾಶಗಳನ್ನು ಮಾತನಾಡಿ ಬದಲಾಗುವುದನ್ನು ನೋಡುವಾಗ ಇಂತಹ ಕ್ರಿಯೆಗಳು ನಡೆಯಬೇಕಾದರೆ ಅನೇಕ ಮಿಷಿನರಿಗಳು ಅನೇಕ ವರ್ಷಗಳು ಕಷ್ಟ ಪಟ್ಟು ಸೇವೆ ಮಾಡುತ್ತಿರುವುದು ಜ್ಞಾಪನಕ್ಕೆ ಬರುತ್ತದೆ].

ಎಂದು ತುಂಬಾ ತಡ ಮಾಡಬೇಡಿ, ಎಂದೂ ಕಳೆದುಕೊಳ್ಳಬೇಡಿ.

ನೇಪಾಳ ದೇಶದ ನವಲ್‌ಪರ್ಸಿ ಎಂಬ ಮಾಟಗಾರ/ ಮಂತ್ರವಾದಿ ವೈದ್ಯನು ಓದಿರಲಿಲ್ಲ ಆದರೆ ಸುಮಾರು ೬೬ ವರ್ಷಗಳು ಆ ಪ್ರಾಂತ್ಯದ ಜನರನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದನು, ಅಲ್ಲಿನ ಜನರು ಅವನನ್ನು ನೋಡಿದರೆ ಭಯಪಡುತ್ತಿದ್ದರು.

ಇವನಿಗೆ ಸುಮಾರು ೬೦ ವಯಸ್ಸಾಗಿದ್ದ ಸಮಯದಲ್ಲಿ ಯೇಸುವಿನ ಬಗ್ಗೆ ತಿಳಿಯಿತು ಆದರೆ ಇವನು ನನಗೆ ಯೇಸುವಿನ ಅವಶ್ಯಕತೆ ಎಲ್ಲವೆಂದು ನೆನೆಸಿದ್ದನು. ಜನರ ಪ್ರಾರ್ಥನೆಯನ್ನು ಯೇಸು ಕೇಳಿ ಉತ್ತರ ಕೋಡುತ್ತಿರುವುದು ಆತನು ಜನರಿಂದ ಕೇಳಿಸಿಕೊಳ್ಳುತ್ತಿದ್ದನು ಆದರೆ ಅವನಿಗೆ ದುರಾತ್ಮಗಳು ನನಗೆ ಸಹಾಯ ಮಾಡುತ್ತಿದ್ದಾವೆ ಆದ ಕಾರಣ ನನಗೆ ಏಸುವಿನ ಸಹಾಯ ಅವಶ್ಯಕತೆ ಇಲ್ಲವೆಂದು ನೆನೆಸಿರುತ್ತಾನೆ.

ಒಂದು ದಿನ ಈತನ ಮೊಮ್ಮಗನು ಅಸ್ವಸ್ತನಾಗಿ ಸಾಯುವ ಸ್ಥಿತಿಗೆ ಬಂದಿರುತ್ತಾನೆ. ಈ ಮಂತ್ರವಾದಿ ತನ್ನ ಎಲ್ಲಾ ದುರಾತ್ಮಗಳ ಮೊರೆ ಹೋಗುತ್ತಾನೆ ಆದರೆ ಏನು ಪ್ರಯೋಜನೆಯಾಗಲಿಲ್ಲ ಆದರೆ ಕಾಯಿಲೆ ಇನ್ನೂ ಹೆಚ್ಚಾಯಿತು ಆಗ ಇವನು ಗಾಭರಿಗೋಂಡು ಒಬ್ಬ ಸುವಾರ್ತಿಕನ ಬಳಿಗೆ ಹೋಗಿ ತನ್ನ ಮೋಮ್ಮಗನ ಬಗ್ಗೆ ಯೇಸುವಿನಲ್ಲಿ ಪ್ರಾರ್ಥಿಸುವ ಹಾಗೆ ಕೇಳಿಕೊಂಡ, ಅವರು ಪ್ರಾರ್ಥಿಸಿದಾಗ ಆ ಹುಡುಗನ ಕಾಯಿಲೆವಾಸಿಯಾಯಿತು. ಆತನು ಯೇಸುವನ್ನು ಹಿಂಭಾಲಿಸಲಿಲ್ಲ ಆದರೆ ತನ್ನ ಮಂತ್ರವಾದಿ ವೈದ್ಯ ವೃತ್ತಿಯಲ್ಲಿ ಮುಂಡುವರೆಸಿದ.

ಮೂರು ತಿಂಗಳಿ ಕಳೆದ ಮೇಲೆ, ಈತನ ಹೆಂಡತಿ ಕ್ರಿಸ್ತನ ಭಕ್ತಳಾಗಿದ್ದಳು, ಆಕೆ ಎಸ್ ಟಿ ಎಸ್ ತರಬೇತಿಗೆ ಆಜರಾಗಿ ದೇವರ ವಾಕ್ಯಗಳನ್ನು ಕಲಿತ್ತಿದ್ದಳು. ಒಂದು ಸಂಜೆ ಮನೆಗೆ ಬಂದು ತರಬೇತಿಯಲ್ಲಿ ಕಲಿತ ಕಥೆಯನ್ನು ಅವನಿಗೆ ತಿಳಿಸಿದಳು.

ಆ ಹೆಂಗಸು ಆ ದಿನ ನಾಮಾನನ ಕಥೆ ಕಲಿತ್ತಿದ್ದಳು. ಆ ಕಥೆಯನ್ನು ೨ ಅರಸರು ೫ ಅಧ್ಯಾಯಲ್ಲಿದೆ ಅದನ್ನು ಅವರು ನೇಪಾಳಿ ಭಾಷೆಯಲ್ಲಿ ಕಲಿತು ಅಭ್ಯಾಸ ಮಾಡಿದ್ದರು. ನಾಮನನು ಸಿರಿಯ ದೇಶದ ಒಬ್ಬ ಸೇನಾದಿ ಪತಿಯಾಗಿದ್ದನು ಆದರೆ ಅವನಿಗೆ ಕುಷ್ಟರೊಗವಿತ್ತು. ಇಸ್ರಯೇಲ್ ದೇಶದಲ್ಲಿ ನನಗೆ ಸ್ವಸ್ಥತೆಯಾಗುತ್ತದೆ ಎಂದು ತಿಳಿದಾಗ ಆ ದಿನಗಳಲ್ಲಿ ಸಿರಿಯಾ ಹಾಗು ಇಸ್ರಯೇಲ್ ದೇಶಗಳ ಮದ್ಯೆ ವೈರತ್ವವಿದ್ದರು ಅವನು ಸಿರಿಯಾ ದೇಶದಿಂದ ಇಸ್ರಯೇಲ್ ದೇಶಕ್ಕೆ ಬೆಲೆಯುಳ್ಳ ವಸ್ತುಗಳೆಲ್ಲವುಗಳನ್ನು ತೆಗೆದುಕೊಂಡು ಸ್ವಸ್ಥತೆ ಹೊಂದಲು ಇಸ್ರಯೇಲ್ ದೇಶಕ್ಕೆ ಪ್ರಾಯಾಣ ಮಾಡುತ್ತಾನೆ.

ಆದರೆ ನಾಮಾನನು ಏಲೀಶನ ಮನೆಗೆ ಬಂದಾಗ ಏಲೀಶನು ನಾಮಾನನ್ನು ಸ್ವಾಗತಿಸಲು ಬರಲಿಲ್ಲ ಆದರೆ ಏಲೀಶನ ಸೇವಕನು ಬಂದು ಪ್ರಾವಾಧಿ ತಿಳಿಸಿದ ವಚನಗಳನ್ನು ಅವನಿಗೆ ತಿಳಿಸುತ್ತಾನೆ ಆದೇನೆಂದರೆ ಸ್ಥಳೀಯ ನದಿಯಲ್ಲಿ ಏಳು ಸಲ ಮುಳುಗಬೇಕು ಆಗ ನಿನ್ನ ಕುಷ್ಟ ವಾಸಿಯಾಗುತ್ತದೆ ಎಂದು ತಿಳಿಸಿದನು, ಅದ್ದಕ್ಕೆ ನಾಮಾನನು ನಮ್ಮ ದೇಶದ ದಮಸ್ಕದ ಅಬಾನ ಹಾಗು ಪರ್ಪರ್ ಎಂಬ ಹೊಳೆಗಳು ಇಸ್ರಾಯೇಲ್ಯರ ಎಲ್ಲಾ ಹೋಳೆಹಳ್ಳಗಳಿಗಿಂತ ಉತ್ತಮವಾಗಿವೆಯಲ್ಲವೋ? ಸ್ನಾನದಿಂದ ವಾಸಿಯಾಗುವ ಹಾಗಿದ್ದರೆ ನಾನು ಅವುಗಳಲ್ಲಿಯೇ ಸ್ನಾನಮಾಡಬಹುದಲ್ಲವೋ ಎಂದು ಹೇಳಿ ಬಲು ಸಿಟ್ಟಿನಿಂದ ಹೊರಟುಹೊದನು.

ನಾಮನನ ಸೇವಕನು ಆತನಲ್ಲಿ ವಿನಂತಿಸಿಕೊಂಡು, ದಯಮಾಡಿ ಆ ಪ್ರಾವಾದಿಯ ಮಾತಿಗೆ ವಿದೆಯನಾಗಿ ಆ ನದಿಯಲ್ಲಿ ಮುಳುಗು ನಿನಗೆ ಸ್ವಸ್ಥತೆಯಾಗಬಹುದು ಎಂದು ತಿಳಿಸಿದ ಆಗ ಆತನು ತನ್ನ ಸೇವಕನು ಹೇಳಿದ ಹಾಗೆ ನದಿಗೆ ಬಂದು ಮುಳುಗಿದ ತಕ್ಷಣವೇ ಅವನ ಕುಷ್ಟವು ಹೊರಟುಹೊಯಿತು !

ಈ ಕಥೆಯನ್ನು ಕೇಳಿದ ತಕ್ಷನವೇ ಈ ಮಂತ್ರವಾದಿ ವೈದ್ಯನು ತನ್ನ ಹೆಂಡತಿಗೆ ನಾನು ಆ ನಾಮನನ ಹಾಗೆ ನನ್ನ ಗರ್ವದಿಂದ ನಾನು ಕ್ರಿಸ್ತನ ಬಳಿಗೆ ಬರಲಿಲ್ಲ ಎಂದು ತಿಳಿಸಿದ.

ಇದಾದ ಮೇಲೆ ಮುಂದಿನ ದಿನವೆ ಆ ಮಂತ್ರವಾದಿ ವೈದ್ಯನು ತನ್ನ ಹೆಂಡತಿಯ ಜೊತೆಗೆ ಯೇಸುವನ್ನು ಆರಾದಿಸಲು ಸಭೆಗೆ ಹೊರಟನು. ಈತನು ಅಲ್ಲಿ ತರಬೇತಿಕೊಡುತಿದ್ದ ನಾಯಕನಿಗೆ ನಾನು ಯೇಸುವನ್ನು ಹಿಂಬಾಲಿಸಬೇಕು ಎಂದು ತಿಳಿಸಿದ ಆಗ ಆ ನಾಯಕನು ಅವನಿಗೆ ದೇವರ ಬಗ್ಗೆ ಹೆಚ್ಚಾಗಿ ತಿಳಿಸಿದ ಈ ಮಂತ್ರವಾದಿ ವೈದ್ಯನು ಕ್ರಿಸ್ತನನ್ನು ತನ್ನ ತಕ್ಷಕನಾಗಿ ಅಂಗೀಕರಿಸಿದನು. ಆದರೆ ಆಗೆ ಈತನು ತಮ್ಮ ಜೀವಿತ ಕಾಲವೆಲ್ಲಾ ಕಟ್ಟಕೆಲಸಕ್ಕೆ ಉಪಯೊಗಿಸಿಬಿಟ್ಟಿದ್ದ ಆದರು ಯೇಸು ಈತನನ್ನು ತನ್ನ ಮಗನಾಗಿ ಸ್ವೀಕರಿಸಿದರು, ಈ ಆನಂದವನ್ನು ಅಲ್ಲಿ ಬಂದಿದ್ದ ಎಲ್ಲರಿಗೂ ಈತ ಈ ರೀತಿ ತಿಳಿಸಿದ.

ನಾಮಾನನು ತುಂಬಾ ಗರ್ವಪಟ್ಟನು ಆದಕಾರಣ ಅವನು ಸ್ವಸ್ಥತೆ ಹೊಂದುವುದು ನಿದಾನವಾಯಿತು, ಅದೇ ರೀತಿ ನನಗೂ ತುಂಬಾ ಗರ್ವವಿತ್ತು, ನನಗೆ ಯೇಸುವಿನ ಬಗ್ಗೆ ಅನೇಕ ವರ್ಷಗಳಿಂದ ಗೋತ್ತಿತ್ತು ಆದರೆ ಆತನನ್ನು ಅಂಗೀಕರಿಸಲು ಮುಂದೆಬರಲಿಲ್ಲ, ಆತನು ನನಗೆ ಬೇಡವೆಂದುಕೊಂಡೆ ಹಾಗು ಜನರ ಮೇಲೆ ನನಗಿದ್ದ ಅಧಿಕಾರ ನಾನು ಕಳೆದುಕೊಳ್ಳಲು ನನಗೆ ಇಷ್ಟವಾಗಲಿಲ್ಲ, ಯೇಸು ನನ್ನ ಮೋಮ್ಮಗನ್ನು ಸ್ವಸ್ಥ ಮಾಡಿದಾಗಲು ನನಗಿದ್ದ ಗರ್ವ ನನ್ನನ್ನು ನಾಶನದ ಮಾರ್ಗಕ್ಕೆ ತೆಗೆದುಕೊಂಡು ಹೋಯಿತು. ಆದರೆ ಈಗ ನಾನು ಕ್ರಿಸ್ತನನ್ನು ನನ್ನ ಸ್ವತ್ತ ರಕ್ಷಕನಾಗಿ ಅಂಗೀಕರಿಸಿದ್ದೇನೆ ಹಾಗು ಆತನ್ನು ಹಿಂಬಾಲಿಸುತ್ತಿದ್ದೇನೆ ಎಂದು ತಿಳಿಸಿದರು.

ನಿಜವಾಗಿ, ವಿಧ್ಯಾವಂತನಾಗಿರಲಿ ಅಥವ ಅವಿಧ್ಯಾವಂತನಾಗಿರಲಿ ಅವರು ದೇವರ ವಾಕ್ಯದಲ್ಲಿ ಆತ್ಮೀಕ ಸತ್ಯತೆಯನ್ನು ಕಂಡುಕೊಂಡಾಗ ಪವಿತ್ರಾತ್ಮನಿಗೆ ಕೃತಜ್ಞತೆಕೋಡಬೇಕು, ಮಂತ್ರವಾದಿ ವೈದ್ಯನು ದೇವರ ವಾಕ್ಯವನ್ನು ಕೇಳಿದ ಮೇಲೆ

ತನ್ನ ಹೃದಯವನ್ನು ಪರಿವರ್ತನೆ ಮಾಡುಕೊಳ್ಳುತ್ತಾನೆ ಹಾಗು ಆ ಕಥೆಯಲ್ಲಿ ಆಳವಾಗಿ ಕಲಿತುಕೊಳ್ಳುತ್ತಾನೆ ಆಗ ಆತನ ಜೀವಿತವು ಕನ್ನಡಿಯಲ್ಲಿ ತೊರ್ಪಡಿಸಿದ ಹಾಗೆ ಆತನಿಗೆ ಜ್ಞಾನೊದಯವಾಯಿತು.

ಸಂತೋಷದ ಸಂಗತಿಯೆಂದರೆ ಈ ಎಸ್ ಟಿ ಎಸ್ ತರಬೇತಿಗಳನ್ನು ನಡೆಸುವವರು ಎರಡು, ಮೂರು ಹಾಗು ನಾಲ್ಕು ತಲೆಮಾರುಗಳಾಗಿ ತರಬೇತಿ ಕೊಡುವವರಾಗಿದ್ದಾರೆ ಅವರೇ ಈ ಸೇವೆಯ ವರಧಿಗಳನ್ನು ನಮಗೆ ಕಳಿಹಿಸಿಕೊಡುತ್ತಿದ್ದಾರೆ. ಇವರೆಲ್ಲರೂ ಮೌಖಿಕವಾಗಿ ಕಲಿಯುವ ಸಂಪ್ರಧಾಯಗಳಿಂದ ಬಂದಿರುತ್ತಾರೆ ಹಾಗು ಇವರೆಲ್ಲರೂ ಹಳ್ಳಿಗಳಲ್ಲಿ ವಾಸವಾಗಿರುತ್ತಾರೆ.

ವಾಕ್ಯ ವಿವರಣೆ ಕೊಡುವ ಗ್ರಂಥಗಳನ್ನು (ಕಾಮೆಂಟ್ರೀಸ್) ಉಪಯೋಗದ ಕುರಿತಾಗಿ ಏನು ಹೇಳುವುದು?

ವಿಮರ್ಶೆಗಳು ದೊಡ್ಡ ಆಶೀರ್ವಾದವಾಗಿರಲು ಸಾಧ್ಯವಾಗಿದೆ. ವಿಮರ್ಶಕರ ದೃಷ್ಟಿಯನ್ನು ಕಂಡುಹಿಡಿಯುವುದು, ಒಬ್ಬ ವ್ಯಕ್ತಿಯು ವೈಯಕ್ತಿಕವಾಗಿ ಒಂದು ಅಭಿಪ್ರಾಯವನ್ನು ಕೊಡುವುದನ್ನು ಕೇಳಿಸಿಕೊಳ್ಳುವ ಹಾಗೆಯೇ ಇರುತ್ತದೆ. ಒಂದು ವ್ಯತ್ಯಾಸವೆಂದರೆ, ಪ್ರಕಟಗೊಂಡ (ಬಹಿರಂಗವಾದ) ಬೋಧನೆಯು ನಿರ್ಧಿಷ್ಟವಾಗಿ ನಿಖರವಾಗಿರಬೇಕೆಂದು ನಾವು ಅಪೇಕ್ಷಿಸುವ ಪ್ರವೃತ್ತಿಯುಳ್ಳವರಾಗಿದ್ದೇವೆ. ಸಮಯ, ಧ್ಯಾನ ಮತ್ತು ಸಾಮಾನ್ಯವಾಗಿ ಕೆಲವು ಬಗೆಯ ಅಜಾಗರೂಕತೆಯು ಪ್ರಕಟಗೊಂಡ ಕೆಲಸದೊಳಗೆ ಹೋಗುವಂತಹುದಾಗಿದೆ. ಆದಾಗ್ಯೂ, ಮೂಲದ ಕುರಿತಾಗಿ ಚಿಂತಿಸಬೇಕಾಗಿಲ್ಲ, ಆದರೆ ಅಭಿಪ್ರಾಯಗಳು ಮತ್ತು ಬೋಧನೆ ಇವೆರಡು ವಾಕ್ಯಭಾಗದಿಂದ ಪರಿಶೀಲಿಸಲ್ಪಡಬೇಕು.

ನಾವು ಏನು ಕೇಳಿಸಿಕೊಂಡೆವೋ ಅದನ್ನು ಕಲಿಸುವುದರ ಸಮರ್ಥನೆಗೆ ಮಾರ್ಗವನ್ನು ಕರ್ತನು ನಮಗೆ ತೋರಿಸಿದನು.

"ಕೂಡಲೇ ಸಹೋದರರು ರಾತ್ರಿಯಲ್ಲಿ ಪೌಲ ಸೀಲರನ್ನು ಬೇರೆ ಸ್ಥಳಕ್ಕೆ ಕಳುಹಿಸಿಬಿಟ್ಟರು. ಅವರು ಅಲ್ಲಿಗೆ ಸೇರಿ ಯೆಹೂದ್ಯರ ಸಭಾಮಂದಿರದೊಳಕ್ಕೆ ಹೋದರು. ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಸಿದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು." ಅ.ಕೃ. 17:10-11:

ಬೆರೋಯ ಪಟ್ಟಣದ ಈ ಜನರು ವಾಕ್ಯಭಾಗದಿಂದ ಅವರಿಗೆ ಏನು ಬೋಧಿಸಲಾಗುತ್ತಿತ್ತೋ ಅದರ ನ್ಯಾಯಸಮ್ಮತೆಯ ಅಳತೆಯನ್ನು ಮಾಡುವುದಕ್ಕೆ ಶ್ಲಾಘನೀಯವಾಗಿದ್ದರು. ಬೆರೋಯದವರು ತಮ್ಮ ಅಂತಿಮ ಅಧಿಕಾರವಾಗಿ ವಾಕ್ಯಭಾಗಗಳನ್ನು ಬಿಗಿಯಾಗಿ ಹಿಡಿದವರಾಗಿದ್ದರು. ಆಸಕ್ತಿಕರವಾಗಿದೆ. ಯಾರ ಬೋಧನೆಗಳನ್ನು ನ್ಯಾಯಸಮ್ಮತೆಗಾಗಿ ಅಳೆಯಲಾಗುತ್ತಿತ್ತೆಂದು ನಾನು ಆಶ್ಚರ್ಯಪಡುತ್ತೇನೆ?...
ನೀವು ಹೇಳಿದ್ದು ಸರಿ! ಅಪೋಸ್ತಲನಾದ ಪೌಲ! ಅಂದರೆ ಈದಿನ, ಆ ಉದಾಹರಣೆಯನ್ನು ಅನುಸರಿಸುತ್ತಾ, ವಿಮರ್ಶೆಗಳಲ್ಲಿನ ಮಾಹಿತಿಯನ್ನು ಮತ್ತು ನಮಗೆ ಬೋಧಿಸುವವರಿಂದ ಬಂದ ನಿರೂಪಣೆಯನ್ನು ಅಳೆಯುವುದಕ್ಕೆ ನಾವು ಸತ್ಯವೇದವನ್ನು ಉಪಯೋಗಿಸಲೇಬೇಕು.

ರೆಕಾರ್ಡ್ ಮಾಡಿದ ಅಥವಾ ಬರೆಯಲ್ಪಟ್ಟಿರುವ ವಾಕ್ಯಭಾಗಗಳಿಗೆ ಪ್ರವೇಶವಿರುವ ಜನರಿಗೆ ಕಥೆಯ ಮೂಲಕ ಸೇವೆ ಸಲ್ಲಿಸುವಾಗ, ನಿಮ್ಮ ಚರ್ಚೆಯ ಕೊನೆಯಲ್ಲಿ, ನಿಮ್ಮ ಕಥೆಯ ವಾಕ್ಯ ಭಾಗದ ಉಲ್ಲೇಖದ ಕುರಿತಾಗಿ ತಿಳಿಸುವುದನ್ನು ಖಚಿತಪಡಿಸಿಕೊಳ್ಳಿ.

ಆಫ್ರಿಕಾದ ಒಂದು ದೊಡ್ಡ ಗುಂಪಿನಲ್ಲಿ, ಪ್ರತಿಯೊಬ್ಬರೂ ಕಥೆಗಳ ಪರಿಣಾಮವನ್ನು ಮತ್ತು *ಕಥೆ* ಮಾತ್ರದ ಮೌಖಿಕ ವಿಧಾನದ ಉಪಯೋಗವನ್ನು ಸಮ್ಮತಿಸಿ ಹೊಗಳುತ್ತಿದ್ದರು. ಸತ್ಯವೇದದ ಕಥೆಗಳನ್ನು ಕಲಿಯುತ್ತಿದ್ದ ಒಬ್ಬ ಅತ್ಯಾಸಕ್ತಿಯ (ಮತ್ತು ಸ್ವಲ್ಪಮಟ್ಟಿಗೆ ಸಮಯಸಾಧಕ) ಯೌವನಸ್ಥ ಹುಡುಗನು ಒಂದು ಆಸಕ್ತಿಕರವಾದ ಪ್ರಶ್ನೆಯನ್ನು ಕೇಳಿದನು. ಅವನು ಧೈರ್ಯಮಾಡಿ, "ನೀವು ನಮಗೆ ವಿಮರ್ಶೆಗಳನ್ನು ಕಳುಹಿಸಲು ಸಾಧ್ಯವೇ?" ಎಂದನು.

ನಾನು ತಬ್ಬಿಬ್ಬಾದೆ, ನಂತರ "ಅದನ್ನು ಸಿದ್ಧಪಡಿಸಲಾಗುವುದು. ವಿಮರ್ಶೆಗಳಲ್ಲಿರುವ ಮಾಹಿತಿಯ ನ್ಯಾಯಸಮ್ಮತೆಯನ್ನು ಅಳೆಯುವುದಕ್ಕಾಗುವಂತೆ, ನಾವು ಪಟ್ಟಿಮಾಡಿರುವ ಎಲ್ಲಾ 210 ಕಥೆಗಳನ್ನು ನೀನು ಕಲಿತುಕೊಂಡಾಗ, ನಮ್ಮನ್ನು ಭೇಟಿಮಾಡು" ಎಂದು ಹೇಳಿದೆ. (ಈಗ ಮೌಖಿಕ ವಿಧಾನದ ಸತ್ಯವೇದದ ಶಾಲೆಗಳಲ್ಲಿ 296 ಕಥೆಗಳನ್ನು ಕಲಿಯುತ್ತಿದ್ದಾರೆ)

ಇನ್ನು ಕೆಲವು ಕಡೆಗಳಲ್ಲಿ, ವಿಮರ್ಶಕರ ಅಭಿಪ್ರಾಯಗಳನ್ನು ವಾಕ್ಯಭಾಗಗಳ ಸರಳವಾದ ಜ್ಞಾನಕ್ಕಿಂತಲೂ ಹೆಚ್ಚಾದ ಮಟ್ಟದಲ್ಲಿ ಎತ್ತಿಹಿಡಿಯಲಾಗುತ್ತದೆ. ಕೆಲವೊಮ್ಮೆ ಜನರು ವಾಕ್ಯದ ಅರ್ಥವನ್ನು ವಿಮರ್ಶಕರಿಂದ ತೆಗೆದುಕೊಳ್ಳುವವರಾಗಿರುತ್ತಾರೆ ಏಕೆಂದರೆ ತಾವೇ ಖುದ್ದಾಗಿ ಅಧ್ಯಯನ ಮಾಡುವುದರ ಗುರಿಯಲ್ಲಿ ಕೊರತೆಯುಳ್ಳವರಾಗಿರುತ್ತಾರೆ. ಸತ್ಯವೇದದಲ್ಲಿ ಆಳವಾಗಿ ಹೋಗಿ ಕಲಿತುಕೊಳ್ಳುವುದರ ಬದಲು ಇವರು, ವಿದ್ಯಾವಂತರಾದ ಮತ್ತು ಪ್ರಕಟಪಡಿಸುವ ದೈವಶಾಸ್ತ್ರಜ್ಞರ ಅವಲೋಕನವನ್ನು ಸತ್ಯವೆಂಬುದಾಗಿ ಸೇರಿಸಿಕೊಳ್ಳುತ್ತಾರೆ.

ಸತ್ಯವೇದವು ಸಾಮಾನ್ಯ ವ್ಯಕ್ತಿಗಾಗಿ ಕೊಡಲ್ಪಟ್ಟಿದ್ದರೂ ಸಹ, ಇದರಲ್ಲಿರುವ ಆಳವಾದ ಮತ್ತು ಅತ್ಯಮೂಲ್ಯವಾದ ಸತ್ಯಗಳು ವಿದ್ಯಾವಂತರಾದ ದೈವಶಾಸ್ತ್ರಜ್ಞರಿಂದ, ಇಲ್ಲವೇ ನಮ್ಮ ಸಭೆಗಳಲ್ಲಿ ಪ್ರಸಂಗಿಸುವವರಿಂದ ಅಥವಾ ಬೇರೆಯವರಿಗಾಗಿ ತಾವು ಕಂಡುಹಿಡಿದವುಗಳನ್ನು ಬರೆಯುವವರಿಂದ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ ಎಂಬ ನಮ್ಮ ಆಲೋಚನಾ ರೀತಿಯ ವಿರುದ್ಧವಾಗಿ ನಾವೆಲ್ಲರೂ ಎಚ್ಚರಿಕೆಯಿಂದಿರಬೇಕು. ಇದು ಒಂದು ಆಯ್ದ ಗುಂಪಿನವರು ಮಾತ್ರ ಮಾಡಬಲ್ಲರು ಎಂಬ ದೃಷ್ಟಿಯುಳ್ಳದ್ದಾಗಿದೆ. ಇಂತಹ ದೃಷ್ಟಿಯು, ದೇವರು ಕೆಲವರನ್ನು ಮಾತ್ರವೇ ಸತ್ಯವನ್ನು ವಶದಲ್ಲಿಟ್ಟುಕೊಳ್ಳುವವರು ಅಂದರೆ ವಿದ್ಯಾಭ್ಯಾಸದ ಆಶೀರ್ವಾದವನ್ನು ಹೊಂದಿರುವ ಆ ಕೆಲವರು ಮಾತ್ರವೇ ಎಂಬ ಅಂತಿಮ ನಿರ್ಧಾರಕ್ಕೆ ನಮ್ಮನ್ನು ನಡೆಸುತ್ತದೆ.

ನಾವು ಗುಂಪಿನ ಕಲಿಕೆಯ ಮೌಲ್ಯವನ್ನು ಅಂಗೀಕರಿಸುತ್ತೇವೆ. ಒಂದರ್ಥದಲ್ಲಿ, ಒಂದು ಗುಂಪಿನ ಚರ್ಚೆಯಲ್ಲಿ ಭಾಗವಹಿಸುವುದೆಂದರೆ ಅದು ಒಬ್ಬ ಲೇಖಕನು ಒಂದು ವಿಮರ್ಶೆಯಲ್ಲಿ ಕೊಡುವ ಮೌಲ್ಯಾಧಾರಿತ ಮಾಹಿತಿಯನ್ನು ಸವಿಯುವ ಹಾಗಿರುತ್ತದೆ. ಒಂದು ಕಥೆಯ ಚರ್ಚೆಯು ನಡೆಯುತ್ತಿರುವಾಗ, ಕಥೆಯ ಕುರಿತಾಗಿ ಯಾರಾದರೂ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ನಾವು ಯಾವಾಗಲೂ, "ನೀವು ಇದನ್ನು ಕಥೆಯಲ್ಲಿ ಎಲ್ಲಿ ನೋಡುವಿರಿ?" ಎಂದು ಕೇಳಬೇಕು. ಅದೇ ರೀತಿಯಲ್ಲಿ ವಿಮರ್ಶೆಗಳ ಒಳಗಿರುವ ಮಾಹಿತಿಯನ್ನು ದೃಢೀಕರಿಸುವುದಕ್ಕೆ ನಾವು ಕಲಿಯುವವರನ್ನು ಪ್ರೋತ್ಸಾಹಿಸುತ್ತೇವೆ.

ವಾಸ್ತವವಾಗಿ, ಒಂದು ವಾಕ್ಯಭಾಗದ ಅರ್ಥಕ್ಕೆ ಯಾರಾದರೂ ಒಂದು ಸಲಹೆಯನ್ನು ಕೊಡುವಾಗ, ಅವರು ಒಬ್ಬ ವಿಮರ್ಶಕರ ಪಾತ್ರದಲ್ಲಿ ಕಾರ್ಯಮಾಡಲು ಪ್ರಯೋಜನವಾಗುತ್ತಾರೆ. ಆದುದರಿಂದ, ಯಾರು ಒಂದು ಅಭಿಪ್ರಾಯವನ್ನು ಕೊಡುತ್ತಾರೋ ಅದರ ಚಿಂತೆ ಇಲ್ಲ, ಅಂದರೆ ವಾಕ್ಯದಲ್ಲಿ ಪ್ರಾರಂಭ ಮಾಡುತ್ತಿರುವವರಾಗಿರಬಹುದು ಅಥವಾ ಅನೇಕ ವರ್ಷಗಳ ಅಧ್ಯಯನದ ಫಲವನ್ನು ಹಂಚಿಕೊಳ್ಳುತ್ತಿರುವ

ಉನ್ನತವಾದ ವಿದ್ಯಾಭ್ಯಾಸವುಳ್ಳ ಒಬ್ಬ ದೈವಶಾಸ್ತ್ರಜ್ಞರಾಗಿರಬಹುದು, ಆಗ ಏನನ್ನು ಹೇಳಲಾಗಿದೆಯೋ ಅದು ಸತ್ಯವೇದದ ಒಳಗಿದ್ದು ಸ್ಪಷ್ಟವಾಗಿ ಕಾಣುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

ನಿಖರತೆಯನ್ನು ಕಾಪಾಡಿಕೊಳ್ಳುವುದು: ಮರು ಪರಿಶೀಲನೆಯ ಬೆಲೆ

ಕಥೆ ಮಾತ್ರದ ಶೈಲಿಯ ಚರ್ಚೆಯಲ್ಲಿರುವ ಉಪಯೋಗಗಳಲ್ಲಿ ಒಂದು ಸಂಗತಿಯೆಂದರೆ ಅದು "ಮರು ಪರಿಶೀಲನೆ" ಎಂಬ ಬಲವಾದ ಸಾಧನ.
ಸತ್ಯವೇದದ ಕಥೆಗಳನ್ನು ಕಾಲಾನುಕ್ರಮದಲ್ಲಿ ನಿರೂಪಿಸಿದಾಗ *ಕಥೆ* ಮಾತ್ರದಲ್ಲಿನ ಮರು ಪರಿಶೀಲನೆ ಬಹಳ ಬೆಲೆಯುಳ್ಳದ್ದಾಗಿದೆ. ಕಥೆಯನ್ನು ಪ್ರಾರಂಭಿಸುವುದಕ್ಕೂ ಮುನ್ನ ಬೋಧಕರು ಒಂದು ಪರಿಚಯವನ್ನು (ಪೀಠಿಕೆಯನ್ನು) ಕೊಡುವುದರ ಬದಲು, ತರಗತಿಯ ಸದಸ್ಯರಿಗೆ ಹಿಂದಿನ ಕೂಟಗಳ ಕಥೆಯ ಮತ್ತು ಸಂಶೋಧನೆಗಳ ಸಂಕ್ಷಿಪ್ತವಾದ ಮರುಪರಿಶೀಲನೆಯನ್ನು ಕೊಡುವಂತೆ ಹೇಳಬಹುದು.

ಒಂದು ಬೋಧನೆಯ ವಿಭಾಗದಲ್ಲಿ ಹೊಸ ಜನರು ಉಪಸ್ಥಿತರಿರುವ ಸಂಭವವಿರುವುದರ ನಿಮಿತ್ತ, ಅಥವಾ ಬಹುಶಃ ಹಿಂದಿನ ಕೂಟಕ್ಕೆ ಕ್ರಮವಾಗಿ ಬರುತ್ತಿದ್ದವರು ಬರದೇ ಇದ್ದುದರ ನಿಮಿತ್ತ, ಹಿಂದಿನ ಕಥೆಯ ಮರುಪರಿಶೀಲನೆಯು, ಬರದೇ ಇದ್ದಂತಹ ಆ ಜನರಿಗೆ ಸಹಾಯ ಮಾಡುತ್ತದೆ. ತರಗತಿಯ ಸದಸ್ಯರು ಮರುಪರಿಶೀಲನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವುದರಿಂದ ಇದು ಅವರ ನೆನಪಿನಿಂದ ಕಥೆಯನ್ನು ಪುನರಾವರ್ತಿಸುವಂತೆ ಸಹಾಯ ಮಾಡುತ್ತದೆ.

ಮೊದಲೇ ಕಂಡುಹಿಡಿದಿರುವ ನಿಧಿಗಳ ಮುಖ್ಯ ಅಂಶಗಳನ್ನು ಹಂಚಿಕೊಳ್ಳುವುದಕ್ಕೆ ಮತ್ತು ಅವರು ಏನನ್ನು ಕಲಿತಿರುವರು ಎಂಬುದನ್ನು ಸದಸ್ಯರೊಂದಿಗೆ ಕೇಳಬೇಕು. ಮರು ಪರಿಶೀಲನೆಯು ಜನರು ತಮ್ಮ ಮನಸ್ಸಿನಲ್ಲಿ ಮಾಹಿತಿಯನ್ನು ಬಲವಾಗಿ ಹಿಡಿದುಕೊಳ್ಳುವಂತೆ ಮತ್ತು ಬೇರೆಯವರಿಗೆ ವಾಕ್ಯಗಳನ್ನು ಹೇಳುವಂತೆ ಅನುಮತಿಸುತ್ತದೆ.

ಹಿಂದಿನ ತರಗತಿಯಲ್ಲಿ ಭಾಗವಹಿಸಿದ್ದವರು ಆ ಕಥೆಯನ್ನು ಹೇಳುವಾಗ ಅವರು ಅದನ್ನು ಉಪಯೋಗಿಸಿಕೊಂಡ ಬಗೆಯ ಸಾಕ್ಷಿಯನ್ನು ಕೇಳುವುದಕ್ಕೆ ಇಂತಹ ಕೂಟ ಒಂದು ಉತ್ತಮವಾದ ಸ್ಥಳವಾಗಿರುತ್ತದೆ.

ಹಾಗೂ, ತರಗತಿಯ ಸದಸ್ಯರು ತಾವು ಕಳೆದ ವಾರದಲ್ಲಿ ಒಟ್ಟಾಗಿ ಏನನ್ನು ಕಲಿತಿರುವರೋ ಅದನ್ನು ಹಂಚಿಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನು ಕೊಡುವಾಗ, ಆ ವಾರ ಹೇಳಿದಂತಹ ಕಥೆ ಮತ್ತು ಅದರ ನಿಧಿಗಳನ್ನು ಸರಿಯಾಗಿ ಹಾಗೂ ನಿಖರವಾಗಿ ಅರ್ಥಮಾಡಿಕೊಳ್ಳಲಾಗಿದೆ ಎಂಬುದನ್ನು ಶಿಕ್ಷಕರು ಖಚಿತವಾಗಿ ತಿಳಿದುಕೊಳ್ಳಲು ಶಕ್ತರಾಗುತ್ತಾರೆ. ಒಂದು ವೇಳೆ ಕಳೆದ ಬಾರಿಯ ಬೋಧನೆಯಲ್ಲಿದ್ದಂತಹ ಜನರು ತಾವು ಏನು ಕಲಿತುಕೊಂಡಿರುವರೋ ಅದರ ಕುರಿತಾಗಿ ಸ್ಪಷ್ಟವಾಗಿಲ್ಲದಿದ್ದರೆ, ಅಥವಾ ಕಥೆಯನ್ನು ಹೇಳಲು ಸಾಧ್ಯವಾಗದಿದ್ದರೆ, ಆಗ ಶಿಕ್ಷಕರು ಪ್ರತಿಯೊಬ್ಬರಿಗಾಗಿ ಮರು ಪರಿಶೀಲನೆಯನ್ನು ಮಾಡುವುದಕ್ಕೆ ಇದು ಒಂದು ಸೂಚನೆಯಾಗಿದೆ.

ಕಳೆದ ಬಾರಿ ಹೇಳಿದ ಕಥೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ತನಕ ಬೇರೆ ಹೊಸ ಕಥೆಗೆ ಹೋಗುವುದರಲ್ಲಿ ಉಪಯೋಗವಿಲ್ಲ.

ಅಧ್ಯಾಯ 10
ಕಥೆ ಮಾತ್ರದ ಕಥೆಗಾರರ ವಿಂಗಡನೆಗಳು

ತೊಡಗಿಸಿಕೊಂಡಿರುವವರು (Practitioner)

ಎಲ್ಲಾ ಕಾರ್ಯಾಗಾರಗಳು ನಡೆಯುವಾಗ, ಅಲ್ಲಿ ಭಾಗವಹಿಸುವವರು ತರಬೇತಿಯನ್ನು ಮತ್ತು ವೈಯಕ್ತಿಕ ಬೋಧನೆಯನ್ನು ಪಡೆದುಕೊಳ್ಳುವರು. *ಕಥೆ* ಮಾತ್ರವನ್ನು ಹೇಗೆ ಮಾಡುವುದು ಎಂಬುದರ ಮೇಲೆ ಮಾಹಿತಿಯನ್ನು ವಹಿಸಿಕೊಡುವುದೇ ನಮ್ಮ ಜವಾಬ್ದಾರಿ ಮತ್ತು ಸಂತೋಷವೂ ಆಗಿದೆ. ಆಗ ಕಲಿತುಕೊಳ್ಳುವವರು *ಕಥೆ* ಮಾತ್ರದ ಅಂಶಗಳನ್ನು ಅಭ್ಯಾಸ ಮಾಡುವುದರ ಮತ್ತು ತಮ್ಮ ಕೌಶಲ್ಯವನ್ನು ತೋರ್ಪಡಿಸುವುದರ ಅಗತ್ಯವಿದೆ.

ಕಥೆ ಮಾತ್ರದ ಒಂದು ಕಾರ್ಯಾಗಾರದ ಅಭ್ಯಾಸದಲ್ಲಿ ಭಾಗವಹಿಸುವವರನ್ನು "ತೊಡಗಿಸಿಕೊಂಡಿರುವವರು" ಎಂದು ಕರೆಯಲಾಗುತ್ತದೆ. ಈ ರೀತಿಯಾದ ವಿಧಾನದಲ್ಲಿ, ಭಾಗವಹಿಸುವವರಲ್ಲಿ ಅನೇಕರು ತಮ್ಮ ಪರಿಣಾಮ ಬೀರುವ ಸ್ಥಳಗಳಲ್ಲಿ ಮತ್ತು ಸತ್ಯವೇದದ ಕಥೆಗಳನ್ನು ಪರಿಣಾಮಕಾರಿಯಾಗಿ ಹೇಳುವ ಸ್ಥಳಗಳಲ್ಲಿ ಹಾಗೂ ಚರ್ಚೆಯ ಮೂಲಕ ಸತ್ಯಗಳನ್ನು ತಿಳಿಯಪಡಿಸುವ ರೀತಿಯಲ್ಲಿ ಹೋಗುವುದಕ್ಕೆ *ಕಥೆ* ಮಾತ್ರದ ಅಂಶಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಮರ್ಥರಾಗಿರುತ್ತಾರೆ. ಇದರಲ್ಲಿ ತೊಡಗಿಸಿಕೊಂಡವರು ಬೇರೆ ಸ್ಥಳಗಳಿಗೆ ಹೋಗಿ ತಾವು ಕಲಿತಿರುವ ಸತ್ಯವೇದದ ಕಥೆಗಳನ್ನು ಹೇಳುವಂತೆ ನಾವು ಅವರಿಗೆ ಹೆಚ್ಚಾಗಿ ಪ್ರೋತ್ಸಾಹಿಸುತ್ತೇವೆ ಮತ್ತು ಕೋರಿಕೊಳ್ಳುತ್ತೇವೆ. ತೊಡಗಿಸಿಕೊಂಡವರು *ಕಥೆ* ಮಾತ್ರದ ವಿಧಾನಗಳನ್ನು ತಿಳಿಸಿಕೊಡುವದಕ್ಕಾಗುವಂತೆ ನಾವು ಅವರಿಗೆ ವಿವಿಧ ವಿಷಯ ಸಂಗ್ರಹಣೆಗಳನ್ನು ಕೊಡುತ್ತೇವೆ.

ಆದಾಗ್ಯೂ, ಈ ತೊಡಗಿಸಿಕೊಂಡವರು ಚೆನ್ನಾಗಿ ಕಥೆ ಹೇಳುವವರಾಗಲು ಸಿದ್ಧರಾಗಿದ್ದರೂ ಸಹ, *ಕಥೆ* ಮಾತ್ರದ ಒಂದು ಕಾರ್ಯಾಗಾರವನ್ನು ನಡೆಸುವುದಕ್ಕೆ ಅಥವಾ *ಕಥೆ* ಮಾತ್ರದ ಹೆಸರಿನಡಿ ವಿಧಿವತ್ತಾಗಿ ಬೇರೆಯವರಿಗೆ ತರಬೇತಿಕೊಡುವುದಕ್ಕೆ **ಇನ್ನೂ ಸಿದ್ಧರಾಗಿಲ್ಲ**.

ಕೆಲವೊಮ್ಮೆ ಸೇವೆಯನ್ನು ನಡೆಸುವ ಜನರು *ಕಥೆ* ಮಾತ್ರದ ಬೋಧನೆಯನ್ನು ತಮ್ಮ ಇನ್ನಿತರ ಬೋಧನೆಯ ವಿಷಯಗಳಲ್ಲಿ ಸೇರಿಸಿಕೊಳ್ಳುವುದು ಒಳ್ಳೆಯ ಯೋಜನೆಯಾಗಿದೆಯೇ ಎಂದು ನಮ್ಮನ್ನು ಕೇಳುತ್ತಾರೆ. ನಾವು ಆ ಆಲೋಚನೆಯ ತತ್ವವನ್ನು ಸಮ್ಮತಿಸುತ್ತಾ ಪ್ರತಿಕ್ರಿಯಿಸುತ್ತೇವೆ. ತೊಡಗಿಸಿಕೊಂಡವರು ದರ್ಶನವನ್ನು ಹಾಕಬಹುದಾಗಿದೆ. ಅವರು *ಕಥೆ* ಮಾತ್ರದ ಕುರಿತಾಗಿ ಸುಲಭವಾಗಿ ಮಾಹಿತಿಯನ್ನು ಕೊಡಬಹುದು ಮತ್ತು ಪ್ರೋತ್ಸಾಹಿಸಬಹುದು. ದರ್ಶನವನ್ನು ಹಾಕುವುದಕ್ಕೆ ನಾವು ಅವರಿಗೆ ಕೊಡುವ ಗುರಿಯ ಮಾಹಿತಿಯೊಂದಿಗೆ ಅವರು ತಮಗೆ ಈಗ ಏನು ತಿಳಿದಿದೆಯೋ ಅದನ್ನು ಸೇರಿಸಬಹುದು. ಈ ರೀತಿ ನಡೆಯುವುದನ್ನು ನೋಡಲು ನಾವು ಇಷ್ಟಪಡುತ್ತೇವೆ.

ನಮ್ಮ ಹಿಂಜರಿಯುವಿಕೆ ಇದು. ಕಥೆ ಮಾತ್ರವನ್ನು ಸರಿಯಾಗಿ ಬೋಧಿಸುವಕ್ಕೆ ಒಬ್ಬ ವ್ಯಕ್ತಿಗೆ ಅಗತ್ಯವಾಗಿರುವುದು:

- *ಕಥೆ* ಮಾತ್ರದ ಪ್ರಕ್ರಿಯೆಯ ಪ್ರತಿ ಭಾಗದ ನಿಖರವಾದ ಗ್ರಹಿಕೆಯನ್ನು ಹೊಂದಿರುವುದು.
- *ಕಥೆ* ಮಾತ್ರದ ಒಂದು ಸ್ಪಷ್ಟವಾದ ನಮೂನೆಯನ್ನು ತೋರ್ಪಡಿಸುವುದಕ್ಕೆ ಸಮರ್ಥರಾಗಿರಬೇಕು.
- *ಕಥೆ* ಮಾತ್ರವನ್ನು ವಿವರಿಸುವಂತಹ ಎಲ್ಲವುಗಳ ತರ್ಕಬದ್ಧ ಸಮರ್ಥನೆಯನ್ನು (ಉದ್ದೇಶ ಮತ್ತು ಉಪಯೋಗ) ಅರಿತುಕೊಳ್ಳುವುದು.

ತೊಡಗಿಸಿಕೊಂಡವರು, "ತಾವು ಇದನ್ನು ಸರಳವಾಗಿಡಲು ಬಯಸುವರು ಮತ್ತು ಯಾರಿಗೆ ಇದರ ಅಗತ್ಯವಿದೆಯೋ ಅವರಿಗೆ ಈ ಹೊಸ ಮಾಹಿತಿಯನ್ನು ಕೊಡುವುದರ" ನಿಮಿತ್ತ ಸಂಪೂರ್ಣವಾಗಿ ತರಬೇತಿಗೊಳ್ಳುವುದಕ್ಕಿಂತ ಮೊದಲೇ ಮತ್ತು ಬೋಧಕರಾಗಿ ದೃಢೀಕರಿಸಲ್ಪಡುವುದಕ್ಕಿಂತ ಮೊದಲೇ ಮುಂದೆ ಸಾಗಿದಾಗ, ಅವರು ಒಂದು ಅನಿರೀಕ್ಷಿತವಾದ ಮತ್ತು ದುರದೃಷ್ಟಕರವಾದ ಫಲಿತಾಂಶದಿಂದ ಅಂತ್ಯಗೊಳ್ಳುತ್ತಾರೆ.

ಉತ್ಸಾಹಭರಿತರಾಗಿರುವ ಒಳ್ಳೆಯ ಉದ್ದೇಶವುಳ್ಳ ಇವರುಗಳು "ಅನಧಿಕೃತವಾದ" *ಕಥೆ* ಮಾತ್ರದ ತರಬೇತಿಗಳನ್ನು ಸ್ಥಾಪಿಸಿ ನಡೆಸಿರುವವರನ್ನು ನಾವು ನೋಡಿದ್ದೇವೆ. ಆದರೆ ಈ ತರಬೇತಿಯನ್ನು ನಡೆಸುತ್ತಿದ್ದವರು *ಕಥೆ* ಮಾತ್ರದ ಬೋಧಕರುಗಳಾಗಿ ಸಂಪೂರ್ಣವಾದ ತರಬೇತಿಯನ್ನು ಹೊಂದಿಲ್ಲದೆ ಇದ್ದುದರಿಂದ, ಅವರು ಸಂಪೂರ್ಣವಾಗಿರುವ *ಕಥೆ* ಮಾತ್ರದ ತರಬೇತಿಯನ್ನು ಒದಗಿಸುವುದಕ್ಕೆ ಅಸಮರ್ಥರಾಗಿದ್ದರು. ಇವರುಗಳ ಫಲಿತಾಂಶವು ಬಹಳ ಅಲ್ಪವಾಗಿತ್ತು. ಬಹಳ ಹದಗೆಟ್ಟ ಸಂಗತಿಯೆಂದರೆ, ಈ ತರಬೇತಿಗೆ ಒಂದು ಪರಿಣಾಮಕಾರಿಯಾದ, ಮರು ಉತ್ಪತ್ತಿ ಮಾಡಬಲ್ಲ ನಮೂನೆಯ ಬೋಧನೆ ಮತ್ತು ಕಥೆಗಳನ್ನು ಚರ್ಚಿಸುವುದಕ್ಕೆ ಕಲಿಯುವ ಅಪೇಕ್ಷೆಯಿಂದ ಬಂದವರು, ಒಂದು ಪೂರ್ಣವಾದ ಅಥವಾ ತೃಪ್ತಿಕರವಾದ ಅನುಭವವನ್ನು ಪಡೆಯಲಿಲ್ಲ.

ಆ ಜನರು ಅರ್ಧ ಸಿದ್ಧರಾಗಿ ಹೊರಟರು, ಮತ್ತು ದುಃಸ್ಥಿತಿಯೆಂದರೆ, ತಾವು "*ಕಥೆ* ಮಾತ್ರದ ಅನುಭವವನ್ನು" ಸಂಪೂರ್ಣವಾಗಿ ಪಡೆದಿರುವೆವು ಎಂಬ ತಪ್ಪಾಗಿ ಆಲೋಚಿಸಿಕೊಂಡರು. ಹೀಗೆ ಅತಿ ಶೀಘ್ರವಾಗಿ ಹೊರಗೆ ಬಂದುದರ ಫಲಿತಾಂಶವಾಗಿ, ಅವರು ಸಂಪೂರ್ಣವಾಗಿ ದೃಢೀಕರಣವಾಗುವ *ಕಥೆ* ಮಾತ್ರದ ಕಾರ್ಯಾಗಾರಕ್ಕೆ ಭಾಗವಹಿಸಲು ಅಪರೂಪವಾಗಿ ಆಸಕ್ತಿಯನ್ನು ತೋರಿಸುವವರಾಗಿದ್ದಾರೆ. ಅವರು ತಾವು ಈಗಾಗಲೇ *ಕಥೆ* ಮಾತ್ರದ ರುಚಿಯನ್ನು ನೋಡಿದ್ದೇವೆ ಎಂದು ಭಾವಿಸುತ್ತಾರೆ, ಆದರೆ ಅವರು ಅದನ್ನು ಸವಿದಿರುವುದಿಲ್ಲ.

"*ಕಥೆ* ಮಾತ್ರ" ಎಂಬ ಹೆಸರು ಇದು "ಸರಳವಾದುದ್ದಲ್ಲ" ಮತ್ತು ಇದು ಒಂದು ಕಥೆಯನ್ನು ಹೇಳುವುದನ್ನು ಮಾತ್ರ ಒಳಗೊಂಡಿರುತ್ತದೆ ಎಂದು ಜನರು ಆಲೋಚಿಸುವಂತೆ ಮಾಡುತ್ತದೆ. ಇದನ್ನೇ ನಾವು ಕಾರ್ಯಾಗಾರದಲ್ಲಿ ಮಾಡುವುದಾದರೆ, ನಾವು ತರಬೇತಿಯನ್ನು ಸುಲಭವಾಗಿ ಒಂದೇ ದಿನದಲ್ಲಿ ಮುಗಿಸಿಬಿಡಬಹುದು! ಆದರೆ ವಾಸ್ತವವಾಗಿ, *ಕಥೆ* ಮಾತ್ರವು **ಗುರಿಯ ನಿದರ್ಶನದಲ್ಲಿರುವ ಅನೇಕ ನಿದರ್ಶನದ ವರ್ಗಾವಣೆಗಳಾಗಿವೆ.**

ಹಾಗೂ, ಸತ್ಯವೇದಕ್ಕನುಗುಣವಾದ ಮಾಹಿತಿಯನ್ನು ಜನರು ಹೇಗೆ ಕಲಿಯುತ್ತಾರೆ ಮತ್ತು ಅನೇಕರು ಇದನ್ನು ಪರಿಣಾಮಕಾರಿಯಾಗಿ ಹೇಳುವುದರಲ್ಲಿ, **ಒಂದು ವೈಯಕ್ತಿಕ ಮಟ್ಟದ ಮೇಲೆ ಮತ್ತು ಸೇವೆಯ ಅಳವಡಿಕೆಯಲ್ಲಿ ಹೆಚ್ಚಾಗಿ ಸೇರಿಸಲ್ಪಟ್ಟಿರುವ ನಿದರ್ಶನದ ವರ್ಗಾವಣೆಗಳೂ ಸಹ ಇವೆ.**

ಕಾರ್ಯಾಗಾರಗಳನ್ನು ನಡೆಸುವವರು ಅತಿ ಹೆಚ್ಚಿನ ಸಮಯವನ್ನು ವಿನಿಯೋಗಿಸಿರುವರು ಮತ್ತು ತೊಡಗಿಸಿಕೊಳ್ಳುವವರಲ್ಲಿ ಇಂತಹ ಹೆಚ್ಚಿನ ಉತ್ಸಾಹವನ್ನು ಉಂಟುಮಾಡುವುದಕ್ಕೆ ಸಮರ್ಥರಾಗಿರುವರು ಎಂಬುದನ್ನು ಗಣನೆಯಲ್ಲಿಟ್ಟುಕೊಂಡು, ತಾವು ಪರಿಣಾಮಕಾರಿಯಾಗಿ ಬೋಧಿಸಬೇಕೆಂದು ಬಯಸುವ ತೊಡಗಿಸಿಕೊಳ್ಳುವವರೂ ಸಹ ಇದೇ ರೀತಿಯ ಬೆಲೆಯನ್ನು ತೆರಬೇಕೆಂದು ನಾವು ಅವರಿಗೆ ತಿಳಿಸುತ್ತೇವೆ.

ಕಥೆ ಮಾತ್ರದಲ್ಲಿ ಇತರರನ್ನು ತರಬೇತಿಗೊಳಿಸುವುದಕ್ಕೆ ಸರಿಯಾದ ೫ ದಿನದ ತರಬೇತಿಯನ್ನು ಹೊಂದಿಲ್ಲದೆ, ಮುಂದಿನ ಪೀಳಿಗೆಯ ಕಥೆ ಹೇಳುವವರು ಸಮರ್ಪಕವಾಗಿ ಬೇಕಾಗಿರುವ ತರಬೇತಿಗಿಂತಲೂ ಕಡಿಮೆ

ತರಬೇತಿಯೊಂದಿಗೆ ಮುಕ್ತಾಯ ಮಾಡುತ್ತಾರೆ. ಆ ಜನರು ಸೇವೆಯಲ್ಲಿ ಕಥೆಗಳನ್ನು ಉಪಯೋಗಿಸುವುದರಿಂದ ಕಷ್ಟಪಡುವಾಗ, ಇದರಿಂದಾಗುವ ನಿರಾಶೆಯು ಕಥೆ ಹೇಳುವುದು ಕೆಲಸ ಮಾಡುವುದಿಲ್ಲ ಹಾಗೂ ಇದನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದೇ ಲೇಸೆಂದು ತಪ್ಪಾಗಿ ನಿರ್ಧರಿಸುವ ಮಟ್ಟಕ್ಕೆ ಕರೆದೊಯ್ಯಬಲ್ಲದು.

ಕಥೆ ಮಾತ್ರವನ್ನು ಹೇಗೆ ನಡೆಸುವುದು ಮತ್ತು ಉಪಯೋಗಿಸುವುದು ಮತ್ತು ಇತರರನ್ನು ತರಬೇತಿಗೊಳಿಸುವುದು ಹೇಗೆ ಎಂಬುದರ ಪ್ರಾರಂಭವೇ ಮೊದಲ 5 ದಿನದ ತರಬೇತಿಯಾಗಿರುತ್ತದೆ. ಇದು *ಕಥೆ* ಮಾತ್ರದ ಕಾರ್ಯಾಗಾರವನ್ನು ಹೇಗೆ ನಡೆಸುವುದು ಎಂಬುದರ ಕುರಿತಾಗಿರುವುದಿಲ್ಲ.

ತೊಡಗಿಸಿಕೊಳ್ಳುವವರು, ಶಿಷ್ಯರನ್ನು ಅಧಿಕಗೊಳಿಸುವುದರಲ್ಲಿ ಮತ್ತು ಬೇರೆಯವರು ಕಲಿಯುವಂತೆ ಮಾಡುವುದರಲ್ಲಿ ಹಾಗೂ *ಕಥೆ* ಮಾತ್ರ ಕೌಶಲಗಳನ್ನು ಉಪಯೋಗಿಸುವುದರಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂಬುದು ಇದರ ಅರ್ಥವೇ? ಖಂಡಿತವಾಗಿಯೂ ಇಲ್ಲ! ವಾಸ್ತವವೆಂದರೆ, ಒಂದು ಶಿಷ್ಯತ್ವದ ವೇದಿಕೆಯಲ್ಲಿ *ಕಥೆ* ಮಾತ್ರವನ್ನು ಒಪ್ಪಿಸಿಕೊಳ್ಳುವ ಈ ರೀತಿಯನ್ನು ನಾವು ಪ್ರೋತ್ಸಾಹಿಸುತ್ತೇವೆ. ಶಿಷ್ಯರನ್ನು ಅಧಿಕಗೊಳಿಸುವ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಈ ಕೈಪಿಡಿಯಲ್ಲಿರುವ ಮಾಹಿತಿಯನ್ನು ನೋಡಿ: ಅಧ್ಯಾಯ 12: *ಕಥೆ* ಮಾತ್ರವನ್ನು ಕಲಿತುಕೊಳ್ಳುವುದಕ್ಕೆ ಮಾರ್ಗಗಳು.

ನಿಮ್ಮ ಗುಂಪಿನವರು ತರಬೇತಿಗೊಳ್ಳಬೇಕು ಎಂದು ನೀವು ಬಯಸುವುದಾದರೆ, ನಮ್ಮನ್ನು ಸಂಪರ್ಕಿಸಿ. ನಿಮ್ಮೊಂದಿಗೆ ಕಾರ್ಯ ಮಾಡಲು ನಾವು ಸಂತೋಷವುಳ್ಳವರಾಗಿದ್ದೇವೆ. ಮತ್ತು ನೀವು ಬಯಸುವುದಾದರೆ, ನೀವು ಸಂಪೂರ್ಣವಾದ ಬೋಧಕರ ಮಟ್ಟಕ್ಕೆ ಬರುವುದಕ್ಕೆ ನಾವು ಒಂದು ಯೋಜನೆಯ ಮಾದರಿಯನ್ನು ನೀಡಲು ಇಷ್ಟಪಡುತ್ತೇವೆ. ಆದರೆ ದಯವಿಟ್ಟು, ನಿಮ್ಮ ಸ್ವಂತವಾಗಿ "*ಕಥೆ* ಮಾತ್ರದ ಕಾರ್ಯಾಗಾರವನ್ನು" ನಡೆಸುವುದಕ್ಕೆ ಪ್ರಯತ್ನಿಸಬೇಡಿ. ಹೇಚ್ಚಾಗಿ ತರಬೇತಿ ಹೊಂದಿರುವ ನಾಯಕರು ಹಿತರರಿಗೆ ಕಲಿಸಿ ಅವರು ಅದನ್ನು ಚನ್ನಾಗಿ ಕಲಿತ ಮೇಲೆ ಅವರನ್ನು ನಾಯಕರಾಗಿ ಮಾಡಿ ಅವರು ತರಬೇತಿಗಳನ್ನು ಕೊಡಲು ಅನುಮತಿಕೊಡಿತ್ತೇವೆ. ಆಗ ಎಸ್ ಟಿ ಎಸ್ ನಿಮ್ಮದಾಗುತ್ತದೆ.

ಬೋಧಕರು: ಸಹಾಯಕರು, ಹಂಗಾಮಿ, ದೃಢೀಕರಿಸಲ್ಪಟ್ಟವರು ಮತ್ತು ಹಿರಿಯರು.

ಈ ಬೋಧಕರ ಯಾವುದೇ ಭಾಗಗಳಿಗೆ ಸೇರ್ಪಡೆಯಾಗಲು ಸಿಬ್ಬಂದಿಯು ನಂಬಿಕೆಯ ಅತಿಮುಖ್ಯವಾದವುಗಳಲ್ಲಿ ಮನಸ್ಸು ಮತ್ತು ಹೃದಯದಲ್ಲಿ ಏಕ ರೀತಿಯವರಾಗಿರಬೇಕೆಂದು ನಾವು ಬಯಸುತ್ತೇವೆ. ಮುಂದಾಗಲಿರುವ ಬೋಧಕರು ಕೆಳಗೆ ಕೊಟ್ಟಲ್ಪಟ್ಟಿರುವ (ನಮ್ಮ ವೆಬ್‌ಸೈಟ್‌ನಲ್ಲಿಯೂ ಸಹ) *ಕಥೆ* ಮಾತ್ರದ ಸಿದ್ಧಾಂತದ ಹೇಳಿಕೆಗೆ ಒಪ್ಪಿಕೊಳ್ಳಬೇಕೆಂದು ಕೇಳುತ್ತೇವೆ.

ನಮ್ಮ ತತ್ವ ಸಂಬಂದದ (ಡಾಕ್ಟ್ರೀನಲ್ ಸ್ಟೇಟ್‌ಮೆಂಟ್) ಹೇಳಿಕೆ

ಕೆಳಗಿನ ಸತ್ಯಗಳಿಗೆ ನಾವು ನಿಷ್ಠಾವಂತರಾಗಿರುತ್ತೇವೆ:

- ಸತ್ಯವೇದವು ದೇವರಿಂದ ಪ್ರೇರಿತವಾದ ಏಕ ಮಾತ್ರ ಪುಸ್ತಕ, ಸಂಪೂರ್ಣವಾದ ಹಳೇ ಮತ್ತು ಹೊಸ ಒಡಂಬಡಿಕೆಯ ದೈವೀಕ ಸ್ಫೂರ್ತಿಯಾಗಿದೆ.
- ತ್ರೈಯೇಕತ್ವದ ಸಿದ್ಧಾಂತ.

- ಮಾನವನ ಬೀಳುವಿಕೆ, ಆತನ ಪರಿಣಾಮದಿಂದ (ಫಲಿತವಾಗಿ) ನೈತಿಕ ಭ್ರಷ್ಟತೆ ಮತ್ತು ಮರು ಉತ್ಪತ್ತಿಗಾಗಿ ಆತನ ಅಗತ್ಯ.
- ಯೇಸು ಕ್ರಿಸ್ತನ ದೈವತ್ವ ಮತ್ತು ಮಾನವೀಯತೆ, ಆತನು ಕನ್ಯೆಯಲ್ಲಿ ಜನಿಸಿದ್ದು, ಪಾಪರಹಿತ ಜೀವನ, ನಮ್ಮ ಪಾಪಗಳ ದೆಸೆಯಿಂದ ಬದಲಿಯಾಗಿ ಮತ್ತು ನಮಗಾಗಿ ಪ್ರಾಯಶ್ಚಿತ್ತ ಮರಣ, ದೈಹೀಕವಾದ ಪುನರುತ್ಥಾನ, ಪರಲೋಕಕ್ಕೆ ಆರೋಹಣ, ಭವಿಷ್ಯದಲ್ಲಿ ಶರೀರಧಾರಿಯಾಗಿ ಭೂಮಿಗೆ ಹಿಂತಿರುಗಿ ಬರುವುದು.
- ನಂಬಿಕೆಯಿಂದ ಮಾತ್ರವೇ, ಕ್ರಿಸ್ತನಲ್ಲಿನ ನಂಬಿಕೆಯಿಂದ ಮಾತ್ರವೇ ನೀತಿವಂತರಾಗುವ ಸಿದ್ಧಾಂತ.
- ನೀತಿವಂತರು ಮತ್ತು ಅನೀತಿವಂತರಿಬ್ಬರ ಶರೀರವೂ ಪುನರುತ್ಥಾನಗೊಳ್ಳುವುದು.
- ರಕ್ಷಿಸಲ್ಪಟ್ಟವರ ನಿತ್ಯಜೀವ ಮತ್ತು ನಂಬದಿರುವವರ ನಿತ್ಯ ಶಿಕ್ಷೆ.

ಸಹಾಯಕ ಬೋಧಕರು (ಇನ್‌ಸ್ಟ್ರಕ್ಟರ್): ಒಂದು ಕಾರ್ಯಾಗಾರದಲ್ಲಿ ಭಾಗವಹಿಸಿದ ನಂತರ, ತೊಡಗಿಸಿಕೊಂಡವರಲ್ಲಿ ಅನೇಕರು *ಕಥೆ* ಮಾತ್ರದ ಕಾರ್ಯಾಗಾರದಲ್ಲಿ ಒಬ್ಬ "ಸಹಾಯಕ ಬೋಧಕರಾಗಿ" ನೇಮಿಸಲ್ಪಡುವರು.

ಹಂಗಾಮಿ ಬೋಧಕರು (ಇನ್‌ಸ್ಟ್ರಕ್ಟರ್):: ಒಂದು ಕಾರ್ಯಾಗಾರದಲ್ಲಿ ಕನಿಷ್ಠ ಮೂರು ದಿನಗಳ ಸಹಾಯಕರಾಗಿ ಮಾಡಿದ ನಂತರ, ಮುಂದೆ ಹೋಗಲು ನಿರ್ಧರಿಸುವಂತಹ ಸಹಾಯಕ ಬೋಧಕರು ಸಿದ್ಧತೆಯನ್ನು ಮತ್ತು ನಿರೂಪಣೆಯನ್ನು ಸರಿಯಾಗಿ ವಿವರಿಸಲು ಸಮರ್ಥರಾಗಿರಬೇಕಾದ ಅಗತ್ಯವಿದೆ. ಅವರು ಬೇರೆಯವರಿಗೆ *ಕಥೆ* ಮಾತ್ರವನ್ನು ನಯವಾಗಿ, ಜ್ಞಾನವಾಗಿ ಮತ್ತು ಮೃದುವಾಗಿ ಹೇಳುವಂತಹ ಸಾಮರ್ಥ್ಯವನ್ನು ತೋರಿಸಲೇಬೇಕು. ಒಬ್ಬ ದೃಢೀಕರಿಸಲ್ಪಟ್ಟ ಬೋಧಕರು ಅರ್ಹತೆ ಪಡೆದುಕೊಂಡವರಿಗೆ ಅನುಮೋದನೆಯನ್ನು ನೀಡಿ, ಅವರಿಗೆ "ಹಂಗಾಮಿ ಬೋಧಕರು" ಎಂಬ ಶಿರೋನಾಮವನ್ನು ಕೊಡಬಹುದು.

ದೃಢೀಕರಿಸಲ್ಪಟ್ಟ ಬೋಧಕರು (ಇನ್‌ಸ್ಟ್ರಕ್ಟರ್):: ಒಂದು ಅಥವಾ ಹೆಚ್ಚಿನ ಕಾರ್ಯಾಗಾರಗಳಲ್ಲಿ ಸಹಾಯಕ ಸೇವೆಯನ್ನು ಮಾಡಿದ ನಂತರ, ಹಂಗಾಮಿ ಬೋಧಕರು ಒಬ್ಬ ದೃಢೀಕರಿಸಲ್ಪಟ್ಟ ಬೋಧಕರ ಸ್ಥಾನಕ್ಕೆ ಅರ್ಜಿ ಸಲ್ಲಿಸಬಹುದು. ಈ ಅರ್ಜಿದಾರರು, ಒಬ್ಬ ಹಿರಿಯ ಬೋಧಕರಿಗೆ *ಕಥೆ* ಮಾತ್ರದ ಎಲ್ಲಾ ಕಾರ್ಯಾಗಾರದಲ್ಲಿರುವ ನಿರ್ದಿಷ್ಟವಾದ ಕೌಶಲವಾದ ಭಾಗಗಳನ್ನು ಮತ್ತು *ಕಥೆ* ಮಾತ್ರದ ಅಂಶಗಳನ್ನು ಪ್ರದರ್ಶಿಸುವುದಕ್ಕೆ ಸಮರ್ಥರಾಗಿರಬೇಕು.

ದೃಢೀಕರಿಸಲ್ಪಟ್ಟ ಬೋಧಕರು ಬೇರೆಯವರನ್ನು ದೃಢೀಕರಿಸಲ್ಪಟ್ಟ ಬೋಧಕರು ಎಂದು ಅನುಮತಿ ನೀಡುವುದನ್ನು ಹೊರತುಪಡಿಸಿ, ಅವರು ನಾಯಕತ್ವದ ಪಾತ್ರಗಳಲ್ಲಿರುವ ಎಲ್ಲಾ ಅಧಿಕೃತ *ಕಥೆ* ಮಾತ್ರದ ಕಾರ್ಯಾಗಾರಗಳನ್ನು ನಡೆಸಬಹುದಾಗಿದೆ.

ಹಿರಿಯ ಬೋಧಕರು (ಇನ್‌ಸ್ಟ್ರಕ್ಟರ್):: ಒಬ್ಬ "ಹಿರಿಯ ಬೋಧಕರು" ಎಂಬ ಸ್ಥಾನಕ್ಕೆ ಪರಿಗಣಿಸಲ್ಪಡಲು, ಒಬ್ಬ ದೃಢೀಕರಿಲ್ಪಟ್ಟ ಬೋಧಕರು ಒಬ್ಬ ಹಿರಿಯ ಬೋಧಕರೊಂದಿಗೆ ಸೇರಿ, ಅವರು ಬೋಧನೆಯಲ್ಲಿ ಪರಿಣತಿಯನ್ನು ತೋರಿಸುತ್ತಾ, ಹೊಸ ಕಥೆಗಾರರನ್ನು ಪರೀಕ್ಷಿಸುತ್ತಾ ಮತ್ತು ಪ್ರೋತ್ಸಾಹಿಸುತ್ತಾ, ಹಾಗೂ ಅವರು ಒಂದು ಕಾರ್ಯಾಗಾರವನ್ನು ಏರ್ಪಡಿಸುವುದಕ್ಕೆ ಮತ್ತು ನಡೆಸುವುದಕ್ಕೆ ಸಮರ್ಥರಾಗಿರಬೇಕು.

ಹಿರಿಯ ಬೋಧಕರು *ಕಥೆ* ಮಾತ್ರದ ಕಾರ್ಯಾಗಾರವನ್ನು ನಡೆಸುವುದು ಮಾತ್ರವಲ್ಲದೆ, ಅರ್ಹ ಹಂಗಾಮಿ ಬೋಧಕರನ್ನು "ದೃಢೀಕರಿಸಲ್ಪಟ್ಟ ಬೋಧಕರಿಗೆ" ಅನುಮೋದಿಸುವವರು ಇವರು ಮಾತ್ರವೇ ಆಗಿರುತ್ತಾರೆ.

ಅನೇಕ ದೇಶಗಳಲ್ಲಿ *ಕಥೆ* ಮಾತ್ರದ ಮೌಖಿಕ ಸತ್ಯವೇದದ ಶಾಲೆಗಳಲ್ಲಿ ಬೋಧಕರಾಗಿರುವವರು ದೃಢೀಕರಿಸಲ್ಪಟ್ಟ ಬೋಧಕರುಗಳಿಂದ ಬಂದವರಾಗಿರುವರು.

ಅನಕ್ಷರಸ್ಥರಿಗಾಗಿ *ಕಥೆ ಮಾತ್ರ (ಸಿಂಪ್ಲಿ ದ ಸ್ಟೋರಿ)*

ಕಥೆ ಮಾತ್ರದ ಕಾರ್ಯಾಗಾರಗಳು ನಡೆಸಲ್ಪಡುವಾಗ, ಅಥವಾ ಮೌಖಿಕ ಸತ್ಯವೇದ ಶಾಲೆಗಳು ಸ್ಥಾಪನೆಯಾದಾಗ ಮತ್ತು ಅನಕ್ಷರಸ್ಥರು ಅದರಲ್ಲಿ ಭಾಗವಹಿಸಿರುವಾಗ, ನಾವು ಅವರನ್ನು ಕೆಳಗಿನವುಗಳಂತೆ ಸರಿಹೊಂದಿಸುತ್ತೇವೆ:

1. ಇದರಲ್ಲಿ ಭಾಗವಹಿಸುವ ಅನಕ್ಷರಸ್ಥರಿಗೆ ಕಲಿಸುವ ಎಲ್ಲಾ ಕಥೆಗಳನ್ನು ಅವರಿಗೆ ಓದಿ ಹೇಳಬೇಕು, ಅವರಿಗೆ ಬಾಯಲ್ಲಿ ಹೇಳಬೇಕು, ಅಥವಾ ಒಂದು ಶ್ರವಣ ಸಾಧನದಲ್ಲಿ ಕೇಳಿಸಿಕೊಳ್ಳುವಂತೆ ಮಾಡಬೇಕು.
2. ಕಾರ್ಯಾಗಾರವಾಗಲಿ ಅಥವಾ ಶಾಲೆಯ ಅವಧಿಯು ಮುಕ್ತಾಯವಾದಾಗ, ಇದರ ಪದವೀಧರರಿಗೆ ಸೋಲಾರ್‌ನಿಂದ ಕೇಳಿಸುವ ಶ್ರವಣ ಸಾಧನವನ್ನು ಕೊಡಬೇಕೆಂದು ಅಪೇಕ್ಷಿಸುತ್ತೇವೆ.

ಅತ್ಯಾಶ್ಚರ್ಯಕರವಾಗಿ, *ಕಥೆ* ಮಾತ್ರದ ಕೈಪಿಡಿಯಲ್ಲಿ ರೂಪಿಸಲ್ಪಟ್ಟಿರುವ ರೀತಿಯಲ್ಲೇ ಇರುವ *ಕಥೆ* ಮಾತ್ರದ ತರಬೇತಿಯನ್ನು ಅನಕ್ಷರಸ್ಥರಿಗೂ ಸಹ ಕೊಡಲ್ಪಡುತ್ತದೆ. ಅನೇಕ ಬಾರಿ, ವಿದ್ಯಾವಂತವರಿಗಿಂತಲೂ, ಓದಲು ಬರದಂತಹ ಈ ಜನರು ಒಂದು ಕಥೆಯನ್ನು ಚೆನ್ನಾಗಿ ಕಲಿತುಕೊಳ್ಳುವುದರಲ್ಲಿ ಮತ್ತು ಅದನ್ನು ಸರಿಯಾಗಿ ಹೇಳುವುದರಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ತೋರಿಸುತ್ತಾರೆ.

ಹಾಗೂ, ಕಥೆಯಲ್ಲಿರುವಂತಹ ಅನೇಕ ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದಕ್ಕೆ ಈ ಅನಕ್ಷರಸ್ಥರು ಆಸಕ್ತಿಕರವಾದ ಸಾಮರ್ಥ್ಯವನ್ನು ತೋರಿಸುತ್ತಾರೆ. ಆದಾಗ್ಯೂ, ಕಲಿಯುವ ಪ್ರತಿಯೊಬ್ಬರು, ಅಂದರೆ ಅಕ್ಷರಸ್ಥರಾಗಲಿ ಅಥವಾ ಅನಕ್ಷರಸ್ಥರಾಗಲಿ, ಚರ್ಚೆಯ ಮೂಲಕ ಬೇರೆಯವರನ್ನು ನಿಧಿಗಳ ಕಡೆಗೆ ನಡೆಸುವುದಕ್ಕೆ ಹೇಗೆ ಪ್ರಶ್ನೆಗಳನ್ನು ರೂಪಿಸುವುದು ಎಂಬುದರಲ್ಲಿ ಕಷ್ಟಪಡುತ್ತಾರೆ. ಇದು ಹೊಂದಿಕೊಂಡಿರುವಂತಹ ಒಂದು ಕೌಶಲವಾಗಿದೆ.

ಮೆಗಾ ವಾಯ್ಸ್ ಸಮಸ್ಥೆಯಿಂದ ತಯಾರಿಸಲ್ಪಟ್ಟಿರುವ ಸೋಲಾರ್ ಆಡಿಯೋ ಪ್ಲೇಯರ್‌ಗಳನ್ನು ಕಥೆ ಕೇಳುವುದಕ್ಕೆ ಉಪಯೋಗಿಸುತ್ತಾರೆ. *ಕಥೆ* ಮಾತ್ರದ ನಾಯಕತ್ವದ ಗುರಿಯೇನೆಂದರೆ, ಇದರ ಪದವೀಧರರಿಗೆ ಅವರ ಮಾತೃ ಭಾಷೆಯಲ್ಲಿಯೇ ಎಪ್ಪತ್ತು ಅಥವಾ ಅದಕ್ಕಿಂತಲೂ ಅಧಿಕವಾಗಿ ರೆಕಾರ್ಡ್ ಮಾಡಿರುವ ಸತ್ಯವೇದದ ಕಥೆಗಳು, ದೇವರ ಕಥೆ ಮತ್ತು ಒಂದು ಹೊಸ ಒಡಂಬಡಿಕೆ (ಲಭ್ಯವಿದ್ದರೆ) ಇವುಗಳನ್ನು ಒದಗಿಸಬೇಕೆಂಬುದಾಗಿದೆ.

ಆರ್ಥಿಕವಾಗಿ ಮುಂದುವರೆದಂತೆಲ್ಲಾ, ಪದವೀಧರರು ಈ ಸೋಲಾರ್ ಸಾಧನವನ್ನು ಉಡುಗೊರೆಯಾಗಿ ಪಡೆಯುವರು. ಸಾಮಾನ್ಯವಾಗಿ ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರತಿ ಹಳ್ಳಿಗೆ ಒಂದು ಸಾಧನವನ್ನು ಕೊಡಲಾಗುವುದು. ಇದನ್ನು ತಮ್ಮ ಸುಪರ್ದಿನಲ್ಲಿ ಇಟ್ಟುಕೊಂಡಿರುವ ಪದವೀಧರರು ಇತರ ಪದವೀಧರರೊಂದಿಗೆ ಇದನ್ನು ಹಂಚಿಕೊಳ್ಳುವುದರಿಂದ, ಇದು ಅವರು ಅನೇಕ ಕಥೆಗಳನ್ನು ಕಲಿತುಕೊಳ್ಳುವಂತೆ ಸಹಾಯ ಮಾಡುತ್ತದೆ.

ಇನ್ನೂ ಕೆಲವು ಕಡೆಗಳಲ್ಲಿ, ಇಡೀ ಹಳ್ಳಿಯು ಸತ್ಯವೇದದ ಕಥೆಗಳನ್ನು ಕೇಳಿಸಿಕೊಳ್ಳುತ್ತಾ ಆನಂದಿಸುತ್ತಾರೆ. ಅನೇಕ ಬಾರಿ ಪದವೀಧರರು ಈ ಸಾಧನವನ್ನು ಬಹಳ ಬೆಲೆಯುಳ್ಳದ್ದೆಂದು ಪರಿಗಣಿಸಿ, (ಮತ್ತು ಈ ಅನಕ್ಷರಸ್ಥರಿಗಾಗಿ) ಅವರು ತಮ್ಮ ಉಡುಗೊರೆಯನ್ನು ತಮ್ಮ ಸಭಾಪಾಲಕರ ಕೈಗೆ ಒಪ್ಪಿಸಿಬಿಡುತ್ತಾರೆ. ಸಭಾಪಾಲಕರುಗಳು ಇದನ್ನು ಸೇವೆಯಲ್ಲಿ ಉಪಯೋಗಿಸುತ್ತಾರೆ. ಈ ಸಾಧನವು, ಅನಕ್ಷರಸ್ಥರು ಅನೇಕ ಸತ್ಯವೇದದ ಕಥೆಗಳನ್ನು ಕಲಿತುಕೊಳ್ಳುವುದಕ್ಕೆ ಒಂದು ಮೂಲ ಸಾಧನವಾಗಿ ಸೇವೆ ಸಲ್ಲಿಸುತ್ತದೆ ಮತ್ತು ಇದು ಸತ್ಯವೇದದ ಕಥೆಗಳನ್ನು ನಿಖರವಾಗಿ ಕಾಪಾಡಿಕೊಳ್ಳುವುದಕ್ಕೆ ಒಂದು ಉಲ್ಲೇಖದ ಅಂಶವಾಗಿ ಪಾತ್ರವಹಿಸುತ್ತದೆ.

ಮೌಖಿಕ ಸತ್ಯವೇದ ಶಾಲೆಯ ಎಲ್ಲಾ ಪದವೀಧರರಿಗೆ ಒಂದು ಸೋಲಾರ್ ಸಾಧನವನ್ನು ಕೊಡುವುದಕ್ಕೆ ನಾವು ಪ್ರಯತ್ನಿಸುತ್ತೇವೆ. ಹೆಚ್ಚುಕಡಿಮೆ ವಿದ್ಯಾರ್ಥಿಗಳಲ್ಲಿ ಅರ್ಧಭಾಗವು ವಿದ್ಯಾವಂತರಾಗಿದ್ದರೂ ಸಹ, ಅವರಲ್ಲಿ ಅನೇಕರು ಸಭಾಪಾಲಕರುಗಳಾಗಿರುವರು ಹಾಗೂ ಅವರು ಈ ಸಾಧನಗಳನ್ನು ಬಹಳ ಜ್ಞಾನವುಳ್ಳವರಾಗಿ ಉಪಯೋಗಿಸುವುದನ್ನು ನಾವು ನೋಡಿರುವೆವು.

ಅಧ್ಯಾಯ 11
ಎಸ್ ಟಿ ಎಸ್ ನ್ನು ಉಪಯೋಗಿಸುವ ಸ್ಥಳ, ಕಲಿಯುವ ವಿಧಾನ ಮತ್ತು ವಿಸ್ತರಿಸುವುದು:

ಎಸ್ ಟಿ ಎಸ್ ನ್ನು ಉಪಯೋಗಿಸುವ ಸ್ಥಳಗಳು

ಎಸ್ ಟಿ ಎಸ್ ನ್ನು ನೀವು ಮಾಡುತ್ತಿರುವ ಸೇವೆಯಲ್ಲಿಯೇ ಉಪಯೊಗಿಸಬಹುದು. ಎಸ್ ಟಿ ಎಸ್ ಪದ್ದತಿಯು ದೇವರ ವಾಕ್ಯವನ್ನು ಗುಂಪಾಗಿ ಚರ್ಚಿಸುವ ಮೂಲಕ ಅನೇಕ ಆತ್ಮೀಕ ನಿಧಿಗಳನ್ನು ಕಂಡು ಹಿಡಿದು ತಮ್ಮ ಜೀವಿತಕ್ಕೆ ಅನ್ವಹಿಸಿಕೊಳ್ಳಬಹುದು, ನೀವು ಮಕ್ಕಳ ಮದ್ಯೆ ಸೇವೆ ಮಾಡುತ್ತಿರಬಹುದು, ಯವ್ವನಸ್ಥರ ಮದ್ಯೆ ಸೇವೆ ಮಾಡುತ್ತಿರಬಹುದು ಅಥವ ಹಿರಿಯರ ಮದ್ಯೆ ಸೇವೆ ಮಾಡುತ್ತಿರಬಹುದು, ಈ ಪದ್ಧತಿಯು ನಿಮ್ಮ ಸೇವೆಯಲ್ಲಿ ಬಹಳ ಸಹಕಾರಿಯಾಗುತ್ತದೆ.

ನಿಮಗೆ ಸಿಗುವ ಸಮಯದ ಆದಾರದ ಮೇಲೆ ನೀವು ಕಂಡುಕೊಳ್ಳುವ ಆತ್ಮೀಕ ನಿಧಿಗಳು ಹಾಗು ಅವುಗಳನ್ನು ತಮ್ಮ ಜೀವಿತಗಳಿಗೆ ಅನ್ವಹಿಸಿಕೊಳ್ಳಲು ಅನುಗಣವಾಗಿ ದೇವರ ವಾಕ್ಯವನ್ನು ಕಲಿಯಬಹುದು. ನಮಗೆ ಕೇವಲ ೩೦ ನಿಮಿಷಗಳು ಇದೆ ಎಂದು ನೆನಸಿರಿ ಆಗ ಎಸ್ ಟಿ ಎಸ್ ನ ಮೋದಲ ಭಾಗದ ಎರಡನೇ ಅಂತವನ್ನು ಬಿಟ್ಟು ಬಿಡಿ ಅಂದರೆ ಕಥೆಯನ್ನು ಮತ್ತೆ ಒಬ್ಬರಿಂದ ಹೇಳಿಸಬೇಡಿ ಅದರ ಬದಲು ನೀವು ಕಥೆಯನ್ನು ಹೇಳಿದ ನಂತರ ಎಲ್ಲರೂ ಕಥೆಯನ್ನು ಮತ್ತೊಂದು ಸಲ ಹೇಳುವ ಹಾಗೆ ತಿಳಿಸಿರಿ. ಆಗ ಅವರೆಲ್ಲರು ಕಥೆಯನ್ನು ಎರಡನೇ ಸಲ ಕೇಳಿದ ಹಾಗೆ ಆಗುತ್ತದೆ ಮತ್ತು ನೀವು ಎಸ್ ಟಿ ಎಸ್ ನ ಸಿದ್ಧಾಂತವನ್ನು ಪಾಲಿಸಿದ ಹಾಗೆ ಆಗುತ್ತದೆ.

ಸಂಭಾಷಣೆಯ ಮೂಲಕ (ಕಥೆ ಮಾತ್ರ)ಎಸ್ ಟಿ ಎಸ್. ದೇವರ ವಾಕ್ಯ ಹೇಳಲು ನಿಮಗೆ ಸ್ವಲ್ಪ ಸಮಯಕೊಟ್ಟಾಗ ಅಥವ ಎಸ್ ಟಿ ಎಸ್ ಮೂಲಕ ದೇವರ ವಾಕ್ಯವನ್ನು ಸ್ವಲ್ಪ ಸಮಯ ತಿಳಿಸಲು ತೀರ್ಮಾನಿಸಿದಾಗ ನಿಮಗೆ ಒಂದು ವಿಶೇಷ ಕೌಶಲ್ಯಬೇಕು ಅವುಗಳನ್ನು ನಾವು ಎಸ್ ಟಿ ಎಸ್ ಕಾರ್ಯಗಾರದಲ್ಲಿ ಕಲಿಸಿಕೊಡುತ್ತೇವೆ.

ಕಥೆಯ ಕೆಲವು ವಚನಗಳನ್ನು ಕೇವಲ ಒಂದು ನಿಮಿಷದಲ್ಲಿ ಹೇಳಿ ಉಳಿದ ಸಮಯದಲ್ಲಿ ಕೆಲವು ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದು ಹಾಗು ಅವುಗಳನ್ನು ತಮ್ಮ ಜೀವಿತಕ್ಕೆ ಅನ್ವಹಿಸಿಕೊಳ್ಳುವುದಕ್ಕೆ ಕೇವಲ ಐದರಿಂದ ಹತ್ತು ನಿಮಿಷಗಳು ತೆಗೆದುಕೊಳ್ಳಬಹುದು. ನೀವು ಕಥೆಯನ್ನು ಹೇಳಿ ತದನಂತರ ಎಸ್ ಟಿ ಎಸ್ ನ ಮೊದಲ ಭಾಗದ ಎರಡನೇ ಮೆಟ್ಟಿಲಾದ ಕಥೇ ಹೇಳಿಸುವುದನ್ನು ಬಿಟ್ಟು ಅದರ ಬದಲು ಎಲ್ಲರು ಒಟ್ಟಾಗಿ ಮತ್ತೆ ಕಥೆ ಹೇಳುವಂತೆ ಮಾಡಿರಿ. ಆಮೇಲೆ ಆತ್ಮೀಕ ನಿಧಿಗಳನ್ನು ಕಂಡುಹಿಡಿಯುವುದು ಹಾಗು ಅವುಗಳನ್ನು ತಮ್ಮ ಜೀವಿತಕ್ಕೆ ಅನ್ವಹಿಸಿಕೊಳ್ಳುವುದಕ್ಕೆ ಸಮಯವನ್ನು ಕೊಡಿ.

ಉದಾಹರಣೆಗೆ ನೀವು ಮಾರ್ಕ ೧:೪೦:೪೫ ರ ಕಥೆ ಹೇಳಲು ಇಚ್ಚಿಸುತ್ತೀರೆಂದು ನೆನಸಿಕೊಳ್ಳಿ, ನೀವು ಕಥೆಯನ್ನು ಈ ರೀತಿ ಪ್ರಾರಂಬಿಸಬಹುದು... ನಿಮಗೆ ಗುರುತಿದೆಯೋ ಕುಷ್ಟರೊಗಿಯು ಯೇಸುವಿನ ಪಾದಕ್ಕೆ ಅಡ್ಡಬಿದ್ದು ನಿನಗೆ ಮನಸಿದ್ದರೆ ನನ್ನನ್ನು ಶುದ್ದಿಮಾಡಿ ಎಂದು ಹೇಳಿದಾಗ ಯೇಸು ಕನಿಕರ ಪಟ್ಟು ಹೌದು ನನಗೆ ಮನಸುಂಟು ಶುದ್ಧನಾಗು ಎಂದು ಹೇಳಿದ ತಕ್ಷಣವೇ ಅವನು ಶುದ್ದನಾದನು ಎಂದು ಹೇಳಿ ಪ್ರಶ್ನೆಗಳನ್ನು ಕೇಳಲು ಪ್ರಾರಂಬಿಸಿ ಆಗ ಜನರು ನಿಮಗೆ ಪ್ರತಿಕ್ರಿಯಿಸಲು ಪ್ರಾರಂಬಿಸುತ್ತಾರೆ.

ಸಭಾಪಾಲಕರಲ್ಲಿ ಬದಲಾವಣೆ ತರುವರು: ಅನೇಕ ಸಂಪ್ರದಾಯಕ ಸಭೆಗಳು ಹಾಗು ಸಭಾಪಾಲಕರು ಪುಲ್ ಪೀಟ್ ಮೇಲೆ ಎಸ್ ಟಿ ಎಸ್ ನ್ನು ಉಪಯೊಗಿಸಲು ಹಿಂಜರಿಯುತ್ತಾರೆ ಕಾರಣ ಆರಾಧನೆಯ ಸಮಯದಲ್ಲಿ ಪುಲ್ ಪೀಟ್ ಮೇಲೆ ಸಭಿಕರನ್ನು ಪ್ರಶ್ನೆಗಳನ್ನು ಕೇಳುವುದು ವಾಡಿಕೆಯಲ್ಲಿಲ್ಲ. ಅಷ್ಟೇ ಅಲ್ಲದೆ ದೇವರ ವಾಕ್ಯವನ್ನು ಓದುವ ಬದಲು ಕಥೆಯನ್ನು ಹೇಳಲು ಇಚ್ಚಿಸುವುದಿಲ್ಲಿ. ಅನೇಕ ರಾಷ್ಟ್ರಗಳಲ್ಲಿ ಎಸ್ ಟಿ ಎಸ್ ತರಬೇತಿ ಪಡೆದ ಸಭಾಪಾಲಕರು ಎಸ್ ಟಿ ಎಸ್ ಪದ್ದತಿಯನ್ನು ಇಷ್ಟಪಪಟ್ಟ್ರೀ ಕೆಳಕಂಡ ಕಾರ್ಯಗಳನ್ನು ಮಾಡುತ್ತಾರೆ.

೧. ಅನೇಕ ಸಭಾಪಾಲಕರು ಎಸ್ ಟಿ ಎಸ್ ನ್ನು ತಮ್ಮ ಯವ್ವನಸ್ತರ ಕೂಟಗಳಲ್ಲಿ ಉಪಯೊಗಿಸುತ್ತಿದ್ದೇವೆಂದು ನಮಗೆ ವರದಿ ಕಳುಹಿಸಿದ್ದಾರೆ.
ಯವ್ವನಸ್ತರಿಂದ ಒಳ್ಳೆಯ ಪ್ರತಿಕ್ರಿಯೆ ಬರುತ್ತಿದೆ ಹಾಗು ಅವರ ಪಾಲಕರು ಬಂದು ನೀವು ನಮ್ಮ ಮಕ್ಕಳಿಗೆ ಒಳ್ಳೆಯ ತರಬೇತಿಯನ್ನು ಕೊಡುತ್ತಿದ್ದೀರಿ ಅದನ್ನು ನಮಗೆ ಏಕೆ ಕಲಿಸಬಾರದು ಎಂದು ಕೇಳುತ್ತಿದ್ದಾರೆಂದು ತಿಳಿಸಿದ್ದಾರೆ.

೨. ಕೆಲವು ಸಭಾಪಾಲಕರು ತಮ್ಮ ಪುಲ್ ಪೀಟ್ ಮೇಲೆಯೇ ಎಸ್ ಟಿ ಎಸ್ ನ್ನು ಉಪಯೊಗಿಸುತ್ತಿದ್ದಾರೆ. ಇಲ್ಲಿ ಇವರು ಕಥೆ ಹೇಳುವ ಬದಲು ಕಥೆಯನ್ನು ಓದಿಸುತ್ತಾರೆ. ಅವರು ಕಥೆಯನ್ನು ಸಂಪ್ರಧಾಯಕ ರೀತಿಯಲ್ಲಿ ಹೇಳದೆ ಜನರು ಬಹಳ ಇಷ್ಟಪಡುವ ರೀತಿಯಲ್ಲಿ ಹೇಳುತ್ತಾರೆ.

ಕಥೆಯನ್ನು ಹೇಳಿದ ಮೇಲೆ ಕಥೆಯಲ್ಲಿರುವ ಆತ್ಮೀಕ ನಿಧಿಗಳನ್ನು ಕಂಡು ಹಿಡಿದುಕೊಳ್ಳಲು ಅನೇಕ ಪ್ರಶ್ನೆಗಳನ್ನು ಕೇಳಿ ಅವುಗಳನ್ನು ತಮ್ಮ ಜೀವಿತಗಳಿಗೆ ಅನ್ವಹಿಸಿಕೊಳ್ಳುತ್ತಾರೆ. ಆಗ ಸಭೆಗೆ ಬಂದ ಭಕ್ತರು ಸಾವಧಾನವಾಗಿ ಯೊಚಿಸಿ ಆತ್ಮೀಕವಾಗಿ ಚರ್ಚಿಸಲು ಪ್ರಾರಂಭ ಮಾಡುತ್ತಾರೆ. ಈ ಸಭಾಪಾಲಕರು ಜನರಿಗೆ ಚರ್ಚಿಸಲು ಹಾಗು ಸಣ್ಣ ಸಣ್ಣ ಗುಂಪುಗಳಾಗಿ ಮಾಡಿ ಉತ್ತರಕೊಡಲು ಸ್ವಲ್ಪ ಸಮಯವನ್ನು ಕೊಡುತ್ತಾರೆ.

೩. ಎಸ್ ಟಿ ಎಸ್ ಪದ್ದತಿಯು ಅನ್ಯರಿಗೆ ದೇವರ ವಾಕ್ಯವನ್ನು ತಿಳಿಸಲು ಸಹಾಯವಾಗುತ್ತದೆ ಆದಕಾರಣ ಅನೇಕ ಸಭೆಗಳು ಎಸ್ ಟಿ ಎಸ್ ನ್ನು ತಮ್ಮ ಸೇವಾ ಕಾರ್ಯದಲ್ಲಿ ಉಪಯೊಗಿಸುತ್ತಿದ್ದಾರೆ. ಇವುಗಳಿಂದ ಅನೇಕ ಆತ್ಮಗಳು ದೇವರ ಕಡೆಗೆ ತಿರುಗಿಕೊಂಡಿದ್ದಾರೆ.

೪. ಕೆಳವು ಸಭಾಪಾಲಕರು ಎಸ್ ಟಿ ಎಸ್ ನ್ನು ತಮ್ಮ ಭಾನುವಾರ ಮಕ್ಕಳ ಶಾಲೆಯಲ್ಲಿ ಹಾಗು ವಾರದ ಪ್ರಾರ್ಥನ ಕೂಟಗಳಲ್ಲಿ ಉಪಯೊಗಿಸುತ್ತಾರೆ.

೫. ಕೆಲವರು ಎಸ್ ಟಿ ಎಸ್ ನ್ನು ಹೊಸದಾಗಿ ಕರ್ತನನ್ನು ನಂಬಿರುವ ಭಕ್ತರಿಗೆ ದೇವರ ವಾಕ್ಯವನ್ನು ಆಳವಾಗಿ ಭೊದಿಸಲು ಉಪಯೊಗಿಸುತ್ತಾರೆ.

ಪ್ರತಿಕ್ರಿಯೆ ಇಲ್ಲದ ಪೂರ್ಣ ಎಸ್ ಟಿ ಎಸ್ ತರಭೇತಿ:

೧. ಕೆಲವು ಸಮಯ ಗುಂಪು ಬಹಳ ದೊಡ್ಡದಾಗಿದ್ದರೆ ಅಥವ ಸೇರಿರುವ ಜನರು ಪ್ರತಿಕ್ರಿಯೆ ಕೊಡುವಂತ ಸ್ಥಿತಿ ಇಲ್ಲದಿದ್ದರೆ ಆಗ ನೀವು ಬೇರೆ ಪದ್ದತಿಯನ್ನೇ ಉಪಯೊಗಿಸಬೇಕು. ಎಸ್ ಟಿ ಎಸ್ ನ ಎಲ್ಲಾ ಭಾಗಗಳನ್ನು ಉಪಯೊಗಿಸಿ ಆದರೆ ಕಥೆಯನ್ನು ಹೇಳಿಸುವುದನ್ನು ಬಿಟ್ಟುಬಿಡಿ. ಜನರು ನಿಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು

ಕೊಡುವಂತ ಸ್ಥಿತಿ ಇಲ್ಲದಿದ್ದರೆ ಕಥೆ ಹೇಳುವವರು ಉತ್ತರಗಳನ್ನು ಪಡೆದಿದ್ದಾರೆಂದು ತಿಳಿದುಕೋಂಡು ಅವರನ್ನು ಮುಂದೆ ಆತ್ಮೀಕ ನಿಧಿಗಳನ್ನು ಕಂಡುಕೊಳ್ಳಲು ಸಹಾಯ ಮಾಡಬೇಕು. ಕಥೆ ಹೇಳುವವರು ಜನರಿಗೆ ಚರ್ಚಿಸಲು ಸ್ವಲ್ಪ ಸಮಯ ಕೊಟ್ಟು ಜನರು ಉತ್ತರಕೊಡಲು ಸಮಯವನ್ನು ಕೊಡುತ್ತಾರೆ

೨. ಎಸ್ ಟಿ ಎಸ್ ಕಥೆಗಳನ್ನು ಟೀವಿ ಮತ್ತು ರೇಡಿಯೊಗಳ ಮೂಲಕ ಹೇಳಬಹುದು. ಕಥೆಯನ್ನು ತಿರುಗಿ ಹೇಳಿಸುವುದು ಬಿಟ್ಟುಬಿಡಬೇಕು ಆದರೆ ಇತರ ಅನುಕರಣೆಯನ್ನು ಉಪಯೊಗಿಸಬೇಕು. ರೇಡಿಯೊದಲ್ಲಿ ಕಥೆ ಹೇಳಲು ಒಂದು ಉಪಾಯವೆಂದರೆ, ನೀವು ಕೇಳುವ ಪ್ರತಿ ಪ್ರಶ್ನೇಗೂ ಐದು ಸೆಕೆಂಡುಗಳ ಕಾಲಾವಕಾಶ ಕೊಡುತ್ತಾ ಏನಾದರು ಉಪಯೊಗಕ್ಕೆ ಬರದಿರುವ ಶಬ್ದಗಳಿದ ಮಾತನಾಡುತ್ತಿರಬೇಕು.

ನಾವು ಉಪಯೊಗಕ್ಕೆ ಬರದಿರುವ ಶಬ್ದವೆನ್ನುತ್ತೇವೆ ಆದರು ನೀವು ಉಪಯೊಗಕ್ಕೆ ಬರುವ ಶಬ್ದಗಳನ್ನು ಮಾತನಾಡುತ್ತೀರಿ. ಜನರು ತಮ್ಮ ಸ್ವಂತ ಆಲೋಚನೆ ಮಾಡದೆ ನೀವು ಮಾಡುವ ಶಬ್ಧವನ್ನು ಆಲಿಸುತ್ತಿರುತ್ತಾರೆ. ಉದಾಹರಣೆಗೆ; ನೀವು ಏನು ಯೋಚಿಸುತ್ತಿದ್ದೀರ? ಮುಂದೆ ಏನು ನಡೆಯುತ್ತದೆಂದು ನಿಮಗೆ ತಿಳಿದಿದೆಯೋ? ನೀವು ಏನು ಹೇಳುತ್ತೀರಿ? ನಿಮ್ಮ ಉತ್ತರಾ. . . . .?

ಉಪಯೊಗಕ್ಕೆ ಬರದಿರುವ ಶಬ್ದವೆನ್ನುತ್ತೇವೆ ಅವುಗಳು ಉಪಯೊಗಕ್ಕೆ ಬರುವ ಶಬ್ದಗಳಾಗಿರುತ್ತವೆ ಅಲ್ಲದೆ ಕಾಲಿ ಇರುವ ಸಮಯವನ್ನು ತುಂಬಲು ಈ ಶಬ್ಧಗಳನ್ನು ಉಪಯೊಗಿಸುತ್ತೇವೆ ಎಲ್ಲದಿದ್ದರೆ ಕೇಳುವವರಿಗೆ ಬೋರನಿಸುತ್ತದೆ. ರೇಡಿಯೊದಲ್ಲಿ ಶಬ್ಧ ಬರದೇ ಹೋದರೆ ಆಗ ಜನರು ಗಾಬರಿಗೊಳ್ಳುತ್ತಾರೆ ಆದಕಾರಣ ಪ್ರಶ್ನೆ ಕೇಳಿದಾಗ ಅವರಿಗೆ ಯೋಚಿಸಲು ಐದು ಸೆಕೆಂಡುಗಳ ಸಮಯ ಕೊಡುತ್ತೇವೆ ಆಗ ನಾವು ಏನಾದರು ಶಬ್ಧ ಮಾಡುವಾಗ ಕೇಳುವವರು ಅದು ರೇಡಿಯೊದಿಂದ ಬಂದ ಕಾರಣ ಆನಂದದಿಂದ ಆಲಿಸುತ್ತಾರೆ. ಉಪಯೊಗಕ್ಕೆ ಬರದಿರುವ ಶಬ್ದಗಳೆಂದರೆ ಅಹಾ.,,,,,, ಹಾಂ,,,,,,,,,,ಔಚ್..,,,,,,,,,,,,,ಇತ್ಯಾದಿ.

ರೇಡಿಯೋ ಕಾರ್ಯಕ್ರಮದಲ್ಲಿ ಮಾರ್ಥ ಮತ್ತು ಮರಿಯಳು ಕಥೆ ನಮ್ಮ ವೆಬ್ ಸೈಟ್ ನಲ್ಲಿದೆ ಅಲ್ಲಿ ಈ ಪದಗಳನ್ನು ಉಪಯೊಗಿಸಿದ್ದೇವೆ.

೩. ನೀವು ಎಸ್ ಟಿ ಎಸ್ ನಲ್ಲಿ ಪರಿಣತಿ ಪಡೆದಿದ್ದರೆ, ಮೂರು ನಾಲ್ಕು ಜನರು ಮೈಕ್ರೋಫೋನ್‌ಗಳನ್ನು ಸ್ಟುಡಿಯೊದಲ್ಲಿ ಮುದ್ರಿಸಿದರೆ ಅದು ಒಳ್ಳೆಯ ರೇಡಿಯೊ ಕಾರ್ಯಕ್ರಮ ಮೂಡಿಬರುತ್ತದೆ. ಫಿಲ್ಲಿಪ್ಪೀಯನ್ಸ್ ದೇಶದಲ್ಲಿ ನಮ್ಮ ನಾಯಕನು ಎಸ್ ಟಿ ಎಸ್ ನ್ನು ಮೊದಲು ರೇಡಿಯೊದಲ್ಲಿ ಪ್ರಚಾರಪಡಿಸಿದರು. ಕೆಲವು ತಿಂಗಳುಗಳಾದ ಮೇಲೆ ಅವರು ಪ್ರತೀ ವಾರ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರತೀ ಕಾರ್ಯಕ್ರಮಕ್ಕೆ ಸುಮಾರು ೧೪೦೦ ಪತ್ರಗಳು ಹಾಗು ಫೋನ್ ಕಾಲ್‌ಗಳು ಬರುತ್ತಿದ್ದವು. ಈ ರೀತಿ ರೇಡಿಯೊ ಕಾರ್ಯಕ್ರಮಗಳು ಬಹಳ ಅದ್ಭುತವಾಗಿ ನಡೆಯುತ್ತಿದೆ.

ನಾಟಕಗಳ ಮೂಲಕ, ತಮಾಸೆ ಆದರೆ ಬಹಳ ಶಕ್ತಿಯುಳ್ಳವಗಳಾಗಿವೆ.

ನಾಟಕಗಳು ಮಾಡಲು ಹಾಗು ನೋಡಲು ಬಹಳ ತಮಾಸೆಯಾಗಿರುತ್ತವೆ. ಆದರೆ ಕಥೆಗಳನ್ನು ನಾಟಕಗಳ ಮೂಲಕ ಬಹಳ ಸೊಗಸಾಗಿ ತೋರಿಸಬಹುದು, ಕಥೆಯನ್ನು ಇನೊಂದು ರೀತಿಯಲ್ಲಿ ಹೇಳಲು ಡ್ರಾಮಗಳು ಮಾದರಿಯು ಒಂದು.

ನಾಟಕದಲ್ಲಿ ನಟನೆ ಮಾಡುವವರನ್ನು ಏನು ಮಾತನಾಡದೆ ಅವರು ಪಾತ್ರ ಇರುವ ಹಾಗೆ ನಟನೆ ಮಾಡುವ ಹಾಗೆ ತಿಳಿಸಿ. **ಯಾವಗಲು** ಕಥೆ ಹೇಳುವವನು ಮಾತ್ರ ಕಥೆ ಹೇಳಬೇಕು. ಕೇಳುವವರು ಕಥೆಯನ್ನು ಒಬ್ಬರು ದೇವರ ವಾಕ್ಯದಲ್ಲಿರುವ ರೀತಿಯಲ್ಲಿ ಹೇಳುತ್ತಾರೆ, ಆಗ ಕಥೆ ಹೇಳುವವನು ಆ ಕಥೆಗೆ ಏನನ್ನು ಸೇರಿಸಲು ಸಾಧ್ಯವಾಗುವುದಿಲ್ಲ, ಆ ಕಥೆಗೆ ತಕ್ಕ ಹಾಗೆ ಇತರ ನಟರು ನಟನೆ ಮಾಡುತ್ತಿರುತ್ತಾರೆ. ಇದರಿಂದ ಅಲ್ಲಿ ಸೇರುವ ಎಲ್ಲಾ ಜನರು ಸಂಪೂರ್ಣವಾಗಿ ಕಥೆ ಕೇಳಿದ ಹಾಗೆ ಆಗುತ್ತದೆ ಅಲ್ಲದೆ ಅವರ ಹೃದಯಲ್ಲಿ ನೆಲೆಯುತ್ತದೆ.

ನಾವು ಯಾವಗಲು ಒಬ್ಬರು ಕಥೆ ಹೇಳಲು ಪ್ರೋತ್ಸಾಹಿಸುತೇವೆ, ನಟನೆ ಮಾಡುವ ಎಲ್ಲರು ಮಾತನಾಡಲು ಪ್ರೋತ್ಸಾಹಿಸುವುದಿಲ್ಲ ಕಾರಣ ಎಲ್ಲರು ಮಾತನಾಡಿದರೆ ಅದು ಒಂದು ಆಟವಾಗುತ್ತದೆ. ಕಥೆಯು ನಗೆಪಾಟಲಾಗಬಾರದು, ಕೆಲವು ಸಮಯ ಎಲ್ಲರು ಮಾತನಾಡಿ ಸಮಾಸೆ ಮಾಡಿದಾಗ ಅಲ್ಲಿ ಸೇರಿರುವ ಜನರಿಗೆ ಅದು ಆಟವಾಗಿ ಕಾಣಿಸುತ್ತದೆ; ಆಗಾಗಬಾರದು ಕಾರಣ ಇದು ದೇವರ ಪರಿಶುದ್ದ ವಾಕ್ಯ.

ನಟನೆ ಮಾಡುವ ಎಲ್ಲರು ಕಥೆಯನ್ನು ಮಾತನಾಡಿದರೆ ಕೆಲವು ಸಮಯ ಕಥೆಗಿಂತ ಹೇಚ್ಚಾಗಿ ಮಾತನಾಡುತ್ತಾರೆ ಅಷ್ಟೇಅಲ್ಲದೆ ಕಥೆಯನ್ನು ಎಲ್ಲರು ಕಲಿಯಬೇಕಾಗುತ್ತದೆ, ಎಲ್ಲರು ಅವರವರ ಪಾತ್ರಗಳು ಕಲಿಯಲು ಕಷ್ಟವಾಗಲೂಬಹುದು. ಕಥೆಯನ್ನು ನಾಟಕವಾಗಿ ತೋರಿಸುವಾಗ ಕೆಲವರು ಕೆಲವು ಪದಗಳನ್ನು ಮರೆತುಬಿಟ್ಟೆರೆ ನೋಡುವಂತವರಿಗೆ ಏನು ನಡೆಯುತ್ತಿದೆ ಎಂದು ತಿಳಿಯುವುದಿಲ್ಲ ಆಗ ಆ ನಾಟಕವು ಒಂದು ತಮಾಸೆಗೆ ಮಾರ್ಪಡಾಗುತ್ತದೆ. ಇದು ದೇವರ ವಾಕ್ಯ ಆದಕಾರಣ ನಾವು ಗಂಭೀರವಾಗಿ ದೇವರ ವಾಕ್ಯವನ್ನು ಹೇಳಬೇಕು.

ದೇವರ ಕಥೆಯ ಯೋಜನೆಯ (ಟಿ ಜಿ ಎಸ್ ಪಿ) *ಸಂಸ್ಥೆಯು* ಎಸ್ ಟಿ ಎಸ್ ನ್ನು ಉಪಯೋಗಿಸುವ ಸ್ಥಳ, ಕಲಿಯುವ ವಿಧಾನ ಮತ್ತು ವಿಸ್ತರಿಸುವ ವಿಧಾನ.

ಕೆಳಗೆ ಹೇಳರುವಂತವುಗಳು ಅವುಗಳಲ್ಲಿ ಒಳಗೊಂಡವುಗಳಾಗಿವೆ.

1. ***ಕಥೆ ಮಾತ್ರದ ಕೈಪಿಡಿ:*** *ಕಥೆ* ಮಾತ್ರದ ಈ ಕೈಪಿಡಿಯು, ಶ್ರವಣ ಸಾಧನದಲ್ಲಿ ಅಥವಾ ಬರವಣಿಗೆಯಲ್ಲಿ ಕಾರ್ಯವಿಧಾನವನ್ನು ವಿವರಿಸುತ್ತದೆ.

2. ***ಕಥೆ ಮಾತ್ರ ದರ್ಶನವನ್ನು ಹಾಕುವುದು:*** ಬೋಧಕರು ಲಭ್ಯವಾದಂತೆಲ್ಲಾ, ಎರಡು ದಿನದವರೆಗೆ, ಎರಡು ಗಂಟೆಗಳ ಕಾಲ ನಾವು ನಿರೂಪಣೆಗಳನ್ನು ಮಾಡುತ್ತೇವೆ. ಈ ಮೂರು ದಿನಗಳ ತರಬೇತಿಯಿಂದ, ಭಾಗವಹಿಸುವವರಲ್ಲಿ ಅನೇಕರು ತೊಡಗಿಸಿಕೊಳ್ಳುವವರಾಗುವುದಕ್ಕೆ ಬೇಕಾಗಿರುವ ಸಾಕಷ್ಟು ಕೌಶಲ್ಯಗಳನ್ನು ಪಡೆದುಕೊಂಡು, ಅಭ್ಯಾಸದೊಂದಿಗೆ ಕಥೆಗಳನ್ನು ಉಪಯೋಗಿಸುತ್ತಾ ಸೇವೆ ಸಲ್ಲಿಸುವರು.

3. ***ಕಥೆ ಮಾತ್ರದ ಮೂರು ದಿನಗಳ ಕಾರ್ಯಾಗಾರ:*** ಈ ಮಾದರಿಯು ಪ್ರದರ್ಶಿಸುವುದನ್ನು, *ಕಥೆ* ಮಾತ್ರವನ್ನು ವಿವರಿಸುವುದನ್ನು ಮತ್ತು ಭಾಗವಹಿಸುವವರಿಂದ *ಕಥೆ* ಮಾತ್ರದಲ್ಲಿ ಭಾಗವಹಿಸುವಿಕೆಯನ್ನು ಒದಗಿಸುತ್ತದೆ. ಈ ಮೂರು ದಿನಗಳ ತರಬೇತಿಯಿಂದ ಭಾಗವಹಿಸುವ ಅನೇಕರು ಒಳ್ಳೆಯ ತೊಡಗಿಸುವಿಕೆಗಾರರಾಗುತ್ತಾರೆ.

4. ***ಕಥೆ ಮಾತ್ರದ ಒಂದು ಸ್ಥಳದ ಕಾರ್ಯಾಗಾರ:*** ನಾವು ಈ ಎರಡು ಭಾಗದ ಅತಿವ್ಯಾಪ್ತಿಯ ಕಾರ್ಯಾಗಾರಗಳಿಗೆ ಪ್ರಾಧಾನ್ಯತೆಯನ್ನು ಕೊಡುತ್ತೇವೆ ಏಕೆಂದರೆ ಇದು ಅರ್ಹ *ಕಥೆ* ಮಾತ್ರದ ಬೋಧಕರನ್ನು ಕೊಡುತ್ತದೆ. ಈ ಬೋಧಕರುಗಳು ನಂತರ ಬೇರೆಯವರಿಗೆ ತರಬೇತಿ ಕೊಡುವಂತೆ ಮಾಡುತ್ತದೆ. ಬೋಧಕರ ಒಂದು ತಂಡವು ಬಹಳ ದೂರದಿಂದ ರೈಲಿನಲ್ಲಿ ಪ್ರಯಾಣಿಸಿ ಬರಬೇಕಾದಾಗ, ಅಥವಾ ಭಾಗವಹಿಸುವವರು ಬಹಳ ದೂರದ ಸ್ಥಳಗಳಿಂದ ಬಂದು ಸೇರಿದಾಗ, ಈ ಕಾರ್ಯಾಗಾರವು ಆಗ ಒಂದು ಪರಿಪೂರ್ಣ ಮಾದರಿಯ ಆಯ್ಕೆಯಾಗುತ್ತದೆ.

   ಭಾಗವಹಿಸುವ ಪ್ರತಿ ಮೂವರಿಗೆ ಒಬ್ಬ ಬೋಧಕನು ಇದ್ದು, 18 ತಾಸುಗಳಲ್ಲಿ, ಒಂದು ಸಣ್ಣ ಗುಂಪಿಗೆ ಬೋಧಿಸಲಾಗುತ್ತದೆ. 18 ತಾಸುಗಳ ಈ ಗಾಢವಾದ ಬೋಧನೆ ಮತ್ತು ಅಭ್ಯಾಸದ ನಂತರ, ಇದರಲ್ಲಿ ಹೊಸದಾಗಿ ತರಬೇತಿಗೊಂಡ ತೊಡಗಿಸಿಕೊಂಡ ಸಮರ್ಥರು ಸಹಾಯಕ ಬೋಧಕರ ಪಾತ್ರಗಳಿಗೆ ಮುನ್ನಡೆಯುತ್ತಾರೆ. ಇವರು 19 ತಾಸುಗಳ ಹೆಚ್ಚಿನ ಬೋಧನೆಯಲ್ಲಿ ಭಾಗವಹಿಸುವ ಅತಿದೊಡ್ಡ ಗುಂಪಿನ ತರಬೇತಿಯಲ್ಲಿ ಸಹಾಯವನ್ನು ಮಾಡುತ್ತಾರೆ. ಈ ಹೆಚ್ಚಾದ "ಕಾರ್ಯಾಗಾರ"ದಲ್ಲಿ ಭಾಗವಹಿಸುವ ಐದು ಜನರಿಗೆ ಒಬ್ಬ ಸಹಾಯಕ ಬೋಧಕರನ್ನು ಇಟ್ಟು ನಡೆಸಲಾಗುತ್ತದೆ.

   (ಈ ಕಾರ್ಯಗಾರ ಸುಮಾರು ೫ ದಿನಗಳು ನಡೆಯುತ್ತದೆ), ಒಟ್ಟು 37 ತಾಸುಗಳ ತರಬೇತಿಯ ನಂತರ, ಈ ಸಹಾಯಕ ಬೋಧಕರುಗಳಲ್ಲಿ ಅನೇಕರು ಹಂಗಾಮಿ ಬೋಧಕರಾಗುತ್ತಾರೆ, ಇವರು ಇನ್ನೂ ಹೆಚ್ಚಿನ ಅಭ್ಯಾಸ ಮತ್ತು ನಾಯಕತ್ವದ ಅನುಭವದೊಂದಿಗೆ ದೃಢೀಕರಿಸಲ್ಪಟ್ಟ ಬೋಧಕರುಗಳಾಗುತ್ತಾರೆ.

5. ***ಕಥೆ ಮಾತ್ರದ ಸಭೆಯನ್ನು ವೃದ್ಧಿಪಡಿಸುವ ಕಾರ್ಯಾಗಾರ:*** ಈ ಕಾರ್ಯಾಗಾರವು ಶುಕ್ರವಾರ ರಾತ್ರಿ, ಶನಿವಾರ ಅಥವಾ ಭಾನುವಾರ ಅಥವಾ ಕೇವಲ ಶನಿವಾರ ಮತ್ತು ಭಾನುವಾರಗಳನ್ನು ಉಪಯೋಗಿಸಿಕೊಳ್ಳುತ್ತದೆ. ವಾರದ ಕೊನೆ ದಿನಗಳಲ್ಲಿ ನಾಲ್ಕು ಬಾರಿ, ಸರಾಸರಿ ಗಾತ್ರದ ಒಂದು ಸಭೆಯು *ಕಥೆ* ಮಾತ್ರದ ಅರ್ಹ ತೊಡಗಿಸಿಕೊಳ್ಳುವವರಾಗಿ ತಯಾರಾಗಬಹುದು. 14 ವಾರದ ಕೊನೆಯ ದಿನಗಳಲ್ಲಿ, ಸಾಮಾನ್ಯ ಮಟ್ಟದ ಒಂದು ಸಭೆಯ ಗಾತ್ರದ ಎಲ್ಲಾ ಸದಸ್ಯರುಗಳು *ಕಥೆ* ಮಾತ್ರದ ತೊಡಗಿಸಿಕೊಳ್ಳುವವರಲ್ಲಿ ಸಾಮರ್ಥ್ಯವುಳ್ಳವರಾಗಿರುತ್ತಾರೆ.

   5-7 ವಾರಗಳಲ್ಲಿ, ಅತಿದೊಡ್ಡ ಸಭೆಯಲ್ಲಿರುವ (50,000ದವರೆಗೆ) ಪ್ರತಿಯೊಬ್ಬರೂ ತರಬೇತಿಯನ್ನು ಹೊಂದಬಹುದು. ಹಾಗೂ, ತರಬೇತಿ ಹೊಂದಿದ ಒಂದು ಗುಂಪಿನ ಜನರು *ಕಥೆ* ಮಾತ್ರದ ಬೋಧಕರಾಗಿ ಅರ್ಹತೆಯನ್ನು ಪಡೆದುಕೊಳ್ಳಬಲ್ಲರು. ಆಶ್ಚರ್ಯಕರವಾಗಿ, ಈ ವೃದ್ಧಿಪಡಿಸುವ ಕಾರ್ಯಾಗಾರಗಳಲ್ಲಿ, ಭಾಗವಹಿಸುವ ಅನೇಕ ಜನರು ಈ ಸಂಪೂರ್ಣ ಸಭೆಯ ವ್ಯಾಪ್ತಿಯನ್ನು ಸಾಧಿಸುವುದಕ್ಕೆ ವಾರದ ಕಡೆಯ ದಿನಗಳಲ್ಲಿ ನಡೆಯುವ ಒಂದು ಅಥವಾ ಎರಡು ತರಬೇತಿಗಳಲ್ಲಿ ಮಾತ್ರ ಭಾಗವಹಿಸಬಹುದಾಗಿದೆ!

6. ***ಕಥೆ ಮಾತ್ರದ ಮನೆಯ ಕಾರ್ಯಾಗಾರ:*** ದೃಢೀಕರಿಸಲ್ಪಟ್ಟ *ಕಥೆ* ಮಾತ್ರದ ಒಬ್ಬ ಬೋಧಕನು ಮನೆಯಲ್ಲಿ ನಡೆಯುವಂತಹ ಕಾರ್ಯಾಗಾರಕ್ಕೆ ಮೂವರು ವಿಶ್ವಾಸಿಗಳನ್ನು ಆಹ್ವಾನಿಸುತ್ತಾರೆ. ಬೋಧಕರು ವಾರಕ್ಕೊಮ್ಮೆ, ಎರಡೂವರೆ ಗಂಟೆಗಳ ಕಾಲ, ಆರು ವಾರಗಳಲ್ಲಿ ಒಂದು ಕಾರ್ಯಾಗಾರವನ್ನು ನಡೆಸುತ್ತಾರೆ. ಈ ಕೂಟಗಳನ್ನು ಸಂಜೆ, ಮಧ್ಯಾಹ್ನ ಅಥವಾ ವಾರದ ಕೊನೆ ದಿನಗಳಲ್ಲಿ ನಡೆಸಬಹುದು.

ಇದು ತಮ್ಮ ಕೆಲಸದ ನಿಮಿತ್ತ ಅಥವಾ ಕುಟುಂಬಗಳಲ್ಲಿನ ತಡೆಗಳ ನಿಮಿತ್ತ ಒಂದು ದಿನ ನಡೆಯುವಂತಹ ಅಥವಾ ದೀರ್ಘಕಾಲ ನಡೆಯುವಂತಹ ಕಾರ್ಯಾಗಾರದಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗದಂತಹ ಜನರಿಗೆ ಭಾಗವಹಿಸಲು ಅನುಕೂಲ ಮಾಡಿಕೊಡುವ ಒಂದು ಮಾದರಿಯ ಕಾರ್ಯಾಗಾರವಾಗಿದೆ. ಹಾಗೂ ಸಂಕೋಚ ಸ್ವಭಾವದ ಜನರಿಗಾಗಿ ಅನುಕೂಲಕರವಾದ ಬೆದರಿಕೆ ಇಲ್ಲದೆ ಕಲಿತುಕೊಳ್ಳುವ ವಾತಾವರಣವನ್ನು ಮನೆಗಳು ಒದಗಿಸಿಕೊಡುತ್ತವೆ. ನಾವು ತರಬೇತಿಗಾಗಿ ಅಗತ್ಯವಿರುವ ಮಾರ್ಗದರ್ಶನವನ್ನು, ಕೆಲವು ವಿಷಯಗಳ ಸಂಗ್ರಹಗಳನ್ನು ಮತ್ತು ವೇಳಾಪಟ್ಟಿಯನ್ನು ಒದಗಿಸುತ್ತೇವೆ.

ಆರು ಕೂಟಗಳ ನಂತರ ಈ ಒಬ್ಬ ಬೋಧಕರು ಆ ಮೂರು ಜನರಿಗೆ ಉಪಯೋಗವುಳ್ಳಂತಹ *ಕಥೆ* ಮಾತ್ರದ ತೊಡಗಿಸಿಕೊಳ್ಳುವವರಾಗುವುದಕ್ಕೆ ಸಮರ್ಥರಾಗುವಂತೆ ತರಬೇತಿಯನ್ನು ಕೊಡುವರು. ಈ ಹೊಸ ಮೂರು ತೊಡಗಿಸಿಕೊಂಡ ಜನರು ಎರಡನೆಯ ಬಾರಿ ನಡೆಯುವ 6 ವಾರಗಳ ಮನೆಯ ಕಾರ್ಯಾಗಾರಕ್ಕೆ ಭಾಗವಹಿಸುವಂತೆ ಪ್ರೋತ್ಸಾಹಿಸಲಾಗುತ್ತದೆ. ಅವರಲ್ಲಿ ಪ್ರತಿಯೊಬ್ಬರೂ ಮೂವರು ಹೊಸ ವ್ಯಕ್ತಿಗಳನ್ನು ಆಹ್ವಾನಿಸಬೇಕಾಗುತ್ತದೆ.

ನಾವು ಐದು ದಿನದ ಮತ್ತು ಸಭೆಯ ವೃದ್ಧಿಪಡಿಸುವ ಕಾರ್ಯಾಗಾರಗಳನ್ನು ಮಾಡುವಾಗ, ಕ್ರಮೇಣವಾಗಿ ಹೊಸದಾಗಿ ತರಬೇತಿ ಹೊಂದಿದ ತೊಡಗಿಸಿಕೊಂಡವರನ್ನು ಬೋಧಕರು ನಾಯಕತ್ವದೊಳಗೆ ನಡೆಸುತ್ತಾರೆ. ಎರಡನೆಯ ಬಾರಿ ನಡೆಯುವ 6 ವಾರಗಳ ತರಬೇತಿಯ ಮುಕ್ತಾಯದೊಳಗೆ, ಮೊದಲು ತರಬೇತಿಗೊಂಡ ಮೂವರಲ್ಲಿ ಪ್ರತಿಯೊಬ್ಬರೂ ಇನ್ನೂ ಮೂರು ಜನರಿಗೆ ತರಬೇತಿ ಕೊಡುವುದಕ್ಕೆ ಸಹಾಯ ಮಾಡುತ್ತಾರೆ. ಹಾಗೂ, ಅವರು ತಮ್ಮ *ಕಥೆ* ಮಾತ್ರದ ಕೌಶಲ್ಯಕ್ಕೆ ಸೇರಿಸಲ್ಪಡುತ್ತಾರೆ ಮತ್ತು ಅವರಿಗೆ ಸಹಾಯಕ ಬೋಧಕರುಗಳ ಅನುಭವವು ಆಗುತ್ತದೆ.

ಭಾಗವಹಿಸುವವರು ಈಗ ಒಂದು ಮನೆಯ ಸತ್ಯವೇದದ ಅಧ್ಯಯನ ಅಥವಾ ಅನ್ಯೋನ್ಯತೆಯ ಗುಂಪಿನ ಹಾಗೆ ದೇವರ ವಾಕ್ಯವನ್ನು ಅಧ್ಯಯನ ಮಾಡುವುದಕ್ಕೆ ಬೇರೆಯವರಿಗೆ ತರಬೇತಿಯನ್ನು ಕೊಡವಂತಹುದು ಅಥವಾ ವಾರ ವಾರ ಸೇರಿಬರುವುದನ್ನು ಒಳಗೊಂಡಿರಬಹುದು.

ಈ ಹನ್ನೆರಡು ಮಂದಿ ಪ್ರತಿಯೊಬ್ಬರೂ ಮೂರು ಜನರನ್ನು ಆಹ್ವಾನಿಸುವಂತಹ ಪ್ರಕ್ರಿಯೆಯನ್ನು ಮುಂದುವರೆಸಲು, ಮತ್ತು ಅವರಿಗೆ ತರಬೇತಿಯನ್ನು ಕೊಡಲು ಬಯಸುವುದಾದರೆ, ಆಗ ಮುಂದಿನ 6 ವಾರಗಳ ಕೂಟಗಳ ನಂತರ, ಈ ಗುಂಪು 36ಕ್ಕೆ ಬೆಳೆದಿರುತ್ತದೆ (ಮೊದಲ ಬೋಧಕರನ್ನು ಒಳಗೊಂಡು). ಅನೇಕ ಮನೆಗಳು ಇಷ್ಟು ಜನರಿಗೆ ಅಗತ್ಯಗಳನ್ನು ಒದಗಿಸಬಹುದಾಗಿದೆ. *ಕಥೆ* ಮಾತ್ರದ ಒಬ್ಬರಿಗೊಬ್ಬರ ಅನೇಕ ತರಬೇತಿಗಳು ಸಣ್ಣ ಗುಂಪುಗಳಲ್ಲಿ ಮಾಡಲಾಗುತ್ತದೆ, ಹಾಗಾಗಿ ಈ ನಾಲ್ಕು ಮಂದಿಯ ಗುಂಪುಗಳು ಬೇರೆ ಕೋಣೆಗಳಲ್ಲಿ ಸೇರಿ ನಡೆಸಬಹುದು ಅಥವಾ ಹೊರಗೆ ಇನ್ನಿತರ ಸ್ಥಳಗಳಲ್ಲಿ ಸೇರಿಬರಬಹುದಾಗಿದೆ.

ಕಥೆ ಮಾತ್ರದಲ್ಲಿ ಹೊಸದಾಗಿ ತರಬೇತಿಗೊಂಡವರು ಇನ್ನೂ ಅಧಿಕ ಬೋಧಕರನ್ನು ನೇಮಿಸುವುದರಿಂದ, ಅವರು ಮನೆಯ ಗುಂಪುಗಳನ್ನು ಪ್ರಾರಂಭಿಸುವುದರಿಂದ, ಅವರು ಸುವಾರ್ತೆ ಸಾರುವುದಕ್ಕಾಗಿ ಸತ್ಯವೇದದ ಕಥೆಗಳನ್ನು ಹೇಳುವುದರಿಂದ/ಬೋಧಿಸುವದರ ಕೌಶಲ್ಯದಿಂದ ಅಥವಾ ಕರ್ತನೊಂದಿಗೆ ಅತಿ ನಿಕಟವಾಗಿ ಬೆಳೆಯುವುದರಿಂದ ತಮ್ಮ ಸಂಖ್ಯೆಯಲ್ಲಿ ವೃದ್ಧಿಯನ್ನು ಕಾಣುವುದನ್ನು ಮುಂದುವರೆಸಬಹುದಾಗಿದೆ. ನಾವು

ಈ ಎಲ್ಲಾ ಮಾರ್ಗದರ್ಶನಗಳನ್ನು ಅದ್ಭುತವಾದವುಗಳು ಎಂದು ಪರಿಗಣಿಸುತ್ತೇವೆ. ಏಕೆಂದರೆ ಜನರು ವಾಕ್ಯಗಳನ್ನು ಪರಿಣಾಮಕಾರಿಯಾಗಿ ಕಲಿತುಕೊಳ್ಳುವಂತೆ ಮತ್ತು ವಾಕ್ಯಭಾಗಗಳನ್ನು ಹಂಚುವಂತೆ *ಕಥೆ* ಮಾತ್ರದ ಕೌಶಲ್ಯಗಳು ಜನರನ್ನು ಸಜ್ಜುಗೊಳಿಸುತ್ತದೆ, ಹಾಗೂ ಅವರು ತಮ್ಮ ಜೀವಿತಗಳು, ಮತ್ತು ಅವರು ಕಥೆಗಳನ್ನು ಹೇಳುವಂತಹ ಹಾಗೂ ಬೋಧಿಸುವಂತಹ ಜನರ ಜೀವಿತಗಳು ದೇವರ ಮಹಿಮೆಗಾಗಿ ಪರಿಣಾಮವನ್ನು ಬೀರುತ್ತವೆ.

ತರಬೇತಿ ಹೊಂದಿದವರಲ್ಲಿ ಹೆಚ್ಚಿನ ಭಾಗದ ಜನರು ಬೇರೆಯವರಿಗೆ ತರಬೇತಿಯನ್ನು ಕೊಡುತ್ತಲೇ ಮುಂದುವರೆಯುವುದಾದರೆ, ಒಬ್ಬ ಬೋಧಕರಿಂದ ನಡೆಸಲ್ಪಟ್ಟಂತಹ ಮೊದಲಿನ ಮನೆಯ ಕಾರ್ಯಾಗಾರವು ಎರಡು ವರ್ಷಗಳಲ್ಲಿ ಸುಮಾರು 6,000 ಜನರ ಮೇಲೆ ಪರಿಣಾಮವನ್ನು ಬೀರಬಹುದಾಗಿದೆ! ಇದು ಶಿಷ್ಯತ್ವ ಹಾಗೂ ನಾಯಕತ್ವದ ಸ್ವಾಭಾವಿಕವಾದ, ಕಾರ್ಯಸಾಧಿಸಬಲ್ಲ ಮಾದರಿಯಾಗಿದೆ. *ಕಥೆ* ಮಾತ್ರದ ಮುಖ್ಯಾಂಶವು ದೇವರ ವಾಕ್ಯವನ್ನು ಕೇಳುವುದರ, ಮತ್ತು ವೈಯಕ್ತಿಯ ಅನ್ವಯಿಸುವಿಕೆಗಳನ್ನು ಮಾಡುವುದರ ಸುತ್ತಲೂ ಪ್ರಾಧಾನ್ಯತೆಯನ್ನು ಹೊಂದಿರುವುದರಿಂದ, ಇದು ಪರಿಣಾಮಕಾರಿಯಾಗಿರುವುದು ಮತ್ತು ವೃದ್ಧಿಯಾಗುವುದು ಬಹಳ ದೊಡ್ಡದು ಏಕಾಗಿದೆ ಎಂಬುದನ್ನು ನಾವು ನೋಡಲು ಸಾಧ್ಯವಾಗಿದೆ.

7. **ಶಿಷ್ಯತ್ವವನ್ನು ವೃದ್ಧಿಪಡಿಸುವುದು:** ಒಂದು ಕಾರ್ಯಾಗಾರದ ನಂತರ, ಒಂದರ–ನಂತರ–ಒಂದು ಅಥವಾ ಒಂದು ಚಿಕ್ಕ ಗುಂಪಿನಲ್ಲಿ, ಒಬ್ಬ ತೊಡಗಿಸಿಕೊಂಡ ವ್ಯಕ್ತಿಯು ಒಮ್ಮೆ ಒಂದು ಕಥೆಯನ್ನು ಹೇಳಿ, ನಂತರ *ಕಥೆ* ಮಾತ್ರದ ಸಲಹೆಯನ್ನು ಹೇಗೆ ಮಾಡುವುದು ಎಂಬುದನ್ನು ಚಿಕ್ಕದಾಗಿ ಹಂಚಿಕೊಳ್ಳಬಹುದು. (ಹೇಗೆ ಎಂಬುದಕ್ಕೆ *ಕಥೆ ಮಾತ್ರದ* ವೆಬ್‌ಸೈಟ್ "ಉಚಿತ ಸಂಪನ್ಮೂಲಗಳು [Resources-Free]" ಎಂಬಲ್ಲಿ, "Educational" ಮತ್ತು "ಕಥೆ ಮಾತ್ರದ ಉಪಯೋಗ: ಶಿಷ್ಯತ್ವದ ವೃದ್ಧಿಯಾಗುವಿಕೆ– [Use of STS: Discipleship Multiplication]" ನೋಡಬಹುದು)

8. **ಕಿರುಹೊತ್ತಿಗೆಗಳು – *ಕಥೆ* ಮಾತ್ರಕ್ಕಾಗಿ ದರ್ಶನವನ್ನು ಹಾಕುವುದು:** *ಕಥೆ* ಮಾತ್ರವನ್ನು ಬೋಧಿಸುವುದಕ್ಕೆ ಮಾರ್ಗಗಳು (ವಿಶೇಷವಾದ ವಿಷಯಗಳ ಮೇಲೆ ಮತ್ತು ಸ್ಥಳಗಳ ಬಳಕೆಗಾಗಿ *ಕಥೆ* ಮಾತ್ರವನ್ನು ಉಪಯೋಗಿಸುವುದಕ್ಕೆ ಅನೇಕ ಇನ್ನಿತರ ಕಿರುಹೊತ್ತಿಗೆಗಳು ಲಭ್ಯವುಂಟು.)

9. **ತೊಡಗಿಸಿಕೊಂಡವರಿಗೆ ಕಥೆಗಳನ್ನು ಧ್ವನಿ ಮುದ್ರಿಸುವ ತರಬೇತಿ:** ಸತ್ಯವೇದದ ಕಥೆಯನ್ನು ಆಳವಾಗಿ ಸಿದ್ಧಪಡಿಸುವುದು. ಗುಂಪಿನ ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಸಿ.ಡಿಯನ್ನು ಉಪಯೋಗಿಸುವ ಶೈಲಿ.

10. www.SimplyTheStory.orgನಲ್ಲಿ *ಕಥೆ* ಮಾತ್ರದ ಮಾಹಿತಿಯು ಬರವಣಿಗೆಯಲ್ಲಿ, ಶ್ರವಣ ಸಾಧನದಲ್ಲಿ ಮತ್ತು ವೀಕ್ಷಣ ವಿಧಾನಗಳ ರೂಪದಲ್ಲಿ ಅನೇಕ ಸಂಗ್ರಹಗಳಿವೆ. 3 ನಿಮಿಷಗಳ ಏನು ಮತ್ತು ಏಕೆ ಎಂಬ ಮಾಹಿತಿಯ ಡಿ.ವಿ.ಡಿ.ಯು *ಕಥೆ* ಮಾತ್ರದ ತರಬೇತಿಯನ್ನು ಪ್ರೋತ್ಸಾಹಿಸುವುದಕ್ಕೆ ಒಂದು ಮಾದರಿಯಾಗಿದೆ. ಈ ಡಿ.ವಿ.ಡಿ.ಯು ಸಭೆಗಳಲ್ಲಿ ಮತ್ತು ಆರಾಧನೆಯ ಕೂಟಗಳಲ್ಲಿ ದರ್ಶನವನ್ನು ಹಾಕುವುದಕ್ಕೆ ಉತ್ತಮವಾಗಿದೆ. ಇದು ಅಲ್ಪಾವಧಿಯ ಸೇವೆಯ ಪ್ರಯಾಣಗಳನ್ನು ಮತ್ತು ವಿವಿಧ ದೇಶಗಳಲ್ಲಿ *ಕಥೆ* ಮಾತ್ರದ ಫಲಿತಾಂಶಗಳನ್ನು ತೋರ್ಪಡಿಸುತ್ತದೆ.

11. *ಕಥೆ* ಮಾತ್ರದ ವಿಸ್ತರಣೆಯ ತರಗತಿಗಳ (STS Extension Classes) ಮೂಲಕ ಕಥೆಯ ಅಭ್ಯಾಸದ ಕೂಟಗಳ ನೇರಪ್ರಸಾರ.

12. *ಕಥೆ* ಮಾತ್ರದ ಕೈಪಿಡಿಯ ಸಿ.ಡಿ ದೊರೆಯುತ್ತದೆ. *ಕಥೆ* ಮಾತ್ರದ ತರಬೇತಿಯ ಡಿ.ವಿ.ಡಿ ಶೀಘ್ರವೇ ಬರಲಿದೆ.

13. *ಕಥೆ* ಮಾತ್ರದ ವೆಬ್‌ಸೈಟ್‌ಗೆ ಹೆಚ್ಚಿನ ವಿಷಯಗಳನ್ನು ಸೇರಿಸುವುದು ಮುಂದುವರೆಯುತ್ತದೆ.

14. *ಕಥೆ* ಮಾತ್ರವನ್ನು ಟ್ವಿಟ್ಟರ್‌ನಲ್ಲಿ ನೋಡಿ! http://twitter.com/SimplyTheStory ಮತ್ತು +Follow ಕ್ಲಿಕ್ ಮಾಡಿ ಅಥವಾ Text USA follow SimplyTheStory to 40404.

15. ಒಂದು ಕಾರ್ಯಾಗಾರವನ್ನು ನಡೆಸುವುದಕ್ಕೆ ಏನು ಬೇಕೆಂಬುದಕ್ಕೆ ನೀವು ಆಸಕ್ತರಾಗಿದ್ದರೆ, ಈ ಕೈಪಿಡಿಯ ಕೊನೆಯಲ್ಲಿ ಪಟ್ಟಿಮಾಡಿರುವ ಹಾಗೆ ಹತ್ತಿರದ ನಿಮ್ಮ ದೇಶದ ನಿರ್ದೇಶಕರನ್ನು ದಯವಿಟ್ಟು ಸಂಪರ್ಕಿಸಿ. ಎಲ್ಲಾ ಮಾಹಿತಿಯನ್ನು ಪಡೆಯುವುದಕ್ಕಾಗಿ, www.SimplyTheStory.org, “Training Information.” ನಂತರ “Workshops” ಮತ್ತು “Hosting” ಕ್ಲಿಕ್ ಮಾಡಿ.

ಕಥೆ ಮಾತ್ರ (ಸಿಂಪ್ಲಿ ದ ಸ್ಟೊರಿ)
ಕಥೆ ಮಾತ್ರದ ತೊಡಗಿಸಿಕೊಂಡವರ ತರಬೇತಿಯ ಮರುಪರಿಶೀಲನೆ

- **ಕಥೆ ಹೇಳುವವರು_____ಬೋಧಕರು_____ದಿನಾಂಕ_____**
- *ಕಥೆ* ಮಾತ್ರದ ಕಾರ್ಯಗತಿಯ ವಿವರಗಳು *ಕಥೆ* ಮಾತ್ರದಲ್ಲಿನ ದಾಖಲೆಯಲ್ಲಿವೆ. ತರಬೇತಿಯ ಮರುಪರಿಶೀಲನೆಗಾಗಿ ನಿಮ್ಮ ಕಥೆಯ ನಿರೂಪಣೆಯನ್ನು ಪ್ರಾರಂಭಿಸುವುದಕ್ಕೂ ಮುನ್ನ, ಇದನ್ನು ನೆನಪಿನಲ್ಲಿಡಿ: ನಿಮ್ಮ ಕಾರ್ಯಾಗಾರದಲ್ಲಿರುವವರು ಎಷ್ಟೇ ಅಕ್ಷರಸ್ಥರಾಗಿದ್ದರೂ ಪರವಾಗಿಲ್ಲ, **ಕೇಳಿಸಿಕೊಳ್ಳುತ್ತಿರುವ ಪ್ರೇಕ್ಷಕರು ಮೌಖಿಕವಾಗಿ ಸಂಪರ್ಕ ಮಾಡುವವರು ಮತ್ತು ಅವರು ನೀವು ನಿರೂಪಿಸುವ ಕಥೆಯ ಅಂಶವನ್ನು** (ಮತ್ತು ಪ್ರಸ್ತುತ ತರಬೇತಿಯ ಸಂದರ್ಭದಲ್ಲಿ ಹೇಳಲ್ಪಟ್ಟಿರುವ ಇನ್ನಿತರ ಕಥೆಗಳ ಅಂಶಗಳು) **ಮಾತ್ರ ಬಲ್ಲವರು ಎಂಬ ರೀತಿಯಲ್ಲಿಯೇ ನಿಮ್ಮ ಕಥೆಯನ್ನು ನೀವು ನಿರೂಪಿಸಬೇಕು.**
- **ಒಂದು ನೆನಪನ್ನು ತರುವಂತೆ, ಕಥೆ ಹೇಳುವವರು...**
- ಪರಿಚಯದಲ್ಲಿ ಸತ್ಯವೇದವನ್ನು ಬಿಟ್ಟು ಬೇರೆ ಹೊರಗಿನ ಮಾಹಿತಿಯನ್ನು ಉಪಯೋಗಿಸುವುದಿಲ್ಲ.
- ಅಗತ್ಯವಿದ್ದರೆ ಮಾತ್ರ ಕಥೆಗೂ ಮೊದಲು ಒಂದು ಚಿಕ್ಕ ಕಥೆಯ ಮಾಹಿತಿ ಹೇಳುವರು.
- ಯಾವ ಮಾಹಿತಿಯು ಬಿಟ್ಟು ಹೋಗದಂತೆ ಅಥವಾ ಬೇರೆ ಸಂಗತಿಯನ್ನು ಸೇರಿಸದಂತೆ ಸತ್ಯವೇದದ ಕಥೆಯ ನಿಖರತೆಯನ್ನು ಕಾಪಾಡುವರು.
- ಒಂದು ಸತ್ಯವೇದದ ಕಥೆಯಲ್ಲಿಯೇ ನೆಲೆಗೊಂಡಿರುವುದು, ಅದಕ್ಕೆ ಸಮಾನಾಂತರವಾದ ಬೇರೆ ಕಾರ್ಯಗಳಿಂದ ಮಾಹಿತಿಯನ್ನು ಸೇರಿಸುವುದಿಲ್ಲ.
- ಸ್ವಯಂ ಸೇವಕರಾಗಿ ಪ್ರತಿಕ್ರಿಯಿಸುವವರಿಗೆ ಮತ್ತು ಪ್ರಶ್ನೆಗಳಿಗೆ ಉತ್ತರವನ್ನು ಹೇಳುವ ಕೇಳುಗರಿಗೆ ಆಲೋಚನಪರ, ಪ್ರೋತ್ಸಾಹಕರವಾದ ಪ್ರತಿಕ್ರಿಯೆಗಳನ್ನು ನೀಡುತ್ತಾರೆ.
- ಪ್ರತಿಕ್ರಿಯಿಸುವವರ ನಿರ್ದಿಷ್ಟವಾದ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಆ ಸಂದರ್ಭಕ್ಕೆ ಹೊಂದಿಕೊಳ್ಳುವ ಸ್ವಭಾವವನ್ನು ತೋರಿಸುವರು.
- ಕೇಳುಗರನ್ನು ತೊಡಗಿಸಿಕೊಳ್ಳುವುದಕ್ಕೆ ವಿವಿಧ ಶೈಲಿಗಳನ್ನು ಉಪಯೋಗಿಸಿಕೊಂಡು ಕಥೆಯ ಮೂಲಕ ವೇಗವಾಗಿ ಹಾದುಹೋಗುವಂತೆ ಮಾಡುವ ಆಸಕ್ತಿಕರವಾದ ನಡೆಸಲ್ಪಡುವ ಮಾರ್ಗವನ್ನು ಕೊಡುವರು.
- ಮೌಖಿಕ ಕಲಿಕೆಗಾರನು ಪ್ರತಿಕ್ರಿಯಿಸಲು ಸಾಧ್ಯವಾಗುವಂತಹ ಪ್ರಶ್ನೆಗಳ ಶೈಲಿಯ ಮೂಲಕ ಕಥೆಯಲ್ಲಿರುವ ಅವಲೋಕನಗಳ ಕಡೆಗೆ ನಡೆಸುವರು.
- ಮೌಖಿಕ ಕಲಿಕೆಗಾರನು ಪ್ರತಿಕ್ರಿಯಿಸುವ ಹಾಗೆ ಪ್ರಶ್ನೆಗಳನ್ನು ಕೇಳುವುದರಿಂದ ಆತ್ಮೀಕ ಅನ್ವಯಿಸುವಿಕೆಗಳನ್ನು ಹಂಚಿಕೊಳ್ಳುವರು.
- ಪ್ರಸಂಗಿಸುವುದಿಲ್ಲ!
- ಒಂದು ವೈಯಕ್ತಿಕ ನೆಚ್ಚಿನ ವಿಷಯವನ್ನು ಪ್ರಸಂಗಿಸುವುದಕ್ಕೆ ಕಥೆಯನ್ನು ಒಂದು ಸಾಧನವಾಗಿ ಉಪಯೋಗಿಸುವುದಿಲ್ಲ. ಅದರ ಬದಲು... ವಾಕ್ಯಗಳ ಮೂಲಕ ಸತ್ಯವನ್ನು ಹೇಳುವುದಕ್ಕೆ ಅವರು ದೇವರ ಕೌಶಲದಲ್ಲಿ ಭರವಸೆ ಇಡುವರು, ಮತ್ತು ಕಥೆಯೇ ತನ್ನ ಸಂದೇಶಗಳನ್ನು ಹೇಳುವಂತೆ ಅನುಮತಿಸುವರು.
- *ಕಥೆ* ಮಾತ್ರದ ನಿರೂಪಣೆಯ 5 ಪ್ರತ್ಯೇಕ ಭಾಗಗಳನ್ನು ವಿವರಿಸಲು ಮತ್ತು ಪ್ರದರ್ಶಿಸಲು ಸಮರ್ಥರಾಗಿರುವರು.

- ಮೇಲಿನ ಬಹುದೊಡ್ಡ ವಿಭಾಗಗಳಲ್ಲಿ ಅರ್ಹತೆಯನ್ನು ನಿರ್ಧರಿಸುವಂತಹುದು ಕಥೆ ಹೇಳುವವರು ಪ್ರದರ್ಶಿಸಿದಂತಹ *ಕಥೆ* ಮಾತ್ರದ 5 ಭಾಗಗಳು ತಿಳುವಳಿಕೆಯನ್ನು ಮಾತ್ರ ಪ್ರತಿಬಿಂಬಿಸುತ್ತದೆ. ಅದಕ್ಕೂ ಮೇಲಿನ ಯಾವುದೇ ಭಾಗವನ್ನು ಬಿಟ್ಟುಬಿಡಲಾಗಿದೆ ಅಥವಾ ಸರಿಯಾಗಿ ಸ್ಪಷ್ಟವಾಗಿ ನಿರೂಪಿಸಿಲ್ಲ ಎನ್ನುವುದನ್ನು "ಇಅತ" (ಇನ್ನೂ ಅಲ್ಲಿಗೆ ತಲುಪಿಲ್ಲ) ಎಂದು ನಿರ್ಧರಿಸಲಾಗಿರುತ್ತದೆ. ಇಲ್ಲದಿದ್ದರೆ "ಇದನ್ನು ಪಡೆದಿರುವರು" ಎಂದು ನಮೂದಿಸಲಾಗಿರುತ್ತದೆ!

ಕಥೆ ಹೇಳುವವರ ಹೆಸರು	ದಿನಾಂಕ	ಕಥೆಯ ಶೀರ್ಷಿಕೆ	ಪ್ರಸ್ತಾಪ	ಕಥೆ	ಪುನಃ ಕಥೆಯನ್ನು ಹೇಳಿಸು.	ಕಥೆಯ ಮೂಲಕ ನಡೆಸು	ಅವಲೋಕನಗಳು.	ಅನ್ವಯಿಸುವಿಕೆಗಳು
ಸಂಪೂರ್ಣ ಶಿಫಾರಸುಗಳು								

ಯಾವುದಾದರೂ ಕಾರ್ಯವು ಅಸಾಧಾರಣವಾಗಿ ಉತ್ತಮವಾಗಿ ನಡೆದಾಗ, ಅದರ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರೊಂದಿಗೆ ಬೋಧಕರು ಕೆಲವು ತರಬೇತಿಯ ವಿಭಾಗಗಳ ವಿಮರ್ಶೆಯನ್ನು ಬರೆಯಬಹುದಾಗಿದೆ. ಕೆಲವು ವಿಮರ್ಶೆಗಳು ಹೆಚ್ಚು ಅಭ್ಯಾಸದ ಅಗತ್ಯವಿರಬಹುದಾದ ಕೆಲವು ಕ್ಷೇತ್ರಗಳ ಕುರಿತಾಗಿರುವ ಸಲಹೆಗಳಾಗಿರಬಹುದು. ಅನೇಕ ವಿಷಯಗಳ ಭಾಗಗಳು ಚೆನ್ನಾಗಿ ನಡೆಸಲ್ಪಟ್ಟಿದ್ದರೆ ಅವುಗಳ ಪಕ್ಕದಲ್ಲಿ ಏನನ್ನು ಬರೆದಿರುವುದಿಲ್ಲ. ಇದರ ನಂತರ ಏನು ಹೇಳಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಈ ಪರಿಶೀಲನಾಪಟ್ಟಿಯು ತರಬೇತಿ ಕೊಡುವವರಿಗೆ ಸಹಾಯ ಮಾಡುತ್ತದೆ, ಇದರಿಂದ *ಕಥೆ* ಮಾತ್ರದ ಸಂಪೂರ್ಣ ನಿರೂಪಣೆಯನ್ನು ಯಾವ ಅಡಚಣೆಯೂ ಇಲ್ಲದೆಯೇ ಒಮ್ಮೆಲೇ ಮಾಡಬಹುದಾಗಿದೆ. ಇದು ಸಹಾಯ ಮಾಡುವುದಾದರೆ, ಭಯಪಡುವಂತಹ ಕಥೆಗಾರರು ಹೊರಟುಹೋದರೆ ಪುನಃ ಪ್ರಾರಂಭಿಸಬಹುದಾಗಿದೆ.

3 ಬಾರಿಯ ಕಥೆಯ ನಿರೂಪಣೆಗಾಗಿ ತರಬೇತಿಯ ಮರುಪರಿಶೀಲನೆ

ಪ್ರಾರಂಭದ ಸಮಯ	
ಪ್ರಾರ್ಥನೆ	
ಸತ್ಯವೇದ ಉಪಯೋಗಿಸಿದ ವಿಧಾನ	
	ಕಥೆ, ವಿಮರ್ಶೆ
1. ಪರಿಚಯ	
2. ನಿಖರತೆ	
3. ಕೇಳಿಸಿಕೊಳ್ಳುವ ಆಸಕ್ತಿ	
4. ಕಥೆಯಲ್ಲಿಯೇ ನೆಲೆಗೊಂಡಿರು	
5. ಕಥೆಯನ್ನು ಅನುಭವಿಸುವುದು	
6. ಕ್ರಿಯೆಗಳು	
	ಸ್ವಯಂ ಸೇವಕ, ವಿಮರ್ಶೆ
1. ಸ್ವಯಂ ಸೇವಕನನ್ನು ಪ್ರೇರೇಪಿಸುವುದು	
2. ಪ್ರೋತ್ಸಾಹಿಸುವುದು	
3. ಸ್ವಯಂ ಸೇವಕರ ತಿದ್ದುವಿಕೆ	
	ಕಥೆಯ ಮೂಲಕ ನಡೆಸು, ವಿಮರ್ಶೆ
1. ಚುರುಕಾಗಿ ಮುಗಿಸುವುದು	

2. ವೈವಿಧ್ಯಮಯ ಶೈಲಿಗಳು (3)	
3. ಭಾಗವಹಿಸುವಿಕೆ	
4. ನಿಖರತೆ	

2 ಬಗೆಯ ಆತ್ಮೀಕ ನಿಧಿಗಳಿಗಾಗಿ ಬೋಧನೆಯ ಮರುಪರಿಶೀಲನೆ

ಪ್ರಾರಂಭದ ಸಮಯ	**ಆತ್ಮೀಕ ಅವಲೋಕನಗಳು, ವಿಮರ್ಶೆ**
1. ಮುಖ್ಯ ಪದಗಳ ಉಪಯೋಗ	
2. ಮೌಖಿಕ ಶೈಲಿಯ ಪ್ರಶ್ನೆಗಳು	
3. ಪ್ರಾಮುಖ್ಯವಾದವುಗಳಾಗಿ ಅಭಿನಯ	
4. ಸಮಂಜಸವಾದ ಅವಲೋಕನಗಳು	
5. ಚರ್ಚೆಯ ಮತ್ತೊಂದು ವಿಧಾನ	
6. ಗುಂಪಿನ ಪರಸ್ಪರ ಕ್ರಿಯೆ	
7. ಸೌಮ್ಯವಾದ ಬದಲಾವಣೆಗಳು	
8. ದೃಢೀಕರಣಗಳು	
9. ಕಥೆಯಲ್ಲಿನ ಉತ್ತರಗಳು	
10. ನಿಧಿಗಳಿಗೆ ನಡೆಸಿರುವುದು	
11. ಚೆನ್ನಾಗಿ ಕೇಳಿಸಿಕೊಂಡಿರುವುದು	
12. ಕಥೆಯೇ ಬೋಧಿಸಲಿ	
ಪ್ರಾರಂಭದ ಸಮಯ	**ಆತ್ಮೀಕ ಅನ್ವಯಿಸುವಿಕೆಗಳು, ವಿಮರ್ಶೆ**
1. ಮೌಖಿಕ ಶೈಲಿಯ ಪ್ರಶ್ನೆಗಳು	
2. ಪ್ರಾಮುಖ್ಯವಾದವುಗಳಾಗಿ ಅಭಿನಯ	
3. ಸಮಂಜಸವಾದ ಅವಲೋಕನಗಳು	
4. ಚರ್ಚೆಯ ಮತ್ತೊಂದು ವಿಧಾನ	
5. ಗುಂಪಿನ ಪರಸ್ಪರ ಕ್ರಿಯೆ	
6. ಸೌಮ್ಯವಾದ ಬದಲಾವಣೆಗಳು	
7. ದೃಢೀಕರಣಗಳು	
8. ಅನ್ವಯಿಸುವಿಕೆಗಳು ಕಥೆಯಲ್ಲಿವೆ	
9. ನಡೆಸಿರುವ ಅಥವಾ ಹೇಳಿರುವ ಅನ್ವಯಿಸುವಿಕೆಗಳು	
10. ಸಾಧಿಸಬಲ್ಲ ಉತ್ತರಗಳು	
	ಗುಂಪನ್ನು ಸಂಪೂರ್ಣವಾಗಿ ನಿಭಾಯಿಸುವುದು
1. ಸಮಸ್ಯೆಯ ನಿಭಾಯಿಸುವಿಕೆ	
2. ಕಥೆಯನ್ನು ಬಿಟ್ಟು ಕೇಳುವ ಪ್ರಶ್ನೆಗಳಿಗೆ ಪ್ರತಿಕ್ರಿಯೆ	
3. ಗುಂಪಿನ ಚರ್ಚೆ	

ಬಿ: ಒಂದು ದೃಷ್ಟಾಂತ ಕಥೆಯ ಮೂಲಕ ಪ್ರಯಾಣ:

ಪ್ರಶ್ನೆಗಳನ್ನು ಹೇಗೆ ಸಿದ್ಧಪಡಿಸುವುದು

ಜಕ್ಕಾಯ, ಲೂಕ 19:1-10

ಈ ಅಧ್ಯಾಯದ ಶೀರ್ಷಿಕೆಯು ಹೇಳುವಂತೆ, ಈಗ ನಾವು ಮತ್ತೊಂದು ನಮೂನೆಯ ಕಥೆಯ ಮೂಲಕ ಪ್ರಯಾಣಕ್ಕೆ ಹೋಗುವವರಾಗಿದ್ದೇವೆ. ನಾವು ಜಕ್ಕಾಯನ ಕಥೆಯನ್ನು ಆರಿಸಿಕೊಂಡಿದ್ದೇವೆ. ಈ ಬಾರಿ, *ಕಥೆ* ಮಾತ್ರದ ಪ್ರಕ್ರಿಯೆಯನ್ನು ಹಂಚಿಕೊಳ್ಳುವುದಕ್ಕೆ ಒಂದು ವ್ಯತ್ಯಾಸವಾದ ಶೈಲಿಯನ್ನು ಉಪಯೋಗಿಸುತ್ತಿದ್ದೇವೆ, ಮತ್ತು ನೀವು *ಕಥೆ* ಮಾತ್ರದ ಕೇವಲ ಒಂದು ಭಾಗದ ಮೇಲೆ ಗಮನಹರಿಸುತ್ತಿರುವಿರಿ – ಅದು ಪ್ರಶ್ನೆಗಳನ್ನು ರೂಪಿಸುವುದು.

ನಿಮ್ಮ ಮನಸ್ಸಿನಲ್ಲಿ ಸಾಮಾನ್ಯವಾಗಿ ಮೂಡುವ ಆಲೋಚನೆಗಳನ್ನು ಪ್ರತಿನಿಧಿಸುವ ಪ್ರಶ್ನೆಗಳ ಬರವಣಿಗೆಯ ವಿಧಾನವನ್ನು ನಾವು ನಿಮಗೆ ಕೊಡುತ್ತಿದ್ದೇವೆ. ನಿರೂಪಣೆಯ ಕುರಿತಾಗಿ ಮಾತನಾಡುವುದಕ್ಕೆ ನಾವು ನಿಮ್ಮ ಬಳಿ ವೈಯಕ್ತಿಕವಾಗಿ ಉಪಸ್ಥಿತರಿಲ್ಲದ ಕಾರಣ, ಮಾನಸಿಕ ಪ್ರಕ್ರಿಯೆಯನ್ನು ನಿಮಗೆ ವರ್ಗಾಯಿಸುವ ಎರಡನೆಯ ಉತ್ತಮವಾದ ವಿಧಾನವನ್ನು ಆರಿಸಿಕೊಂಡಿರುವೆವು. ಇದನ್ನು ಬರೆದಿದ್ದೇವೆ.

ಸತ್ಯವೇದದ ಒಂದು ಕಥೆಯ ಈ ಸಿದ್ಧತೆಯು, ನಿಧಿಗಳನ್ನು ಕಂಡುಹಿಡಿಯುವುದು ಮತ್ತು ಆ ನಿಧಿಗಳಿಂದ ಪ್ರಶ್ನೆಗಳನ್ನು ರೂಪಿಸುವುದರ ಒಂದು ನಿರ್ದಿಷ್ಟವಾದ ಬೆಳವಣಿಗೆಯಾಗಿದೆ. ನೀವು ಇದನ್ನು ಮಾಡುವಾಗ, ಕಥೆಯೇ ನಿಮ್ಮ ಬರವಣಿಗೆಯಾಗಿರುತ್ತದೆ. ಕಥೆಯು ಒಂದು ಬಟ್ಟೆಯನ್ನು ಒಣಗಿಸಲು ಉಪಯೋಗಿಸುವ ಹಗ್ಗದ ಹಾಗಿರುತ್ತದೆ. ನಿಮ್ಮ ಮನಸ್ಸಿನಲ್ಲಿ ಈ ಹಗ್ಗದ ಪಕ್ಕದಲ್ಲಿ ನಿಧಾನವಾಗಿ ನಡೆಯುತ್ತಾ ಹೋಗುವಾಗ, ನಿಮ್ಮ ನಿಧಿಗಳನ್ನು ಮತ್ತು ಪ್ರಶ್ನೆಗಳನ್ನು ಅದರ ಮೇಲೆ ಹಾಕುವಿರಿ.

ನೀವು ಈ ಅಧ್ಯಾಯದ ಗಾತ್ರವನ್ನು ನೋಡಿದಾಗ, ಆಶ್ಚರ್ಯಚಕಿತರಾಗಿ, "ಈ ಕಥೆಯು ತುಂಬಾ ದೊಡ್ಡದು!" ಎಂದು ಉದ್ಗರಿಸುವಿರಿ. ನಂತರ, ಇದನ್ನು ಪ್ರಾರಂಭ ಮಾಡಿದಾಗ, ನೀವು (ಬೇರೆಯವರೂ ಸಹ), "ಇಲ್ಲಿ ಹೇಳಿದ್ದನ್ನೇ ಬಹಳ ಸರಿ ಹೇಳಲಾಗಿದೆ!" ಎಂದು ಹೇಳುವಿರಿ. ಬಹುಶಃ ಈ ಅಧ್ಯಾಯವು ನಿಮ್ಮ ಕಲಿಯುವ ಶೈಲಿಗೆ ಸರಿಹೊಂದದಿರಬಹುದು. ಆದರೆ ಇದು ಪ್ರಶ್ನೆಗಳನ್ನು ರೂಪಿಸುವುದಕ್ಕೆ ನಿಮಗೆ ಸಹಾಯ ಮಾಡಬಹುದು ಎಂಬುದನ್ನು ನೋಡುವುದಕ್ಕಾದರೂ ನೀವು ಕಲಿಯುವುದಕ್ಕೆ ಪ್ರಯತ್ನಿಸಬೇಕೆಂದು ನಾವು ಪ್ರೋತ್ಸಾಹಿಸುತ್ತೇವೆ.

ನಿಜವಾಗಿಯೂ, ಕೆಲವರಿಗೆ, ತಾವು ಸತ್ಯವೇದದ ಕಥೆಯೊಳಗಿಂದ ಕಂಡುಹಿಡಿದಂತಹ ನಿಧಿಗಳಿಂದ ಪ್ರಶ್ನೆಗಳನ್ನು ರೂಪಿಸುವುದು ಹೇಗೆ ಎಂಬುದರ ಸ್ಪಷ್ಟತೆಯನ್ನು ಕಲಿತುಕೊಳ್ಳುವಂತೆ ಈ ಕಥೆಯು ಸಹಾಯ ಮಾಡುತ್ತದೆ. ಹಾಗಾಗಿ ಈಗ ನಿಧಿಗಳನ್ನು ಕಂಡುಹಿಡಿಯುವ ಒಂದು ನಿರ್ದಿಷ್ಟವಾದ ಮುನ್ನಡೆಯಲ್ಲಿ ನಾವು ನಿಮ್ಮನ್ನು ಒಂದು ಸತ್ಯವೇದದ ಕಥೆಯ ಮುಖಾಂತರ ಕರೆದುಕೊಂಡು ಹೋಗುತ್ತೇವೆ, ಮತ್ತು ಆ ಕಂಡುಹಿಡಿಯಲ್ಪಟ್ಟ ನಿಧಿಗಳಿಂದ ಪ್ರಶ್ನೆಗಳನ್ನು ರೂಪಿಸುವುದು.

ಈ ಅಧ್ಯಾಯದಲ್ಲಿ ನಾವು ನಿಮಗೆ ಕೊಡುವಂತಹುದು ಕೇವಲ ನಮೂನೆಯ ಪ್ರಶ್ನೆಗಳಾಗಿದ್ದು, ಈ ಕಥೆಯಲ್ಲಿ ಕಂಡುಬರುವ ನಿಧಿಗಳಿಗೆ ಕೇಳುಗರನ್ನು ನಡೆಸುವುದಕ್ಕೆ ಇವುಗಳನ್ನು ಉಪಯೋಗಿಸಬಹುದು.

ನೀವು *ಕಥೆ* ಮಾತ್ರವನ್ನು ಉಪಯೋಗಿಸಿಕೊಂಡು ಸೇವೆ ಮಾಡುವಾಗ ಉಪಯೋಗಿಸುವ ಪ್ರಶ್ನೆಗಳು ನಿಮ್ಮ ಸ್ವಂತ ಪ್ರಶ್ನೆಗಳಾಗಿರುತ್ತವೆ. *ಕಥೆ* ಮಾತ್ರವನ್ನು ಉಪಯೋಗಿಸಿಕೊಂಡು ನೀವು ಸೇವೆ ಮಾಡುವಾಗ, ನೀವು ಯಾರಿಗೆ ಈ ಕಥೆಯನ್ನು ಹೇಳುವಿರೋ ಆ ಜನರ ಅಗತ್ಯಗಳನ್ನು ಮತ್ತು ಆಸಕ್ತಿಗಳನ್ನು ನೀವು ಗುರುತಿಸುವಿರಿ. ನೀವು ಕೇಳುವುದರಲ್ಲಿ ಒಮ್ಮೆ ಸಮರ್ಥಾರಾದರೆ, ಇದು ಇನ್ನೂ ಹೆಚ್ಚಾದ ಹೊಸ ಪ್ರಶ್ನೆಗಳನ್ನು ಕೇಳುವಂತೆ ಅನೇಕ ಬಾರಿ ನಡೆಸುತ್ತದೆ ಏಕೆಂದರೆ ನೀವು ಕಥೆಯ ಅನೇಕ ಭಾಗಗಳನ್ನು ಚರ್ಚಿಸುವುದಕ್ಕೆ ಸಿದ್ಧರಾಗಿ ಬಂದಿರುತ್ತೀರಿ.

ನೀವು ಸಿದ್ಧಮಾಡಿರುವವುಗಳಲ್ಲಿ ಕೆಲವು ಪ್ರಶ್ನೆಗಳನ್ನು ಮಾತ್ರವೇ ಉಪಯೋಗಿಸಿದರೆ ಮತ್ತು ಜನರು ಅದರಲ್ಲಿ ತೊಡಗಿಕೊಂಡು ಕಲಿತುಕೊಳ್ಳುತ್ತಿದ್ದರೆ, ನಿಮ್ಮ *ಕಥೆ* ಮಾತ್ರದ ಗುರಿಯು ನೆರವೇರುತ್ತಿದೆ. *ಕಥೆ* ಮಾತ್ರದಲ್ಲಿ ಚರ್ಚೆಯನ್ನು ನಿಯಂತ್ರಣದಲ್ಲಿಡುವುದು ಮತ್ತು "ನಮ್ಮ" ಅಂಶಗಳನ್ನು ನಡೆಸುವುದೇ ನಮ್ಮ ಗುರಿಯಾಗಿಲ್ಲ; ಇದು ದೇವರ ವಾಕ್ಯದಿಂದ ಕಲಿತುಕೊಳ್ಳುವಂತಹುದಾಗಿದೆ, ಮತ್ತು ಜನರು ಅರ್ಥಮಾಡಿಕೊಂಡಿರುವರು, ನೆನಪಿನಲ್ಲಿಟ್ಟುಕೊಂಡಿರುವರು ಮತ್ತು ತಾವು ಈಗ ತಾನೇ ಕಲಿತಿರುವುದನ್ನು ಬೇರೆಯವರೊಂದಿಗೆ ಹಂಚಿಕೊಳ್ಳುತ್ತಿರುವರು ಎಂದು ನೋಡುವುದಾಗಿದೆ.

ನೀವು ಯೋಚನೆ ಮಾಡಿಲ್ಲದಂತಹ ಹೊಸ ದಿಕ್ಕಿನಲ್ಲಿ ಕರ್ತನು ಜನರ ಉತ್ತರಗಳ ಮತ್ತು ಪ್ರಶ್ನೆಗಳ ಮೂಲಕ ನಡೆಸಬಹುದು. ಎಲ್ಲಿಯವರೆಗೆ ಜನರು ಸತ್ಯವೇದದ ಕಥೆಯನ್ನು ನಿಖರವಾಗಿ ಕಲಿತುಕೊಳ್ಳುವರೋ ಮತ್ತು ನಿಮ್ಮ ಕಥೆಯಲ್ಲಿಯೇ ನಿಮ್ಮ ಚರ್ಚೆಯು ನಡೆಸಲ್ಪಡುವಾಗ ಹಾಗೂ ನೀವೆಲ್ಲರೂ ಒಳಗೊಂಡಿದ್ದು, ಸತ್ಯವನ್ನು ಕಲಿಯುತ್ತೀರೋ ಅಲ್ಲಿಯವರೆಗೂ ದೇವರಿಗೆ ಗೌರವವು ಸಲ್ಲಿಸಲ್ಪಡುತ್ತದೆ ಮತ್ತು ನಿಮ್ಮ ಗುರಿಯು ಮುಟ್ಟಲ್ಪಡುತ್ತದೆ.

ಮೊದಲು, ನಿಮ್ಮ ಸ್ವಂತವಾಗಿ ಜಕ್ಕಾಯನ ಕಥೆಯನ್ನು ನೀವು ಪರಿಶೋಧಿಸುವಾಗ, ನಾವು ಇಲ್ಲಿ ನಿರೂಪಿಸಿರುವಷ್ಟು ನಿಧಿಗಳನ್ನು ನೀವು ಪ್ರಾಯಶಃ ಕಂಡುಹಿಡಿಯಲಾರಿರಿ. ಲೋಕದಲ್ಲಿರುವ ಅನೇಕ ಸ್ಥಳಗಳಲ್ಲಿ ನಾವು ಈ ಕಥೆಯನ್ನು ಬೋಧಿಸಿರುವೆವು ಮತ್ತು, ಆ ಸಮಯಗಳಲ್ಲಿ ಇದನ್ನು ಬೇರೆಯವರೊಂದಿಗೆ ಚರ್ಚಿಸುವುದರ ಮೂಲಕ ನಾವು ಈ ಕಥೆಯಿಂದ ಬಹಳಷ್ಟು ಕಲಿತುಕೊಂಡಿರುವೆವು. ನಾವು ಆ ಸಮಯದಲ್ಲಿ ಶೇಖರಿಸಿದ ಮಾಹಿತಿಯು ಈಗ ಆ ಅನೇಕ ನಿಧಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಂತೆ ಮಾಡಿದೆ. ನೀವು ಬೇರೆಯವರಿಂದ ಮಾಹಿತಿಯನ್ನು ಸಂಗ್ರಹಿಸುತ್ತಿರುವಿರಿ, *ಕಥೆ* ಮಾತ್ರದ ಗುಂಪಿನ ಕೊಡುಗೆಯಿಂದ ಸಂಭವಿಸುವುದು ಇದೇ ಆಗಿದೆ.

ನೀವು *ಕಥೆ* ಮಾತ್ರದ ಶೈಲಿಯಲ್ಲಿ ಕಥೆಗಳನ್ನು ಸಿದ್ಧಪಡಿಸುವುದಕ್ಕೆ ಮತ್ತು ನಿರೂಪಿಸುವುದಕ್ಕೆ ಮುಂದುವರೆಸಿದಾಗ, ನೀವು ಸಹ ಹೆಚ್ಚೆಚ್ಚಾಗಿ ನಿಧಿಗಳನ್ನು ಕಂಡುಹಿಡಿಯುವಿರಿ. ನಿಜ ಸಂಗತಿಯೆಂದರೆ, ನೀವು ಈ ಕಥೆಗೆ ಪುನಃ ಹಿಂತಿರುಗಿ ಹೋಗಿ, ಇನ್ನೂ ಹೆಚ್ಚಾದ ನಿಧಿಗಳನ್ನು ಇದರೊಂದಿಗೆ ಕಂಡುಕೊಳ್ಳಬಹುದು! ದೇವರ ವಾಕ್ಯವಿರುವುದು ಹೀಗೆಯೇ. ಇದರಲ್ಲಿರುವ ಸತ್ಯಗಳ ಕುರಿತಾಗಿ ನೀವು ಎಂದಿಗೂ ಆಯಾಸಗೊಳ್ಳುವುದಿಲ್ಲ!

ಈ ಅಧ್ಯಯನಕ್ಕಾಗಿ ನಾವು ಜಕ್ಕಾಯನ ಕಥೆಯನ್ನು ಆಯ್ಕೆ ಮಾಡಿರುವೆವು, ಭಾಗಶಃವಾಗಿ ಏಕೆಂದರೆ ಇದು ಅನೇಕ ಬಾರಿ ಮಕ್ಕಳ ಸರಳವಾದ ಕಥೆ ಎಂಬಂತೆ ತೋರುತ್ತದೆ. ಇದು ಸರಿ – ಆದರೆ ಇದು ಆಳವಾಗಿಯೂ ಸಹ ಇದೆ. ಈ ಕಥೆಯನ್ನು ಸಾಮಾನ್ಯವಾಗಿ ಈ ರೀತಿ ಹೇಳಲಾಗುತ್ತದೆ:

"ಕುಳ್ಳನಾಗಿದ್ದ ಜಕ್ಕಾಯ ಎಂಬಾತನು ಯೇಸುವನ್ನು ನೋಡಲು ಬಯಸಿದನು, ಹಾಗಾಗಿ ಗುಂಪಿನ ನಡುವಿನಲ್ಲಿ ಆತನನ್ನು ನೋಡುವುದಕ್ಕಾಗಿ ಜಕ್ಕಾಯನು ಒಂದು ಮರವನ್ನು ಹತ್ತಿದನು. ಈ ಕಥೆಯಲ್ಲಿರುವ ಗುಂಪಿನ ಜನರು ಈ ವ್ಯಕ್ತಿಯನ್ನು

ಇಷ್ಟಪಡುತ್ತಿರಲಿಲ್ಲ ಏಕೆಂದರೆ ಅವನು ಸುಂಕದವನಾಗಿದ್ದನು, ಆದರೆ ಯೇಸು ಅವನನ್ನು ಗಮನಿಸುತ್ತಾನೆ ಮತ್ತು ಅವನ ಮನೆಗೆ ಊಟಕ್ಕೆ ಬರುತ್ತಾನೆ. ಇದರಿಂದ ಜಕ್ಕಾಯನು ಸಂತೋಷಗೊಂಡು, ತನ್ನಲ್ಲಿರುವ ಹಣದಲ್ಲಿ ಅರ್ಧಭಾಗವನ್ನು ಬಡವರಿಗೆ ಕೊಡುತ್ತಾನೆ ಮತ್ತು ನಾವು ಜಕ್ಕಾಯನ ಹಾಗೆ ಇರಬೇಕು."

ಈ ಕಥೆಯ ಒಳಗಿರುವ ಈ ಮಾಹಿತಿಯು ಇದಾಗಿದ್ದರೂ ಸಹ ಕಂಡುಹಿಡಿಯುವುದಕ್ಕೆ ಇನ್ನೂ ಬಹಳ ಬಹಳ ಇದೆ. ನಾವು *ಕಥೆ* ಮಾತ್ರದ ಶೈಲಿಯಲ್ಲಿ ಈ ಕಥೆಯ ಮೂಲಕ ಹಾದುಹೋಗುವಾಗ, ಕಥೆಯಲ್ಲಿರುವ ಅನೇಕ ಆಳವಾದ ನಿಧಿಗಳು ತೆರೆಯಲ್ಪಡುತ್ತವೆ.
ಅಧ್ಯಾಯವು ಈ ರೀತಿಯಲ್ಲಿ ರೂಪಿಸಲ್ಪಟ್ಟಿದೆ: ನೀವು ಜಕ್ಕಾಯನ ಕಥೆಯನ್ನು ಓದಿದ ಮೇಲೆ ಮತ್ತು ಕಲಿತುಕೊಂಡ ನಂತರ, ಕಥೆಯಲ್ಲಿರುವ ಆ ಆತ್ಮೀಕ ನಿಧಿಗಳನ್ನು ನಾವು ಹೇಗೆ ಕಂಡುಹಿಡಿಯುತ್ತೇವೆ ಎಂಬುದನ್ನು ತೋರಿಸುತ್ತೇವೆ ಮತ್ತು ಆ ನಿಧಿಗಳನ್ನು ಬೇರೆಯವರು ಕಂಡುಕೊಳ್ಳುವುದಕ್ಕೆ ಸಹಾಯ ಮಾಡುವಂತೆ ಪ್ರಶ್ನೆಗಳನ್ನು ರೂಪಿಸುವುದು.

ಕಥೆಯಲ್ಲಿರುವ ಆತ್ಮೀಕ ಅವಲೋಕನಗಳ ನಿಧಿಗಳನ್ನು ಮೊದಲು ಕಂಡುಹಿಡಿಯುವುದಕ್ಕೆ, ಜನರ ಜೀವಿತಗಳಲ್ಲಿ ದೇವರ ಕ್ರಿಯೆಗಳ ಮಾರ್ಗ, ಕಥೆಯಲ್ಲಿರುವ ಜನರ ಮಾತುಗಳು ಮತ್ತು ಕ್ರಿಯೆಗಳು, ಅವರು ಮಾಡಿದ ಆಯ್ಕೆಗಳು, (ಅಥವಾ ಅವರು ಮಾಡಿರಬಹುದಾದಂತ ಆಯ್ಕೆಗಳು), ಫಲಿತಾಂಶಗಳು ಮತ್ತು ಅವರ ಆಯ್ಕೆಗಳ ಪರಿಣಾಮಗಳು ಕುರಿತಾಗಿ ನಾವು ನೋಡಿದೆವು ಮತ್ತು ಕೊನೆಯದಾಗಿ ದೇವರು ಕಥೆಯಲ್ಲಿ ಕ್ರಿಯೆ ಮಾಡುತ್ತಿರುವುದನ್ನು ಮತ್ತು ಜನರ ಜೀವಿತಗಳಲ್ಲಿ ಕ್ರಿಯೆ ಮಾಡುತ್ತಿರುವುದನ್ನು ಹೇಗೆ ನೋಡಿದೆವು ಎಂಬುದು. ಈ ಪ್ರಶ್ನೆಗಳು ನಾವು ಅನೇಕ ಆತ್ಮೀಕ ಅವಲೋಕನಗಳನ್ನು ಕಂಡುಹಿಡಿಯುವುದಕ್ಕೆ ಸಹಾಯ ಮಾಡುತ್ತವೆ.

ನಾವು ಹೇಳುವಂತಹ ಕೆಲವು ಆತ್ಮೀಕ ಅವಲೋಕನಗಳನ್ನು ನೀವು ನೋಡದಿರಬಹುದು ಅಥವಾ ಅವುಗಳೊಂದಿಗೆ ಒಪ್ಪಿಕೊಳ್ಳದಿರಲೂ ಬಹುದು. ಇದು ಅಸಾಮಾನ್ಯವಾದುದಲ್ಲ; ಇದನ್ನು ಒಂದು ಸಮಸ್ಯೆಯಾಗಿ ಪರಿಗಣಿಸಬಾರದು. ಬೇರೆಯವರಿಗೆ ಬೋಧಿಸಲು ನೀವು *ಕಥೆ* ಮಾತ್ರದ ಶೈಲಿಯನ್ನು ಉಪಯೋಗಿಸುವಾಗ, ನೀವು ವೈಯಕ್ತಿಕವಾಗಿ ಸ್ಪಷ್ಟವಾಗಿ ಕಥೆಯೊಳಗೆ ಏನನ್ನು ನೋಡುವಿರೋ ಅದನ್ನು ಮಾತ್ರ ಹಂಚಿಕೊಳ್ಳುವಿರಿ.

ನಾವು ಹೇಳುವಂತಹ ಕೆಲವು ಸಂಗತಿಗಳು ಅವೇ ಆಗಿರಬಹುದು – ಚರ್ಚಿಸುವುದಕ್ಕೆ ಸಂಗತಿಗಳು. ಸಂಗತಿಗಳನ್ನು ಚರ್ಚಿಸುತ್ತಿರುವಾಗ, ಅನೇಕ ಬಾರಿ ಕರ್ತನು ಬೇರೆಯವರ ಮೂಲಕ ಮಾತನಾಡುತ್ತಾನೆ, ಮತ್ತು ಆ ವಾಕ್ಯಭಾಗದಲ್ಲಿರುವ ಹೊಸ ಅರ್ಥವು ಬೆಳಕಿಗೆ ಬರುತ್ತದೆ.

ಬೇರೆಯವರು ಕಂಡುಹಿಡಿಯುವಂತೆ ಅವರನ್ನು ನಡೆಸುವುದಕ್ಕೆ ರೂಪಿಸುವ ಪ್ರಶ್ನೆಗಳು *ಕಥೆ* ಮಾತ್ರದಲ್ಲಿರುವ ಸವಾಲುಗಳಲ್ಲಿ ಒಂದು ಮುಖ್ಯ ಸವಾಲಾಗಿದೆ ಎಂದು ನಮಗೆ ತಿಳಿದಿದೆ. ಇಲ್ಲಿ ಆಗಿರುವ ಪುನರಾವರ್ತನೆಯ ಈ ಹೊಸ ಕೌಶಲದೊಂದಿಗೆ ನೀವು ಬಹಳ ಆರಾಮವಾಗಿ ಹೊಂದಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ ಎಂದು ನಾವು ಆಶಿಸುತ್ತೇವೆ.

ನಿಜವಾಗಿಯೂ ನೀವು ಈ ಕಥೆಯನ್ನು ಬೋಧಿಸುವಾಗ, ಸಮಯದ ಅಭಾವದ ನಿಮಿತ್ತ ಅಥವಾ ಇನ್ನಿತರ ಕಾರಣಗಳ ನಿಮಿತ್ತ, ನೀವು ಒಮ್ಮೆ ಈ ನಿಧಿಗಳಲ್ಲಿ ಕೆಲವನ್ನು ಮಾತ್ರ ನಿರೂಪಿಸಬಹುದು.

ಈಗ ನಾವು ಪ್ರಾರಂಭಿಸೋಣ:

ಈ ಅಧ್ಯಯನಕ್ಕಾಗಿ ನೀವು ಈ ಹತ್ತು ವಚನಗಳ ಕಥೆಯನ್ನು *ಕಥೆ* ಮಾತ್ರದ ಶೈಲಿಯಲ್ಲಿ ಕಲಿತುಕೊಳ್ಳಬೇಕೆಂದು ಖಡ್ಡಾಯವಾಗಿ ಹೇಳಲಾಗಿದೆ. (ಕಥೆಯ ವಿಷಯವನ್ನು ಕೆಳಗೆ ಕೊಡಲಾಗಿದೆ.)

ಒಂದು ಕಥೆಯನ್ನು ಹೇಗೆ ಕಲಿತುಕೊಳ್ಳಬೇಕೆಂದು *ಕಥೆ* ಮಾತ್ರದ ಕೈಪಿಡಿಯು ವರ್ಣಿಸುತ್ತದೋ ಅದೇ ರೀತಿಯಲ್ಲಿ:

1. ಹತ್ತು ವಚನಗಳ ಈ ಕಥೆಯನ್ನು ಒಮ್ಮೆ **ಜೋರಾಗಿ** ಓದಿ.

2. ನೀವು ಇದನ್ನು ಓದುವಾಗ, **ಇದನ್ನು ನಿಮ್ಮ ಸ್ವಾಭಾವಿಕವಾದ ಆಡು ಮಾತುಗಳಲ್ಲಿ ಹೇಳಿರಿ.**

3. ಕಥೆಯಲ್ಲಿ ಏನು ಸಂಭವಿಸುತ್ತಿದೆ ಎಂಬುದನ್ನು ನಿಮ್ಮ ಮನಸ್ಸಿನ ಕಣ್ಣುಗಳಿಂದ ನೋಡಿರಿ.

4. ನೀವು ಓದುವುದನ್ನು ಮುಗಿಸಿದ ತಕ್ಷಣ, **ನಿಮ್ಮ ಕಣ್ಣುಗಳನ್ನು ಮುಚ್ಚಿ, ನಿಮಗೆ ಎಷ್ಟು ನೆನಪಿದೆಯೋ ಅಷ್ಟು** ಕಥೆಯನ್ನು ಪುನರಾವರ್ತಿಸಿ. ನೀವು ಸರಿಯಾದ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವಿರೇ ಹೊರತು ಅದೇ ಮಾತುಗಳನ್ನಲ್ಲ.

5. ನಂತರ ಪುನಃ ಕಥೆಯನ್ನು **ಜೋರಾಗಿ** ಓದಿ. ನೀವು ಬಿಟ್ಟಿರುವ ಭಾಗಗಳನ್ನು ಗಮನಿಸುವಿರಿ.

6. ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಪುನಃ ಕಥೆಯನ್ನು ಜೋರಾಗಿ ಹೇಳಿ.

ಅನೇಕ ಬಾರಿ, ಈ ರೀತಿಯಾಗಿ ಕಥೆಯನ್ನು ನಾಲ್ಕು ಬಾರಿ ಓದಿ ಮತ್ತು ಪುನರಾವರ್ತಿಸಿದ ಬಳಿಕ, ನೀವು ಇಡೀ ಕಥೆಯನ್ನು ಹೇಳಬಲ್ಲಿರೆಂಬುದನ್ನು ಗುರುತಿಸಿಕೊಳ್ಳುವಿರಿ! ನಾಲ್ಕು ಅಥವಾ ಆರು ಬಾರಿಯಾದರೂ ಸಹ, ನೀವು ಕಥೆಯ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಕಷ್ಟಪಡುತ್ತಿದ್ದರೆ, ನೀವು *ಕಥೆ* ಮಾತ್ರದ ನಿಯಮವನ್ನು ಬದಲಾಯಿಸಿರುವ ಸಾಧ್ಯತೆ ಬಹಳಷ್ಟಿರುತ್ತದೆ! ಹಾಗಾಗಿ ನೀವು ಮೇಲಿರುವ 1 ರಿಂದ 6ನ್ನು ಪುನರಾವರ್ತಿಸಿ ಎಂದು ಸಲಹೆ ಕೊಡುತ್ತೇವೆ ಮತ್ತು ಈ ಜಕ್ಕಾಯನ ಕಥೆಯನ್ನು *ಕಥೆ* ಮಾತ್ರದ ಶೈಲಿಯಲ್ಲಿ ಕಲಿಯಲು ಪ್ರಯತ್ನಿಸಿ.

ನೀವು ಕಥೆಯನ್ನು ಪುನರಾವರ್ತಿಸಲು ಪ್ರಯತ್ನಿಸುತ್ತಿರುವಾಗ ಬರೆಯಲ್ಪಟ್ಟಿರುವ ಕಥೆಯ ಕಡೆಗೆ ಕದ್ದು ನೋಡುವ ಸಮಯವಿದಲ್ಲ, ಮತ್ತು ನೆನಪಿಡಿ – **ಜೋರಾಗಿ** ಓದಿ ಮತ್ತು **ಜೋರಾಗಿ** ಪುನಃ ಹೇಳಿ!**(ಲೂಕ 19:1-10)**

೧. ಆತನು ಯೆರಿಕೋ ಊರನ್ನು ಹೊಕ್ಕು ದಾಟಿ ಹೋಗುತ್ತಿದ್ದನು. (2) ಅಲ್ಲಿ ಜಕ್ಕಾಯನೆಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು; ಅವನು ಸುಂಕದ ಗುತ್ತಿಗೆದಾರನು ಮತ್ತು ಐಶ್ವರ್ಯವಂತನು. (3) ಅವನು ಯೇಸು ಎಂಥವನೆಂದು ನೋಡಲಪೇಕ್ಷಿಸಿದರೂ ತಾನು ಗಿಡ್ಡನಾಗಿದ್ದದರಿಂದ ಜನರ ಗುಂಪಿನ ನಿಮಿತ್ತ

ನೋಡಲಾರದೆ ಹೋದನು. (4) ಆದಕಾರಣ ಆತನನ್ನು ನೋಡುವದಕ್ಕಾಗಿ ಮುಂದೆ ಓಡಿಹೋಗಿ ಆತನು ಬರುತ್ತಿರುವ ಮಾರ್ಗದಲ್ಲಿದ್ದ ಆಲದ ಮರವನ್ನು ಹತ್ತಿದನು.

(5) ಯೇಸು ಅಲ್ಲಿಗೆ ಬಂದು ಮೇಲಕ್ಕೆ ನೋಡಿ – ಜಕ್ಕಾಯನೇ, ತಟ್ಟನೆ ಇಳಿದು ಬಾ, ನಾನು ಈಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು ಎಂದು ಅವನಿಗೆ ಹೇಳಲು, (6) ಅವನು ತಟ್ಟನೆ ಇಳಿದು ಬಂದು ಆತನನ್ನು ಸಂತೋಷದಿಂದ ಸೇರಿಸಿಕೊಂಡನು. (7) ಇದನ್ನು ನೋಡಿದವರೆಲ್ಲರು– ಈತನು ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ ಎಂದು ಗುಣಗುಟ್ಟಿದರು.

(8) ಆದರೆ ಜಕ್ಕಾಯನು ನಿಂತುಕೊಂಡು ಸ್ವಾಮಿಗೆ–ಸ್ವಾಮೀ, ನೋಡು, ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ; ಮತ್ತು ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳಕೊಂಡದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ ಎಂದು ಹೇಳಿದನು. (9) ಇದನ್ನು ಕೇಳಿ ಯೇಸು–ಈಹೊತ್ತು ಈ ಮನೆಗೆ ರಕ್ಷಣೆಯಾಯಿತು; ಇವನು ಸಹ ಅಬ್ರಹಾಮನ ವಂಶಿಕನಲ್ಲವೇ. (10) ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು ಎಂದು ಹೇಳಿದನು.

ದಯವಿಟ್ಟು ಜಾಗ್ರತೆಯಾಗಿ ಗಮನಕೊಡಿ: ಬೋಧಿಸುವ ಸಮಯ ಬಂದಾಗ, ಆ ಸಮಯದಲ್ಲೇ ನಿಮ್ಮ ಎಲ್ಲಾ ಆಲೋಚನೆಗಳನ್ನು ರುಜುಪಡಿಸುವದಕ್ಕೆ ನೀವು ಸಾಧ್ಯವಾಗದಿರಬಹುದು. ಹಾಗಾಗಿ, ಬೇರೆಯವರಿಗೆ ಬೋಧಿಸುವುದಕ್ಕೆ ಆ ರುಜುಪಡಿಸ ಬೇಕಾಗಿರುವ ಆಲೋಚನೆಗಳನ್ನು ಉಪಯೋಗಿಸಬಾರದು. ಕೇವಲ ಆ ಆಲೋಚನೆಗಳನ್ನು ಬದಿಗಿಡಿ, ಬಹುಶಃ ಇದನ್ನು ಬೇರೊಂದು ಕಥೆಯನ್ನು ಸಿದ್ಧಪಡಿಸಿದಾಗ ಉಪಯೋಗಿಸಿಕೊಳ್ಳಬಹುದು. ಕೆಲವೊಮ್ಮೆ ನೀವು ಕಥೆಯನ್ನು ಹೇಳಿ, ಪ್ರಶ್ನೆಗಳನ್ನು ಕೇಳುತ್ತಿರುವಾಗ, ಬೇರೆಯವರ ಪ್ರತಿಕ್ರಿಯೆಗಳ ಮೂಲಕ ದೇವರು ನಿಮಗೆ ಇನ್ನೂ ಅಧಿಕ ಸತ್ಯದ ಕುರಿತಾಗಿ ಮಾತನಾಡುವುದನ್ನು ನೀವು ಕಂಡುಕೊಳ್ಳುವಿರಿ!

ಮುಂದೆ ಓದುವುದಕ್ಕೂ ಮುನ್ನ, ನೀವು ಯಾವ ಆತ್ಮೀಕ ನಿಧಿಗಳನ್ನು ಕಂಡುಹಿಡಿಯಬಹುದೆಂಬುದನ್ನು ನೋಡಲು ಜಕ್ಕಾಯನ ಕಥೆಯ ಕುರಿತಾಗಿ ಸ್ವಲ್ಪ ಸಮಯ ಆಲೋಚಿಸಲು ಸಮಯವನ್ನು ತೆಗೆದುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ. ಈ ವಿಧಾನವು ನಿಮ್ಮ ಕೌಶಲವನ್ನು ಅಭ್ಯಾಸ ಮಾಡಲು ಒಂದು ಅವಕಾಶವನ್ನು ಕೊಡುತ್ತದೆ, ನಂತರ ಈ ಕಥೆಯು ನಿಮ್ಮ ಮನಸ್ಸಿನಲ್ಲಿ ಇನ್ನೂ ನೂತನವಾಗಿರುವಾಗಲೇ, ನೀವು ನಿಮ್ಮ ಅವಲೋಕನಗಳನ್ನು ನಾವು ಕೊಟ್ಟಿರುವುಗಳೊಂದಿಗೆ ಹೋಲಿಸಿ ನೋಡಬಹುದು. ಜ್ಞಾನಿಯಾದ ಸಲಹಾಗಾರನು ಕೇಳಿದ ಪ್ರಶ್ನೇಗಳನ್ನು ಕೇಳಲು ಪ್ರಾರಂಬಿಸಿ, ಹಾಗ ಚರ್ಚೆಮಾಡಲು ಅನುವು ಮಾಡಿಕೊಡುತ್ತದೆ. ನಾವು ಹೇಳದಿರುವ ಕೆಲವು ನಿಧಿಗಳನ್ನು ನೀವು ಕಂಡುಹಿಡಿಯಬಹುದು. ಅದೇ ರೀತಿ, ನೀವು ಗುರುತಿಸದಿರುವ ಕೆಲವು ನಿಧಿಗಳನ್ನು ನಾವು ಕಂಡುಹಿಡಿದಿರಬಹುದು. ನಿಮ್ಮ ನಿಧಿಯ ಬೇಟೆಯನ್ನು ಸವಿಯಿರಿ!

ನಾವು ಗಮನಿಸಿದ ಆತ್ಮೀಕ ಅವಲೋಕನಗಳು...

1. ಯೇಸುವಿನಲ್ಲಿ ಆಸಕ್ತಿ ಹೊಂದಿರುವಂತೆ ಕಾಣುವ ಜನರು, ಜಕ್ಕಾಯನು ಯೇಸುವಿನ ಬಳಿಗೆ ಹೋಗುವುದನ್ನು ತಡೆಯುತ್ತಿದ್ದರು.

2. ಗಿಡ್ಡನಾಗಿದ್ದ ಈ ಜಕ್ಕಾಯನು, ಸ್ಥಾನಮಾನದಲ್ಲಿ ಉನ್ನತ ಮಟ್ಟದಲ್ಲಿದ್ದನು. ಅವನು ಐಶ್ವರ್ಯವಂತನು ಮತ್ತು ಸುಂಕ ವಸೂಲಿಯ ಮುಖ್ಯಸ್ಥನಾಗಿದ್ದನು, ಆದರೆ ಅವನು ಯೇಸುವನ್ನು ನೋಡಬೇಕೆಂದು ಎಷ್ಟು ಅಭಿಲಾಷೆಯುಳ್ಳವನಾಗಿದ್ದನೆಂದರೆ, ಅದಕ್ಕೆ ಸುಲಭವಾದ ಮಾರ್ಗವು ಲಭಿಸದಿದ್ದಾಗ, ಆತನು ಬೇಕೆಂತಲೇ ತನ್ನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಕ್ಕೆ ಹೋಗುವುದನ್ನು ಆಯ್ಕೆ ಮಾಡಿಕೊಂಡನು.

3. ಈತನು ಬಹಿರಂಗವಾಗಿ ರಸ್ತೆಯಲ್ಲಿ ಓಡಿಬರುತ್ತಿರುವುದು ಮತ್ತು ಮರವನ್ನು ಹತ್ತುವಂತಹುದು ಈತನ ಗೌರವಕ್ಕೆ ಧಕ್ಕೆ ತರುವಂತಹ ಸಂಗತಿಯಾದ್ದರಿಂದ ಬಹುಶಃ ಜನರು ಈ ವ್ಯಕ್ತಿಯನ್ನು ಹಾಸ್ಯ ಮಾಡಿರಬಹುದಾದರೂ ಇದು ಜಕ್ಕಾಯನು ತಾನು ಮಾಡಿದ ಸಂಗತಿಗಳನ್ನು ಮಾಡದಂತೆ ತಡೆಯಲಾಗಲಿಲ್ಲ.

4. ಕಥೆಯಲ್ಲಿ ಮೊದಲು ಜಕ್ಕಾಯನು ಯೇಸುವನ್ನು ಹುಡುಕುತ್ತಿದ್ದನು ಎಂಬುದು ಸ್ಪಷ್ಟವಾಗಿದೆ. ಇದರ ಮುಂದಿನ ಭಾಗದಲ್ಲಿ ಜಕ್ಕಾಯನನ್ನು ಯೇಸು ಹುಡುಕುತ್ತಿರುವಂತಹ ಕಥೆಯಾಗುತ್ತದೆ!

5. ಯೇಸುವಿನ ಸುತ್ತಲೂ ಸುತ್ತುವರೆದಿರುವ ಜನರ ಸಮೂಹದ ನಡುವೆ ಯೇಸು ರಸ್ತೆಯಲ್ಲಿ ನಡೆದು ಬರುತ್ತಿದ್ದನು, ಆತನು ಅವರೆಲ್ಲರನ್ನೂ ದಾಟಿಕೊಂಡು, ಒಬ್ಬ ವ್ಯಕ್ತಿಯನ್ನು ಗುರುತಿಸುವುದಕ್ಕೆ ಆಯ್ಕೆ ಮಾಡಿದನು, ಈ ವ್ಯಕ್ತಿಯು ಆತನ ಹತ್ತಿರವೂ ಸಹ ಇರಲಿಲ್ಲ, ಈತನು ಮರದಲ್ಲಿದ್ದನು!

6. ಯೇಸು ಜಕ್ಕಾಯನನ್ನು ಹೆಸರಿಡಿದು ಕರೆಯುತ್ತಾನೆ, ಇದು ಮನುಷ್ಯನ ಕುರಿತಾಗಿ ಆತನಿಗಿದ್ದ ವೈಯಕ್ತಿಕ ಆಸಕ್ತಿಯನ್ನು ತೋರ್ಪಡಿಸುತ್ತದೆ.

7. ಯೇಸು ತಾನೇ ಜಕ್ಕಾಯನ ಮನೆಗೆ ಹೋಗಲು ಬಯಸುತ್ತಾನೆ, ಇದು ಅನೇಕ ಸಂಸ್ಕೃತಿಗಳಲ್ಲಿ ಮಿತಿಮೀರಿದ ಭರವಸೆಯ ರೀತಿಯದ್ದಾಗಿದೆ. ಇದು ಏನು "ಸಂಭವಿಸಲೇಬೇಕು" ಎಂಬುದಾಗಿ ಯೇಸುವಿಗಿದ್ದ ಜ್ಞಾನವನ್ನು ಮತ್ತು ಭರವಸೆಯನ್ನು ತೋರಿಸುತ್ತದೆ.

8. ಒಬ್ಬ ವ್ಯಕ್ತಿಯು ಮೇಲಕ್ಕೆ ನೋಡಿದಾಗ, ಅದರಲ್ಲೂ ವಿಶೇಷವಾಗಿ ತನ್ನನ್ನು ಹಿಂಬಾಲಿಸುತ್ತಿರುವಂತಹ ಒಬ್ಬ ನಾಯಕನು ಹೀಗೆ ನೋಡಿದಾಗ, ಅಲ್ಲಿರುವ ಜನರು ಆತನು ಏನನ್ನು ನೋಡುತ್ತಿರುವನು ಎಂಬುದನ್ನು ನೋಡಲು ತಾವೂ ಸಹ ಮೇಲಕ್ಕೆ ನೋಡುತ್ತಾರೆ. ಹಾಗಾಗಿ ಇಲ್ಲಿ ಕೇವಲ ಯೇಸು ಮಾತ್ರ ಜಕ್ಕಾಯನನ್ನು ನೋಡಲಿಲ್ಲ, ಅಲ್ಲಿರುವ ಎಲ್ಲಾ ಜನರು ನೋಡಿದರು! ತನ್ನನ್ನು "ಕಂಡುಹಿಡಿದಿರುವ" ಬಗ್ಗೆ ಜಕ್ಕಾಯನಿಗೆ ಭಯವಾಗಲಿ ಅಥವಾ ಮುಜುಗರವಾಗಲಿ ಆಗಲಿಲ್ಲ. ಸತ್ಯಾಂಶವೆಂದರೆ, ಆತನು ಸಂತೋಷವನ್ನು ತೋರ್ಪಡಿಸಿದನು.

9. ಯೇಸುವಿನ ಕರೆಯುವಿಕೆಗೆ ಕರಾರುವಕ್ಕಾಗಿ ಮಾಡುವುದರಲ್ಲಿ ಜಕ್ಕಾಯನು ಹಿಂಜರಿಯಲಿಲ್ಲ. ಆತನು ಆತುರವಾಗಿ ಬಂದನು.

10. ಯೇಸು ಹೇಗೆ ತಾನೇ "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂದು ಜನರು ತಮ್ಮತಮ್ಮಲ್ಲಿಯೇ ಆತನ ಕುರಿತಾಗಿ ಗುಣಗುಟ್ಟುವುದರಿಂದ ಅವರು ಜಕ್ಕಾಯನ ವಿರುದ್ಧವಾಗಿ

ಮಾತನಾಡಿದರು. "ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಇದು ಯೇಸು ಅಲ್ಲಿಗೆ ಹೋಗುತ್ತಿದ್ದಾನೆ ಅಥವಾ ಆತನು ಆಗಲೇ ಅಲ್ಲಿಗೆ ಹೋಗಿದ್ದಾನೆ ಎಂಬುದನ್ನು ಸೂಚಿಸುತ್ತದೆ.

ಜಕ್ಕಾಯನಿಗೆ ಮತ್ತು ಯೇಸುವಿಗೆ ಜಕ್ಕಾಯನ ಮನೆಗೆ ಯೇಸು ಹೋಗುವುದರಿಂದ ಜನರಿಗೆ ಇರಿಸುಮುರಿಸು ಎಂಬುದು ತಿಳಿದಾಗ, ಜಕ್ಕಾಯನ ಮನೆಗೆ ಹೋಗುವುದು ಅಷ್ಟು ಸ್ಪಷ್ಟವಾಗಿರಲಿಲ್ಲ. ಆದರೆ ಕಥೆಯಲ್ಲಿ ನಂತರ, ಜಕ್ಕಾಯನ ಮುಂದೆಯೇ ಯೇಸು ಗುಂಪಿಗೆ ಹೇಳುವುದರ ನಿಮಿತ್ತ, ಜಕ್ಕಾಯ ಮತ್ತು ಯೇಸು ಇವರಿಬ್ಬರಿಗೂ ಜನರ ಟೀಕೆ ತಿಳಿದಿತ್ತು ಎಂಬುದನ್ನು ನೋಡುತ್ತೇವೆ. ಆದರೆ ಜನರ ಟೀಕೆಯಿಂದ ತಾನು ಮುಜುಗರಪಡುವಂತೆ ಜಕ್ಕಾಯನು ಬಿಟ್ಟುಕೊಡಲಿಲ್ಲ ಮತ್ತು ಆದರೂ ಸಹ ಆತನ ಮನೆಯಲ್ಲಿ ಯೇಸು ಇದ್ದನು.

11. ಯೇಸು "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂಬ ಜನರ ಟೀಕೆಯಿಂದ ಆ ಜನರು ತಾವು ಪಾಪಿಗಳು "ಅಲ್ಲ" ಎಂದು ಆಲೋಚಿಸುತ್ತಿದ್ದರು ಎಂದು ಅನ್ನಿಸುತ್ತದೆ.

12. ಆ ಗುಂಪು ಯೇಸುವಿನ "ಹಿಂಬಾಲಕರು" ಎಂಬಂತೆ ವರ್ತಿಸಿದರು. ಅವರು ಯೇಸುವನ್ನು ತಳ್ಳಿಕೊಂಡು ಆತನ ಜೊತೆಗೆ ಬರುತ್ತಿದ್ದರು. ಯೇಸು ಯಾರೊಂದಿಗೆ ಊಟಕ್ಕೆ ಹೋಗುತ್ತಾನೆ ಎಂಬುದರ ಕಾಳಜಿ ಅವರಿಗಿತ್ತೆಂಬುದು ಅವರ ಟೀಕೆಯಿಂದ ವ್ಯಕ್ತವಾಗುತ್ತಿದ್ದರೂ ಸಹ, ಅವರಲ್ಲಿ ಯಾರಾದರೊಬ್ಬರ ಮನೆಯು ಇದಕ್ಕೆ ಉತ್ತಮವಾದ ಆಯ್ಕೆಯಾಗಿತ್ತು ಎಂಬಂತೆ ಪರೋಕ್ಷವಾಗಿ ತೋರುತ್ತಿತ್ತು. ವಾಸ್ತವವಾಗಿ, ಯೇಸು ತಾನು ಭೇಟಿ ಮಾಡಲು ಹೋಗುವ ಮನೆಗಳ ಆಯ್ಕೆಯನ್ನು ಅವರು ಒಪ್ಪಿಕೊಳ್ಳದೆ ಇದ್ದುದರಿಂದ ಆ ಗುಂಪಿನವರು ಯೇಸುವಿಗೆ ಬಹಳ ಅಗೌರವವನ್ನು ತೋರಿಸುತ್ತಿದ್ದರು.

13. ವಿಮರ್ಶಾತ್ಮಕವಾದ ಆ ಗುಂಪಿಗೆ ತಮ್ಮದೇ ನಂಬಿಕೆಗಳಿದ್ದವು, ಆದರೆ ಯೇಸುವನ್ನು ಮುಖಾಮುಖಿಯಾಗಿ ಕೇಳುವಂತಹ ಧೈರ್ಯ ಅವರಿಗಿಲ್ಲದಂತೆ ಕಾಣುತ್ತದೆ. ಅದರ ಬದಲು ತಮ್ಮತಮ್ಮೊಳಗೆ ತಾವು ಮಾಡಿದ ಟೀಕೆಯನ್ನು ಗುಣಗುಟ್ಟಿದರು.

14. ಐಶ್ವರ್ಯವಂತನಾದ ಜಕ್ಕಾಯನು, ತನ್ನ ಹಣದಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ ಎಂದು ಹೇಳಿದ್ದು ಆತನ ಹೃದಯವನ್ನು ತೋರ್ಪಡಿಸುತ್ತದೆ.

15. ಹಾಗೂ, ಜಕ್ಕಾಯನು ತಾನು ಅನ್ಯಾಯವಾಗಿ ಯಾರಿಂದಾದರೂ ಏನಾದರೂ ತಕ್ಕೊಂಡಿದ್ದರೆ, ಅಂತಹ ವ್ಯಕ್ತಿಗೆ ನಾಲ್ಕರಷ್ಟು ಹಿಂತಿರುಗಿಸಿ ಕೊಡುತ್ತೇನೆ ಎಂದು ಘೋಷಿಸಿದನು. ಇಲ್ಲಿ ಜಕ್ಕಾಯನು ತಾನು ಧರ್ಮಶಾಸ್ತ್ರದ ನಿಯಮದ ಪ್ರಕಾರ ತನ್ನ ಮೇಲೆ ದೋಷರೋಪಣೆ'ಯಾದರೆ' ಅಥವಾ ಅಪರಾಧಿಯೆಂದು ಕಂಡುಬಂದರೆ ಕದ್ದ ಹಣವನ್ನು ನಾಲ್ಕರಷ್ಟು ಹಿಂತಿರುಗಿಸುತ್ತೇನೆ ಎಂದು ಹೇಳಲಿಲ್ಲ. ಆದರೆ ಜಕ್ಕಾಯನು ಇದನ್ನು ತನ್ನ ಸ್ವಂತ ಚಿತ್ತದಿಂದ ಮಾಡುವುದಕ್ಕೆ ಒಪ್ಪಿಸಿಕೊಂಡನು. ಜಕ್ಕಾಯನು ಈಗಾಗಲೇ ಹಣವನ್ನು ಹಿಂತಿರುಗಿಸುತ್ತಿರುವನು ಎಂದು ಕೆಲವರು ಹೇಳಲೂಬಹುದು, ಆದರೆ ಗುಂಪಿನ ಜನರ ಅಭಿಪ್ರಾಯವು ವ್ಯತ್ಯಾಸವಾಗಿರುವುದು ನಮಗೆ ಕಂಡುಬರುತ್ತದೆ.

ಆತನು ಸುಂಕದ ವಸೂಲಿಗಾರನಾಗಿದ್ದು ತನ್ನ ಅರ್ಧ ಹಣವನ್ನು ಬಡವರಿಗೆ ಕೊಟ್ಟಿದ್ದರೆ, ಆತನು ಇದನ್ನು ಈಗಾಗಲೇ ರಹಸ್ಯವಾಗಿ ಮಾಡುತ್ತಿರುವಂತ ಸಾಧ್ಯತೆಗಳಿವೆ. ಆದರೆ ಅನ್ಯಾಯವಾಗಿ ಹಣವನ್ನು ತೆಗೆದುಕೊಂಡಿದುದರಿಂದ ಅವರಿಗೆ ನಾಲ್ಕರಷ್ಟು ಹಣವನ್ನು ಈಗಾಗಲೇ ಹಿಂತಿರುಗಿಸುವ ಸಂಗತಿಯು ಗುಂಪಿನ ದೃಷ್ಟಿಯಲ್ಲಿ ಆತನನ್ನು ನೀತಿವಂತನ ಮಟ್ಟಕ್ಕೆ ಇಡುವಂತೆ ಮಾಡಿತು.

ನಾವು ಕಥೆಯಿಂದ ತಿಳಿದುಕೊಳ್ಳುವ ಸಂಗತಿ ಎಂದರೆ, ಈ ಕಥೆಯ ಕೆಲವು ಅಂಶದಲ್ಲಿ, ಜಕ್ಕಾಯನು ತಾನು ಪಾಪಿಯೆಂದು ಒಪ್ಪಿಕೊಳ್ಳುವನು ಮತ್ತು ಸಂಗತಿಗಳನ್ನು ಸರಿಪಡಿಸಿಕೊಳ್ಳಲು ಬಯಸುತ್ತಾನೆ. ಆ ದಿನವೇ ರಕ್ಷಣೆಯಾಯಿತು ಎಂದು ಯೇಸು ಹೇಳಿದನು. ಜಕ್ಕಾಯನು ಅಚ್ಚರಿಗೊಳಿಸುವಂತಹ ಉದಾರತೆಯನ್ನು ಮೆರೆದುದನ್ನು ನಾವು ನೋಡಬಹುದು.

16. ಮೊದಮೊದಲು, ಜಕ್ಕಾಯನು ಯೇಸುವಿನಿಂದ ಮೆಚ್ಚುಗೆಯನ್ನು ಪಡೆಯುವ ಸಲುವಾಗಿ ತನ್ನ ಮಾರ್ಗವನ್ನು ಉಪಯೋಗಿಸಲು ಪ್ರಯತ್ನಿಸುತ್ತಿದ್ದನು, ಅಂದರೆ ದೇವರ ಬಳಿಯಲ್ಲೂ ತನ್ನ ಮಾರ್ಗವನ್ನೇ ನಡೆಸುವ ರೀತಿಯಲ್ಲಿರುವಂತೆ ಆಲೋಚಿಸುವಂತಿತ್ತು. ಆದರೆ ಆ ದಿನವೇ ಜಕ್ಕಾಯನು ಯೇಸುವಿನಲ್ಲಿ ನಂಬಿಕೆಯನ್ನು ಇಟ್ಟನು ಏಕೆಂದರೆ ಯೇಸು ಅವನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ಹೇಳಿದನು. ಈ ಕಥೆಯಲ್ಲಿ ತಾನು ಪಾಪಿಯೆಂದು ಒಪ್ಪಿಕೊಂಡವನು ಮತ್ತು ರಕ್ಷಣೆಯನ್ನು ಪಡೆದುಕೊಂಡ ಒಬ್ಬನೇ ವ್ಯಕ್ತಿ, ಜಕ್ಕಾಯ.
17. ಕಥೆಯಲ್ಲಿ, ಯೇಸು ಜಕ್ಕಾಯನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ನೇರವಾಗಿ ಹೇಳಿದನು. ನಂತರ ಯೇಸು ಮುಂದುವರೆಸುತ್ತಾ, "ಇವನು ಸಹ ಅಬ್ರಹಾಮನ ವಂಶಿಕನಲ್ಲವೇ" ಎಂದು ಹೇಳುತ್ತಾನೆ. ಇದರಿಂದ ಜಕ್ಕಾಯನ ಅಕ್ಕಪಕ್ಕದಲ್ಲಿ ಜನರಿದ್ದರು ಎಂಬುದನ್ನು ತೋರ್ಪಡಿಸುತ್ತದೆ. ಹಾಗೂ, ಯೇಸು ಹೇಳಿದ್ದರಿಂದ, ತಾನು ಯಾರೊಂದಿಗೆ ಮಾತನಾಡುತ್ತಿದ್ದನೋ ಅವನನ್ನು ಬದಲಾವಣೆ ಮಾಡುತ್ತಿದ್ದನು ಮತ್ತು ಯೇಸು ಈ ಜನರೊಂದಿಗೆ ಜಕ್ಕಾಯನ ಪರವಾಗಿ ಮಾತನಾಡುತ್ತಿದ್ದನು!

18. ಯೇಸು ತಾನು ಬಂದಿರುವುದರ ಉದ್ದೇಶ "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಎಂಬ ಹೇಳಿಕೆಯು, ಒಂದು ಸಾರಾಂಶದ ಹೇಳಿಕೆಯಾಗಿದ್ದು, ಇದು ಜಕ್ಕಾಯನಿಗೆ ಗೌರವವನ್ನು ತಂದದ್ದು ಮಾತ್ರವಲ್ಲದೆ ಗುಂಪಿನವರಿಗೆ ಒಂದು ಟೀಕೆಯಂತೆಯೂ ಸಹ ತೋರುತ್ತಿತ್ತು.

ಆತ್ಮೀಕ ನಿಧಿಗಳನ್ನು ಕಂಡುಕೋಳ್ಳಲು ಪ್ರಶ್ನೆಗಳನ್ನು ರೂಪಿಸುವುದು: ಈಗ ಅಭ್ಯಾಸಕ್ಕಾಗಿ, ಇಲ್ಲಿ ಪಟ್ಟಿ ಮಾಡಿರುವ ಪ್ರತಿ ಅವಲೋಕನಕ್ಕೆ ಬೇರೆಯವರನ್ನು ನಡೆಸುವುದಕ್ಕೆ ಪ್ರಶ್ನೆಗಳನ್ನು ರೂಪಿಸುವುದು ಹೇಗೆ ಎಂಬುದನ್ನು ನಾವು ನಿಮಗೆ ತೋರಿಸುತ್ತೇವೆ. ಕೆಲವೊಮ್ಮೆ ಒಂದು ಅವಲೋಕನವನ್ನು ಗಮನಿಸುವುದಕ್ಕೆ ನಾವು ಅನೇಕ ಪ್ರಶ್ನೆಗಳನ್ನು ಉಪಯೋಗಿಸಿರುವುನ್ನೂ ನೀವು ನೋಡುವಿರಿ.

ಪ್ರತಿ ಪ್ರಶ್ನೆಯು ಕೇಳುಗರನ್ನು ಆತ್ಮೀಕ ಅವಲೋಕನಕ್ಕೆ ನಡೆಸುವುದಕ್ಕೆ ರೂಪಿಸಲ್ಪಟ್ಟಿರುವುದರಿಂದ, ನಾವು ಪಟ್ಟಿಮಾಡಿರುವ ಅವಲೋಕನಗಳನ್ನು ಮರುಪಟ್ಟಿ ಮಾಡುವಾಗ **"ಆಅ"** ಎಂದು ಪಟ್ಟಿ ಮಾಡಿರುವೆವು. ಆ ಅವಲೋಕನಕ್ಕೆ ನಡೆಸುವ ಪ್ರಶ್ನೆ ಅಥವಾ ಪ್ರಶ್ನೆಗಳನ್ನು **"ಆಅಪ್ರ"** ಎಂದು ಬರೆಯಲ್ಪಟ್ಟಿದೆ. ಇದು ಬೇರೆಯವರನ್ನು ಅವಲೋಕನಗಳನ್ನು ಕಂಡುಹಿಡಿಯುವುದಕ್ಕೆ ಕ್ರಮೇಣವಾಗಿ ಹೇಗೆ ನಡೆಸುವುದೆಂಬುದಕ್ಕೆ ನಿಮಗೆ ಸಹಾಯ ಮಾಡುತ್ತದೆ.

ಇದು ಕೆಲವು ಚಿಕ್ಕ ರೊಟ್ಟಿಯ ತುಂಡುಗಳನ್ನು ಕೆಳಗೆ ಹಾಕುವುದರಿಂದ ಒಂದು ಪಕ್ಷಿಯನ್ನು ಪಂಜರದೊಳಗೆ ಎಳೆದುಕೊಳ್ಳುವ ಹಾಗಿರುತ್ತದೆ.

1. **ಆಅ –** ಯೇಸುವಿನಲ್ಲಿ ಆಸಕ್ತಿ ಹೊಂದಿರುವಂತೆ ಕಾಣುವ ಜನರು ಜಕ್ಕಾಯನು ಯೇಸುವಿನ ಬಳಿಗೆ ಹೋಗುವುದನ್ನು ತಡೆಯುತ್ತಿದ್ದರು.

   ಆಅಪ್ರ–

   - ಈ ಕಥೆಯಲ್ಲಿ ಜಕ್ಕಾಯನು ಯೇಸುವನ್ನು ನೋಡಬಯಸಿದನು, ಆದರೆ ಅವನು ಯೇಸುವಿನ ಬಳಿಗೆ ಹೋಗಲಾಗಲಿಲ್ಲ. ಇನ್ನೊಂದೆಡೆ ಜಕ್ಕಾಯನು ಗಿಡ್ಡನಾಗಿದ್ದುದರ ನಿಮಿತ್ತ, ಜನರು ಜಕ್ಕಾಯನ ದಾರಿಗೆ ಅಡ್ಡ ಬಂದರು ಎಂದು ಕಥೆಯಲ್ಲಿ ನೋಡುತ್ತೇವೆ. ಜಕ್ಕಾಯನನ್ನು ತಡೆಯಲು ಜನರು ಏನನ್ನು ಮಾಡುತ್ತಿದ್ದರು?
   - ಅಂದರೆ ಯೇಸುವಿಗೆ ಹತ್ತಿರವಾಗಿರಬೇಕೆಂದು ಬಯಸುತ್ತಿದ್ದಂತಹ ಜನರು ಯೇಸುವನ್ನು ಹುಡುಕುವನನ್ನು ತಡೆದರು ಎಂದು ನೀವು ಹೇಳುತ್ತಿರುವಿರೇ?
   - ಅದರ ಕುರಿತಾಗಿ ನಿಮಗೆ ಏನನಿಸುತ್ತದೆ?

2. **ಆಅ –** ಗಿಡ್ಡನಾಗಿದ್ದ ಈ ಜಕ್ಕಾಯನು, ಸ್ಥಾನಮಾನದಲ್ಲಿ ಉನ್ನತ ಮಟ್ಟದಲ್ಲಿದ್ದನು. ಅವನು ಐಶ್ವರ್ಯವಂತನು ಮತ್ತು ಸುಂಕ ವಸೂಲಿಯ ಮುಖ್ಯಸ್ಥನಾಗಿದ್ದನು, ಆದರೆ ಅವನು ಯೇಸುವನ್ನು ನೋಡಬೇಕೆಂದು ಎಷ್ಟು ಅಭಿಲಾಷೆಯುಳ್ಳವನಾಗಿದ್ದನೆಂದರೆ, ಅದಕ್ಕೆ ಸುಲಭವಾದ ಮಾರ್ಗವು ಲಭಿಸದಿದ್ದಾಗ, ಆತನು ಬೇಕೆಂತಲೇ ತನ್ನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಕ್ಕೆ ಹೋಗುವುದನ್ನು ಆಯ್ಕೆ ಮಾಡಿಕೊಂಡನು.

   ಆಅಪ್ರ–

   - ಜಕ್ಕಾಯನಿಗೆ ಸಮಾಜದಲ್ಲಿ ಇದ್ದಂತಹ ಸಾಮಾಜಿಕ, ವ್ಯವಹಾರಿಕ ಮತ್ತು ಆರ್ಥಿಕ ಮಟ್ಟವನ್ನು ವರ್ಣಿಸಿ.
   - ಅಂದರೆ, ಜಕ್ಕಾಯನು ತನ್ನ ಆಸ್ತಿಯಲ್ಲಿ ಸ್ವಲ್ಪ ಹಣವನ್ನು ಉಪಯೋಗಿಸಿಕೊಂಡು, ಗುಂಪಿನ ನಡುವೆ ನುಗ್ಗಿ ಹೋಗಲು ದಾರಿ ಮಾಡಿಕೊಳ್ಳುವುದಕ್ಕಾಗಿ ಕೆಲವು ಕೊಲೆಗಡುಕರನ್ನು ಗೊತ್ತುಮಾಡಿದನು, ಹೌದೇ? ಇಲ್ಲಾ?
   - ಸರಿ ನಾನು ನಿಮ್ಮನ್ನು ಕೇಳುತ್ತೇನೆ. ಬಹಳ ಪ್ರಾಮುಖ್ಯವಾಗಿರುವ ಈ ವ್ಯಕ್ತಿ ಯೇಸುವನ್ನು ನೋಡುವುದಕ್ಕಗಿ ಸಾಮಾನ್ಯವಾದ ಅಥವಾ ಸುಲಭ ವಿಧಾನದಲ್ಲಿ ಸಾಧ್ಯವಾಗದಿದ್ದಾಗ, ಕೊನೆಯದಾಗಿ ಎಷ್ಟರ ಮಟ್ಟಿಗೆ ಇದರಲ್ಲಿ ಮುಂದೆ ಹೋಗಬಹುದಾಗಿತ್ತು?

3. **ಆಅ –** ಈತನು ಬಹಿರಂಗವಾಗಿ ರಸ್ತೆಯಲ್ಲಿ ಓಡಿಬರುತ್ತಿರುವುದು ಮತ್ತು ಮರವನ್ನು ಹತ್ತುವಂತಹುದು ಈತನ ಗೌರವಕ್ಕೆ ಧಕ್ಕೆ ತರುವಂತಹ ಸಂಗತಿಯಾದ್ದರಿಂದ ಬಹುಶಃ ಜನರು ಈ ವ್ಯಕ್ತಿಯನ್ನು ಹಾಸ್ಯ ಮಾಡಿರಬಹುದಾದರೂ, ಇದು ಜಕ್ಕಾಯನು ಆ ಸಂಗತಿಗಳನ್ನು ಮಾಡದಂತೆ ಅವನನ್ನು ತಡೆಯಲಾಗಲಿಲ್ಲ.

ಆಅಪ್ರ–

- ಆ ಕ್ಷೇತ್ರದ ಜನರು ಜಕ್ಕಾಯನ ಕುರಿತಾಗಿ ಏನಂದುಕೊಳ್ಳುತ್ತಿದ್ದರು ಎಂಬುದನ್ನು ನಾವು ಕಥೆಯಲ್ಲಿ ನೋಡುವೆವ್ಹೋ?
- ಜಕ್ಕಾಯನು ಮುಖ್ಯವಾದ ವ್ಯಕ್ತಿಯಾಗಿದ್ದನು ಮತ್ತು ಜನರು ಆತನನ್ನು ಅಯೋಗ್ಯ ವ್ಯಕ್ತಿ ಎಂದು ಪರಿಗಣಿಸುತ್ತಾರೆ ಎಂಬುದು ಅವನಿಗೆ ತಿಳಿದಿತ್ತು. ಯೇಸುವನ್ನು ನೋಡಲು ಬಹಿರಂಗವಾಗಿ ರಸ್ತೆಯುದ್ದಕ್ಕೂ ಓಡುತ್ತಾ ಮತ್ತು ಮರವನ್ನು ಹತ್ತುವುದಕ್ಕಾಗಿ ಅವನು ಯಾವ ವೈಯಕ್ತಿಕ ಕಷ್ಟವನ್ನು ತೆಗೆದುಕೊಳ್ಳಬೇಕಾಗಿತ್ತು?
- ಜಕ್ಕಾಯನು ಬೇರೆ ಯಾವ ತೀರ್ಮಾನವನ್ನು ತೆಗೆದುಕೋಳ್ಳಲು ಅವಕಾಶವಿತ್ತು.
- ಜಕ್ಕಾಯನು ತೆಗೆದುಕೋಂಡ ತೀರ್ಮಾನದಿಂದ್ದ ಅವನ ಬಗ್ಗೆ ಏನನಿಸುತ್ತದೆ.

4. **ಆಅ –** ಕಥೆಯಲ್ಲಿ ಮೊದಲು ಜಕ್ಕಾಯನು ಯೇಸುವನ್ನು ಹುಡುಕುತ್ತಿದ್ದನು ಎಂಬುದು ಸ್ಪಷ್ಟವಾಗಿದೆ. ಇದರ ಮುಂದಿನ ಭಾಗದಲ್ಲಿ ಜಕ್ಕಾಯನನ್ನು ಯೇಸು ಹುಡುಕುತ್ತಿರುವಂತಹ ಕಥೆಯಾಗುತ್ತದೆ!

ಆಅಪ್ರ–

- ಕಥೆಯಲ್ಲಿ ಇಲ್ಲಿಯವರೆಗೂ ಜಕ್ಕಾಯನು ಯೇಸುವನ್ನು ಹುಡುಕುತ್ತಿದ್ದನೆಂದು ನೀವು ಹೇಳುವಿರೇ?
- ಇದು ನಮಗೆ ಏನನ್ನು ತಿಳಿಸಬಹುದಾಗಿದೆ?
- ಆದರೆ ನಾವು ಪುನಃ ಕಥೆಯ ಕಡೆಗೆ ನೋಡುವಾಗ, ಯೇಸು ಜಕ್ಕಾಯನನ್ನು ಹುಡುಕುತ್ತಿದ್ದನೆಂದು ನೀವು ಹೇಳುವಿರೇ?
- ಇದನ್ನು ಕಥೆಯಲ್ಲಿ ಎಲ್ಲಿ ನೋಡುತ್ತೇವೆ?
- ಹಾಗಾದರೆ ಅದು ಯಾವುದು? ಜಕ್ಕಾಯನು ಯೇಸುವನ್ನು ಹುಡುಕುತ್ತಿರುವನೇ ಅಥವಾ ಯೇಸು ಜಕ್ಕಾಯನನ್ನು ಹುಡುಕುತ್ತಿರುವನೇ?
- ಇವೆರಡು ನಿಜವಾಗಿರಲು ಸಾಧ್ಯವೇ? ವಿವರಿಸಿ.

5. **ಆಅ –** ಯೇಸುವಿನ ಸುತ್ತಲೂ ಸುತ್ತುವರೆದಿರುವ ಜನರ ಸಮೂಹದ ನಡುವೆ ಯೇಸು ರಸ್ತೆಯಲ್ಲಿ ನಡೆದು ಬರುತ್ತಿದ್ದನು, ಆತನು ಅವರೆಲ್ಲರನ್ನೂ ದಾಟಿಕೊಂಡು, ಒಬ್ಬ ವ್ಯಕ್ತಿಯನ್ನು ಗುರುತಿಸುವುದಕ್ಕೆ ಆಯ್ಕೆ ಮಾಡಿದನು, ಈ ವ್ಯಕ್ತಿಯು ಆತನ ಹತ್ತಿರವೂ ಸಹ ಇರಲಿಲ್ಲ, ಈತನು ಮರದಲ್ಲಿದ್ದನು!

ಆಅಪ್ರ–

- ಯೇಸು ತನ್ನನ್ನು ಸುತ್ತುವರೆದಿರುವ ಒಂದು ಗುಂಪಿನ ನಡುವೆ ನಡೆದುಬರುತ್ತಿರುವಾಗ, ಆ ಗುಂಪಿನಲ್ಲಿದ್ದ ಯಾವ ಜನರಿಗೆ ಅವನು ಪ್ರತಿಕ್ರಿಯಿಸಿದನು?
- ಯೇಸುವಿನ ವರ್ತನೆ ನಮಗೆ ಏನನ್ನು ತೋರಿಸಬಲ್ಲದು?

6. **ಆಅ –** ಯೇಸು ಜಕ್ಕಾಯನನ್ನು ಹೆಸರಿಡಿದು ಕರೆಯುತ್ತಾನೆ, ಇದು ಮನುಷ್ಯನ ಕುರಿತಾಗಿ ಆತನಿಗಿದ್ದ ವೈಯಕ್ತಿಕ ಆಸಕ್ತಿಯನ್ನು ತೋರ್ಪಡಿಸುತ್ತದೆ.

ಆಅಪ್ರ– ಯೇಸು ಜಕ್ಕಾಯನಿಗೆ ಹೇಳಿದುದರಲ್ಲಿ ತೋರಿಬಂದ ವೈಯಕ್ತಿಕ ಆಸಕ್ತಿಯಲ್ಲಿ ಬೇರೆ ಇನ್ನಿತರ ಸಂಗತಿ ಇದೆಯೇ?

7. **ಆಅ –** ಯೇಸು ತಾನೇ ಜಕ್ಕಾಯನ ಮನೆಗೆ ಹೋಗಲು ಬಯಸುತ್ತಾನೆ, ಇದು ಅನೇಕ ಸಂಸ್ಕೃತಿಗಳಲ್ಲಿ ಮಿತಿಮೀರಿದ ಭರವಸೆಯ ರೀತಿಯದ್ದಾಗಿದೆ. ಇದು ಏನು "ಸಂಭವಿಸಲೇಬೇಕು" ಎಂಬುದಾಗಿ ಯೇಸುವಿಗಿದ್ದ ಜ್ಞಾನವನ್ನು ಮತ್ತು ಭರವಸೆಯನ್ನು ತೋರಿಸುತ್ತದೆ.
    - ಜಕ್ಕಾಯನು ತನ್ನನ್ನು ತಾನು ಮಚ್ಚಡಲಿಲ್ಲ ಆದರೆ ಅವನು ಬಹಳ ಉಲ್ಲಾಸದಿಂದ್ದನು. ಇವನು ಬೇರೆ ಯಾವ ರೀತಿ ನಡೆದುಕೋಳ್ಳಬಹುದಿತ್ತು.

8. **ಆಅಪ್ರ–** ಸಂಭಾಷಣೆಯಲ್ಲಿ ಯಾರು ಮೊದಲಿಗರಾಗಿರುತ್ತಾರೆ ಮತ್ತು ಈ ಆಹ್ವಾನವು ಒಂದು ರೀತಿಯಲ್ಲಿ ಅಸಾಮಾನ್ಯವು ಹೇಗಾಗುತ್ತದೆ?

9. **ಆಅ –** ಒಬ್ಬ ವ್ಯಕ್ತಿಯು ಮೇಲಕ್ಕೆ ನೋಡಿದಾಗ, ಅದರಲ್ಲೂ ವಿಶೇಷವಾಗಿ ತನ್ನನ್ನು ಹಿಂಬಾಲಿಸುತ್ತಿರುವಂತಹ ಒಬ್ಬ ನಾಯಕನು ಹೀಗೆ ನೋಡಿದಾಗ, ಅಲ್ಲಿರುವ ಜನರು ಆತನು ಏನನ್ನು ನೋಡುತ್ತಿರುವನು ಎಂಬುದನ್ನು ನೋಡಲು ತಾವೂ ಸಹ ಮೇಲಕ್ಕೆ ನೋಡುತ್ತಾರೆ. ಹಾಗಾಗಿ ಇಲ್ಲಿ ಕೇವಲ ಯೇಸು ಮಾತ್ರ ಜಕ್ಕಾಯನನ್ನು ನೋಡಲಿಲ್ಲ, ಅಲ್ಲಿರುವ ಎಲ್ಲಾ ಜನರು ನೋಡಿದರು! ತನ್ನನ್ನು "ಕಂಡುಹಿಡಿದಿರುವ" ಬಗ್ಗೆ ಜಕ್ಕಾಯನಿಗೆ ಭಯವಾಗಲಿ ಅಥವಾ ಮುಜುಗರವಾಗಲಿ ಆಗಲಿಲ್ಲ. ಸತ್ಯಾಂಶವೆಂದರೆ, ಆತನು ಸಂತೋಷವನ್ನು ತೋರ್ಪಡಿಸಿದನು.

    ಆಅಪ್ರ–
    - ನೀವು ಎಂದಾದರೂ ಒಂದು ಗುಂಪಿನಲ್ಲಿದ್ದು, ಅದರಲ್ಲಿರುವ ಒಬ್ಬ ವ್ಯಕ್ತಿಯು ಮೇಲಕ್ಕೆ ನೋಡಿ ಏನೋ ದೃಷ್ಟಿಸುತ್ತಿರುವುದನ್ನು ಕಂಡಿರುವಿರೇ?
    - ಗುಂಪಿನಲ್ಲಿರುವ ಉಳಿದ ಜನರು ಏನು ಮಾಡುವರು?
    - ಯೇಸುವಿನ ಪಕ್ಕದಲ್ಲಿ ಇನ್ನೊಬ್ಬ ವ್ಯಕ್ತಿಯು ಜಕ್ಕಾಯನು ಮರದಲ್ಲಿರುವುದನ್ನು ನೋಡಿದನು ಎಂಬುದನ್ನು ನಾವು ಕಥೆಯಿಂದ ತಿಳಿದುಕೊಳ್ಳುತ್ತೇವೆಯೇ? ಹೇಗೆ?
    - ಹಾಗಾಗಿ ಈ ವ್ಯಕ್ತಿ ಜಕ್ಕಾಯನು ಬಹಳ ಮುಜುಗರದ ಪರಿಸ್ಥಿತಿಯಲ್ಲಿ ಹಿಡಿಯಲ್ಪಟ್ಟನು ಮತ್ತು ಪ್ರತಿಯೊಬ್ಬರೂ ಅವನನ್ನು ನೋಡಿದರು! ಬಹಳ ಶ್ರೀಮಂತನೂ ಮತ್ತು ಪ್ರಸಿದ್ಧನಾಗಿರುವ ವ್ಯಕ್ತಿಯು ಬಹಳ ಮೂರ್ಖತನದ ಸ್ಥಳದಲ್ಲಿ ಅಂದರೆ ಮರದ ಮೇಲಿರುವಂತ ರೀತಿಯಲ್ಲಿ ಸಿಕ್ಕಿಬಿದ್ದರೆ ಆ ವ್ಯಕ್ತಿಗೆ ಹೇಗೆ ಅನ್ನಿಸಬಹುದು?
    - ಜಕ್ಕಾಯನು ಅವಿತುಕೊಳ್ಳಲು ಪ್ರಯತ್ನಿಸಿದನೇ ಅಥವಾ ನೆಪಗಳನ್ನು ಹೇಳಿದನೇ?
    - ಜಕ್ಕಾಯನು ಹೇಗೆ ಭಾವಿಸಿದನು ಎಂಬುದನ್ನು ನಾವು ಕಥೆಯಿಂದ ತಿಳಿದುಕೊಳ್ಳಲು ಸಾಧ್ಯವೇ?

10. **ಆಅ –** ಯೇಸುವಿನ ಕರೆಯುವಿಕೆಗೆ ಕರಾರುವಕ್ಕಾಗಿ ಮಾಡುವುದರಲ್ಲಿ ಜಕ್ಕಾಯನು ಹಿಂಜರಿಯಲಿಲ್ಲ. ಆತನು ಆತುರವಾಗಿ ಬಂದನು.

    ಆಅಪ್ರ– ಜಕ್ಕಾಯನು ಹೇಗೆ ಪ್ರತಿಕ್ರಿಯಿಸಿದನು? ಖಚಿತವಾಗಿ ಹೇಗೆ?

11. **ಆಅ –** ಯೇಸು ಹೇಗೆ ತಾನೇ "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂದು ಜನರು ತಮ್ಮತಮ್ಮಲ್ಲಿಯೇ ಆತನ ಕುರಿತಾಗಿ ಗುಣಗುಟ್ಟುವುದರಿಂದ ಅವರು ಜಕ್ಕಾಯನ ವಿರುದ್ಧವಾಗಿ ಮಾತನಾಡಿದರು. "ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಇದು ಯೇಸು ಅಲ್ಲಿಗೆ ಹೋಗುತ್ತಿದ್ದಾನೆ ಅಥವಾ ಆತನು ಆಗಲೇ ಅಲ್ಲಿಗೆ ಹೋಗಿದ್ದಾನೆ ಎಂಬುದನ್ನು ಸೂಚಿಸುತ್ತದೆ.
ಜಕ್ಕಾಯನಿಗೆ ಮತ್ತು ಯೇಸುವಿಗೆ ಜಕ್ಕಾಯನ ಮನೆಗೆ ಯೇಸು ಹೋಗುವುದರಿಂದ ಜನರಿಗೆ ಇರಿಸುಮುರಿಸು ಎಂಬುದು ತಿಳಿದಾಗ, ಜಕ್ಕಾಯನ ಮನೆಗೆ ಹೋಗುವುದು ಅಷ್ಟು ಸ್ಪಷ್ಟವಾಗಿರಲಿಲ್ಲ. ಆದರೆ ಕಥೆಯಲ್ಲಿ ನಂತರ, ಜಕ್ಕಾಯನ ಮುಂದೆಯೇ ಯೇಸು ಗುಂಪಿಗೆ ಹೇಳುವುದರ ನಿಮಿತ್ತ, ಜಕ್ಕಾಯ ಮತ್ತು ಯೇಸು ಇವರಿಬ್ಬರಿಗೂ ಜನರ ಟೀಕೆ ತಿಳಿದಿತ್ತು ಎಂಬುದನ್ನು ನೋಡುತ್ತೇವೆ. ಆದರೆ ಜನರ ಟೀಕೆಯಿಂದ ತಾನು ಮುಜುಗರಪಡುವಂತೆ ಜಕ್ಕಾಯನು ಬಿಟ್ಟುಕೊಡಲಿಲ್ಲ ಮತ್ತು ಆದರೂ ಸಹ ಆತನ ಮನೆಯಲ್ಲಿ ಯೇಸು ಇದ್ದನು.

ಆಅಪ್ರ–

- ಗುಂಪಿನವರು ಏನೆಂದು ಗುಣಗುಟ್ಟಿದರೋ ಇದರಿಂದ ಅವರು ತಾವು ಜಕ್ಕಾಯನಿಗಿಂತ ಹೆಚ್ಚಿನವರು ಎಂದು ಭಾವಿಸಿದ್ದರು ಎಂಬುದು ನಮಗೆ ತಿಳಿದಿದೆ. ಜಕ್ಕಾಯನು ಈ ಗುಂಪಿನಿಂದ ಪರಿಣಾಮವನ್ನು ಹೊಂದಿದನೇ?
- ಅವರ ಟೀಕೆಗೆ ಅವನು ಹೇಗೆ ಪ್ರತಿಕ್ರಿಯಿಸಿದನು?

12. **ಆಅ –** ಯೇಸು "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂಬ ಜನರ ಟೀಕೆಯಿಂದ ಆ ಜನರು ತಾವು ಪಾಪಿಗಳು "ಅಲ್ಲ" ಎಂದು ಅವರು ಆಲೋಚಿಸುತ್ತಿದ್ದರು ಎಂದು ಅನ್ನಿಸುತ್ತದೆ.

ಆಅಪ್ರ–

- ಗುಂಪಿನವರು ಜಕ್ಕಾಯನ ಕುರಿತಾಗಿ ಏನೆಂದುಕೊಂಡರು... ಆತ್ಮೀಕವಾಗಿ?
- ಅವರು ತಮ್ಮ ಕುರಿತಾಗಿ ಏನಂದುಕೊಂಡಿದ್ದರು–ಆತ್ಮೀಕವಾಗಿ?

13. **ಆಅ –** ಆ ಗುಂಪು ಯೇಸುವಿನ "ಹಿಂಬಾಲಕರು" ಎಂಬಂತೆ ವರ್ತಿಸಿದರು. ಅವರು ಯೇಸುವನ್ನು ತಳ್ಳಿಕೊಂಡು ಆತನ ಜೊತೆಗೆ ಬರುತ್ತಿದ್ದರು. ಯೇಸು ಯಾರೊಂದಿಗೆ ಊಟಕ್ಕೆ ಹೋಗುತ್ತಾನೆ ಎಂಬುದರ ಕಾಳಜಿ ಅವರಿಗಿತ್ತೆಂಬುದು ಅವರ ಟೀಕೆಯಿಂದ ವ್ಯಕ್ತವಾಗುತ್ತಿದ್ದರೂ ಸಹ, ಅವರಲ್ಲಿ ಯಾರಾದರೊಬ್ಬರ ಮನೆಯು ಇದಕ್ಕೆ ಉತ್ತಮವಾದ ಆಯ್ಕೆಯಾಗಿತ್ತು ಎಂಬಂತೆ ಪರೋಕ್ಷವಾಗಿ ತೋರುತ್ತಿತ್ತು. ವಾಸ್ತವವಾಗಿ, ಯೇಸು ತಾನು ಭೇಟಿ ಮಾಡಲು ಹೋಗುವ ಮನೆಗಳ ಆಯ್ಕೆಯನ್ನು ಅವರು ಒಪ್ಪಿಕೊಳ್ಳದೆ ಇದ್ದುದರಿಂದ ಆ ಗುಂಪಿನವರು ಯೇಸುವಿಗೆ ಬಹಳ ಅಗೌರವವನ್ನು ತೋರಿಸುತ್ತಿದ್ದರು.

ಆಅಪ್ರ–

- ಆ ಗುಂಪು ಯೇಸುವಿನ "ಹಿಂಬಾಲಕರು" ಎಂದು ನಮಗೆ ಅನ್ನಿಸುವಂತೆ ಕಥೆಯ ಪ್ರಾರಂಭದಲ್ಲಿ ಮಾಡುವಂತಹುದು ಯಾವುದು?
- ಯೇಸುವನ್ನು ನೂಕಿಕೊಂಡು ಅವರು ಮುನ್ನಡೆಯುತ್ತಿದರು. ಯೇಸು ತನ್ನ ವೈಯಕ್ತಿಕ ಸಮಯವನ್ನು ಯಾರೊಂದಿಗೆ ಕಳೆದನೋ ಅವರ ಶಾರೀರಿಕ ಕ್ರಿಯೆಗಳಿಂದ ಮತ್ತು ಮೇಲ್ನೋಟದ ಆಸಕ್ತಿಯಿಂದ, ಇವು ಏನನ್ನು ಸೂಚಿಸುತ್ತವೆ?
- ವಾಸ್ತವಿಕದಲ್ಲಿ, ಅವರು ಯೇಸುವಿಗೆ ಯಾವ ಗೌರವವನ್ನು ತೋರಿಸುತ್ತಿದ್ದರು?

14. **ಆಅ –** ವಿಮರ್ಶಾತ್ಮಕವಾದ ಆ ಗುಂಪಿಗೆ ತಮ್ಮದೇ ನಂಬಿಕೆಗಳಿದ್ದವು, ಆದರೆ ಯೇಸುವನ್ನು ಮುಖಾಮುಖಿಯಾಗಿ ಕೇಳುವಂತಹ ಧೈರ್ಯ ಅವರಿಗಿಲ್ಲದಂತೆ ಕಾಣುತ್ತದೆ. ಯೇಸುವಿಗಿದ್ದ ಬಲದ ಕುರಿತಾಗಿ ಗುಂಪಿನ ಜನರಿಗೆ ತಿಳಿದಿರಲಿಲ್ಲ, ಹಾಗಾಗಿ ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡರೆ ಅವರ ದೂರುಗಳನ್ನು ಆತನು ಕೇಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬಂತೆ ವರ್ತಿಸಿದರು.

ಆಅಪ್ರ–

- ಗುಂಪಿನವರು ಎಷ್ಟು ಗಲಿಬಿಲಿಗೊಂಡಿದ್ದರೆಂದರೆ ಅವರು ಯೇಸುವಿನೊಂದಿಗೆ ಇರಬೇಕೆಂದು ಬಯಸುವ ಪ್ರತಿಯೊಬ್ಬರನ್ನೂ ಆತನು ಬಿಟ್ಟು, ಒಬ್ಬ ಪಾಪಿಯ ಮನೆಗೆ ಹೋಗುವುದಕ್ಕೆ ಹೇಗೆ ಸಾಧ್ಯ ಎಂದು ಆತನನ್ನು ಕೇಳಿದ್ದು ನಿಮಗೆ ನೆನಪಿದೆಯೇ? ಇಲ್ಲ? ಅವರು ಕೇಳಲಿಲ್ಲ. ಅವರು ಏನು ಮಾಡಿದರು?
- ಹಾಗಾದರೆ ಅವರ ವರ್ತನೆಯಿಂದ ಅವರು ಯೇಸುವನ್ನು ನಿಜವಾಗಿ ಗೌರವಿಸುತ್ತಿದ್ದರೆ ಅಥವಾ ಇಲ್ಲವೇ ಎಂಬುದನ್ನು ತೋರಿಸುತ್ತದೆಯೇ?

15. **ಆಅ –** ಐಶ್ವರ್ಯವಂತನಾದ ಜಕ್ಕಾಯನು, ತನ್ನ ಹಣದಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ ಎಂದು ಹೇಳಿದ್ದು ಆತನ ಹೃದಯವನ್ನು ತೋರ್ಪಡಿಸುತ್ತದೆ.

ಆಅಪ್ರ–

- ಜಕ್ಕಾಯನು ಯಾವ ಉದಾರತನವನ್ನು ಮಾಡಿದನು?
- ಇದು ಆತನ ಮೌಲ್ಯಗಳ ಕುರಿತಾಗಿ ಏನನ್ನು ತೋರಿಸುತ್ತದೆ?

16. **ಆಅ –** ಹಾಗೂ, ಜಕ್ಕಾಯನು ತಾನು ಅನ್ಯಾಯವಾಗಿ ಯಾರಿಂದಾದರೂ ಏನಾದರೂ ತಕ್ಕೊಂಡಿದ್ದರೆ, ಅಂತಹ ವ್ಯಕ್ತಿಗೆ ನಾಲ್ಕರಷ್ಟು ಹಿಂತಿರುಗಿಸಿ ಕೊಡುತ್ತೇನೆ ಎಂದು ಘೋಷಿಸಿದನು. ಇಲ್ಲಿ ಜಕ್ಕಾಯನು ತಾನು ಧರ್ಮಶಾಸ್ತ್ರದ ನಿಯಮದ ಪ್ರಕಾರ ತನ್ನ ಮೇಲೆ ದೋಷರೋಪಣೆ'ಯಾದರೆ' ಅಥವಾ ಅಪರಾಧಿಯೆಂದು ಕಂಡುಬಂದರೆ ಕದ್ದ ಹಣವನ್ನು ನಾಲ್ಕರಷ್ಟು ಹಿಂತಿರುಗಿರಿಸುತ್ತೇನೆ ಎಂದು ಹೇಳಲಿಲ್ಲ. ಆದರೆ ಜಕ್ಕಾಯನು ಇದನ್ನು ತನ್ನ ಸ್ವಂತ ಚಿತ್ತದಿಂದ ಮಾಡುವುದಕ್ಕೆ ಒಪ್ಪಿಸಿಕೊಂಡನು. ಜಕ್ಕಾಯನು ಈಗಾಗಲೇ ಹಣವನ್ನು ಹಿಂತಿರುಗಿಸುತ್ತಿರುವನು ಎಂದು ಕೆಲವರು ಹೇಳಲೂಬಹುದು, ಆದರೆ ಗುಂಪಿನ ಜನರ ಅಭಿಪ್ರಾಯವು ವ್ಯತ್ಯಾಸವಾಗಿರುವುದು ನಮಗೆ ಕಂಡುಬರುತ್ತದೆ. ಆತನು ಸುಂಕದ ವಸೂಲಿಗಾರನಾಗಿದ್ದು ತನ್ನ ಅರ್ಧ ಹಣವನ್ನು ಬಡವರಿಗೆ ಕೊಟ್ಟಿದ್ದರೆ, ಆತನು ಇದನ್ನು ಈಗಾಗಲೇ ರಹಸ್ಯವಾಗಿ ಮಾಡುತ್ತಿರುವಂತ

ಸಾಧ್ಯತೆಗಳಿವೆ. ಆದರೆ ಅನ್ಯಾಯವಾಗಿ ಹಣವನ್ನು ತೆಗೆದುಕೊಂಡಿದುದರಿಂದ ಅವರಿಗೆ ನಾಲ್ಕರಷ್ಟು ಹಣವನ್ನು ಈಗಾಗಲೇ ಹಿಂತಿರುಗಿಸುವ ಸಂಗತಿಯು ಗುಂಪಿನ ದೃಷ್ಟಿಯಲ್ಲಿ ಆತನನ್ನು ನೀತಿವಂತನ ಮಟ್ಟಕ್ಕೆ ಇಡುವಂತೆ ಮಾಡಿತು. ನಾವು ಕಥೆಯಿಂದ ತಿಳಿದುಕೊಳ್ಳುವ ಸಂಗತಿ ಎಂದರೆ, ಈ ಕಥೆಯ ಕೆಲವು ಅಂಶದಲ್ಲಿ, ಜಕ್ಕಾಯನು ತಾನು ಪಾಪಿಯೆಂದು ಒಪ್ಪಿಕೊಳ್ಳುವನು ಮತ್ತು ಸಂಗತಿಗಳನ್ನು ಸರಿಪಡಿಸಿಕೊಳ್ಳಲು ಬಯಸುತ್ತಾನೆ. ಆ ದಿನವೇ ರಕ್ಷಣೆಯಾಯಿತು ಎಂದು ಯೇಸು ಹೇಳಿದನು. ಜಕ್ಕಾಯನು ಅಚ್ಚರಿಗೊಳಿಸುವಂತಹ ಉದಾರತೆಯನ್ನು ಮೆರೆದುದನ್ನು ನಾವು ನೋಡಬಹುದು.

ಆಅಪ್ರ–

- ಜಕ್ಕಾಯನು ಧರ್ಮಶಾಸ್ತ್ರದ ನಿಯಮದ ಪ್ರಕಾರ ಒಬ್ಬ ಕಳ್ಳನಾಗಿ ಅಥವಾ ಆರೋಪಿಯಾಗಿ ಅಥವಾ ಅಪರಾಧಿಯಾಗಿ ಹಿಡಿಯಲ್ಪಟ್ಟು, ಈ ಕಷ್ಟದಿಂದ ಪಾರಾಗುವುದಕ್ಕಾಗಿ ಅವನು ಎಲ್ಲವನ್ನು ಕೊಡುವುದಕ್ಕೆ ಪ್ರಯತ್ನಿಸುತ್ತಿರುವನು ಎಂದು ಕಥೆಯಲ್ಲಿ ಯಾವುದಾದರೂ ಸೂಚಿಸುತ್ತದೆಯೇ?
- ಜಕ್ಕಾಯನು ಯೇಸುವನ್ನು ಭೇಟಿಯಾಗುವುದಕ್ಕಿಂತಲೂ ಮೊದಲೇ ಹಣವನ್ನು ಹಿಂತಿರುಗಿಸಿಕೊಡುತ್ತಿದ್ದನು ಎಂಬುದನ್ನು ನಾವು ಕಥೆಯಿಂದ ರುಜುಪಡಿಸಲು ಸಾಧ್ಯವೇ ಅಥವಾ ಯೇಸುವನ್ನು ನೋಡಬೇಕೆಂದು ಬಯಸಿದಾಗ ಹೀಗೆ ಮಾಡಬೇಕೆಂದು ನಿರ್ಧರಿಸಬಹುದು ಎಂದು ನೀವು ಅಂದುಕೊಳ್ಳುವಿರೋ?
- ಜಕ್ಕಾಯನು ಬಹಳ ಪ್ರಾಮಾಣಿಕನಾದ ಸುಂಕ ವಸೂಲಿಗಾರನಾಗಿದ್ದನು ಮತ್ತು ಈಗಾಗಲೇ ತನ್ನ ಹಣದಲ್ಲಿ ಅರ್ಧದಷ್ಟು ಹಣವನ್ನು ಬಡವರಿಗೆ ಕೊಡುತ್ತಿದ್ದನು ಎಂದು ಗುಂಪಿನ ಜನರ ಅಭಿಪ್ರಾಯದಿಂದ ನಾವು ಹೇಳಲು ಸಾಧ್ಯವೇ?
- ಜಕ್ಕಾಯನು ತಾನು ಸುಳ್ಳಾಗಿ ದೂಷಿಸಿದವರು, ಮತ್ತು ಅವರಿಂದ ಹಣವನ್ನು ತೆಗೆದುಕೊಂಡಿದ್ದು, ಹಾಗೂ ಆ ಹಣವನ್ನು ಅವರಿಗೆ ಹಿಂತಿರುಗಿಸಲು ಅವರ ಬಳಿಗೆ ಹೋಗುವುದರಲ್ಲಿ ಅವನಿಗಿದ್ದ ಕಷ್ಟಗಳನ್ನು ವರ್ಣಿಸಿ.
- ಯೇಸುವಿನೊಂದಿಗಿನ ಭೇಟಿಯು ಜಕ್ಕಾಯನ ಜೀವಿತವನ್ನು ಹೇಗೆ ಬದಲಾಯಿಸಿತು ಎಂಬುದನ್ನು ನಾವು ಕಥೆಯಿಂದ ಹೇಗೆ ನೋಡಲು ಸಾಧ್ಯ?

17. **ಆಅ –** ಮೊದಮೊದಲು, ಜಕ್ಕಾಯನು ಯೇಸುವಿನಿಂದ ಮೆಚ್ಚುಗೆಯನ್ನು ಪಡೆಯುವ ಸಲುವಾಗಿ ತನ್ನ ಮಾರ್ಗವನ್ನು ಉಪಯೋಗಿಸಲು ಪ್ರಯತ್ನಿಸುತ್ತಿದ್ದನು, ಅಂದರೆ ದೇವರ ಬಳಿಯಲ್ಲೂ ತನ್ನ ಮಾರ್ಗವನ್ನೇ ನಡೆಸುವ ರೀತಿಯಲ್ಲಿರುವಂತೆ ಆಲೋಚಿಸುವಂತಿತ್ತು. ಆದರೆ ಆ ದಿನವೇ ಜಕ್ಕಾಯನು ಯೇಸುವಿನಲ್ಲಿ ನಂಬಿಕೆಯನ್ನು ಇಟ್ಟನು ಏಕೆಂದರೆ ಯೇಸು ಅವನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ಹೇಳಿದನು. ಈ ಕಥೆಯಲ್ಲಿ ತಾನು ಪಾಪಿಯೆಂದು ಒಪ್ಪಿಕೊಂಡವನು ಮತ್ತು ರಕ್ಷಣೆಯನ್ನು ಪಡೆದುಕೊಂಡ ಒಬ್ಬನೇ ವ್ಯಕ್ತಿ, ಜಕ್ಕಾಯ.

ಆಅಪ್ರ–

- ಈ ಕಥೆಯಲ್ಲಿ ಎಷ್ಟು ಮಂದಿ ಯೇಸುವಿನಲ್ಲಿ ಆಸಕ್ತಿಯನ್ನು ಹೊಂದಿದ್ದರು ಎಂಬಂತೆ ತೋರುತ್ತದೆ?
- ಆ ದಿನದಲ್ಲಿ ಜಕ್ಕಾಯನಿಗೆ ನಿಜವಾಗಲೂ ಒಂದು ಆತ್ಮೀಕ ಬದಲಾವಣೆ ಉಂಟಾಯಿತು ಎಂಬುದನ್ನು ತೋರಿಸುವಂತಹ ಸಂಗತಿ ಈ ಕಥೆಯಲ್ಲಿ ಇನ್ನಿತರ ಸಂಗತಿ ಇದೆಯೇ?
- ಈ ಕಥೆಯಲ್ಲಿ ಯಾರು ಪಾಪಿಯೆಂದು ಒಪ್ಪಿಕೊಂಡರು?

- ಈ ಕಥೆಯಲ್ಲಿ ಯಾರು ತಾವು ಪಾಪಿಗಳಲ್ಲವೆಂದು ತಿಳಿದುಕೊಂಡರು?
- ಕಥೆಯಲ್ಲಿರುವ ಇವರೆಲ್ಲರಲ್ಲಿ, ಯಾರು ರಕ್ಷಣೆಯನ್ನು ಪಡೆದುಕೊಂಡರು?
- ರಕ್ಷಣೆಯನ್ನು ಪಡೆದುಕೊಂಡ ಆ ಒಬ್ಬ ವ್ಯಕ್ತಿಯಲ್ಲಿ ವ್ಯತ್ಯಾಸವಾದಂತ ಯಾವುದನ್ನು ನೀವು ಕಾಣುವಿರಿ?

18. **ಆಅ –** ಕಥೆಯಲ್ಲಿ, ಯೇಸು ಜಕ್ಕಾಯನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ನೇರವಾಗಿ ಹೇಳಿದನು. ನಂತರ ಯೇಸು ಮುಂದುವರೆಸುತ್ತಾ, "ಇವನು ಸಹ ಅಬ್ರಹಾಮನ ವಂಶಿಕನಲ್ಲವೇ" ಎಂದು ಹೇಳುತ್ತಾನೆ. ಇದರಿಂದ ಜಕ್ಕಾಯನ ಅಕ್ಕಪಕ್ಕದಲ್ಲಿ ಜನರಿದ್ದರು ಎಂಬುದನ್ನು ತೋರ್ಪಡಿಸುತ್ತದೆ. ಹಾಗೂ, ಯೇಸು ಹೇಳಿದ್ದರಿಂದ, ತಾನು ಯಾರೊಂದಿಗೆ ಮಾತನಾಡುತ್ತಿದ್ದನೋ ಅವನನ್ನು ಬದಲಾವಣೆ ಮಾಡುತ್ತಿದ್ದನು ಮತ್ತು ಯೇಸು ಈ ಜನರೊಂದಿಗೆ ಜಕ್ಕಾಯನ ಪರವಾಗಿ ಮಾತನಾಡುತ್ತಿದ್ದನು!

ಆಅಪ್ರ–

- ಈ ಕಥೆಯಲ್ಲಿ, ಜಕ್ಕಾಯನು ಯೇಸುವಿನ ಬಳಿ ನಂಬಿಕೆಯ ಅರಿಕೆಯನ್ನು ಮಾಡುತ್ತಿರುವಾಗ, ಇಲ್ಲಿ ಈ ಇಬ್ಬರು ಮಾತ್ರವೇ ಸಂಭಾಷಿಸುತ್ತಿರುವಂತೆ ಕಾಣುತ್ತದೆ. ಆದರೆ ಯೇಸು, "ಇವನು ಸಹ ಅಬ್ರಹಾಮನ ವಂಶಿಕನಲ್ಲವೇ" ಎಂದು ಹೇಳುವಾಗ, ಅಲ್ಲಿ ಬೇರೆಯವರು ಉಪಸ್ಥಿತರಿದ್ದರು ಎಂಬ ಸೂಚನೆಯನ್ನು ನೀವು ಕಾಣುವಿರೇ?
- ಅಲ್ಲಿ ಯಾರಿದ್ದರು?
- ಆ ಜನರಿಗೆ ಯೇಸುವಿನ ಮಾತಿನ ಅಂಶದಲ್ಲಿ ನೀವು ಏನನ್ನು ನೋಡುವಿರಿ?
- ಯೇಸು ಈ ಜನರು ತಮ್ಮ ಕುರಿತಾಗಿ ನೋಡಿಕೊಳ್ಳಲಿ ಎಂಬುದಾಗಿ ಹೇಳಲು ಪ್ರಯತ್ನಿಸುತ್ತಿರುವನೇ ಅಥವಾ ಜಕ್ಕಾಯನ ಕುರಿತಾಗಿ ಹೇಳಲು ಪ್ರಯತ್ನಿಸುತ್ತಿರುವನೇ ಎಂದು ನೀವು ಹೇಗೆ ಭಾವಿಸುವಿರಿ?

19. **ಆಅ –** ಯೇಸು ತಾನು ಬಂದಿರುವುದರ ಉದ್ದೇಶ "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಎಂಬ ಹೇಳಿಕೆಯು, ಒಂದು ಸಾರಾಂಶದ ಹೇಳಿಕೆಯಾಗಿದ್ದು, ಇದು ಜಕ್ಕಾಯನಿಗೆ ಗೌರವವನ್ನು ತಂದದ್ದು ಮಾತ್ರವಲ್ಲದೆ ಗುಂಪಿನವರಿಗೆ ಒಂದು ಟೀಕೆಯಂತೆಯೂ ಸಹ ತೋರುತ್ತಿತ್ತು.

ಆಅಪ್ರ–

- ಯೇಸು ತಾನು ಬಂದಿರುವುದರ ಉದ್ದೇಶವು "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಎಂದು ಹೇಳಿ ಕಥೆಯನ್ನು ಮುಗಿಸುತ್ತಾನೆ. ಯೇಸುವಿನ ಸಾರಾಂಶದ ಹೇಳಿಕೆಯಲ್ಲಿ ನೀವು ಏನನ್ನು ಕಾಣುವಿರಿ?
- ಜನರು ತಮ್ಮ ಕುರಿತಾಗಿ ಅರ್ಥಮಾಡಿಕೊಳ್ಳಲಿ ಎಂದು ಯೇಸು ಹೇಳಲು ಪ್ರಯತ್ನಿಸುತ್ತಿರುವನು ಎಂದು ನೀವು ಭಾವಿಸುವಿರೇ?
- ನಿಮ್ಮ ಆಲೋಚನೆಗಳನ್ನು ವಿವರಿಸಿ.

ಆತ್ಮೀಕ ಅನ್ವಯಿಸುವಿಕೆಗಳನ್ನು ಸಿದ್ಧಪಡಿಸುವುದೇ ಮುಂದಿನ ಹಂತವಾಗಿದೆ. ಪ್ರತಿ ಅನ್ವಯಿಸುವಿಕೆಯೂ ಒಂದು ನಿರ್ದಿಷ್ಟವಾದ ಅವಲೋಕನದ ಮೇಲೆ ಹೇಗೆ ಆಧಾರಗೊಂಡಿರಬೇಕು ಎಂಬುದನ್ನು ನೋಡಲು ಸಹಾಯವಾಗುವಂತೆ, ನಾವು ಪುನಃ ನಮ್ಮ ಅವಲೋಕನಗಳನ್ನು ಮರುಪಟ್ಟಿ ಮಾಡೋಣ. ಪ್ರತಿಯೊಂದು ಅವಲೋಕನದ ನಂತರ ಅದಕ್ಕೆ ಸಂಬಂಧಿಸಿದ ಆತ್ಮೀಕ ಅನ್ವಯಿಸುವಿಕೆಯು ಬರುತ್ತದೆ.

ಕೊನೆಗೆ, ಅವಲೋಕನಗಳಿಗೆ ನಡೆಸುವ ಪ್ರಶ್ನೆಗಳಿಗಾಗಿ ಮಾಡಿದ ಹಾಗೆಯೇ, ಆತ್ಮೀಕ ಅನ್ವಯಿಸುವಿಕೆಗಳಿಗೆ ನಡೆಸುವುದಕ್ಕಾಗಿ ಪ್ರಶ್ನೆಗಳನ್ನು ರೂಪಿಸುವುದಕ್ಕೆ ನಾವು ನಿಮಗೆ ಸಹಾಯ ಮಾಡುತ್ತೇವೆ. ಈ ಭಾಗದಲ್ಲಿ ಪ್ರತಿ ಆತ್ಮೀಕ ಅವಲೋಕನದ ನಂತರ ಅದಕ್ಕೆ ಸಂಬಂಧಿಸಿದ ಆತ್ಮೀಕ ಅನ್ವಯಿಸುವಿಕೆಯು ಬರುತ್ತದೆ, ಅದರ ನಂತರ ಆ ಅನ್ವಯಿಸುವಿಕೆಗೆ ನಡೆಸುವ ಪ್ರಶ್ನೆಯು ಬರುತ್ತದೆ.

ಕೇಳುಗರನ್ನು ಪ್ರಶ್ನೆಗಳು ಅವಲೋಕನಗಳಿಗೆ ನಡೆಸುವುದನ್ನು, ಅವಲೋಕನಗಳು ಅನ್ವಯಿಸುವಿಕೆಗಳಿಗೆ ನಡೆಸುವುದು, ಮತ್ತು ಪ್ರಶ್ನೆಗಳು ಕೇಳುಗರನ್ನು ಆ ಅನ್ವಯಿಸುವಿಕೆಗಳಿಗೆ ನಡೆಸುವ ವಿಧಾನವನ್ನು ಪುನರ್ ಪರಿಶೀಲನೆ ಮಾಡುವುದಕ್ಕಗುವಂತೆ ನಾವು ಈ ಎಲ್ಲಾ ಪುನರಾವರ್ತನೆಯನ್ನು ಸೇರಿಸಲಾಗಿದೆ. ಬೇರೆಯವರು ಕಂಡುಹಿಡಿಯುವುದಕ್ಕಾಗುವಂತೆ ಪ್ರಶ್ನೆಗಳನ್ನು ರೂಪಿಸುವುದು *ಕಥೆ* ಮಾತ್ರದಲ್ಲಿರುವ ಸವಾಲುಗಳಲ್ಲಿ ಒಂದು ಮುಖ್ಯವಾದ ಸವಾಲಾಗಿದೆ ಎಂದೂ ಸಹ ನಾವು ತಿಳಿದಿದ್ದೇವೆ.

ಕೆಳಗಿನವುಗಳು ಆತ್ಮೀಕ ಅನ್ವಯಿಸುವಿಕೆಗಳ ಪಟ್ಟಿಯಾಗಿವೆ. ಪ್ರತಿಯೊಂದೂ ಮೇಲಿನ ಆತ್ಮೀಕ ಅವಲೋಕನಗಳ ಮೇಲೆ ಆಧಾರಗೊಂಡಿವೆ. ಕಾರ್ಯಗತಿಯನ್ನು ಹಿಂಬಾಲಿಸುವುದರಲ್ಲಿ ಸರಾಗವಾಗುವದಕ್ಕಾಗಿ, ಆತ್ಮೀಕ ಅವಲೋಕನಗಳನ್ನು ಸೇರಿಸಲಾಗಿದೆ, ಇಲ್ಲಿ ಪುನಃ **"ಆಅ"** ಎಂದು ಹೇಳಲಾಗಿದೆ, ಮತ್ತು ಪ್ರತಿ **ಆಅ** ನಂತರ ಬರುವ ಆತ್ಮೀಕ ಅನ್ವಯಿಸುವಿಕೆಯನ್ನು **"ಆಅನ್ವ"** ಎಂದು ಪಟ್ಟಿಮಾಡಲಾಗಿದೆ.

1. **ಆಅ** – ಯೇಸುವಿನಲ್ಲಿ ಆಸಕ್ತಿ ಹೊಂದಿರುವಂತೆ ಕಾಣುವ ಜನರು ಜಕ್ಕಾಯನು ಯೇಸುವಿನ ಬಳಿಗೆ ಹೋಗುವುದನ್ನು ತಡೆಯುತ್ತಿದ್ದರು.

ಆಅನ್ವ – ಯೇಸುವನ್ನು ಹಿಂಬಾಲಿಸುತ್ತಿರುವೆವು ಎಂದು ಹೇಳಿಕೊಳ್ಳುವ ನಾವು ಆತನ ಬಳಿಗೆ ಹೋಗುವುದಕ್ಕೆ ಎಷ್ಟು ಮಗ್ನರಾಗಿರುತ್ತೇವೆಂದರೆ (ಅಥವಾ ಧಾರ್ಮಿಕವಾಗಿರುತ್ತೇವೆ) ನಮಗರಿವಿಲ್ಲದೆಯೇ ಅಥವಾ ಅಲಕ್ಷವಾಗಿದ್ದು, ಯೇಸುವನ್ನು ಹುಡುಕುತ್ತಿರುವವರನ್ನು ದೂರ ಇಡುತ್ತೇವೆ.

2. **ಆಅ** – ಗಿಡ್ಡನಾಗಿದ್ದ ಈ ಜಕ್ಕಾಯನು, ಸ್ಥಾನಮಾನದಲ್ಲಿ ಉನ್ನತ ಮಟ್ಟದಲ್ಲಿದ್ದನು. ಅವನು ಐಶ್ವರ್ಯವಂತನು ಮತ್ತು ಸುಂಕ ವಸೂಲಿಯ ಮುಖ್ಯಸ್ಥನಾಗಿದ್ದನು, ಆದರೆ ಅವನು ಯೇಸುವನ್ನು ನೋಡಬೇಕೆಂದು ಎಷ್ಟು ಅಭಿಲಾಷೆಯುಳ್ಳವನಾಗಿದ್ದನೆಂದರೆ, ಅದಕ್ಕೆ ಸುಲಭವಾದ ಮಾರ್ಗವು ಲಭಿಸದಿದ್ದಾಗ, ಆತನು ಬೇಕೆಂತಲೇ ತನ್ನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಕ್ಕೆ ಹೋಗುವುದನ್ನು ಆಯ್ಕೆ ಮಾಡಿಕೊಂಡನು.

ಆಅನ್ವ – ನಾವು ಯೇಸುವನ್ನು ಹುಡುಕುವುದಕ್ಕೆ ಬಯಸಿದಾಗ, ನಾವು ನಮ್ಮ ಗರ್ವವನ್ನು ಬದಿಗಿಡಲೇಬೇಕು ಹಾಗೂ ಆತನನ್ನು ಹುಡುಕುವುದಕ್ಕೆ ಮತ್ತು ಆತನನ್ನು ಹಿಂಬಾಲಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕು.

3. **ಆಅ** – ಈತನು ಬಹಿರಂಗವಾಗಿ ರಸ್ತೆಯಲ್ಲಿ ಓಡಿಬರುತ್ತಿರುವುದು ಮತ್ತು ಮರವನ್ನು ಹತ್ತುವಂತಹುದು ಈತನ ಗೌರವಕ್ಕೆ ಧಕ್ಕೆ ತರುವಂತಹ ಸಂಗತಿಯಾದ್ದರಿಂದ ಬಹುಶಃ ಜನರು ಈ ವ್ಯಕ್ತಿಯನ್ನು ಹಾಸ್ಯ ಮಾಡಿರಬಹುದಾದರೂ ಇದು ಜಕ್ಕಾಯನು ಆ ಸಂಗತಿಗಳನ್ನು ಮಾಡದಂತೆ ಅವನನ್ನು ತಡೆಯಲಾಗಲಿಲ್ಲ.

ಆಅನ್ವ – ಯೇಸುವನ್ನು ಅರಿತುಕೊಳ್ಳುವುದಕ್ಕೆ ತಡೆಯುವಂತಹ ನಮ್ಮ ಗರ್ವವನ್ನು ಎಂದಿಗೂ ತೋರಿಸಬಾರದು, ಅಥವಾ ನಮ್ಮ ಕುರಿತಾಗಿ ಜನರು ಏನಂದುಕೊಳ್ಳುವರೋ ಎಂದು ಭಾವಿಸಬಾರದು. ನಾವು ಮಾಡುವಂತಹುದನ್ನು ಬೇರೆಯವರು ನೋಡುವಾಗ, ಅದು ಅವರಿಗೆ ಮೂರ್ಖತನವಾಗಿ ಅಥವಾ ನಮ್ಮ ಘನತೆಗೆ ಕೆಳಮಟ್ಟದ್ದಾಗಿ ಕಂಡುಬಂದರೂ ಸಹ, ಅದನ್ನು ನಾವು ಮಾಡಲೇಬೇಕು.

4. **ಆಅ** – ಕಥೆಯಲ್ಲಿ ಮೊದಲು ಜಕ್ಕಾಯನು ಯೇಸುವನ್ನು ಹುಡುಕುತ್ತಿದ್ದನು ಎಂಬುದು ಸ್ಪಷ್ಟವಾಗಿದೆ. ಇದರ ಮುಂದಿನ ಭಾಗದಲ್ಲಿ ಜಕ್ಕಾಯನನ್ನು ಯೇಸು ಹುಡುಕುತ್ತಿರುವಂತಹ ಕಥೆಯಾಗುತ್ತದೆ!

ಆಅನ್ವ – ಜಕ್ಕಾಯನು ಯೇಸುವನ್ನು ಹುಡುಕಿದನು ಎಂಬುದನ್ನು ನಾವು ಕಥೆಯಲ್ಲಿ ನೋಡುತ್ತೇವೆ, ಆದರೆ ಯೇಸುವು ಸಹ ಜಕ್ಕಾಯನನ್ನು ಹುಡುಕಿದನು. ಎರಡೂ ನಿಜವಾಗಿದೆ. ನಮಗೆ, ನಾವು ದೇವರನ್ನು ಹುಡುಕಲೇಬೇಕು, ಆದರೆ ಅದೇ ಸಮಯದಲ್ಲಿ ಆತನು ನಮ್ಮನ್ನೂ ಹುಡುಕುತ್ತಾನೆ!

5. **ಆಅ** – ಯೇಸುವಿನ ಸುತ್ತಲೂ ಸುತ್ತುವರೆದಿರುವ ಜನರ ಸಮೂಹದ ನಡುವೆ ಯೇಸು ರಸ್ತೆಯಲ್ಲಿ ನಡೆದು ಬರುತ್ತಿದ್ದನು, ಆತನು ಅವರೆಲ್ಲರನ್ನೂ ದಾಟಿಕೊಂಡು, ಒಬ್ಬ ವ್ಯಕ್ತಿಯನ್ನು ಗುರುತಿಸುವುದಕ್ಕೆ ಆಯ್ಕೆ ಮಾಡಿದನು, ಈ ವ್ಯಕ್ತಿಯು ಆತನ ಹತ್ತಿರವೂ ಸಹ ಇರಲಿಲ್ಲ, ಈತನು ಮರದಲ್ಲಿದ್ದನು!

ಆಅನ್ವ – ಆ ದಿನ ಅನೇಕ ಜನರು ದೇವರ ಬಳಿ ದಯೆಯನ್ನು ಹುಡುಕಿದರು. ನೋಡುವುದಕ್ಕೆ ಅವರಿಗೆ ಯೇಸುವಿನಲ್ಲಿ ಆಸಕ್ತಿ ಇರುವಂತೆ ಕಾಣುತ್ತಿತ್ತು, ಆದರೆ ಯೇಸು ಅವರನ್ನು ತಿರಸ್ಕರಿಸಿ, ಒಬ್ಬ ವ್ಯಕ್ತಿಯನ್ನು ಮಾತ್ರ ಆರಿಸಿಕೊಂಡನು. ಲೋಕದಲ್ಲಿರುವ ಅನೇಕರು ತಮಗೆ ದೇವರಲ್ಲಿ ಆಸಕ್ತಿಯಿರುವಂತೆ ನಟಿಸುತ್ತಾರೆ, ಆದರೆ ಅವರಲ್ಲಿ ಅನೇಕರು ಪ್ರಾಮಾಣಿಕರಾಗಿಲ್ಲ. ಪ್ರಾಮಾಣಿಕನಾಗಿದ್ದ ಒಬ್ಬನನ್ನು ಯೇಸು ಕರೆದನು. ದೇವರು ನಮ್ಮ ಹೃದಯಗಳನ್ನು ತಿಳಿದಿರುವನು, ಮತ್ತು ನಾವು ನಿಜವಾಗಿಯೂ ಆತನನ್ನು ಹುಡುಕುತ್ತಿರುವೆವೋ ಎಂಬುದೂ ಆತನಿಗೆ ತಿಳಿದಿದೆ.

6. **ಆಅ** – ಯೇಸು ಜಕ್ಕಾಯನನ್ನು ಹೆಸರಿಡಿದು ಕರೆಯುತ್ತಾನೆ, ಇದು ಮನುಷ್ಯನ ಕುರಿತಾಗಿ ಆತನಿಗಿದ್ದ ವೈಯಕ್ತಿಕ ಆಸಕ್ತಿಯನ್ನು ತೋರ್ಪಡಿಸುತ್ತದೆ.

ಆಅನ್ವ – ಇಲ್ಲಿ ನಾವು ಒಬ್ಬ ವೈಯಕ್ತಿಕ ದೇವರನ್ನು ನೋಡುವೆವು, ಈತನಿಗೆ ನಾವು ಎಲ್ಲಿರುವೆವು ಎಂದು ತಿಳಿದಿದೆ ಮತ್ತು ನಮ್ಮ ಹೆಸರನ್ನು ಅರಿತವನಾಗಿರುವನು. ದೇವರನ್ನು ಹುಡುಕುವವರಿಗೆ ಆತನು ಕರುಣಾಪೂರ್ಣನು ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದರೆ, ಆತನು ನಮ್ಮ ಹೆಸರಿನೊಂದಿಗೆ ನಮ್ಮನ್ನು ತಿಳಿಯಲಿ ಎಂದು ಬಯಸುತ್ತೇವೆ... ಇದು ಸಂತೈಸುವಿಕೆಯನ್ನು ಕೊಡುತ್ತದೆ. ಜಕ್ಕಾಯನು ಯೇಸುವನ್ನು

ನೋಡಬೇಕೆಂದು ಹುಡುಕುತ್ತಿದ್ದನು, ಹಾಗಾಗಿ ಯೇಸು ಅವನನ್ನು ಹೆಸರಿಡಿದು ಕರೆದಾಗ, ಜಕ್ಕಾಯನಿಗೆ ತನ್ನನ್ನು ಕರೆಯುತ್ತಿರುವವರು ಯಾರಾಗಿದ್ದರೆಂಬುದನ್ನು ಗುರುತಿಸಿದನು.

7. **ಆಅ** – ಯೇಸು ತಾನೇ ಜಕ್ಕಾಯನ ಮನೆಗೆ ಹೋಗಲು ಬಯಸುತ್ತಾನೆ, ಇದು ಅನೇಕ ಸಂಸ್ಕೃತಿಗಳಲ್ಲಿ ಮಿತಿಮೀರಿದ ಭರವಸೆಯ ರೀತಿಯದ್ದಾಗಿದೆ. ಇದು ಏನು "ಸಂಭವಿಸಲೇಬೇಕು" ಎಂಬುದಾಗಿ ಯೇಸುವಿಗಿದ್ದ ಜ್ಞಾನವನ್ನು ಮತ್ತು ಭರವಸೆಯನ್ನು ತೋರಿಸುತ್ತದೆ.

ಆಅನ್ವ – ತನ್ನನ್ನು ಯಾರು ಹುಡುಕುತ್ತಾರೋ ಅವರೊಂದಿಗೆ ಯೇಸು ತಾನಿರಲು ಬಯಸುತ್ತಾನೆ ಎಂಬುದು ಆಶ್ಚರ್ಯಪಡುವಂತಹುದು ಮತ್ತು ಪ್ರೋತ್ಸಾಹಿಸುವಂತಹುದು ಆಗಿದೆ.

8. **ಆಅ** – ಒಬ್ಬ ವ್ಯಕ್ತಿಯು ಮೇಲಕ್ಕೆ ನೋಡಿದಾಗ, ಅದರಲ್ಲೂ ವಿಶೇಷವಾಗಿ ತನ್ನನ್ನು ಹಿಂಬಾಲಿಸುತ್ತಿರುವಂತಹ ಒಬ್ಬ ನಾಯಕನು ಹೀಗೆ ನೋಡಿದಾಗ, ಅಲ್ಲಿರುವ ಜನರು ಆತನು ಏನನ್ನು ನೋಡುತ್ತಿರುವನು ಎಂಬುದನ್ನು ನೋಡಲು ತಾವೂ ಸಹ ಮೇಲಕ್ಕೆ ನೋಡುತ್ತಾರೆ. ಹಾಗಾಗಿ ಇಲ್ಲಿ ಕೇವಲ ಯೇಸು ಮಾತ್ರ ಜಕ್ಕಾಯನನ್ನು ನೋಡಲಿಲ್ಲ, ಅಲ್ಲಿರುವ ಎಲ್ಲಾ ಜನರು ನೋಡಿದರು! ತನ್ನನ್ನು "ಕಂಡುಹಿಡಿದಿರುವ" ಬಗ್ಗೆ ಜಕ್ಕಾಯನಿಗೆ ಭಯವಾಗಲಿ ಅಥವಾ ಮುಜುಗರವಾಗಲಿ ಆಗಲಿಲ್ಲ. ಸತ್ಯಾಂಶವೆಂದರೆ, ಆತನು ಸಂತೋಷವನ್ನು ತೋರ್ಪಡಿಸಿದನು.

ಆಅನ್ವ – ಅವಿಶ್ವಾಸಿಗಳು ಮತ್ತು ಅಪನಂಬಿಗಸ್ತರಾದ ದೇವರ ಹಿಂಬಾಲಕರು ನಮ್ಮನ್ನು ಮೇಲೆ ನೋಡಿ, ದೇವರನ್ನು ಅರಿತುಕೊಳ್ಳಲು ನಾವು ಮೂರ್ಖರು ಅಥವಾ ಬುದ್ಧಿವಂತರಲ್ಲವೆಂದು ಭಾವಿಸಿದರೂ ಸಹ, ಅವರ ಟೀಕೆಗಳು ನಮ್ಮ ಮೇಲೆ ಪರಿಣಾಮ ಬೀರದಂತೆ ಇರಬೇಕು. ದೇವರು ವೈಯಕ್ತಿಕವಾಗಿ ನಮ್ಮ ಬಗ್ಗೆ ಆಸಕ್ತಿಯಿಂದಿರುವನು ಎಂಬುದನ್ನು ನಾವು ತಿಳಿದುಕೊಂಡಾಗ, ನಾವು ಸಂತೋಷದಿಂದ ಪ್ರತಿಕ್ರಿಯಿಸಬೇಕು.

9. **ಆಅ** – ಯೇಸುವಿನ ಕರೆಯುವಿಕೆಗೆ ಕರಾರುವಕ್ಕಾಗಿ ಮಾಡುವುದರಲ್ಲಿ ಜಕ್ಕಾಯನು ಹಿಂಜರಿಯಲಿಲ್ಲ. ಆತನು ಆತುರವಾಗಿ ಬಂದನು.

ಆಅನ್ವ – ದೇವರು ಯಾವ ಸಮಯದಲ್ಲಿಯೇ ಆಗಲಿ ನಾವು ಕ್ರಿಯೆ ಮಾಡುವಂತೆ ನಮ್ಮನ್ನು ಕರೆಯುತ್ತಿದ್ದನೆಂದು ನಮಗೆ ತಿಳಿದರೆ, ನಾವು ಪ್ರತಿಕ್ರಿಯಿಸಲೇಬೇಕು ಮತ್ತು ಆತನ ಸೂಚನೆಗಳಿಗನುಸಾರವಾಗಿ ಪ್ರತಿಕ್ರಿಯಿಸಬೇಕು. ನಿಧಾನವಾಗಿ ತೋರುವ ವಿಧೇಯತೆಯು ಅವಿಧೇಯತೆಗೆ ಸಮಾನವಾಗಿರಬಲ್ಲದು.

10. **ಆಅ** – ಯೇಸು ಹೇಗೆ ತಾನೇ "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂದು ಜನರು ತಮ್ಮತಮ್ಮಲ್ಲಿಯೇ ಆತನ ಕುರಿತಾಗಿ ಗುಣಗುಟ್ಟುವುದರಿಂದ ಅವರು ಜಕ್ಕಾಯನ ವಿರುದ್ಧವಾಗಿ ಮಾತನಾಡಿದರು. "ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಇದು ಯೇಸು ಅಲ್ಲಿಗೆ ಹೋಗುತ್ತಿದ್ದಾನೆ ಅಥವಾ ಆತನು ಆಗಲೇ ಅಲ್ಲಿಗೆ ಹೋಗಿದ್ದಾನೆ ಎಂಬುದನ್ನು ಸೂಚಿಸುತ್ತದೆ.

ಜಕ್ಕಾಯನಿಗೆ ಮತ್ತು ಯೇಸುವಿಗೆ ಜಕ್ಕಾಯನ ಮನೆಗೆ ಯೇಸು ಹೋಗುವುದರಿಂದ ಜನರಿಗೆ ಇರಿಸುಮುರಿಸು ಎಂಬುದು ತಿಳಿದಾಗ, ಜಕ್ಕಾಯನ ಮನೆಗೆ ಹೋಗುವುದು ಅಷ್ಟು ಸ್ಪಷ್ಟವಾಗಿರಲಿಲ್ಲ. ಆದರೆ ಕಥೆಯಲ್ಲಿ ನಂತರ, ಜಕ್ಕಾಯನ ಮುಂದೆಯೇ ಯೇಸು ಗುಂಪಿಗೆ ಹೇಳುವುದರ ನಿಮಿತ್ತ, ಜಕ್ಕಾಯ ಮತ್ತು ಯೇಸು

ಇವರಿಬ್ಬರಿಗೂ ಜನರ ಟೀಕೆ ತಿಳಿದಿತ್ತು ಎಂಬುದನ್ನು ನೋಡುತ್ತೇವೆ. ಆದರೆ ಜನರ ಟೀಕೆಯಿಂದ ತಾನು ಮುಜುಗರಪಡುವಂತೆ ಜಕ್ಕಾಯನು ಬಿಟ್ಟುಕೊಡಲಿಲ್ಲ ಮತ್ತು ಆದರೂ ಸಹ ಆತನ ಮನೆಯಲ್ಲಿ ಯೇಸು ಇದ್ದನು.

ಆಅನ್ವ – ನಾವು ಚೆನ್ನಾಗಿಯೇ ಪ್ರಾರಂಭಿಸಬಹುದು. ಆದರೆ ಸ್ವಲ್ಪ ಸಮಯದಲ್ಲಿ, ನಮ್ಮ ಸುತ್ತಮುತ್ತಲಿರುವವರಿಂದ ಟೀಕೆಗೊಳಗಾದಾಗ, ಒಂದು ಧಾರ್ಮಿಕ ಗುಂಪಿನಿಂದಾದರೂ ಸಹ ನಾವು ತೆಗೆದುಕೊಂಡ ನಿರ್ಧಾರದಲ್ಲಿಯೇ ಇರಬೇಕು.

11. **ಆಅ** – ಯೇಸು "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂಬ ಜನರ ಟೀಕೆಯಿಂದ ಆ ಜನರು ತಾವು ಪಾಪಿಗಳು "ಅಲ್ಲ" ಎಂದು ಅವರು ಆಲೋಚಿಸುತ್ತಿದ್ದರು ಎಂದು ಅನ್ನಿಸುತ್ತದೆ.

ಆಅನ್ವ – ತಮ್ಮ ಬಾಯಿಂದಲೇ, ಗರ್ವಿಷ್ಠರು ತಮ್ಮನ್ನೇ ತಾವು ಖಂಡಿಸಿಕೊಳ್ಳುತ್ತಾರೆ. ತಮ್ಮಲ್ಲಿ ಪಾಪವಿದೆ ಎಂದು ಒಪ್ಪಿಕೊಳ್ಳದಂತಹ ಆ ಗರ್ವಿಷ್ಠರಂತೆ ನಾವಿರುವುದು ಬೇಡ.

12. **ಆಅ** – ಆ ಗುಂಪು ಯೇಸುವಿನ "ಹಿಂಬಾಲಕರು" ಎಂಬಂತೆ ವರ್ತಿಸಿದರು. ಅವರು ಯೇಸುವನ್ನು ತಳ್ಳಿಕೊಂಡು ಆತನ ಜೊತೆಗೆ ಬರುತ್ತಿದ್ದರು. ಯೇಸು ಯಾರೊಂದಿಗೆ ಊಟಕ್ಕೆ ಹೋಗುತ್ತಾನೆ ಎಂಬುದರ ಕಾಳಜಿ ಅವರಿಗಿತ್ತೆಂಬುದು ಅವರ ಟೀಕೆಯಿಂದ ವ್ಯಕ್ತವಾಗುತ್ತಿದ್ದರೂ ಸಹ, ಅವರಲ್ಲಿ ಯಾರಾದರೊಬ್ಬರ ಮನೆಯು ಇದಕ್ಕೆ ಉತ್ತಮವಾದ ಆಯ್ಕೆಯಾಗಿತ್ತು ಎಂಬಂತೆ ಪರೋಕ್ಷವಾಗಿ ತೋರುತ್ತಿತ್ತು. ವಾಸ್ತವವಾಗಿ, ಯೇಸು ತಾನು ಭೇಟಿ ಮಾಡಲು ಹೋಗುವ ಮನೆಗಳ ಆಯ್ಕೆಯನ್ನು ಅವರು ಒಪ್ಪಿಕೊಳ್ಳದೆ ಇದ್ದುದರಿಂದ ಆ ಗುಂಪಿನವರು ಯೇಸುವಿಗೆ ಬಹಳ ಅಗೌರವವನ್ನು ತೋರಿಸುತ್ತಿದ್ದರು.

ಆಅನ್ವ – ತಾವು ಯೇಸುವಿನ ಹಿಂಬಾಲಕರೆಂದು ಹೇಳಿಕೊಳ್ಳುವವರೆಲ್ಲರೂ ನಿಜವಾಗಿಯೂ ಆತನನ್ನು ತಿಳಿದಿರುವುದಿಲ್ಲ ಹಾಗೂ ಆತನನ್ನು ಅಥವಾ ಆತನ ನಿರ್ಧಾರಗಳನ್ನು ನಿಜವಾಗಿಯೂ ಗೌರವಿಸುವವರಾಗಿರುವುದಿಲ್ಲ. ಎಲ್ಲಾ ಧಾರ್ಮಿಕ ಜನರೂ ದೇವರ ವಾಕ್ಯಕ್ಕೆ ಗೌರವವನ್ನು ತೋರಿಸುವುದಿಲ್ಲ.

13. **ಆಅ** – ವಿಮರ್ಶಾತ್ಮಕವಾದ ಆ ಗುಂಪಿಗೆ ತಮ್ಮದೇ ನಂಬಿಕೆಗಳಿದ್ದವು, ಆದರೆ ಯೇಸುವನ್ನು ಮುಖಾಮುಖಿಯಾಗಿ ಕೇಳುವಂತಹ ಧೈರ್ಯ ಅವರಿಗಿಲ್ಲದಂತೆ ಕಾಣುತ್ತದೆ. ಯೇಸುವಿಗಿದ್ದ ಬಲದ ಕುರಿತಾಗಿ ಗುಂಪಿನ ಜನರಿಗೆ ತಿಳಿದಿರಲಿಲ್ಲ, ಹಾಗಾಗಿ ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡರೆ ಅವರ ದೂರುಗಳನ್ನು ಆತನು ಕೇಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬಂತೆ ವರ್ತಿಸಿದರು.

ಆಅನ್ವ – ಜನರು ತಾವು ಒಬ್ಬರಿಗೊಬ್ಬರು ಪಿಸುಗುಟ್ಟುವುದನ್ನು ದೇವರು ಕೇಳಿಸಿಕೊಳ್ಳಲಾಗುವುದಿಲ್ಲ ಮತ್ತು ಅವರು ಕತ್ತಲೆಯಲ್ಲಿ ಮತ್ತು ರಹಸ್ಯ ಸ್ಥಳಗಳಲ್ಲಿ ಮಾಡುವಂತಹುದನ್ನು ದೇವರು ನೋಡಲಾಗುವುದಿಲ್ಲ ಎಂದು ಜನರು ಇಂದು ಅಂದುಕೊಳ್ಳುವ ಹಾಗೆಯೇ ಆ ಗುಂಪಿನವರು ಕ್ರಿಯೆಗಳು ಇದ್ದವು.

14. **ಆಅ** – ಐಶ್ವರ್ಯವಂತನಾದ ಜಕ್ಕಾಯನು, ತನ್ನ ಹಣದಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ ಎಂದು ಹೇಳಿದ್ದು ಆತನ ಹೃದಯವನ್ನು ತೋರ್ಪಡಿಸುತ್ತದೆ.

ಆಅನ್ವ – ದೇವರೊಂದಿಗಿನ ನಿಜವಾದ ಭೇಟಿ (ಸಂದರ್ಶನ), ಆ ವ್ಯಕ್ತಿಯ ಲೋಕದ ದೃಷ್ಟಿಯಲ್ಲಿ ಮತ್ತು ಮೌಲ್ಯಗಳಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡುತ್ತದೆ.

15. **ಆಅ** – ಹಾಗೂ, ಜಕ್ಕಾಯನು ತಾನು ಅನ್ಯಾಯವಾಗಿ ಯಾರಿಂದಾದರೂ ಏನಾದರೂ ತಕ್ಕೊಂಡಿದ್ದರೆ, ಅಂತಹ ವ್ಯಕ್ತಿಗೆ ನಾಲ್ಕರಷ್ಟು ಹಿಂತಿರುಗಿಸಿ ಕೊಡುತ್ತೇನೆ ಎಂದು ಘೋಷಿಸಿದನು. ಇಲ್ಲಿ ಜಕ್ಕಾಯನು ತಾನು ಧರ್ಮಶಾಸ್ತ್ರದ ನಿಯಮದ ಪ್ರಕಾರ ತನ್ನ ಮೇಲೆ ದೋಷರೋಪಣೆ'ಯಾದರೆ' ಅಥವಾ ಅಪರಾಧಿಯೆಂದು ಕಂಡುಬಂದರೆ ಕದ್ದ ಹಣವನ್ನು ನಾಲ್ಕರಷ್ಟು ಹಿಂತಿರುಗಿರಿಸುತ್ತೇನೆ ಎಂದು ಹೇಳಲಿಲ್ಲ. ಆದರೆ ಜಕ್ಕಾಯನು ಇದನ್ನು ತನ್ನ ಸ್ವಂತ ಚಿತ್ತದಿಂದ ಮಾಡುವುದಕ್ಕೆ ಒಪ್ಪಿಸಿಕೊಂಡನು. ಜಕ್ಕಾಯನು ಈಗಾಗಲೇ ಹಣವನ್ನು ಹಿಂತಿರುಗಿಸುತ್ತಿರುವನು ಎಂದು ಕೆಲವರು ಹೇಳಲೂಬಹುದು, ಆದರೆ ಗುಂಪಿನ ಜನರ ಅಭಿಪ್ರಾಯವು ವ್ಯತ್ಯಾಸವಾಗಿರುವುದು ನಮಗೆ ಕಂಡುಬರುತ್ತದೆ.

ಆತನು ಸುಂಕದ ವಸೂಲಿಗಾರನಾಗಿದ್ದು ತನ್ನ ಅರ್ಧ ಹಣವನ್ನು ಬಡವರಿಗೆ ಕೊಟ್ಟಿದ್ದರೆ, ಆತನು ಇದನ್ನು ಈಗಾಗಲೇ ರಹಸ್ಯವಾಗಿ ಮಾಡುತ್ತಿರುವಂತ ಸಾಧ್ಯತೆಗಳಿವೆ. ಆದರೆ ಅನ್ಯಾಯವಾಗಿ ಹಣವನ್ನು ತೆಗೆದುಕೊಂಡಿದುದರಿಂದ ಅವರಿಗೆ ನಾಲ್ಕರಷ್ಟು ಹಣವನ್ನು ಈಗಾಗಲೇ ಹಿಂತಿರುಗಿಸುವ ಸಂಗತಿಯು ಗುಂಪಿನ ದೃಷ್ಟಿಯಲ್ಲಿ ಆತನನ್ನು ನೀತಿವಂತನ ಮಟ್ಟಕ್ಕೆ ಇಡುವಂತೆ ಮಾಡಿತು.

ನಾವು ಕಥೆಯಿಂದ ತಿಳಿದುಕೊಳ್ಳುವ ಸಂಗತಿ ಎಂದರೆ, ಈ ಕಥೆಯ ಕೆಲವು ಅಂಶದಲ್ಲಿ, ಜಕ್ಕಾಯನು ತಾನು ಪಾಪಿಯೆಂದು ಒಪ್ಪಿಕೊಳ್ಳುವನು ಮತ್ತು ಸಂಗತಿಗಳನ್ನು ಸರಿಪಡಿಸಿಕೊಳ್ಳಲು ಬಯಸುತ್ತಾನೆ. ಆ ದಿನವೇ ರಕ್ಷಣೆಯಾಯಿತು ಎಂದು ಯೇಸು ಹೇಳಿದನು. ಜಕ್ಕಾಯನು ಅಚ್ಚರಿಗೊಳಿಸುವಂತಹ ಉದಾರತೆಯನ್ನು ಮೆರೆದುದನ್ನು ನಾವು ನೋಡಬಹುದು.

ಆಅನ್ವ – ಐಶ್ವರ್ಯವಂತನೂ, ಒಬ್ಬ ಮುಖ್ಯ ಸುಂಕ ವಸೂಲಿಗಾರನೂ ಆಗಿದ್ದ ಜಕ್ಕಾಯನ ದುರಾಸೆಯ ಮಾರ್ಗಗಳು ಬದಲಾದವು ಮತ್ತು ಆತನು ಪ್ರಾಮಾಣಿಕನು ಹಾಗೂ ಉದಾರಿಯು ಆದನು. ಈ ಮುಖ್ಯ ಸುಂಕ ವಸೂಲಿಗಾರನು ತಾನು ಯಾರಿಗೆ ಅನ್ಯಾಯ ಮಾಡಿದ್ದನೋ ಅಂದರೆ ಯಾರೊಂದಿಗೆ ಸುಳ್ಳು ಹೇಳಿದ್ದನೋ ಅದನ್ನು ಒಪ್ಪಿಕೊಂಡು, ಅವರಿಂದ ಕದ್ದುಕೊಂಡ ಹಣವನ್ನು ನಾಲ್ಕರಷ್ಟು ಹಿಂತಿರುಗಿಸಿ ಕೊಡುವೆನು ಎನ್ನುವಷ್ಟರ ಮಟ್ಟಿಗೂ ಸಹ ತನ್ನನ್ನು ತಗ್ಗಿಸಿಕೊಂಡನು. ನಾವು ಯೇಸುವಿನ ಬಳಿಗೆ ಬಂದು, ನಮ್ಮ ಪಾಪಗಳನ್ನು ಒಪ್ಪಿಕೊಂಡಾಗ, ನಾವು ತಗ್ಗಿಸುವಿಕೆಯನ್ನು ತೋರಿಸಬೇಕು ಮತ್ತು ಹಿಂತಿರುಗಿಹೋಗಿ ತಪ್ಪಾದ ಕಾರ್ಯಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಇಚ್ಛೆಯನ್ನು ಹೊಂದಿರಬೇಕು.

16. **ಆಅ** – ಮೊದಮೊದಲು, ಜಕ್ಕಾಯನು ಯೇಸುವಿನಿಂದ ಮೆಚ್ಚುಗೆಯನ್ನು ಪಡೆಯುವ ಸಲುವಾಗಿ ತನ್ನ ಮಾರ್ಗವನ್ನು ಉಪಯೋಗಿಸಲು ಪ್ರಯತ್ನಿಸುತ್ತಿದ್ದನು, ಅಂದರೆ ದೇವರ ಬಳಿಯಲ್ಲೂ ತನ್ನ ಮಾರ್ಗವನ್ನೇ ನಡೆಸುವ ರೀತಿಯಲ್ಲಿರುವಂತೆ ಆಲೋಚಿಸುವಂತಿತ್ತು. ಆದರೆ ಆ ದಿನವೇ ಜಕ್ಕಾಯನು ಯೇಸುವಿನಲ್ಲಿ ನಂಬಿಕೆಯನ್ನು ಇಟ್ಟನು ಏಕೆಂದರೆ ಯೇಸು ಅವನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ಹೇಳಿದನು. ಈ ಕಥೆಯಲ್ಲಿ ತಾನು ಪಾಪಿಯೆಂದು ಒಪ್ಪಿಕೊಂಡವನು ಮತ್ತು ರಕ್ಷಣೆಯನ್ನು ಪಡೆದುಕೊಂಡ ಒಬ್ಬನೇ ವ್ಯಕ್ತಿ, ಜಕ್ಕಾಯ.

ಆಅನ್ವ – ತಾವು ಮೊದಲು ಪಾಪಿಗಳೆಂದು ಒಪ್ಪಿಕೊಳ್ಳದವರಿಗೆ ರಕ್ಷಣೆಯು ಬರಲು ಸಾಧ್ಯವಿಲ್ಲ.

17. **ಆಅ** – ಕಥೆಯಲ್ಲಿ, ಯೇಸು ಜಕ್ಕಾಯನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ನೇರವಾಗಿ ಹೇಳಿದನು. ನಂತರ ಯೇಸು ಮುಂದುವರೆಸುತ್ತಾ, "ಇವನು ಸಹ ಅಬ್ರಹಾಮನ ವಂಶಿಕನಲ್ಲವೇ" ಎಂದು ಹೇಳುತ್ತಾನೆ. ಇದರಿಂದ ಜಕ್ಕಾಯನು ಅಕ್ಕಪಕ್ಕದಲ್ಲಿ ಜನರಿದ್ದರು ಎಂಬುದನ್ನು ತೋರ್ಪಡಿಸುತ್ತದೆ. ಹಾಗೂ, ಯೇಸು ಹೇಳಿದ್ದರಿಂದ, ತಾನು ಯಾರೊಂದಿಗೆ ಮಾತನಾಡುತ್ತಿದ್ದನೋ ಅವನನ್ನು ಬದಲಾವಣೆ ಮಾಡುತ್ತಿದ್ದನು ಮತ್ತು ಯೇಸು ಈ ಜನರೊಂದಿಗೆ ಜಕ್ಕಾಯನ ಪರವಾಗಿ ಮಾತನಾಡುತ್ತಿದ್ದನು!

ಆಅನ್ವ – ಯೇಸು ಜಕ್ಕಾಯನೊಂದಿಗೆ ಕಾರ್ಯ ಮಾಡುತ್ತಿರುವುದನ್ನು ಮತ್ತು ಜಕ್ಕಾಯನು ಯೇಸುವಿನಲ್ಲಿ ನಂಬಿಕೆ ಇಡುವುದಕ್ಕೆ ಬದಲಾಗುತ್ತಿರುವುದನ್ನು ನಾವು ನೋಡುತ್ತೇವೆ. ಆದರೆ ಈ ಎಲ್ಲಾ ಸಮಯವು ವಿಮರ್ಶಿಸುವಂತಹ ಆ ಗುಂಪಿನ ಜನರು ಇದನ್ನು ನೋಡುತ್ತಲೇ ಇದ್ದರು. ಸ್ವ–ನೀತಿವಂತರೆಂದು ಭಾವಿಸಿದ್ದ ಈ ಗುಂಪಿನ ಜನರ ಬಳಿಗೆ ಯೇಸು ಬರುತ್ತಿದ್ದನು, ಹಾಗೂ ಅವರೂ ಸಹ ಹೊಂದಿಕೊಳ್ಳಬೇಕಾಗಿರುವವರು ಎಂಬುದನ್ನು ತಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿದ್ದನು ಮತ್ತು ಜಕ್ಕಾಯನು ದೇವರ ಗಮನಕ್ಕೆ ಬರುವುದರಲ್ಲಿ ಯೋಗ್ಯನು ಎಂಬುದನ್ನು ಕಾಣಲು ಅವರ ಮನಸ್ಸಿನ ಕಣ್ಣುಗಳನ್ನು ತೆರೆಯಲು ಪ್ರಯತ್ನಿಸುತ್ತಿದ್ದನು.

18. **ಆಅ** – ಯೇಸು ತಾನು ಬಂದಿರುವುದರ ಉದ್ದೇಶ "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಎಂಬ ಹೇಳಿಕೆಯು, ಒಂದು ಸಾರಾಂಶದ ಹೇಳಿಕೆಯಾಗಿದ್ದು, ಇದು ಜಕ್ಕಾಯನಿಗೆ ಗೌರವವನ್ನು ತಂದದ್ದು ಮಾತ್ರವಲ್ಲದೆ ಗುಂಪಿನವರಿಗೆ ಒಂದು ಟೀಕೆಯಂತೆಯೂ ಸಹ ತೋರುತ್ತಿತ್ತು.

ಆಅನ್ವ – ನಮಗೆ ದೇವರಿಂದ ಮೆಚ್ಚುಗೆ ಗಳಿಸಬೇಕಿದ್ದರೆ, ನಾವು ಕಳೆದುಹೋಗಿರುವುದರ ಮತ್ತು ಪಾಪಗಳ ಕುರಿತಾಗಿ ಒಪ್ಪಿಕೊಳ್ಳುವ ಅಗತ್ಯವಿದೆ ಮತ್ತು ದೇವರು ನಮ್ಮನ್ನು ರಕ್ಷಿಸುವುದಕ್ಕೆ ಅನುಮತಿಸಬೇಕು.

19. ಈಗ ಕೊನೆಯದಾಗಿ, ಆತ್ಮೀಕ ಅನ್ವಯಿಸುವಿಕೆಗಳಿಗೆ ನಡೆಸುವಂತೆ ನಾವು ರೂಪಿಸಿರುವ ಪ್ರಶ್ನೆಗಳ ಕಡೆಗೆ ನೋಡೋಣ.

ಆತ್ಮೀಕ ಅವಲೋಕನಗಳನ್ನು ಮತ್ತು ಆತ್ಮೀಕ ಅನ್ವಯಿಸುವಿಕೆಗಳ ಸಂಪೂರ್ಣ ಅನುಕ್ರಮವನ್ನು ನೀವು ನೋಡುವಂತೆ ಅವುಗಳನ್ನು ಪಟ್ಟಿ ಮಾಡಲಾಗಿದೆ. ಆತ್ಮೀಕ ಅವಲೋಕನಗಳ ಮೇಲೆ ಪ್ರಶ್ನೆಗಳು ಆಧಾರಗೊಂಡಿವೆ ಎಂಬುದನ್ನು ಗಮನಿಸಿ. ಆ ಆತ್ಮೀಕ ಅನ್ವಯಿಸುವಿಕೆಗಳ ಪ್ರಶ್ನೆಗಳನ್ನು ಕೆಳಗೆ "ಆಅನ್ವಪ್ರ" ಎಂದು ಬರೆಯಲಾಗಿದೆ.

1. **ಆಅ –** ಯೇಸುವಿನಲ್ಲಿ ಆಸಕ್ತಿ ಹೊಂದಿರುವಂತೆ ಕಾಣುವ ಜನರು ಜಕ್ಕಾಯನು ಯೇಸುವಿನ ಬಳಿಗೆ ಹೋಗುವುದನ್ನು ತಡೆಯುತ್ತಿದ್ದರು.

ಆಅನ್ವ – ಯೇಸುವನ್ನು ಹಿಂಬಾಲಿಸುತ್ತಿರುವೆವು ಎಂದು ಹೇಳಿಕೊಳ್ಳುವ ನಾವು ಆತನ ಬಳಿಗೆ ಹೋಗುವುದಕ್ಕೆ ಎಷ್ಟು ಮಗ್ನರಾಗಿರುತ್ತೇವೆಂದರೆ (ಅಥವಾ ಧಾರ್ಮಿಕವಾಗಿರುತ್ತೇವೆ) ನಮಗರಿವಿಲ್ಲದೆಯೇ ಅಥವಾ ಅಲಕ್ಷವಾಗಿದ್ದು, ಯೇಸುವನ್ನು ಹುಡುಕುತ್ತಿರುವವರನ್ನು ದೂರ ಇಡುತ್ತೇವೆ.

ಆಅನ್ವಪ್ರ–

- ಈ ದಿನ ಧಾರ್ಮಿಕವಾಗಿರುವಂತೆ ನಟಿಸುವ ಜನರು, ದೇವರನ್ನು ಪ್ರಾಮಾಣಿಕವಾಗಿ ಹುಡುಕುವವರ ಮಾರ್ಗಕ್ಕೆ ಅಡ್ಡವಾಗಿ ನಿಲ್ಲಲು ಸಾಧ್ಯವಿದೆಯೇ?
- ಇದು ಯಾವ ರೀತಿಯಲ್ಲಿ ಆಗುವ ಸಂಭವವಿದೆ?

2. **ಆಅ** – ಗಿಡ್ಡನಾಗಿದ್ದ ಈ ಜಕ್ಕಾಯನು, ಸ್ಥಾನಮಾನದಲ್ಲಿ ಉನ್ನತ ಮಟ್ಟದಲ್ಲಿದ್ದನು. ಅವನು ಐಶ್ವರ್ಯವಂತನು ಮತ್ತು ಸುಂಕ ವಸೂಲಿಯ ಮುಖ್ಯಸ್ಥನಾಗಿದ್ದನು, ಆದರೆ ಅವನು ಯೇಸುವನ್ನು ನೋಡಬೇಕೆಂದು ಎಷ್ಟು ಅಭಿಲಾಷೆಯುಳ್ಳವನಾಗಿದ್ದನೆಂದರೆ, ಅದಕ್ಕೆ ಸುಲಭವಾದ ಮಾರ್ಗವು ಲಭಿಸದಿದ್ದಾಗ, ಆತನು ಬೇಕೆಂತಲೇ ತನ್ನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಕ್ಕೆ ಹೋಗುವುದನ್ನು ಆಯ್ಕೆ ಮಾಡಿಕೊಂಡನು.

ಆಅನ್ವ – ನಾವು ಯೇಸುವನ್ನು ಹುಡುಕುವುದಕ್ಕೆ ಬಯಸಿದಾಗ, ನಾವು ನಮ್ಮ ಗರ್ವವನ್ನು ಬದಿಗಿಡಲೇಬೇಕು ಹಾಗೂ ಆತನನ್ನು ಹುಡುಕುವುದಕ್ಕೆ ಮತ್ತು ಆತನನ್ನು ಹಿಂಬಾಲಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕು.

ಆಅನ್ವಪ್ರ–

- ಜಕ್ಕಾಯನಂತೆ, ಯೇಸುವಿಗೆ ನಿಕಟವಾಗಿ ಬರುವುದಕ್ಕೆ ಈ ದಿನ ಜನರು ಗರ್ವವನ್ನು ಬದಿಗೊತ್ತಿ ಬರುವ ಅಗತ್ಯವಿದೆಯೇ?
- ಆ ಸಮಯವು ಎಂದಾಗಬಹುದು?
- ಈ ರೀತಿ ಅನುಭವವನ್ನು ಹೊಂದಿದ ನೀವು ಅಥವಾ ಬೇರೆಯವರ ಅನುಭವವನ್ನು ಹಂಚಿಕೊಳ್ಳಬಲ್ಲಿರೇ?

3. **ಆಅ** – ಈತನು ಬಹಿರಂಗವಾಗಿ ರಸ್ತೆಯಲ್ಲಿ ಓಡಿಬರುತ್ತಿರುವುದು ಮತ್ತು ಮರವನ್ನು ಹತ್ತುವಂತಹುದು ಈತನ ಗೌರವಕ್ಕೆ ಧಕ್ಕೆ ತರುವಂತಹ ಸಂಗತಿಯಾದ್ದರಿಂದ ಬಹುಶಃ ಜನರು ಈ ವ್ಯಕ್ತಿಯನ್ನು ಹಾಸ್ಯ ಮಾಡಿರಬಹುದಾದರೂ ಇದು ಜಕ್ಕಾಯನು ಆ ಸಂಗತಿಗಳನ್ನು ಮಾಡದಂತೆ ಅವನನ್ನು ತಡೆಯಲಾಗಲಿಲ್ಲ.

ಆಅನ್ವ – ಯೇಸುವನ್ನು ಅರಿತುಕೊಳ್ಳುವುದಕ್ಕೆ ತಡೆಯುವಂತಹ ನಮ್ಮ ಗರ್ವವನ್ನು ಎಂದಿಗೂ ತೋರಿಸಬಾರದು, ಅಥವಾ ನಮ್ಮ ಕುರಿತಾಗಿ ಜನರು ಏನಂದುಕೊಳ್ಳುವರೋ ಎಂದು ಭಾವಿಸಬಾರದು. ನಾವು ಮಾಡುವಂತಹುದನ್ನು ಬೇರೆಯವರು ನೋಡುವಾಗ, ಅದು ಅವರಿಗೆ ಮೂರ್ಖತನವಾಗಿ ಅಥವಾ ನಮ್ಮ ಘನತೆಗೆ ಕೆಳಮಟ್ಟದ್ದಾಗಿ ಕಂಡುಬಂದರೂ ಸಹ, ಅದನ್ನು ನಾವು ಮಾಡಲೇಬೇಕು.

ಆಅನ್ವಪ್ರ–

- ದೇವರನ್ನು ಹುಡುಕುತ್ತಿರುವಂತವರನ್ನು ಈ ದಿನ ಅಪಹಾಸ್ಯ ಮಾಡುವ ಜನರು ಇರುವುದುಂಟೋ?
- ಅಪಹಾಸ್ಯಕ್ಕೊಳಗಾದಾಗ ಹೇಗೆ ಭಾವಿಸುವಿರಿ?
- ನೀವಾಗಲಿ ಅಥವಾ ನಿಮಗೆ ವೈಯಕ್ತಿಕವಾಗಿ ತಿಳಿದ ಯಾರಿಗಾಗಲಿ ಕರ್ತನನ್ನು ಹಿಂಬಾಲಿಸಿರುವುದರ ನಿಮಿತ್ತ ಅಪಹಾಸ್ಯಕ್ಕೊಳಗಾಗಿರುವರೇ, ಅಥವಾ ಕರ್ತನನ್ನು ಹೆಚ್ಚಾಗಿ ತಿಳಿದುಕೊಳ್ಳುವುದಕ್ಕಾಗಿ ಕೀಳಾಗಿ ಕಾಣಲ್ಪಡುವ ಯಾವುದಾದರೂ ಸಂಗತಿಯನ್ನು ನೀವು ಮಾಡಬೇಕಾಗಿತ್ತೇ?
- ನಮಗೆ ಸಾಧ್ಯವಾಗಿದ್ದರೆ ಅಪಹಾಸ್ಯವನ್ನು ತಡೆಯುವಂತೆ ಶೋಧನೆಯಾಗುತ್ತದೆಯೇ?
- ನಾವು ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಜಕ್ಕಾಯನ ಈ ಕಥೆಯಲ್ಲಿ ಯಾವ ಉದಾಹರಣೆಯು ನಮಗೆ ಸಹಾಯ ಮಾಡುತ್ತದೆ?

4. **ಆಅ –** ಕಥೆಯಲ್ಲಿ ಮೊದಲು ಜಕ್ಕಾಯನು ಯೇಸುವನ್ನು ಹುಡುಕುತ್ತಿದ್ದನು ಎಂಬುದು ಸ್ಪಷ್ಟವಾಗಿದೆ. ಇದರ ಮುಂದಿನ ಭಾಗದಲ್ಲಿ ಜಕ್ಕಾಯನನ್ನು ಯೇಸು ಹುಡುಕುತ್ತಿರುವಂತಹ ಕಥೆಯಾಗುತ್ತದೆ!

   ಆಅನ್ವ – ಜಕ್ಕಾಯನು ಯೇಸುವನ್ನು ಹುಡುಕಿದನು ಎಂಬುದನ್ನು ನಾವು ಕಥೆಯಲ್ಲಿ ನೋಡುತ್ತೇವೆ, ಆದರೆ ಯೇಸುವು ಸಹ ಜಕ್ಕಾಯನನ್ನು ಹುಡುಕಿದನು. ಎರಡೂ ನಿಜವಾಗಿದೆ. ನಮಗೆ, ನಾವು ದೇವರನ್ನು ಹುಡುಕಲೇಬೇಕು, ಆದರೆ ಅದೇ ಸಮಯದಲ್ಲಿ ಆತನು ನಮ್ಮನ್ನೂ ಹುಡುಕುತ್ತಾನೆ!

   ಆಅನ್ವಪ್ರ–
   - ಜನರು ದೇವರನ್ನು ಹುಡುಕುವ ಅಗತ್ಯವಿದೆ ಎಂಬುದು ಸತ್ಯವೇ?
   - ಈ ಕಥೆಯಲ್ಲಿ ದೇವರನ್ನು ಹುಡುಕುವಂತಹ ಜನರ ಕುರಿತಾಗಿ ಏನಾದರೂ ನೋಡುವಿರೇ?
   - ಹಾಗಾದರೆ ಅದು ಯಾವುದು? ದೇವರು ಜನರನ್ನು ಹುಡುಕುತ್ತಾನೋ ಅಥವಾ ಜನರು ದೇವರನ್ನು ಹುಡುಕುತ್ತಾರೋ?
   - ಇದು ಒಂದಕ್ಕೊಂದು ವಿರುದ್ಧವಾಗಿದೆಯೇ?
   - ಇದನ್ನು ನೀವು ಹೇಗೆ ವಿವರಿಸುವಿರಿ?

5. **ಆಅ –** ಯೇಸುವಿನ ಸುತ್ತಲೂ ಸುತ್ತುವರೆದಿರುವ ಜನರ ಸಮೂಹದ ನಡುವೆ ಯೇಸು ರಸ್ತೆಯಲ್ಲಿ ನಡೆದು ಬರುತ್ತಿದ್ದನು, ಆತನು ಅವರೆಲ್ಲರನ್ನೂ ದಾಟಿಕೊಂಡು, ಒಬ್ಬ ವ್ಯಕ್ತಿಯನ್ನು ಗುರುತಿಸುವುದಕ್ಕೆ ಆಯ್ಕೆ ಮಾಡಿದನು, ಈ ವ್ಯಕ್ತಿಯು ಆತನ ಹತ್ತಿರವೂ ಸಹ ಇರಲಿಲ್ಲ, ಈತನು ಮರದಲ್ಲಿದ್ದನು!

   ಆಅನ್ವ – ಆ ದಿನ ಅನೇಕ ಜನರು ದೇವರ ಬಳಿ ದಯೆಯನ್ನು ಹುಡುಕಿದರು. ನೋಡುವುದಕ್ಕೆ ಅವರಿಗೆ ಯೇಸುವಿನಲ್ಲಿ ಆಸಕ್ತಿ ಇರುವಂತೆ ಕಾಣುತ್ತಿತ್ತು, ಆದರೆ ಯೇಸು ಅವರನ್ನು ತಿರಸ್ಕರಿಸಿ, ಒಬ್ಬ ವ್ಯಕ್ತಿಯನ್ನು ಮಾತ್ರ ಆರಿಸಿಕೊಂಡನು. ಲೋಕದಲ್ಲಿರುವ ಅನೇಕರು ತಮಗೆ ದೇವರಲ್ಲಿ ಆಸಕ್ತಿಯಿರುವಂತೆ ನಟಿಸುತ್ತಾರೆ, ಆದರೆ ಅವರಲ್ಲಿ ಅನೇಕರು ಪ್ರಾಮಾಣಿಕರಾಗಿಲ್ಲ. ಪ್ರಾಮಾಣಿಕನಾಗಿದ್ದ ಒಬ್ಬನನ್ನು ಯೇಸು ಕರೆದನು. ದೇವರು ನಮ್ಮ ಹೃದಯಗಳನ್ನು ತಿಳಿದಿರುವನು, ಮತ್ತು ನಾವು ನಿಜವಾಗಿಯೂ ಆತನನ್ನು ಹುಡುಕುತ್ತಿರುವೆವೋ ಎಂಬುದೂ ಆತನಿಗೆ ತಿಳಿದಿದೆ.

ಆಅನ್ವಪ್ರ–

- ಲೋಕದಲ್ಲಿ ಕೆಲವು ಧರ್ಮಕ್ಕೆ ಸೇರಿದವರು ಎಂದು ಎಷ್ಟು ಶೇಕಡವಾರು ಜನರು ಇರುವರು ಎಂದು ನೀವು ಆಲೋಚಿಸುವಿರಿ?
- ನಿಜವಾಗಲೂ ದೇವರ ಹಿಂಬಾಲಕರಾಗಿಲ್ಲದಿರುವ ಧಾರ್ಮಿಕ ಜನರನ್ನು ನೀವು ಎಂದಾದರೂ ಭೇಟಿಯಾಗಿರುವಿರೇ?
- ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ಈ ಕಥೆಯಲ್ಲಿ ನಾವು ನೋಡಿದ ಜನರನ್ನು ಗಣನೆಗೆ ತೆಗೆದುಕೊಂಡು, ನಾವು ಇದರ ಕಡೆಗೆ ನೋಡೋಣ. ಲೋಕದಲ್ಲಿರುವ ಧಾರ್ಮಿಕ ಜನರಲ್ಲಿ, ಕೆಲವರು ಕೇವಲ ತಮ್ಮ ಧರ್ಮವನ್ನು ಮಾತ್ರ ಹಿಂಬಾಲಿಸುವವರು ಇರುವರು ಮತ್ತು ಇನ್ನೂ ಕೆಲವರು ನಿಜವಾಗಿಯೂ ದೇವರನ್ನು ಹುಡುಕುವವರು ಆಗಿರುವರು ಎಂದು ನೀವು ಭಾವಿಸುವಿರೇ?
- ನಿಜವಾಗಿ ಹುಡುಕುವವನನ್ನು ಗುರುತಿಸಿದವನಿಗೆ ಈ ಕಥೆಯಲ್ಲಿ ಏನು ಸಂಭವಿಸಿತು?

6. **ಆಅ –** ಯೇಸು ಜಕ್ಕಾಯನನ್ನು ಹೆಸರಿಡಿದು ಕರೆಯುತ್ತಾನೆ, ಇದು ಮನುಷ್ಯನ ಕುರಿತಾಗಿ ಆತನಿಗಿದ್ದ ವೈಯಕ್ತಿಕ ಆಸಕ್ತಿಯನ್ನು ತೋರ್ಪಡಿಸುತ್ತದೆ.

ಆಅನ್ವ – ಇಲ್ಲಿ ನಾವು ಒಬ್ಬ ವೈಯಕ್ತಿಕ ದೇವರನ್ನು ನೋಡುವೆವು, ಈತನಿಗೆ ನಾವು ಎಲ್ಲಿರುವೆವು ಎಂದು ತಿಳಿದಿದೆ ಮತ್ತು ನಮ್ಮ ಹೆಸರನ್ನು ಅರಿತವನಾಗಿರುವನು. ದೇವರನ್ನು ಹುಡುಕುವವರಿಗೆ ಆತನು ಕರುಣಾಪೂರ್ಣನು ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದರೆ, ಆತನು ನಮ್ಮ ಹೆಸರಿನೊಂದಿಗೆ ನಮ್ಮನ್ನು ತಿಳಿಯಲಿ ಎಂದು ಬಯಸುತ್ತೇವೆ... ಇದು ಸಂತೈಸುವಿಕೆಯನ್ನು ಕೊಡುತ್ತದೆ. ಜಕ್ಕಾಯನು ಯೇಸುವನ್ನು ನೋಡಬೇಕೆಂದು ಹುಡುಕುತ್ತಿದ್ದನು, ಹಾಗಾಗಿ ಯೇಸು ಅವನನ್ನು ಹೆಸರಿಡಿದು ಕರೆದಾಗ, ಜಕ್ಕಾಯನಿಗೆ ತನ್ನನ್ನು ಕರೆಯುತ್ತಿರುವವರು ಯಾರಾಗಿದ್ದರೆಂಬುದನ್ನು ಗುರುತಿಸಿದನು.

ಆಅನ್ವಪ್ರ–

- ಯೇಸು ಜಕ್ಕಾಯನೊಂದಿಗೆ ಮಾತನಾಡಿದ ಮಾತುಗಳು ನಿಮಗೆ ನಿರೀಕ್ಷೆಯನ್ನು ತಂದಿದೆಯೇ?
- ಏಕೆ ಎಂದು ನೀವು ವಿವರಿಸಬಲ್ಲಿರೇ?
- ಯಾವುದು ಉತ್ತಮವಾಗಿ ತೋರುತ್ತದೆ, ನಿರಾಕಾರವಾಗಿರುವ ದೇವರನ್ನು ಹೊಂದಿರುವುದು ಅಥವಾ ನಿನ್ನನ್ನು ತಿಳಿದಿರುವಂತವರೋ?
- ನಿಮ್ಮನ್ನು ತಿಳಿದಿರುವ ದೇವರು ನಿಮಗಿರುವುದರಿಂದ ಏನು ಒಳ್ಳೆಯದು ಮತ್ತು ಕೆಟ್ಟದ್ದು ಸಂಭವಿಸಬಲ್ಲದು?
- ದೇವರು ಎಂದಾದರೂ ನಿಮಗೆ ವೈಯಕ್ತಿಕವಾಗಿ ಮಾತನಾಡಿರುವರೇ?

7. **ಆಅ –** ಯೇಸು ತಾನೇ ಜಕ್ಕಾಯನ ಮನೆಗೆ ಹೋಗಲು ಬಯಸುತ್ತಾನೆ, ಇದು ಅನೇಕ ಸಂಸ್ಕೃತಿಗಳಲ್ಲಿ ಮಿತಿಮೀರಿದ ಭರವಸೆಯ ರೀತಿಯದ್ದಾಗಿದೆ. ಇದು ಏನು "ಸಂಭವಿಸಲೇಬೇಕು" ಎಂಬುದಾಗಿ ಯೇಸುವಿಗಿದ್ದ ಜ್ಞಾನವನ್ನು ಮತ್ತು ಭರವಸೆಯನ್ನು ತೋರಿಸುತ್ತದೆ.

ಆಅನ್ವ – ತನ್ನನ್ನು ಯಾರು ಹುಡುಕುತ್ತಾರೋ ಅವರೊಂದಿಗೆ ಯೇಸು ತಾನಿರಲು ಬಯಸುತ್ತಾನೆ ಎಂಬುದು ಆಶ್ಚರ್ಯಪಡುವಂತಹುದು ಮತ್ತು ಪ್ರೋತ್ಸಾಹಿಸುವಂತಹುದು ಆಗಿದೆ.

ಆಅನ್ವಪ್ರ–

- ಜಕ್ಕಾಯನ ಮನೆಗೆ ಭೇಟಿ ಕೊಡುವುದರ ಬಗ್ಗೆ ಇದ್ದ ವಿಶೇಷತೆ ಏನು?
- ಭೇಟಿ ಕೊಡುವುದು ಖಚಿತವಾಗಿ ಆಗುತ್ತದೆ ಎಂಬುದನ್ನು ತೋರಿಸುವ ಯಾವುದಾದರೂ ಸಂಗತಿ ಯೇಸು ಹೇಳಿದ್ದರಲ್ಲಿ ಇತ್ತೇ?
- ಜಕ್ಕಾಯನ ಮನೆಗೆ ಯೇಸು ಸ್ವತಃ ತಾನೇ ಬರುತ್ತೇನೆಂದು ಹೇಳಿದುದರಲ್ಲಿ ಇಂದು ನಾವು ದೇವರನ್ನು ಹುಡುಕುವುದಕ್ಕೆ ಪ್ರೋತ್ಸಾಹಿಸುವಂತಹ ಯಾವ ಸಂಗತಿ ಈ ಕಥೆಯಲ್ಲಿದೆ?

8. **ಆಅ –** ಒಬ್ಬ ವ್ಯಕ್ತಿಯು ಮೇಲಕ್ಕೆ ನೋಡಿದಾಗ, ಅದರಲ್ಲೂ ವಿಶೇಷವಾಗಿ ತನ್ನನ್ನು ಹಿಂಬಾಲಿಸುತ್ತಿರುವಂತಹ ಒಬ್ಬ ನಾಯಕನು ಹೀಗೆ ನೋಡಿದಾಗ, ಅಲ್ಲಿರುವ ಜನರು ಆತನು ಏನನ್ನು ನೋಡುತ್ತಿರುವನು ಎಂಬುದನ್ನು ನೋಡಲು ತಾವೂ ಸಹ ಮೇಲಕ್ಕೆ ನೋಡುತ್ತಾರೆ. ಹಾಗಾಗಿ ಇಲ್ಲಿ ಕೇವಲ ಯೇಸು ಮಾತ್ರ ಜಕ್ಕಾಯನನ್ನು ನೋಡಲಿಲ್ಲ, ಅಲ್ಲಿರುವ ಎಲ್ಲಾ ಜನರು ನೋಡಿದರು! ತನ್ನನ್ನು "ಕಂಡುಹಿಡಿದಿರುವ" ಬಗ್ಗೆ ಜಕ್ಕಾಯನಿಗೆ ಭಯವಾಗಲಿ ಅಥವಾ ಮುಜುಗರವಾಗಲಿ ಆಗಲಿಲ್ಲ. ಸತ್ಯಾಂಶವೆಂದರೆ, ಆತನು ಸಂತೋಷವನ್ನು ತೋರ್ಪಡಿಸಿದನು.

ಆಅನ್ವ – ಅವಿಶ್ವಾಸಿಗಳು ಮತ್ತು ಅಪನಂಬಿಗಸ್ತರಾದ ದೇವರ ಹಿಂಬಾಲಕರು ನಮ್ಮನ್ನು ಮೇಲೆ ನೋಡಿ, ದೇವರನ್ನು ಅರಿತುಕೊಳ್ಳಲು ನಾವು ಮೂರ್ಖರು ಅಥವಾ ಬುದ್ಧಿವಂತರಲ್ಲವೆಂದು ಅವರು ಭಾವಿಸಿದರೂ ಸಹ, ಅವರ ಟೀಕೆಗಳು ನಮ್ಮ ಮೇಲೆ ಪರಿಣಾಮ ಬೀರದಂತೆ ಇರಬೇಕು. ದೇವರು ವೈಯಕ್ತಿಕವಾಗಿ ನಮ್ಮ ಬಗ್ಗೆ ಆಸಕ್ತಿಯಿಂದಿರುವನು ಎಂಬುದನ್ನು ನಾವು ತಿಳಿದುಕೊಂಡಾಗ, ಅದಕ್ಕೆ ನಾವು ಸಂತೋಷದಿಂದ ಪ್ರತಿಕ್ರಿಯಿಸಬೇಕು.

ಆಅನ್ವಪ್ರ–

- ದೇವರನ್ನು ಹುಡುಕಿಕೊಂಡು ಹೋಗುವುದರಲ್ಲಿ, ಅಂತವರು ತಮ್ಮ ಇನ್ನಿತರ ಸಂಬಂಧಿಕರು ಅಥವಾ ಸಾಮಾಜಿಕ ಗುಂಪಿನ ಮತ್ತು ಸಂಸ್ಕೃತಿಯ ಜನರೆಲ್ಲರಿಗಿಂತಲೂ ವ್ಯತ್ಯಾಸವಾಗಿರುವಂತೆ ಎಂದಾದರೂ ಸಂಭವಿಸಿದೆಯೇ?
- ನೀವು ಎಂದಾದರೂ ಇದನ್ನು ನೋಡಿರುವಿರೇ?
- ನಾವು ಬೇರೊಬ್ಬರಿಗಿಂತಲೂ ಅಥವಾ ನಮಗೆ ಮುಖ್ಯವಾಗಿರುವಂತವುಗಳಿಗಿಂತಲೂ ವ್ಯತ್ಯಾಸವಾಗಿರಬೇಕೆಂದು ನಮ್ಮನ್ನು ಇಂದು ಪ್ರೋತ್ಸಾಹಿಸಬಹುದಾದಂತಹ ಜಕ್ಕಾಯನ ವರ್ತನೆ ಮತ್ತು ಅವನ ಆಯ್ಕೆಗಳ ಫಲಿತಾಂಶಗಳಲ್ಲಿ ನೀವು ಏನನ್ನು ನೋಡುವಿರಿ?
- ನೀವು ನೋಡಿದಂತವುಗಳು ಇಂದು ನಮಗೆ ಆಯ್ಕೆ ಮಾಡಿಕೊಳ್ಳುವಂತೆ ಹೇಗೆ ಪ್ರೋತ್ಸಾಹಿಸಬಲ್ಲದು?

9. **ಆಅ –** ಯೇಸುವಿನ ಕರೆಯುವಿಕೆಗೆ ಕರಾರುವಕ್ಕಾಗಿ ಮಾಡುವುದರಲ್ಲಿ ಜಕ್ಕಾಯನು ಹಿಂಜರಿಯಲಿಲ್ಲ. ಆತನು ಆತುರವಾಗಿ ಬಂದನು.

ಆಅನ್ವ – ದೇವರು ಯಾವ ಸಮಯದಲ್ಲಿಯೇ ಆಗಲಿ ನಾವು ಕ್ರಿಯೆ ಮಾಡುವಂತೆ ನಮ್ಮನ್ನು ಕರೆಯುತ್ತಿದ್ದನೆಂದು ನಮಗೆ ತಿಳಿದರೆ, ನಾವು ಪ್ರತಿಕ್ರಿಯಿಸಲೇಬೇಕು ಮತ್ತು ಆತನ ಸೂಚನೆಗಳಿಗನುಸಾರವಾಗಿ ಪ್ರತಿಕ್ರಿಯಿಸಬೇಕು. ನಿಧಾನವಾಗಿ ತೋರುವ ವಿಧೇಯತೆಯು ಅವಿಧೇಯತೆಗೆ ಸಮಾನವಾಗಿರಬಲ್ಲದು.

ಆಅನ್ವಪ್ರ–

- ಈದಿನ ದೇವರು ಎಲ್ಲಾ ಜನರನ್ನು ಕರೆಯುವನೇ?
- ಹಾಗಿದ್ದರೆ, ಆ ಕರೆಯುವಿಕೆಯು ಯಾವ ರೀತಿಯಲ್ಲಿ ಬರಬಹುದಾಗಿದೆ?
- ದೇವರು ನಮ್ಮನ್ನು ಯಾವ ಸಮಯದಲ್ಲಿಯಾದರೂ ಕರೆಯುತ್ತಾನೆ ಎಂಬುದು ನಮಗೆ ತಿಳಿದಿದ್ದರೆ, ಈ ಕಥೆಯು ನಮಗೆ ಹೇಗೆ ಮಾರ್ಗದರ್ಶನ ಕೊಡುತ್ತದೆ?
- ತಕ್ಷಣವೇ ಪ್ರತಿಕ್ರಿಯಿಸುವುದರೊಂದಿಗೆ, ದೇವರ ಸೂಚನೆಗಳು ನಮಗೆ ಯಾವ ಅರ್ಥವನ್ನು ಕೊಡಬಲ್ಲದು? ನಿಧಾನಗತಿಯ ವಿಧೇಯತೆಯನ್ನು ನೀವು ಏನೆಂದು ಕರೆಯುವಿರಿ?

10. **ಆಅ –** ಯೇಸು ಹೇಗೆ ತಾನೇ "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂದು ಜನರು ತಮ್ಮತಮ್ಮಲ್ಲಿಯೇ ಆತನ ಕುರಿತಾಗಿ ಗುಣಗುಟ್ಟುವುದರಿಂದ ಅವರು ಜಕ್ಕಾಯನ ವಿರುದ್ಧವಾಗಿ ಮಾತನಾಡಿದರು. "ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಇದು ಯೇಸು ಅಲ್ಲಿಗೆ ಹೋಗುತ್ತಿದ್ದಾನೆ ಅಥವಾ ಆತನು ಆಗಲೇ ಅಲ್ಲಿಗೆ ಹೋಗಿದ್ದಾನೆ ಎಂಬುದನ್ನು ಸೂಚಿಸುತ್ತದೆ.
ಜಕ್ಕಾಯನಿಗೆ ಮತ್ತು ಯೇಸುವಿಗೆ ಜಕ್ಕಾಯನ ಮನೆಗೆ ಯೇಸು ಹೋಗುವುದರಿಂದ ಜನರಿಗೆ ಇರಿಸುಮುರಿಸು ಎಂಬುದು ತಿಳಿದಾಗ, ಜಕ್ಕಾಯನ ಮನೆಗೆ ಹೋಗುವುದು ಅಷ್ಟು ಸ್ಪಷ್ಟವಾಗಿರಲಿಲ್ಲ. ಆದರೆ ಕಥೆಯಲ್ಲಿ ನಂತರ, ಜಕ್ಕಾಯನ ಮುಂದೆಯೇ ಯೇಸು ಗುಂಪಿಗೆ ಹೇಳುವುದರ ನಿಮಿತ್ತ, ಜಕ್ಕಾಯ ಮತ್ತು ಯೇಸು ಇವರಿಬ್ಬರಿಗೂ ಜನರ ಟೀಕೆ ತಿಳಿದಿತ್ತು ಎಂಬುದನ್ನು ನೋಡುತ್ತೇವೆ. ಆದರೆ ಜನರ ಟೀಕೆಯಿಂದ ತಾನು ಮುಜುಗರಪಡುವಂತೆ ಜಕ್ಕಾಯನು ಬಿಟ್ಟುಕೊಡಲಿಲ್ಲ ಮತ್ತು ಆದರೂ ಸಹ ಆತನ ಮನೆಯಲ್ಲಿ ಯೇಸು ಇದ್ದನು.

ಆಅನ್ವ – ನಾವು ಚೆನ್ನಾಗಿಯೇ ಪ್ರಾರಂಭಿಸಬಹುದು. ಆದರೆ ಸ್ವಲ್ಪ ಸಮಯದಲ್ಲಿ, ನಮ್ಮ ಸುತ್ತಮುತ್ತಲಿರುವವರಿಂದ ಟೀಕೆಗೊಳಗಾದಾಗ, ಒಂದು ಧಾರ್ಮಿಕ ಗುಂಪಿನಿಂದಾದರೂ ಸಹ ನಾವು ತೆಗೆದುಕೊಂಡ ನಿರ್ಧಾರದಲ್ಲಿಯೇ ಇರಬೇಕು.

ಆಅನ್ವಪ್ರ–

- ಗುಂಪಿನವರು ಬಹಿರಂಗವಾಗಿಯೇ ಯೇಸುವಿನ ಬಗ್ಗೆ ಹರಟೆ ಮಾತುಗಳನ್ನಾಡುತ್ತಿದ್ದರು ಮತ್ತು ಜಕ್ಕಾಯನನ್ನು ಟೀಕಿಸುತ್ತಿದ್ದರು.
- ನಿಮಗಿಂತಲೂ ತಾವು ಹೆಚ್ಚಿನವರೆಂದು ಮತ್ತು ಅವರು ಬಹಿರಂಗವಾಗಿಯೇ ನಿಮಗೆ ನಿಂದಿಸಿರುವಂತಹ ಮಾತುಗಳನ್ನು ಬೇರೆಯವರಿಂದ ನೀವು ಎಂದಾದರೂ ಕೇಳಿರುವಿರಿ?
- ಅದು ಯಾವ ರೀತಿಯ ಅನಿಸುವಿಕೆಯಾಗಿತ್ತು?
- ಅಸಮ್ಮತಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ಈ ಕಥೆಯಿಂದ ನಾವು ಏನನ್ನು ತಿಳಿದುಕೊಳ್ಳಬಹುದು?

11. **ಆಅ –** ಯೇಸು "ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ" ಎಂಬ ಜನರ ಟೀಕೆಯಿಂದ ಆ ಜನರು ತಾವು ಪಾಪಿಗಳು "ಅಲ್ಲ" ಎಂದು ಅವರು ಆಲೋಚಿಸುತ್ತಿದ್ದರು ಎಂದು ಅನ್ನಿಸುತ್ತದೆ.

ಆಅನ್ವ – ತಮ್ಮ ಬಾಯಿಂದಲೇ, ಗರ್ವಿಷ್ಠರು ತಮ್ಮನ್ನೇ ತಾವು ಖಂಡಿಸಿಕೊಳ್ಳುತ್ತಾರೆ. ತಮ್ಮಲ್ಲಿ ಪಾಪವಿದೆ ಎಂದು ಒಪ್ಪಿಕೊಳ್ಳದಂತಹ ಆ ಗರ್ವಿಷ್ಠರಂತೆ ನಾವಿರುವುದು ಬೇಡ.

ಆಅನ್ವಪ್ರ–

- ದೇವರಿಗಾಗಿ ನೀವು ಹುಡುಕಾಡಿದ ಸಂದರ್ಭದಲ್ಲಿ, ತಾವು ಪರಿಪೂರ್ಣರು, ತಾವು ಪಾಪಿಗಳಲ್ಲ ಎಂದು ಹೇಳಿದಂತಹ ಧಾರ್ಮಿಕ ಜನರೊಂದಿಗೆ ನೀವು ಎಂದಾದರೂ ಸಂಭಾಷಿಸಿರುವಿರೇ?
- ಸ್ವ–ನೀತಿವಂತಿಕೆಯನ್ನು ನೀವು ಹೇಗೆ ವಿವರಿಸುವಿರಿ?
- ಈ ಸ್ವ–ನೀತಿವಂತಿಕೆ ಎಂಬುದು ದೇವರನ್ನು ಹಿಂಬಾಲಿಸುವ ಒಬ್ಬ ನಿಜವಾದ ಹಿಂಬಾಲಕರಿಗೆ ಇರಬಹುದಾದಂತಹ ಅಥವಾ ಇರಬೇಕಾದ ಒಂದು ಸಂಗತಿ ಎಂದು ನೀವು ಆಲೋಚಿಸುವಿರೇ?

12. **ಆಅ –** ಆ ಗುಂಪು ಯೇಸುವಿನ "ಹಿಂಬಾಲಕರು" ಎಂಬಂತೆ ವರ್ತಿಸಿದರು. ಅವರು ಯೇಸುವನ್ನು ತಳ್ಳಿಕೊಂಡು ಆತನ ಜೊತೆಗೆ ಬರುತ್ತಿದ್ದರು. ಯೇಸು ಯಾರೊಂದಿಗೆ ಊಟಕ್ಕೆ ಹೋಗುತ್ತಾನೆ ಎಂಬುದರ ಕಾಳಜಿ ಅವರಿಗಿತ್ತೆಂಬುದು ಅವರ ಟೀಕೆಯಿಂದ ವ್ಯಕ್ತವಾಗುತ್ತಿದ್ದರೂ ಸಹ, ಅವರಲ್ಲಿ ಯಾರಾದರೊಬ್ಬರ ಮನೆಯು ಇದಕ್ಕೆ ಉತ್ತಮವಾದ ಆಯ್ಕೆಯಾಗಿತ್ತು ಎಂಬಂತೆ ಪರೋಕ್ಷವಾಗಿ ತೋರುತ್ತಿತ್ತು. ವಾಸ್ತವವಾಗಿ, ಯೇಸು ತಾನು ಭೇಟಿ ಮಾಡಲು ಹೋಗುವ ಮನೆಗಳ ಆಯ್ಕೆಯನ್ನು ಅವರು ಒಪ್ಪಿಕೊಳ್ಳದೆ ಇದ್ದುದರಿಂದ ಆ ಗುಂಪಿನವರು ಯೇಸುವಿಗೆ ಬಹಳ ಅಗೌರವವನ್ನು ತೋರಿಸುತ್ತಿದ್ದರು.

ಆಅನ್ವ – ತಾವು ಯೇಸುವಿನ ಹಿಂಬಾಲಕರೆಂದು ಹೇಳಿಕೊಳ್ಳುವವರೆಲ್ಲರೂ ನಿಜವಾಗಿಯೂ ಆತನನ್ನು ತಿಳಿದಿರುವುದಿಲ್ಲ ಹಾಗೂ ಆತನನ್ನು ಅಥವಾ ಆತನ ನಿರ್ಧಾರಗಳನ್ನು ನಿಜವಾಗಿಯೂ ಗೌರವಿಸುವವರಾಗಿರುವುದಿಲ್ಲ. ಎಲ್ಲಾ ಧಾರ್ಮಿಕ ಜನರೂ ದೇವರ ವಾಕ್ಯಕ್ಕೆ ಗೌರವವನ್ನು ತೋರಿಸುವುದಿಲ್ಲ.

ಆಅನ್ವಪ್ರ–

- ಗುಂಪಿನ ಜನರ ವರ್ತನೆಯಲ್ಲಿ ಅಥವಾ ಮಾತುಕತೆಯಲ್ಲಿ ನೋಡಿದಂತೆ ಯೇಸುವಿನ ಕುರಿತಾಗಿ ಅವರಿಗಿದ್ದ ಗೌರವವು ಯಾವ ರೀತಿಯಾಗಿತ್ತು ಎಂಬುದನ್ನು ತೋರಿಸುತ್ತದೆ?
- ಈದಿನ, ಜನರು ತಾವು ದೇವರನ್ನು ಹಿಂಬಾಲಿಸುವವರೆಂದು ನಟಿಸುತ್ತಾ, ದೇವರಿಗೆ ಗೌರವವನ್ನು ಸಲ್ಲಿಸುವುದಕ್ಕಿಂತ ಹೆಚ್ಚಾಗಿ ತಮ್ಮ ಕುರಿತಾಗಿಯೇ ಗೌರವವನ್ನು ಬಯಸುವವರಾಗಿರುತ್ತಾರೆಯೇ?
- ಇದು ನೋಡುವುದಕ್ಕೆ ಯಾವ ರೀತಿ ಕಾಣಬಹುದು?

13. **ಆಅ –** ವಿಮರ್ಶಾತ್ಮಕವಾದ ಆ ಗುಂಪಿಗೆ ತಮ್ಮದೇ ನಂಬಿಕೆಗಳಿದ್ದವು, ಆದರೆ ಯೇಸುವನ್ನು ಮುಖಾಮುಖಿಯಾಗಿ ಕೇಳುವಂತಹ ಧೈರ್ಯ ಅವರಿಗಿಲ್ಲದಂತೆ ಕಾಣುತ್ತದೆ. ಯೇಸುವಿಗಿದ್ದ ಬಲದ ಕುರಿತಾಗಿ ಗುಂಪಿನ ಜನರಿಗೆ ತಿಳಿದಿರಲಿಲ್ಲ, ಹಾಗಾಗಿ ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡರೆ ಅವರ ದೂರುಗಳನ್ನು ಆತನು ಕೇಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬಂತೆ ವರ್ತಿಸಿದರು.

ಆಅನ್ವ – ಜನರು ತಾವು ಒಬ್ಬರಿಗೊಬ್ಬರು ಪಿಸುಗುಟ್ಟುವುದನ್ನು ದೇವರು ಕೇಳಿಸಿಕೊಳ್ಳಲಾಗುವುದಿಲ್ಲ ಮತ್ತು ಅವರು ಕತ್ತಲೆಯಲ್ಲಿ ಮತ್ತು ರಹಸ್ಯ ಸ್ಥಳಗಳಲ್ಲಿ ಮಾಡುವಂತಹುದನ್ನು ದೇವರು ನೋಡಲಾಗುವುದಿಲ್ಲ ಎಂದು ಇಂದು ಜನರು ಅಂದುಕೊಳ್ಳುವ ಹಾಗೆಯೇ ಆ ಗುಂಪಿನವರು ಕ್ರಿಯೆಗಳು ಇದ್ದವು.

ಆಅನ್ವಪ್ರ–

- ಜನರು ರಹಸ್ಯವಾಗಿ ಮಾತನಾಡಿ ಅಥವಾ ಕತ್ತಲೆಯಲ್ಲಿ ದುಷ್ಟ ಕ್ರಿಯೆಗಳನ್ನು ಮಾಡುತ್ತಾ, ನಾವೇನು ಮಾಡುತ್ತಿರುವೆವೆಂದು ಯಾರಿಗೂ ತಿಳಿದಿಲ್ಲ ಎಂದುಕೊಳ್ಳುತ್ತಿರುವರೋ?
- ನಾವು ಮಾಡುವುದೆಲ್ಲವೂ ಮತ್ತು ಹೇಳುವುದೆಲ್ಲವೂ ದೇವರಿಗೆ ತಿಳಿದಿದೆ ಎಂದು ಈ ಕಥೆಯಲ್ಲಿ ನಮಗೆ ತೋರಿಸುವ ಸಂಗತಿ ಯಾವುದು?
- ಈ ರೀತಿಯ ಜ್ಞಾನವು ನಮಗೆ ಹೇಗೆ ಪರಿಣಾಮವನ್ನು ಬೀರುತ್ತದೆ?

14. **ಆಅ** – ಐಶ್ವರ್ಯವಂತನಾದ ಜಕ್ಕಾಯನು, ತನ್ನ ಹಣದಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ ಎಂದು ಹೇಳಿದ್ದು ಆತನ ಹೃದಯವನ್ನು ತೋರ್ಪಡಿಸುತ್ತದೆ.

ಆಅನ್ವ – ದೇವರೊಂದಿಗಿನ ನಿಜವಾದ ಭೇಟಿ (ಸಂದರ್ಶನ), ಆ ವ್ಯಕ್ತಿಯ ಲೋಕದ ದೃಷ್ಟಿಯಲ್ಲಿ ಮತ್ತು ಮೌಲ್ಯಗಳಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡುತ್ತದೆ.

ಆಅನ್ವಪ್ರ–

- ದೇವರೊಂದಿಗೆ ಒಂದು ನಿಜವಾದ ಭೇಟಿ (ಸಂದರ್ಶನ) ನಮ್ಮ ಲೋಕದ ದೃಷ್ಟಿಯ ಮೇಲೆ ಮತ್ತು ಮೌಲ್ಯಗಳ ಮೇಲೆ ಹೇಗೆ ಪರಿಣಾಮವನ್ನು ಬೀರಬಹುದಾಗಿದೆ?
- ಕೆಲವು ಉದಾಹರಣೆಗಳನ್ನು ಕೊಡಿ.

15. **ಆಅ** – ಹಾಗೂ, ಜಕ್ಕಾಯನು ತಾನು ಅನ್ಯಾಯವಾಗಿ ಯಾರಿಂದಾದರೂ ಏನಾದರೂ ತಕ್ಕೊಂಡಿದ್ದರೆ, ಅಂತಹ ವ್ಯಕ್ತಿಗೆ ನಾಲ್ಕರಷ್ಟು ಹಿಂತಿರುಗಿಸಿ ಕೊಡುತ್ತೇನೆ ಎಂದು ಘೋಷಿಸಿದನು. ಇಲ್ಲಿ ಜಕ್ಕಾಯನು ತಾನು ಧರ್ಮಶಾಸ್ತ್ರದ ನಿಯಮದ ಪ್ರಕಾರ ತನ್ನ ಮೇಲೆ ದೋಷರೋಪಣೆ'ಯಾದರೆ' ಅಥವಾ ಅಪರಾಧಿಯೆಂದು ಕಂಡುಬಂದರೆ ಕದ್ದ ಹಣವನ್ನು ನಾಲ್ಕರಷ್ಟು ಹಿಂತಿರುಗಿರಿಸುತ್ತೇನೆ ಎಂದು ಹೇಳಲಿಲ್ಲ. ಆದರೆ ಜಕ್ಕಾಯನು ಇದನ್ನು ತನ್ನ ಸ್ವಂತ ಚಿತ್ತದಿಂದ ಮಾಡುವುದಕ್ಕೆ ಒಪ್ಪಿಸಿಕೊಂಡನು. ಜಕ್ಕಾಯನು ಈಗಾಗಲೇ ಹಣವನ್ನು ಹಿಂತಿರುಗಿಸುತ್ತಿರುವನು ಎಂದು ಕೆಲವರು ಹೇಳಲೂಬಹುದು, ಆದರೆ ಗುಂಪಿನ ಜನರ ಅಭಿಪ್ರಾಯವು ವ್ಯತ್ಯಾಸವಾಗಿರುವುದು ನಮಗೆ ಕಂಡುಬರುತ್ತದೆ.

ಆತನು ಸುಂಕದ ವಸೂಲಿಗಾರನಾಗಿದ್ದು ತನ್ನ ಅರ್ಧ ಹಣವನ್ನು ಬಡವರಿಗೆ ಕೊಟ್ಟಿದ್ದರೆ, ಆತನು ಇದನ್ನು ಈಗಾಗಲೇ ರಹಸ್ಯವಾಗಿ ಮಾಡುತ್ತಿರುವಂತ ಸಾಧ್ಯತೆಗಳಿವೆ. ಆದರೆ ಅನ್ಯಾಯವಾಗಿ ಹಣವನ್ನು ತೆಗೆದುಕೊಂಡಿದುದರಿಂದ ಅವರಿಗೆ ನಾಲ್ಕರಷ್ಟು ಹಣವನ್ನು ಈಗಾಗಲೇ ಹಿಂತಿರುಗಿಸುವ ಸಂಗತಿಯು ಗುಂಪಿನ ದೃಷ್ಟಿಯಲ್ಲಿ ಆತನನ್ನು ನೀತಿವಂತನ ಮಟ್ಟಕ್ಕೆ ಇಡುವಂತೆ ಮಾಡಿತು.

ನಾವು ಕಥೆಯಿಂದ ತಿಳಿದುಕೊಳ್ಳುವ ಸಂಗತಿ ಎಂದರೆ, ಈ ಕಥೆಯ ಕೆಲವು ಅಂಶದಲ್ಲಿ, ಜಕ್ಕಾಯನು ತಾನು ಪಾಪಿಯೆಂದು ಒಪ್ಪಿಕೊಳ್ಳುವನು ಮತ್ತು ಸಂಗತಿಗಳನ್ನು ಸರಿಪಡಿಸಿಕೊಳ್ಳಲು ಬಯಸುತ್ತಾನೆ. ಆ ದಿನವೇ ರಕ್ಷಣೆಯಾಯಿತು ಎಂದು ಯೇಸು ಹೇಳಿದನು. ಜಕ್ಕಾಯನು ಅಚ್ಚರಿಗೊಳಿಸುವಂತಹ ಉದಾರತೆಯನ್ನು ಮೆರೆದುದನ್ನು ನಾವು ನೋಡಬಹುದು.

ಆಅನ್ವ – ಐಶ್ವರ್ಯವಂತನೂ, ಒಬ್ಬ ಮುಖ್ಯ ಸುಂಕ ವಸೂಲಿಗಾರನೂ ಆಗಿದ್ದ ಜಕ್ಕಾಯನ ದುರಾಸೆಯ ಮಾರ್ಗಗಳು ಬದಲಾದವು ಮತ್ತು ಆತನು ಪ್ರಾಮಾಣಿಕನು ಹಾಗೂ ಉದಾರಿಯು ಆದನು. ಈ ಮುಖ್ಯ ಸುಂಕ ವಸೂಲಿಗಾರನು ತಾನು ಯಾರಿಗೆ ಅನ್ಯಾಯ ಮಾಡಿದ್ದನೋ ಅಂದರೆ ಯಾರೊಂದಿಗೆ ಸುಳ್ಳು ಹೇಳಿದ್ದನೋ ಅದನ್ನು ಒಪ್ಪಿಕೊಂಡು, ಅವರಿಂದ ಕದ್ದುಕೊಂಡ ಹಣವನ್ನು ನಾಲ್ಕರಷ್ಟು ಹಿಂತಿರುಗಿ ಕೊಡುವೆನು ಎನ್ನುವಷ್ಟರ ಮಟ್ಟಿಗೂ ಸಹ ತನ್ನನ್ನು ತಗ್ಗಿಸಿಕೊಂಡನು. ನಾವು ಯೇಸುವಿನ ಬಳಿಗೆ ಬಂದು, ನಮ್ಮ ಪಾಪಗಳನ್ನು ಒಪ್ಪಿಕೊಂಡಾಗ, ನಾವು ತಗ್ಗಿಸುವಿಕೆಯನ್ನು ತೋರಿಸಬೇಕು ಮತ್ತು ಹಿಂತಿರುಗಿಹೋಗಿ ತಪ್ಪಾದ ಕಾರ್ಯಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಇಚ್ಛೆಯನ್ನು ಹೊಂದಿರಬೇಕು.

ಆಅನ್ವಪ್ರ–

- ಯೇಸುವಿನಲ್ಲಿ ನಂಬಿಕೆಯಿಟ್ಟಾಗ ಅವರ ಜೀವಿತಗಳಲ್ಲಿ ಸಂಪೂರ್ಣವಾದ ಬದಲಾವಣೆ ಆಗಿರುವ ಜನರನ್ನು ನೀವು ಎಂದಾದರೂ ನೋಡಿರುವಿರೇ?
- ಹಾಗಿದ್ದರೆ, ಅವರು ಯೇಸುವಿನಲ್ಲಿ ನಂಬಿಕೆಯಿಟ್ಟಾಗ ಯಾವ ನಿರ್ಧಿಷ್ಟ ಮಾರ್ಗಗಳಲ್ಲಿ ಅವರ ನಡತೆಯು ಬದಲಾವಣೆಗೊಂಡವು?
- ನಾವು ಯಾರಿಗೆ ತಪ್ಪು ಮಾಡಿರುವೆವೋ ಅವರ ಬಳಿ ಹೋಗಿ ಪರಿಹಾರ ನೀಡುವುದಕ್ಕೆ ನಮ್ಮನ್ನು ಪ್ರೇರೇಪಿಸಲು ನಮ್ಮೊಳಗೆ ಯಾವ ರೀತಿಯ ಭಾವನೆ ಮತ್ತು ಮನೋಭಾವನೆ ಇರಬೇಕು?
- ಒಮ್ಮೆ ಯೇಸುವಿನ ಶಿಷ್ಯರಾದ ಬಳಿಕ ಅವರು ತಾವು ಜನರ ವಿರುದ್ಧವಾಗಿ ಮಾಡಿದ್ದ ಪಾಪಗಳಿಗಾಗಿ ಅವರ ಬಳಿ ಕ್ಷಮೆ ಯಾಚಿಸಲು ಹೋದಂತವರನ್ನು ನೀವು ಎಂದಾದರೂ ನೋಡಿರುವಿರೇ?
- ಏನು ಸಂಭವಿಸಿತು?

16. **ಆಅ –** ಮೊದಮೊದಲು, ಜಕ್ಕಾಯನು ಯೇಸುವಿನಿಂದ ಮೆಚ್ಚುಗೆಯನ್ನು ಪಡೆಯುವ ಸಲುವಾಗಿ ತನ್ನ ಮಾರ್ಗವನ್ನು ಉಪಯೋಗಿಸಲು ಪ್ರಯತ್ನಿಸುತ್ತಿದ್ದನು, ಅಂದರೆ ದೇವರ ಬಳಿಯಲ್ಲೂ ತನ್ನ ಮಾರ್ಗವನ್ನೇ ನಡೆಸುವ ರೀತಿಯಲ್ಲಿರುವಂತೆ ಆಲೋಚಿಸುವಂತಿತ್ತು. ಆದರೆ ಆ ದಿನವೇ ಜಕ್ಕಾಯನು ಯೇಸುವಿನಲ್ಲಿ ನಂಬಿಕೆಯನ್ನು ಇಟ್ಟನು ಏಕೆಂದರೆ ಯೇಸು ಅವನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ಹೇಳಿದನು. ಈ ಕಥೆಯಲ್ಲಿ ತಾನು ಪಾಪಿಯೆಂದು ಒಪ್ಪಿಕೊಂಡವನು ಮತ್ತು ರಕ್ಷಣೆಯನ್ನು ಪಡೆದುಕೊಂಡ ಒಬ್ಬನೇ ವ್ಯಕ್ತಿ, ಜಕ್ಕಾಯ.

ಆಅನ್ವ – ತಾವು ಮೊದಲು ಪಾಪಿಗಳೆಂದು ಒಪ್ಪಿಕೊಳ್ಳದವರಿಗೆ ರಕ್ಷಣೆಯು ಬರಲು ಸಾಧ್ಯವಿಲ್ಲ.

ಆಅನ್ವಪ್ರ–

- ದೇವರನ್ನು ಮೆಚ್ಚಿಸುವುದಕ್ಕೆ ಅಥವಾ ತಮ್ಮ ಮಾರ್ಗಕ್ಕೆ ದೇವರ ದಯೆಯನ್ನು ಪಡೆದುಕೊಳ್ಳುವುದಕ್ಕೆ ಜನರು ಒಳ್ಳೆಯ ಕೆಲಸಗಳನ್ನು ಮಾಡಿರುವುದನ್ನು ಅಥವಾ ಹಣವನ್ನು ಕೊಟ್ಟಿರುವುದನ್ನು ನೋಡಿರುವಿರೇ?
- ಈ ಕಥೆಯಲ್ಲಿ ಜಕ್ಕಾಯನು ತನ್ನ ಮಾರ್ಗಕ್ಕೆ ಯೇಸುವಿನಿಂದ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಪ್ರಯತ್ನಿಸುತ್ತಿದ್ದನು ಎಂದು ನೀವು ಆಲೋಚಿಸುವಿರೇ?
- ಜಕ್ಕಾಯನಿಗೆ ಪ್ರಾಮಾಣಿಕವಾಗಿ ಬದಲಾದ ಹೃದಯವಿತ್ತೆಂಬುದನ್ನು ಅಥವಾ ಅವನು ಯೇಸುವಿನೊಂದಿಗೆ ದಯೆಯನ್ನು ಹೊಂದಿಕೊಳ್ಳುವುದಕ್ಕಾಗಿ ಪ್ರಯತ್ನಿಸುತ್ತಿದ್ದನು ಎಂಬುದನ್ನು ತಿಳಿದುಕೊಳ್ಳುವಂತಹ ಯಾವುದಾದರೂ ಸಂಗತಿ ಇದೆಯೇ?
- ಜಕ್ಕಾಯನು ನಂಬಿಕೆಗೆ ಬಂದಿರುವನು ಎಂಬುದನ್ನು ತೋರಿಸುವಂತೆ ಯೇಸು ಜಕ್ಕಾಯನ ಕುರಿತಾಗಿ ಹೇಳಿದ ಮಾತು ಯಾವುದು?
- ಈ ಕಥೆಯಲ್ಲಿ ನಂಬಿಕೆಗೆ ಬಂದ ಇನ್ನಿತರರು ಯಾರು ಎಂದು ಹೇಳಲಾಗಿದೆ?
- ಈ ಕಥೆಯನ್ನು ಆಧಾರಗೊಂಡು, ಯೇಸುವಿನ ಬಳಿಗೆ ಪ್ರವೇಶವನ್ನು ಹೊಂದಿ, ನಂಬಿಕೆಗೆ ಬಂದಿರುವಂತವರ ಮತ್ತು ಪ್ರವೇಶವನ್ನು ಹೊಂದಿದ್ದರೂ ಸಹ ನಂಬಿಕೆಗೆ ಬರದಂತವರ ನಡುವೆ ಇರುವ ವ್ಯತ್ಯಾಸದ ಕುರಿತಾಗಿ ನಿಮಗಿರುವ ಆಲೋಚನೆಗಳು ಯಾವುವು?

17. **ಆಅ –** ಕಥೆಯಲ್ಲಿ, ಯೇಸು ಜಕ್ಕಾಯನಿಗೆ, "ಈಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ನೇರವಾಗಿ ಹೇಳಿದನು. ನಂತರ ಯೇಸು ಮುಂದುವರೆಸುತ್ತಾ, "ಇವನು ಸಹ ಅಬ್ರಹಾಮನ ವಂಶಿಕನಲ್ಲವೇ" ಎಂದು ಹೇಳುತ್ತಾನೆ. ಇದರಿಂದ ಜಕ್ಕಾಯನ ಅಕ್ಕಪಕ್ಕದಲ್ಲಿ ಜನರಿದ್ದರು ಎಂಬುದನ್ನು ತೋರ್ಪಡಿಸುತ್ತದೆ. ಹಾಗೂ, ಯೇಸು ಹೇಳಿದ್ದರಿಂದ, ತಾನು ಯಾರೊಂದಿಗೆ ಮಾತನಾಡುತ್ತಿದ್ದನೋ ಅವನನ್ನು ಬದಲಾವಣೆ ಮಾಡುತ್ತಿದ್ದನು ಮತ್ತು ಯೇಸು ಈ ಜನರೊಂದಿಗೆ ಜಕ್ಕಾಯನ ಪರವಾಗಿ ಮಾತನಾಡುತ್ತಿದ್ದನು!

ಆಅನ್ವ – ಯೇಸು ಜಕ್ಕಾಯನೊಂದಿಗೆ ಕಾರ್ಯ ಮಾಡುತ್ತಿರುವುದನ್ನು ಮತ್ತು ಜಕ್ಕಾಯನು ಯೇಸುವಿನಲ್ಲಿ ನಂಬಿಕೆ ಇಡುವುದಕ್ಕೆ ಬದಲಾಗುತ್ತಿರುವುದನ್ನು ನಾವು ನೋಡುತ್ತೇವೆ. ಆದರೆ ಈ ಎಲ್ಲಾ ಸಮಯವು ವಿಮರ್ಶಿಸುವಂತಹ ಆ ಗುಂಪಿನ ಜನರು ಇದನ್ನು ನೋಡುತ್ತಲೇ ಇದ್ದರು. ಸ್ವ–ನೀತಿವಂತರೆಂದು ಭಾವಿಸಿದ್ದ ಈ ಗುಂಪಿನ ಜನರ ಬಳಿಗೆ ಯೇಸು ಬರುತ್ತಿದ್ದನು, ಹಾಗೂ ಅವರೂ ಸಹ ಹೊಂದಿಕೊಳ್ಳಬೇಕಾಗಿರುವವರು ಎಂಬುದನ್ನು ತಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿದ್ದನು ಮತ್ತು ಜಕ್ಕಾಯನು ದೇವರ ಗಮನಕ್ಕೆ ಬರುವುದರಲ್ಲಿ ಯೋಗ್ಯನು ಎಂಬುದನ್ನು ಕಾಣಲು ಅವರ ಮನಸ್ಸಿನ ಕಣ್ಣುಗಳನ್ನು ತೆರೆಯಲು ಪ್ರಯತ್ನಿಸುತ್ತಿದ್ದನು.

ಆಅನ್ವಪ್ರ–

- ಇಲ್ಲಿ ಒಬ್ಬ ವ್ಯಕ್ತಿಯಿರುವನು, ಇವನು ನಂಬಿಕೆಗೆ ಬಂದಿರುವುದನ್ನು ಯಾರೂ ಇಷ್ಟಪಡಲಿಲ್ಲ. ಮತ್ತು ಆಗ ಯೇಸು ಪ್ರಸಿದ್ಧನಾಗಿರದ ಈ ವ್ಯಕ್ತಿಯ ಪರವಾಗಿ ಸ್ವ–ನೀತಿವಂತಿಕೆಯ ಗುಂಪಿನೊಂದಿಗೆ ಮಾತನಾಡುತ್ತಾನೆ. ಈ ದಿನಗಳಲ್ಲಿ ಜನರ ಜೀವನಶೈಲಿ ಅಥವಾ ವೃತ್ತಿಯ ನಿಮಿತ್ತ ಬೇರೆಯವರಿಂದ ಅವರನ್ನು ಕೀಳಾಗಿ ನೋಡಲ್ಪಟ್ಟಿರುವ ಹಾಗೆ ಎಂದಾದರೂ ಸಂಭವಿಸಿದೆಯೇ?

- ಬೇರೆಯವರಿಂದ, ಅದರಲ್ಲೂ ವಿಶೇಷವಾಗಿ ಸ್ವ–ನೀತಿವಂತಿಕೆಯ ಜನರಿಂದ ಯಾವ ವಿಧವಾದ ಜನರು ಪಾಪಿಗಳೆಂಬುದಾಗಿ ಕೀಳಾಗಿ ನೋಡಲ್ಪಡಲಾಗುತ್ತದೆ?
- ಈ ರೀತಿಯ ಸಂಗತಿಯು ಸಂಭವಿಸುವುದನ್ನು ನೀವು ಎಂದಾದರೂ ನೋಡಿರುವಿರೇ?
- ನೀವು ಇದನ್ನು ನೋಡಿರುವುದಾದರೆ, ಸ್ವ–ನೀತಿವಂತಿಕೆಯ ಜನರು "ಪಾಪಿ ಜನರು" ಆತ್ಮೀಕ ಮಾರ್ಗದರ್ಶನವನ್ನು ಹುಡುಕಲು ಬಯಸಿದರೆ, ಅಂದರೆ ಯೇಸುವನ್ನು ಭೇಟಿಯಾಗಿ ಮಾತನಾಡುವಂತೆ ಬಯಸಿದರೇ?
- ಯೇಸು ಗುಂಪಿನ ಜನರಿಗೆ ಬಿಟ್ಟುಕೊಡಲಿಲ್ಲ. ಇದು ನಿಮಗೆ ಯಾವ ಅರ್ಥವನ್ನು ಕೊಡುತ್ತದೆ?

18. **ಆಅ –** ಯೇಸು ತಾನು ಬಂದಿರುವುದರ ಉದ್ದೇಶ "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ" ಎಂಬ ಹೇಳಿಕೆಯು, ಒಂದು ಸಾರಾಂಶದ ಹೇಳಿಕೆಯಾಗಿದ್ದು, ಇದು ಜಕ್ಕಾಯನಿಗೆ ಗೌರವವನ್ನು ತಂದದ್ದು ಮಾತ್ರವಲ್ಲದೆ ಗುಂಪಿನವರಿಗೆ ಒಂದು ಟೀಕೆಯಂತೆಯೂ ಸಹ ತೋರುತ್ತಿತ್ತು.

ಆಅನ್ವ – ನಮಗೆ ದೇವರಿಂದ ಮೆಚ್ಚುಗೆ ಬೇಕಿದ್ದರೆ, ನಾವು ಕಳೆದುಹೋಗಿರುವುದರ ಮತ್ತು ಪಾಪಗಳ ಕುರಿತಾಗಿ ಒಪ್ಪಿಕೊಳ್ಳುವ ಅಗತ್ಯವಿದೆ ಮತ್ತು ದೇವರು ನಮ್ಮನ್ನು ರಕ್ಷಿಸುವುದಕ್ಕೆ ಅನುಮತಿಸಬೇಕು.

ಆಅನ್ವಪ್ರ–

- ಕಥೆಯ ಕೊನೆಯ ಭಾಗದಲ್ಲಿ ಯೇಸು ಹೇಳಿದ ಕಡೆಯ ಮಾತುಗಳಲ್ಲಿ ದೇವರು ಇಂದು ನಮ್ಮಿಂದ ಏನನ್ನು ಬಯಸುತ್ತಾನೆ ಎಂಬುದನ್ನು ತೋರಿಸುತ್ತದೆ?
- ಲೋಕದಲ್ಲಿರುವ ಎಷ್ಟು ಮಂದಿ ಆ ಗುರಿಯನ್ನು ತಲುಪುವುದಕ್ಕೆ ಸಮರ್ಥರಾಗಿರುವರು?
- ನಾವು ಕಳೆದುಹೋಗಿರುವುದನ್ನು ಮತ್ತು ನಮ್ಮ ಪಾಪವನ್ನು ಒಪ್ಪಿಕೊಳ್ಳುವುದು ಕಷ್ಟವಾದ ಕೆಲಸವಾಗಿದೆಯೇ ಅಥವಾ ಸುಲಭವಾಗಿದೆಯೇ?
- ಕೆಲವರು ಕೇಳಿಸಿಕೊಳ್ಳುತ್ತಾರೆ ಮತ್ತು ಯೇಸುವಿನಲ್ಲಿ ನಂಬಿಕೆಯನ್ನು ಇಡುವುದಿಲ್ಲ, ಇದು ಏಕೆ ಎಂದು ತೋರಿಸುವಂತಹ ಈ ಕಥೆಯಿಂದ ನಾವು ಏನನ್ನು ಕಲಿಯುತ್ತೇವೆ?
- ಈ ಕಥೆಯು ನಿಮಗೆ ಏನನ್ನು ಮಾತನಾಡುತ್ತದೆ?

ಸಿ : ಬಳಕೆದಾರರ ಪರಿಣಾಮದ ವರದಿ: ತರಬೇತಿ ಕೊಡುವುದು ಮತ್ತು ವೃದ್ಧಿಗೊಳಿಸುವುದು

"ನಾನು ಅನಕ್ಷರಸ್ಥ ಆದರೆ ಸಭಾಪಾಲಕನಾಗಿ ಮತ್ತು ಸುವಾರ್ತಿಕನಾಗಿ ಕಳೆದ 5 ವರ್ಷಗಳಿಂದ ಕರ್ತನ ಸೇವೆಯನ್ನು ಮಾಡುತ್ತಿರುವೆನು. 1993ರಲ್ಲಿ ನಾನು ಕರ್ತನ ಬಳಿಗೆ ಬಂದೆನು ಮತ್ತು ನಾನು ಕರ್ತನ ಸೇವೆಯನ್ನು ಮಾಡಲು ಹಾಗೂ ಸತ್ಯವೇದದ ಕಾಲೇಜಿನಲ್ಲಿ ಸತ್ಯವೇದದ ಜ್ಞಾನವನ್ನು ಪಡೆಯಬೇಕೆಂದು ಬಯಸುತ್ತಿದ್ದೆನು, ಆದರೆ ಶೈಕ್ಷಣೀಕ ಸತ್ಯವೇದದ ಕಾಲೇಜುಗಳು ನನಗೆ ಸತ್ಯವೇದದ ತರಬೇತಿಯನ್ನು ಕೊಡಲು ಒಪ್ಪಿಕೊಳ್ಳಲಿಲ್ಲ ಏಕೆಂದರೆ ನಾನು ಅನಕ್ಷರಸ್ಥನಾಗಿದ್ದೆನು ಹಾಗೂ ವೇದಿಕೆಯ ಮೇಲಿಂದ ಹೇಳಲಾಗುತ್ತಿದ್ದ ದೇವರ ಸಂದೇಶಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಏಕೆಂದರೆ ಅವು ಅಕ್ಷರಸ್ಥರಿಗೆ ಹೇಳಲ್ಪಡುವ ಶೈಲಿಯಲ್ಲಿರುತ್ತಿದ್ದವು.

"ನಾನು ನನ್ನ ಕುಟುಂಬಕ್ಕೆ ಮತ್ತು ನನ್ನ ಸ್ನೇಹಿತರಿಗೆ ಸುವಾರ್ತೆಯನ್ನು ಹಂಚಿಕೊಳ್ಳಲು ಕಷ್ಟಪಡುತ್ತಿದ್ದೆ; ಈ ಪರಿಸ್ಥಿತಿಯಲ್ಲಿ ದೇವರು *ಕಥೆ* ಮಾತ್ರವನ್ನು ನಮ್ಮ ಜೀವಿತದೊಳಗೆ ಮತ್ತು ಸೇವೆಯೊಳಗೆ ತಂದನು, ಇದಕ್ಕಾಗಿ ನಾನು ದೇವರಿಗೆ ವಂದಿಸುತ್ತೇನೆ. ನಾನು *ಕಥೆ* ಮಾತ್ರದ ವಿಧಾನದ ಮೂಲಕ 155 ಕಥೆಗಳನ್ನು ಕಲಿತುಕೊಂಡೆನು ಮತ್ತು ಈಗ ನಾನು ಅಕ್ಷರಸ್ಥರಿಗೆ ಹಾಗೂ ಅನಕ್ಷರಸ್ಥರಿಗೆ ಸುವಾರ್ತೆಯನ್ನು ಸಾರಬಲ್ಲೆನೆಂದು ಹೇಳಲು ಸಂತೋಷಿಸುತ್ತೇನೆ."

ವೈ. ಬಾಬು – ಸುವಾರ್ತಿಕರು/ಸಭಾಪಾಲಕರು ಎಂ ಎಂ ಬಿ ಸಿ ಕರ್ನಾಟಕ, ಭಾರತ

"ಯಾವುದೇ ಸಂಸ್ಕೃತಿಯ, ಯಾವುದೇ ವಯಸ್ಸಿನ, ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳ ಜನರ ಒಂದು ಗುಂಪು, ಸಕ್ರಿಯವಾಗಿ ತೊಡಗಿಸಿಕೊಂಡು, ದೇವರ ವಾಕ್ಯದಲ್ಲಿ ಕಂಡುಬರುವ ನಿಧಿಗಳನ್ನು ಶೋಧಿಸುವುದನ್ನು ಮತ್ತು ಹುಡುಕುವುದನ್ನು ಊಹಿಸಿಕೊಳ್ಳಿ. ಈಗ ಒಂದು *ಕಥೆ* ಮಾತ್ರದ ಅಧ್ಯಯನದ ಗುಂಪಿನಲ್ಲಿ ಸಾಮಾನ್ಯವಾಗಿ ಏನು ಸಂಭವಿಸುತ್ತದೆ ಎಂದು ನೀವು ತಟ್ಟನೆ ತಿಳಿದುಕೊಳ್ಳಬಲ್ಲಿರಿ.

"ನಾವು *ಕಥೆ* ಮಾತ್ರವನ್ನು ಸೇವೆಯ ಕ್ಷೇತ್ರದಲ್ಲಿ, ಹಿರಿಯರ ಮನೆ ಸತ್ಯವೇದದ ಅಧ್ಯಯನಗಳಲ್ಲಿ ಮತ್ತು ನಮ್ಮ ಮಕ್ಕಳ ಹಾಗೂ ಯೌವನಸ್ಥರ ಸೇವೆಗಳಲ್ಲಿ ಅಳವಡಿಸಿಕೊಂಡಿದ್ದೇವೆ. *ಕಥೆ* ಮಾತ್ರದ ಅಂಶವು ನನ್ನ ಸಂದೇಶಗಳಲ್ಲಿ ಪ್ರಭಾವ ಬೀರಿದೆ."

ಪಾಸ್ಟರ್ ಕ್ರಿಸ್ ಜಾನ್‌ಸನ್–ಕ್ಯಾಲ್ವರಿ ಚ್ಯಾಪಲ್, ಯು.ಎಸ್.ಎ.

"ನಮ್ಮ ಸಮಯದಲ್ಲಿ ಮತ್ತು ಯುಗದಲ್ಲಿ ಮಹಾ ಆಜ್ಞೆಯ ನೆರವೇರುವಿಕೆಗಾಗಿ ಸಂಪೂರ್ಣ ಸಭೆಗೆ *ಕಥೆ* ಮಾತ್ರವು ದೇವರಿಂದ ಕೊಡಲ್ಪಟ್ಟಿರುವ ಒಂದು ಕೌಶಲವಾಗಿದೆ. ಅನೇಕ ವರ್ಷಗಳಿಂದ ನಾವು ದೇವರ ವಾಕ್ಯವನ್ನು ತೆರೆಯುವುದರ ಒಂದೇ ಮಾರ್ಗದಲ್ಲಿ ಉಳಿದಿದ್ದರೂ ಸಹ (ನಿರೂಪಣಾತ್ಮಕ ಪ್ರಸಂಗ), ನಾವು ಇದರ ಕೆಲವು ಮಿತಿಗಳನ್ನು ಮಾತ್ರ ನೋಡಿರುವೆವು.

"ಈ ಕೈಪಿಡಿಯ ಮೂಲಕ *ಕಥೆ* ಮಾತ್ರವನ್ನು ಕಲಿತುಕೊಂಡ ನಂತರ ಈಗ, ಶಿಷ್ಯರನ್ನು ಮಾಡುವುದಕ್ಕೆ ಇಲ್ಲಿ ಮತ್ತೊಂದು ಉತ್ತಮವಾದ ಮಾರ್ಗವಿದೆ ಎಂಬುದನ್ನು ನಾನು ಧೈರ್ಯವಾಗಿ ಹೇಳುತ್ತೇನೆ. *ಕಥೆ* ಮಾತ್ರವು ನಾನು ಲೋಕವನ್ನು ನೋಡುವ ರೀತಿಯನ್ನು ಬದಲಾಯಿಸಿತು ಮತ್ತು ವಾಕ್ಯಗಳನ್ನು ನಾನು ಆಳವಾಗಿ ನೋಡುವಂತೆ ನನ್ನ ಕಣ್ಣುಗಳನ್ನು ತೆರೆಯಿತು. ಅನಕ್ಷರತೆಯು ಹೆಚ್ಚಾಗಿರುವ ನನ್ನ ದೇಶವಾದ ದಕ್ಷಿಣ ಸೂಡಾನ್‌ನಲ್ಲಿ *ಕಥೆ* ಮಾತ್ರದ ಪ್ರಾಮುಖ್ಯತೆಯನ್ನು ನಾನು ನೋಡಿದರೂ ಸಹ, ವಿದ್ಯೆ ಕಲಿತಿರುವ ನನ್ನಂತಹ ಜನರಿಗೂ ಸಹ ಇದರ ಪರಿಣಾಮವನ್ನು ಕಾಣುತ್ತಿರುವೆನು.

"ಲೋಕದೆಲ್ಲೆಡೆ ಇರುವ ಎಲ್ಲಾ ಕ್ರೈಸ್ತ ನಾಯಕರಿಗೆ ಈ ಸಂಪನ್ಮೂಲವನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುತ್ತೇನೆ. *ಕಥೆ* ಮಾತ್ರವು ತನ್ನ ಈ ತರಬೇತಿಯನ್ನು ಬಹುದೂರದವರೆಗೆ ಮತ್ತು ಎಲ್ಲೆಡೆ ಅಧಿಕವಾಗಿ ಒಯ್ಯಬೇಕೆಂದು ನಾನು ಪ್ರಾರ್ಥಿಸುತ್ತೇನೆ. ದೃಢೀಕರಿಸಲ್ಪಟ್ಟ ತರಬೇತುಗಾರರ ಮೂಲಕ ತರಬೇತಿಯನ್ನು ಸತತವಾಗಿ ಮುಂದುವರೆಸುವುದಕ್ಕೆ ಈ ಕೈಪಿಡಿಯು ನಿಮ್ಮ ಉತ್ತಮವಾದ ಪ್ರಾರಂಭದ ಅಂಶವಾಗಿದೆ."

ರೆ. ಡ್ಯಾನಿಯೆಲ್ ಚಗೈ ಗಾಕ್ ಆ್ಯಂಗ್ಲಿಕನ್ ಚರ್ಚ್ ಆಫ್ ಸೂಡಾನ್

"ನಾನು ಫುಲ್ಲರ್ ಥಿಯಾಲಾಜಿಕಲ್ ಸೆಮಿನರಿಯಿಂದ ಪಿ.ಹೆಚ್‌ಡಿ. ಪಡೆದಿರುವ ಒಬ್ಬ ಪಂಡಿತನೂ ಮತ್ತು ದೈವಶಾಸ್ತ್ರಜ್ಞನೂ ಆಗಿರುವೆನು ಮತ್ತು ಅನೇಕ ವರ್ಷಗಳವರೆಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಹೊಂದಿರುವ ಜನರೊಂದಿಗೆ ಕೆಲಸವನ್ನು ಮಾಡಿರುವೆನು. ಆದರೆ ಈ ಆಧುನಿಕ ಪಾಶ್ಚಾತ್ಯ ವಿದ್ಯಾಭ್ಯಾಸದ ವಿಧಾನವು ನನ್ನನ್ನು ವಿಶ್ಲೇಷಕವಾದ, ಹೇಳಿಕೆಗೆ ಸಂಬಂಧಪಟ್ಟ, ಭಾಷಣದಂತಹ ಸಂಗತಿಗಳಲ್ಲಿ ಎಷ್ಟು ನಿಷೇಧವನ್ನು ಹೇರಿತ್ತು ಎಂಬುದರ ಕುರಿತಾಗಿ ನನಗೆ ಸಂಪೂರ್ಣವಾದ ಅರಿವಿತ್ತು.

"ಡೊರೊಥಿ ಮತ್ತು ಆಕೆ ನಡೆಸುವ ಬೆಳೆಯುತ್ತಿರುವಂತಹ ಚಲನೆಯು ಸ್ಥಾಪಿಸಿರುವಂತಹ *ಕಥೆ* ಮಾತ್ರದ ನಿರೂಪಣೆಯ ಚೈತನ್ಯದ ಮೂಲಕ, ಶ್ರೇಷ್ಠ ಬೋಧಕನಾದ ಯೇಸುವು ಬೋಧಿಸುವುದಕ್ಕೆ ಹಾಗೂ ಆತನ ಸಮಯದಲ್ಲಿ ಹೆಚ್ಚು ವಿದ್ಯಾವಂತರಾಗಿದ್ದ ಟೋರಾ ಪಂಡಿತರೊಂದಿಗೂ ಸಹ ಬೋಧಿಸುವುದಕ್ಕೆ ಕಥೆಗಳನ್ನು ಉಪಯೋಗಿಸುತ್ತಿದ್ದನು ಎಂಬ ವಾಸ್ತವಕ್ಕೆ ನಾನು ಪುನಃ ಜಾಗೃತಗೊಂಡೆನು. ಕಥೆ ಹೇಳುವವರ ತೊಡಗಿಸಿಕೊಳ್ಳುವವನಾಗಿ, *ಕಥೆ* ಮಾತ್ರವು ನನ್ನ ಸೇವೆಯನ್ನು ಯೆಹೂದ್ಯ ಜನರ ಬಳಿಗೂ ಹೋಗುವಂತೆ ಮಾರ್ಪಡಿಸಿತು.

"ನಾನು ಪುನಃ ಕಲಿತುಕೊಳ್ಳುವುದಕ್ಕೆ ಮತ್ತು ಹಳಸಲಾದ ಮಾನಸಿಕ ಕಾರ್ಯವಿಧಾನದಿಂದ ಹೊರಬರುವುದಕ್ಕೆ, ಹಾಗೂ ವಾಕ್ಯವನ್ನು ಜೀವಕ್ಕೆ ತರುವುದಕ್ಕೆ, ಇದನ್ನು ಪರಿಣಾಮಕಾರಿಯಾಗಿ ಬೇರೆಯವರಿಗೆ ಕೊಡುವುದಕ್ಕೆ ನಾನು ನಿಜವಾಗಿಯೂ ಬದಲಾವಣೆಯನ್ನು ಮಾಡಿಕೊಳ್ಳುವ ಅಗತ್ಯವಿತ್ತು.

"*ಕಥೆ* ಮಾತ್ರವು ಆಧುನಿಕೋತ್ತರ ಪಶ್ಚಿಮದಲ್ಲಿ ಕಥೆ ಹೇಳುವುದನ್ನು ತಿರುಗಿ ಗಳಿಸುವುದರ ಕ್ರಿಯೆಯ ವೇಗಕ್ಕೆ ಹಾಗೂ ಲೋಕದ ಇನ್ನಿತರ ಭಾಗಗಳಲ್ಲಿ ಮೌಖಿಕ ಕಲಿಕೆಗಾರರ ನಡುವೆ ಸಭೆಯ ಬೆಳವಣಿಗೆಗೆ ಸಹಾಯ ಮಾಡುತ್ತಿದೆ. ಪ್ರತಿ ವೃತ್ತಿಪರ ಬೋಧಕರು ಕಥೆಯ ಬಲ ಮತ್ತು ಸತ್ಯವೇದದ ಕಥೆ ಹೇಳುವಿಕೆಯ ಮೂಲಕ ಆತನ ಅಥವಾ ಆಕೆಯ ಕರೆಯುವಿಕೆಯ ಮಹತ್ತರವಾದ ಹೆಚ್ಚುವರಿಯನ್ನು ಕಂಡುಕೊಳ್ಳುವರು. ಆ ಗುರಿಯನ್ನು ತಲುಪುವುದಕ್ಕೆ *ಕಥೆ* ಮಾತ್ರವು ಒಂದು ಮಾರ್ಗವಾಗಿದೆ ಎಂದು ನಾನು ಬಹಳವಾಗಿ ಶಿಫಾರಸು ಮಾಡುತ್ತೇನೆ.

ಬಿಲ್ ಜೋರಾಕರ್, ಪಿ.ಹೆಚ್‌ಡಿ ಪ್ರೊಫೆಸರ್ ಆಫ್ ಜೂಡಿಯೋ–ಕ್ರಿಶ್ಚಿಯನ್ ಸ್ಟಡೀಸ್,
ವಿಲಿಯಮ್ ಕೇರೀ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ, ಯು.ಎಸ್.ಎ.

"ಅನೇಕ ಕ್ರೈಸ್ತ ಜನರು ಸಾಮಾಜಿಕ ನ್ಯಾಯದ ಅವಕಾಶಗಳ ವೈವಿಧ್ಯತೆಯ ಬೆನ್ನು ಹಿಡಿರುವಾಗ, ಲೋಕವು ನಿಜವಾದ ನೀತಿವಂತಿಕೆಗಾಗಿ ಹಸಿವಿನಿಂದ ಮತ್ತು ಬಾಯಾರಿಕೆಯಿಂದ ಹಾಗೆಯೇ ಉಳಿದಿದೆ. ಆ ಹಸಿವು ಮತ್ತು ಬಾಯಾರಿಕೆಯು ದೇವರ ವಾಕ್ಯ – ಯೇಸು ಕ್ರಿಸ್ತನಿಂದ ಮಾತ್ರ ತೃಪ್ತಿ ಹೊಂದಬಹುದಾಗಿದೆ.

"*ಕಥೆ* ಮಾತ್ರದ ಆಳವಾದ ಶಿಷ್ಯತ್ವದ ನಿರೂಪಣೆಯು ಶ್ರೇಷ್ಠತೆಯ ಮೂಲಕ ಯೇಸುವಿನ ಅದ್ಭುತವನ್ನು ಮತ್ತು ಆಶ್ಚರ್ಯವನ್ನು ತರುವಂತಹುದಾಗಿದೆ.

"ನಾವು *ಕಥೆ* ಮಾತ್ರವನ್ನು ನಮ್ಮ ಮೊಮ್ಮಕ್ಕಳಿಗಾಗಿ ಒಂದು ಧ್ಯಾನದ ಮಾರ್ಗದರ್ಶನವಾಗಿ ಉಪಯೋಗಿಸುತ್ತೇವೆ. ನಮ್ಮ ಸಭೆಯ ಎಲ್ಲಾ ಸಭಾಪಾಲಕರುಗಳು *ಕಥೆ* ಮಾತ್ರದಲ್ಲಿ ತರಬೇತಿಯನ್ನು ಹೊಂದಿರುವರು ಮತ್ತು ಈಗ ಇದನ್ನು ಚಿಕ್ಕ ಗುಂಪಿನ ಯೌವನಸ್ಥರ ಬೋಧನೆಗೆ ಉಪಯೋಗಿಸುತ್ತಾರೆ. ಸೇವೆಯಲ್ಲಿರುವ ನಮ್ಮ ಸಭಾಪಾಲಕರು ಮತ್ತು ಕಮಿಟಿಯು

ಆಫ್ರಿಕಾದಲ್ಲಿರುವ *ಕಥೆ* ಮಾತ್ರದ ಕಾರ್ಯಕ್ರಮಗಳ ಮತ್ತು ಮೌಖಿಕ ಸತ್ಯವೇದ ಶಾಲೆಗಳ ಅಭಿವೃದ್ಧಿಗಾಗಿ ಹಣ ಸಹಾಯವನ್ನು ಒದಗಿಸುವ ಪುನರ್ನಿರ್ದೇಶನಕ್ಕೆ ಸಮರ್ಪಿಸಿಕೊಂಡಿದೆ.

ಈ ಅನುಗಮದ ಸತ್ಯವೇದ ಅಧ್ಯಯನವು ಸುವಾರ್ತೆ ಸಾರುವುದಕ್ಕೆ ಮತ್ತು ಶಿಷ್ಯತ್ವದ ವಿಧಾನದ ಅವಕಾಶಗಳನ್ನು ಹೇಳುವುದಕ್ಕೆ ಉಪಯೋಗಿಸುವ, ಬೆಳೆಯುವುದಕ್ಕೆ ಮುಂದುವರೆಯುವಂತಹುದಾಗಿದೆ. ಈಗ ನಾವು ಅಮೇರಿಕದ ಒಳಗಿನ ಪಟ್ಟಣದೊಳಗೆ ಕರೆಯಲ್ಪಟ್ಟವರಾಗಿದ್ದೇವೆ, ಇಲ್ಲಿ ನಿರಾಶಾದಾಯಕವು ಆವೃತವಾಗಿದೆ ಏಕೆಂದರೆ ಸುಳ್ಳ ರಕ್ಷಕರು ಮತ್ತು ಸುಳ್ಳು ಸುವಾರ್ತೆಯ ನಿಮಿತ್ತ ಕ್ಷೇಮಾಭಿವೃದ್ಧಿ ಮತ್ತು ಇನ್ನಿತರ ಮಾನವ ಕೇಂದ್ರೀಕೃತವಾದ ಸುಳ್ಳುಬೋಧಕರ ಮರೆಯಲಾಗದ ಕಾರ್ಯಗಳಿವೆ. ನಿಜವಾದ ಸುವಾರ್ತೆಯು ನಿರೀಕ್ಷೆಯನ್ನೇ ಕೊಡುವಂತಹುದಾಗಿದೆ. ನಮ್ಮ ಕರ್ತನ ಬೋಧನೆಯ ಶೈಲಿಯ ಜ್ಞಾನದ ನಿಮಿತ್ತ, *ಕಥೆ* ಮಾತ್ರದೊಂದಿಗೆ ಒಂದು ಮುರಿಯಲ್ಪಟ್ಟ ಸಂಸ್ಕೃತಿಗೆ ವಿವೇಚನೆಯನ್ನು ಮತ್ತು ಪುನರ್‌ಸ್ಥಾಪನೆಯನ್ನು ತರುವುದಕ್ಕೆ ಕರ್ತನು ಉಪಯೋಗಿಸುವನು ಎಂದು ನಾವು ನಂಬುವ ಒಂದು 'ಪ್ಯಾಕೆಜ್' ನಮ್ಮ ಬಳಿ ಇದೆ."

ಮಾರ್ಕ್ ಸ್ಯಾಂಡ್ಸ್ ಬಿಲ್ಡರ್ ಫೌಂಡೇಶನ್ – ಪ್ರೆಸಿಡೆಂಟ್, ಗ್ಲೋಬಲ್

ತರಬೇತಿ ಕೊಡುವುದು ಮತ್ತು ಅಧಿಕ ಗೊಳಿಸುವುದು

ಈ ಮೊದಲ ಮೂರು ಸಾಕ್ಷಿಗಳು *ಕಥೆ* ಮಾತ್ರದ ತರಬೇತಿಯ ಕಾರ್ಯನಿರ್ವಾಹಕ ಸಿಬ್ಬಂದಿಯ ಆಳವಾದ ತರಬೇತಿಗೊಳಗಾದ ವ್ಯಕ್ತಿಗಳಾಗಿರುವರು. ತರಬೇತಿಯನ್ನು ಹೊಂದಿದವರು ಬೇರೆಯವರಿಗೆ ತರಬೇತಿಯನ್ನು ಕೊಟ್ಟರು – ಇನ್ನಿತರರಿಗೆ ತರಬೇತಿಯನ್ನು ಕೊಡುತ್ತಿರುವರು. ಇದು ದೇವರ ಮಾರ್ಗವೇ ಅಲ್ಲವೇ?

ಎಂಬು ಎಂಬ ಸ್ಥಳದಲ್ಲಿ ಒಬ್ಬ ಬಿಶಪ್ ಎದ್ದು ನಿಂತು ನನಗೆ ಹೀಗೆ ಹೇಳಿದರು. "ಸಭೆಯು ತೊಂದರೆಯಲ್ಲಿದೆ, ಏಕೆಂದರೆ ಸತ್ಯವೇದಕ್ಕನುಗುಣವಾಗಿರುವ ಸಭೆಯ ತಂದೆಯರ ಕೊರತೆ ನಮಗಿದೆ... ನಿಮಗೆ ತರಬೇತಿ ಕೊಟ್ಟವರಿಗೆ, 'ಬಿಷಪ್‌ಗಳಿಗೆ ಒಬ್ಬ ತಂದೆಯಾಗಿ ಬ್ರಾಮುಯಲ್‌ರನ್ನು ಬಲಪಡಿಸಿದ್ದಕ್ಕಾಗಿ ವಂದನೆಗಳು' ಎಂದು ಹೇಳಿರಿ..."

ಬ್ರಾಮುಯಲ್ ಮುಸ್ಯ – ಸಿಇಒ ಸ್ಪ್ರೌಟ್ ಪಾತ್ ರಿಸಾರ್ಸಸ್, ಕೀನ್ಯಾ

ನಾವು ಮೊದಲಿಗಿಂತಲೂ ಅಧಿಕವಾಗಿ ಆತ್ಮೀಕ ನಾಯಕರುಗಳಿಗೆ ತರಬೇತಿ ಕೊಡುವುದಕ್ಕೆ *ಕಥೆ* ಮಾತ್ರದ ವಿಧಾನವು ನಮಗೆ ಸಹಾಯವನ್ನು ಮಾಡಿದೆ ಮತ್ತು ಆತ್ಮೀಕ ನಾಯಕರುಗಳನ್ನು ಉತ್ಪತ್ತಿ ಮಾಡುವುದರಲ್ಲಿ ಹಾಗೂ ಅವರನ್ನು ಸಭೆಯಲ್ಲಿ ಇಡುವುದಕ್ಕೂ ಮತ್ತು ಸೇವೆಯ ಸ್ಥಳಗಳಿಗೆ ಕಳುಹಿಸುವುದರಲ್ಲಿ ವೃದ್ಧಿಯಾಗುತ್ತಿದೆ. ಆತನ ವಾಕ್ಯವು ಅಕ್ಷರಸ್ಥರಿಗೂ ಹಾಗೂ ಅನಕ್ಷರಸ್ಥರಿಗೂ, ಕಿರಿಯರಿಗೂ ಹಾಗೂ ಹಿರಿಯರಿಗೂ ಇರುವಂತಹುದಾಗಿದೆ. ನಮ್ಮ ತ್ರೈಯೇಕತ್ವದ ದೇವರೊಂದಿಗೆ ಅನ್ಯೋನ್ಯತೆಯಿಂದಿರುವುದಕ್ಕೆ ಇದು ಒಂದು ಸಂಪೂರ್ಣವಾದ ಆತ್ಮೀಕ ಆಹಾರವಾಗಿದೆ.

ರೆ. ಡಾ. ಎಸ್ ಮಾರ್ಕ್ ಮುನಿಯಪ್ಪ – ಆಲ್ ಇಂಡಿಯಾ ಕೌನ್ಸಿಲ್/ಟಿ ಜಿ ಎಸ್ ಪಿ–ಭಾರತ

ನಿಮ್ಮೆಲ್ಲರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ನಾನು ಯಾವ ಪದಗಳನ್ನು ಉಪಯೋಗಿಸಲಿ? ನಾನು ಕರ್ತನಿಗೆ ಹಾಗೂ ಈ *ಕಥೆ* ಮಾತ್ರದ ಸಾಧನಕ್ಕೆ ಬಹಳವಾಗಿ ಕೃತಜ್ಞತೆಯನ್ನು ಸಲ್ಲಿಸುವವನಾಗಿರುವೆನು. ನನ್ನ 20 ವರ್ಷಗಳ ಸೇವೆಯ ಅವಧಿಯಲ್ಲಿ, ನನಗೆ ತಿಳಿದಿರುವ ಎಲ್ಲವುಗಳಿಗಿಂತಲೂ ಇದು ಬಹಳ ಉಪಯೋಗವುಳ್ಳದ್ದಾಗಿದೆ. ನಾನು ದೇವರ ವಾಕ್ಯದಲ್ಲಿ ಆಳವಾಗಿ ಮತ್ತು ಯಥೇಚ್ಛವಾಗಿ ಹೋಗುವುದಕ್ಕೆ *ಕಥೆ* ಮಾತ್ರವು ನಿಶ್ಚಯವಾಗಿಯೂ ನನಗೆ ಸಹಾಯ ಮಾಡಿದೆ ಆದರೆ ನನ್ನ ವ್ಯವಸ್ಥಿತ ಜೀವನದಲ್ಲಿ ಇದರ ಅನೇಕ ಅನ್ವಯಿಸುವಿಕೆಗಳೂ ಸಹ ಇವೆ. ನಾನು ಯಾವುದೇ ನಿರ್ಧಾರವನ್ನು ಮಾಡುವುದಕ್ಕೂ ಮುನ್ನ ನಾನು ಆಯ್ಕೆಗಳಿಗಾಗಿ ಎದುರು ನೋಡಬೇಕು ಎಂಬುದನ್ನು ಇದರಿಂದ ಕಲಿತ ಪಾಠವಾಗಿದೆ ಮತ್ತು ನಮ್ಮ ಕೆಲಸದ ಪರಿಣಾಮವನ್ನು ನೋಡುವುದಕ್ಕೆ ಇದು ನನ್ನ ತಂಡಕ್ಕೆ ದೂರದೃಷ್ಟಿಯನ್ನು ಹೊಂದುವಂತೆಯೂ ಮಾಡಿತು.

ರಮೇಶ್ ಸಪ್ಕೋಟೆ–ಸಿಇಒ ಕಿಂಗ್‌ಡಮ್ ಇನ್ವೆಸ್ಟಮೆಂಟ್ಸ್ ನೇಪಾಳ್
ಆರ್ಗನೈಸೇಷನ್ ಫೈಟಿಂಫ್ ಅಗೇನ್‌ಸ್ಟ ಹ್ಯೂಮನ್ ಟ್ರಾ ಫಿಕಿಂಗ್

ಮೊಟ್ಟ ಮೊದಲಿಗೆ ನಾನು ಎಲ್ಲಾ ಮಹಿಮೆಯನ್ನು ಮತ್ತು ಹೃದಯಪೂರ್ವಕವಾಗಿ ಕೃತಜ್ಞತೆಯನ್ನು ನಮ್ಮ ಸರ್ವಶಕ್ತ ಕರ್ತನಾದ ಕ್ರಿಸ್ತ ಯೇಸುವಿಗೆ ಹಾಗೂ ನನ್ನ ಸಹ–ಪ್ರಾರ್ಥನಾ ಭಾಗಿ ಹಿರಿಯ ಸಹೋದರ ರಮೇಶ್‌ಗೆ ಸಲ್ಲಿಸಲು ಬಯಸುವೆನು.

Ïನಾನು ಅವರನ್ನು ಭೇಟಿಯಾದಾಗ ಕ್ರಿಸ್ತನಲ್ಲಿ ಹೊಸಬನಾಗಿದ್ದೆನು ಮತ್ತು ನನ್ನ ಸೇವೆಯು ಆಗ ತಾನೇ ಹುಟ್ಟಿದ ಶಿಶುವಿನ ಹಾಗಿತ್ತು. ನನ್ನನ್ನು ಪೋಷಿಸಿ ಮುಂದುವರೆಸುವ ಸಲುವಾಗಿ ನನಗೆ ಆತ್ಮೀಕ ತಾಯಿಯ ಅಗತ್ಯವಿತ್ತು. ರಮೇಶ್‌ರವರು ನನಗೆ *ಕಫೆ* ಮಾತ್ರದ ತರಬೇತಿಯನ್ನು ನೀಡಿದರು. ಇದು ಆರಂಭವಾಗಿತ್ತು. ಆ ಸಮಯದಲ್ಲಿ ಕ್ರಿಸ್ತನಲ್ಲಿ ನಾವು ಬಹಳ ಸ್ವಲ್ಪ ಮಂದಿ ಮಾತ್ರ ಇದ್ದೆವು ಮತ್ತು ನಮ್ಮಲ್ಲಿ ಒಂದು ಅನ್ಯೋನ್ಯತೆಯಿತ್ತು ಆದರೆ ಅದು ಬಹಳ ಬಲಹೀನವಾಗಿತ್ತು. ಆತನು ನನ್ನ ಸಭೆಯಲ್ಲಿ *ಕಫೆ* ಮಾತ್ರವನ್ನು ಮುಂದುವರೆಸಿದರು.

ಈಗ ಬಹಳ ಅಲ್ಪಾವಧಿಯಲ್ಲಿಯೇ *ಕಫೆ* ಮಾತ್ರದ ತರಬೇತಿಯ ಮುಖಾಂತರ ಎಂಟು ಸಭೆಗಳನ್ನು ಸ್ಥಾಪಿಸುವುದಕ್ಕೆ ದೇವರು ಉಪಯೋಗಿಸಿದನು ಮತ್ತು ಈ ವರ್ಷ ಎರಡು ಸಭೆಗಳನ್ನು ಸ್ಥಾಪಿಸುವುದಕ್ಕೆ ನಾವು ಯೋಜನೆಯನ್ನು ಹೊಂದಿರುವೆವು.

ನಾನು *ಕಫೆ* ಮಾತ್ರವನ್ನು ಸಭೆಯನ್ನು ವೃದ್ಧಿಗೊಳಿಸುವುದಕ್ಕೆ ಉಪಯೋಗಿಸಿದೆನು, ಇದರ ನಿಮಿತ್ತ ಅದ್ಭುತವಾಗಿ ನಾನು *ಕಫೆ* ಮಾತ್ರದ ತರಬೇತಿಯಲ್ಲಿ ಭಾಗವಹಿಸುವುದಕ್ಕೆ ಆಹ್ವಾನವನ್ನು ಪಡೆದೆನು, ಅಲ್ಲದೆ ನನಗಿಂತಲೂ ಉತ್ತಮವಾಗಿ *ಕಫೆ* ಮಾತ್ರವನ್ನು ಉಪಯೋಗಿಸುತ್ತಿರುವ ನನ್ನ ಸಭೆಯ ನಾಯಕನೂ ಈ ಅವಕಾಶವನ್ನು ಪಡೆದನು.

ಸಹೋದರ ರಮೇಶ್‌ರವರೇ ನಿಮಗೆ ಧನ್ಯವಾದಗಳು, ನಾನು ಚಿಟ್ಟೆಯ ಒಂದು ದೇಹವಾಗಿದ್ದೆ, ಈಗ ನಾನು ಸಂಪೂರ್ಣವಾದ ಚಿಟ್ಟೆಯಾಗುವುದಕ್ಕೆ ನೀವು ನನ್ನನ್ನು ಸಿದ್ಧಪಡಿಸುತ್ತಿರುವಿರಿ!

ಕರ್ತನ ನಾಮವನ್ನು ಮಹಿಮೆ ಪಡಿಸುವುದಕ್ಕೆ ಮತ್ತು ನನ್ನನ್ನು ಹಾಗೂ ನನ್ನ ಸೇವೆಯನ್ನು ಆಶೀರ್ವದಿಸುವುದಕ್ಕೆ *ಕಫೆ* ಮಾತ್ರವನ್ನು ತರುವುದಕ್ಕೆ ಶ್ರಮಿಸಿದ ಕರ್ತನ ಸೇವಕರಿಗೆ ಧನ್ಯವಾದಗಳು.

ಪಾಸ್ಟರ್ ಕೃಷ್ಣ ಪಿ. ಘಿಮಿರೆ–ಅಸಿಸ್ಟೆಂಟ್ ಜನರಲ್ ಸೆಕ್ರೆಟರಿ, ನ್ಯಾಷನಲ್ ಚರ್ಚಸ್ ಫೆಲ್ಲೋಷಿಪ್ ಆಫ್ ನೇಪಾಳ್

ಡಿ : ಒಬ್ಬ ನಾಯಕನ ಸಂಶೋಧನೆ
ಮುಚ್ಚಲ್ಪಟ್ಟ ದೇಶದಲ್ಲಿ ತಲುಪದಿರುವ ಜನರ ನಡುವೆ ಇರುವ ಮಿಶಿನರಿ

ನಾನು ಮೊದಲ ಬಾರಿಗೆ ಮೌಖಿಕ ಸತ್ಯವೇದ ಬೋಧನೆಯ ಕುರಿತಾಗಿ ಕೇಳಿದಾಗ, ನನಗೆ ಆಸಕ್ತಿಯೇ ಇರಲಿಲ್ಲ. ನಾವು ಚಿಕ್ಕಮಕ್ಕಳಿಗೆ ಹೇಳುವ ಸತ್ಯವೇದದ ಕಥೆಗಳನ್ನು ಹೇಳುವುದರಿಂದ ವಾಕ್ಯದಲ್ಲಿ ಬೇರೂರಲ್ಪಟ್ಟಿರುವ ಒಂದು ಬಲವಾದ ಸಭೆಯನ್ನು ಕಟ್ಟಲು ಸಾಧ್ಯವಿಲ್ಲ ಎಂದು ಕಾರಣವನ್ನು ನೀಡಿದೆನು. ಆದರೆ ನಾನು ಒಂದು ಸೇವೆಯ ಕಾನ್ಫರೆನ್ಸ್ ನಿಮಿತ್ತ ಅಮೇರಿಕದಲ್ಲಿರುವಾಗ, ಲೋಕದೆಲ್ಲೆಡೆ ಮೌಖಿಕ ಸತ್ಯವೇದ ಕೌಶಲಗಳನ್ನು ಬೋಧಿಸುವಂತಹ ದಂಪತಿಗಳೊಂದಿಗೆ ಇದ್ದೆ. ನಾನು ಅವರಿಗೆ ಎಲ್ಲಾ ವಿಧವಾದ ಪ್ರಶ್ನೆಗಳನ್ನು ಕೇಳಿದೆ, ಮತ್ತು ಅವರು ಆ ವಾರದ ಕೊನೆಯಲ್ಲಿ ಕೊಡುತ್ತಿದ್ದ ಒಂದು ತರಬೇತಿಯ ಕೂಟದ ವೀಡಿಯೋ ಚಿತ್ರೀಕರಣವನ್ನು ಮಾಡಬಹುದೆಂದು ನಾನು ಅವರೊಂದಿಗೆ ಪ್ರಯಾಣ ಮಾಡಿದೆ.

ನನಗೆ ಸಭೆ ಹಾಗೂ ವಿಶ್ವಾಸಿಗಳಲ್ಲಿ ಪ್ರತಿಯೊಬ್ಬರೂ ದೇವರ ವಾಕ್ಯದಲ್ಲಿ ಬಲವಾಗಿ ಬೇರೂರಿಬೇಕೆಂಬ ಒಂದು ಬಲವಾದ ಸಮರ್ಪಣೆ ಇದೆ. ಒಬ್ಬ ವ್ಯಕ್ತಿ ತನ್ನಂತಾನೇ ಹಾಗೆಯೇ ವಾಕ್ಯದ ಸತ್ಯಗಳೊಂದಿಗೆ ಚಿರಪರಿಚಿತನಾಗಲು ಸಾಧ್ಯವಿಲ್ಲ; ಆಕೆ/ಆತನು ಅನುಗಮದ ಆಧಾರದ ಮೇಲೆ ದೇವರ ವಾಕ್ಯವನ್ನು ಸ್ಪಷ್ಟೀಕರಿಸಬೇಕು, ಮತ್ತು ಸರಿಯಾಗಿ ಸತ್ಯದ ವಾಕ್ಯವನ್ನು ವಿಭಾಗಿಸಬೇಕು. ಇದಕ್ಕಿಂತಲೂ ಕಡಿಮೆಯಾಗಿರುವಂತಹುದು ವಿಶ್ವಾಸಿಗಳನ್ನು ವಿಭಿನ್ನವಾದ ಸಮನ್ವಯಕ್ಕೆ ಮತ್ತು ಅನೇಕ ಸಮಸ್ಯೆಗಳ ಮೂಲವಾಗುವುದಕ್ಕೆ ಆರಂಭವಾಗಿರುತ್ತದೆ.

ಅನುಗಮದ ಅಧ್ಯಯನಕ್ಕೆ ಮತ್ತು ಜವಾಬ್ದಾರಿಯುತ ಸ್ಪಷ್ಟೀಕರಣದ ನನ್ನ ಸಂಪೂರ್ಣವಾದ ಸಮರ್ಪಣೆಯು ಕೆಲವೇ ವರ್ಷಗಳ ಹಿಂದೆ ಹೆಚ್ಚಾಯಿತು. ಇದು ಮೌಖಿಕ ಸತ್ಯವೇದ ಬೋಧನೆಯಿಂದ ಕುಗ್ಗಿಹೋಗಲಿಲ್ಲ, ಆದರೆ ಅಧಿಕವಾಯಿತು.

ಒಂದು ಮೌಖಿಕ ಶೈಲಿಯಲ್ಲಿ ಅನುಗಮನವನ್ನು, ಸ್ಪಷ್ಟೀಕರಣವನ್ನು ಮಾಡುವ ಸಾಧ್ಯತೆಗಳ ಕುರಿತಾಗಿ ನಾನು ಗಲಿಬಿಲಿಯಾಗಿದ್ದೆ. ಇದು ಸಾಧ್ಯವೇ? ಮತ್ತು, ಇದು ಏಕೆ ಅಗತ್ಯವಾಗಿರುವಂತಹುದಾಗಿದೆ?

ಮೊದಲು, ಇದು ಏಕೆ ಅಗತ್ಯವಾಗಿದೆ? ಮೌಖಿಕ ಸತ್ಯವೇದ ಕೌಶಲಗಳನ್ನು ಬೋಧಿಸುವ ಎಲ್ಲಾ ಜನರು ತಮ್ಮ ಸಿ.ಡಿಗಳನ್ನು ಮತ್ತು ಸಾಕ್ಷಿಗಳ ತಮ್ಮ ವೀಡಿಯೋ ತುಣುಕುಗಳನ್ನು ಒದಗಿಸುತ್ತಾರೆ, ಇವು ನಾನು ಮೌಖಿಕ ಸತ್ಯವೇದ ಬೋಧನೆಯ ಅಗತ್ಯವನ್ನು ವಿವರಿಸುವುದಕ್ಕಿಂತಲೂ ಉತ್ತಮವಾದ ಕೆಲಸವನ್ನು ಮಾಡುತ್ತವೆ.

ಒಂದು ಬಹುದೊಡ್ಡ ತಿರುವ ಬಂದಿತು, 2004ರ ಲಾಸೆನ್ ಕಮಿಟಿ ಫಾರ್ ವರ್ಲ್ಡ್ ಇವ್ಯಾಂಜಲಿಸಮ್ ಮೀಟಿಂಗ್ಸ್‌ನಲ್ಲಿ ಎಂದು ಭಾವಿಸುತ್ತೇನೆ, ಇಲ್ಲಿ ಅತ್ಯಧಿಕವಾದ ಶೇಕಡಾವರು ಜನರು ಲೋಕದಲ್ಲಿ ಮೌಖಿಕ ಕಲಿಕೆಗಾರರಾಗಿರುವರು– ಬಹಳ "ಅಕ್ಷರಸ್ಥರು" ಎಂದು ಹೇಳಲ್ಪಡುವ ಸಮಾಜಗಳಲ್ಲಿ ಅಂದರೆ, ಯು.ಕೆ ಅಥವಾ ಯು.ಎಸ್.ನಲ್ಲೂ ಸಹ ಮೌಖಿಕ ಕಲಿಕೆಗಾರರಿರುವರು ಎಂಬ ದಾಖಲೆಯನ್ನು ನೀಡಲಾಯಿತು. ಜನರು ಹೆಚ್ಚಿನ ಅಕ್ಷರಸ್ಥರಲ್ಲದಿರುವ ಸ್ಥಳಗಳಲ್ಲಿ ಇದು ತೀವ್ರವಾಗಿದೆ.

17 ವರ್ಷಗಳಿಂದ ನಮ್ಮ ತಂಡವು ಜನರ ನಡುವೆ ಸೇವೆ ಮಾಡುತ್ತಿದೆ. ನಾವು ಸುವಾರ್ತೆ ಸಾರುವುದಕ್ಕಾಗಿ ನೈಜವಾದ ಮೌಖಿಕ ವಿಧಾನವನ್ನು ಆಯ್ಕೆ ಮಾಡಿಕೊಂಡಿರುವೆವು – ನಾವು ಇಲ್ಲಿ ಬರವಣಿಗೆಯನ್ನು

ಉಪಯೋಗಿಸುವುದೇ ಇಲ್ಲ – ನಮ್ಮ ತಂಡದವರು ಕಲಿತುಕೊಂಡು, ಬಾಯಿಪಾಠ ಮಾಡಿ, ಸುವಾರ್ತೆಯನ್ನು ಮೌಖಿಕವಾಗಿ ಹೇಳಿ ನಿರೂಪಿಸುವರು. ಇದರ ಫಲಿತಾಂಶವಾಗಿ, ನಾವು ಅತ್ಯಧಿಕವಾದ ಫಲಿತಾಂಶಗಳನ್ನು ನೋಡಿರುವೆವು; ಅನೇಕಾನೇಕ ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಇಟ್ಟಿರುವರು.

ನಾವು ಅವರನ್ನು ನೋಡಿಕೊಳ್ಳುವುದಕ್ಕೆ ಪ್ರಾರಂಭಿಸಿದಾಗ, ನಾವು ತಕ್ಷಣವೇ ವಿದ್ಯಾವಂತರಿಗೆ ಸಮನಾಗಿರುವಂತೆ ಮಾಡಿದೆವು. ನಾವು ವಿಶ್ವಾಸಿಗಳಿಗೆ ಒಂದು ಸತ್ಯವೇದವನ್ನು ಕೊಟ್ಟೆವು, ಮತ್ತು ಅವರು ಸತ್ಯವೇದವನ್ನು ಅನುಗಮನದಂತೆ ವಾಕ್ಯಗಳನ್ನು ಹೇಗೆ ಓದಬಹುದೆಂಬುದನ್ನು ಕಲಿಯುವುದಕ್ಕೆ ಸತ್ಯವೇದವನ್ನು ಓದುವಂತೆ ಮತ್ತು ಕಲಿತುಕೊಳ್ಳುವಂತೆ ಪ್ರೇರೇಪಿಸಿದೆವು. ಈ ರೀತಿಯ ಪ್ರಸ್ತಾಪದಿಂದ, ನಾವು ನಮ್ಮ ತಲೆಗಳನ್ನು ಒಂದು ಗೋಡೆಗೆ ಗುದ್ದಿಕೊಳ್ಳುತ್ತಿದ್ದೆವು. ಹೊಸ ವಿಶ್ವಾಸಿಗಳು ಕ್ಷೀಣಿಸಿದರು. ಅವರು ತಮ್ಮ ನಂಬಿಕೆಯಲ್ಲಿ ಬೆಳೆಯುತ್ತಿರಲಿಲ್ಲ, ತಣ್ಣಗಾಗಿದ್ದರು ಮತ್ತು ಹಿಂಜರಿದವರಾಗಿದ್ದರು.

ನಾವು ಹೋದಂತಹ ಒಂದು ಹಳ್ಳಿಯಲ್ಲಿ 20 ಜನರು ಪ್ರಾಮಾಣಿಕವಾಗಿ ಕ್ರಿಸ್ತನಿಗೆ ಸಮರ್ಪಿಸಿಕೊಂಡರು. ವಾಕ್ಯಗಳನ್ನು ಓದುವುದಕ್ಕೆ ನಾವು ಪ್ರಾಮುಖ್ಯತೆಯನ್ನು ಕೊಟ್ಟೆವು, ಅವರು ತಮ್ಮಷ್ಟಕ್ಕೆ ತಾವೇ ಹೇಗೆ ಅನುಗಮನದ ರೀತಿ ಓದುವುದನ್ನು ಎಂದು ತೋರಿಸುತ್ತಾ, ನಮ್ಮ ಜೀವಿತಗಳನ್ನು ಹಂಚಿಕೊಳ್ಳುತ್ತಾ ಅವರೊಂದಿಗೆ ನಮ್ಮ ವೈಯಕ್ತಿಕ ಸಮಯವನ್ನೂ ಕಳೆದೆವು.

ಇಂದು, ನೀವು ಹೇಳುವಂತೆ "ಕ್ರಿಸ್ತನೊಂದಿಗೆ ಬಲವಾಗಿ ಹಿಂಬಾಲಿಸುವುದು" ಎಂದು ಹೇಳುವುದಕ್ಕೆ ಇವರಲ್ಲಿ ಯಾರೂ ಇಲ್ಲ. ಅನೇಕರು ಹಾಗಿರಲು ಬಯಸಿದರು, ಆದರೆ ಈ ಎಲ್ಲಾ ಸಮಯದಲ್ಲಿ ಅವರು ಎಂದೂ ದೇವರ ವಾಕ್ಯದಲ್ಲಿ ಕಲಿತುಕೊಳ್ಳಲಿಲ್ಲ. ಇದು ಅವರೊಳಗೆ ತೂರಿಹೋಗಲಿಲ್ಲ. ಓದುವುದು ಮತ್ತು ಅಧ್ಯಯನ ಮಾಡುವುದು ಅವರೊಂದಿಗೆ ಕಾರ್ಯ ಮಾಡಲೇ ಇಲ್ಲ.

ಇನ್ನೇನು ಹೇಳುವುದು... **ಅವರು ಎಂದೂ ದೇವರ ವಾಕ್ಯವನ್ನು ತೆಗೆದುಕೊಂಡು, ಇದನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲೇ ಇಲ್ಲ.** ಹಾಗಾದರೆ ನಾವು ಸೇವೆ ಮಾಡಿದವರು ಇನ್ನಿತರರಿಗೆ ಸೇವೆ ಮಾಡದಿದ್ದರೆ ತಲುಪದಿರುವ ಜನರನ್ನು ಲೋಕದಲ್ಲಿ ನಾವು ಹೇಗೆ ತಲುಪಲು ಸಾಧ್ಯವಾಗುತ್ತದೆ?

ಸತ್ಯವೇದವನ್ನು ಮೌಖಿಕವಾಗಿ ಬೋಧಿಸುವುದು ಪ್ರಾಥಮಿಕವಾದ ಅನುಕೂಲವಾಗಿದೆ ಎಂದು ನಾನು ನಂಬುತ್ತೇನೆ. ಮೊದಲು, ಅನೇಕರು ಸತ್ಯವೇದದ ಸತ್ಯಗಳನ್ನು ಹೇಗೆ ಹೀರಿಕೊಳ್ಳುವರೆಂದರೆ, ಅವರು ಓದುವಂತೆ ನಾವು ಪ್ರಯತ್ನಿಸಿದಾಗ ಅವರು ಹೀಗೆ ಮಾಡುವುದಿಲ್ಲ. ಎರಡನೆಯದಾಗಿ, ಜನರು ಈ ಸತ್ಯಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದಕ್ಕೆ ಹೆಚ್ಚಾಗಿ ಬಯಸುವವರಾಗಿದ್ದಾರೆ—ಇದೇ ಅಂತಿಮವಾದ "ಮರುಉತ್ಪತ್ತಿ ಮಾಡಬಲ್ಲ ಸೇವೆ."

ಲೋಕದಲ್ಲಿನ ಮುಚ್ಚಲ್ಪಟ್ಟ ಕ್ಷೇತ್ರಗಳಿಗಾಗಿ ಇರುವ ಮತ್ತೊಂದು ಅನುಕೂಲವೆಂದರೆ, ಜನರು ಅಧಿಕಾರಿಗಳೊಂದಿಗೆ ತೊಂದರೆಯಲ್ಲಿ ಸಿಲುಕಿಕೊಳ್ಳುವುದಕ್ಕೆ ಸಾಧ್ಯವಾಗಲಾರದು. ನಾನು ಇನ್ನು ಮುಂದುವರೆಸಬಹುದು, ಆದರೆ ಪುನಃ, ಈ ನಿರೂಪಣೆಯ ರಚನಾತ್ಮಕ ಸ್ವಭಾವವನ್ನು ತೋರಿಸುವುದಕ್ಕೆ ಎಲ್ಲಾ ಸಿ.ಡಿಗಳು ಮತ್ತು ವೀಡಿಯೋ ತುಣುಕುಗಳು ಒಟ್ಟಾಗಿ ಸೇರಿಸಲ್ಪಡುತ್ತವೆ.

ಎರಡನೆಯ ಪ್ರಶ್ನೆಯು ನನಗೆ ಬಹಳ ಪ್ರಾಮುಖ್ಯವಾದುದಾಗಿದೆ, "ವಾಕ್ಯವನ್ನು ಒಂದು ಮೌಖಿಕ ಶೈಲಿಯಲ್ಲಿ ಅನುಗಮನದ ಮತ್ತು ಸ್ಪಷ್ಟೀಕರಣದ ರೀತಿ ಬೋಧಿಸಲು ಸಾಧ್ಯವೆ?"

ಅನೇಕ ಸಂಸ್ಥೆಗಳಲ್ಲಿ ಕೆಲವು ವಿಧವಾದ ವಿಭಜನೆಗಳಿವೆ, ಇವು ಮೌಖಿಕ ಸತ್ಯವೇದ ಕಲಿಕೆಯನ್ನು ಅಭಿವೃದ್ಧಿಗೊಳಿಸುತ್ತದೆ ಮತ್ತು ಬೋಧಿಸುತ್ತದೆ. ಇವರಲ್ಲಿ ಅನೇಕರು ಇಂಟರ್‌ನ್ಯಾಷನಲ್ ಒರ್ಯಾಲಿಟಿ ನೆಟ್‌ವರ್ಕ್ (ION) ಸದಸ್ಯರಾಗಿರುವರು. ಮೌಖಿಕ ಸತ್ಯವೇದ ಬೋಧನೆಯಲ್ಲಿ ನಿರ್ಧಿಷ್ಟವಾಗಿ ಪರಿಣಿತರಾಗಿರುವ ಕೆಲವೇ ಕೆಲವು ಸಂಸ್ಥೆಗಳಿವೆ. ನಾನು ಅನೇಕ ಕಡೆಗಳ ಕಡೆಗೆ ದೃಷ್ಟಿ ಬೀರಿದೆ, ಅವರ ವಿಷಯ ಸಂಗ್ರಹಣೆಯನ್ನು ಪಡೆದುಕೊಂಡೆ, ಅವರ ವೀಡಿಯೋಗಳನ್ನು ನೋಡಿದೆ.

ನಾನು ಒಬ್ಬರ ಮನೆಯ ಕಛೇರಿಗೆ ಹೋಗಿ, ಅವರನ್ನು "ಸತ್ಯವೇದವನ್ನು ಮೌಖಿಕವಾಗಿ ಬೋಧಿಸುವುದು ಹೇಗೆ ಎಂಬುದರಲ್ಲಿ ಈ ಎಲ್ಲಾ ಸಂಸ್ಥೆಗಳಲ್ಲಿ ಯಾವುದು ಬಹಳ ಉತ್ತಮವಾದುದಾಗಿದೆ?" ಎಂದು ಕೇಳಿದೆ. ಅದಕ್ಕೆ ಅವರು "*ಕಥೆ* ಮಾತ್ರದ" ಸಂಸ್ಥೆ ಎಂದು ಹೇಳಿದರು. ನಾನು ಅವರ ವೆಬ್‌ಸೈಟ್ ನೋಡಿದೆ, ಅವರ ವಿಷಯ ಸಂಗ್ರಹಣೆಯನ್ನು ಹೊಂದಿಕೊಂಡೆ, ಮತ್ತು ಇಲ್ಲಿ ನಿಜವಾಗಿಯೂ ಒಂದು ವ್ಯತ್ಯಾಸವಿರುವುದನ್ನು ನಾನು ನೋಡತೊಡಗಿದೆ.

ಅವರಲ್ಲಿ ನಾನು ಬಹಳವಾಗಿ ಇಷ್ಟಪಟ್ಟ ಸಂಗತಿಯೆಂದರೆ ಅವರು ನಿಜವಾಗಿಯೂ ಮೌಖಿಕ ರೀತಿಯಲ್ಲಿ ಅನುಗಮನದ ಆಧಾರದ ಮೇಲೆ ಬೋಧಿಸುವಂತಹುದು. ನೀವು ಪಡೆದುಕೊಂಡಂತೆಲ್ಲಾ ಅವರು ಸ್ಪಷ್ಟೀಕರಣಕ್ಕೆ, ಮೌಖಿಕ ಸತ್ಯವೇದ ಅಧ್ಯಯನದ ನಿಕಟವಾಗಿರುವರು. ನಾವು ಯಾವುದಕ್ಕಾಗಿ ಎದುರು ನೋಡುತ್ತಿದ್ದೆನೋ ಅದನ್ನು ಕಂಡುಕೊಂಡೆನೆಂದು ನನಗೆ ತಿಳಿದಿತ್ತು. ಸ್ಕೈಪ್ ಮೂಲಕ ಅವರೊಂದಿಗೆ ಮಾತನಾಡಲು ಪ್ರಾರಂಭಿಸಿದೆನು.

ನವೆಂಬರ್ ತಿಂಗಳ ಪ್ರಾರಂಭದಲ್ಲಿ *ಕಥೆ* ಮಾತ್ರದಿಂದ ಇಬ್ಬರು ಬೋಧಕರು ನಮ್ಮ ಬಳಿಗೆ ಬಂದರು, ಮತ್ತು ಅವರು ಒಂದು ತರಬೇತಿಯ ಕೂಟಗಳನ್ನು ಐದು ದಿನಗಳವರೆಗೆ ನಡೆಸಿದರು. ಮೊದಲ ಎರಡು ದಿನಗಳು ತರಬೇತುಗಾರರಿಗಾಗಿ ಇತ್ತು (ನಮ್ಮ ತಂಡದಿಂದ ನಾವು ಆರಿಸಲ್ಪಟ್ಟಂತಹ ಜನರು) ಮತ್ತು ನಂತರ ಮುಂದಿನ ಮೂರು ದಿನಗಳು ಈಗ ತಾನೇ ತರಬೇತಿಯನ್ನು ಪಡೆದಂತವರು, *ಕಥೆ* ಮಾತ್ರದ ಬೋಧಕರ ಸಹಾಯದೊಂದಿಗೆ ನಮ್ಮ ಇನ್ನುಳಿದ ತಂಡಕ್ಕೆ ತರಬೇತಿಯನ್ನು ಕೊಟ್ಟರು. ನಮ್ಮ ಸೇವೆಯ ಸ್ಥಳದಲ್ಲಿ ಈ ವಿಧಾನವನ್ನು ಸೇರಿಸಿಕೊಳ್ಳುವುದಕ್ಕೆ ಈಗ ನಾವು ಪ್ರಾರಂಭಿಸಿರುವುದಕ್ಕೆ ಇದು ಅತ್ಯುದ್ಭುತವಾದ ವೇಗವನ್ನು ಉಂಟುಮಾಡಿದೆ.

ನಾವು ಇದನ್ನು ತಕ್ಷಣವೇ ಉಪಯೋಗಿಸಲು ಪ್ರಾರಂಭಿಸಿದೆವು, ಮತ್ತು ಇದು ಯಾವ ರೀತಿ ಮುಂದುವರೆಯುತ್ತಿದೆ ಎಂಬ ವರದಿಗಳನ್ನು ನೋಡಿ ನಾನು ಸಂತುಷ್ಟನಾಗಿದ್ದೇನೆ. ಬರೆಯಲ್ಪಟ್ಟ ವಾಕ್ಯದ ಅನುಗಮನ, ಸ್ಪಷ್ಟೀಕರಣದ ಅಧ್ಯಯನಗಳನ್ನು ನಾವು ನಿಲ್ಲಿಸಿರುವೆವು ಎಂಬುದು ಇದರರ್ಥವಲ್ಲ. ಹಾ! ಇದರಿಂದ ಬಹು ದೂರ; ಇದು ಈಗಲೂ ಕಷ್ಟವಾಗಿದೆ.

ಆದರೆ ನಾವು ಮೌಖಿಕವಾಗಿ ಏನು ಮಾಡುತ್ತಿರುವೆವೋ ಅದು 1) ಬರೆಯಲ್ಪಟ್ಟ ವಾಕ್ಯದಲ್ಲಿನ ನಮ್ಮ ಅಧ್ಯಯನದೊಂದಿಗೆ ಸರಿಯಾಗಿ ಹೊಂದುವಂತಹುದಾಗಿದೆ, 2) ತಲುಪಲಾಗದಿರುವ ಜನರನ್ನು, ಅಥವಾ ಓದಲು ಬರದಂತಹ ಅನೇಕ ಜನರನ್ನು ತಲುಪುತ್ತದೆ, 3) ಉನ್ನತವಾದ ಮತ್ತು ಬುದ್ಧಿವಂತ ಜನರೂ ಸಹ ಚೆನ್ನಾಗಿ ಮಾಡಬಹುದಾಗಿದೆ, (ನಾವು ಶ್ರೀಸಾಮಾನ್ಯರನ್ನು ಸಜ್ಜುಗೊಳಿಸುತ್ತಿರುವೆವು), 4) ನಾವು ನೇರವಾಗಿ ಸೇವೆ

ಸಲ್ಲಿಸುವಂತವರಿಗೂ ಮಿಗಿಲಾಗಿ ಬಹಳ ಸುಲಭವಾಗಿ ಬೇರೆಯವರೊಂದಿಗೆ ಹಂಚಿಕೊಳ್ಳಲು ಇದು ಸಾಮರ್ಥ್ಯವುಳ್ಳದ್ದಾಗಿದೆ, ಅಂದರೆ ಇದು ಹರಡುತ್ತದೆ, 5) ನಿಷೇಧಿಸಲ್ಪಟ್ಟಿರುವ ದೇಶದಲ್ಲಿ ವಾಕ್ಯವನ್ನು ಸಮೃದ್ಧಿಯಾಗಿ ಉತ್ಪತ್ತಿ ಮಾಡುವುದಕ್ಕೆ ಬಹುಶಃ ಇದು ಒಂದು ಸುರಕ್ಷಿತವಾದ ಮಾರ್ಗವಾಗಿದೆ, 6) **ಇದು ಹೊರಗಿನ ಹಣಕಾಸಿನ ಮೇಲಾಗಲಿ, ಸಾಧನಗಳಿಂದಾಗಲಿ ಅಥವಾ ಇನ್ನಿತರ ಮೂಲಗಳ ಮೇಲೆ ಆಧಾರಗೊಂಡಿಲ್ಲ!** ಇದು ಎಲ್ಲೆಡೆ ಹೆಚ್ಚಾಗಿ ಮರುಉತ್ಪತ್ತಿ ಮಾಡಬಲ್ಲಂತಹ ಸೇವೆಯ ಕಾರ್ಯತಂತ್ರವಾಗಿದೆ.

ಪುನಃ, ನಾನು ಹೇಳಿದಂತೆಯೇ, ಇದಕ್ಕೆ ಭಿನ್ನವಾಗಿರುವ ಅನೇಕ ವಿವಿಧ ಸಂಸ್ಥೆಗಳನ್ನು ನಾನು ನೋಡಿದೆ, ಆದರೆ ಅವುಗಳಲ್ಲಿ ಅನೇಕ ಸಂಸ್ಥೆಗಳು ಸತ್ಯವೇದವನ್ನು ಮೌಖಿಕ ರೂಪದಲ್ಲಿ ನಿಜವಾಗಿಯೂ ಹೇಳುತ್ತಿರಲಿಲ್ಲ, *ಕಥೆ* ಮಾತ್ರವು ಸತ್ಯವೇದವನ್ನು ನಿಖರವಾಗಿ ಹೇಳುವುದಕ್ಕೆ ಪ್ರಾಮುಖ್ಯತೆಯನ್ನು ನಿಜವಾಗಿಯೂ ನೀಡುತ್ತದೆ – ವಾಕ್ಯದ ಒಂದು ಭಾಗವನ್ನು ತೆಗೆದುಕೊಂಡು, ಇದು ತಾತ್ಪರ್ಯವನ್ನು ಅರ್ಥಮಾಡಿಕೊಳ್ಳಲಾಗದಿರುವ ಸಂಗತಿಯಲ್ಲ ಎಂಬ ರೀತಿಯಲ್ಲಿ ಬಾಯಿಮಾತಿನಲ್ಲಿ ಹೇಳಲಾಗುತ್ತದೆ – ಹಾಗಾಗಿ ನೀವು ಏನನ್ನು ಹಂಚುತ್ತಿರುವಿರೋ ಅದು ನಿಜವಾಗಿಯೂ ವಾಕ್ಯವಾಗಿದೆ, ಮೌಖಿಕ ವಾಕ್ಯ, ನಾವು ಬರೆಯಲ್ಪಟ್ಟ ವಾಕ್ಯವನ್ನು ಓದಿದ ಹಾಗೆಯೇ.

ಬರೆಯಲ್ಪಟ್ಟ ದೇವರ ವಾಕ್ಯವೇ ನಿಯಮವಾಗಿದೆ, ಇದೇ ಮೂಲವಾಗಿದೆ. ನಾವು ಇದನ್ನು ಬೋಧಿಸಲೇಬೇಕು ಮತ್ತು ಇದನ್ನು ಹೇಗೆ ಅಥ್ರ್ಯೆಸುವುದು ಎಂಬುದನ್ನು ಬೋಧಿಸಬೇಕು. ಆದರೆ ಬರೆಯಲ್ಪಟ್ಟ ವಾಕ್ಯದಿಂದ ನಾವು ಬಾಯಿಯಲ್ಲಿ ಹೇಳುವ ವಾಕ್ಯವನ್ನು ಪಡೆಯುತ್ತೇವೆ. ನಾವು ಸತ್ಯವೇದವನ್ನು ಮೌಖಿಕವಾಗಿ ಬೋಧಿಸುವಾಗ, ಇದು ಸತ್ಯವೇದದಿಂದ, ಬರೆಯಲ್ಪಟ್ಟ ವಾಕ್ಯದಿಂದ ಎಂಬುದನ್ನು ತೋರಿಸುವುದಕ್ಕೆ ತೆರೆದ ಸತ್ಯವೇದವನ್ನು ಹೊಂದಿರುತ್ತೇವೆ. ಹಾಗಾಗಿ, ವಾಕ್ಯವೇ ಮೂಲವಾಗಿದೆ ಎಂಬುದನ್ನು ನಾವು ಜನರಿಗೆ ತೋರಿಸುತ್ತೇವೆ.

ಆದಿ ಸಭೆಯಲ್ಲಿ, ಶಿಷ್ಯರು ವಾಕ್ಯಗಳನ್ನು ಓದಿದರು ಹಾಗೂ ಜನರು ಅದನ್ನು ಕೇಳಿಸಿಕೊಂಡರು. ಪೌಲನು ತನ್ನ ಪತ್ರಿಕೆಗಳನ್ನು ಕಳುಹಿಸುವಾಗ, ಅವುಗಳನ್ನು ಜೋರಾಗಿ ಓದಬೇಕೆಂದು ಹೇಳಿದನು. ನಾನು ತೆಗೆದುಕೊಂಡ ಒಂದು ಸಿ.ಡಿ.ಯಲ್ಲಿನ ಒಂದು ಪ್ರಶ್ನೆಯು ನನಗೆ ಬಹು ಆಶ್ಚರ್ಯವನ್ನುಂಟು ಮಾಡಿತು: "ಆದಿ ಸಭೆಯಲ್ಲಿದ್ದ ಜನರಲ್ಲಿ ಎಷ್ಟು ಶೇಕಡಾವಾರು ಜನರಿಗೆ ಓದಲು ಮತ್ತು ಬರೆಯಲು ತಿಳಿದಿತ್ತು – ಒಮ್ಮೆಲೆ 3000 ಜನರು ಅವರೊಂದಿಗೆ ಸೇರಿಸಲ್ಪಟ್ಟ ವೇಳೆಯಲ್ಲಿ?" ನನ್ನಿಂದ ಬಂದ ಉತ್ತರ, ಸುಮಾರು 5%.

ಕಥೆ ಮಾತ್ರದಲ್ಲಿರುವ ಸತ್ಯವೇದಕ್ಕನುಗುಣವಾದ ನಿಖರತೆಯ ಒಂದು ಕಾರಣದಿಂದ ನಾನು ಇದನ್ನು ಇಷ್ಟಪಟ್ಟೆ. ಆದರೆ ಅವರು ಅನುಗಮನದ ಆಧಾರದ ಮೇಲೆ ಹೇಗೆ ಕಲಿಯುವುದು ಎಂಬುದನ್ನು ಸಹ ಜನರಿಗೆ ಬೋಧಿಸುವರು. ಕಥೆಯು ಕೊಡಲ್ಪಟ್ಟ ನಂತರ, ಜನರು ಈಗ ತಾನೇ ಕೇಳಿಸಿಕೊಂಡ ಕಥೆಯ ಕುರಿತಾಗಿ ಅನುಗಮನದ ಪ್ರಶ್ನೆಗಳನ್ನು ಕೇಳುತ್ತಾರೆ. ಜನರು ಅವಲೋಕನಗಳನ್ನು ಬಾಯಿಮಾತಿನಲ್ಲಿ ಹೇಳುವಂತೆ ಮಾಡುತ್ತಾರೆ, ಜನರು ನಿಖರವಾದ ಅರ್ಥವಿವರಣೆಯನ್ನು ಕೊಡುವಂತವರಿಗೆ ಪ್ರಶ್ನೆಗಳನ್ನು ಕೇಳುತ್ತಾರೆ, ಮತ್ತು ಇದು ಅವರ ಸ್ವಂತ ಜೀವಿತದಲ್ಲಿ ಹೇಗೆ ಅಳವಡಿಸಿಕೊಳ್ಳಲು ಸಾಧ್ಯ ಎಂಬುದನ್ನು ನೋಡುವಂತೆ ಮಾಡುತ್ತಾರೆ.

ಇದು ನಿಜವಾಗಿಯೂ ಅತ್ಯದ್ಭುತವಾದ ಸಾಧನ, ಸರಿಯಾಗಿ ಬೆಳೆದಿರುವಂತಹುದು ಮತ್ತು ಕೌಶಲಭರಿತವಾಗಿ ಬೋಧಿಸುವಂತಹುದೂ ಆಗಿದೆ.

ದೇವರ ಕಥೆ : ಸೃಷ್ಟಿಯಿಂದ ನಿತ್ಯತ್ವದವರಿಗೆ.

ಪ್ರಪಂಚಾದ್ಯಾಂತ ಶಕ್ತಿಯುತವಾಗಿ ಉಪಯೊಗಿಸಲ್ಪಡುತ್ತಿರುವ ದೇವರ ಕಥೆ ೮೦ ನಿಮಿಷಗಳ ಸಿನಿಮಾದ ಪ್ರಭಾವ ಹಾಗು ಪ್ರಯೊಜನೆ ಪಡೆದುಕೊಂಡಿರುವ ಅನೇಕರ ಪ್ರೋತ್ಸಾಹದ ಪಲಿತಾಂಶವೇ ಕಥೆ ಮಾತ್ರ (ಸಿಂಪ್ಲಿ ದ ಸ್ಟೋರಿ) ತರಬೇತಿಯನ್ನು ಪ್ರಾರಂಬ ಮಾಡಲು ಸಹಾಯವಾಯಿತು. ದೇವರ ಕಥೆಯು ಸತ್ಯವೇದದ ಆದಿಕಾಂಡದಿಂದ ಪ್ರಕಟಣೆಯವರಿಗೆ ಅಂದರೆ ಹಳೆ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯ ಪ್ರಮುಖವಾದ ಕಥೆಗಳಿಂದ ಸಿನಿಮಾವನ್ನು ಮಾಡಲ್ಪಟ್ಟಿದೆ. ಈ ಸಿನಿಮಾ ದ್ವನಿಮುದ್ರಣ ಮತ್ತು ಚಲನಚಿತ್ರವಾಗಿದೊರಕುತ್ತದೆ. ೨೦೧೧ ರವರೆಗೆ ಮುನ್ನೂರಕ್ಕು ಹೆಚ್ಚು ಅಂತರಾಷ್ಟ್ರೀಯ ಭಾಷೆಗಳಲ್ಲಿ ದೇವರ ಕಥೆಯ ಸಿನಿಮಾವನ್ನು ತಯಾರಿಸಲಾಗಿದೆ.

ದೇವರ ಕಥೆಯ ಸಿನಿಮಾವನ್ನು ಸೋಲರ್ ಪವರ್ ಆಡಿಯೊ ಪ್ಲೇಯರಲ್ಲಿ ಬಹಳ ಸೊಗಸಾಗಿ ಬಂದಿವೆ ಹಾಗು ಸೇವೆಯಲ್ಲಿ ಬಹಳವಾಗಿ ಉಪಯೊಗಿಸಲಾಗುತ್ತವೆ.

> ಸುಧಾನ್ ದೇಶದ ಒಂದು ಶಾಲೆಯಲ್ಲಿ ಒಬ್ಬ ಹುಡುಗನು ತನ್ನ ಸ್ನೇಹಿತನ ಮೇಲೆ ಕೋಪಗೊಂಡು ಕತ್ತಿಯಿಂದ ಕೊಲ್ಲಲು ಶಾಲೆಗೆ ಬಂದಿದ್ದನು, ಆ ದಿನ ಆಸಮಯದಲ್ಲಿ ತರಗತಿಯ ಪ್ರಾಧ್ಯಾಪಕರು ಸೋಲರ್ ಪವರ್ ಆಡಿಯೊ ಪ್ಲೇಯರಲ್ಲಿ ದೇವರ ಕಥೆಯ ಕಾಯಿನನು ಹಾಗು ಆಬೇಲನ ಕಥೆಯ ಬಾಗವನ್ನು ವಿಧ್ಯಾರ್ಥಿಗಳಿಗೆ ಕೇಳಿಸುತ್ತಿದ್ದರು.
>
> ಕೋಪಗೊಂಡ್ಡಿದ ಆ ಯವ್ವನಸ್ತನು ಸತ್ಯವೇದದ ಈ ಕಥೆಯ ಬಾಗವನ್ನು ಕೇಳಿದಾಗ ಅವನ ಮನಸ್ಸಿನಲ್ಲಿ ಪರಿವರ್ತನೆತಂದಿತು. ಆಗ ತನ್ನಲ್ಲಿದ್ದ ಕತ್ತಿಯನ್ನು ಹೊರತೆಗೆದು ಆ ಪ್ರಾಧ್ಯಾಪಕರ ಕೈಗೆ ಕೋಟ್ಟನು. ದೇವರು ಈತನ ಹೃದಯದಲ್ಲಿ ಮಾತನಾಡಿದನು ಆಗ ಆ ಯವ್ವನಸ್ತನು ಕ್ಷಮಾಪಣೆಯನ್ನು ಕೇಳಿದನು. ಆದಿನ ಆತನು ಯೇಸುವನ್ನು ತನ್ನ ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡನು.

ದೇವರ ವಾಕ್ಯವು ಜನರ ಹೃದಯದಲ್ಲಿ ಮಾತನಾಡುತ್ತದೆ. ಎಸ್ ಟಿ ಎಸ್ ತರಭೇತಿ ಪಡೆಯಲು ಇಚ್ಚಿಸುವ ಎಲ್ಲರಿಗೂ ಅವರ ಸೇವೆಯಲ್ಲಿ ಅವರ ಪ್ರಾಂತ್ಯದ ಭಾಷೆಯಲ್ಲಿ ದೇವರ ಕಥೆ ಸಿನಿಮಾ ಇದ್ದರೆ ಅದರ ಪ್ರಯೊಜನೆ ಪಡೆದುಕೊಳ್ಳುವ ಹಾಗೆ ಪ್ರೋತ್ಸಾಹಿಸುತ್ತೇವೆ.

ಸೇವಕರು ದೇವರ ಕಥೆಯನ್ನು ಮುದ್ರಿಸಿರುವ ಸೋಲರ್ ಪವರ್ ಆಡಿಯೊ ಪ್ಲೇಯರಗಳನ್ನು, ಸೀಡೀಗಳನ್ನು ಹಾಗು ಎಂಪೀತ್ರೀಗಳನ್ನು ತಮ್ಮ ಸೇವೆಯಲ್ಲಿ ಉಪಯೊಗಿಸುತ್ತಿದ್ದಾರೆ. ಚಲನಚಿತ್ರವು ಬಹಲ ಸುಂದರವಾಗಿ ಬರೆಯಲ್ಪಟ್ಟಿರುವ ಚಿತ್ರಗಳಿಂದ ಕೂಡಿದೆ ಅವುಗಳು ಎಲ್ಲರ ಹೃದಯವನ್ನು ಮುಟ್ಟುತ್ತವೆ. ಲಕ್ಷಾಂತರ ಜನರು ದೇವರ ಸಿನಿಮಾವನ್ನು ಟೀವಿಗಳ ಮೂಲಕ ಹಾಗು ಪರದೆಯ ಮೂಲಕ ನೋಡಿ ಅನೇಕರು ಕರ್ತನನ್ನು ತನ್ನ ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡಿದ್ದಾರೆ. ಸೇವೆ ಮಾಡುತ್ತಿರುವ ಸಾವಿರಾರು ಸೇವಾ ಸಂಸ್ಥಗಳು ದೇವರ ಕಥೆಯ ಸಿನಿಮಾವನ್ನು ತಮ್ಮ ಸೇವೆಗಳಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ದೇವರ ಕಥೆಯ ಸಿನೀಮಾದಲ್ಲಿ ಒಬ್ಬರು ಎಲ್ಲಾ ಕಥೆಯನ್ನು ಹೇಳಿದ್ದಾರೆ ಆದುದರಿಂದ ಕೇಳುವವರು ಆ ಕಥೆಗಳನ್ನು ಆಧಿಕಾಡದಿಂದ ಪ್ರಾರಂಬವಾಗಿ, ಮೊದಲು ಮಾನವನು ಪಾಪದಲ್ಲಿ ಬೀಳುವುದು, ಜನರನ್ನು ರಕ್ಷಿಸಲು ತನ್ನ ಮಗನನ್ನು ಭೂಲೋಕಕ್ಕೆ ಕಳಿಹಿಸುತ್ತೇನೆಂದು ದೇವರು ಮಾಡಿದ ವಾಗ್ದಾನ ಹೀಗೆ ಮುಂದುವರೆಯುತ್ತದೆ, ಇದು ಸತ್ಯವೇದದ ಸಂಪೂರ್ಣ ಚಿತ್ರಣವನ್ನು ತಿಳಿಸುತ್ತದೆ ಇವುಗಳನ್ನು ಪ್ರತ್ಯೇಖವಾಗಿ ಮೌಖಿಕವಾಗಿ ಕಲಿಯಲು ಇಚ್ಚಿಸುವ ಅನೇಕ ಸಂಸ್ಕೃತಿಯ ಜನರಿಗೆ ಇವುಗಳನ್ನು ಜ್ಞಾಪನದಲ್ಲಿಟ್ಟುಕೊಳ್ಳಲು ವರಧಾನವಾಗಿದೆ. ದೇವರ ಕಥೆಯ ಸಿನೀಮಾವು ಸುವಾರ್ತೆಗೆ ಒಂದು ಅಡಿಪಾಯವಾಗಿರುತ್ತದೆ ಹಾಗು ಶಿಶ್ಯರನ್ನಾಗಿ ಮಾಡಲು ಸಹಾಯವಾಗುತ್ತದೆ.

ದೇವರ ಕಥೆಯನ್ನು ಮುದ್ರಿಸಿರುವ ಸೋಲರ್ ಪವರ್ ಆಡಿಯೊ ಪ್ಲೇಯರಗಳನ್ನು ಫ್ಲಿಪ್ ಚಾರ್ಟನ್ನು (ಇದು ದೇವರ ಕಥೆಯ ೧೫೦ ಚಿತ್ರಗಳನ್ನು ಹೊಂದಿರುತ್ತದೆ) ಉಪಯೊಗಿಸಿ ಹಳ್ಳಿಗಳಲ್ಲಿ ಸೇವೆಮಾಡುವವರಿಗೆ ಇದೊಂದು ಚಲಿಸುವ ಚಲನಚಿತ್ರ ಮಂದಿರವಾಗಿರುತ್ತದೆ. ಅದರ ಜೊತೆಗೆ ಚರ್ಚಿಸಲು ದೇವರ ಕಥೆಯ ಭಾಷಾಂತರ ತಜ್ರಮೆಯಾಗಿರುವ ಒಂದು ಕೈಪೀಡಿಯ ಪ್ರತಿಯನ್ನು ಸಹ ಕೊಡಲ್ಪಡುತ್ತದೆ ಇದರಿಂದ ಸೇವೆ ಮಾಡುವವರಿಗೆ ಬಹಳ ಸಹಾಯವಾಗುತ್ತದೆ.

World Contacts

Africa: EAfrica@Gods-story.org

W Africa “French & English”:
STSWestAfrica@SimplyTheStory.org

Ethiopia: Ethiopia@ SimplyTheStory.org

W Africa “French & English ”:
STSWestAfric@SimplyTheStory.org

W Africa “French:
GSWAfrica@Gods-story.org

Europe: BT@SimplyTheStory.org

India: IndiaDirector@SimplyTheStory.org

Nepal : Nepal@SimplyTheStory.org

South East Asia: Thailand@SimplyTheStory.org

“Spanish”: LatinAmerica@SimplyTheStory.org

“Spanish” LatinAmerica@LatinAmerica@SimplyTheStory.org

Oceania: Oceania@SimplyTheStory.org

Philippines: eb@SimplyTheStory.org

USA: infor@Gods-Story.org

ಕಥೆ ಮಾತ್ರದ (ಸಿಂಪ್ಲಿ ದ ಸ್ಟೋರಿ) ತರಬೇತಿ ಪಡೆದ ಲೋಕದ ಅನೇಕ ನಾಯಕರ ಪ್ರತಿಕ್ರಿಯೆಗಳು

"ದೇವರ ವಾಕ್ಯದೊಂದಿಗೆ ಕಾರ್ಯ ಮಾಡುತ್ತಿರುವ ವ್ಯಕ್ತಿಗಳನ್ನು ಸಜ್ಜುಗೊಳಿಸುವುದಕ್ಕೆ ಮತ್ತು ಬಲಪಡಿಸುವುದಕ್ಕೆ ಅರ್ಥ ಕೊಡುವಂತಹುದಕ್ಕೆ ಮರು ಸಂಶೋಧನೆಯಲ್ಲಿ *ಕಥೆ* ಮಾತ್ರವು 21ನೇ ಶತಮಾನದ ಮಾರ್ಗದರ್ಶಕವಾಗಿದೆ. ಇದರ ಪ್ರತ್ಯೇಕತೆಯು ಪರಿಣಾಮ ಬೀರುವುದರಲ್ಲಿ ಫಲಿತಾಂಶವನ್ನು ತೋರಿಸುತ್ತದೆ."

ಸ್ಯಾಮ್ಯುಲ್ ಚಿಯಾಂಗ್ – ಎಕ್ಸಿಕ್ಯುಟೀವ್ ಡೈರೆಕ್ಟರ್, ಇಂಟರ್‌ನ್ಯಾಷನಲ್ ಒರ್ಯಾಲಿಟಿ ನೆಟ್‌ವರ್ಕ್

"*ಕಥೆ* ಮಾತ್ರವು ಭಾರತದ ಉತ್ತರ ಪಶ್ಚಿಮ ಮೌಖಿಕ ಸಮಾಜದಲ್ಲಿರುವ ಜನರನ್ನು ತಲುಪುವುದಕ್ಕಿರುವ ಸಮಯದ ಅಗತ್ಯವಾಗಿದೆ. ಸತ್ಯವೇದದ ಕಥೆಗಳನ್ನು ಕಲಿತುಕೊಳ್ಳುವುದು, ಅವುಗಳ ಆಳಕ್ಕೆ ಅರ್ಥಮಾಡಿಕೊಳ್ಳುವುದು, ಮತ್ತು ಅವುಗಳನ್ನು ಒಂದು ಅದ್ಭುತವಾದ ನಮೂನೆಯಲ್ಲಿ ನಮ್ಮ 'ಹೃದಯದೊಳಗೆ' ಸೇರಿಸಿಕೊಳ್ಳುವುದು."

ಡಾ. ಪ್ರಕಾಶ್ ಪಾಠಿ – ಪಾಸ್ಟರ್ ಮತ್ತು ಮಿಶನ್ ಡೈರೆಕ್ಟರ್ – ಉತ್ತರ ಭಾರತ

"*ಕಥೆ* ಮಾತ್ರವು ಲೋಕವನ್ನು ನೋಡುವ ನನ್ನ ದೃಷ್ಟಿಕೋನವನ್ನು ಬದಲಾಯಿಸಿತು ಮತ್ತು ವಾಕ್ಯಗಳ ಕುರಿತಾಗಿ ಒಂದು ದೊಡ್ಡ ಮಟ್ಟದಲ್ಲಿ ನನ್ನ ಕಣ್ಣುಗಳನ್ನು ತೆರೆಯಿತು."

ರೆ. ಡ್ಯಾನಿಯೆಲ್ ಚಗಯ್ ಗಕ್ – ಆ್ಯಂಗ್ಲಿಕನ್ ಚರ್ಚ್ ಆಫ್ ಸೂಡಾನ್ – ಆಫ್ರಿಕಾ

"ನಾವು *ಕಥೆ* ಮಾತ್ರವನ್ನು ನಮ್ಮ ಸೇವೆಯ ಕ್ಷೇತ್ರದಲ್ಲಿ, ಹಿರಿಯರ ಮನೆ ಸತ್ಯವೇದ ಅಧ್ಯಯನಗಳಲ್ಲಿ, ಮತ್ತು ನಮ್ಮ ಮಕ್ಕಳ ಹಾಗೂ ಯೌವನಸ್ಥರ ಸೇವೆಗಳಲ್ಲಿ ಅಳವಡಿಸಿಕೊಳ್ಳುತ್ತೇವೆ. *ಕಥೆ* ಮಾತ್ರದ ಅಂಶಗಳು ನನ್ನ ಪ್ರಸಂಗಗಳ ಮೇಲೆ ಪರಿಣಾಮವನ್ನು ಬೀರಿದೆ."

ಪಾಸ್ಟರ್ ಕ್ರಿಸ್ ಜಾನ್ಸನ್ – ಕ್ಯಾಲ್ವರಿ ಚ್ಯಾಪಲ್ – ಯು.ಎಸ್.ಎ.

"ವಿಶ್ವದಾದ್ಯಂತ *ಕಥೆ* ಮಾತ್ರದ ತರಬೇತಿಯು ದೇವರ ವಾಕ್ಯವನ್ನು ಒಂದೇ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವುದಕ್ಕೆ ಮತ್ತು ಅದನ್ನು ಹಂಚಿಕೊಳ್ಳುವುದಕ್ಕೆ ಸಾಮಾನ್ಯ ವ್ಯಕ್ತಿಗಳನ್ನು ಮತ್ತು ಸೇವಕರುಗಳನ್ನು ಸಜ್ಜುಗೊಳಿಸುತ್ತಿದೆ. ಮೌಖಿಕವಾಗಿ ಹೇಳುವ ಇದರ ಮೂಲದೊಂದಿಗೆ ಮತ್ತು ಇದರ ವಾಕ್ಯದ ಮೇಲಿನ ಇದರ ಅಸ್ತಿವಾರದೊಂದಿಗೆ, *ಕಥೆ* ಮಾತ್ರವು ಪ್ರತಿಯೊಬ್ಬ ವಿಶ್ವಾಸಿಗೆ ಪರಿಣಾಮಕಾರಿಯಾಗಿ ಸಾಕ್ಷಿಯಾಗಿರುವುದಕ್ಕೆ ಒಂದು ಉತ್ತಮವಾದ ಮಾರ್ಗವನ್ನು ಹೊಂದಿದೆ."

ಜೆಫ್ರಿ ನೆಲ್ಸನ್ – ಒ.ಸಿ. ಇಂಟರ್‌ನ್ಯಾಷನಲ್/SEPAL, ಗ್ವಾಟೆಮಾಲ – ಸೆಂಟ್ರಲ್ ಅಮೇರಿಕ

"ದೇವರಿಂದ ಕೊಡಲ್ಪಟ್ಟಿರುವ ಅತ್ಯದ್ಭುತವಾದ ಸಾಧನವಾಗಿರುವ *ಕಥೆ* ಮಾತ್ರಕ್ಕಾಗಿ, ನಾನು ಸರ್ವಶಕ್ತನಾದ ದೇವರು ಇಸ-ಅಲ್-ಮಸಿಹ್‌ಗೆ ಸ್ತೋತ್ರ ಸಲ್ಲಿಸುವೆನು, ಇದು ತಲುಪದಿರುವ ಜನರನ್ನು ತಲುಪುವುದಕ್ಕಾಗಿ ಇರುವ ಬಹಳ ಪರಿಣಾಮವನ್ನು ಬೀರುವ ವಿಧಾನವಾಗಿದೆ."

ಆಮೊಸ್ ಶಾ – ಸೀನಿಯರ್ ಪಾಸ್ಟರ್ ECC ಟೀಮ್ # 5 – ಸೆಂಟ್ರಲ್ ಇಂಡಿಯಾ

"ಈ ಕೈಪಿಡಿಯು ಒಂದು ಅಮೋಘವಾದ ಸಾಧನವಾಗಿದೆ! ಪರಿಣಾಮಕಾರಿಯಾಗಿರುವ ಮೌಖಿಕ ವಿಧಾನವನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಅಳವಡಿಸಿಕೊಳ್ಳುವುದಕ್ಕೆ ನಿಮಗೆ ಬೇಗಾಗಿರುವುದೆಲ್ಲವೂ ನಿಮ್ಮ ಕೈಗಳಲ್ಲಿದೆ."

ಟಿಡ್ ಓಲ್ಸನ್ – ಡೈರೆಕ್ಟರ್ ಆಫ್ ಗ್ಲೋಬಲ್ DAWN ನೆಟ್‌ವರ್ಕ್ – ಏಶಿಯಾ

"ನನ್ನ ದೇಶದಲ್ಲಿ 24 ವರ್ಷಗಳ ನನ್ನ ಶಿಷ್ಯತ್ವದ ಸೇವೆಯಲ್ಲಿ, ಓದಲು ಮತ್ತು ಬರೆಯಲು ತಿಳಿಯದಂತಹ ಒಬ್ಬ ವ್ಯಕ್ತಿಗಾಗಲಿ ನಾನು ಎಂದೂ ಶಿಷ್ಯನಾಗಿ ಮಾಡಿಲ್ಲ ಎಂಬುದನ್ನು ಈಗ ತಾನೇ ನಾನು ಗ್ರಹಿಸಿಕೊಂಡೆನು. *ಕಥೆ* ಮಾತ್ರದ ಈ ಕೈಪಿಡಿಯಲ್ಲಿರುವ ಕೌಶಲಗಳು ಆ ಅವಿಸ್ಮರಣೀಯ ಕಾರ್ಯವನ್ನು ಪ್ರಾರಂಭ ಮಾಡುವುದಕ್ಕೆ ನನಗೆ ಸಹಾಯ ಮಾಡಿತು. ನಾನು ಇದರ ಪ್ರತಿಯೊಂದು ಹಾಳೆಯನ್ನು ಎಲ್ಲಾ ಜನರಿಗೆ, ಅದರಲ್ಲೂ ವಿಶೇಷವಾಗಿ ನನ್ನಂತಿರುವ ದೈವಶಾಸ್ತ್ರಜ್ಞರು ಓದಬೇಕೆಂದು ಶಿಫಾರಸು ಮಾಡುತ್ತೇನೆ."

ರೆ. ಲುವಾವೊ ಜಿರೂಸಲೆಮ್ – ನ್ಯೂ ಲೈಫ್ ಪೆಂಟೆಕೋಸ್ಟಲ್ ಚರ್ಚ್ ಇಂಟರ್‌ನ್ಯಾಷನಲ್, ಡಿ. ಆರ್. ಕಾಂಗೊ – ಆಫ್ರಿಕಾ

"*ಕಥೆ* ಮಾತ್ರದ ನಿರೂಪಣೆಯು ಸತ್ಯವೇದಕ್ಕನುಗುಣವಾಗಿರುವುದು ಮತ್ತು ಯೇಸು ಉಪಯೋಗಿಸಿದಂತಹ ವಿಧಾನವನ್ನು ಹಾಗೂ ಸಂಪೂರ್ಣ ಸತ್ಯವೇದವನ್ನು ಉಪಯೋಗಿಸುವುದೇ ಬಹಳ ಪರಿಣಾಮಕಾರಿಯಾಗಿರುವುದು."

ಡಾ. ಬೆರಿನ್ ಗಿಲ್‌ಫಿಲನ್ – ಫೌಂಡರ್ ಆಫ್ ದ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮಿನಿಸ್ಟ್ರಿ (ISOM)

"ನಾನು ಅನಕ್ಷರಸ್ಥನು... ಶೈಕ್ಷಣಿಕ ಸತ್ಯವೇದ ಕಾಲೇಜುಗಳು ನಾನು ಸತ್ಯವೇದದ ತರಬೇತಿಯನ್ನು ಮಾಡುವುದಕ್ಕೆ ಅನುಮತಿಸಲಿಲ್ಲ ಏಕೆಂದರೆ ನಾನು ಓದು-ಬರಹ ತಿಳಿಯದವನಲ್ಲ... ವೇದಿಕೆಯ ಮೇಲಿಂದ ಕೊಡಲ್ಪಡುತ್ತಿದ್ದ ದೇವರ ಸಂದೇಶಗಳನ್ನು ಅರ್ಥಮಾಡಿಕೊಳ್ಳಲಾಗುತ್ತಿರಲಿಲ್ಲ ಏಕೆಂದರೆ ಅದು ಅಕ್ಷರಸ್ಥರಿಗೆ ಬೋಧಿಸುವ ಶೈಲಿಯಲ್ಲಿರುತ್ತಿತ್ತು... ನಾನು *ಕಥೆ* ಮಾತ್ರದ ಮೂಲಕ 155 ಕಥೆಗಳನ್ನು ಕಲಿತುಕೊಂಡಿರುವೆನು ಮತ್ತು ಈಗ ನಾನು ಅಕ್ಷರಸ್ಥರಿಗೆ ಹಾಗೂ ಅನಕ್ಷರಸ್ಥರಿಗೂ ಸಹ ಸುವಾರ್ತೆಯನ್ನು ಸಾರಬಲ್ಲೆ ಎಂದು ಹೇಳಲು ಸಂತೋಷಪಡುತ್ತೇನೆ."

ವೈ. ಬಾಬು – ಸುವಾರ್ತಿಕರು/ಪಾಸ್ಟರ್ MMBC – ದಕ್ಷಿಣ ಭಾರತ

ದೇವರ ಕಥೆಯ ಆಡಿಯೋ ಮತ್ತು ವೀಡಿಯೋದ ಪರಿಣಾಮ: *ಸೃಷ್ಟಿಯಿಂದ* ನಿತ್ಯತ್ವದವರೆಗೂ ಎಂಬುದು ದೇವರ ಕಥೆಯ ಯೋಜನೆಯು *ಕಥೆ* ಮಾತ್ರವನ್ನು ಬೆಳೆಸುವಂತೆ ಪ್ರೇರಿಸಿದೆ. ಹತ್ತು ವರ್ಷಗಳಲ್ಲಿ, *ದೇವರ ಕಥೆಯ* ಸುಮಾರು 300 ಭಾಷೆಗಳ ಅನುವಾದವು ದೇವರ ವಾಕ್ಯವನ್ನು ಬಿಡುಗಡೆ ಮಾಡಿವೆ. ಇದರ ಯಶಸ್ಸು ಸುವಾರ್ತೆ ಸಾರುವುದರಲ್ಲಿ ಮತ್ತು ಶಿಷ್ಯತ್ವದಲ್ಲಿ ಸತ್ಯವೇದದ ಕಥೆಗಳನ್ನು ಉಪಯೋಗಿಸುವುದರ ಪ್ರಾಮುಖ್ಯತೆಯನ್ನು ತೋರ್ಪಡಿಸುತ್ತದೆ.

ಚರ್ಚೆಯ ಶೈಲಿಯ ಸತ್ಯವೇದದ ಬೋಧನೆಯಲ್ಲಿ ದೀರ್ಘಾವಧಿಯ ಅನುಭವದಿಂದ **ಡೊರೊಥಿ ಎ ಮಿಲ್ಲರ್, ಎಕ್ಸಿಕ್ಯುಟಿವ್ ಡೈರೆಕ್ಟರ್ ಆಫ್ ಟಿ ಜಿ ಎಸ್ ಪಿ,** ಈಗ ವಿಶ್ವದಾದ್ಯಂತ *"ಕಥೆ ಮಾತ್ರ" (ಸಿಂಪ್ಲಿ ದ ಸ್ಟೋರಿ)* ಎಂಬುದಾಗಿ ಕರೆಯಲ್ಪಡುವ ಇದನ್ನು ಅಭಿವೃದ್ಧಿಗೊಳಿಸುವಂತೆ ಸಜ್ಜುಗೊಳಿಸಿತು. *ಕಥೆ* ಮಾತ್ರವು ಉದ್ದೇಶಪೂರಿತವಾಗಿ ಆತ್ಮನಿಂದ ನಡೆಸಲ್ಪಡುವ ಚರ್ಚೆಯೊಂದಿಗೆ ಒಂದು ವಾಕ್ಯಭಾಗವನ್ನು ನಿಖರವಾಗಿ ಹೇಳುವುದನ್ನು ಒಳಗೊಂಡಿದೆ. *ಕಥೆ* ಮಾತ್ರದ ತರಬೇತಿಯು ವಿಶ್ವಾಸಿಗಳನ್ನು ಅವರ ವಿದ್ಯಾರ್ಹತೆಯ ಮಟ್ಟವನ್ನು ಪರಿಗಣಿಸದೆ, ಸ್ಥಳೀಯ ನಾಯಕತ್ವ ಮತ್ತು ಪ್ರತ್ಯುತ್ತರದ ಫಲಿತಾಂಶದಲ್ಲಿ ಅವರನ್ನು ಬಲಪಡಿಸುತ್ತದೆ. *ಕಥೆ* ಮಾತ್ರದ ಕಾರ್ಯಾಗಾರಗಳನ್ನು ಮತ್ತು ಮೌಖಿಕ ಸತ್ಯವೇದ ಶಾಲೆಗಳನ್ನು ಸ್ಥಳೀಯರು ನಡೆಸುತ್ತಾರೆ.